# ಧರ್ಮಗಳ ಹಿಂದಿರುವ ಕರಾಳ ಹಸ್ತಗಳು

Shree Omdeva Seva Trust (SOST) has authorized the download by you of an unrestricted number of copies of the electronic book (eBook) in any of the available formats. SOST grants you a nonexclusive, non-transferable license to use the eBook according to the terms and conditions herein. This License Agreement permits you to install the eBook on any and all your devices for your personal use only.

You shall not: (1) resell, rent, assign, timeshare, distribute, or transfer all or part of the eBook or any rights granted hereunder to any other person; (2) duplicate the eBook, except for a single backup or archival copy; (3) remove any proprietary notices, labels, or marks from the eBook; (4) transfer or sublicense title to the eBook to any other party.

The eBook is owned by SOST and is protected by Indian and international copyright and other intellectual property laws. SOST reserves all rights in the eBook not expressly granted herein. This license and your right to use the eBook terminate automatically if you violate any part of this Agreement. In the event of termination, you must remove the original and any copies of the eBook from all your devices.

ꝏꝏꝏ

Copyright © 2018 Shree Omdeva Seva Trust. All rights reserved. Including the right to reproduce this book or portions thereof, in any form. No part of this text may be reproduced in any form without the express written permission of the author.

Version 2018.08.11

# ಪರಿವಿಡಿ

ಪರಿಚಯ.......7

ಒಂದೇವ ಅವರ ಆಧ್ಯಾತ್ಮಿಕ ಜೀವನದಲ್ಲಿ ಉಂಟಾದ ಒಂದು ದೊಡ್ಡ ತಿರುವು.......9

ಒಂದೇವರವರ ಮಾತುಗಳು....... 12

ಪ್ರಾಚೀನ ವಾಮಾಚಾರ ....... 14

ಆ ಪ್ರಾಚೀನ ವಾಮಾಚಾರದ ರಹಸ್ಯಕ್ಕೆ ಕಾರಣ. ....... 24

ಸೃಷ್ಟಿಕರ್ತನೆದುರು ಆ ಪ್ರಾಚೀನ ವಾಮಾಚಾರದ ಪ್ರಭಾವವು ನಡೆಯಲಾರದು ಎಂಬ ವಾದ....... 25

ಒಂದೇವರವರ ಪ್ರಕಾರ ಯಾವುದೇ ದೇವಸಂಕಲ್ಪದ ವಿವರಣೆ....... 26

ದೇವರಿಗೆ ಒಂದು ಸಾರ್ವತ್ರಿಕ ನಿರ್ವಚನೆ....... 27

ದೇವರು ಮತ್ತು ಸೈತಾನ....... 28

ಧರ್ಮದ ವಿವರಣೆ....... 29

ಇದುವರೆಗಿನ ಧರ್ಮದ ವಿವರಣೆ....... 30

ಸತ್ಯ ಮತ್ತು ನಂಬಿಕೆಯ ವ್ಯತ್ಯಾಸ ....... 31

ನಂಬಿಕೆಯ ದೇವರು ಮತ್ತು ಸತ್ಯದ ದೇವರು ....... 32

ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಅನುಷ್ಠಾನವೇ ಧರ್ಮ ....... 34

ಅರಿಯುವಿಕೆಯ ಲಾಭ ....... 36

ನಂಬಿಕೆಯು ಅಜ್ಞಾನವಾಗಿದೆ....... 37

ಸಾಮಾಜಿಕ ನ್ಯಾಯವೇ ಧರ್ಮದ ಮೊದಲ ಗುರಿ....... 38

ವಿಜ್ಞಾನಕ್ಕೆ ಧರ್ಮದೊಳಗೆ ಸ್ಥಾನ....... 40

ಮಹಾತ್ಮರ ರೀತಿ....... 41

ಸಾಮಾಜಿಕ ಜೀವನದಲ್ಲಿ ನಂಬಿಕೆಯ ಪಾತ್ರ ..... 42

ಧಾರ್ಮಿಕ ನಂಬಿಕೆ ..... 43

ಕಾಲ ಮತ್ತು ನಂಬಿಕೆ ..... 45

ದೇವರ ಪರೀಕ್ಷೆ-[1] ..... 47

ದೇವರ ಪರೀಕ್ಷೆ-[2] ..... 48

ತಮಗೆ ಮಾತ್ರ ಹೆಚ್ಚು ತಿಳಿದಿರುವ ವಿಚಾರ ..... 49

ಜೀವನ ಮೌಲ್ಯಗಳು ..... 52

ಈ ಜಗತ್ತನ್ನೇ ನಾಶ ಮಾಡುವ ದೆವ್ವ ..... 54

ಧೈರ್ಯಗಳಲ್ಲಿ ಹಲವು ರೀತಿಗಳು ಮತ್ತು ಪ್ರಾಚೀನ ವಾಮಾಚಾರ ..... 56

ಇತರ ಧರ್ಮಗಳ ಕುರಿತು ಅಭಿಪ್ರಾಯ ..... 57

ಧರ್ಮ ಪ್ರಚಾರ ಮತ್ತು ಮತಾಂತರ ..... 58

ಜಾತಿಗಳು – ವರ್ಣಗಳು – ಪ್ರಾಚೀನ ವಾಮಾಚಾರ ..... 60

ಕರ್ಮ ಸಿದ್ಧಾಂತ ..... 62

ದೇವರ ಪರೀಕ್ಷೆ ಎನ್ನುವುದು ದೇವರಿಗೇ ವಿರೋಧವಾದ ನಂಬಿಕೆ ..... 63

ತನ್ನಾಯ್ಕೆ [ಫ್ರೀ ವಿಲ್] ಎಂಬ ನಂಬಿಕೆ ..... 64

ತನ್ನಾಯ್ಕೆ ಮತ್ತು ಭವಿಷ್ಯವಾಣಿ ..... 66

ನಂಬಿಕೆಯು ಬೇರೊಂದು ರೀತಿಯಲ್ಲೂ ಅರ್ಥಹೀನವಾಗುವುದು ..... 68

ಧರ್ಮಯುದ್ಧ ಎಂಬ ಶಬ್ದದ ಅರ್ಥ ..... 69

ಧರ್ಮಗಳಲ್ಲಿನ ವಿರೋಧಾಭಾಸಗಳು ..... 71

ಧರ್ಮಗಳು ಹಲವು ಇಲ್ಲ ..... 72

ಧರ್ಮ, ಪಂಥ, ಪರಂಪರೆಗಳನ್ನು ಯಾರಿಂದಲೂ ಸೃಷ್ಟಿಸಲು ಸಾಧ್ಯವಿಲ್ಲ ..... 73

ಧರ್ಮ, ಮತ್ತು ಅದನ್ನು ಪಡೆಯುವ ದಾರಿ ........ 74

ಸೃಷ್ಟಿಕರ್ತ ದೇವನ ಸತ್ಯ ಮತ್ತು ಆ ಮೂಲ ಸತ್ಯ ........ 76

ಇರುವ ಒಂದೇ ಧರ್ಮಕ್ಕೆ ಹಲವು ಹೆಸರುಗಳು ........ 79

ಧರ್ಮವು ನಮಗೆ ನೀಡುವ ತಿಳುವಳಿಕೆ ........ 80

ಧರ್ಮಗಳು ತಮ್ಮ ದೇವರುಗಳನ್ನೇ ವಿರೋಧಿಸುವವು ........ 82

ಪೂರ್ಣ ಸತ್ಯವನ್ನು ಕಾಣಬಹುದಾದ ಸ್ಥಳ ........ 85

ಧರ್ಮ ಪಂಡಿತರಿಗೂ ವಿಜ್ಞಾನಿಗಳಿಗೂ ಇರುವ ವ್ಯತ್ಯಾಸ ........ 86

ನಿಜವಾದ ದೇವ ನಿಂದನೆ ಮತ್ತು ಧರ್ಮ ನಿಂದನೆ ........ 87

ಮನುಷ್ಯರ ತಪ್ಪು - ಧರ್ಮದ ತಪ್ಪು ........ 88

ಧರ್ಮ ಮತ್ತು ಮಾನವನ ಸ್ವಭಾವ ಶುದ್ಧಿ ........ 90

ಧರ್ಮಪ್ರಚಾರದ ಶುದ್ಧ ರೀತಿ ........ 91

ಆಸ್ತಿಕರು ಮತ್ತು ನಾಸ್ತಿಕರು ........ 92

ದೇವರ ಕಡೆಗಿನ ದಾರಿ ಮತ್ತು ದೇವರೆಂಬ ಗುರಿ ........ 94

ದೇವರನ್ನೇ ನಂಬದ ಧರ್ಮಗಳು ಮತ್ತು ದೇವರ ಮೇಲಿನ ಭಯ ........ 95

ಧರ್ಮಗಳ ಹೆಸರಲ್ಲಿ ಮಾಡುವ ತಪ್ಪುಗಳು ಮತ್ತು ಧರ್ಮದ ಸಂಬಂಧ ........ 96

ಭೌತಿಕವಾದಿಗಳ 'ಎಲ್ಲವೂ ಸುಳ್ಳು' ಎಂಬ ವಾದ ........ 98

ಜಾತಿ ಪರ ವಾದ ........ 100

ಧರ್ಮದ ಸಾರವೇ ಧರ್ಮ ........ 101

ಜಗತ್ತಿಗೆ ಆಧ್ಯಾತ್ಮ ಮತ್ತು ಧಾರ್ಮಿಕ ಹೊಸತನದ ಅಗತ್ಯತೆ ........ 103

ಪುರಾಣ ಸೃಷ್ಟಿಕರ್ತ ಮತ್ತು ಸ್ವಭಾವ ಸೃಷ್ಟಿಕರ್ತ ........ 105

ದೇವರ ಮತ್ತು ಧರ್ಮದ ಅತ್ಯಂತ ಶ್ರೇಷ್ಠ ಗುರಿ ........ 106

ದೇವರು ಮತ್ತು ಧರ್ಮದ ಚುಟುಕು ವಿವರಣೆ ..... 108

ಪ್ರಾಚೀನ ವಾಮಾಚಾರದ ರಹಸ್ಯ ಕೈವಾಡ ಕಾಣಿಸುವ ಸ್ಥಳಗಳು ..... 110

ಸಮಾಜ ಬಂಧು ..... 112

ಮಹಾತ್ಮರ ಜೀವನ ..... 113

ಮಕ್ಕಳು, ಜಾತೀಯತೆ, ಮತ್ತು ಧರ್ಮಾಂಧತೆ ..... 114

ಮಹಾತ್ಮರ ಎರಡು ರೀತಿಯ ಜೀವನ ಆನಂದ ..... 115

ಧರ್ಮ, ಆಧ್ಯಾತ್ಮ, ಅವುಗಳ ಮಿಶ್ರಣದ ಅಪಾಯ, ಮತ್ತು ಪ್ರತ್ಯೇಕವಾಗಿ ತಿಳಿಯುವಲ್ಲಿನ ಲಾಭ ..... 117

ದೇವರು ಸೈತಾನ ಮತ್ತು ಮಹಾತ್ಮ ..... 120

ಪರಿಹಾರ ಮಾರ್ಗಕ್ಕೆ ಇರುವ ಕೆಲವು ತಡೆಗಳು ..... 122

ಪ್ರಶ್ನೋತ್ತರಗಳು ..... 126

ನೇರ ಪ್ರಶ್ನೆಗಳು ..... 172

ಒಂದೇವ ಕಿರುನುಡಿಗಳು ..... 188

# ಪರಿಚಯ

*ಇದು ಧರ್ಮ ಪ್ರಚಾರವಲ್ಲ, ಇದು ಪಂಥ ಸ್ಥಾಪನೆಯ ಪ್ರಯತ್ನವಲ್ಲ, ಆದರೆ ಇದು ಈ ಭೂಮಿಯ ಸರ್ವ ಮಾನವರೂ ಮೋಸಹೋಗಿರುವ ಆ ದುರಂತದ ಭಯಾನಕ ರಹಸ್ಯಗಳ ಅನಾವರಣವಾಗಿದೆ.*

ಎಲ್ಲಾ ಆಧ್ಯಾತ್ಮಿಕ ಹಾಗೂ ಧಾರ್ಮಿಕ ವಿರೋಧಾಭಾಸಗಳಿಗೆ ಮತ್ತು ಇದುವರೆಗೂ ತರ್ಕಕ್ಕೆ ನಿಲುಕದೆ ಇದ್ದ ಸರ್ವ ವಿಚಾರಗಳಿಗೂ ಸ್ಪಷ್ಟ ಕಾರಣ ದೊರಕಿರುವುದು! ಭಯಾನಕವಾದರೂ, ಸತ್ಯದ ಅರಿವಿನ ಆಸಕ್ತಿಯನ್ನು ಹೊಂದಿದವರು ಅಚ್ಚರಿಯೊಂದಿಗೆ ಅದನ್ನು ಇಲ್ಲಿ ತಿಳಿದುಕೊಳ್ಳಬಹುದು!

ಈ ಸತ್ಯಗಳನ್ನು, ಬಹಳ ವರುಷಗಳ ತನ್ನ ಧ್ಯಾನದಿಂದ ಸಂಚಯಿಸಿದ ತನ್ನ ಆಧ್ಯಾತ್ಮಿಕ ಶಕ್ತಿಯ ಹಿನ್ನೆಲೆಯ ಪ್ರತ್ಯೇಕ ಸೂಕ್ಷ್ಮ ಲೋಕದ ಬೇಹುಗಾರಿಕೆಯಿಂದ ನಮಗೆ ದೊರಕಿಸಿ ಕೊಟ್ಟಿರುವ ಆ ಒಂದೇವ ಎಂಬವರ ಒಂದು ಮುಖ್ಯವಾದ ಮಾತಿನೊಂದಿಗೆ ನಾವು ಅವರ ಮಾತುಗಳನ್ನು ಜಗತ್ತಿಗೆ ತಿಳಿಸುವ ಸೇವೆಯನ್ನು ಆರಂಭಿಸುತ್ತೇವೆ.

---

*ಒಂದು ವಿಚಾರಕ್ಕೆ ಹಲವು ಸತ್ಯಗಳಿದ್ದಲ್ಲಿ ಅವುಗಳು ಹಲವು ಅಸತ್ಯಗಳಾಗುವವು*
*ಯಾಕೆಂದರೆ ಯಾವುದೇ ಘಟನೆಗೆ ಅಥವಾ ವಿಚಾರಕ್ಕೆ ಸತ್ಯವು ಎಂದಿಗೂ*
*ಒಂದಕ್ಕಿಂತ ಹೆಚ್ಚು ಇರುವುದಿಲ್ಲ.*

---

ಒಂದೇವ ಅವರು ಹಗಲು ರಾತ್ರಿ ಕಷ್ಟಪಟ್ಟು ಕಂಡುಹಿಡಿದ, ಸೂಕ್ಷ್ಮ ಲೋಕದ ಆಳದಲ್ಲಿ ಅಡಗಿರುವ, ಆ ಸೂಕ್ಷ್ಮ ಜೀವಿಗಳ ಅಸ್ತಿತ್ವಗಳ ರಹಸ್ಯ ಸತ್ಯಗಳ ಅನುಭವದ ಒಟ್ಟು ಮಾತುಗಳನ್ನು ಈ ಕೆಳಗಿನ ಶೀರ್ಷಿಕೆಗಳು ಪ್ರತಿಫಲಿಸುವವು.

*ಮಾನವಕುಲಕ್ಕೆ ಇದುವರೆಗೂ ತಿಳಿಯದ ಭಯಾನಕ ಸೂಕ್ಷ್ಮಲೋಕ ಜೀವಿಗಳ ಆಟ ಬಹಿರಂಗ!!*

*ಮಾನವರೆಲ್ಲರೂ ಇದುವರೆಗೂ ಮೋಸ ಹೋದ, ಸೂಕ್ಷ್ಮ ಲೋಕದ, ಆ ಭಯಾನಕ ರಹಸ್ಯ ಸತ್ಯಗಳ ಅನಾವರಣ!!*

*ಮಾನವನನ್ನು ಸರ್ವನಾಶದ ಕಡೆಗೆ ನೂಕುತ್ತಿರುವ ಆ ಭಯಾನಕ ಸೂಕ್ಷ್ಮಜೀವಿಗಳು ಅನ್ಯಗ್ರಹದಿಂದ ಬಂದವುಗಳಲ್ಲ !!*

*ಮಾನವರೆಲ್ಲರೂ ಸೇರಿ ಇದಕ್ಕೆ ಪರಿಹಾರವನ್ನು ಯಾವುದಾದರೂ ರೀತಿಯಲ್ಲಿ ಕಂಡುಹಿಡಿಯದಿದ್ದಲ್ಲಿ, ಸರ್ವನಾಶ ಕಟ್ಟಿಟ್ಟ ಬುತ್ತಿಯಾಗುವುದು, ಸಂಶಯವಿಲ್ಲ !!*

ಜಗತ್ತು ಬೆಳಕನ್ನು ಸತ್ಯಕ್ಕೆ ಹೋಲಿಸಿದೆ. ಯಾಕೆಂದರೆ ಬೆಳಕಿನಡಿಯಲ್ಲಿ ಮಾತ್ರ ನಮಗೆ ನಮ್ಮ ಸುತ್ತಮುತ್ತಲೂ ಏನಿವೆಯೋ, ಅವುಗಳು ಅದೇ ರೀತಿಯಲ್ಲಿ ಕಾಣಿಸುವುದು. ಆದರೆ ನಸು ಬೆಳಕಲ್ಲಿ ಅಥವಾ ಕತ್ತಲಲ್ಲಿ, ಹಗ್ಗವನ್ನು ಹಾವೆಂದು ಭ್ರಮಿಸಿದಂತೆ ಅಥವಾ ಹಾವನ್ನು ಹಗ್ಗವೆಂದು ಭ್ರಮಿಸಿದಂತೆ, ಏನಿದೆಯೋ ಅವುಗಳ ಅಸತ್ಯ ರೂಪವು ಸತ್ಯವೆಂದು ಭ್ರಮಿಸಲ್ಪಡುವುದು. ಇದು ಜನರಲ್ಲಿ ಗೊಂದಲ, ಅಶಾಂತಿಯನ್ನು ಸೃಷ್ಟಿಸುವುದು. ಪರಿಣಾಮವಾಗಿ ಹಿಂಸಾಚಾರವು ಸದಾಚಾರದ ರೂಪ ಪಡೆದು, ಮತ್ತು ಅನೈತಿಕತೆಯು ನೈತಿಕತೆಯ ಸಿಂಹಾಸನದಲ್ಲಿ ಕುಳಿತು ಜಗತ್ತನ್ನು ಆಳಲಾರಂಭಿಸುವುದು. ಇದರಿಂದ ಜನರ ಜೀವನವು ದುಃಖ, ನೋವುಗಳಿಂದ ಕಣ್ಣೀರಿಡುವುದು. ಆದುದರಿಂದ ಸತ್ಯದ ಬೆಳಕಿನ ದಾರಿದೀಪವು ಮಾನವನಿಗೆ ಅನಿವಾರ್ಯವಾಗಿದೆಯೆಂದು ತಿಳಿಯಬಹುದು.

ಒಬ್ಬ ವಿಜ್ಞಾನಿ ಮಾತ್ರ ಹೇಳುವುದಾದರೆ, ಮತ್ತು ಇತರ ವಿಜ್ಞಾನಿಗಳು ಒಪ್ಪದಿದ್ದರೆ, ಅದನ್ನು 'ಸತ್ಯ' ಎಂದು ಹೇಳುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಆದರೆ ಅದನ್ನು ಎಲ್ಲಾ ವಿಜ್ಞಾನಿಗಳೂ ಪರೀಕ್ಷಿಸಿ ಒಪ್ಪಿಕೊಂಡಿದ್ದರೆ ಅದು 'ಸತ್ಯ' ಎಂದು ಹೇಳಬಹುದು. ಅದೇ ರೀತಿ, ಪರಸ್ಪರ ವಿರುದ್ಧ ಇರುವ ಈ ಧರ್ಮ, ಪಂಥಗಳಲ್ಲಿ ಹೇಳಿರುವ ಎಲ್ಲವೂ ಸತ್ಯ ಎಂದು ಹೇಳುವುದಕ್ಕೂ ಸಾಧ್ಯವಾಗುವುದಿಲ್ಲ. ಆದರೆ, ಎಲ್ಲಾ ಧರ್ಮ, ಪಂಥದವರು ಒಪ್ಪಿಕೊಳ್ಳುವ ಆ ಧರ್ಮ, ಪಂಥಗಳ ಆ ಪ್ರತ್ಯೇಕ ಭಾಗವು ಮಾತ್ರ ಸತ್ಯ ಎಂದಾಗುವುದು. ಆದುದರಿಂದ, ಮುಕ್ತ-ದೃಷ್ಟಿ ಎಂಬ ಬೆಳಕು ಮಾತ್ರ ಪರಮ ಸತ್ಯವನ್ನು ಜಗತ್ತಿಗೆ ಕರುಣಿಸಬಲ್ಲದು, ಎಂದು ಓಂದೇವ ಅವರು ಹೇಳುವರು.

# ಒಂದೇವ ಅವರ ಆಧ್ಯಾತ್ಮಿಕ ಜೀವನದಲ್ಲಿ ಉಂಟಾದ ಒಂದು ದೊಡ್ಡ ತಿರುವು

ಸ್ನಾತಕೋತ್ತರ ಪದವೀಧರರೂ, ಸರಕಾರಿ ನೌಕರರೂ ಆಗಿ ಜೀವನ ಆರಂಭಿಸುವಾಗ ಒಂದೇವ ಅವರು ಆಧ್ಯಾತ್ಮಿಕ ಜೀವನದತ್ತಲೂ ಆಸಕ್ತಿಯನ್ನು ತಾಳಿದರು. ಅದುವರೆಗೂ ತನ್ನ ರೀತಿಯ ತತ್ವ ಶಾಸ್ತ್ರದ ಮತ್ತು ವಿಚಾರಗಳ ಗುಂಗಿನಲ್ಲಿದ್ದ ಅವರನ್ನು ಅದ್ವೈತ ಸಿದ್ಧಾಂತವು ಆಕರ್ಷಿಸಿತು. ಅದ್ವೈತದ ಆಕರ್ಷಣೆಯೊಂದಿಗೆ ಸರ್ವ ಧರ್ಮಗಳ ಸ್ವರೂಪವೆಂದೇ ಕಾಣಿಸಿದ ರಾಮಕೃಷ್ಣ ಪರಮಹಂಸರು ಮತ್ತು ಸಾಮಾಜಿಕ ಹಾಗೂ ಧಾರ್ಮಿಕ ಮೌಢ್ಯತೆಗಳನ್ನು ಎತ್ತಿ ತೋರಿಸಿ ಜಗತ್ತಿಗೆ ಧರ್ಮ, ಪಂಥ, ಜಾತಿಗಳಿಗೆ ಅತೀತವಾದ ಮಾನವನ ವ್ಯಕ್ತಿತ್ವವನ್ನು ಎತ್ತಿ ಹಿಡಿದ ವಿವೇಕಾನಂದ ಸ್ವಾಮಿಗಳು ಹಾಗೂ ಇತರ ಅವರಂತೆ ಜಗತ್ತಿನ ಎಲ್ಲೆಡೆ ಜೀವಿಸಿ ಹೋದ ಮಹಾತ್ಮರ ಜೀವನಗಳು ಒಂದೇವ ಅವರನ್ನು ತುಂಬಾ ಆಕರ್ಷಿಸಿದವು. ಹೀಗೆ, ಮೊದಲು ಮೋಕ್ಷ, ಅನಂತರ ಆಧ್ಯಾತ್ಮಿಕ ಸೇವೆ ಎಂಬ ನಿರ್ಧಾರದೊಂದಿಗೆ, ಮೊದಲೇ ನಿಶ್ಚಯಿಸಿದಂತೆ, ಜೀವಂತ ಗುರುವಿನ ಮೂಲಕವಲ್ಲದ, ಮಾನಸ ಗುರುವಿನ ಸಂಕಲ್ಪದಲ್ಲಿ, ಸ್ವತಃ ಸಂನ್ಯಾಸವನ್ನು ಸ್ವೀಕರಿಸಿದರು. ಒಂದುವರೆ ವರುಷ ಅಖಂಡ ಮೌನವೃತ, ಮತ್ತು ಇಂದ್ರಿಯ ನಿಗ್ರಹಕ್ಕಾಗಿ ಹುಳಿ, ಖಾರ, ಸಿಹಿ ಇತ್ಯಾದಿಗಳನ್ನು ವರ್ಜಿಸಿ, ಒಟ್ಟು ಎರಡುವರೆ ವರುಷಗಳ ಕಠಿಣ ಸಾಧನೆಯ ನಂತರ ಸಂನ್ಯಾಸ ಜೀವನಕ್ಕೆ ದೇಹ ಮನಸ್ಸುಗಳನ್ನು ಯೋಗ್ಯವಾಗಿಸಿ, ಪವನಗಿರಿ ಎಂಬಲ್ಲಿ ತಾವೇ ವಿವೇಕಾನಂದ ಸ್ವಾಮಿಗಳ ಹೆಸರಲ್ಲಿ ಸ್ಥಾಪಿಸಿದ ಆಶ್ರಮದ ಒಂದು ಕುಟೀರದಲ್ಲಿ ತಮ್ಮ ಸಾಧನೆಯನ್ನು ಮುಂದುವರಿಸಿದರು. ಆದರೆ ಆ ಸಾಧನೆಯ ದಾರಿಯಲ್ಲಿ ಅವರ ಜೀವನದ ಒಂದು ದೊಡ್ಡ ತಿರುವು ಉಂಟಾಯಿತು. ಅದುವೇ, ಅವರಿಗಾದ, ಸೂಕ್ಷ್ಮ ಲೋಕದಲ್ಲಿ ಅತ್ಯಂತ ರಹಸ್ಯವಾಗಿ ಅಡಗಿಕೊಂಡಿರುವ, ಆ ಪ್ರಾಚೀನ ವಾಮಾಚಾರ ಶಕ್ತಿಗಳ ಪ್ರಭಾವದ ಅರಿವು ಆಗಿದೆ. ಅವರಿಗೆ ಮೊದಮೊದಲು ಎಲ್ಲಾ ಗೊಂದಲವಾಗಿತ್ತು. ಆ ಅನುಭವಗಳನ್ನು ಅವರು ಭೂಮಿಯಲ್ಲಿ ಸಾಮಾನ್ಯವಾಗಿ ಮಾಡುವ ವಾಮಾಚಾರವೆಂದು ತಪ್ಪು ತಿಳಿದಿದ್ದರು, ಯಾಕೆಂದರೆ ಅವೆಲ್ಲಾ ಆಧ್ಯಾತ್ಮಿಕ ಚರಿತ್ರೆಯಲ್ಲೇ ಎಲ್ಲೂ ಇದುವರೆಗೂ ಹೇಳದ ಅನುಭವಗಳಾಗಿದ್ದವು. ಮುಂದೆ ಮುಂದೆ ಹೋದಂತೆ ಅವರಿಗೆ ಎಲ್ಲವೂ ಸ್ಪಷ್ಟವಾಗತೊಡಗಿತು. ಅವರು ತನ್ನ ಸೂಕ್ಷ್ಮ ಶಕ್ತಿಯ ಸಹಾಯದಿಂದ ಅವುಗಳ ಸರ್ವ ರಹಸ್ಯಗಳನ್ನು ತಿಳಿಯಲೆಂದು, ಸೂಕ್ಷ್ಮ ವಲಯಗಳಲ್ಲಿ, ಬೇಹುಗಾರಿಕೆಯನ್ನು ಆರಂಭಿಸಿದರ ಪರಿಣಾಮವಾಗಿ ಮಾತ್ರ ಈ ರಹಸ್ಯ ಸತ್ಯಗಳು ತಿಳಿದು ಬಂದಿರುವುದು, ಮತ್ತು ಅದರಲ್ಲಿ ತುಂಬಾ ಮುಂದುವರಿದಾಗ ಎಲ್ಲಾ ರಹಸ್ಯಗಳು ಹೊರಬಂದವು. ಒಂದೇವ ಅವರು ಹೇಳುವ ರೀತಿಯಲ್ಲಿ ಅವೆಲ್ಲಾ ಸೂಕ್ಷ್ಮ ಲೋಕದ ಚರಿತ್ರೆಯಲ್ಲಿ ಎಲ್ಲೂ ಹೇಳದ ಮತ್ತು ಕೇಳದ ಅತಿ ಭಯಾನಕ ರಹಸ್ಯಗಳಾಗಿವೆ. ಅವುಗಳ ಸಾರ್ವತ್ರಿಕ ಪ್ರಭಾವದಿಂದ ಪಾರಾಗಲು ಮತ್ತು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಮಾತ್ರ ಒಂದೇವರು, ಸಂನ್ಯಾಸವೂ ಸೇರಿದಂತೆ, ಈ ಹಿಂದಿನ ತನ್ನ ಸರ್ವ ಆಧ್ಯಾತ್ಮಿಕ ರೀತಿಗಳನ್ನು ತ್ಯಜಿಸಬೇಕಾಗಿ ಬಂದಿರುವುದು ಎಂಬುವುದನ್ನು ತಿಳಿಯಬೇಕಾಗಿದೆ. ಈ ಭಯಾನಕ ವಿಪತ್ತಿನ ಪರಿಹಾರಕ್ಕೆ ಪ್ರಯತ್ನ ಪಡುವುದೆಂದರೆ ಜೀವವನ್ನು ಪಣಕ್ಕೆ ಇಡುವ ಒಂದು ಪಂಥವೆಂಬುವುದನ್ನು ನಾವು ಅರಿಯಬೇಕು. ಆದರೂ "ಏನೇ

ಆಗಲಿ ಮತ್ತು ಯಾರು ಏನೇ ತಿಳಿಯಲಿ, ನಾನು ಈ ಜಗತ್ತಿನ ಜನರಿಗೆ ಮುಂಬರುವ ದುರಂತಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡಿಯೇ ಮಾಡುವೆನು" ಎಂದು ಅವರು ಕೊನೆಯ ತೀರ್ಮಾನವನ್ನು ಮಾಡುತ್ತಾರೆ. ಆ ಪ್ರಾಚೀನ ವಾಮಚಾರದ ರಹಸ್ಯಗಳನ್ನು ಅರಿಯಲು ಸಾಧ್ಯವಾದುದೇ, ಅವರಿಗೆ, ಅದಕ್ಕನುಸರಿಸಿ, ಒಂದು ತನ್ನದೇ ಧನಾತ್ಮಕ ಶಕ್ತಿಯ ವ್ಯವಸ್ಥೆಯನ್ನು ಅದರ ವಿರುದ್ಧ ಸೃಷ್ಟಿಸಲು ಸಾಧ್ಯವಾಗಿರುವುದು ಎಂದು ಅವರು ಹೇಳುವರು. ಮಾತ್ರವಲ್ಲ, ಆ ವಾಮಾಚಾರ ವ್ಯವಸ್ಥೆಯು, ಹಲವು ಸಹಸ್ರ ವರುಷಗಳು ಕಳೆದುದರ ಪರಿಣಾಮವಾಗಿ ಅತಿ ಶಕ್ತಿಶಾಲಿಯಾಗಿದ್ದರೂ, ಅವುಗಳು ಅತಿ ಪುರಾತನ ವ್ಯವಸ್ಥೆಯಾದುದರಿಂದ ಅವುಗಳಲ್ಲಿ ಹಲವು ಕೊರತೆಗಳು ಇರುವವೆಂದೂ, ಮತ್ತು ಆ ಪ್ರಾಚೀನ ವ್ಯವಸ್ಥೆಯ ಆ ಕೊರತೆಗಳ ಅರಿವು ಕೂಡಾ ಇನ್ನೊಂದು ರೀತಿಯಲ್ಲಿ ಓಂದೇವ ಅವರ ಹೊಸ ಧನಾತ್ಮಕ ವ್ಯವಸ್ಥೆಯ ಶಕ್ತಿ ವರ್ಧನೆಗೆ ತುಂಬಾ ಸಹಾಯಕವಾಯಿತು ಎಂದೂ ಅವರು ಹೇಳಿರುವರು. ಹಾಗಿಲ್ಲವಾಗಿರುತ್ತಿದ್ದರೆ, ಎಂದಿಗೂ ಆ ಭಯಾನಕ ಶಕ್ತಿಗಳ ವಿರುದ್ಧ ನಿಲ್ಲಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ ಎಂದೂ ಸ್ಪಷ್ಟವಾಗಿ ಹೇಳಿರುವರು. ಈ ಪರಿಹಾರ ಪ್ರಯತ್ನದ ಉದ್ದೇಶ ಮಾತ್ರಕ್ಕಾಗಿ ಅವರು "ಓಂದೇವ" ಎಂಬ ಹೊಸ ಹೆಸರಿನ ದೇವಶಕ್ತಿಯಾಗಿ, ಹೋರಾಟದ ಆರಂಭದಲ್ಲೇ, ತನ್ನ ಧ್ಯಾನಶಕ್ತಿ ಎಲ್ಲವನ್ನೂ ಬದಲಾಯಿಸಿಕೊಂಡಿರುವುದು ಎಂದು ತಿಳಿಯಬೇಕು. ಈ ಉದ್ದೇಶವಲ್ಲದೆ 'ಓಂದೇವ' ಎಂಬ ದೇವ ಸಂಕಲ್ಪದ ಸೃಷ್ಟಿಗೆ ಬೇರೆ ಉದ್ದೇಶಗಳಿರಲಿಲ್ಲ. ಆದರೆ ಇದನ್ನು ತಪ್ಪು ತಿಳಿದುಕೊಂಡ ಸಮಾಜದ ಕಿಡಿಗೇಡಿಗಳು ಅವರಿಗೆ ತೊಂದರೆಯನ್ನು ಕೊಟ್ಟದರ ಪರಿಣಾಮವಾಗಿ ಈಗ ಓಂದೇವ ಅವರು ಪವನಗಿರಿಯಿಂದ ಬೇರೆಕಡೆ ಇದ್ದು, ಅವರಷ್ಟಕ್ಕೆ ಆ ತನ್ನ ರೀತಿಯ ಧನಾತ್ಮಕ ಶಕ್ತಿಯನ್ನು ಬೆಳೆಸುತ್ತಿದ್ದಾರೆ, ಮತ್ತು ಅವರು ಹೇಳುತ್ತಿರುವಂತೆ ಅವರ ಜೀವನದ ಕರ್ತವ್ಯವನ್ನು ಮಾಡುತ್ತಿದ್ದಾರೆ.

ತನಗೆ ಬಯಲಾದ ಸೂಕ್ಷ್ಮದ ಆ ಪ್ರಾಚೀನ ವಾಮಾಚಾರದ ರಹಸ್ಯಗಳನ್ನು ಜಗತ್ತಿನ ಮುಂದಿಡುವುದರೊಂದಿಗೆ ತನ್ನ ಮುಖ್ಯ ಕರ್ತವ್ಯವು ಮುಗಿಯಿತು ಎಂದು ಓಂದೇವ ಅವರು ಹೇಳುವರು. ಅವರ ದೇವಸಂಕಲ್ಪ, ಮತ್ತು ಅದರ ಮೂಲಕ, ಮುಂದೆ ಬರಲಿರುವ ಆಪತ್ತಿಗಿರುವ ಪರಿಹಾರ ಮಾರ್ಗವು, ಅದು ಅವರ ರೀತಿಯ ಒಂದು ಪ್ರಯತ್ನ ಮಾತ್ರವಾಗಿದೆ ಎಂದು ಹೇಳುವರು. ಮಾತ್ರವಲ್ಲದೆ, "ಜನರು ಇಂದು ನಂಬುವರೋ, ಬಿಡುವರೋ ಎಂಬುವುದು ಮುಖ್ಯವಲ್ಲ, ಆದರೆ ಮುಂದೆ ಆ ದೊಡ್ಡ ಆಪತ್ತು ಹತ್ತಿರ ಬರುತ್ತಿರುವಾಗ ಸಹಜವಾಗಿಯೇ ಈ ಎಲ್ಲಾ ಅಂಶಗಳನ್ನು, ಸತ್ಯವೆಂದು, ಸ್ಪಷ್ಟವಾಗಿ ಜನರು ಅರಿಯುವರು" ಎಂದು ಅವರು ಹೇಳಿರುವರು. ಆ ಆಪತ್ತಿನ ಕಾಲಕ್ಕೆ ತನ್ನ ಮಾತುಗಳು, ಜನರಿಗೆ ಅವರಷ್ಟಕ್ಕೆ ಒಂದು ಪರಿಹಾರ ಮಾರ್ಗವನ್ನು, ಸಾಧ್ಯವಾದಲ್ಲಿ, ಕೂಡಲೇ ಕಂಡುಕೊಳ್ಳಲು, ಸಹಕರಿಸುವುದು ಎಂದೂ ಹೇಳಿರುವರು.

ಓಂದೇವ ಅವರು ಜಗತ್ತಿನ ಮುಂದಿಟ್ಟ ಹಲವು ಸೂಕ್ಷ್ಮದ ರಹಸ್ಯ ವಿಚಾರಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದಂತಿರುವ ಇತರ ವಿಚಾರಗಳನ್ನು ಬೇಕಾದಲ್ಲಿ ಬೇಕಾದಂತೆ ಸೇರಿಸಿ ಓದುಗರಿಗೆ ಸತ್ಯಗಳು ಹೆಚ್ಚು ಮನದಟ್ಟಾಗುವಂತೆ ಈ ಕೆಳಗೆ ವಿವರಿಸಿದ್ದೇವೆ. ಇದರಿಂದ ಓದುವ ವೇಳೆ ಸಂಶಯಗಳು ಉದಯವಾಗುವುದು ಕಡಿಮೆಯಾಗಬಹುದು. ಈ ಕೆಳಗಿನ ವಿವರಣೆಗಳಲ್ಲಿ ಓಂದೇವರವರ ಸಾರ್ವತ್ರಿಕ

ಸಂದೇಶಗಳೊಂದಿಗೆ, ಕೆಲವು ಪ್ರಶ್ನೋತ್ತರಗಳನ್ನೂ ಸೇರಿಸಿದ್ದೇವೆ. ಇವು ಜನಸಾಮಾನ್ಯರ ಹಲವು ಸಂಶಯಗಳನ್ನು ಪರಿಹರಿಸುವುದು. ಸಂಶಯಗಳು ಮತ್ತೂ ಇದ್ದಲ್ಲಿ, ಅದನ್ನು ಓದುಗರು ನಮಗೆ ತಿಳಿಸಿದಲ್ಲಿ, ಅದರ ಉತ್ತರವನ್ನು ಇದರಲ್ಲೇ ಮುಂದೆ ಪ್ರಕಟ ಮಾಡುವ ವ್ಯವಸ್ಥೆಯನ್ನೂ ಮಾಡಿದ್ದೇವೆ. ಈ ವಿಚಾರವಾಗಿರುವ ವಿವರಣೆಯನ್ನು ಕೊನೆಯ ಪುಟದಲ್ಲಿ ಕೊಡಲಾಗಿದೆ.

# ಒಂದೇವರವರ ಮಾತುಗಳು

ಒಂದೇವರವರು ಮೊಟ್ಟ ಮೊದಲಾಗಿ ಜಗತ್ತಿನ ಸರ್ವರಲ್ಲೂ ಸ್ಪಷ್ಟವಾಗಿ ತಮ್ಮ ಬಗ್ಗೆ ತಿಳಿದಿರಲು ಹೇಳಿರುವ ಕೆಲವು ಮುಖ್ಯ ವಿಚಾರಗಳು ಈ ಕೆಳಗಿನಂತಿವೆ. ಅವರು ಹೇಳುವ ಪ್ರಕಾರ ಅವರ ಹೆಸರನ್ನು ತಿಳಿಯುವ ಮೊದಲೇ ಈ ವಿಚಾರಗಳನ್ನು ಜನರು ತಿಳಿದಿರಬೇಕೆಂದಾಗಿದೆ, ಅಂದರೆ, ಅಷ್ಟಕ್ಕೂ ಅನಿವಾರ್ಯವಾಗಿ ಅವರ ಕುರಿತು ಮೊದಲಲ್ಲೇ ತಿಳಿಯಬೇಕಾದ ವಿಷಯಗಳಿವು ಎಂದು ಅರ್ಥ.

1. ನಾನು ಸೂಕ್ಷ್ಮದ ಆ ಪ್ರಾಚೀನ ವಾಮಾಚಾರದ ರಹಸ್ಯ ಸತ್ಯಗಳನ್ನು ಕಂಡದ್ದು ಕಥೆಯಲ್ಲ ಬದಲು ಪರಮ ಸತ್ಯವೆಂದು ಹೇಳುವೆನು. ಆದರೆ ಅದನ್ನು ಮುಂದಿಟ್ಟುಕೊಂಡು ನನಗೆ ಒಂದು ಧರ್ಮವನ್ನಾಗಲೀ ಅಥವಾ ಪಂಥವನ್ನಾಗಲೀ ಸೃಷ್ಟಿಸುವ ಉದ್ದೇಶ ಎಂದೂ ಇಲ್ಲ ಎಂದು ತಿಳಿಸುವೆನು. ಯಾಕೆಂದರೆ ಹಾಗೆ ಮಾಡಿದ್ದಲ್ಲಿ, ಈವರೆಗೆ ಆಗಿಹೋಗಿರುವ ಎಲ್ಲಾ ಧರ್ಮ, ಪಂಥಗಳ ತಮ್ಮೊಳಗಿನ ಹೊಡೆದಾಟದ ಅನುಭವದ ಹಿನ್ನೆಲೆಯಲ್ಲಿ, ಅದು ಎಂದಿಗೂ ಈ ಜಗತ್ತಿಗೆ ನೆಮ್ಮದಿಯನ್ನು ತರಲಾರದು ಎಂಬುವುದು ಖಂಡಿತವಾಗಿ ಹೇಳಬಹುದು. ಅದಕ್ಕಿಂತಲೂ ಹೆಚ್ಚಾಗಿ ಈ ತಮ್ಮೊಳಗೆ ಹೊಡೆದಾಡುವ ಧರ್ಮ, ಪಂಥಗಳು ಆ ಪ್ರಾಚೀನ ವಾಮಾಚಾರವು ತಮ್ಮ ಗುರಿಯನ್ನು ತಲುಪಲು ಪ್ರಯೋಗಿಸುವ ಅಸ್ತ್ರಗಳು ಮಾತ್ರವೆಂದು ಅತ್ಯಂತ ಸ್ಪಷ್ಟವಾಗಿ ತಿಳಿದಿರುವೆನು!! ಎಲ್ಲಾ ಧರ್ಮಗಳ ಆಧಾರ ಅಥವಾ ಸಾರವಾದ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯನ್ನು "ನಮಗೆ ಮಾತ್ರ" ಎಂದು ಹೇಳಿಕೊಳ್ಳುವುದು ಅತ್ಯಂತ ಮೂಢತನ ಎಂಬುವುದು ಇನ್ನೊಂದು ಪರಮ ಸತ್ಯವಾಗಿದೆ. ನಾನು ಏನಾದರೂ ಹೇಳುವುದಾದರೂ ಮತ್ತು ಬರೆಯುವುದಾದರೂ ಅದರ ಮುಖ್ಯ ಉದ್ದೇಶವು ಆ ಪ್ರಾಚೀನ ವಾಮಾಚಾರದ ಭಯಾನಕ ಪ್ರಭಾವವನ್ನು ಅರಿಯದೆ ದುರಂತಗಳಿಗೆ ಒಳಗಾಗುತ್ತಿರುವ ಮಾನವನು ಹೇಗಾದರೂ ಮಾಡಿ ಯಾವುದಾದರು ರೀತಿಯಲ್ಲಿ ಅವುಗಳಿಂದ ರಕ್ಷಣೆ ಪಡೆಯಲಿ ಎಂಬ ಉದ್ದೇಶದಿಂದ ಮಾತ್ರವಾಗಿದೆ. ನಿಮ್ಮ ಮಗುವನ್ನು ನಿಮ್ಮದೇ ಧರ್ಮದ ಒಬ್ಬ ಧರ್ಮಾಂಧನು ದೇವರ ಹೆಸರಲ್ಲಿ ಕೈಗೆತ್ತಿ ಕೊಲ್ಲಲು ಹೊರಟರೆ, ಆಗ ನೀವು ದೇವರ ಹೆಸರಲ್ಲಿ ಮಗುವನ್ನು ಕೊಲ್ಲಲಿ ಎಂದು ಸುಮ್ಮನಿರುವಿರೇ? ಅಥವಾ "ದೇವರು ಹಾಗೆಂದೂ ಬಯಸಲಾರ, ನನ್ನ ಮಗುವಿನ ಪ್ರಾಣ ಆತ ಬಯಸಲಾರ, ದಯವಿಟ್ಟು ಮಗುವನ್ನು ಕೊಲ್ಲಬೇಡಿ" ಎಂದು ಬೇಡುವಿರೇ? ನೀವು ನಿಮ್ಮ ಮಗುವಿನ ಪ್ರಾಣವನ್ನು ದೇವರು ಬಯಸಲಾರ ಎನ್ನುವಿರಿ ಖಂಡಿತ. ಅದೇ ರೀತಿಯಲ್ಲಿ, ಯಾವ ಧರ್ಮದ ದೇವರೂ ಇತರ ಧರ್ಮದ ಮಾನವನನ್ನು ಚುಚ್ಚಿ ಕೊಂದು ಹಾಕು ಎನ್ನಲಾರ, ಆದರೆ, ಎಲ್ಲಾ ಧರ್ಮಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಧರ್ಮಾಂಧರಿಂದ ಕೊಲೆಗಳು ನಡೆಯುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ, ಅಲ್ಲಿ ಮಗುವಿನ ತಂದೆ ಬೇಡಿಕೊಂಡಂತೆ, ಜಗತ್ತಿನ ಆ ರೀತಿಯ ಜನರಲ್ಲಿ ನಾನು ಒಬ್ಬ ಸಾಮಾನ್ಯ ಮಾನವನಾಗಿ "ಮಾನವರನ್ನು ಕೊಲ್ಲಬೇಡಿ, ಹಿಂಸಿಸಬೇಡಿ, ಆ ರೀತಿಯ ಹಿಂಸೆಯು ಧರ್ಮ ಎಂದೂ ಆಗಲಾರದು ಬದಲು ಧರ್ಮದ

ನಾಶವಾಗುವುದು" ಎಂದು ಕೇಳಿಕೊಳ್ಳುತ್ತೇನೆ. ನನ್ನ ಪ್ರತಿ ಮಾತು ಹಾಗೂ ಬರಹವು ಈ ಉದ್ದೇಶಮೂಲದಿಂದ ಮಾತ್ರ ಹುಟ್ಟಿ ಬರುವವು ಎಂಬುವುದನ್ನು ಎಲ್ಲಾ ಕಾಲದಲ್ಲೂ

ಮರೆಯಬಾರದು ಎಂದು ಮಾತ್ರ ಜಗತ್ತಿನ ಸರ್ವರಲ್ಲೂ ನಾನು ಕೇಳಿಕೊಳ್ಳುತ್ತಿರುವುದು. ಆ ಪ್ರಾಚೀನ ವಾಮಾಚಾರದ ಭಯಾನಕ ರಹಸ್ಯ ಸತ್ಯಗಳು ತಿಳಿದ ಹಿನ್ನೆಲೆಯಲ್ಲಿ ಅದು ನಿಮಗೆ ತಿಳಿಸಿಬಿಡುವುದೊಂದೇ ನನ್ನ ಜೀವನದ ಉದ್ದೇಶ ಹಾಗೂ ಕರ್ತವ್ಯವಾಗಿರುವುದು.

2. ನನಗೆ ಯಾವ ಪ್ರತ್ಯೇಕ ಜಾತಿ, ಧರ್ಮ, ಪಂಥಗಳಿಲ್ಲ. ನಾನು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಗಳನ್ನು ಮಾತ್ರ ಧರ್ಮ ಮತ್ತು ದೇವರೆಂದು ಅನುಸರಿಸುವ ಒಬ್ಬ ಸಾಮಾನ್ಯ ಮಾನವ ಅಷ್ಟೇ. ಆದುದರಿಂದ ನಾನು ಯಾವ ಧರ್ಮ, ಪಂಥಗಳ ಪರವೋ ಅಥವಾ ವಿರೋಧವೋ ನಿಲ್ಲುವುದಿಲ್ಲ. ಅದೇ ರೀತಿ, ನಾನು ಯಾವ ರಾಜಕೀಯ ಪಕ್ಷದಲ್ಲೂ ಇಲ್ಲವೆಂಬ ಕಾರಣಕ್ಕೆ ನನ್ನ ಮಾತುಗಳು ಯಾವ ಪಕ್ಷವನ್ನು ನಿಂದಿಸುವುದು ಅಥವಾ ಎತ್ತಿ ಹಿಡಿಯುವುದು ಇಲ್ಲ ಎಂದೂ ತಿಳಿಯಬೇಕಾಗಿದೆ. ಯಾಕೆ ಈ ರೀತಿ ಹೇಳುತ್ತಿದ್ದೇನೆ ಎಂದರೆ, ಆ ಪ್ರಾಚೀನ ವಾಮಾಚಾರದ ಅತ್ಯಂತ ಮೋಸದ ರೀತಿಗಳಲ್ಲಿ ಒಂದು ಮುಖ್ಯವಾದದ್ದು ಮಾನವನ "ವಿಭಜನೆ"ಯಾಗಿದೆ. ಅದನ್ನು ಯಾರಿಂದಾದರೂ ಮಾಡಿಸಲು ಅದು ಎಲ್ಲಾ ಕಾಲದಲ್ಲೂ ಹೊಂಚು ಹಾಕುತ್ತಿರುವುದು. ಆದುದರಿಂದಲೇ ನನ್ನ ಹೃದಯದ ಉದ್ದೇಶವನ್ನು ನಿಮ್ಮ ಮುಂದೆ ನೇರವಾದ ಮಾತುಗಳಲ್ಲಿ ಹೇಳಬೇಕಾಯಿತು. ಜಗತ್ತಿಗೆ ಶಾಂತಿ ಬರುವುದೆಂದು ಕಂಡಲ್ಲಿ, ಆ ಪ್ರಾಚೀನ ವಾಮಾಚಾರವು, ಅಲ್ಲಿ, ಹಲವು ರೀತಿಗಳ ಸಹಾಯದಿಂದ ವಿಭಜನೆಯನ್ನು ಸೃಷ್ಟಿಸಿ ಶತ್ರುತ್ವವು ಬೆಳೆಯುವಂತೆ ಮಾಡುವುದು ಮತ್ತು ಆ ರೀತಿಯಲ್ಲಿ ಅದು ಜಗತ್ತಿಗೆ ಶಾಂತಿ ಬಾರದಂತೆ ಮಾಡುವುದು!

3. ನಾನು ಹೇಳುವ ಮಾತುಗಳು ಯಾರನ್ನೂ ಯಾವುದಕ್ಕೂ ಒತ್ತಾಯಿಸುವುದಕ್ಕಲ್ಲ, ಆದರೆ ಕಾಲವು ಮುಂದೆ ಎಲ್ಲರಿಗೂ ಸತ್ಯವನ್ನು ಬಡಿಸುವುದು, ಆಗ ಈ ಎಲ್ಲಾ ಹಿಂಸೆಗಳಿಂದ ಪಾರಗುವ ಮಾರ್ಗವನ್ನು ಹುಡುಕಲು ನೀವೇ ಮುಂದಾಗುವಿರಿ, ಆಗ ಈ ನನ್ನ ಮಾತುಗಳಲ್ಲಿರುವ ಸತ್ಯವು ಪೂರ್ಣ ರೂಪದಲ್ಲಿ ಅರ್ಥವಾಗುವುದು.

4. ನನ್ನ ಬರಹದಲ್ಲಿ ಅಕ್ಷರ ತಪ್ಪುಗಳಿರಬಹುದು, ಅದೇ ರೀತಿ ವ್ಯಾಕರಣ ತಪ್ಪುಗಳೂ ಇರಬಹುದು. ಆದರೆ ಸತ್ಯಸಂಧತೆ ಮತ್ತು ನೈತಿಕತೆಗಳಲ್ಲಿ ಮಾತ್ರ ಯಾರಿಗೂ ತಪ್ಪನ್ನು ಕಂಡುಹಿಡಿಯಲು ಸಾಧ್ಯವಾಗಲಾರದು, ಯಾಕೆಂದರೆ ನಾನು ಈ ಭೂಮಿಯಲ್ಲಿ ಜೀವಿಸುವುದು ಅದಕ್ಕಾಗಿ ಮಾತ್ರವಾಗಿದೆ. ಆದುದರಿಂದ ಮನೆಯಲ್ಲಿ ಕುಳಿತು ಅಪವಾದಗಳನ್ನು ಹೇರಲು ಅಂದಾಜು ಮಾಡುವವರು ಯಾರಾದರೂ ಇದ್ದಲ್ಲಿ, ದಯವಿಟ್ಟು, ನನ್ನ ಕುರಿತಾದ ಪೂರ್ಣ ಚಿತ್ರಣವನ್ನು ಪಡೆಯುವ ಮುನ್ನ ಅದನ್ನು ಆರಂಭಿಸದಿರುವುದು ಒಳಿತು ಎಂದು ಕೇಳಿಕೊಳ್ಳುವೆನು.

# ಪ್ರಾಚೀನ ವಾಮಾಚಾರ

ಜಗತ್ತಿನ ಪ್ರತಿ ಮಾನವನಿಗೂ ವಾಮಾಚಾರದ ಕುರಿತು ತಿಳಿದಿದೆ, ಅದೇ ರೀತಿ ಅಸುರ ಅಥವಾ ಸೈತಾನನ ಕುರಿತೂ ತಿಳಿದಿದೆ. ಇವೆಲ್ಲವನ್ನೂ ಎಲ್ಲರ ಧರ್ಮಗಳಲ್ಲಿ ವಿವರಿಸಿದ್ದಾರೆ. ಅದೇನೇ ಇರಲಿ, ಈ ಒಂದು ಪ್ರತ್ಯೇಕ ಪ್ರಾಚೀನ ವಾಮಾಚಾರದ ಇರುವಿಕೆಯನ್ನು ಜಗತ್ತು ಮೊದಲೇ ಪತ್ತೆಹಚ್ಚಿರುತ್ತಿದ್ದರೆ ಈ ಜಗತ್ತು ಇಂದಿನ ಸ್ಥಿತಿಯಲ್ಲಿರುತ್ತಿರಲಿಲ್ಲ, ಬದಲು ಜನರು ಅದಕ್ಕೆ ತಕ್ಕ ಪರಿಹಾರವನ್ನು ಅಂದೇ ಕಂಡುಹಿಡಿಯುತ್ತಿದ್ದರು ಮತ್ತು ಆ ಮೂಲಕ ಒಂದು ಶಾಶ್ವತ ಸತ್ಯಯುಗವು ಸೃಷ್ಟಿಯಾಗುತ್ತಿತ್ತು! ಆದರೆ ಅದು ಆಗಿಲ್ಲ, ಇದಕ್ಕೆ ಕಾರಣ ಆ ಪ್ರತ್ಯೇಕ ಪ್ರಾಚೀನ ವಾಮಾಚಾರದ ಮೋಸವು ಸಹಸ್ರ ಸಹಸ್ರ ವರುಷಗಳಿಂದಲೂ ಯಾರಿಗೂ ತಿಳಿಯದೆ ರಹಸ್ಯವಾಗಿಯೇ ಉಳಿದಿರುವುದು ಆಗಿದೆ!

ಮಾನವ ಕಾಡಿನಲ್ಲಿರುವಾಗಲೇ ವಾಮಚಾರ ಕ್ಷುದ್ರ ಶಕ್ತಿಗಳನ್ನು ಬಳಸುತ್ತಿದ್ದನು. ಆತ ಕಾಡಿನಿಂದ ನಾಡಿಗೆ ಬಂದು ಹಲವು ಸಹಸ್ರ ವರುಷಗಳು ಕಳೆದ ನಂತರವೇ ಸ್ವಲ್ಪ ಪ್ರಾಮಾಣಿಕನಾಗುವ ಪ್ರಯತ್ನವನ್ನು ಆರಂಭಿಸಿರುವುದು. ಮಾನವ ಜನಾಂಗದ ಸತ್ಯ, ಧರ್ಮ, ದೇವರು ಇತ್ಯಾದಿ ಮಾತುಗಳ ಆರಂಭವೇ ಹಲವು ಸಾವಿರ ವರುಷಗಳ ನಂತರವಾಗಿರುವುದು! ಅದುವರೆಗೂ ಜಗತ್ತಿನಾದ್ಯಂತ ಬೆಳೆದು ಬಂದಿರುವುದು ಹಲವು ವಾಮಾಚಾರ ಪದ್ಧತಿಗಳು, ಮತ್ತು ಅವುಗಳ ಕ್ಷುದ್ರ ಶಕ್ತಿಗಳು!

ವಾಮಾಚಾರ ಶಕ್ತಿಗಳನ್ನು ಮಾನವನು ಕಾಡಿನಲ್ಲಿ ಬೆಳೆಸಿ ನಾಡಿಗೆ ತಂದ ನಂತರ ಅದನ್ನು ವ್ಯವಸ್ಥಿತ ರೂಪಕ್ಕೆ ತಂದನು. ಅಂದಿನಿಂದ ಹಲವು ಸಹಸ್ರ ವರುಷಗಳು ಕಳೆದ ನಂತರವೇ ಹಲವು ಧನಾತ್ಮಕ ದೇವತಾ ಶಕ್ತಿಗಳ ಆರಾಧನೆಯು ಆರಂಭವಾಗಿರುವುದು. ಅನಂತರದಲ್ಲಿ ಮಾತ್ರವೇ, ಸೃಷ್ಟಿಗೆ ಒಂದು ಕಾರಣವನ್ನು ಮಾನವನು ಹುಡುಕಲು ಪ್ರಯತ್ನಿಸಿರುವುದು. ಆಗ ಬಹಳ ಸುಲಭದಲ್ಲಿ ಸಿಕ್ಕಿದ ಕಾರಣವೇ ಆ 'ಸೃಷ್ಟಿಕರ್ತ' ದೇವರು. ಅಲ್ಲಿಂದ ಆತನು ತನ್ನ ಧನಾತ್ಮಕ ದೇವತಾ ಶಕ್ತಿಯನ್ನು ಆ ಸೃಷ್ಟಿಕರ್ತ ದೇವರೆಂದು ಸಂಕಲ್ಪಿಸಿ ಪೂಜಿಸಲು ಮತ್ತು ಬೆಳೆಸಲು ಆರಂಭಿಸಿದನು. ಇದರ ಪರಿಣಾಮವೇ ಆ ದೇವಶಕ್ತಿಗಳು ಅನಂತರದಲ್ಲಿ, ಸೂಕ್ಷ್ಮದಲ್ಲಿ ಮಾನವರಿಗೆ ನೀಡುವ ಆ ದೇವ ದರ್ಶನಗಳಲ್ಲಿ, ತಮ್ಮನ್ನು ತಾವು 'ಸೃಷ್ಟಿಕರ್ತ' ಎಂದು ಹೇಳಿಕೊಳ್ಳಲು ಆರಂಭಿಸಿದವು! ಅವು ಜಗತ್ತಿನಾದ್ಯಂತ ಅಲ್ಲಲ್ಲಿ ಕಾಣಿಸಿಕೊಂಡು ತಾನು ಸೃಷ್ಟಿಕರ್ತ ಅಥವಾ ಆತನ ಅಂಶ ಇತ್ಯಾದಿ ಎಂದು ಹೇಳಲು ಆರಂಭಿಸಿದವು! ಅದು ಇಂದಿಗೂ ಮುಂದುವರಿಯುತ್ತಾ ಇದೆ. ನಾನು ಸೂಕ್ಷ್ಮ ವಲಯಗಳಲ್ಲಿನ ರಹಸ್ಯಗಳನ್ನು ತಿಳಿದ ಸಂದರ್ಭದಲ್ಲಿ ಸ್ಪಷ್ಟವಾಗಿ ಕಂಡದ್ದು ಈ ಸತ್ಯವನ್ನೇ ಎಂದು ತಿಳಿಸುತ್ತೇನೆ. ಇದು ದೇವತಾ ವಿಚಾರವಾದರೆ, ಇತ್ತ, ವಾಮಾಚಾರ ವಿಭಾಗದಲ್ಲಿನ ಒಂದು ಪ್ರತ್ಯೇಕ ಅಂಶವು ನನ್ನನ್ನು ದಿಗಿಲುಗೊಳಿಸಿತು! ಅದೇನೆಂದರೆ, ಅಂದಿನ ಆ ಪ್ರಾಚೀನ ವಾಮಾಚಾರ ಪಂಗಡಗಳಲ್ಲಿ ಒಂದು ಪ್ರತ್ಯೇಕ ಪಂಗಡವು ಬಹಳ ಬುದ್ಧಿವಂತ ಪಂಗಡವಾಗಿದ್ದು, ಅದು ಸೂಕ್ಷ್ಮಲೋಕದಲ್ಲಿ, ಇತರ ಎಲ್ಲಾ ವಾಮಾಚಾರ ಪಂಗಡಗಳ ಶಕ್ತಿಗಳನ್ನು ತನ್ನೊಳಗೆ ರಹಸ್ಯವಾಗಿ ಸೇರಿಸುವ ಒಂದು ಪ್ರತ್ಯೇಕ ಸೂಕ್ಷ್ಮದ ತಾಂತ್ರಿಕ ರೀತಿಯನ್ನು ತನ್ನ ವ್ಯವಸ್ಥೆಯಲ್ಲಿ ಅಳವಡಿಸಿ ಕೊಂಡಿತ್ತು ಎಂದಾಗಿದೆ. ಇದರ ಪರಿಣಾಮವಾಗಿ ಆ ಪ್ರತ್ಯೇಕ ಪಂಗಡಕ್ಕೆ ಇತರ ವಾಮಾಚಾರ ಪಂಗಡಗಳ ಶಕ್ತಿಯನ್ನು, ರಹಸ್ಯವಾಗಿ,

ತನ್ನ ಪರ ಶಕ್ತಿಯನ್ನಾಗಿ ಪರಿವರ್ತಿಸುವ ಸಾಮರ್ಥ್ಯ ದೊರಕಿತು. ಇದನ್ನು ಅದು ಆ ಪ್ರಾಚೀನ ಕಾಲದಿಂದಲೇ ಮುಂದುವರಿಸುತ್ತಾ ಮತ್ತು ಇತರ ಎಲ್ಲಾ ವಾಮಾಚಾರ ಪಂಗಡಗಳ ಮೇಲೆ ತನ್ನ ಆಧಿಪತ್ಯವನ್ನು ಮೆರೆಸುತ್ತಾ ಬಂದಿತು. ಅದು ಮುಂದುವರಿದು ಬರುತ್ತಿದ್ದಂತೆ, ಅನಂತರ ಬಂದ ಧನಾತ್ಮಕ ಶಕ್ತಿಗಳಾದ ದೇವತೆಗಳು, ಮತ್ತೂ ಹಲವು ಸಾವಿರ ವರುಷಗಳ ನಂತರ ಉದ್ಭವಿಸಿದ ಈ ಜಗತ್ತಿನ ಎಲ್ಲಾ ಧನಾತ್ಮಕವಾದ ಧರ್ಮ, ಪಂಥ, ಇತ್ಯಾದಿಗಳನ್ನೂ, ಬಹಳ ರಹಸ್ಯವಾಗಿಯೇ ತನ್ನ ಅಧೀನದಲ್ಲಿರಿಸುತ್ತಾ ಬಂದಿದೆ. ಇಂದು ಅದು ಜಗತ್ತಿನಾದ್ಯಂತ ಹಬ್ಬಿ, ಕೊಬ್ಬಿ, ಆರ್ಭಟಿಸುತ್ತಿದೆ. ಇದನ್ನು ಹುಟ್ಟುಹಾಕಿದ, ಭೂಮಿಯ ಆ ವಾಮಾಚಾರ ಪಂಗಡದ ವಾಮಾಚಾರಿಗಳು ಆ ಪ್ರಾಚೀನ ಕಾಲದಲ್ಲೇ ಅಳಿದು ಹೋಗಿರುವರು, ಆದರೆ ಆ ಸೂಕ್ಷ್ಮಲೋಕದಲ್ಲಿ ಅವರು ಅಂದು ಮಾಡಿಟ್ಟ ಆ ವ್ಯವಸ್ಥೆ ಮಾತ್ರ ತನ್ನ ವಾಮಾಚಾರ ವ್ಯವಸ್ಥೆಯನ್ನು ತನಗೆ ಅಂದು ಹೇಳಿಕೊಟ್ಟಂತೆ ಬೆಳೆಸುತ್ತಾ, ಶಕ್ತಿಯುತವಾಗುತ್ತಾ ಮುಂದುವರಿದು ಬಂದಿದೆ!

ಈ ಸೂಕ್ಷ್ಮ ವಲಯಗಳಲ್ಲಿ, ಸಾಮಾನ್ಯರಿಗೂ ತಿಳಿಯುವ ಆ ಮೇಲಿನ ಸ್ಥರಗಳು ಮತ್ತು ಆಳದ ರಹಸ್ಯ ಸ್ಥರಗಳೆಂದು ಹಲವು ಸ್ಥರಗಳು ಇವೆ. ಅವುಗಳಲ್ಲಿ ಮೇಲಿನ ಸ್ಥರಗಳಲ್ಲಿ ಸಾಮಾನ್ಯ ವಾಮಾಚಾರ ಶಕ್ತಿಗಳು ಮತ್ತು ಧನಾತ್ಮಕ ದೇವತಾ ಶಕ್ತಿಗಳು ಕಾಣಸಿಗುವವು. ಆದರೆ ಈ ಪ್ರತ್ಯೇಕ ಪ್ರಾಚೀನ ವಾಮಾಚಾರ ಮಾತ್ರ ಅತ್ಯಂತ ರಹಸ್ಯ ವಲಯಗಳಲ್ಲಿದ್ದು ಅವುಗಳು ಹೊರಗೆ ಕಾಣಿಸದೆ, ತನ್ನ ಕೆಲಸವನ್ನು ಈ ಮೇಲಿನ ಸ್ಥರಗಳ ಆ ಋಣಾತ್ಮಕ ಮತ್ತು ಧನಾತ್ಮಕ ಶಕ್ತಿಗಳ ರಹಸ್ಯ ನಿಯಂತ್ರಣಗಳ ಮೂಲಕವೇ ರಹಸ್ಯವಾಗಿ ಮಾಡಿಸಿಕೊಳ್ಳುವವು!! ತಾವು ಆ ಪ್ರಾಚೀನ ವಾಮಾಚಾರದ ನಿರ್ದೇಶನದ ಪಾತ್ರಧಾರಿಗಳು ಎಂದು ಆ ಮೇಲಿನ ಸ್ಥರದ ಯಾವ ಶಕ್ತಿಗಳಿಗೂ ತಿಳಿದಿಲ್ಲ, ಎಲ್ಲವೂ ತಾವು ಸ್ವತಂತ್ರ ಶಕ್ತಿಗಳೆಂದೇ ತಿಳಿದುಕೊಂಡಿವೆ! ಇತ್ತ, ಭೂಮಿಯ ಜನರಿಗೆ ಅವುಗಳ ರಹಸ್ಯ ಯೋಜನೆಗಳ ಬಗ್ಗೆ ಯಾವ ಸಂಶಯವೂ ಬಾರದಿರಲು ಬೇಕಾಗಿ, ಅವುಗಳು ಎಲ್ಲಾ ಧರ್ಮ, ಪಂಥ ಇತ್ಯಾದಿಗಳ ಮೂಲಕವೂ, "ಈ ಜಗತ್ತಿನ ಜನರು ಕಾಲಹೋದಂತೆ ಹೆಚ್ಚು ಹೆಚ್ಚು ಕೆಟ್ಟವರು ಆಗುವರು" ಎಂದು ಒಂದೇ ರೀತಿಯಲ್ಲಿ ತಿಳಿಸಿರುವುದು, ಮತ್ತು ಅವುಗಳು ಮುಂದೆ ಮಾಡಲು ಉದ್ದೇಶಿಸುವ ಹಲವು ಯೋಜನೆಗಳನ್ನು ಭವಿಷ್ಯವಾಣಿಗಳ ಮೂಲಕ ಸಾವಿರಾರು ವರುಷಗಳ ಮೊದಲೇ ತಿಳಿಸಿರುವವು. ಈ ರೀತಿಯಲ್ಲಿ ಜನರು, ಅವೆಲ್ಲ ದೇವರ ಆಟವೆಂದು ನಂಬಿ ಮುಂದೆ ಅದಕ್ಕೆ ಕಾರಣವನ್ನು ಹುಡುಕುವುದನ್ನೇ ನಿಲ್ಲಿಸಿದರು!

ಈ ರಹಸ್ಯ ಸತ್ಯಗಳು ನನಗೆ ಹಲವು ವರುಷಗಳ, ನಿರಂತರ, ಸೂಕ್ಷ್ಮ ಲೋಕದಲ್ಲಿನ ಬೇಹುಗಾರಿಕೆಯ ಪರಿಶ್ರಮದ ಫಲವಾಗಿ ತಿಳಿದಿರುವುದು. ಅಂದರೆ, ಈ ವರೆಗೆ ಎಲ್ಲರೂ ಹೇಳಿರುವಂತೆ, ಯಾವುದೇ ಸೂಕ್ಷ್ಮ ಶಕ್ತಿಯು ಬಂದು ನನ್ನಲ್ಲಿ ಹೇಳಿದ ಮಾತುಗಳು ಅಲ್ಲ ಎಂದು ಅರ್ಥ. ದೇವರು ತನ್ನ ಅತ್ಯಂತ ಉತ್ತಮರಾದ ಭಕ್ತರನ್ನೂ ರಕ್ಷಿಸದೆ ಇರಲು ಕಾರಣ, ಮತ್ತು ಅವರು ಭಯಾನಕ ಕಷ್ಟಕ್ಕೆ ತುತ್ತಾಗುವಂತೆ ಮಾಡುವುದರ ರಹಸ್ಯ ಈಗ ಬಯಲಾಯಿತು! ಈ ಪ್ರಾಚೀನ ವಾಮಾಚಾರದ ಈ ಕೈವಾಡವನ್ನೇ ಆ [ದೇವರಿಂದಲೂ ಬದಲಾಯಿಸಲು ಸಾಧ್ಯವಾಗದ] ಹಣೆಬರಹ ಎಂದು ಹೇಳುವುದು ಅಥವಾ ದೇವರ ಪರೀಕ್ಷೆ, ದೇವರ ಲೀಲೆ ಎಂದೆಲ್ಲಾ ಹೇಳಿ ಸಮಾಧಾನ ಮಾಡಿಕೊಳ್ಳುವುದು ಎಂದೂ ತಿಳಿಯುವುದು. ಯಾಕೆಂದರೆ, ದೇವರು ತನ್ನ ಉತ್ತಮ ಭಕ್ತರನ್ನು ಅಷ್ಟು ಭೀಕರ ದುಃಖ, ನೋವಿಗೆ ತುತ್ತಾಗುವಂತೆ

ಯಾವಕಾಲಕ್ಕೂ ಮಾಡಲಾರ, ಮತ್ತು ತಂದೆಯಾಗಿ ಕರುಣೆಯನ್ನು ತೋರಬೇಕಾದವನು ಬೆಕ್ಕು, ಇಲಿಯನ್ನು ಹಿಂಸಿಸಿ ಕೊಲ್ಲುವಂತೆ ಪರೀಕ್ಷೆಮಾಡಿ ಸಂತೋಷಪಡಲಾರನು. ಎಲ್ಲಾ ಧರ್ಮಗಳು ದೇವರ ಹೆಸರಲ್ಲಿ, ಧರ್ಮದ ಹೆಸರಲ್ಲಿ, ಈ ರೀತಿ ಹಿಂಸೆ, ರಕ್ತಪಾತ ಮಾಡುತ್ತಿರುವುದು ಇದೇ ಕಾರಣಕ್ಕಾಗಿ. "ನಾವೆಲ್ಲಾ ದೇವರ ಮಕ್ಕಳು" ಎಂದು ಹೇಳುತ್ತಾ, ಎಲ್ಲರ ಕಣ್ಣ ಮುಂದೆಯೇ ಜಾತೀಯತೆಯ ಭೀಕರ ಶೋಷಣೆಯ ಕ್ರೌರ್ಯವನ್ನು ಮಾನವನು ಮರೆಸಲೂ ಇದೇ ಕಾರಣವಾಗಿದೆ. ಯಾಕೆಂದರೆ ದೇವರ ಹೆಸರೆತ್ತುವವರು, ಧರ್ಮವನ್ನು ಬೋಧಿಸುವವರು, ಯಾವ ಕಾಲಕ್ಕೂ ಮಾಡಲು ಸಾಧ್ಯವಾಗದ ಕರ್ಮಗಳನ್ನು, ಆ ಜಾತೀ ಶೋಷಣೆ ರೀತಿಯಲ್ಲಿ ಮತ್ತು ಧರ್ಮಾಂಧತೆಯ ರಕ್ತಪಾತದ ರೀತಿಯಲ್ಲಿ, ಮಾಡಿರುವುದನ್ನು ನಮಗೆ ಇತಿಹಾಸದ ಪುಟಗಳಲ್ಲಿ ಹಾಗೂ ನಮ್ಮ ಕಣ್ಣೆದುರು ಕಾಣಲು ಸಾಧ್ಯವಾಗುವುದು! ಈ ವಾಮಾಚಾರಕ್ಕೆ ನಿರಂತರ ಬೆಳೆಯಲು ಅಗತ್ಯವಾದ ಎರಡು ಮುಖ್ಯ ಮಾನವ ಭಾವನೆಗಳು ಎಂದರೆ, ಆ ಹಿಂಸೆಯ ಭಾವನೆ ಮತ್ತು ಅನೈತಿಕ ಕಾಮಭಾವನೆ ಆಗಿರುವುದು. ಹಿಂಸೆಯನ್ನು, ಮನೆ ಜಗಳದಿಂದ ಹಿಡಿದು ಹಲವು ರೀತಿಯ ಯುದ್ಧಗಳ ವರೆಗಿನ ಎಲ್ಲದರ ಸಹಾಯದಿಂದ ಅದು ಪಡೆಯುವುದು, ಅದೇ ರೀತಿ ಭೂಮಿಯಲ್ಲಿ ಅನೈತಿಕ ಕಾಮ ವರ್ಧನೆಯನ್ನುಂಟು ಮಾಡುವ ಹಲವು ವಿಧಾನಗಳನ್ನು ಉಪಯೋಗಿಸಿ ಅದು ಅದನ್ನೂ ಪಡೆಯುತ್ತಲೇ ಬಂದಿರುವುದು. ಈ ಅನೈತಿಕ ಕಾಮವರ್ಧನೆಯನ್ನು ಉಂಟುಮಾಡಬೇಕಾದರೆ ಅದು ಜಗತ್ತಿನಲ್ಲಿ ಸ್ವಾರ್ಥ ಮತ್ತು ಅನೈತಿಕತೆಯನ್ನು ಹೆಚ್ಚಿಸಲೇ ಬೇಕಾಗುವುದು. ಇಲ್ಲವಾದರೆ ಆ ಕೆಲಸಗಳಿಗೆ ಯಾರೂ ತಯಾರಾಗುವುದಿಲ್ಲ. ಜನರನ್ನು ನಿಧಾನವಾಗಿ ಆ ಅನೈತಿಕ ಜೀವನಕ್ಕಾಗಿ ಪ್ರೇರೇಪಿಸುತ್ತಾ, ಇಂದು ಅದು ಶಾಲಾ ಕಾಲೇಜುಗಳಲ್ಲೂ ಮಕ್ಕಳು ಬಹಳ ಸುಲಭವಾಗಿ ಕಾಮಾಸಕ್ತಿ ತೀರಿಸಿಕೊಳ್ಳುವ ವರೆಗೆ ತಲುಪಿದೆ!! ಜಗತ್ತಿನಲ್ಲಿ ಇಷ್ಟೆಲ್ಲಾ ಧರ್ಮ, ಪಂಥಗಳಿದ್ದೂ, ಅದೇ ರೀತಿ, ಸಾವಿರಾರು ದೇವರುಗಳಿದ್ದೂ ಈ ಹಿಂಸೆ, ಅನೈತಿಕತೆಗಳ ವರ್ಧನೆಯನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಾಗಿಲ್ಲ! ಆ ಪ್ರಾಚೀನ ವಾಮಾಚಾರದ ಪ್ರಭಾವವು ಎಲ್ಲದರಲ್ಲೂ ಹಬ್ಬಿ ಮುಂದುವರಿಯುತ್ತಾ ಬರುತ್ತಿದೆ ಎಂಬ ತಿಳುವಳಿಕೆಯು ಇದುವರೆಗೂ ಇಲ್ಲವಾಗಿರುವುದೇ ಅದನ್ನು ನಿಯಂತ್ರಿಸಲು ಯಾರಿಂದಲೂ ಆಗಿಲ್ಲವೆಂಬುವುದಕ್ಕೆ ಕಾರಣ ಎಂದು ಹೇಳಬಹುದು.

ಧರ್ಮ, ಪಂಥಗಳಲ್ಲಿ ಅಸುರ, ಸೈತಾನ ಎಂದೆಲ್ಲಾ ಹೇಳಿವೆ, ಆದರೆ ಆ ಶಕ್ತಿಗಳು ಸೂಕ್ಷ್ಮ ಸ್ತರಗಳ ಆ ಮೇಲಿನ ಸ್ತರಗಳಲ್ಲಿ ಮಾತ್ರ ಕಾಣಿಸುವಂಥವುಗಳಾಗಿವೆ. ಆದರೆ ಅವುಗಳ ಮೂಲಕ ಆಳದ ಸ್ತರಗಳಲ್ಲಿರುವ ಆ ಪ್ರಾಚೀನ ವಾಮಾಚಾರ ಶಕ್ತಿಗಳು, ರಹಸ್ಯವಾಗಿ, ತಮಗೆ ಸಾಧ್ಯವಾಗುವಷ್ಟು ಕೆಲಸವನ್ನು ಮಾಡಿಸುವವು! ಜಗತ್ತಿನ ಮಾನವನ ಎಲ್ಲಾ ಆಚಾರಗಳಲ್ಲೂ, ಸಿದ್ಧಿಗಳಲ್ಲೂ ಹಾಗೂ ಮಾನವ ಬುದ್ಧಿಯಲ್ಲೂ ಆ ಪ್ರಾಚೀನ ವಾಮಾಚಾರದ ದೂರದ [ನಿಜವಾಗಿಯೂ ಅವು ರಹಸ್ಯವಾಗಿ ಹತ್ತಿರವೇ ಇವೆ] ನಿಯಂತ್ರಣವಿರುವುದು! ತಮ್ಮ ರಕ್ತದಾಹಕ್ಕಾಗಿ, ಜನರನ್ನು ತಮ್ಮೊಳಗೆ ವಿಭಜಿಸುವಂತೆ, ಧರ್ಮಗಳೊಳಗಿದ್ದು, ಅವು ಪ್ರೇರೇಪಿಸುವವು, ಆಗ ಮುಗ್ಧ ಮಾನವರು ಅವುಗಳ ಅಣತಿಯಂತೆ ಮನುಷ್ಯರನ್ನು ಮನುಷ್ಯರಿಂದ ಆ ದೇವರ ಹೆಸರಲ್ಲಿ ಬೇರ್ಪಡಿಸಿ, ಅನಂತರ ತಾವೇ ತಮ್ಮೊಳಗೆ ಕೊಚ್ಚಿಹಾಕಿ ಆ ಪ್ರಾಚೀನ ವಾಮಾಚಾರದ ಸೇವೆಯನ್ನು ಮಾಡುವರು!!

ಈ ಭೂಮಿಯನ್ನೇ ಭೀಕರ ಹಿಂಸೆಯ ತಾಣವನ್ನಾಗಿ ಮಾಡುವುದು ಮತ್ತು ಈ ಭೂಮಿಯನ್ನು ಒಂದು ವೇಶ್ಯಾಲಯವಾಗಿಸುವುದು ಅವುಗಳ ಆತ್ಯಂತಿಕವಾದ ಗುರಿಗಳಲ್ಲಿ ಮುಖ್ಯವಾದ ಎರಡು ಗುರಿಗಳಾಗಿರುವವು.

ಪ್ರಾಚೀನ ಕಾಲದಿಂದಲೂ ನೈತಿಕವನ್ನು ಅನೈತಿಕವಾಗಿ ಬದಲಾಯಿಸುತ್ತಾ ಬರುವ ಆ ಪ್ರಾಚೀನ ವಾಮಾಚಾರದ ರಹಸ್ಯಗಳನ್ನು ತಿಳಿಯದೆ ಇಂದೂ ಜಗತ್ತು ಕತ್ತಲಲ್ಲಿದೆ. ವಿವಿಧ ಧರ್ಮಗಳೂ ಸೇರಿದಂತೆ ಜಗತ್ತು ಇಂದೂ ನಂಬಿರುವುದು ಕಾಲ ತಾನಾಗಿಯೇ ಕಾರಣವಿಲ್ಲದೆ ಕೆಟ್ಟು ಹೋಗುವುದೆಂದು! ದೇವರು ಜಗತ್ತಿಗೆ ಬಂದಲ್ಲಿ ಅದು ದೊಡ್ಡ ಬೆಳಕಾಗಬೇಕು. ಈ ಭೂಮಿಯಲ್ಲಿ ಇಷ್ಟೆಲ್ಲಾ ದೇವರುಗಳು, ಧರ್ಮಗಳು, ಧರ್ಮಪ್ರಚಾರಗಳು, ಮಹಾತ್ಮರುಗಳು, ಸಂತರು, ಧರ್ಮಗ್ರಂಥಗಳು, ಅವುಗಳ ಪಾರಾಯಣ, ಪ್ರವಚನಗಳು ಇವೆಲ್ಲಾ ಸೇರಿರುವಾಗ ನಿಜವಾಗಿಯೂ ಅದು ಪ್ರಪಂಚವನ್ನೇ ಪ್ರೀತಿ, ಸತ್ಯ, ಹಾಗೂ ನೈತಿಕ ಸಂಕಲ್ಪಗಳ ಬೆಳಕಿನಿಂದ ಬೆಳಗಿಸಬೇಕಾಗಿತ್ತು. ಆದರೆ ಅದಕ್ಕೆ ವಿರುದ್ಧವೆಂಬಂತೆ ಜಗತ್ತಿನಲ್ಲಿ ಹಿಂಸೆ, ಅನೈತಿಕತೆಯ ಭಯಾನಕ ಕತ್ತಲೆಯೇ ಹೆಚ್ಚುತ್ತಾ ಬಂದಿರುತ್ತದೆ. ಆ ಪ್ರಾಚೀನ ವಾಮಾಚಾರದ ರಹಸ್ಯಗಳನ್ನು ತಿಳಿಯದೆ ಜಗತ್ತು ಮುಂದುವರಿದು ಬಂದಿರುವುದೇ ಇದಕ್ಕೆ ಕಾರಣವಾಗಿರುವುದು ಎಂದು ಇಲ್ಲಿ ಸ್ಪಷ್ಟವಾಗುವುದು.

ಧರ್ಮಗಳು, ಪಂಥಗಳು, ಯಾಕೆ ಹೀಗೆ ತಮ್ಮೊಳಗೆ ಹೊಡೆದಾಡಿಕೊಳ್ಳುತ್ತವೆ ಎಂಬುದಕ್ಕೆ ಈಗ ಉತ್ತರ ಸಿಕ್ಕಿದೆ. ಧರ್ಮಗಳು ತಮ್ಮೊಳಗೆ ವೈರುಧ್ಯಗಳನ್ನೇ ಎತ್ತಿ ಹೇಳುತ್ತಿರುವಾಗ, ಜಗತ್ತಿನಲ್ಲಿ ಕೊನೆಗೆ ಎಲ್ಲಾ ಕೆಟ್ಟು ಹೋಗುವುದೆಂದೂ, ಕೆಟ್ಟ ಕಾಲ ಬರುವುದೆಂದೂ ಇದೇ ಧರ್ಮಗಳು ಒಂದೇ ಸ್ವರದಲ್ಲಿ ಯಾಕೆ ಹೇಳುತ್ತಿವೆ ಎಂಬುವುದರ ಗುಟ್ಟು ಈಗ ತಿಳಿಯುವುದು. ದೇವರನ್ನು ಕರುಣಾಸಾಗಾರನೆಂದು ಹೇಳುತ್ತಾ, ಅದೇ ದೇವರ ಹೆಸರೆತ್ತಿ, ಅತಿ ಕ್ರೌರ್ಯದ ಬೆಂಕಿಯನ್ನು ಉಗುಳಲು ಹೇಗೆ ಸಾಧ್ಯವಾಗುವುದು ಎಂಬುದಕ್ಕೂ ಉತ್ತರ ಸಿಕ್ಕಿದೆ. ದೇವರಿರುವ ಎಲ್ಲಾ ಧರ್ಮಗಳಲ್ಲೂ ದೇವರುಗಳು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಾಣಿ ಬಲಿ ಪಡೆಯುವ ರೀತಿಯ ಪುರಾಣ ಕಥೆಗಳು ಮತ್ತು ಅವುಗಳ ಅನುಷ್ಠಾನಗಳೂ ಸೇರಿಕೊಂಡಿರುವ ಕಾರಣವೂ ತಿಳಿದಿದೆ.

ಈ ಜಗತ್ತು ಹೀಗೆ ಮುಂದುವರಿದರೆ ಏನಾಗಬಹುದು ಎಂದು ಸಾಮಾನ್ಯ ಜನರಿಗೂ ಊಹಿಸಲು ಸಾಧ್ಯವಾಗುವುದು. ಆದರೆ ನಾನು ಕಂಡ ಆ ರಹಸ್ಯ ವಾಮಾಚಾರದ ಭಯಾನಕ ಭವಿಷ್ಯ ಯೋಜನೆಗಳಲ್ಲಿ ಒಂದನ್ನು ನಿಮಗೆ ಇಲ್ಲಿ ತಿಳಿಸಲೇಬೇಕಾಗಿದೆ. ಇದು ಭವಿಷ್ಯದಲ್ಲಿ ಜನತೆಗೆ ಅತಿ ದೊಡ್ಡ ಅನಾಹುತವನ್ನು ತಂದೊಡ್ಡುತ್ತದೆ. ಅದೇನೆಂದರೆ, ಅದೇ ಆ ಪ್ರಾಚೀನ ವಾಮಾಚಾರವು ಜಗತ್ತಿನಲ್ಲಿ ಪ್ರೇಮವನ್ನು ನಾಶಮಾಡಿ, ಕಾಮವನ್ನು ಮಾತ್ರ ಹೆಚ್ಚಿಸಿ ಕೊನೆಗೆ 'ಮದುವೆ' ಎಂಬುದನ್ನೇ ಇಲ್ಲವಾಗಿಸುವುದು. ಅದಕ್ಕೆ ಅದು ಮದುವೆಯ ಬಂಧನದೊಳಗಿನ ಕಾಮವನ್ನು ಹಾಗೂ ಪ್ರೇಮವನ್ನೂ ಕಾಲ ಹೋದಂತೆ ಸರ್ವನಾಶ ಮಾಡುತ್ತಾ ಹೋಗುವುದು! ಹೆಚ್ಚೆಂದರೆ ಇದಕ್ಕೆ ಐನೂರು ವರುಷಗಳು ಬೇಕಾಗುವುದಿಲ್ಲ. ಆಗ ಅಲ್ಲಿ ಮದುವೆಯು ಇಲ್ಲವಾಗುವುದು. ಮದುವೆ ಇಲ್ಲವಾದಲ್ಲಿ ತಾಯಿ-ಮಗುವಿನ ಪ್ರೀತಿ, ತಂದೆ-ಮಕ್ಕಳ ಪ್ರೀತಿ, ಗಂಡ-ಹೆಂಡತಿ ಪ್ರೀತಿ ಇತ್ಯಾದಿ ಪವಿತ್ರ

ಸಂಬಂಧಗಳಲ್ಲಿನ ಪ್ರೀತಿಗಳೆಲ್ಲವೂ ಎಂದೆಂದಿಗಾಗಿ ಹೊರಟು ಹೋಗಿಬಿಡುವುದು. ಅವುಗಳ ಸ್ಥಾನಗಳಲ್ಲಿ ಮೃಗೀಯ ಕಾಮ, ಅತಿ ಕ್ರೌರ್ಯ, ಹಿಂಸೆ, ಇತ್ಯಾದಿಗಳು ತಾಂಡವವಾಡುವವು. ಇನ್ನೊಂದು ಕಡೆ ಅತಿಯಾದ ದುಃಖ, ನೋವುಗಳಿಂದ ಜನ ನರಳಾಡುವಂತಾಗುವುದು. ಅಂದಿನ ಸಾಮಾಜಿಕ ಪೈಪೋಟಿಗಳಲ್ಲಿ ಹಿಂದೆ ಬಿದ್ದ ಬಲಹೀನರಾದವರು, ವೃದ್ಧ, ವೃದ್ಧೆಯರು, ತರಗೆಲೆಗಳಂತೆ ಕಸದ ತೊಟ್ಟಿಯಲ್ಲಿ ನರಕಯಾತನೆ ಅನುಭವಿಸುವಂತಾಗುವುದು. ಮಕ್ಕಳನ್ನು ಹೆತ್ತು ಹಣ ಸಂಪಾದನೆ ಮಾಡುವ ನಾರಿಯರು, ನಾಯಿಮರಿಗಳಂತೆ ಅವುಗಳನ್ನು ಸ್ವಲ್ಪ ಕಾಲದವರೆಗೆ ಸಾಕುವ, ಸಾಕು ತಾಯಿ ಅಥವಾ ಸಾಕು ತಂದೆಯಂದಿರು, ಅದೇ ರೀತಿ ಸಾಕು ಸರಕಾರ, ಇತ್ಯಾದಿಗಳು ಅಂದಿನ ಸಮಾಜದ ಸಹಜ ಜೀವನ ರೀತಿಗಳಾಗಿರುವವು! ಸತ್ಯ, ಪ್ರೀತಿ, ನೀತಿಗಳನ್ನು ರಕ್ಷಿಸುವುದೇ ಧರ್ಮಗಳ ಮೂಲಕರ್ಮವೆಂದು ಹೇಳಿಕೊಳ್ಳುವ ಧರ್ಮಗಳು ಆಗಲೂ ತಮ್ಮ ತಮ್ಮ ಧರ್ಮವನ್ನೇ ಹೊಗಳಿಕೊಳ್ಳುವವು! ಅದು ಹೇಗೆಂದರೆ 'ಆ ಕೊನೆಯ ಆ ಕೆಟ್ಟ ಕಾಲ ಬಂದಿದೆ, ಅದಕ್ಕೆ ಹೀಗೆಲ್ಲಾ ಆಗುತಿರುವುದು, ಇದನ್ನು ದೇವರು ಮೊದಲೇ ನಮಗೆ ತಿಳಿಸಿದ್ದಾನೆ. ದೇವರ ಮಾತುಗಳು ಸತ್ಯವಾಯಿತು' ಎಂದು ತಮ್ಮ ತಮ್ಮ ಧರ್ಮ, ದೇವರ ಮಹಿಮೆಯನ್ನು ಕೊಂಡಾಡಲು ಪ್ರಯತ್ನಿಸುವವು. ಆದರೆ ಆಗಲೂ ಕಷ್ಟಪಟ್ಟು ಮತಾಂತರ ಮಾಡಿ ಅಥವಾ ರಕ್ತ ಚಿಮ್ಮಿಸಿ ಧರ್ಮಯುಧ್ಧ ಮಾಡಿ ತಮ್ಮ ತಮ್ಮ ಧರ್ಮಗಳನ್ನು ಜಗತ್ತಿನಲ್ಲೆಲ್ಲರೂ ಅನುಸರಿಸುವಂತೆ ಮಾಡುವ ಆ ಪ್ರಯತ್ನವನ್ನು ಮಾತ್ರ ಅವು ಮರೆಯುವುದಿಲ್ಲ!

ಈ ರೀತಿಯಲ್ಲಿ ಆ ವಾಮಾಚಾರವು ಜೀವನದ ಹಲವು ಮಜಲುಗಳಲ್ಲಿ ಭೀಕರ ದುರಂತಗಳನ್ನು ಸೃಷ್ಟಿಸುತ್ತಾ ಮುಂದುವರಿಯುವುದು. ಎಲ್ಲಾ ಧರ್ಮ, ಪಂಥಗಳಲ್ಲಿನ ಜನರು ಈಗಲೇ ಜಗತ್ತಿನಾದ್ಯಂತ ಒಂದಾಗಿ, ಇದಕ್ಕೆ ಒಂದು ಪರಿಹಾರ ಮಾರ್ಗವನ್ನು ಕಂಡು ಹಿಡಿದಲ್ಲಿ ಮಾತ್ರ ಮುಂದೆ ಅವುಗಳಿಂದಾಗುವ ಭಯಾನಕ ಅನಾಹುತಗಳನ್ನು ಒಂದು ಹಂತದವರೆಗೆ ತಡೆಗಟ್ಟಲು ಸಾಧ್ಯವಾಗಬಹುದು ಎಂಬುವುದು ನನ್ನ ಅನಿಸಿಕೆ. ಮನುಷ್ಯನನ್ನು ಈ ಭೂಮಿಯಲ್ಲಿ ಸ್ವಲ್ಪವಾದರೂ ಶಾಂತಿಯಿಂದ, ಸಮಾಧಾನದಿಂದ ಬದುಕಲು ಈ ಧರ್ಮಗಳು ಬಿಟ್ಟಲ್ಲಿ, ಅದುವೇ ಜಗತ್ತಿಗೆ ಧರ್ಮಗಳ ದೊಡ್ಡ ಕೊಡುಗೆಯಾಗುವುದು. ಧರ್ಮಯುದ್ಧಗಳ ಹಿಂಸೆಯ ರಕ್ತಕ್ರಾಂತಿಯಲ್ಲ ಜನತೆಗೆ ಬೇಕಾಗಿರುವುದು, ಮುಗ್ಧ ಮಾನವನ ಶಾಂತಿಗಾಗಿ, ಪ್ರೀತಿ, ತ್ಯಾಗಗಳಿಂದ ತುಂಬಿದ ಮಾನವೀಯತೆಯ ಮಹಾ ಕ್ರಾಂತಿ ಇಂದು ನಮಗೆ ಬೇಕಾಗಿದೆ.

ಈ ಮೊದಲು ಹೇಳಿದಂತೆ ಆದಿಕಾಲದ ಆ ವಾಮಾಚಾರದ ಆಳದ ಹಲವು ರಹಸ್ಯಗಳನ್ನು ತಿಳಿದಿರುವ ಹಿನ್ನೆಲೆಯಲ್ಲಿ ಅವುಗಳ ಪ್ರಭಾವದಿಂದ ದೂರವಾಗಿ ನನ್ನಿಷ್ಟಕ್ಕೆ, ಸೂಕ್ಷ್ಮವಲಯದಲ್ಲಿ, ಒಂದು ಪರಿಹಾರ ಮಾರ್ಗವನ್ನು ಉಂಟುಮಾಡಲು ನಾನು ಎಲ್ಲದರಿಂದಲೂ ದೂರವಾಗಿರುವುದು. ನಾನು ಜಗತ್ತಿನ ಯಾವ ಧರ್ಮ, ಪಂಥ, ಸಂಪ್ರದಾಯ, ಜಾತಿಗಳಿಗೂ ಸೇರಿದವನಲ್ಲವೆಂದು ಸಾರಿ ಹೇಳಿರುವುದು ಈ ಉದ್ದೇಶಕ್ಕಾಗಿ ಎಂದು ತಿಳಿಯಬೇಕು. ನಾವು ಈಗ ಕಾಣುತ್ತಿರುವ ಭೂಮಿ ಮೇಲಿನ ಆ ಪ್ರಾದೇಶಿಕ ವಾಮಾಚಾರ ಪಂಗಡಗಳು ಮತ್ತು ಅವುಗಳ ಶಕ್ತಿಗಳಿಗೆ, ತಮ್ಮ ಮೇಲಿನ ಆ ಪ್ರಾಚೀನ ವಾಮಾಚಾರದ ಪ್ರಭಾವದ ಬಗ್ಗೆ ತಿಳಿದಿಲ್ಲ. ಅವುಗಳಿಗೆ ಸೂಕ್ಷ್ಮ ಲೋಕದ, ಮೇಲಿನ ಸ್ಥರಗಳ ಸೂಕ್ಷ್ಮಶಕ್ತಿಗಳ ಜ್ಞಾನ

ಮಾತ್ರ ಇವೆಯಷ್ಟೇ. ನಾನು ಕಂಡ ಸೂಕ್ಷ್ಮದ ಹಲವು ರಹಸ್ಯಗಳಲ್ಲಿ ಕೆಲವೊಂದನ್ನು ಈ ಕೆಳಗೆ ತಿಳಿಸುವೆನು. ಅಷ್ಟನ್ನಾದರೂ ಎಲ್ಲರೂ ತಿಳಿದಿರುವುದು ಉತ್ತಮವೆಂದು ನನಗೆ ತೋರುವುದು.

೧. ಆ ಪ್ರಾಚೀನ ವಾಮಾಚಾರವು ಜಾತಿ, ಧರ್ಮ, ಪಂಥಗಳೊಳಗೆ ರಹಸ್ಯವಾಗಿ ಸೇರಿಕೊಂಡು ಜಗತ್ತಿನಲ್ಲಿ ಸತ್ಯ, ನೈತಿಕತೆ ಮತ್ತು ಆತ್ಮೀಯ ಪ್ರೀತಿಯನ್ನು ಸರ್ವನಾಶ ಮಾಡುವುದು.

೨. ನಿಜವಾದ ಧಾರ್ಮಿಕ ಜೀವನವು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ, ಇತ್ಯಾದಿಗಳನ್ನು ಮಾತ್ರ ಹೇಳುವುದು. ಆದರೆ ಆ ಪ್ರಾಚೀನ ವಾಮಾಚಾರವು ಅದೇ ಸತ್ಯ, ಪ್ರೀತಿಗಳನ್ನು ತಮ್ಮ ಜಾತಿ, ಧರ್ಮ, ಪಂಥಗಳೊಳಗೆ ನಂಬಿಕೆಗಳ ಸಹಾಯದಿಂದ ಮಿತಿಗೊಳಿಸಿ, ಇತರ ಕಡೆಗಳಲ್ಲಿ ಕ್ರೌರ್ಯದ ಅಟ್ಟಹಾಸ ಮಾಡಿಸಿ, ತನ್ನ ಪ್ರಭಾವವನ್ನು ಬಲಪಡಿಸುತ್ತಾ ಬರುವುದು.

೩. ಆ ಪ್ರಾಚೀನ ವಾಮಾಚಾರವು ಭೂಮಿಯ ಪ್ರತಿ ವ್ಯಕ್ತಿಯ ಮೇಲೂ ತನ್ನ ಪ್ರಭಾವವನ್ನು ಬೀರುತ್ತಾ ಇದೆ. ಆದರೆ ಅದು ಅತ್ಯಂತ ಆಳದ ಮತ್ತು ರಹಸ್ಯ ವಲಯಗಳಲ್ಲಿರುವ ಕಾರಣ ಅವುಗಳ ಇರವು ಯಾರಿಗೂ ಅನುಭವವಾಗುವುದಿಲ್ಲ.

೪. ಮಾನವನು, ಜನರು ತಿಳಿದಿರುವಂತೆ ಏಕ ವ್ಯಕ್ತಿತ್ವವನ್ನು ಪಡೆದಿಲ್ಲ. ಅವನು ಹಲವು ಬೇರೆ ಬೇರೆ ವ್ಯಕ್ತಿತ್ವಗಳ ಒಂದು ಪುಂಜವಾಗಿರುವನು. ಅಂದರೆ ಒಬ್ಬನಲ್ಲಿ ಹಲವು ಸತ್ತ ಹಿಂದಿನ, ಮತ್ತು ಜೀವಂತವಾಗಿರುವ ಇಂದಿನ ವ್ಯಕ್ತಿತ್ವಗಳ ಅಂಶಗಳು ಸೇರಿಕೊಂಡಿವೆ. ಇದು ಹಲವು ಹಲವು ಸಹಸ್ರ ವರುಷಗಳ ಹಿಂದೆ ಆ ಪ್ರಾಚೀನ ವಾಮಾಚಾರವು, ಮಾನವ ವ್ಯಕ್ತಿತ್ವವನ್ನು ತನ್ನ ರೀತಿಯಲ್ಲೇ ಸುಲಭದಲ್ಲಿ ನಿಯಂತ್ರಿಸುತ್ತಾ ಮುಂದುವರಿದು ಬರಲು ಮಾಡಿ ಇಟ್ಟ, ಅತ್ಯಂತ ಭಯಾನಕ ವಿಕೃತ ರೀತಿಯಾಗಿದೆ. ಇಷ್ಟು ಮಾತ್ರ ಈ ವಿಕೃತ ರೀತಿಯಲ್ಲ, ಅದರಲ್ಲಿ ಹಲವು ಹಲವು ಇತರ ರೀತಿಗಳೂ ಇವೆ. ಅವೆಲ್ಲಾ ಊಹೆಗೂ ಮೇಲಿನ ರೀತಿಗಳಾಗಿವೆ.

೫. ಒಬ್ಬನ ಹಲವು ವ್ಯಕ್ತಿತ್ವಗಳ ಆ ಪುಂಜವು, ಸೂಕ್ಷ್ಮದಲ್ಲಿ ಇದ್ದು, ಸ್ಥೂಲ ಶರೀರದ ಮಿದುಳಿನ ಆ ಬಾಹ್ಯ ವ್ಯಕ್ತಿಯ ಮೂಲಕ, ಒಂದೇ ವ್ಯಕ್ತಿತ್ವದಂತೆ, ಜೀವನದಲ್ಲಿ ಪ್ರಕಟವಾಗುತ್ತಿರುವುದು. ಆದರೆ ಅತ್ಯಪರೂಪವಾಗಿ ಕೆಲವು ಕಡೆ ಅವುಗಳಲ್ಲಿ ಕೆಲವೊಂದು, ನೇರವಾಗಿ ಪ್ರಕಟವಾಗುವುದೂ ಇದೆ. ಆಗ ಆ ವ್ಯಕ್ತಿ ಯಾವುದೋ ಬೇರೆ ವ್ಯಕ್ತಿಯಂತೆ ವರ್ತಿಸಲು ತೊಡಗುವನು. ಇದನ್ನು ಜನರು ದೆವ್ವ ಮೈಗೆ ಸೇರುವುದು ಎನ್ನುವುದು. ಬೇರೆ ರೀತಿಗಳಲ್ಲಿಯೂ ಈ ರೀತಿ ಆಗುವುದು ಇದೆ.

೬. ಅತ್ಯಂತ ಆಶ್ಚರ್ಯಕರವಾದ ಒಂದು ರಹಸ್ಯವು ಬಯಲಾಗಿದೆ. ಅದೇನೆಂದರೆ ಇದುವರೆಗೂ ತಿಳಿದಿರುವಂತೆ ನರಕವೆಂಬುವುದು, ಅದು ಮಾನವನು ಸತ್ತ ನಂತರ ಸಿಗುವ ಭಯಾನಕ ಲೋಕವಲ್ಲ. ಅದು ಜೀವಂತವಾಗಿರುವಾಗ ಅತ್ಯಂತ ರಹಸ್ಯ ವಲಯಗಳಲ್ಲಿ ಮತ್ತು ಇತರ ಸೂಕ್ಷ್ಮದ ಕೆಲವು ಸ್ತರಗಳಲ್ಲಿ ನಡೆಯುವ, ಮಾನವನನ್ನು ಆ ಪ್ರಾಚೀನ ವಾಮಾಚಾರವು ದೆವ್ವವಾಗಿಸುವಲ್ಲಿ, ಆ ಭೂಮಿಯ ವ್ಯಕ್ತಿಗಳ ಆಂಶಿಕವಾಗಿ ಬೇರ್ಪಡಿಸಲ್ಪಟ್ಟ ವ್ಯಕ್ತಿತ್ವಗಳಿಗೆ ನೀಚ ವ್ಯಕ್ತಿತ್ವವಾಗಲು

ಬಲಾತ್ಕರಿಸುವ ಹಲವು ಚಿತ್ರ ಹಿಂಸೆ ರೀತಿಗಳಾಗಿವೆ. ಅಂದರೆ, ಪ್ರತಿಯೊಬ್ಬನ ವ್ಯಕ್ತಿತ್ವದಿಂದ ಆಂಶಿಕ ಶಕ್ತಿಯನ್ನು [ಆಂಶಿಕ ವ್ಯಕ್ತಿತ್ವವಿರುವ ಮನೋಶಕ್ತಿ] ಆ ಪ್ರಾಚೀನ ವಾಮಾಚಾರವು ಹೊರತೆಗೆಯುತ್ತಾ, ಆ ಶಕ್ತಿಯನ್ನು ಮಾನವನಿಗೆ ಬಾಹ್ಯದಲ್ಲಿ ತಿಳಿಯದಂತೆ, ಇತರ ಸೂಕ್ಷ್ಮವಲಯಗಳಲ್ಲಿ ಭೀಕರ ಚಿತ್ರ ಹಿಂಸೆ ನೀಡಿ ಅವುಗಳಿಗೆ ಮಣಿಯುವಂತೆ ಮಾಡಿ, ನೀಚ ಕೆಲಸವನ್ನು ಮಾಡಿಸಿ ಮಾಡಿಸಿ, ಹಲವು ಹಂತಗಳ ಕೊನೆಯಲ್ಲಿ ತಮಗೆ ಬೇಕಾದ ರೀತಿಯ ದೆವ್ವವಾಗಿಸಿಕೊಳ್ಳುವವು. ಕೊನೆಯ ಹಂತಕ್ಕೆ ತಲುಪಿದ ದೆವ್ವಗಳಿಗೆ ಭೂಮಿಯ ವ್ಯಕ್ತಿತ್ವದಲ್ಲಿರುವ ಯಾವ ಸ್ವಭಾವವೂ ಇರುವುದಿಲ್ಲ. ಅವುಗಳಿಗೆ ನೀಚ ದೆವ್ವದ ಸ್ವಭಾವ ಮಾತ್ರ ಇರುವಂತೆ ಮಾಡಲಾಗುವುದು. ಇದರಿಂದ ಆ ಶಕ್ತಿಗಳು ಯಾವಕಾಲಕ್ಕೂ, ಆ ಪ್ರಾಚೀನ ವಾಮಾಚಾರಕ್ಕೆ ಸಹಾಯಕವಾಗಿ ಮಾತ್ರ ಕೆಲಸ ಮಾಡುವವು. ಈ ರೀತಿ ನೀಚ ಶಕ್ತಿಗಳು ಜಗತ್ತಿನಲ್ಲಿ ಹೆಚ್ಚುತ್ತಾ ಬಂದಿರುವುದು. ಮತ್ತು ಮುಂದಕ್ಕೆ ಇನ್ನೂ ಹೆಚ್ಚಾಗುತ್ತಾ ಹೋಗುವುದು! ಕೊನೆಯಲ್ಲಿ ಜಗತ್ತಿನ ಎಲ್ಲರೂ ಕೆಟ್ಟವರಾಗಲು ಇದು ಕಾರಣ, ಆ ಕೆಟ್ಟ ಕಾಲ ಬರುವುದಕ್ಕೆ ಇವುಗಳ ಈ ಋಣಾತ್ಮಕವಾಗಿ ದೆವ್ವವಾಗಿಸುವ ಆ ನೀಚ ಕೆಲಸವೇ ಕಾರಣ ಎಂದು ತಿಳಿಯಬೇಕು. ಅದಲ್ಲದೆ, ಕಾಲವು ಕಾರಣವಿಲ್ಲದೆ ತನ್ನಿಂದ ತಾನಾಗಿ ಕೆಟ್ಟದಾಗಲು ಎಂದೂ ಸಾಧ್ಯವಿಲ್ಲ. ಆದರೆ ಆ ಪ್ರಾಚೀನ ವಾಮಾಚಾರವು ಧಾರ್ಮಿಕ ನಂಬಿಕೆಗಳ ಹಿನ್ನೆಲೆಯಲ್ಲಿ, ಆ ಕೆಟ್ಟ ಕಾಲವನ್ನು ಜಗತ್ತಿಗೆ ತರುವಲ್ಲಿ, ಅದಕ್ಕೆ ವಿರುದ್ಧವಾಗಿ ಯಾರೂ ಪ್ರಶ್ನೆ ಹಾಕದಂತೆ, ತಯಾರು ಮಾಡಿಕೊಂಡಿದೆ ಅಷ್ಟೆ. ಮಾತ್ರವಲ್ಲ, ಆ ಮುಂಬರುವ ಕೆಟ್ಟ ಕಾಲವನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲವೆಂಬಂತೆ ಧರ್ಮ, ಪಂಥಗಳ ಒಳಗಿಂದಲೇ ಬೋಧಿಸುವಂತೆ ಮಾಡಿ, ಆರಾಮವಾಗಿ, ಯಾರಿಂದಲೂ ಯಾವ ತಡೆಯೂ ಇಲ್ಲದೆ ಆ ಭಯಾನಕ ವಾಮಾಚಾರವು ಮುಂದುವರಿದು ಬಂದಿದೆ.

೭. ಈ ದೆವ್ವಗಳು ಇನ್ನೂ ಮಾನವನಲ್ಲಿ ಅಳಿದು ಉಳಿದಿರುವ ಮಾನವೀಯತೆಯೆಂಬ ಧನಾತ್ಮಕ ಭಾವನೆಯನ್ನು ಸ್ವಲ್ಪ ಕಾಲದೊಳಗಾಗಿ ಸರ್ವನಾಶ ಮಾಡಿಬಿಡುವವು. ಆದುದರಿಂದ ಈಗ ಆ ಅಳಿದುಳಿದ ಮಾನವೀಯತೆಯನ್ನು ಹಿಡಿದು ಅದನ್ನು ಹೆಚ್ಚಿಸಬೇಕಾಗಿದೆ. ಅದು ಪೂರ್ತಿ ಅಳಿದು ಹೋದರೆ ಮಾನವನ ಮನಸ್ಸು ಅದನ್ನು ಎಂದೆಂದಿಗೂ ಬಯಸಲಾರದ ಸ್ಥಿತಿಗೆ ಬರುವುದು. ಇದೇ ರೀತಿ ನೈತಿಕತೆಯ ಅವಸ್ಥೆಯೂ ಆಗುವುದು. ಇನ್ನು ಸ್ವಲ್ಪ ಕಾಲಾನಂತರ ಭೂಮಿಯಲ್ಲಿ ಎಲ್ಲರೂ ಅದರ ಕಡೆಗೆ ಗಮನ ಹರಿಸಲು ಹಿಂಜರಿಯುವರು. ಯಾಕೆಂದರೆ ಭೋಗ ಸುಖದ ದಾಸರಾಗಿ, ನೈತಿಕತೆಯೇ ಆಗ ದೊಡ್ಡ ಅನೈತಿಕತೆಯಾಗಿ ಜನಗಳಿಗೆ ಕಾಣಿಸುವುದು. ಮತ್ತು ತಮ್ಮ ಅನೈತಿಕ ರೀತಿಗಳನ್ನು ಅವರು ಮಾನವನ ಹಕ್ಕು, ಆಸಕ್ತಿ, ಇತ್ಯಾದಿ ರೀತಿಗಳಲ್ಲಿ ಸರಿಯೆಂದು ಸಾಧಿಸಿಕೊಳ್ಳುವರು. ಅನೈತಿಕ ಕಾಮ, ವಿಕೃತ ಕಾಮಗಳು ಹೆಚ್ಚಾಗುತ್ತಾ, ಸತಿ, ಪತಿ ಸಂಬಂಧ ಹದಗೆಟ್ಟು ಹೋಗಿ, ವಿವಾಹ ವಿಚ್ಛೇಧನವು ಹೆಚ್ಚುತ್ತಾ ಬರುವುದು ಅದರ ಮೊದಲ ಕೆಲವು ಹಂತಗಳಾಗಿವೆ. ಆದರೆ ನೈತಿಕತೆಯನ್ನು ಪುನಃ ಸ್ಥಾಪಿಸಲು, ಅನೈತಿಕತೆಯ ವಿರುದ್ಧ ಬಲಾತ್ಕಾರ ಅಥವಾ ಹಿಂಸಾತ್ಮಕ ದಾರಿ ಉಪಯೋಗಿಸುವುದು ಬಹಳ ಅಪಾಯಕಾರಿಯೆಂದು ತಿಳಿಸುವೆನು. ಯಾಕೆಂದರೆ ಹಾಗೆ ಮಾಡಿದ್ದಲ್ಲಿ, ಅದನ್ನು ಆ ಪ್ರಾಚೀನ ವಾಮಾಚಾರವು ಅದಕ್ಕೆ ಬೇಕಾದ ರೀತಿಯಲ್ಲಿ ಭಯಾನಕವಾಗಿ ಉಪಯೋಗಿಸಿಕೊಳ್ಳುವುದು.

ಆದುದರಿಂದ ಆತ್ಮೀಯ ಪ್ರೀತಿಯನ್ನು ಪುನಃ ತರುವ ಹಲವು ರೀತಿಗಳನ್ನು ಉಪಯೋಗಿಸಿ ಅದರಿಂದ ಪಾರಾಗಬೇಕಷ್ಟೆ.

ಒಂದು ವಿಷಯವನ್ನು ತಿಳಿದಿರಬೇಕಾಗಿದೆ. ನನಗೆ ಆ ಪ್ರಾಚೀನ ವಾಮಾಚಾರದ ಹಲವು ರಹಸ್ಯಗಳು ತಿಳಿದ್ದರೂ ಅವುಗಳಲ್ಲಿ ಕೆಲವೊಂದನ್ನು ಮಾತ್ರ ಇಲ್ಲಿ ಕೊಟ್ಟಿರುವುದು. ಆದರೆ, ಇವೆಲ್ಲಾ ಸೂಕ್ಷ್ಮ ಸ್ತರಗಳಲ್ಲಿ ಗೋಚರವಾದ ನನ್ನ ಬರೇ ಅನುಭವ ಎಂದು ಹೇಳಬಾರದು ಯಾಕೆಂದರೆ ಸಾವಿರಾರು ಜನರಿಗೆ ಈ ಸೂಕ್ಷ್ಮ ಸ್ತರದ ಅನುಭವವಿದೆ, ಆದರೆ ಅವರೆಲ್ಲಾ ಅವುಗಳನ್ನು ಹಾಗೇ ನೋಡಿದ್ದಾರೆ ಅಥವಾ ಅಲ್ಲಿ ಅವುಗಳು ಹೇಳಿದಂತೆ ಒಪ್ಪಿಕೊಂಡವರು! ಆದರೆ ಅವುಗಳ ಮಾತನ್ನು ಲಕ್ಷಿಸದೆ ಆಳದಲ್ಲಿ ಅವುಗಳ ರಹಸ್ಯವನ್ನು ಪತ್ತೆ ಹಚ್ಚುವ ಕೆಲಸಕ್ಕೆ ಯಾರೂ ಕೈಹಾಕಿಲ್ಲ! ಆದುದರಿಂದ ನಾನು ಹೇಳುತ್ತಿರುವ ಈ ಎಲ್ಲಾ ಅಂಶಗಳೂ ಹಲವು ವರುಷಗಳಲ್ಲಿ ಪತ್ತೆಹಚ್ಚಿ ಸಿಕ್ಕ ಅಂಶಗಳೆಂದೂ ಆದರೆ ಅವು ಯಾವುದೋ ಸೂಕ್ಷ್ಮ ಶಕ್ತಿಯು ನನ್ನಲ್ಲಿ ಹೇಳಿರುವ ಮಾತುಗಳು ಅಲ್ಲ ಎಂದೂ ಜ್ಞಾಪಿಸಿಕೊಳ್ಳಬೇಕೆಂದು ಹೇಳುವೆನು.

ಈ ರೀತಿ, ಆ ಪ್ರಾಚೀನ ವಾಮಾಚಾರವು ಜಗತ್ತಿಗೆ ದೊಡ್ಡ ಅಪಾಯವನ್ನು ತಂದೊಡ್ಡುವುದನ್ನು ಸ್ಪಷ್ಟವಾಗಿ ತಿಳಿದಾಗ ಅದನ್ನು ಜಗತ್ತಿಗೆ ತಿಳಿಸದೆ ಇರಲು ನನ್ನಿಂದ ಸಾಧ್ಯವಾಗಲಿಲ್ಲ, ಅದಕ್ಕೆ ನಾನು ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ನಿಮ್ಮ ಮುಂದಿಟ್ಟಿರುವುದು. ಆಪತ್ತನ್ನು ನೇರವಾಗಿ ಕಂಡವರು ಅದಕ್ಕೆ ಜನ ಬಲಿಯಾಗದಂತೆ ಮಾಡುವುದಕ್ಕಾಗಿ 'ಅಪಾಯ' ಎಂಬ ಫಲಕವನ್ನು ಅಲ್ಲಿ ಹಾಕಿಯೇ ಮುಂದುವರಿಯುತ್ತಾರೆ. ಅದು ಮಾನವೀಯತೆಯ ಕೆಲಸ ಅಷ್ಟೆ, ಅದನ್ನು ಮಾತ್ರ ನಾನು ಮಾಡಿದ್ದೇನೆ. ನಾನು ಯಾವ ಧರ್ಮ ಅಥವಾ ಪಂಥವನ್ನು ಸೃಷ್ಟಿಸಿಲ್ಲ ಮತ್ತು ಯಾರನ್ನೂ ನನ್ನಲ್ಲಿಗೆ ಬರಲು ಹೇಳುವುದಿಲ್ಲ, ಆದುದರಿಂದ ಜಗತ್ತನ್ನು ಉಳಿಸುವ ನಿಟ್ಟಿನಲ್ಲಿ ನೀವು ಜನರೇ ಇದಕ್ಕೆ ಒಂದು ಪರಿಹಾರ ಮಾರ್ಗವನ್ನು ಕಂಡುಕೊಳ್ಳಿರಿ, ಇಲ್ಲವಾದರೆ ಅಪಾಯವು ಕಟ್ಟಿಟ್ಟ ಬುತ್ತಿಯಾಗುವುದು.

*************************

ಓಂದೇವ ಅವರು ತಮ್ಮ ಬರಹಗಳಲ್ಲಿ 'ಜನರನ್ನು ಎಚ್ಚರಿಸುವಿಕೆ'ಯ ಅನಿವಾರ್ಯತೆಗೆ ಕಾರಣವನ್ನು ಇನ್ನೊಂದು ರೀತಿಯಲ್ಲೂ ಹೇಳಿರುವರು. ಅವನ್ನು ನೇರವಾಗಿ ನಾವು ಹೇಳುವುದಿಲ್ಲ ಬದಲು ಈ ಕೆಳಗಿನ ಒಂದೆರಡು ಓಂದೇವ ಅವರ ಮಾತುಗಳಿಂದಲೇ ನಿಮಗೆ ತಿಳಿದುಕೊಳ್ಳಬಹುದಾಗಿದೆ.

- ನಮ್ಮ ನಮ್ಮ ಧರ್ಮದ ಮೇಲಿನ ಅಭಿಮಾನ ಎಂಬುವುದು ಅದು ಪಠಿಸಲಿರುವ ಮಂತ್ರವಲ್ಲ, ಯಾಕೆಂದರೆ ಧರ್ಮದ ಮೇಲಿನ ಅಭಿಮಾನ ಸೃಷ್ಟಿಯಾಗಬೇಕಾದರೆ ಆತನು ಸ್ವತಃ ಧರ್ಮವನ್ನು ಪಾಲನೆ ಮಾಡಬೇಕಾಗುವುದು. ತಾನು ಅಸೂಯೆ, ಧರ್ಮಾಂಧತೆ, ಹಿಂಸೆ ಇತ್ಯಾದಿಗಳಿಂದ ತುಂಬಿರುವಾಗ ಆತನಿಗೆ ನಿಜವಾಗಿಯೂ ತನ್ನ ಧರ್ಮವೇ [ಅದು ದುಷ್ಟ ಸ್ವಭಾವಗಳ ವಿರುದ್ಧ ಹೇಳುವ ಕಾರಣ] ಶತ್ರುವಾಗುವುದು!

- ನಾಸ್ತಿಕರ ವಾದವೂ ಆಸ್ತಿಕರಂತೆ ಒಂದು ಬರೇ ನಂಬಿಕೆಯಾಗುವುದು! ಯಾಕೆಂದರೆ ಅವರೂ ತಮ್ಮಲ್ಲಿ ಆಧಾರವಿಲ್ಲದೆಯೇ ದೇವರು ಇಲ್ಲವೆಂಬ ವಾದವನ್ನು ಮಾಡುವರು. ಈ ಎರಡು ತರದ ನಂಬಿಕೆಗಳ ಕಚ್ಚಾಟವು ಕೋಟಿ ವರುಷ ಕಳೆದರೂ ಮಾನವನಿಗೆ ಪ್ರಯೋಜನಕಾರಿಯಾಗಿ ಬದಲಾಗದು!
- ನಾಸ್ತಿಕ ರೀತಿಯು ಈ ಜಗತ್ತಿನಲ್ಲಿ ಬುದ್ಧನಂಥಹ ದೇವರನ್ನೇ ಸೃಷ್ಟಿಸಿದೆ ಮತ್ತು ಆಸ್ತಿಕವಾದವು ಈ ಜಗತ್ತಿನಲ್ಲಿ ಹಿಟ್ಲರ್ ನಂಥ ಸೈತಾನನನ್ನು ಸೃಷ್ಟಿಸಿದೆ. ಹೀಗಿರುವಾಗ, ನಾವು ಧರ್ಮ, ದೇವರು, ನಾಸ್ತಿಕ, ಆಸ್ತಿಕ ಇತ್ಯಾದಿ ಹಲವು ವಿಚಾರಗಳನ್ನು, ನಂಬಿಕೆಯ ಹಿನ್ನೆಲೆಯನ್ನು ಬಿಟ್ಟು, ಆ ಸತ್ಯದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಮತ್ತು ತರ್ಕಬದ್ಧವಾಗಿ ತಿಳಿದುಕೊಳ್ಳಬೇಕಾಗುವುದು ಇಂದು ನಮ್ಮೆಲ್ಲರ ಉಳಿವಿನ ಪ್ರಶ್ನೆಯಾಗುವುದು.

*ಒಂದೇವ ಅವರು, ಈ ಮೊದಲೇ ತಾವು ಯಾವ ಧರ್ಮ, ಪಂಥಗಳಲ್ಲೂ ಇಲ್ಲವೆಂದು, ಮತ್ತು ಯಾವ ಹೊಸ ಧರ್ಮ, ಪಂಥ, ಪರಂಪರೆಯನ್ನೂ ಸೃಷ್ಟಿಸುವ ಪ್ರಶ್ನೆಯೇ ಇಲ್ಲ, ಎಂದೂ ಹೇಳಿರುವರು. ಅವರ ಸೂಕ್ಷ್ಮದ ಅನುಭವದ ಪ್ರಕಾರ ಈ ಚೌಕಟ್ಟು ಇರುವ ಧರ್ಮ, ಪಂಥ, ಪರಂಪರೆ, ಇತ್ಯಾದಿಗಳು ಆ ಪ್ರಾಚೀನ ವಾಮಾಚಾರದ ಬಲು ದೊಡ್ಡ ಆಯುಧಗಳಾಗಿವೆ ಎಂದಾಗಿದೆ.*

*ಎಲ್ಲಾ ಧರ್ಮ, ಪಂಥಗಳ ಒಳಗಿಂದಲೂ ಆ ಪ್ರಾಚೀನ ವಾಮಾಚಾರವು ಆದಿಯಿಂದಲೇ ತನ್ನ ಋಣಾತ್ಮಕ ಪ್ರಭಾವವನ್ನು ಬೀರುತ್ತಾ ಬಂದಿದೆ ಎಂಬುವುದೇ ಒಂದೇವರವರು ಹೇಳುವ ಜಗತ್ತಿನ ಅತಿ ದೊಡ್ಡ ಅಪಾಯದ ಸೂಚನೆಯಾಗಿದೆ! ಆದರೆ ಅದನ್ನು ಹೇಳಿದರೆ ಯಾರೂ ನಂಬುವುದು ಕಷ್ಟವಾಗುವುದು, ಅದಕ್ಕಾಗಿ ಅವರು ಹಲವು ನಿದರ್ಶನಗಳನ್ನು ಕೊಟ್ಟು ಅವುಗಳು ಹೇಗೆಲ್ಲಾ ಈ ಜಗತ್ತಿನ ಎಲ್ಲಾ ಧರ್ಮ, ಪಂಥಗಳಲ್ಲಿ ರಹಸ್ಯವಾಗಿ ಸೇರಿಕೊಂಡಿವೆ ಎಂಬುವುದನ್ನು ತಿಳಿಸಿರುವರು. ಅಷ್ಟು ಮಾತ್ರವಲ್ಲದೆ, ಈ ರಹಸ್ಯವನ್ನು ತಿಳಿದ ಹಿನ್ನೆಲೆಯಲ್ಲಿ ಒಂದು ಪರಿಹಾರ ಮಾರ್ಗವನ್ನು ಸೂಚಿಸಿರುವರು. ರೈಲು ಹಳಿಯಲ್ಲಿ ದೊಡ್ಡ ಬಿರುಕು ಉಂಟಾದುದನ್ನು ನೋಡಿದವನು ಅದನ್ನು ಕೂಡಲೇ ಹತ್ತಿರದ ರೈಲು ನಿಲ್ದಾಣಕ್ಕೆ ತಿಳಿಸದಿದ್ದಲ್ಲಿ ನೀವು ಯಾರನ್ನು ತಪ್ಪಿತಸ್ಥನ ಸ್ಥಾನದಲ್ಲಿ ನಿಲ್ಲಿಸುವಿರಿ ಎಂದು ಒಂದೇವ ಅವರು ಕೇಳುವರು, ಅದಕ್ಕೆ ಉತ್ತರ, "ಆ ನೋಡಿದ ವ್ಯಕ್ತಿಯನ್ನು" ಎಂದಾಗುವಾಗ, ಒಂದೇವರವರು ತನಗೆ ಮಾತ್ರ ತಿಳಿದಿರುವ ಆ ಭೀಕರ ದುರಂತ ಅಪಾಯದ ಸುಳಿವನ್ನು ಜಗತ್ತಿಗೆ ನೀಡದಿದ್ದಲ್ಲಿ ಅದು ಅವರ ದೊಡ್ಡ ತಪ್ಪು ಆಗುವುದು. ಈ ಕಾರಣಕ್ಕಾಗಿ ಮಾತ್ರ ಅದನ್ನು ಜಗತ್ತಿಗೆ ತಿಳಿಸಲು ಪ್ರಯತ್ನಿಸಿರುವುದು ಎನ್ನುವರು. ಆದುದರಿಂದ ಆ ಒಂದು ಉದ್ದೇಶವಲ್ಲದೆ, ಧರ್ಮ, ದೇವರು, ಪಂಥ ಇತ್ಯಾದಿಗಳನ್ನು ನಿಂದಿಸುವುದಲ್ಲ ತನ್ನ ಉದ್ದೇಶವೆಂದು ಸ್ಪಷ್ಟವಾಗಿ ಹೇಳಿರುವರು.*

*ಎಲ್ಲಾ ಧರ್ಮ, ಪಂಥಗಳಲ್ಲೂ ಆ ಪ್ರಾಚೀನ ವಾಮಾಚಾರದ ರಹಸ್ಯ ಕೈವಾಡವಿರುವುದನ್ನು ತಿಳಿಯುವುದಕ್ಕಾಗಿ ಧರ್ಮ ಮತ್ತು ದೇವರುಗಳ ಇದುವರೆಗಿನ ವಿವರಣೆ ಹಾಗೂ ದೃಷ್ಟಿಕೋನವನ್ನು*

*ಮೊದಲು ಸ್ವಲ್ಪ ವಿವರವಾಗಿ ತಿಳಿಯಬೇಕಾಗಿದೆ. ಅದಕ್ಕೂ ಮೊದಲು ಈ ಪ್ರಾಚೀನ ವಾಮಾಚಾರವು ಇದುವರೆಗೂ ಯಾರ ಕಣ್ಣಿಗೂ ಬೀಳದಿರಲು ಕಾರಣವೇನೆಂದು ನೋಡೋಣ.*

## ಆ ಪ್ರಾಚೀನ ವಾಮಾಚಾರದ ರಹಸ್ಯಕ್ಕೆ ಕಾರಣ.

ಆ ಸೂಕ್ಷ್ಮ ವಲಯದಲ್ಲಿ ಕೇಳಿಸುವ ಮತ್ತು ಕಾಣಿಸುವ ಆ ಶಬ್ದ ಅಥವಾ ಇತರ ಅನುಭವಗಳ ಆಧಾರದಲ್ಲಿ, ಮತ್ತು ಅವನ್ನು ಅದೇ ರೀತಿ ನಂಬಿ, ಈ ಭೂಮಿಯಲ್ಲಿ ಹಲವು ಧರ್ಮ, ಪಂಥಗಳು ಸೃಷ್ಟಿ ಆಗಿರುವುದು. ಅಂದರೆ, ಜಗತ್ತಿನ ಮೂಲೆ ಮೂಲೆ ಗಳಲ್ಲೂ ಸೂಕ್ಷ್ಮದ ತಮ್ಮ ಅನುಭವಗಳ ಸತ್ಯಾಸತ್ಯತೆಯ ಬಗ್ಗೆ ಒಂದಿಷ್ಟು ಸಂಶಯಿಸದೆ ಮತ್ತು ಪ್ರಶ್ನಿಸದೆ ಎಲ್ಲವನ್ನೂ ಅದೇ ರೀತಿ ಒಪ್ಪಿಕೊಂಡು ಮುಂದುವರಿದು ಬಂದಿರುವುದು ಎಂದು ಅರ್ಥ. ಈ ಕಾರಣದಿಂದಾಗಿಯೇ, ಸೃಷ್ಟಿಕರ್ತ ದೇವರು ಒಬ್ಬನಾದರೂ, ಆ ಒಬ್ಬ ಸೃಷ್ಟಿಕರ್ತನ ಬಗ್ಗೆ ಬೇರೆ ಬೇರೆ ವಿವರಣೆಯನ್ನು ಕೊಟ್ಟಿರುವುದು, ಮತ್ತು ತಮ್ಮೊಳಗೆ ವೈರುಧ್ಯಗಳನ್ನೇ ಹೇಳಿರುವುದು. ಇದರ ಪರಿಣಾಮವಾಗಿ, ಧರ್ಮದ ಮೂಲ ಉದ್ದೇಶವಾದ ಆ ಶಾಂತಿಯ ಸ್ಥಾಪನೆಯು ನೆರವೇರದೆ, ಅದರ ವಿರುದ್ಧ ಭಾವವಾದ, ದ್ವೇಷ, ರಕ್ತಪಾತ ಇತ್ಯಾದಿ ಭೀಕರ ದುಷ್ಕರ್ಮಗಳು ಈ ಜಗತ್ತಿನಲ್ಲಿ ಮುಂದುವರಿಯುವಂತಾಗಿರುವುದು.

ಇನ್ನು, ನಾನು ಈ ಸೂಕ್ಷ್ಮದ ಸ್ತರಗಳಲ್ಲಿ ಕಾಣಿಸುವ ರೂಪಗಳು, ಮಾತುಗಳನ್ನು ಸಂಶಯಿಸಿ ಅವುಗಳ ಸತ್ಯತೆಯನ್ನು ಕಂಡುಹಿಡಿಯಲು ಪ್ರಯತ್ನಿಸಿದುದರ ಪರಿಣಾಮವಾಗಿ ಮಾತ್ರ ಆ ಪ್ರಾಚೀನ ವಾಮಾಚಾರದ ರಹಸ್ಯ ಕೈವಾಡವನ್ನು ಅರಿಯಲು ಸಾಧ್ಯವಾಗಿರುವುದು ಎಂದು ತಿಳಿಯಬೇಕು. ಹಾಗೆ ಮಾಡುವ ಮೊದಲಲ್ಲಿ ಇದು ಯಾವುದೂ ನನಗೂ ತಿಳಿದಿರಲಿಲ್ಲ. ಅತ್ಯಂತ ಅಪಾಯಕಾರಿಯಾದ ಆ ಸೂಕ್ಷ್ಮದ ಬೇಹುಗಾರಿಕೆಯ ಫಲವಾಗಿ ನನಗೆ ಎಲ್ಲಾ ಜಾತಿ, ಧರ್ಮ, ಪಂಥಗಳೊಳಗೂ ಈ ಪ್ರಾಚೀನ ವಾಮಾಚಾರದ ರಹಸ್ಯ ಕೈವಾಡವಿರುವುದು ನಿಸ್ಸಂಶಯವಾಗಿ ತಿಳಿದುಬಂದಿದೆ.

# ಸೃಷ್ಟಿಕರ್ತನೆದುರು ಆ ಪ್ರಾಚೀನ ವಾಮಾಚಾರದ ಪ್ರಭಾವವು ನಡೆಯಲಾರದು ಎಂಬ ವಾದ

ಎಲ್ಲಾ ಧರ್ಮಗಳೂ ವಾಮಾಚಾರವನ್ನು ನೇರವಾಗಿ ಬಣ್ಣಿಸಿವೆ. ಕೆಲವು ಧರ್ಮಗಳ ಪುರಾಣಗಳಲ್ಲಿ ಮಾಯಾವಿ ರಾಕ್ಷಸರು ಹಲವು ಋಷಿ ಮುನಿಗಳನ್ನು ಕೊಂದ ಕಥೆಗಳಿವೆ, ಅದೇ ರೀತಿ, ದೇವತೆಗಳನ್ನೂ ಸೋಲಿಸಿದ ಕಥೆಗಳಿವೆ. ಇನ್ನೂ ಕೆಲವು ಧರ್ಮಗಳಲ್ಲಿ, ದೇವರ ಆಶ್ರಯದಲ್ಲೇ ಬೆಳೆಯುತ್ತಿದ್ದ ಆ ಮೊದಲ ಮಾನವ ಮತ್ತು ಆತನ ಪತ್ನಿಯನ್ನು ಸೈತಾನನು ಮೋಸಗೊಳಿಸಿದ ಕಥೆಯೂ ಇರುವುದು. ಇತ್ತ, ಕೆಲವು ನಾಸ್ತಿಕ ಧರ್ಮಗಳಲ್ಲೂ ವಾಮಾಚಾರ ಸೇನೆಯೊಂದಿಗೆ ಯುದ್ಧ ಮಾಡಿದ ಪ್ರಸಂಗದ ವಿಚಾರವೂ ಬರುವುದು. ಈ ಎಲ್ಲಾ ಕಾರಣಗಳಿಂದ ಯಾರಿಗೂ "ಆ ಸೃಷ್ಟಿಕರ್ತನ ಮುಂದೆ ಆ ವಾಮಾಚಾರದ ಶಕ್ತಿ ನಡೆಯಲಾರದು" ಎಂಬ ವಾದ ಮಾಡಲು ಸಾಧ್ಯವಿಲ್ಲ. ಈ ಎಲ್ಲಾ ವಿವರಣೆಗಳು ಆ ಪ್ರಾಚೀನ ವಾಮಾಚಾರದ ರಹಸ್ಯ ಕೈವಾಡವನ್ನು ಎತ್ತಿ ಹಿಡಿಯುವ ಉದಾಹರಣೆಗಳಾಗಿಯೂ ನಮಗೆ ಕಾಣಬಹುದಾಗಿದೆ.

# ಒಂದೇವರವರ ಪ್ರಕಾರ ಯಾವುದೇ ದೇವಸಂಕಲ್ಪದ ವಿವರಣೆ

ಒಬ್ಬ ಉತ್ತಮನನ್ನು ಅಧಮನಿಂದ ಪ್ರತ್ಯೇಕಿಸಿ ತಿಳಿಯುವ ವಿಧಾನವು ಅವನಲ್ಲಿ ಉತ್ತಮ ಸ್ವಭಾವವಿರುವುದಾಗಿದೆ. ಒಬ್ಬನಲ್ಲಿ ಸತ್ಯ, ಪ್ರೀತಿ, ನೈತಿಕತೆ, ಇತ್ಯಾದಿಗಳು ಇಲ್ಲದಲ್ಲಿ ಆತನನ್ನು ಯಾರೂ ಉತ್ತಮ ವ್ಯಕ್ತಿ ಎಂದು ಕರೆಯುವುದಿಲ್ಲ. ಅದೇ ರೀತಿ, ಯಾವ ಶಕ್ತಿಯೂ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯನ್ನು ಹೊಂದಿಲ್ಲವಾದರೆ ಅದು ದೇವಶಕ್ತಿ ಆಗುವುದಿಲ್ಲ. ಆದುದರಿಂದ ದೇವರು ಎಂದರೆ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೇ ಆಗುವುದು ಎಂದು ಸ್ಪಷ್ಟವಾಗಿ ಹೇಳಬಹುದು.

# ದೇವರಿಗೆ ಒಂದು ಸಾರ್ವತ್ರಿಕ ನಿರ್ವಚನೆ

ಈ ಜಗತ್ತಿನಲ್ಲಿ ಹಲವು ರೀತಿಯ ದೇವರುಗಳು ಇರುವರು ಮತ್ತು ಅವುಗಳಲ್ಲಿ ಒಂದು ಕಡೆ ದೇವ ದೇವತೆಗಳಾದರೆ, ಇನ್ನೊಂದು ಕಡೆ, ಹಲವು ಬೇರೆ ಬೇರೆ ರೀತಿಯ ಸೃಷ್ಟಿಕರ್ತರುಗಳು!! ಇನ್ನು, ತತ್ವ ದೇವರು ಬೇರೆ ಇದೆ. ಈ ರೀತಿ, ಈ ಜಗತ್ತಿನಲ್ಲಿ ನಮಗೆ "ದೇವರು" ಸಂಕಲ್ಪಕ್ಕೆ ಒಂದು ಸಾಮಾನ್ಯ ನಿರ್ವಚನೆ ಕೊಡಲು ಸಾಧ್ಯವಾಗುವುದಿಲ್ಲ. ದೇವರು ಶಬ್ದಕ್ಕೆ ಅರ್ಥವನ್ನು ಅಥವಾ ನಿರ್ವಚನೆ ಕೊಡಬೇಕಿದ್ದರೆ, ಎಲ್ಲದರಲ್ಲೂ ಸಾಮಾನ್ಯವಾಗಿರುವ ಅಂಶಗಳು ನಮಗೆ ಸಿಗಬೇಕು, ಆದರೆ ಮಾತ್ರ ಅದು ಸಾಧ್ಯವಾಗುವುದು. ಆದರೆ, ಅದು ನಮಗೆ ಇದುವರೆಗೂ ಸಾಧ್ಯವಾಗಿಲ್ಲ!!

ಇನ್ನು, ಈ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ, ಸ್ವಭಾವಗಳು ಇಲ್ಲವಾದರೆ ಆ ಶಕ್ತಿಯು ದುಷ್ಟ ಶಕ್ತಿಯಾಗುವುದು. ಆದುದರಿಂದ ಈ ಸ್ವಭಾವಗಳು ಎಲ್ಲಾ ದೇವಸಂಕಲ್ಪಗಳಲ್ಲೂ ಅನಿವಾರ್ಯವಾಗಿ ಇರಲೇಬೇಕು. ಅದೇ ರೀತಿ, ತತ್ವವಾದರೂ ಅದು ಕೂಡಾ ಈ ಸ್ವಭಾವಗಳನ್ನು ಹುಟ್ಟಿಸುವಲ್ಲಿ ಪ್ರೇರಕ ಚೈತನ್ಯದಂತೆ ವರ್ತಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ ನಮಗೆ "ದೇವರು" ಎಂಬ ಶಬ್ದ ಅಥವಾ ಸಂಕಲ್ಪಕ್ಕೆ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೇ ನಿಜವಾದ ಸಾರ್ವತ್ರಿಕ ನಿರ್ವಚನೆಯಾಗುವುದು ಎನ್ನಬಹುದು. ಸಾಮಾನ್ಯವಾಗಿ, ಜನರಿಗೆ, ಅವರ ದೇವರು ಮಾತ್ರ ನಿಜವಾದ ದೇವರು ಮತ್ತು ಇತರ ಧರ್ಮದ ದೇವರುಗಳು ಸೈತಾನ ಆಗುವವು, ಈ ರೀತಿಯ ಭಾವನೆಯು ಕೋಟಿಗಟ್ಟಲೆ ಮಾನವರನ್ನು ಇದುವರೆಗೂ ಬಲಿತೆಗೆದುಕೊಂಡಿದೆ ಎಂಬುವುದನ್ನು ನಾವು ಮರೆಯಬಾರದು. ಆದುದರಿಂದ ಇನ್ನಾದರೂ ಆ ಪ್ರಾಚೀನ ವಾಮಾಚಾರದ ಆ ದೇವರ ಹೆಸರಲ್ಲಿ ಮಾನವನನ್ನು ವಿಭಜಿಸುವ ಆ ಮೋಸವನ್ನು, ಸರ್ವ ಧರ್ಮಗಳಿಗೂ ಅನ್ವಯವಾಗುವ, ಈ ಸಾರ್ವತ್ರಿಕ ದೇವಸಂಕಲ್ಪದ ಮೂಲಕ ನಮಗೆ ಇಲ್ಲವಾಗಿಸಲು ಪ್ರಯತ್ನಿಸೋಣ. ದೇವರ ಹೆಸರು ಏನೇ ಇರಲಿ, ಮತ್ತು ಆಚಾರವು ಏನೇ ಇರಲಿ, ಆದರೆ ದೇವಶಕ್ತಿಯು ಅದು ಎಂದಿಗೂ ಅಸುರಶಕ್ತಿಯಾಗಲಾರದೆಂಬಲ್ಲಿನ ನಿಲುವು ಇದಾಗಿದೆ.

# ದೇವರು ಮತ್ತು ಸೈತಾನ

ಬೆಳಕು ಕತ್ತಲೆಯ ಕೆಲಸವನ್ನು ಮಾಡಲಾರದು, ಅದೇ ರೀತಿ ಕತ್ತಲೆಯು ಬೆಳಕಿನ ಕೆಲಸವನ್ನೂ ಮಾಡಲಾರದು, ಹಾಗೆ ಮಾಡುವುದು ಅವುಗಳ ಸ್ವಭಾವವಲ್ಲ. ಅದೇ ರೀತಿಯಲ್ಲಿ, ಸೈತಾನನು ಈ ಜಗತ್ತಿನಲ್ಲಿ ಒಳ್ಳೆಯತನ, ಶಾಂತಿ, ನೈತಿಕತೆಯನ್ನು ಬೆಳೆಸಲು ಎಂದೂ ಮುಂದಾಗಲಾರನು, ಯಾಕೆಂದರೆ ಆತನ ಗುರಿಯು ಈ ಭೂಮಿಯ ಜನರು ಹಿಂಸೆ, ಧ್ವೇಷ, ಅನೈತಿಕತೆಯಲ್ಲಿ ಮುಳುಗಬೇಕೆಂದಾಗಿದೆ. ಈ ಹಿನ್ನೆಲೆಯಲ್ಲಿ, ಯಾವುದು ಜಗತ್ತಿನಲ್ಲಿ ಜೀವನದಲ್ಲಿ ನಿಸ್ವಾರ್ಥ ಪ್ರೀತಿ, ಶಾಂತಿ, ನೈತಿಕತೆಯನ್ನು ಹೆಚ್ಚಿಸುವುದೋ ಅವು ಎಲ್ಲವೂ ದೇವಾಂಶವೆಂದೂ, ಅದಲ್ಲದೆ, ಜಗತ್ತಿನಲ್ಲಿ ಹಿಂಸೆ, ಧ್ವೇಷ, ಮತ್ತು ಅನೈತಿಕತೆ, ಇವುಗಳನ್ನು ಯಾವುದು ಹೆಚ್ಚಿಸುವುದೋ, ಅವು ಎಲ್ಲವೂ ಸೈತಾನನ ಅಂಶವೆಂದೂ ತಿಳಿಯಬೇಕು. ಚುಟುಕಾಗಿ ಹೇಳುವುದಾದರೆ, ಇನ್ನೊಂದು ಧರ್ಮದ ದೇವರಲ್ಲ ಸೈತಾನ, ಬದಲು ತಮ್ಮದೇ ಧರ್ಮದಲ್ಲಿ ದುಷ್ಟ ಸ್ವಭಾವವನ್ನು ಹೊಂದಿದವರು ಸೈತಾನರು ಎಂದು ಸರ್ವ ಧರ್ಮ, ಪಂಥಗಳ ಜನರೂ ಅರಿತುಕೊಳ್ಳಬೇಕಾಗುವುದು.

# ಧರ್ಮದ ವಿವರಣೆ

ಧರ್ಮದಲ್ಲಿ ಮುಖ್ಯವಾಗಿ ಎರಡು ಭಾಗವಿದೆ. ಅದರಲ್ಲಿ ಒಂದು ಮಾನವನು ಉತ್ತಮ ಜೀವನವನ್ನು ಪಡೆಯುವ ಭಾಗ ಮತ್ತು ಇನ್ನೊಂದು ಆಧ್ಯಾತ್ಮಿಕ ಸ್ವರ್ಗ ಅಥವಾ ಮೋಕ್ಷವನ್ನು ಪಡೆಯುವ ಭಾಗವಾಗಿದೆ. ದೇವರಿಲ್ಲದ ಧರ್ಮಗಳೂ ಇರುವ ಕಾರಣ ದೇವರು ಧರ್ಮಕ್ಕೆ ಒಂದು ಅನಿವಾರ್ಯ ಘಟಕವಲ್ಲ ಎಂದು ಅದರಿಂದಲೇ ತಿಳಿದುಕೊಳ್ಳಬಹುದು. ಇನ್ನು, ಮರಣಾನಂತರ ಮೋಕ್ಷವನ್ನು ಪಡೆವ ಭಾಗದಲ್ಲಿಯೂ ಹೇಳಿರುವುದು "ಪಾಪಿಗಳಿಗೆ ಮೋಕ್ಷ ಸಾಧ್ಯವಿಲ್ಲ" ಎಂದಾಗಿದೆ. ಅಂದರೆ, ಅಲ್ಲಿಯೂ ಉತ್ತಮ ಸ್ವಭಾವವಿಲ್ಲದೆ ಯಾರಿಗೂ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ ಎಂದಾಯಿತು. ಹಾಗಾದರೆ, ಧರ್ಮದ ಮೂಲ ಎಲ್ಲಿದೆ ಎಂದು ನಮಗೆ ಸ್ಪಷ್ಟವಾಯಿತು. ಆದುದರಿಂದ ಆಚಾರಗಳಲ್ಲ, ಬದಲು, ಸ್ವಭಾವ ಶುದ್ದೀಕರಣವೇ ಧರ್ಮದ ಪಾಲನೆ ಎಂದಾಯಿತು. ಇನ್ನು, ನಾವು ಮೊದಲೇ ತಿಳಿದಂತೆ, ಸ್ವಭಾವ ಶುದ್ದೀಕರಣವು ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯ ಹಿನ್ನೆಲೆಯಲ್ಲಿ ಮಾತ್ರ ದೊರಕುವುದು ಮತ್ತು ಬೇರೆ ಯಾವುದರಿಂದಲೂ ಅದು ಸಾಧ್ಯವೂ ಆಗುವುದಿಲ್ಲ! ಈ ಹಿನ್ನೆಲೆಯಲ್ಲಿ ಧರ್ಮ ಎಂದರೆ ಅದು ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯೇ ಆಗುವುದು ಎಂದು ಹೇಳಬಹುದು. ಅದೇ ರೀತಿ, ಧಾರ್ಮಿಕ ಜೀವನವನ್ನು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಹಿನ್ನೆಲೆಯ ಜೀವನ ಎಂದೂ ಹೇಳಬಹುದಾಗಿದೆ.

ಈ ರೀತಿಯ ಧರ್ಮದ ಸರಳ ಜೀವನವನ್ನು ಸತ್ಯದ ಸಾರದ ಜೀವನ ಅಥವಾ 'ಸತ್ಯಜೀವನ' ಎನ್ನಬಹುದು. ಈ ಜಗತ್ತಿನ ಸರ್ವ ಧರ್ಮ, ಪಂಥಗಳನ್ನು ಶುದ್ದೀಕರಿಸುವ ವಿಧಾನಶಾಸ್ತ್ರವಾಗಿಯೂ ಅಥವಾ ಒಂದು ಯಂತ್ರದಂತೆಯೂ ಇದು ವರ್ತಿಸಬಲ್ಲುದು ಎಂಬುವುದರಲ್ಲಿ ಸಂಶಯವಿಲ್ಲ. ಅದೇ ರೀತಿ, ಧರ್ಮಗಳೊಳಗಿನ ಆ ಆಚಾರಗಳನ್ನೆಲ್ಲಾ ಮೀರಿನಿಂತು, ಜಾಗತಿಕವಾದ ಒಗ್ಗಟ್ಟನ್ನು ಮತ್ತು ಶಾಂತಿಯನ್ನು ತರಲು ಈ ಯಂತ್ರ ಅಥವಾ ವಿಧಾನಶಾಸ್ತ್ರವು ಸಮರ್ಥವಾಗುವುದು!

# ಇದುವರೆಗಿನ ಧರ್ಮದ ವಿವರಣೆ

ಇದುವರೆಗೂ ಧರ್ಮಗಳು ಆಚಾರ ಮತ್ತು ನಂಬಿಕೆಗಳ ಪೊದೆಗಳಂತೆ ಬಿಂಬಿಸಲ್ಪಟ್ಟವು!!! ಜಗತ್ತಿನ ಯಾವುದೇ ಮೂಲೆಗೆ ಹೋದರೂ ಮತ್ತು ಯಾವ ಧರ್ಮವೇ ಆದರೂ, ಆಯಾ ಧರ್ಮದಲ್ಲಿ ಅದರದ್ದೇ ಆದ ನಂಬಿಕೆಗಳು ಮತ್ತು ಆಚಾರಗಳಿವೆ. ಈ ಧರ್ಮಗಳು ಇತರ ಧರ್ಮಗಳಿಂದ ಪ್ರತ್ಯೇಕತೆಯನ್ನು ಹಾಗೂ ಶ್ರೇಷ್ಠತೆಯನ್ನು ಪಡೆಯಲು, ಅವರದ್ದೇ ಆದ ನಂಬಿಕೆಗಳು ಮತ್ತು ಆಚಾರಗಳನ್ನು ಅವಲಂಭಿಸುವವು! ಅಂದರೆ, ಈ ಬೇರೆ ಬೇರೆ ಧರ್ಮಗಳ ಹೆಸರುಗಳು ಸೃಷ್ಟಿಯಾಗಿರುವುದು ಈ ಬರೇ ಈ ಸಾರವಿಲ್ಲದಿರುವ ನಂಬಿಕೆ, ಆಚಾರಗಳಿಂದ ಎಂದು ಸ್ಪಷ್ಟವಾಗುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಎಲ್ಲಾ ಧರ್ಮಗಳಲ್ಲೂ, ಆ ನಿಜವಾದ ಧರ್ಮದ ಅಮೂಲ್ಯ ಸಾರವು ಕಣ್ಣಿಗೆ ಕಾಣಿಸದಷ್ಟು ಒಳಗೆ, ಈ ನಂಬಿಕೆ, ಆಚಾರಗಳ ಪೊದೆಗಳಿಂದ ಆವೃತವಾಗಿದೆ!!

# ಸತ್ಯ ಮತ್ತು ನಂಬಿಕೆಯ ವ್ಯತ್ಯಾಸ

ಯಾವುದು ಇದೆಯೋ ಅದು ಸತ್ಯ. ಯಾವುದು ಬದಲಾವಣೆಗೆ ಒಳಗಾಗುವುದಿಲ್ಲವೋ ಅದು ಸತ್ಯ, ಯಾವುದು ಇದ್ದದ್ದು ಇದ್ದ ಹಾಗೆ ಗೋಚರಿಸುವುದೋ ಅದು ಸತ್ಯ. ಇಲ್ಲದರ ಪುಟಗಟ್ಟಲೆ ವಿವರಣೆಯೂ ಸತ್ಯವಾಗಲಾರದು. ಅದೇ ರೀತಿ ಇದ್ದದ್ದನ್ನು ಬೇರೆ ರೀತಿಯಲ್ಲಿ ವಿವರಿಸುವುದೂ ಸತ್ಯವಾಗಲಾರದು. ತಮ್ಮ ತಮ್ಮ ಅಜ್ಞಾನವೆಂಬ ಬಣ್ಣದ ಗಾಜುಗಳ ಮೂಲಕ ನೋಡಿ ತಮಗೆ ಕಾಣಿಸುವ ಬಣ್ಣವೇ ಸರಿಯೆಂದು ವಾದ ಮಾಡುವ ಈ ಚಾಳಿ ನಿಲ್ಲುವ ತನಕ ಸತ್ಯವೆಂಬ ಆ ದಿವ್ಯ ಬೆಳಕು ಅವರಿಂದ ದೂರ ಸರಿಯುತ್ತಲೇ ಇರುತ್ತದೆ. ಇದೇ ಮನೆ ಜಗಳ, ಜಾತೀಯತೆ, ಮತಾಂಧತೆಗಳ ಹಿಂಸೆಯ ಪಾಪ ಕರ್ಮಗಳಿಗೆ ಕಾರಣವಾಗಿರುವುದು.

ಸತ್ಯಕ್ಕೆ ಜಗತ್ತಿನಲ್ಲಿ ಬಹಳ ದೊಡ್ಡ ಸ್ಥಾನವಿದೆ. ಅದು ಇಲ್ಲವಾದಲ್ಲಿ ಎಲ್ಲವೂ ಅನ್ಯಾಯದಲ್ಲಿ ಬೆಳೆಯುವುದು. ದುಃಖ, ನೋವುಗಳಿಗೆ ಕಾರಣವಾಗುವುದು. ಆದರೆ ಸತ್ಯವು ಹೆಚ್ಚಾಗಿ ಅಡಗಿ ಕುಳಿತಿರುತ್ತದೆ. ಅದನ್ನು ಹೊರತರಬೇಕಾಗಿದೆ. ಬಣ್ಣದ ಗಾಜಿನ ದೃಷ್ಟಿಯನ್ನು ಬಿಟ್ಟು ವೈಜ್ಞಾನಿಕ ದೃಷ್ಟಿಯನ್ನು ಬಳಸಿದರೆ ಮಾತ್ರ ಅದು ಸಾಧ್ಯವಾಗುವುದು. ಇಲ್ಲವಾದಲ್ಲಿ ಹುಸಿಯ ಹಸಿಯಾದ ವಿಷದ ದುರ್ಗಂಧ ಸಮಾಜವನ್ನೆಲ್ಲಾ ಆವರಿಸಿ ನಾಶಪಡಿಸುವುದು. ತಮ್ಮ ತಮ್ಮ ನಂಬಿಕೆಗಳಿಗೆ ಬಿಟ್ಟ ವಿಚಾರವೆಂದು ಯಾರು ತರ್ಕವನ್ನು ಆರಂಭಿಸುವರೋ ಅವರು ಎಂದೂ ಸತ್ಯವನ್ನು ಕಾಣಲಾರರು. ನಂಬಿಕೆ ಎಂದರೆ ಸತ್ಯವೆಂದಲ್ಲ. ಮೇಲೆ ಸೂರ್ಯನಿರುವಾಗ 'ಮೇಲೆ ಸೂರ್ಯನಿದ್ದಾನೆಂದು ನಂಬುತ್ತೇನೆ' ಎಂದು ಕಣ್ಣಿದ್ದವರು ಯಾರೂ ಹೇಳುವುದಿಲ್ಲ. ಯಾಕೆಂದರೆ ಸೂರ್ಯನಿದ್ದಾನೆ ಎಂಬುವುದು ಒಂದು ಸತ್ಯ. ಅದು ನಂಬಿಕೆಯಲ್ಲ. ಈ ರೀತಿ ನೋಡಿದಾಗ ನಂಬಿಕೆ ಎಂಬಲ್ಲಿ ಸಂಶಯದ ನೆರಳು ಇದ್ದೇ ಇರುತ್ತದೆ ಎಂದು ತಿಳಿದು ಬರುವುದು. ಆದುದರಿಂದ ಸತ್ಯವನ್ನು ಕಾಣಲು ಮುಕ್ತ ನಿಲುವಿನ ದೃಷ್ಟಿಯಿಂದ ಮಾತ್ರ ಸಾಧ್ಯ, ಹೊರತು ನಂಬಿಕೆಗಳಿಂದ ಎಂದೂ ಸಾಧ್ಯವಿಲ್ಲ. ಸತ್ಯವು ನಿಜವಾಗಿಯೂ ಇರುವುದರ ಬಗ್ಗೆ ಹೇಳುವುದು, ಆದರೆ ನಂಬಿಕೆಯು ಸತ್ಯವನ್ನು ಸ್ಪಷ್ಟವಾಗಿ ತಿಳಿಯದಿರುವ ಸ್ಥಿತಿಯನ್ನು ಮಾತ್ರ ಹೇಳುವುದು. ಆದುದರಿಂದ ಆ ಸತ್ಯದ ದೇವರನ್ನು ಮತ್ತು ಸತ್ಯದ ಧರ್ಮವನ್ನು ನಂಬಿಕೆ ಅಥವಾ ಸಂಶಯದ ಮೂಲಕ ಕಾಣಲು ಎಂದಿಗೂ ಸಾಧ್ಯವಾಗಲಾರದು ಎಂಬುವುದು ಸ್ಪಷ್ಟವಾಗುವುದು.

# ನಂಬಿಕೆಯ ದೇವರು ಮತ್ತು ಸತ್ಯದ ದೇವರು

ನಾವು 'ಸತ್ಯವೇ ದೇವರು' ಎಂದು ಕೇಳಿದ್ದೇವೆ. ಆದರೆ 'ನನ್ನ ನಂಬಿಕೆಯೇ ದೇವರು' ಎಂದು, ಎಂದೂ ಕೇಳಿಲ್ಲ. ಸತ್ಯವೇ ದೇವರಾದರೆ ಸೂರ್ಯನಂತೆ ಎಲ್ಲರೂ ಒಪ್ಪುವ ಒಬ್ಬ ಸೃಷ್ಟಿಕರ್ತ ದೇವರು ಅನಿವಾರ್ಯವಾಗುತ್ತಿತ್ತು, ಮತ್ತು ಮಾನವರೆಲ್ಲರೂ ಅವನ ಮಕ್ಕಳಂತೆ ಸಂತೋಷದಿಂದ ಜೀವಿಸುತ್ತಿದ್ದರು. ಆದರೆ ನಿಜ ಸ್ಥಿತಿಯಲ್ಲಿ ಹಾಗಿಲ್ಲ. ಮತ್ತು 'ನನ್ನ ನಂಬಿಕೆಯೇ ದೇವರು' ಇದೇ ಹಿಂದಿನಿಂದಲೂ ರಾರಾಜಿಸುತ್ತಿರುವ ದೇವರು.

ಹಲವು ಸೃಷ್ಟಿಕರ್ತರಿರಲು ಸಾಧ್ಯವಿಲ್ಲ. ಇದ್ದಲ್ಲಿ ಒಬ್ಬನೇ ಸಾಧ್ಯ ಎಂದಾದರೆ ಯಾಕೆ ಈ ಹೊಡೆದಾಟ? ಆತನ ಹೆಸರೆತ್ತಿ ಯಾಕೆ ಈ ರಕ್ತಪಾತ? ಶಾಂತಿಗಾಗಿ ದೇವರಿರುವನೋ ಅಲ್ಲ ಆತ ಹಿಂಸೆ, ರಕ್ತಪಾತ ಮಾಡಿಸುವನೋ? ಇಲ್ಲೇ ಮುಕ್ತ ನಿಲುವಿನ ವೈಜ್ಞಾನಿಕ ದೃಷ್ಟಿಯ ತರ್ಕದ ಅನಿವಾರ್ಯತೆ ಕಾಣಿಸುವುದು. ನಂಬಿಕೆಯೆಂಬ ಚೂರಿಯಿಂದ, ತಮ್ಮೊಳಗೆ ಇರಿದು ಇರಿದು, ಕೋಟಿಗಟ್ಟಲೆ ಜನರನ್ನು ಕೊಂದ ಚರಿತ್ರೆ ಇರುವಾಗ "ನಂಬಿಕೆಯಿಂದ ಇದುವರೆಗೂ ಏನೂ ಪ್ರಯೋಜನವಾಗಿಲ್ಲವೇ?" ಎಂಬ ಪ್ರಶ್ನೆಯನ್ನು ಹಾಕುವ ಹಕ್ಕು ಜಗತ್ತಿನಲ್ಲಿ ಯಾರಿಗೂ ಇಲ್ಲವಾಗುವುದು. ಎಲ್ಲಾ ದೇವರ ಲೀಲೆ ಎಂದು ಸಮಾಧಾನಪಟ್ಟುಕೊಳ್ಳುವವರು, ತಮ್ಮೊಳಗೆ ಹೊಡೆಸಿ ರಕ್ತದ ಹೊಳೆ ಹರಿಸುವುದು ಒಬ್ಬ ತಂದೆಯಾದವನು ಮಾಡುವನೇ ಎಂದು ಆಲೋಚಿಸುವುದು ಉತ್ತಮ. ಹೀಗಿದ್ದರೆ ದೇವರು ಮತ್ತು ಸೈತಾನ ಎಂದು ಜಗತ್ತಿನ ಎಲ್ಲೆಡೆ ವಿಭಜಿಸಿ, ಪ್ರೀತಿಯೇ ದೇವರು, ಕ್ರೌರ್ಯವೇ ಸೈತಾನ ಎಂದು ವರ್ಣಿಸುವ ಅಗತ್ಯವೇ ಇಲ್ಲವಾಗಿತ್ತು. ಎಲ್ಲವನ್ನೂ ದೇವರು ತನ್ನ ಲೀಲೆಯ ಮೂಲಕ ಮಾಡುತ್ತಿದ್ದಾನಲ್ಲಾ! ಆದುದರಿಂದ ಕತ್ತಲೆಯನ್ನು ಬೆಳಕಾಗಿ ವಿವರಿಸದೆ, ಮತ್ತು ಬೆಳಕನ್ನು ಕತ್ತಲೆಗೆ ತಳ್ಳದೆ ಜಗತ್ತು ಸತ್ಯ ಶೋಧಕ್ಕೆ ಮುಂದಾಗಲಿ. ಆಗಲೇ ಭೂಮಿಯಲ್ಲಿ ನಿಜವಾದ ಶಾಂತಿ ಸೂರ್ಯನ ಉದಯವಾಗುವುದು. ಎಲ್ಲಿಯ ತನಕ ಇದು ಸಾಧ್ಯವಾಗುವುದಿಲ್ಲವೋ ಅಲ್ಲಿಯ ತನಕ ಶಾಂತಿಯ ಮಾತು ಬಹಳ ದೂರವೇ ಉಳಿಯುವುದು. ಜಗತ್ತಿಗೆ ಭಯ, ಹಿಂಸೆಗಳ ಕಪಿ ಮುಷ್ಠಿಯಿಂದ ಹೊರಬರಲು ಸಾಧ್ಯವಾಗುವುದಿಲ್ಲ.

ಸತ್ಯಕ್ಕೆ ಅಸ್ತಿತ್ವವಿದೆ. ಆದರೆ ನಂಬಿಕೆಯು ಸತ್ಯ ತಿಳಿಯದ ಸ್ಥಿತಿಯನ್ನು ಪ್ರತಿನಿಧೀಕರಿಸುವ ಕಾರಣ, ಅಲ್ಲಿ ಅದಕ್ಕೆ ಅಸ್ತಿತ್ವ ಇರುವುದಿಲ್ಲ. ನಂಬಿಕೆಯು ಸಂಶಯದ ನೆರಳಿನಂತೆ, 'ಅದು ಇದೆ' ಎಂದು ಇನ್ನೂ ಅನುಭವವಾಗದ ಸ್ಥಿತಿ. ಈ ಸ್ಥಿತಿಯಲ್ಲಿ, ಅದು ಒಂದು ವ್ಯಕ್ತಿಯೂ ಆಗುವುದಿಲ್ಲ, ಒಂದು ತತ್ವವೂ ಆಗುವುದಿಲ್ಲ. ಹೀಗಿರುವಾಗ ವ್ಯಕ್ತಿದೇವರಾಗಿಯೂ, ತತ್ವ ಚೈತನ್ಯವಾಗಿಯೂ ಅದು ಅಸ್ತಿತ್ವವನ್ನೇ ಪಡೆಯುವುದಿಲ್ಲ. ಭಕ್ತನು ಮನಸ್ಸನ್ನು ಕೇಂದ್ರೀಕರಿಸಿದರೂ, ಆ ಕೇಂದ್ರ ಬಿಂದುವಿಗೆ ಅಸ್ತಿತ್ವವಿಲ್ಲದಿರುವಲ್ಲಿ, ಆಗ ಆತನ ಸಾಧನೆಯು ಗುರಿತಲುಪದ ಬಾಣದಂತೆ ಆಗುವುದು. ಈ ರೀತಿ ನಂಬಿಕೆಯು ನಂಬುವ ವಸ್ತುವಿನ ಅಸ್ತಿತ್ವವನ್ನೇ ಇಲ್ಲದಂತೆ ಮಾಡುವುದು! ಇತ್ತ, ಸತ್ಯವೇ ದೇವರೆಂದರೆ, ಮತ್ತು ಆ ಸತ್ಯದ ದೇವರನ್ನು ಸತ್ಯವೆಂದು ತಿಳಿಯುವ ಆ ಸತ್ಯದ ಹಿನ್ನೆಲೆಯ ರೀತಿಗಳನ್ನು ಅವಲಂಭಿಸುವಾಗ, ಸತ್ಯಕ್ಕೆ ಅಸ್ತಿತ್ವವಿರುವ ಕಾರಣ, ಆ ದೇವ ಸಂಕಲ್ಪಕ್ಕೆ ಅಸ್ತಿತ್ವ ಬರುವುದು.

ಆದುದರಿಂದ ದೇವರನ್ನು ನಂಬುವುದು ಎಂಬ ರೀತಿಯನ್ನು ಬಿಟ್ಟು, ದೇವರು ಸತ್ಯವೆಂದು ತಿಳಿಯುವ ರೀತಿಯನ್ನು ಅನುಸರಿಸುವುದು ದೇವರಿಗೆ ಅಸ್ತಿತ್ವವಿಲ್ಲ ಎಂಬುವುದರಿಂದ ದೇವರಿಗೆ ಅಸ್ತಿತ್ವವಿದೆ ಎಂಬಲ್ಲಿಗೆ ಬರುವಷ್ಟು ಮಹತ್ವದ್ದಾಗುವುದು. ದಾಸರುಗಳು ಮತ್ತು ಶರಣರಲ್ಲಿ ಹೆಚ್ಚಿನವರೂ ಆ ದೇವರನ್ನು ನಂಬಿದವರಲ್ಲ, ಬದಲು, ಅವರು ದೇವರನ್ನು ಅರಿತು ಭಕ್ತಿ ಯೋಗಿಗಳಾದವರು! ಅವರು ಆಚಾರಗಳ ಹಿಂದೆ ಬೀಳದೆ, ಆ ದೇವರ ಮಹಿಮೆಯನ್ನು [ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಗುಣಗಳನ್ನು] ಹಲವು ವಿಧಗಳಲ್ಲಿ ಹಾಡಿ ಹೊಗಳಿರುವವರು. ಆದುದರಿಂದ ದಾಸರು, ಶರಣರು, ಇತ್ಯಾದಿ ಭಕ್ತಿಯೋಗಿಗಳಲ್ಲಿ ಹೆಚ್ಚಿನವರೂ ಆ ನಂಬಿಕೆ ರೀತಿಯನ್ನು ಅನುಸರಿಸಿಯೇ ಇಲ್ಲ ಎನ್ನಬಹುದು.

# ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಅನುಷ್ಠಾನವೇ ಧರ್ಮ

ನಮಗೆ ಎಲ್ಲರಿಗೂ ಧರ್ಮದ ಉದ್ದೇಶವೇನೆಂದು ತಿಳಿದಿದೆ. ಧರ್ಮದ ಕಾರ್ಯವನ್ನು, ಮುಖ್ಯವಾಗಿ, ಎರಡಾಗಿ ವಿಭಾಗಿಸಬಹುದು. ಅವುಗಳು ಸಾಮಾಜಿಕ ಮತ್ತು ಆಧ್ಯಾತ್ಮಿಕವಾಗಿವೆ. ಸಾಮಾಜಿಕವಾಗಿ ಧರ್ಮದ ಕೆಲಸವು, ಸಮಾಜದಲ್ಲಿ ಒಳಿತು ಮಾಡುವವರನ್ನು ಪ್ರೋತ್ಸಾಹಿಸುವುದು ಮತ್ತು ಕಿಡಿಗೇಡಿಗಳನ್ನು ನಿಯಂತ್ರಿಸುವುದು, ಆಧ್ಯಾತ್ಮಿಕವಾಗಿ ಅದರ ಕೆಲಸವು ಸದ್ಗತಿ, ಮೋಕ್ಷ ಮಾರ್ಗಗಳನ್ನು ತಿಳಿಸಿಕೊಡುವುದು ಆಗಿದೆ. ಅಂದರೆ ಎರಡು ಕಡೆಯೂ ಅದು ಮಾನವರ ಶೋಷಣೆ ಮತ್ತು ಹಿಂಸಾಚಾರವನ್ನು ಹೇಳುವುದಿಲ್ಲ. ಆದರೆ ಈ ಸತ್ಯವನ್ನು ಜನರಿಗೆ ತಿಳಿಯದಂತೆ ಮಾಡಿ ಮೇಲು ಜಾತಿ, ಕೀಳು ಜಾತಿ ಎಂದು ಸಾವಿರಾರು ವರುಷ ಮುಗ್ಧ ಮಾನವರನ್ನು ಶೋಷಿಸಿ ಲಾಭ ಪಡೆದುಕೊಂಡರು. ಅದೇ ರೀತಿ ಸ್ವಾರ್ಥಿಗಳು ಈ ಧರ್ಮಾಂಧತೆಯನ್ನು ತಮ್ಮ ಪರವಾಗಿ ಉಪಯೋಗಿಸುತ್ತಾ ರಕ್ತಪಾತಮಾಡಿಸಿದರು. ಅವರವರ 'ನಂಬಿಕೆ' ಎಂಬ ಭಾವನೆಯನ್ನೇ ಇಲ್ಲೆಲ್ಲಾ ಆಯುಧವಾಗಿ ಬಳಸಿರುವುದು. ಒಬ್ಬನ ಕತ್ತು ಕೊಯ್ಯುವುದು ಇನ್ನೊಬ್ಬನ ಧಾರ್ಮಿಕ ನಂಬಿಕೆಯಾದಲ್ಲಿ ಆ ನಂಬಿಕೆ ಸರಿಯೆಂದು ನೀವು ಹೇಳುವಿರೇ? ಇಲ್ಲ, ಯಾಕೆಂದರೆ ಅದು ಕ್ರೌರ್ಯವೆಂದು ನಿಮಗನಿಸುವುದು. ಆದರೆ ಇಂಥಹ ಕ್ರೌರ್ಯವು, ದೇವರು ಮತ್ತು ಧರ್ಮದ ಹೆಸರಲ್ಲಿ, ಹಿಂದಿನಿಂದಲೂ ಹಲವು ಇತರ ರೂಪಗಳಲ್ಲಿ ಇವೆ ಎಂಬುವುದನ್ನು ನಾವು ಗಣನೆಗೆ ತೆಗೆದೇ ಇಲ್ಲ ಎಂಬುವುದು ಆಶ್ಚರ್ಯಕರವಾಗಿದೆ!

ಬೇರೆ ಬೇರೆ ರೀತಿಯಲ್ಲಿ ಹಲವು ನಂಬಿಕೆಗಳು, ಈ ಜಗತ್ತಿನ ಎಲ್ಲಾ ಧರ್ಮಗಳಲ್ಲೂ, ದೇವರು ಮತ್ತು ಧರ್ಮದ ಹೆಸರಲ್ಲಿ ತುಂಬಿಕೊಂಡಿವೆ. ಅವುಗಳಲ್ಲಿ ಕೆಲವನ್ನು, ಕೆಲವು ಸಮಾಜವು, ಚಿಂತಿಸಿ, ಅದು ಸರಿಯಲ್ಲವೆಂದು ಕಂಡು ಬಲವಂತವಾಗಿ ಇಲ್ಲವಾಗಿಸಿತು, ಆದರೆ ಇನ್ನೂ ಎಲ್ಲವೂ ಅಳಿದಿಲ್ಲ. ಆದರೆ ಇನ್ನು ಕೆಲವು ಕಡೆ ಅದು ನಡೆದಿಲ್ಲ, ಹಾಗಾಗಿ ಅವುಗಳು ಹಾಗೇ ಉಳಿದುಕೊಂಡಿವೆ. ಜನರು ಸ್ವತಃ ಆಲೋಚನೆ ಮಾಡದೆ, ಪರಂಪರಾಗತವಾಗಿ ಹೇಳುತ್ತಾ ಬಂದಿರುವ "ದೇವರು, ಧರ್ಮಗಳು, ಅವರವರ ನಂಬಿಕೆಗಳಿಗೆ ಬಿಟ್ಟ ವಿಚಾರ" ಎಂಬ ಆ ಮಾತನ್ನು ಎಲ್ಲರೂ ಗಿಳಿಯಂತೆ ಆವರ್ತಿಸುವುದನ್ನು ಮೊದಲು ನಿಲ್ಲಿಸಬೇಕಾಗಿದೆ, ಮತ್ತು ನಂಬಿಕೆ ಎಂದರೇನು ಎಂಬುವುದರ ಕುರಿತು ಆಲೋಚಿಸಬೇಕಾಗಿದೆ.

ಇನ್ನು, ಧರ್ಮವು ಅನುಷ್ಠಾನದಲ್ಲಿರುವುದು ಎಂಬುವುದರ ಕುರಿತು ನೋಡೋಣ. ಅಂದರೆ ಧರ್ಮಗ್ರಂಥಗಳಲ್ಲಿರುವುದು ಧರ್ಮವಾಗುವುದಿಲ್ಲ ಎಂದು ಇದರ ಅರ್ಥ, ಅದು ಆ ಧಾರ್ಮಿಕ ಜೀವನ ದಾರಿಯತ್ತ ಬೊಟ್ಟುಮಾಡಿ ತೋರಿಸುವ ಚಿಹ್ನೆಮಾತ್ರ ಆಗುವುದು. ಆದರೆ ಜನರು ತಮ್ಮ ಜೀವನದಲ್ಲಿ ಧರ್ಮದ ಸಾರವಾದ ಒಳಿತನ್ನು ಬೆಳೆಸದೆ ಬರಿಯ ಚಿಹ್ನೆಗಳಿಗಾಗಿ ರಕ್ತಪಾತಮಾಡುತ್ತಿರುವರು!! ಮಕ್ಕಳು ಸೈಕಲು ಸವಾರಿಯನ್ನು ಮೊದಲು ಕಲಿಯುವಾಗ ಅದರ ಕೆಲವು ರೀತಿಯನ್ನು ಇತರರಿಂದ ಕೇಳಿ ತಿಳಿದುಕೊಳ್ಳುತ್ತಾರೆ ಅನಂತರ ಏನು ಮಾಡುತ್ತಾರೆ? ಸೈಕಲನ್ನು ತುಳಿಯುತ್ತಾ ಅಭ್ಯಾಸ ಮಾಡಿ ಕಲಿತುಬಿಡುತ್ತಾರೆ ಅಷ್ಟೇ. ಈಗ ಒಂದು ಪ್ರಶ್ನೆ, ಮಕ್ಕಳಾಗಿರುವಾಗ, ಸೈಕಲು ಸವಾರಿಯನ್ನು

ಕಲಿಯುವಲ್ಲಿ, ನೀವು ಎಷ್ಟು ಸಮಯ ಅದರ ಕುರಿತು ಕೇಳಿ ತಿಳಿಯಲು ಸಮಯವನ್ನು ವ್ಯಯಮಾಡಿದ್ದೀರಿ? ಕೆಲವು ನಿಮಿಷಗಳು ಮಾತ್ರ ಅಲ್ಲವೇ? ಆಮೇಲೆ ಅದರ ಬಗ್ಗೆ ವಾದ ಮಾಡುತ್ತಾ ಅಥವಾ ಅದನ್ನು ಹೊಗಳುತ್ತಾ ಕೂತಿಲ್ಲ, ಅದನ್ನು ನಿಮ್ಮ ಜೀವನದಲ್ಲಿ ಲೀನಮಾಡುವಂಥ ಅನುಷ್ಠಾನಕ್ಕೆ ತಯಾರಾಗಿದ್ದೀರಿ, ಮತ್ತು ನೀವು ಅದನ್ನು ಸಾಧಿಸಿದ್ದೀರಿ. ಇದೇ ರೀತಿ ತನ್ನ ತನ್ನ ಧರ್ಮವನ್ನು ಹೊಗಳುತ್ತಾ ಕೂರುವುದು ಅತ್ಯಂತ ಮೂರ್ಖತವಾಗುವುದು. ಧರ್ಮವನ್ನು ಅನುಷ್ಠಿಸಿ ನಿಮ್ಮ ಜೀವನದಲ್ಲಿ ಅದನ್ನು ಲೀನವಾಗಿಸಿ, ನೀವು ಸಮಾಜದಲ್ಲಿ ಮಹತ್ ವ್ಯಕ್ತಿತ್ವವಾಗಿ ಪರಿಣಮಿಸುವಾಗ ಮಾತ್ರ ನಿಮ್ಮ ಮೂಲಕ ಧರ್ಮವು ಪ್ರಕಟವಾಗುವುದು. ನೆನೆಪಿರಲಿ, ಮಾನವನ ಜೀವನದಲ್ಲಿ ಏನು ಪ್ರತಿಫಲಿಸುವುದೋ ಅದಕ್ಕನುಸರಿಸಿ, ಅದು ಧರ್ಮವಾದರೆ ನಮಗೆ ಧರ್ಮವನ್ನು ಮತ್ತು, ಅಧರ್ಮವಾದರೆ ನಮಗೆ ಅಧರ್ಮವನ್ನು, ಅವು ಕೊಡುವವು. ಗ್ರಂಥಗಳು ಪುಸ್ತಕಗಳ ಕೆಲಸವನ್ನು ಮಾತ್ರ ಮಾಡುವವು. ಅವನ್ನು ಪೂಜಿಸಿದರೂ, ಕಂಠಪಾಠಮಾಡಿದರೂ ಆ ಶಬ್ದಗಳು ಅಲ್ಲಿರುವವು ಅಷ್ಟೇ! ಎಲ್ಲರೂ ಉತ್ತಮರಾಗಬೇಕೆಂಬ ಒಂದು ಪುಸ್ತಕವನ್ನು ಯಾರಿಗೂ ಬರೆಯಬಹುದು, ಆದರೆ ಈ ಭೂಮಿಯಲ್ಲಿ ಅದರಿಂದಾಗಿ ಎಷ್ಟು ಜನ ಉತ್ತಮರು ಸೃಷ್ಟಿಯಾದರು ಅಷ್ಟು ಮಾತ್ರ ಅದು ಧರ್ಮವಾಗುವುದಷ್ಟೇ. ಈಗ ಜನರು, "ಉತ್ತಮರಾದ ವ್ಯಕ್ತಿಗಳು ನಿಜವಾದ ಧಾರ್ಮಿಕರು" ಎಂಬ ಹಿನ್ನೆಲೆಯಲ್ಲಿ, ಎಲ್ಲಾ ಧರ್ಮಗಳಲ್ಲೂ, ಅದನ್ನು ಅನುಷ್ಠಿಸಿ ಜೀವಿಸುವ ಆ ಧಾರ್ಮಿಕ ಜನರ ಸಂಖ್ಯೆಯನ್ನು ಒಮ್ಮೆ ಲೆಕ್ಕಹಾಕಿ ನೋಡಲಿ, ಆಗ ಪ್ರತಿಯೊಂದರಲ್ಲೂ ಬೆರಳೆಣಿಕೆಯ ಜನರು ಮಾತ್ರ ಸಿಗುವರು, ಮತ್ತು ಆಗ ಮಾತ್ರ ತಮ್ಮ ತಮ್ಮ ಧರ್ಮದ ನಿಜವಾದ ಗಾತ್ರ ಎಲ್ಲರಿಗೂ ತಿಳಿಯುವುದು!! ಈ ರೀತಿಯಲ್ಲಿ, ದಿಕ್ಸೂಚಿಯಂತಿರುವ ಈ ಗ್ರಂಥಗಳೆಂಬ ಚಿಹ್ನೆಗಳನ್ನೇ ಧರ್ಮವೆಂದು ಹೊಗಳುತ್ತಾ, ತಮ್ಮ ಧರ್ಮವೇ ಶ್ರೇಷ್ಠಧರ್ಮ ಎಂದು ವಾದಿಸುತ್ತಾ, ದ್ವೇಷ, ರಕ್ತಪಾತಮಾಡಿಸುವುದು ಅತ್ಯಂತ ಮೂರ್ಖತನ ಮತ್ತು ಭಯಾನಕ ನರಕದ ದಾರಿಯೆಂದು ಸ್ಪಷ್ಟಪಡಿಸಬಹುದು.

ಇನ್ನಾದರೂ, ಜಗತ್ತಿನ ಸರ್ವ ಧರ್ಮ, ಪಂಥಗಳು, ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೇ ಧರ್ಮ ಹಾಗೂ ದೇವರು ಎಂಬ ಸರಳವಾದ ಸತ್ಯವನ್ನು ತಿಳಿಸಿಕೊಡಲಿ, ಮತ್ತು ಅದರ ಅನುಷ್ಠಾನದಿಂದ, ಮಾನವರು, ಅವರವರ ಧರ್ಮದೊಳಗಿದ್ದು ಬೆಳೆದು ಬರುವ ಆ ಆತ್ಮೀಯ ಪ್ರೀತಿಯೆಂಬ ಬೆಳಕನ್ನು ಚೆಲ್ಲುವ ಮಾನವ-ಮುತ್ತುಗಳಾಗಲಿ ಎಂದು ಆಶಿಸೋಣ.

# ಅರಿಯುವಿಕೆಯ ಲಾಭ

ಧರ್ಮಗಳ ಈ ವರೆಗಿನ ಆಧ್ಯಾತ್ಮಿಕ ರೀತಿಗಳಲ್ಲಿ 'ನಂಬಿಕೆ' ಮತ್ತು 'ಅರಿಯುವಿಕೆ' ಈ ಎರಡು ರೀತಿಗಳೂ ಇವೆ. ಆದರೆ ಮಾನವನು ವ್ಯಕ್ತಿ ದೇವರನ್ನು ನಂಬಿಕೆಯ ರೀತಿಯಲ್ಲಿ ಮತ್ತು ತತ್ವ ದೇವರನ್ನು ಅರಿಯುವ ರೀತಿಯಲ್ಲಿ ಎಂದು ತಿಳಿದು ಕೊಂಡಿದ್ದನು! ಆದರೆ ನಿಜವಾಗಿಯೂ ನಂಬಿಕೆ ಎಂಬುವುದು ದೇವರ ಅಸ್ತಿತ್ವವನ್ನೇ ವಿರೋಧಿಸುವ ರೀತಿ ಮತ್ತು ಅದು ದೇವರನ್ನೇ ಸಂಶಯದಿಂದ ಭಜಿಸುವ ಕೆಳಮಟ್ಟದ ರೀತಿಯಾಗುವುದು ಎಂಬುವುದನ್ನು ಆತನು ಸ್ಪಷ್ಟವಾಗಿ ತಿಳಿದು ಕೊಂಡಿರಲಿಲ್ಲ ಅಷ್ಟೆ! ನಾನು ಮೊದಲೇ ತಿಳಿಸಿರುವಂತೆ 'ಅರಿಯುವ ರೀತಿ'ಯಲ್ಲಿ ಆ ಸೈತಾನನ ಮೋಸದ, ತಮ್ಮೊಳಗೆ ಹೊಡೆದಾಡಿಸುವ ಆ ಆಟ ನಡೆಯಲಾರದು. ಆದರೆ 'ನಂಬಿಕೆಯ ರೀತಿ'ಯು ಈ ಜಗತ್ತಿಗೆ ಹಲವು ಭಯಾನಕ ಹಿಂಸೆ ನೋವನ್ನು ತಂದಿದೆ. ಇನ್ನು, ಈ ಮೇಲ್ಮಟ್ಟದ, ದೇವರನ್ನು ಅರಿತು ಭಜಿಸುವ ರೀತಿಯು, ಅದು ಆ ಸೈತಾನನನ್ನು ಓಡಿಸಿ ಆ ದೇವರನ್ನು ಈ ಜಗತ್ತಿನಲ್ಲಿ ಪ್ರತಿಷ್ಠಾಪಿಸುವ ಆ ಒಂದು ದಿವ್ಯ ಮಾರ್ಗವಾಗಿಯೂ ನಮ್ಮ ಮುಂದೆ ಇರುವುದು. ಈ ನಂಬಿಕೆಗಳಿಂದ ಹಲವು ರೀತಿಯ ಅಪಾಯಗಳಿರುವ ಕಾರಣಕ್ಕಾಗಿ ಮಾತ್ರ ನಾನು ಅದನ್ನು ಇಷ್ಟೊಂದು ಒತ್ತಿ ಹೇಳುತ್ತಿರುವುದು ಎಂಬುವುದನ್ನು ಎಲ್ಲರೂ ಪ್ರತ್ಯೇಕವಾಗಿ ನೆನೆಪಿಸಿಕೊಳ್ಳಬೇಕಾಗಿದೆ.

# ನಂಬಿಕೆಯು ಅಜ್ಞಾನವಾಗಿದೆ

ಜ್ಞಾನವು ನಮಗೆ ಯಾವುದಾದರೂ ಅರಿವನ್ನು ಉಂಟುಮಾಡುವುದು. ಅದು 'ಇದೆ' ಎಂದು ಹೇಳಬಹುದು ಅಥವಾ 'ಇಲ್ಲ' ಎಂದೂ ಹೇಳಬಹುದು. ಈ ಎರಡೂ, ನಮಗೆ ಅರಿವಿನ ರೂಪದಲ್ಲಿ ಸ್ಪಷ್ಟವಾಗಿ ಸಿಗುವುದು. ಆದರೆ ನಂಬಿಕೆಯು, ಇದೆಯೋ ಕೇಳಿದರೆ 'ಗೊತ್ತಿಲ್ಲ' ಮತ್ತು ಇಲ್ಲವೋ ಎಂದು ಕೇಳಿದಾಗಲೂ ಅಲ್ಲೂ 'ಗೊತ್ತಿಲ್ಲ' ಎಂಬ ಸ್ಥಿತಿಯಲ್ಲಿರುವುದು. ಆದುದರಿಂದ ಇವು ಎರಡೂ ರೀತಿಯಲ್ಲೂ ನಮಗೆ ಏನನ್ನೂ ಗೊತ್ತು ಮಾಡುವುದಿಲ್ಲ. ಅಂದರೆ ಅರಿವನ್ನು ಉಂಟುಮಾಡುವುದಿಲ್ಲ. ಅರಿವನ್ನುಂಟುಮಾಡುವುದು ಮಾತ್ರ ಜ್ಞಾನವಾಗುವುದು. ಆದುದರಿಂದ ನಂಬಿಕೆಗಳು ಜ್ಞಾನವಾಗುವುದಿಲ್ಲ ಬದಲಿಗೆ ಅಜ್ಞಾನವಾಗುವವು. ಈ ಅರಿವನ್ನೇ ಉಂಟುಮಾಡದಿರುವುದರ ಮೂಲಕ ಆ ದೇವರನ್ನು ಹೇಗೆ ಕಾಣುತ್ತಾರೋ ಮತ್ತು ಈ ನಂಬಿಕೆಯ ರೀತಿ ಯಾವ ಕಾರಣಕ್ಕಾಗಿ ಎಲ್ಲಾ ಧರ್ಮಗಳಲ್ಲೂ ಒಂದೇ ರೀತಿಯಲ್ಲಿ ಸೇರಿಕೊಂಡಿದೆ ಎಂಬುವುದು ಅಚ್ಚರಿಯ ವಿಷಯವಾಗುವುದು! ಇದನ್ನು ಗಮನಿಸುವಾಗ, ಆ ಪ್ರಾಚೀನ ವಾಮಾಚಾರದ ಕೈವಾಡವು ಇದರ ಹಿಂದೆ ಇರುವುದು ಸ್ಪಷ್ಟವಾಗಿ ಗೋಚರಿಸುವುದು.

# ಸಾಮಾಜಿಕ ನ್ಯಾಯವೇ ಧರ್ಮದ ಮೊದಲ ಗುರಿ

ಸಜ್ಜನರನ್ನು ರಕ್ಷಿಸುವುದು ಮತ್ತು ದುಷ್ಟರನ್ನು ಶಿಕ್ಷಿಸುವುದು ಧರ್ಮ, ಎಂದು ಧರ್ಮ ಗ್ರಂಥಗಳು ಹೇಳುವವು.

ಇಲ್ಲಿ ಬಹಳ ಮುಖ್ಯ ವಿಚಾರ ಒಂದನ್ನು ನಾವು ತಿಳಿದಿರಬೇಕಾಗಿದೆ. ಸಜ್ಜನರನ್ನು ರಕ್ಷಿಸುವುದು ಅಥವಾ ಪ್ರೋತ್ಸಾಹಿಸುವುದು ಮತ್ತು ದುಷ್ಟರನ್ನು ಶಿಕ್ಷಿಸುವುದು, ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಮಾನದಂಡದ ಹಿನ್ನೆಲೆಯಲ್ಲೇ ನಡೆಯುವವು ಎಂದು ತಿಳಿಯಬೇಕಾಗಿದೆ. ಅಂದರೆ, [ಅಸತ್ಯ, ದ್ವೇಷ, ಹಿಂಸೆ ಮತ್ತು ಅನೈತಿಕತೆಗಳ ಹಿನ್ನೆಲೆಯ] ಮಾನವನ ಕೆಟ್ಟ ಸ್ವಭಾವಗಳ ವಿರುದ್ಧ ತಕ್ಕ ಶಿಕ್ಷೆಯನ್ನು ವಿಧಿಸುವುದು ಮತ್ತು [ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಹಿನ್ನೆಲೆಯ] ಉತ್ತಮ ಸ್ವಭಾವವನ್ನು ಪ್ರೋತ್ಸಾಹಿಸುವುದು ಇವು ಎರಡು ರೀತಿಯೂ ಈ ಒಂದು ಮಾನದಂಡದ ಹಿನ್ನೆಲೆಯಲ್ಲಿ ನಡೆಯುವುದು ಎಂದರ್ಥ. ಒಟ್ಟಿನಲ್ಲಿ, ಧರ್ಮವು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವುದು.

- ಧರ್ಮವು ನೈತಿಕತೆಯ ವಿಜ್ಞಾನವಾಗುವುದು, ಆದುದರಿಂದ ಯಾವುದೇ ಧರ್ಮ ಅಥವಾ ಪಂಥವಾದರೂ ಅದರ ವಿವರಣೆಯು ವೈಜ್ಞಾನಿಕವಾಗಿಯೇ ಇರಬೇಕು, ನಂಬಿಕೆ ಆಧಾರಿತವಾಗಿ ಅಲ್ಲ.
- ದೇವರು ಮತ್ತು ದೇವರಿಗೆ ಸಂಬಂಧಿಸಿದ ಆಚಾರಗಳೂ ಇಲ್ಲದ ಧರ್ಮಗಳು ಈ ಜಗತ್ತಿನಲ್ಲಿವೆ. ಮಾತ್ರವಲ್ಲದೆ, ದೇವರು ಮತ್ತು ಆಚಾರಗಳು ಎಲ್ಲಾ ಧರ್ಮದಲ್ಲೂ ಬೇರೆ ಬೇರೆ ಆಗಿರುವ ಅಂಶಗಳಾಗಿವೆ, ಆದುದರಿಂದ ಅವನ್ನು ಧರ್ಮದೊಂದಿಗೆ ಬರೇ ಸೇರಿಸಲ್ಪಟ್ಟ ವಿಚಾರವಾಗಿ, ಮತ್ತು ಮಾನವರ ಒಂದು ಆಯ್ಕೆಯಾಗಿ ಮಾತ್ರ ಕಾಣಬೇಕಷ್ಟೆ.
- ಅಂದರೆ, ಒಟ್ಟಿನಲ್ಲಿ, ಸಮಾಜದಲ್ಲಿ ಜನರು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯನ್ನು ಅಳವಡಿಸುವ ಮೂಲಕ ಇತರ ವ್ಯಕ್ತಿಗಳಿಗೆ ಹಾಗೂ ಸಮಾಜಕ್ಕೆ ಅಪಾಯಕಾರಿಗಳಾಗುವುದಿಲ್ಲ ಎಂಬ ಸತ್ಯವನ್ನೇ 'ಧರ್ಮ' ಎಂಬುವುದರಿಂದ ಜಗತ್ತು ಉದ್ದೇಶಿಸಿದೆ ಎನ್ನಬಹುದು.
- ಈ ಹಿನ್ನೆಲೆಯಲ್ಲಿ ಯಾರಿಗೂ ತಾನು ಅನೈತಿಕವಾಗಿ ನಡೆದುಕೊಳ್ಳುತ್ತಾ, ಧಾರ್ಮಿಕ ವ್ಯಕ್ತಿ ಎಂದು ಹೇಳಿಕೊಳ್ಳಲು ಸಾಧ್ಯವೇ ಇಲ್ಲವೆಂದಾಯಿತು.
- ಇಂದು, ಎಲ್ಲಿ ಹೋದರೂ ಆದರ್ಶಗಳನ್ನು ಅಥವಾ ಆದರ್ಶ ಜೀವನವನ್ನು ತೆಗಳುವವರೇ ಇರುವುದನ್ನು ಕಾಣುವೆವು. ಆದರೆ ನಿಜವಾಗಿಯೂ ಯಾರು ಆದರ್ಶಗಳನ್ನು ತೆಗಳುವರೋ ಅವರಿಗೆ ಧರ್ಮವೇ ಇಲ್ಲವಾಗುವುದು ಎಂಬುವುದನ್ನು ಅವರು ನೆನೆಯಬೇಕಾಗಿದೆ.
- ಸಮಾಜವು ಅಥವಾ ಸರಕಾರವು ಕಳ್ಳತನ, ಅನ್ಯಾಯ ಅನೈತಿಕತೆ ಇತ್ಯಾದಿಗಳನ್ನು ತಡೆಯಲು ಎಲ್ಲಾ ಸಮಾಜಗಳಲ್ಲೂ ಮಾಡಿದ ನಿಯಮಗಳು ಅದು ಧರ್ಮವಾಗುವುದು, ಅವು ನಂಬಿಕೆಗಳಲ್ಲ. ಈ ನಿಯಮಗಳೇ ಆದರ್ಶಗಳನ್ನು ಕಾಪಾಡುವ ಧರ್ಮವಾಗಿದೆ. ಆದುದರಿಂದ ಸಮಾಜದಲ್ಲಿ ನ್ಯಾಯ, ಶಾಂತಿಯನ್ನು ತರುವ ಈ ನಿಯಮಗಳು

ನಂಬಿಕೆಗಳು ಆಗುವುದಿಲ್ಲ, ಬದಲು ಅವುಗಳು ಸತ್ಯಗಳಾಗುವವು. ಅಂದರೆ, ಜನರು ಧರ್ಮವನ್ನು 'ನಂಬಿಕೆ' ಎಂದು, ಆಚಾರಗಳಿಗೆ ಸೀಮಿತಗೊಳಿಸಿ, ಅದನ್ನು ಅವರವರ ಮನ ಬಂದಂತೆ ನಡೆದುಕೊಳ್ಳಬಹುದಾದ ವಿಚಾರ ಎಂದು ತಿಳಿದುಕೊಂಡಿರುವುದು ಭಯಾನಕ ತಪ್ಪಾಗುವುದು ಎಂದು ಅರ್ಥ.

ಮತ್ತು ಆದರ್ಶಗಳನ್ನು ಅದು 'ವ್ಯಕ್ತಿಯ ದೃಷ್ಟಿಕೋನ' ಎಂದು ಹೇಳಿ, ತಾವು ಅದರಿಂದ ಜಾರಿಕೊಳ್ಳಲು ಪ್ರಯತ್ನಿಸುವುದೂ ಘೋರ ಧರ್ಮ ನಿಂದನೆಯಾಗುವುದು ಎಂಬುವುದೂ ಈಗ ಸ್ಪಷ್ಟವಾಗುವುದು.

# ವಿಜ್ಞಾನಕ್ಕೆ ಧರ್ಮದೊಳಗೆ ಸ್ಥಾನ

[ಈಗ ಮಾತನಾಡುತ್ತಿರುವುದು ಜ್ಞಾನದ ಬಗ್ಗೆ ಅಲ್ಲ, ಬದಲು ವಿಜ್ಞಾನದ ಬಗ್ಗೆ ಆಗಿದೆ.]

1. ವಿಜ್ಞಾನ ಎಂದರೆ ಅಲ್ಲಿ ಒಂದು ನಿಯಮ ಅಥವಾ ವ್ಯವಸ್ಥೆ ಇರುವುದು, ಅದು ತರ್ಕಬದ್ಧವಾಗಿ ಇರುವುದು. ಅಲ್ಲಿ ನಂಬಿಕೆ ಎಂಬ ಮಾತಿಗೂ ಅವಕಾಶವಿಲ್ಲ.
2. ಈ ಮೇಲಿನ ಕಾರಣದಿಂದಾಗಿ ಮಾತ್ರ ಜನರು ತಮ್ಮ ನಂಬಿಕೆಯ ಚಲಾವಣೆ ಪೂರ್ತಿ ನಿಂತು ಬಿಡುವುದೋ ಎಂಬ ಭಯದಿಂದ ಧರ್ಮದೊಳಗೆ ವಿಜ್ಞಾನವನ್ನು ತರಲು ಬಯಸದೆ ಇರುವುದು. ಯಾರಾದರೂ ತಮ್ಮ ಧರ್ಮವು ವೈಜ್ಞಾನಿಕ ಎಂದ ಕ್ಷಣದಿಂದ ಆತನು ತನ್ನ ಧರ್ಮದ ಎಲ್ಲಾ ನಂಬಿಕೆಗಳನ್ನೂ ತರ್ಕಬದ್ಧವಾಗಿ ವಿವರಿಸಬೇಕಾಗುತ್ತದೆ. ಆದರೆ ಅದಕ್ಕಾಗಿ ಕಷ್ಟಪಡಬಹುದೇ ಹೊರತು ಅದು ಸಾಧ್ಯವಿಲ್ಲ.
3. ಧರ್ಮದೊಳಗೆ ವೈಜ್ಞಾನಿಕ ರೀತಿ ಬೇಕು ಎಂಬಲ್ಲಿ, ನೈತಿಕವಾಗಿ ವೈಜ್ಞಾನಿಕವಾಗಿರಬೇಕು ಎಂಬುವುದು ಮುಖ್ಯವಾಗಿದೆ. ಆದಕ್ಕೆ ಮಾನವನ ಜೀವನವು ಚೆನ್ನಾಗುವಂತೆ ಮಾಡುವ ಆ ನೈತಿಕ ಆದರ್ಶಗಳ ಅನಿವಾರ್ಯತೆಯನ್ನು ವೈಜ್ಞಾನಿಕವಾಗಿ ವಿವರಿಸಬೇಕಾಗುವುದು. ಆದರೆ ಹೆಚ್ಚಿನ ಧರ್ಮಗಳಲ್ಲೂ ಈ ನೈತಿಕ ಭಾಗವು ಜಾತೀ ಶೋಷಣೆ, ಧರ್ಮಾಂಧತೆ, ಇತ್ಯಾದಿ ಭಯಾನಕ ಅಮಾನವೀಯ ವಿವರಣೆಯೊಂದಿಗಿರುವುದೇ ಅಚ್ಚರಿಯನ್ನುಂಟು ಮಾಡುವ ವಿಷಯವಾಗಿದೆ!! ಅಲ್ಲಿ ವೈಜ್ಞಾನಿಕ ರೀತಿಯಲ್ಲದ ನಂಬಿಕೆಗಳನ್ನು ಆ ವಿಕೃತ ವಿವರಣೆಗಳಿಗಾಗಿ ಉಪಯೋಗಿಸುವರು.
4. ಮನೋ ವೈಜ್ಞಾನಿಕ ರೀತಿಯಲ್ಲಿ ಒಂದು ಪ್ರತ್ಯೇಕ ರೀತಿಯಾದ ತಂತ್ರ, ಮಂತ್ರ, ಯಂತ್ರಗಳನ್ನು ಅಥವಾ ಇನ್ನಾವ ವಿಧಾನವನ್ನೂ ಧರ್ಮದೊಳಗೆ ಬಳಸುವುದು ರೂಢಿಯಾಗಿದೆ. ಆದರೆ ಈ ಮನೋ ವಿಜ್ಞಾನದ ಲಾಭವನ್ನು ಪಾಪಿಗಳು, ದುಷ್ಟರೂ ನೀಚ ಕೆಲಸಕ್ಕೆ ದುರುಪಯೋಗ ಮಾಡುವುದನ್ನು ತಡೆಯಲು ಸಾಧ್ಯವಾಗಲಾರದು. ಯಾಕೆಂದರೆ ಅದು ಒಂದು ರೀತಿಯ ಮನೋ ವಿಜ್ಞಾನ, ಅದನ್ನು ಯಾರಿಗೂ ಬಳಸಬಹುದು! ಹೀಗಿರುವಾಗ, ಒಂದು ಮುಖ್ಯ ವಿಚಾರವನ್ನು ನಾವು ಗಮನದಲ್ಲಿಡಬೇಕಾಗುವುದು. ಧರ್ಮದಲ್ಲಿ ವೈಜ್ಞಾನಿಕ ರೀತಿ ಇದ್ದಲ್ಲಿ ಮಾತ್ರ ಸಾಲದು ಆದರೆ ಅದು ಸಮಾಜದಲ್ಲಿ ಸತ್ಯ, ಪ್ರೀತಿ, ನೀತಿಯ ಬೆಳವಣಿಗೆಗೆ ಸಹಾಯಕವಾಗಿ ಇರಲೇಬೇಕು ಎಂಬುವುದೇ ಆ ಮುಖ್ಯ ವಿಚಾರವಾಗಿರುವುದು. ಒಟ್ಟಿನಲ್ಲಿ, ಧರ್ಮ. ಪಂಥಗಳಲ್ಲಿನ ಎಲ್ಲಾ ವಿವರಣೆಗಳನ್ನೂ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ ಹಿನ್ನೆಲೆಯ ಆದರ್ಶಗಳೆಂದು, ಆ ವೈಜ್ಞಾನಿಕ ರೀತಿಯಲ್ಲಿ ವಿವರಿಸಲ್ಪಟ್ಟರೆ ಮಾತ್ರ ಧರ್ಮ, ಪಂಥಗಳು ಆ ಪ್ರಾಚೀನ ವಾಮಾಚಾರದ ಎಲ್ಲಾ ಅಪಾಯಗಳನ್ನೂ ಮೀರಿ, ಪೂರ್ಣ ಮತ್ತು ಪವಿತ್ರವಾಗಲು ಸಾಧ್ಯವಾಗುವುದು.

# ಮಹಾತ್ಮರ ರೀತಿ

ನಂಬಿಕೆಯ ಆರಾಧನೆಗಳಲ್ಲಿ ಮತ್ತು ಧಾರ್ಮಿಕ ಅನುಷ್ಠಾನಗಳಲ್ಲಿ ಶ್ರೇಷ್ಠ ರೀತಿಯು ಯಾವುದು ಎಂದು ಕೇಳಿದರೆ, ಸಾಮಾನ್ಯವಾಗಿ ಎಲ್ಲರೂ ಇದಕ್ಕೆ "ನಮ್ಮದು" ಎಂದು ಉತ್ತರ ಕೊಡುವರು. ಹೇಗೆ ಎಂದು ಕೇಳಿದರೆ ಅದಕ್ಕೆ ಎಲ್ಲಾ ಧರ್ಮ, ಪಂಥಗಳ ಜನರೂ "ಅದು ನಮ್ಮ ನಮ್ಮ ನಂಬಿಕೆ" ಎಂದು ಹೇಳುವರು. ಮುಂದಿನ ಪ್ರಶ್ನೆ ನಿಂತು ಹೋಗುವುದು. ಈಗ ಮಹಾತ್ಮರ ಧಾರ್ಮಿಕ ರೀತಿಯನ್ನು ನೋಡೋಣ.

ಸರಿಯಾಗಿ ನೋಡಿರಿ, ಜಗತ್ತಿನ ಹೆಚ್ಚಿನ ಮಾನವನೂ ದೇವರ ಮತ್ತು ಧರ್ಮದ ಹೆಸರಲ್ಲಿ ಸ್ವಾರ್ಥಿ ಮಾತ್ರ ಆಗಿದ್ದಾನೆ ಅಷ್ಟೆ. ನಿಜವಾದ ದೇವಭಕ್ತ ಮತ್ತು ಧರ್ಮವನ್ನು ಅನುಷ್ಠಿಸುವವನನ್ನು ಅತ್ಯಂತ ಅಪರೂಪವಾಗಿ ಮಾತ್ರ ಧರ್ಮ, ಪಂಥಗಳಲ್ಲಿ ಕಾಣಲು ಸಾಧ್ಯವಾಗುವುದು. ಜಗತ್ತಿನ ದೇವರ ಭಕ್ತರಲ್ಲಿ ಹೆಚ್ಚಿನವರೂ ದೇವರಿಂದ ಅನುಗ್ರಹ ಬರುವುದೆಂಬ ನಂಬಿಕೆಯಿಂದ ಮಾತ್ರ ಆ ದೇವರನ್ನು ಪ್ರಾರ್ಥಿಸುವವರು, ಅನುಗ್ರಹ ಇಲ್ಲದ್ದಲ್ಲಿ ಜನರು ಆ ದೇವರ ಕಡೆಗೆ ಗಮನವೇ ಕೊಡುತ್ತಿರಲಿಲ್ಲ!! ಇನ್ನು, ಜನರು, ಸ್ವರ್ಗ, ನರಕ ಇತ್ಯಾದಿಗಳು ಇವೆ ಎಂಬಲ್ಲಿ ಮಾತ್ರ ಒಳಿತಿನ ದಾರಿಯಲ್ಲಿ ಇರಲು ತಯಾರಾಗುವರು, ಅದಿಲ್ಲವಾದರೆ "ಯಾಕೆ ಒಳಿತಿನ ದಾರಿಯಲ್ಲಿರಬೇಕು" ಎನ್ನುವರು! ಅಂತೂ ಇಂತೂ ಹೆಚ್ಚಿನವರೂ ಲಾಭಕ್ಕೆ ಬೇಕಾಗಿ ಮಾತ್ರ ಧಾರ್ಮಿಕರಾಗುವರು, ಅದಿಲ್ಲವಾದರೆ ಭಕ್ತರಾಗುವುದಿಲ್ಲ ಮತ್ತು ಧಾರ್ಮಿಕರಾಗುವುದಿಲ್ಲ!!!

ಆದರೆ ಒಂದು ಜನ ವಿಭಾಗ ಈ ಜಗತ್ತಿನಲ್ಲಿ ಆದಿಯಿಂದಲೇ ಇರುವರು, ಅವರು ಸೃಷ್ಟಿಕರ್ತನಿಲ್ಲ ಎಂದು ನೀವು ಹೇಳಿದ ಕೂಡಲೇ ಕೈತೊಳೆಯುವವರಲ್ಲ, ಅದೇ ರೀತಿ ಮೋಕ್ಷ ಎಂಬುವುದು ನಿಜವಾಗಿಯೂ ಇಲ್ಲ ಎಂದರೂ ಅವರು ಕೈತೊಳೆಯಲಾರರು. ಅವರ ಧಾರ್ಮಿಕ ಜೀವನವು ಪೂರ್ತಿಯಾಗಿಯೂ ಸ್ವಾರ್ಥರಹಿತವಾಗಿದೆ. ಅವರು, ತಮ್ಮ ದೇವರು ಎಂದಿಗೂ ಇಲ್ಲವಾಗುವುದಿಲ್ಲ ಎಂದು ಧೈರ್ಯವಾಗಿ ಹೇಳುವರು. ಯಾಕೆಂದರೆ, ಆ ದೇವರು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂಬ ಅವರದೇ ಸ್ವಭಾವದಲ್ಲಿರುವುದನ್ನು ಅವರು ನಮಗೆ ತಿಳಿಸುವರು, ಮತ್ತು ಅಲ್ಲಿಂದ ಆತನು ಹೇಗೆ ಹೋಗುವನು ಎಂದೂ ಕೇಳುವರು. ಅದೇ ರೀತಿ, ಹಿಂಸೆ, ಅನೈತಿಕತೆ, ಆಸೆಗಳ ಕಪಿಮುಷ್ಠಿ, ಇತ್ಯಾದಿಗಳಿಂದ ಬಿಡುಗಡೆಯಾಗಿ ಅತ್ಯಂತ ಅನಂದದ ಶಾಂತಿಯ ಆ ಜೀವನವನ್ನು ಪಡೆಯುವುದೇ ಜನರಿಗೆ ಈ ಭೂಮಿಯಲ್ಲಿ ಜೀವಿಸುತ್ತಿರುವಾಗಲೇ ಅನಿವಾರ್ಯವಾಗುವ ಮೋಕ್ಷವಾಗಿದೆ ಎಂದು ಹೇಳುವರು. ಮಾತ್ರವಲ್ಲ, ಅದನ್ನು ಅವರು ವ್ಯಯಕ್ತಿಕವಾಗಿಯೂ ಹಾಗೂ ಕುಟುಂಬದೊಳಗಿದ್ದು ಸಾಧಿಸಿ ಆನಂದಿಸುವರು. ಇಂಥವರು ತಮಗೆ ತಾವೇ ಬೆಳಕಾಗುವ ಜೊತೆಗೆ ಇತರರಿಗೂ ಆನಂದದ ದಾರಿ ದೀಪವಾಗುವರು. ಇಂಥವರ ಧಾರ್ಮಿಕ ಜೀವನ ಮತ್ತು ಇವರ ಆ ದೇವಭಕ್ತಿಯು ನಿಜವಾಗಿಯೂ ಸರ್ವಶ್ರೇಷ್ಠ ಆಗುವುದು. ಇಂಥ ಜನರು ಯಾವ ಧರ್ಮದಲ್ಲಿದ್ದರೂ, ಪಂಥದಲ್ಲಿದ್ದರೂ ಅವರು ಹೊಳೆವ ರತ್ನಗಳೆಂದೇ ಹೇಳಬೇಕಾಗುವುದು. ಆ ಎಲ್ಲಾ ಮಹಾತ್ಮರುಗಳಿಗೂ ನನ್ನ ನಮನಗಳು.

# ಸಾಮಾಜಿಕ ಜೀವನದಲ್ಲಿ ನಂಬಿಕೆಯ ಪಾತ್ರ

ಸಾಮಾಜಿಕ ಜೀವನದಲ್ಲಿ ನಂಬಿಕೆಯು ದೊಡ್ಡ ಪಾತ್ರವಹಿಸುವುದೆಂದು ಹೆಚ್ಚಿನವರೂ ತಿಳಿದುಕೊಂಡಿರುವರು, ಆದರೆ, ಅದು ಯಾವ ಪಾತ್ರವೂ ವಹಿಸಿಲ್ಲ!! ಸಾಮಾಜಿಕ ಜೀವನದಲ್ಲಿ, ಪೊಲೀಸ್ ಅಧಿಕಾರಿಗಳಾಗಲೀ, ನ್ಯಾಯಾಧೀಶರಾಗಲೀ, ಯಾರ ಮಾತನ್ನು ನಂಬಿಕೆಯ ಹಿನ್ನೆಲೆಯಲ್ಲಿ ಸ್ವೀಕರಿಸುವುದಿಲ್ಲ. ಅವರು ತನಿಕೆ ಮತ್ತು ಸಾಕ್ಷ್ಯಾಧಾರಗಳ ಹಿನ್ನೆಲೆಯಲ್ಲಿ ಮಾತ್ರ ನಿಗಮನಕ್ಕೆ ಬರುವರು. ಇದು ಸಮಾಜದ ತೊಂಬತ್ತು ಶೇಕಡ ಭಾಗವನ್ನೂ ಹಬ್ಬಿರುವುದು. ಇನ್ನು ಯಾರಿಗೂ ತಿಳಿಯದ ಇತರ ಕೆಲವು ವಿಚಾರಗಳ ಕುರಿತು ಹೇಳುವುದಾದರೆ, ಅವುಗಳು ನಂಬಿಕೆಗಳಲ್ಲ, ಅವು ಸಾಧ್ಯತೆಗಳಾಗುವವು. ಇನ್ನು, ನಂಬಿಕೆಯಿಂದಲೇ ಜಗತ್ತಿನಲ್ಲಿ ಪ್ರೀತಿಯಿಂದಿರಲು ಸಾಧ್ಯವೆಂಬ ವಾದಕ್ಕೆ ಅರ್ಥವೇ ಇಲ್ಲ ಎಂದು ಹೇಳಬಹುದು. ಕಾರಣ, ಪ್ರೀತಿಯ ಮೂಲ ತ್ಯಾಗ ಭಾವನೆಯಾಗುವುದು. ಅದು ನಂಬಿಕೆಯಲ್ಲ. ಕೆಳಮಟ್ಟದ ಸ್ವಾರ್ಥ ಪ್ರೀತಿಯಲ್ಲಾದರೂ ತನಗೆ ಲಾಭ ಇಲ್ಲವಾದಾಗ ಪ್ರೀತಿಯೂ ಕಡಿಮೆಯಾಗುವುದನ್ನು ನಾವು ಕಾಣುತ್ತೇವೆ. ಅದೇ ರೀತಿ ತನ್ನ ಅಹಂಕಾರಕ್ಕೆ ದಕ್ಕೆಯಾಗುವಾಗಲೂ ಪ್ರೀತಿ ಹೊರಟು ಹೋಗಿ ದ್ವೇಷವು ಉಂಟಾಗುವುದನ್ನು ನಾವು ಕಾಣುತ್ತೇವೆ. ಇಲ್ಲೆಲ್ಲಾ ನಂಬಿ ಪ್ರೀತಿಯಿಂದಿರುವುದು ಕಾಣಿಸುವುದಿಲ್ಲ. ಆದುದರಿಂದ ಪ್ರೀತಿ ಮತ್ತು ನಂಬಿಕೆಗಳಿಗೆ ತಮ್ಮೊಳಗೆ ಯಾವ ಸಂಬಂಧವೂ ಇಲ್ಲ ಎಂಬುವುದಾಗಿ ಸ್ಪಷ್ಟವಾಗುವುದು. ನಂಬಿಕೆಯಿಂದಾಗಿ ಪ್ರೀತಿ ಹುಟ್ಟಿಕೊಂಡು, ಅದು ಸಮಾಜದಲ್ಲಿ ಎಲ್ಲರನ್ನೂ ಸಂತೋಷದಿಂದಿರುವಂತೆ ಮಾಡುವುದು ಎಂದು ಹೇಳುವುದು ತಪ್ಪು ಎಂದು ಇದರಿಂದ ಸ್ಪಷ್ಟವಾಗಿ ತಿಳಿದುಬರುವುದು.

# ಧಾರ್ಮಿಕ ನಂಬಿಕೆ

ಧಾರ್ಮಿಕ ಅಥವಾ ಆಧ್ಯಾತ್ಮಿಕ ಎಂದ ಕೂಡಲೆ ಅಲ್ಲಿ 'ನಂಬಿಕೆ' ಎಂಬ ಶಬ್ದಕ್ಕೆ ಬೇರೆ ಅರ್ಥ ಬರುವುದಿಲ್ಲ. ಇದರ ಬಗ್ಗೆ ಮೊದಲೇ ಹೇಳಿದೆಯಾದರೂ ಇಲ್ಲಿ ಇನ್ನೂ ಸ್ವಲ್ಪ ವಿವರಣೆಯ ಮೂಲಕ ಸ್ಪಷ್ಟಪಡಿಸಬೇಕಾಗಿದೆ. ಸತ್ಯ ಗೊತ್ತಿಲ್ಲದಿರುವ ಸ್ಥಿತಿಯಲ್ಲಿ ನಂಬಿಕೆಯು ಹುಟ್ಟಿಕೊಳ್ಳುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಂಬಿಕೆಯು ಸಂಶಯದ ಸ್ಥಿತಿಯಲ್ಲಿದೆ ಎಂದು ತಿಳಿಯಬಹುದು. ಸತ್ಯ ಸ್ಪಷ್ಟವಾದಾಗ ನಂಬಿಕೆ ಹೊರಟುಹೋಗುವುದು. ಮೊದಲೇ ವಿವರಿಸಿರುವಂತೆ ಸೂರ್ಯನು ತಲೆ ಮೇಲಿರುವಾಗ 'ನಾನು ಆ ಸೂರ್ಯನನ್ನು ನಂಬುತ್ತೇನೆ' ಎಂದು ಕಣ್ಣಿದ್ದವರು ಯಾರೂ ಹೇಳುವುದಿಲ್ಲ. ಅದೇ ರೀತಿ ಸತ್ಯ ತಿಳಿದಿರುವಾಗ ಯಾರೂ ನಂಬಿಕೆಯೆಂಬ ಪದವನ್ನೇ ಬಳಸುವುದಿಲ್ಲ. ಹಾಗೆ ನೋಡುವಾಗ ದೇವರನ್ನು ನಂಬುವುದು ಎಂದರೆ ದೇವರ ಇರುವಿಕೆಯನ್ನು, ಅದು ಸತ್ಯ ಎಂದು ಹೇಳಿದಂತೆ ಆಗುವುದಿಲ್ಲ, ಸಂಶಯದಿಂದ ನೋಡಿದಂತಾಗುವುದು. ಇದು ಸರಿಯಾದ ರೀತಿಯೇ? ದೇವರನ್ನು ಜಗತ್ತಿನ ಸರ್ವರೂ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂದು ಸಂಶಯವಿಲ್ಲದೆ ಅರಿತುಕೊಳ್ಳುವ ರೀತಿಯಲ್ಲವೆ ನಿಜವಾದ ರೀತಿಯಾಗಿರಬೇಕಾಗಿರುವುದು? ಈ ರೀತಿಯ ಅರಿತುಕೊಳ್ಳುವಿಕೆಯಲ್ಲೇ, ನಮಗೆ ಆತ್ಮೀಯ ಪ್ರೀತಿಯ ಆ ಕರುಣಾಮಯ ದೇವರು, ಆ ಸತ್ಯಸಂಧ ಭಕ್ತಿ, ಮತ್ತು ಸತ್ಯವಾದ ಆ ಧರ್ಮ, ಇವುಗಳು ಅತ್ಯಂತ ಪರಿಶುದ್ಧ ರೂಪದಲ್ಲಿ ದೊರಕುವುದಿಲ್ಲವೇ? ಇನ್ನು, ಆ ದೇವರ ಹೆಸರಲ್ಲಿ ತಮ್ಮೊಳಗೆ ವಿರೋಧಿಸುವ ನಂಬಿಕೆಗಳ ಮತ್ತು ಆಚಾರಗಳ ಹಿನ್ನೆಲೆಯಲ್ಲಿ ಧರ್ಮವನ್ನು ವಿವರಿಸುವ ಅಗತ್ಯವಿದೆಯೇ? ಈಗ, ನಂಬಿಕೆಗಳು ಇದುವರೆಗೂ ನಮಗೆ ಏನಾದರೂ ಒಳಿತನ್ನುಂಟುಮಾಡಿರುವುದೇ ಎಂದು ನೋಡಿದಾಗ ಅದರ ಉತ್ತರ ಅದು ಸಮಾಜಕ್ಕೆ ಒಳಿತನ್ನುಂಟುಮಾಡುವಲ್ಲಿ ಏನೂ ಮಾಡಿಲ್ಲ ಆದರೆ ಅದನ್ನು ಒಡೆಯುವಲ್ಲಿ ಮತ್ತು ತಮ್ಮ ತಮ್ಮೊಳಗೆ ಹಿಂಸಿಸುವಲ್ಲಿ ಕೆಲಸ ಮಾಡಿದೆ ಎಂದಾಗುವುದು. ಇದು ಎಲ್ಲರಿಗೂ ತಿಳಿದಿರುವ ಸತ್ಯವೂ ಆಗಿರುವುದು. ಶಾಂತಿಗಾಗಿ ಹುಟ್ಟಿಕೊಂಡಿರುವ ಈ ನಂಬಿಕೆಯ ಧರ್ಮ, ಪಂಥಗಳು ಸಾವಿರಾರು ವರುಷಗಳ ಹಿಂದಿನಿಂದಲೇ ಭೀಕರ ಧರ್ಮಾಂಧತೆಯ ಯುದ್ಧ, ಹಿಂಸಾಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವು. ಇತರ ಯುದ್ಧಗಳಿಗಿಂತಲೂ ಭಿನ್ನವಾಗಿ ಈ ನಂಬಿಕೆಯ ಧರ್ಮಾಂಧತೆಯ ಭ್ರಮೆಯು, ಸಣ್ಣ, ಪುಟ್ಟ ಮಕ್ಕಳನ್ನೂ ಬಿಡದೆ, ಹೆಂಗಸರು ವೃದ್ಧೆಯರೆಂದೂ ನೋಡದೆ ಎಲ್ಲರನ್ನೂ ಕೊಂದು ಹಾಕಿದವು. ಎಷ್ಟೋ ತಾಯಂದಿರು ಅತ್ಯಾಚಾರಕ್ಕೆ ಬಲಿಯಾಗಿ ಹೋದರು, ಆದರೂ ಕರುಣೆಯ ದೇವರೆಂದು ತಾವು ಹಾಡಿ ಹೊಗಳುವ ಈ ನಂಬಿಕೆಗಳ ಧರ್ಮ, ಪಂಥಗಳನ್ನು ಅನುಸರಿಸುವ ಮನುಷ್ಯ ಜೀವಿಗಳಿಗೆ ಸ್ವಲ್ಪವೂ ಕರುಣೆ ಬರಲಿಲ್ಲ, ಬದಲು ಕ್ರೌರ್ಯದ ಅಟ್ಟಹಾಸ ಮಾಡಿದವು! ಇದೇ ರೀತಿ ಇನ್ನೆಷ್ಟೋ ನಂಬಿಕೆಗಳು ಸಮಾಜವನ್ನು ನುಚ್ಚುನೂರು ಮಾಡಿವೆ! ಆದರೂ ನಂಬಿಕೆಯ ಸ್ವಾರ್ಥಿ ಜನಗಳು ಇನ್ನೂ ಏನನ್ನು ಹೇಳುತ್ತಿರುವರು ಎಂದು ಆಲಿಸಿರಿ, ಅವರು ಮತ್ತೂ ಹೇಳುವುದು ಅದನ್ನೇ, "ದೇವರು,ಧರ್ಮಗಳು ಅವರವರ ನಂಬಿಕೆಗಳಿಗೆ ಬಿಟ್ಟ ವಿಚಾರ ಮತ್ತು ಆ ನಂಬಿಕೆಗಳಿಂದ ಮಾತ್ರ ದೇವರನ್ನು ಸೇರಲು ಮತ್ತು ಧಾರ್ಮಿಕ ಜೀವನವನ್ನು ನಡೆಸಲು ಸಾಧ್ಯ"

ಎಂದಾಗಿದೆ!! ನಂಬಿಕೆಯ ನಿಜವಾದ ಅರ್ಥ "ಸಂಶಯ" ಎಂಬ ಹಿನ್ನೆಲೆಯಲ್ಲಿ ಅವರ ಅದೇ ವಾಕ್ಯವನ್ನು ಇನ್ನೊಮ್ಮೆ ಓದುವಾಗ ಅಚ್ಚರಿಯಾಗುವುದು!

ಆದರೆ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೇ ದೇವರು ಮತ್ತು ಧರ್ಮ ಎಂದು ಅರಿತುಕೊಳ್ಳುವ ವಿಧಾನವನ್ನು ಈ ಜಗತ್ತಿನ ಎಲ್ಲರೂ ಅನುಸರಿಸುತ್ತಾ ಬಂದಿದ್ದರೆ, ಎಂದೋ ಈ ಭೂಮಿ ಶಾಂತಿಯ ಸಾಗರದಲ್ಲಿ ತೇಲಾಡುತ್ತಿತ್ತು. ಆ ಜಾತೀ ಶೋಷಣೆ, ಧರ್ಮಾಂಧರ ರಕ್ತಪಾತಗಳು ಉಂಟಾಗುತ್ತಿರಲಿಲ್ಲ. ಮಾತ್ರವಲ್ಲ, "ಧರ್ಮ[ಶಾಂತಿ] ಸ್ಥಾಪನೆ' ಎಂಬ ಅದರ ಆ ಮುಖ್ಯ ಗುರಿಯನ್ನು, ಆದಿಕಾಲದಲ್ಲೇ, ಜನಸಾಮಾನ್ಯರಿಂದಲೇ, ಶಾಶ್ವತವಾಗಿ, ಈ ಧರೆಯಲ್ಲಿ ನಿರ್ವಹಿಸಿ ಆಗುತ್ತಿತ್ತು!

# ಕಾಲ ಮತ್ತು ನಂಬಿಕೆ

ಸಾವಿರಾರು ವರುಷಗಳ ಹಿಂದೆ ಒಂದು ಊರಲ್ಲಿ ಒಬ್ಬ ರಾಜ ತನ್ನ ಖಜಾನೆಯನ್ನು ಖಾಲಿ ಮಾಡಿದನಂತೆ. ಆದರೆ ಇದು ಪ್ರಜೆಗಳಿಗೆ ತಿಳಿದರೆ ತನಗೆ ತೊಂದರೆಯಾಗಬಹುದು ಎಂದು ಅದಕ್ಕೆ ಒಂದು ಉಪಾಯ ಹೂಡಿದನಂತೆ. ತನ್ನ ಖಜಾನೆಯಿಂದ ತುಂಬಾ ಚಿನ್ನಾಭರಣವನ್ನು ಒಂದು ದೊಡ್ಡ ಪೆಟ್ಟಿಗೆಯಲ್ಲಿ ತುಂಬಿಸಿ ಅದನ್ನು ನಿಧಿಯೆಂದು ಹೊಂಡದಲ್ಲಿ ಹೂತು ಹಾಕಿ ಅದರ ಮೇಲೆ ಒಂದು ಚಿಕ್ಕ ಮಂಟಪ ಕಟ್ಟಿ ಅದರಲ್ಲಿ ಒಂದು ಶಾಸನ ಬರೆದು ಹಾಕಿದನಂತೆ, 'ಈ ರಾಜ್ಯ ಅತ್ಯಂತ ಕಷ್ಟಕ್ಕೆ ಸಿಲುಕಿದಾಗ ಮಾತ್ರ ಈ ನಿಧಿಯನ್ನು ಹೊರಗೆ ತೆಗೆಯಬೇಕು' ಎಂದಾಗಿತ್ತು ಆ ಶಾಸನ. ಸಾವಿರಾರು ವರುಷಗಳು ಅದಕ್ಕೆ ನಿಧಿಯೆಂದು ವಿಶೇಷ ಪೂಜೆ ಸಹಿತ ಗೌರವಿಸುತ್ತಾ ಆ ಊರ ಜನರು ಬಂದರು. ಸಾವಿರಾರು ವರುಷಗಳ ನಂತರ ಒಮ್ಮೆ ಆ ಊರಿಗೆ ತುಂಬಾ ಕಷ್ಟಕಾಲ ಎದುರಾಯಿತು. ಆಗ ಆ ಊರ ಜನರು ನಿಧಿಯನ್ನು ತೆಗೆಯಲು ಒತ್ತಾಯಿಸಿದರು. ಅದರಂತೆ ನಿಧಿಯ ಪೆಟ್ಟಿಗೆಯನ್ನು ಹೊರತೆಗೆಯಲಾಯಿತು. ಮತ್ತು ಪೆಟ್ಟಿಗೆಯನ್ನು ತೆರೆಯಲಾಯಿತು. ಆದರೆ ಪೆಟ್ಟಿಗೆಯೊಳಗೆ ಚಿನ್ನವಿರಲಿಲ್ಲ. ಅದರೊಳಗೆ ಇದ್ದುದು ಶಿಲೆಕಲ್ಲುಗಳ ತುಂಡುಗಳಾಗಿದ್ದವು! ಆಗಲೇ ಜನರಿಗೆ ಆ ರಾಜನ ಮೋಸ ತಿಳಿಯುವುದು.

ಸಾವಿರಾರು ವರುಷಗಳು ಕಲ್ಲನ್ನು ಚಿನ್ನವೆಂದು ಕೋಟಿ ಕೋಟಿ ಜನರು ನಂಬಿದರೂ ಆ ಕಲ್ಲು ಚಿನ್ನವಾಗಿಲ್ಲ. ಅಂದರೆ, ಸಾವಿರಾರು ವರುಷಗಳ ನಂಬಿಕೆಗಳಿಗೂ, ಇರುವ ಸತ್ಯವನ್ನು ಬದಲಾಯಿಸಲು ಸಾಧ್ಯವಾಗದು ಎಂದು ಇದರಿಂದ ತಿಳಿದುಕೊಳ್ಳಬಹುದು. ಪ್ರಾಚೀನ ಕಾಲದಲ್ಲೇ ಒಂದು ಅಸತ್ಯವು ಸತ್ಯವೆಂದು ನಂಬಿಕೆಯೊಳಗೆ ಸೇರಿಕೊಂಡರೆ, ಈ ನಂಬಿಕೆ ಎಂಬ ಬಲಾಢ್ಯ ಹಡಗು ಅದನ್ನು ಎಂದಿಗೂ ಮತ್ತು ಯಾರಿಗೂ ಸರಿ ಪಡಿಸಲು ಬಿಡದೆ, ಈ ಯುಗಾಂತ್ಯದವರೆಗೂ ಕೊಂಡೊಯ್ಯುವುದು!! ಈ ಕಾರಣದಿಂದಾಗಿ ಮಾತ್ರ ಈ ಜಗತ್ತಲ್ಲಿ ರಕ್ತಪಾತವಾಗುತ್ತಿರುವುದು. ಈ ರೀತಿಯಲ್ಲಿ ನಂಬಿಕೆಗಳು ಇರುವಷ್ಟು ಕಾಲವು ಈ ರಕ್ತಪಾತದ ಅಪಾಯವೂ ಇದ್ದೇ ಇರುವುದು.

ಈ ನಿಷ್ಠೆಯ ನಂಬಿಕೆಯ ಕಾರಣದಿಂದಾಗಿಯೇ ಜಗತ್ತಿನಲ್ಲಿ ಸೂಕ್ಷ್ಮ ಲೋಕದ ರಹಸ್ಯ ವಲಯಗಳಲ್ಲಿನ ಅತಿ ಪ್ರಾಚೀನವಾದ ಆ ವಾಮಾಚಾರದ ಮೋಸವು ಹೊರಬರಲು ಸಾವಿರಗಟ್ಟಲೆ ವರುಷಗಳು ಬೇಕಾಗಿ ಬಂದಿರುವುದು, ಮತ್ತು ಇದು ಒಂದು ದುರಂತವೆಂದೇ ಹೇಳಬೇಕು. ಈ ಪ್ರಾಚೀನ ವಾಮಾಚಾರದ ರಹಸ್ಯಗಳು ಬಹಳ ಹಿಂದೆಯೇ ಬಯಲಾಗಿರುತ್ತಿದ್ದರೆ ಮಾನವನು ತಮ್ಮೊಳಗೆ ಹೊಡೆದಾಡಿ ಸಾಯಲು ಕಾರಣವಾಗುವ ಆ ಕ್ರೌರ್ಯವು ಬೆಳೆದು ಬರುತ್ತಿರಲಿಲ್ಲ. ಅದೇ ರೀತಿ, ನೈತಿಕ ಜೀವನ ಮಾತ್ರ ಜನರು ಬಯಸುತ್ತಿದ್ದರೆಂಬುವುದರಲ್ಲಿ ಸಂಶಯವಿಲ್ಲ. ಆ ಪ್ರಾಚೀನ ವಾಮಾಚಾರದ ಸುಲಭ ಅಸ್ತ್ರವಾದ ನಂಬಿಕೆಯಿಂದ ಜನರನ್ನು ಇಂದೂ ಅವುಗಳು ಆ ರಾಜನಂತೆ ಮೋಸ ಮಾಡುತ್ತಿವೆ. ಇದೇ ಮೋಸವನ್ನು ಮುಂದುವರಿಸುತ್ತಾ ಕೊನೆಯ ಆ ದೊಡ್ಡ ಹಿಂಸಾಕೃತ್ಯಗಳಿಗೂ ಅವು ಜನರನ್ನು ತಯಾರು ಮಾಡುತ್ತಿವೆ!

ಸತ್ಯವು ಎಂದಿಗೂ ನಮ್ಮನ್ನು ರಕ್ಷಿಸುವುದು. ಆದರೆ ನಂಬಿಕೆಯು, ಸತ್ಯವೆಂಬ ಆ ನಮ್ಮ ರಕ್ಷಕನನ್ನು, ಎಂದೆಂದಿಗಾಗಿ ನಮ್ಮಿಂದ ದೂರ ಮಾಡುವುದು!

# ದೇವರ ಪರೀಕ್ಷೆ-[1]

ಪುರಾಣಗಳು, ತಮಗೆ ಉತ್ತರಕೊಡಲು ಸಾಧ್ಯವಾಗದಾಗ ಎಲ್ಲವೂ 'ದೇವರ ಪರೀಕ್ಷೆ' ಅಥವಾ 'ಲೀಲೆ' ಎಂಬಲ್ಲಿಗೆ ಬಂದು ನಿಲ್ಲುವವು. ದೇವರು ಎಂದರೆ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ ಎಂದು, ಕೆಲವು ಕಡೆ, ಪುರಾಣಗಳೇ ವಿವರಿಸುವಾಗ, ಆ ದೇವರು ಮಾನವನಿಗೆ ಕೊಡುವ ಭಯಾನಕ ಪರೀಕ್ಷೆಗಳು ಅಲ್ಲಿ ಸರಿಹೊಂದುವುದಿಲ್ಲ. ದೇವರು ಕರುಣಾಮಯ ಎಂದು ಪುರಾಣಗಳು ಹೇಳುತ್ತಾ, ದೇವರನ್ನು ಭಕ್ತಿಯಿಂದ ಪ್ರಾರ್ಥಿಸುವ ಅದೇ ಮಾನವನಿಗೆ ಆ ದೇವರು ಅತ್ಯಂತ ಹೃದಯ ಹಿಂಡುವ ಪರೀಕ್ಷೆಯನ್ನು ಎಲ್ಲೆಡೆಯೂ ಕೊಡುತ್ತಿರುತ್ತಾನೆ ಎಂದರೆ ಅದನ್ನು ಒಪ್ಪಲು ಸಾಧ್ಯವಿಲ್ಲ, ಹಾಗಿದ್ದರೆ, ಕೆಟ್ಟ ತನದ ಪರಮಾವಧಿ ಮತ್ತು ಮಾನವರಿಗೆ ತೊಂದರೆ ಕೊಡುವ ಶಕ್ತಿಯೆಂದು ಅದೇ ಪುರಾಣಗಳು ಹೇಳುವ ಆ ಸೈತಾನನಿಗೆ ಕೆಲಸ ಇಲ್ಲವಾಗುವುದು. ಆದುದರಿಂದ ಮಾನವರಿಗೆ ಭಯಾನಕ ಹಿಂಸೆ, ದುಃಖ, ಅಕಾಲ ಮರಣದಂಥ ದುರಂತಗಳನ್ನು ತರುವುದು ದೇವರೆಂದು ನಾನು ಹೇಳಲು ತಯಾರಿಲ್ಲ. ಇದು ಯಾಕೆ ಹೇಳಿದೆ ಎಂದರೆ, ಉತ್ತಮರು, ಅವರಿಗೆ ದೇವರಿಂದ ಕೊಡಲ್ಪಟ್ಟದ್ದು ಎಂದು ಹೇಳುವ ಆ ಮುಕ್ತ ಮನಸ್ಸನ್ನು ಅಷ್ಟು ಚೆನ್ನಾಗಿ ಉಪಯೋಗಿಸಿರುವರು, ಹೀಗೆ ಮಾಡಿಯೂ ಇನ್ನೂ ಅವರನ್ನೇ ಆ ದೇವರು ಮತ್ತೂ ತೊಂದರೆ, ನೋವು ಕೊಟ್ಟು ಪರೀಕ್ಷಿಸುತ್ತಾನೆ ಎಂಬುವುದನ್ನು ನಾನು ಕನಸಲ್ಲೂ ಒಪ್ಪಲಾರೆ. ದುಷ್ಟರಿಗೆ ಯಾಕೆ ಅಷ್ಟೇ ತೀವ್ರತೆಯಿಂದ ಪರೀಕ್ಷೆ ದೇವರು ಮಾಡುವುದಿಲ್ಲ ಎಂಬುವುದಕ್ಕೂ ಉತ್ತರ ಸಿಗುವುದಿಲ್ಲ. [ಇಲ್ಲಿ, "ಅವರವರ ಕರ್ಮಫಲ" ಎನ್ನುವವರು, ದೇವರ ಪರೀಕ್ಷೆ ಎಂಬುವುದನ್ನು ಹೇಳುವಹಾಗಿಲ್ಲ, ಅದನ್ನು ಬಿಡಬೇಕಾಗುವುದು. ಇನ್ನು ಕರ್ಮಫಲವನ್ನು ವಾದ ಮಾಡುವವರು ದೇವರ ಅನುಗ್ರಹಕ್ಕಾಗಿ ಪ್ರಯತ್ನಿಸುವುದು ನಿಶ್ಫಲ. ಇನ್ನು, "ಕೆಲವು ಕರ್ಮಗಳನ್ನು ಪರಿಹರಿಸಿಕೊಳ್ಳಬಹುದು, ಆದರೆ ಇನ್ನು ಕೆಲವು ಕರ್ಮಗಳನ್ನು ಪರಿಹರಿಸಲು ಸಾಧ್ಯವಿಲ್ಲ" ಎನ್ನುವ ವಾದವು ವೈಜ್ಞಾನಿಕ ತರ್ಕವಲ್ಲದ ಬರೇ ನಂಬಿಕೆ ಮಾತ್ರವಾಗುವುದು.] ಆದರೆ, ಮಾನವನಿಗಾಗುವ ಈ ಎಲ್ಲಾ ತೊಂದರೆಗೆಗಳಿಗೆ ನಾನು ಸೈತಾನ {ದುಷ್ಟಶಕ್ತಿ} ನನ್ನು ಮಾತ್ರ ಜವಾಬ್ದಾರನನ್ನಾಗಿ ಮಾಡುವೆನು. ಇಲ್ಲವಾದರೆ, ಅದು ಆ ಪವಿತ್ರ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ದೇವಸಂಕಲ್ಪಕ್ಕೆ ಕ್ರೌರ್ಯವನ್ನು ಆರೋಪಿಸುವ ಆ ಭೀಕರ ಅಪಚಾರ ಮತ್ತು ದೈವ ನಿಂದನೆ ಆಗಿಬಿಡುವುದು. ಈ ಕಾರಣಗಳಿಂದಾಗಿ "ದೇವರ ಪರೀಕ್ಷೆ" ಎಂಬ ರೀತಿಯ ವಿವರಣೆಯು ದೇವರ ಸಂಕಲ್ಪಕ್ಕೆ ಸರಿಹೊಂದುವುದಿಲ್ಲ.

ನಿಜವಾಗಿಯೂ ಯಾರೂ ಯಾರನ್ನೂ ಪರೀಕ್ಷಿಸುವುದಿಲ್ಲ, ಬದಲು ಎಲ್ಲಾ ಕಷ್ಟ ತೊಂದರೆಗಳಿಗೂ ಆ ಪ್ರಾಚೀನ ವಾಮಾಚಾರವೇ ಕಾರಣ ಎಂದು ಸ್ಪಷ್ಟವಾಗಿ ತಿಳಿದಿದ್ದೇನೆ. ಅವುಗಳೇ ಸರ್ವರ ಹಣೆಬರಹವನ್ನು ಬರೆದಿರುವುದು ಮತ್ತು ಬರೆಯುತ್ತಿರುವುದು. ಯಾರೂ "ದೇವರೇ ಬರೆದ ಹಣೆ ಬರಹವನ್ನು ದೇವರಿಗೇ ಅಳಿಸಲು ಸಾಧ್ಯವಿಲ್ಲ" ಎಂಬೆಲ್ಲಾ ಬಾಲಿಶ ನೆಪಗಳನ್ನು ಹೇಳುತ್ತಾ ಮಾನವನ ಶ್ರೇಷ್ಠ ವ್ಯಕ್ತಿತ್ವದ ಆ ದೊಡ್ಡ ಆದರ್ಶವಾಗಿರುವ ದೇವಸಂಕಲ್ಪವನ್ನು ಕಲುಷಿತಗೊಳಿಸುವುದು ಬೇಡ.

# ದೇವರ ಪರೀಕ್ಷೆ-[2]

ಒಬ್ಬ ಮಾನವನು, ಒಬ್ಬ ತಂದೆಯಾಗಿ, ತನ್ನ ಮಕ್ಕಳನ್ನು ಸರಿಪಡಿಸಲು, ಕಠಿಣ ಕಷ್ಟಗಳನ್ನು ಕೊಟ್ಟು ಪರೀಕ್ಷಿಸುವನೇ? ಇಲ್ಲ, ಆತನು ತನ್ನ ಮಕ್ಕಳಿಗೆ ಯಾವ ಕಷ್ಟಬಾರದ ಹಾಗೆ ರಕ್ಷಿಸಲು ಸಕಲ ಪ್ರಯತ್ನವನ್ನು ಮಾಡುವನು. ತನ್ನ ಮಕ್ಕಳು ಕಷ್ಟಕ್ಕೆ ತುತ್ತಾಗುವುದನ್ನು ಯಾವ ಕಾಲಕ್ಕೂ ಸಹಿಸನು. ಪ್ರೀತಿ ಎಂದರೆ ಇದು. ಈ ತ್ಯಾಗದ ಭಾವನೆ ಇಲ್ಲವಾದರೆ ಆತನು ಕ್ರೂರಿಯಾಗುವನು. ಅಂಥ ತಂದೆಯಂದಿರನ್ನು ಅಪರೂಪವಾಗಿ ದಿನ ಪತ್ರಿಕೆಗಳಲ್ಲಿ ನಾವು ನೋಡುತ್ತೇವೆ. ಆ ತಂದೆಯು ತನ್ನ ಮಕ್ಕಳನ್ನು ಕಷ್ಟಕ್ಕೆ ಗುರಿಪಡಿಸುವನು, ಅದೇ ರೀತಿ ಕೊಚ್ಚಿ ಕೊಲ್ಲುವನು, ಇಲ್ಲಿ, ಆ ತಂದೆಯ ಕ್ರೌರ್ಯವನ್ನು ಮಾತ್ರ ಎಲ್ಲರೂ ಅಚ್ಚರಿಯಿಂದ ಎತ್ತಿ ಹೇಳುವರು. ನಿಮ್ಮನ್ನು ಸೃಷ್ಟಿಸಿದ ದೇವರು ಯಾವ ರೀತಿಯ ತಂದೆಯ ತರ ಇರಬಹುದು? ಗಂಡನನ್ನು ಕೊಂದು ಹೆಂಡತಿಯನ್ನು ಪರೀಕ್ಷೆ ಮಾಡುವವನು ಮತ್ತು ಮಕ್ಕಳನ್ನು ಕೊಂದು ತಂದೆ, ತಾಯಂದಿರನ್ನು ಪರೀಕ್ಷೆ ಮಾಡುವವನೆಂದೆಲ್ಲಾ ಹೇಳುವಾಗ ಆ ಸೃಷ್ಟಿಕರ್ತನು ಎರಡನೇ ತರದ ತಂದೆಯಂತೆ ಒಬ್ಬ ಕ್ರೂರಿ ಸೃಷ್ಟಿಕರ್ತನಾಗುವನೆಂಬುವುದರಲ್ಲಿ ಸಂಶಯವಿಲ್ಲ. ಅಲ್ಲಿ ಸಾರ್ವತ್ರಿಕ ಪ್ರೀತಿ, ಸತ್ಯ, ನೈತಿಕತೆಯ ಅಂಶವೂ ಕಾಣಿಸುವುದಿಲ್ಲ. ಮಾತ್ರವಲ್ಲ, ಆ ಭಯಾನಕ ಕ್ರೌರ್ಯದ ಭಾವನೆಗಳೆಲ್ಲವನ್ನೂ ತನ್ನಲ್ಲಿಟ್ಟುಕೊಂಡಂತೆ ಆಗುವುದು. ಹಾಗಿರುವಾಗ, ಇನ್ನು ಸೈತಾನನಿಗೆ ಕ್ರೌರ್ಯದ ಭಾವನೆಯನ್ನು ಬೇರೆ ಎಲ್ಲಿಂದ ತರುವುದು?

ನಾನಂತೂ 'ದೇವರ ಪರೀಕ್ಷೆ' ಎಂದು ಹೇಳಿ ಪಾಪ ಕಟ್ಟಿಕೊಳ್ಳುವುದಿಲ್ಲ. ಅದು ದೈವ ನಿಂದನೆ ಅಲ್ಲದೆ ಬೇರೇನೂ ಅಲ್ಲ ಎಂದು ನಾನು ತಿಳಿದಿದ್ದೇನೆ. ಆದರೆ ಏನುಮಾಡುವುದು, ನೀವು, 'ದೇವರನ್ನು ನಂಬುವವರು' ದೇವರನ್ನು ತಿಳಿಯುವವರಲ್ಲ!! ಆ ನಂಬಿಕೆ ಎಂಬ ಮಾತನ್ನು ಮುಂದಿಟ್ಟು ದೇವರನ್ನು ಹೇಗೆ ಬೇಕಾದರೂ ವಿವರಿಸುತ್ತೀರಿ, ಅಲ್ಲಿ ಸರಿ, ತಪ್ಪು ಮತ್ತು ಒಳಿತು ಕೆಡುಕಿನ ಚಿಂತನೆಯನ್ನು ಯಾರೂ ಮಾಡುವವರಿಲ್ಲ, ಹಾಗೆ ಮಾಡಿದಲ್ಲಿ, ಅದೇ ನಿಮ್ಮ ರೀತಿಯಲ್ಲಿ ದೈವ ನಿಂದನೆಯಾಗಿಬಿಡುವುದು!!!

ನಂಬಿಕೆಯನ್ನು ಹಿಡಿದು ಮಾಡುವ ಆ ಪ್ರಾಚೀನ ವಾಮಾಚಾರದ ಮೋಸವು ಅತ್ಯಂತ ಶಕ್ತಿಯುತವಾಗಿದೆ ಎಂಬುವುದನ್ನು ಇವು ಮತ್ತೂ ದೃಢಪಡಿಸುವವು.

# ತಮಗೆ ಮಾತ್ರ ಹೆಚ್ಚು ತಿಳಿದಿರುವ ವಿಚಾರ

ನಾನು ಇಲ್ಲಿ ಒಂದು ಪ್ರತ್ಯೇಕ ಸತ್ಯಾಂಶವನ್ನು ತಿಳಿಸಲು ಇಷ್ಟಪಡುವೆನು. ಆದಿ ಕಾಲದಿಂದಲೇ ಜನರು 'ತಮಗೆ ಮಾತ್ರ ತಿಳಿದ ವಿಚಾರ' ಎಂದು ಹೇಳುತ್ತಾ ಬಂದಿರುವರು. ಹೊಸ ಧರ್ಮ, ಪಂಥಗಳೆಲ್ಲವೂ, ಆಯಾ ಧರ್ಮ, ಪಂಥವು ಹುಟ್ಟುವುದಕ್ಕೆ ಹಿಂದಿನ ಇತರ ಧರ್ಮಗಳಲ್ಲಿ ಹಲವು ಕಡೆ ತಪ್ಪುಗಳಿವೆ ಎಂದು ಹೇಳುತ್ತಾ ಮತ್ತು 'ತಮಗೆ ಮಾತ್ರ ಹೆಚ್ಚು ತಿಳಿದಿದೆ' ಎಂದು ಹೇಳುವ ಅಂಶವನ್ನೇ ಎತ್ತಿ ಹಿಡಿದು ಹುಟ್ಟಿಕೊಂಡವು! ಆ ರೀತಿಯಲ್ಲಿ "ತಮಗೆ ಮಾತ್ರ ಹೆಚ್ಚು ತಿಳಿದಿದೆ" ಎಂದು ಹೇಳಿದ ಭಾಗವೇ ಅನಂತರದಲ್ಲಿ ಇನ್ನೊಂದು ಧರ್ಮ ಅಥವಾ ಪಂಥವಾಗಿರುವುದು! ಇದನ್ನು ಮೊದಲು ಗಮನದಲ್ಲಿರಿಸಬೇಕಾಗಿದೆ. ಇನ್ನು, ನಾನು ವಿವರಿಸುತ್ತಿರುವ ರೀತಿ ಮತ್ತು ಹಿಂದಿನ ಧರ್ಮ, ಪಂಥಗಳು ಹೇಳುತ್ತಿದ್ದ ರೀತಿಗಳ ವ್ಯತ್ಯಾಸವನ್ನು ಖಂಡಿತವಾಗಿಯೂ ತಿಳಿಯಲೇ ಬೇಕಾಗಿದೆ, ಆಗಲೇ ಎಲ್ಲಾ ಸಂಶಯವೂ ನಿವಾರಣೆಯಾಗುವುದು. ಮೊದಲಿಗೆ, ಇದುವರೆಗೂ 'ತಮಗೆ ಮಾತ್ರ ಹೆಚ್ಚು ತಿಳಿದಿದೆ' ಎಂದು ಎಲ್ಲಾ ಧರ್ಮ, ಪಂಥದವರು ಹೇಳಿರುವುದು ಯಾವ ವಿಚಾರವಾಗಿ? ಒಂದು ಹೊಸ ತಿಂಡಿಯನ್ನು ತಯಾರು ಮಾಡುವಲ್ಲಿ ಹಾಗೆ ಹೇಳುವುದಾದರೆ ಅದನ್ನು ಒಪ್ಪಬಹುದು ಯಾಕೆಂದರೆ ಅದು ಹೊಸತಾದ ಒಂದು ರುಚಿಯನ್ನು ಈ ಭೂಮಿಯ ಜನರಿಗೆ ಕೊಡುವುದು, ಆದರೆ ಈ ಧರ್ಮ, ಪಂಥಗಳು ಮಾತಾಡುತ್ತಿರುವುದು ಆ 'ಏಕ ಸೃಷ್ಟಿಕರ್ತ'ನನ್ನು ಮತ್ತು ಅದೇ ಏಕ ಸೃಷ್ಟಿಕರ್ತನು ಹೇಳುವ ಸಾರ್ವತ್ರಿಕ ಸತ್ಯಗಳ ವಿಚಾರಗಳನ್ನು!! ಅದು ಸೂರ್ಯನಂತೆ ಎಂದೂ ಮತ್ತು ಜಗತ್ತಿನ ಯಾವ ಭಾಗದಲ್ಲಾದರೂ ಒಂದೇ ರೀತಿಯಲ್ಲಿ ಇರಲೇಬೇಕು ಎಂದು ಸತ್ಯವನ್ನು ಪ್ರತಿಪಾದಿಸುವ ನ್ಯಾಯವು ಹೇಳುವುದು. ಒಂದು ಕಡೆ ಒಂದು ರೀತಿ ಮತ್ತು ಇನ್ನೊಂದು ಕಡೆ ಇನ್ನೊಂದು ರೀತಿಯಲ್ಲಿ ಹೇಳುತ್ತಾ ದೇವರು ಜನರನ್ನು ಎಂದೂ ತಮ್ಮೊಳಗೆ ಹೊಡೆಸಿ ರಕ್ತಪಾತ ಮಾಡಿಸಲಾರ. ಅಂದರೆ, ಈ ವಿಚಿತ್ರ ಹಾಗೂ ಭಯಾನಕ ರಕ್ತಪಾತಕ್ಕೆ ಕಾರಣವಾಗುವ ಆ "ತಮಗೆ ಮಾತ್ರ ಹೆಚ್ಚು ಗೊತ್ತು" ಎಂಬ ರೀತಿಯೇ ಎಲ್ಲೆಡೆಯೂ ಅಡಗಿರುವುದು ಎಂದು ಸ್ಪಷ್ಟವಾಗುವುದು. ಇಷ್ಟೆಲ್ಲ ಆದರೂ, ಆ "ತಮಗೆ ಮಾತ್ರ ಹೆಚ್ಚು ತಿಳಿದಿರುವುದು" ಎಂಬ ರೀತಿಯು ಜಗತ್ತಿಗೆ ಸತ್ಯವನ್ನು ಕೊಟ್ಟಿತೇ ಎಂದು ಕೇಳಿದರೆ, ಈ ಸಾಮಾನ್ಯಜನರ ಆ ಒಂದು ಪ್ರಶ್ನೆಯು ಅದನ್ನು ಉತ್ತರಿಸುವುದು. ಆ ಪ್ರಶ್ನೆಯು ಹೀಗಿದೆ, "ಇಷ್ಟೆಲ್ಲಾ ಧರ್ಮ, ಪಂಥಗಳು ತಮ್ಮ ಸೃಷ್ಟಿಕರ್ತ ದೇವರೇ ಸರಿ, ಮತ್ತು ತಮ್ಮ ದೇವರ ಮಾತೇ ಸರಿ ಎನ್ನುವವು, ಆದರೆ ನಿಜವಾಗಿಯೂ ಇವುಗಳಲ್ಲಿ ಯಾವುದು ಸರಿ? ಯಾಕೆಂದರೆ ಸೃಷ್ಟಿಕರ್ತ ದೇವನು ಒಬ್ಬನೇ ಇರಲು ಸಾಧ್ಯ, ಮತ್ತು ಆ ಒಬ್ಬನ ಮಾತುಗಳು ಎಲ್ಲದರಲ್ಲೂ ಒಂದೇ ರೀತಿಯಲ್ಲಿರಬೇಕಿತ್ತು!" ಅಂದರೆ, ಜನರ ಈ ಸಂಶಯವೇ ಜಗತ್ತಿನ ಜನರು ದೇವರ ಹಾಗೂ ಧರ್ಮದ ಸತ್ಯತೆಯ ಬಗ್ಗೆ ಇನ್ನೂ ತೃಪ್ತರಾಗಿಲ್ಲ ಎನ್ನುವುದಕ್ಕೆ ಸಾಕ್ಷಿಯಾಗುವುದು.

ಈಗ, ನಾನು ಹೇಳುತ್ತಿರುವ ಆ 'ಸೂಕ್ಷ್ಮದ ಪ್ರಾಚೀನ ವಾಮಾಚಾರದ ಕುರಿತಾದ ಹೆಚ್ಚು ತಿಳುವಳಿಕೆ'ಯ ವಿಚಾರವನ್ನು ನೋಡೋಣ. ಇಲ್ಲಿ ಹಲವು ಅಂಶಗಳಿವೆ. ಮೊದಲು, ಸೃಷ್ಟಿಕರ್ತನು ನನ್ನಲ್ಲಿ ಇತರ ಧರ್ಮ, ಪಂಥಗಳಿಂದ ವ್ಯತ್ಯಸ್ಥವಾದ ರೀತಿಯಲ್ಲಿ ಹೇಳಿದ್ದಾನೆ ಎಂದು ನಾನು ಹೇಳುವುದಿಲ್ಲ, ಅದೇ

ರೀತಿ, ಹೊಸ ಪಂಥ ಅಥವಾ ಧರ್ಮವನ್ನು ಸೃಷ್ಟಿಸಲು ವಾದ ಮಾಡುವ ಅಥವಾ ಆ ನಿಟ್ಟಿನಲ್ಲಿ ದಿಗ್ವಿಜಯಕ್ಕಾಗಿ ನಾನು ಹೊರಡುವುದೂ ಇಲ್ಲ {ಆ ಒಂದು ದೇವರು ಇದ್ದಲ್ಲಿ, ಆತನನ್ನು ಎಲ್ಲರೂ ಅವರವರ ಧರ್ಮ, ಪಂಥಗಳಲ್ಲಿ ಬಂಧಿಸುವ ವ್ಯರ್ಥ ಕೆಲಸಕ್ಕೆ ಕೈ ಹಾಕಿದ್ದಾರೆ ಎಂದು ಮಾತ್ರ ನನಗನಿಸುವುದು.} ಅಂದರೆ, "ಸೂಕ್ಷ್ಮದ ವಿಚಾರವಾಗಿ ಹೆಚ್ಚು ತಿಳಿದಿದೆ" ಎಂಬ ನನ್ನ ರೀತಿಯು, ಯಾವ ಕಾರಣಕ್ಕೂ ಒಂದು ರಕ್ತಪಾತಕ್ಕೆ ಕಾರಣವಾಗುವುದಿಲ್ಲ ಎಂಬುವುದು ಜಗತ್ತಿಗೆ ಒಂದು ದೊಡ್ಡ ಲಾಭವಾಗಿದೆ. ಇನ್ನು, ಮುಖ್ಯವಾದ ವ್ಯತ್ಯಾಸ ಎಂದರೆ, ನಾನು ಹೇಳುತ್ತಿರುವುದು ಜಗತ್ತಿನ ಸರ್ವದರಲ್ಲೂ ಆದಿಯಿಂದಲೇ ಇದ್ದ ಆ ಪ್ರಾಚೀನ ವಾಮಾಚಾರದ ಕೈವಾಡದ ವಿಷಯ ಮಾತ್ರವಾಗಿದೆ. ಸೂಕ್ಷ್ಮದ ಆ ನನ್ನ ಅನುಭವ ಮತ್ತು ರಹಸ್ಯ ಭೇದಿಸುವಿಕೆಯ ಪರಿಣಾಮವಾಗಿ ಪಡೆದ ಸತ್ಯವನ್ನು ನಿಮ್ಮ ಮುಂದಿಡುವುದು ಮಾತ್ರ ನನ್ನ ಉದ್ದೇಶವಾಗಿರುವುದು. ಹಾಗೆ ಆ ಸತ್ಯವನ್ನು ಮುಂದಿಡುವಾಗ ಜನರಿಗೆ ಹಲವು ಸಂಶಯಗಳು ಬರುವವು, ಅವನ್ನು ನಿವಾರಿಸುವುದು ನನ್ನ ಕರ್ತವ್ಯವಾಗಿದೆ, ಇಲ್ಲವಾದರೆ ಜನರು ಸ್ವಲ್ಪವೂ ಈ ಸತ್ಯವನ್ನು ಗಮನಿಸದೆ ಆ ಮುಂಬರಲಿರುವ ಹಲವು ತರದ ಭಯಾನಕ ಆಪತ್ತುಗಳಿಗೆ ಗುರಿಯಾಗುವರು. ಈ ಆಪತ್ತಿನಿಂದ ಜನರು ಪಾರಾಗಲಿ ಎಂಬ ಒಂದು ಉದ್ದೇಶಕ್ಕಾಗಿ ಮಾತ್ರ ನಾನು ಇಷ್ಟೆಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದು ಎಂದು ಮಾತ್ರ ತಿಳಿಯಬೇಕು ಹೊರತು "ನನಗೆ ಮಾತ್ರ ಸೂಕ್ಷ್ಮದ ಹೆಚ್ಚಿನ ವಿಚಾರ ತಿಳಿದಿದೆ" ಎಂದು ಹೇಳುತ್ತಾ ಒಂದು ಗುಂಪು ಜನರನ್ನು ಸೃಷ್ಟಿಸಿ, ಅದರ ಲಾಭ ಪಡೆಯಲು ಇರುವ ಪ್ರಯತ್ನವಲ್ಲ ಎಂದು ತಿಳಿಯಬೇಕು. ಯಾವ ಧರ್ಮ, ಪಂಥಗಳನ್ನು ಅಥವಾ ದೇವರನ್ನು ನಿಂದಿಸಲು ನನಗೆ ಸಾಧ್ಯವಿಲ್ಲ, ಅವೆಲ್ಲಾ ನನಗೆ ಆ ಸಾರ್ವತ್ರಿಕ ಸತ್ಯ, ಪ್ರೀತಿ ಮತ್ತು ನೀತಿ ಆಗುವವು ಮತ್ತು ನಾನು ಆ ಭಾಗದಲ್ಲಿ ಮಾತ್ರ ಇರುವೆನು. ಆದರೆ, ರಕ್ತಪಾತಕ್ಕೆ ಕಾರಣವಾಗುವ ಧರ್ಮ, ಪಂಥಗಳ ನಂಬಿಕೆಗಳು ಮತ್ತು ಅವುಗಳ ಆಚಾರಗಳ ಭಾಗಗಳಲ್ಲಿ ನಾನೆಂದೂ ಇರುವುದಿಲ್ಲ ಎಂಬುವುದು ಖಂಡಿತ. ಯಾವ ಧರ್ಮದ ಆಚಾರ, ನಂಬಿಕೆಗಳ ಆ ಅಪಾಯಕಾರಿ ಚೀಲವನ್ನೂ ನಾನು ಎಂದೂ ನೋಡಲಾರೆ. ಆದುದರಿಂದ "ನಂಬಿಕೆ, ಆಚಾರಗಳನ್ನು ಜನರು ಪಾಲಿಸುವುದಾದರೂ, ಅವುಗಳಿಗೆ ಹೆಚ್ಚಿನ ಮಹತ್ವವನ್ನು ಕೊಡದೆ ಮತ್ತು ಅವುಗಳ ಹೆಸರಲ್ಲಿ ತಮ್ಮೊಳಗೆ ಹೊಡೆದಾಡದೆ, ಪರಿಶುದ್ಧರಾಗುತ್ತಾ, ಈ ಜಗತ್ತಿಗೆ ಶಾಂತಿಯನ್ನು ತರುವಲ್ಲಿ ಪ್ರಯತ್ನಿಸಲಿ" ಎಂಬ ಆಗ್ರಹದ ಹಿನ್ನೆಲೆಯಲ್ಲಿ ಮಾತ್ರ ನಾನು ಮಾತನಾಡುವುದು ಎಂದು ತಿಳಿಯಬೇಕು.

ಇನ್ನು, "ನಮ್ಮ ನಂಬಿಕೆಗಳು ಶ್ರೇಷ್ಠವಾದವುಗಳು ಮತ್ತು ಅವನ್ನು ಎಂದಿಗೂ ಬದಲಾಯಿಸಲು ಸಾಧ್ಯವಿಲ್ಲ" ಎನ್ನುವವರು, ಧರ್ಮಗಳಲ್ಲಿ ಹೇಳಿರುವ, 'ಸೂರ್ಯನು ಭೂಮಿಗೆ ಸುತ್ತುವನು' ಎಂಬೆಲ್ಲಾ ರೀತಿಯ ಹಲವು ಅವೈಜ್ಞಾನಿಕ ನಂಬಿಕೆಗಳನ್ನೂ ಅವುಗಳೊಂದಿಗೆ ಎಂದೆಂದೂ ಹೊತ್ತುಕೊಳ್ಳಬೇಕಾಗುವುದು. ಯಾಕೆ ಅಲ್ಲಿ ಮಾತ್ರ ಧಾರ್ಮಿಕ ನಂಬಿಕೆಯನ್ನು ತಿದ್ದುಪಡಿ ಮಾಡಿದ್ದೀರಿ? ಅಂದರೆ, ಧಾರ್ಮಿಕ ನಂಬಿಕೆಗಳನ್ನು ಬೇಕಿದ್ದಲ್ಲಿ ತಿದ್ದುಪಡಿ ಮಾಡಬಹುದೆಂದು ನೀವೇ ಹೇಳಿದಹಾಗಾಯಿತು. ಹೀಗಿರುವಾಗ, ನಾವೆಲ್ಲಾ ನಮ್ಮ ಮುಗ್ಧ ಮಕ್ಕಳ, ಮರಿಗಳ ಜೀವ ಉಳಿಸುವುದಕ್ಕಾದರೂ ಈ ನಂಬಿಕೆಗಳಲ್ಲಿ ಅಲ್ಪ ತಿದ್ದುಪಡಿಗೆ ತಯಾರಾಗಿ, ಆ ಮುಂಬರಲಿರುವ ರಕ್ತಪಾತಗಳಿಂದ ಪಾರಾಗಲು ಮತ್ತು ಆ ಲೋಕ ಶಾಂತಿಯನ್ನು ಸೃಷ್ಟಿಸಲು ತಯಾರಾಗೋಣ. ಆ

ದೇವರು ಬಯಸುವ ಈ ಜಗದ ಮಾನವರೆಲ್ಲರ ಒಂದಾಗುವಿಕೆಯನ್ನು, ಇನ್ನಾದರೂ ನಮ್ಮ ಪ್ರಥಮ ಕರ್ತವ್ಯವೆಂದು ತಿಳಿದು ಆ ನಿಟ್ಟಿನಲ್ಲಿ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತನೆಗೆ ತೊಡಗೋಣ.

# ಜೀವನ ಮೌಲ್ಯಗಳು

ಕೆಲವರು ಜೀವನ ಮೌಲ್ಯಗಳು ವ್ಯಯಕ್ತಿಕ ಎಂದು ವಾದ ಮಾಡುವರು, ಆದರೆ ಜೀವನ ಮೌಲ್ಯಗಳು ಎಂದೂ ವ್ಯಯಕ್ತಿಕವಲ್ಲ, ಯಾಕೆಂದರೆ ಜೀವನ ಮೌಲ್ಯಗಳ ಉದ್ದೇಶವೇ ಸಾಮಾಜದ ಹಿತವಾಗಿದೆ! ಒಬ್ಬ ವ್ಯಕ್ತಿ ಒಬ್ಬನೇ ಕಾಡಲ್ಲಿ ಜೀವಿಸುವುದಾದರೆ ಅಲ್ಲಿ ಆತನಿಗೆ ಜೀವನದ ಮೌಲ್ಯಗಳ ಅಗತ್ಯ ಬರುವುದಿಲ್ಲ. ಇದರಿಂದ ಮಾನವನ ಜೀವನ ಮೌಲ್ಯಗಳು ಸಾಮಾಜಿಕ ಜೀವನದ ಸುಗಮ ದಾರಿಯನ್ನು ಉದ್ದೇಶಿಸಿದೆ ಎಂದು ತಿಳಿದುಕೊಳ್ಳಬಹುದು. ಅಂದರೆ, ನಾವು ನಮ್ಮಷ್ಟಕ್ಕೆ ಜೀವಿಸಿ ನಮ್ಮದೇ ರೀತಿಯ ಜೀವನ ಮೌಲ್ಯವನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ಅರ್ಥ.

ಇನ್ನು, ಒಂದು ಧರ್ಮ ಅಥವಾ ಸಿದ್ಧಾಂತ ಕೆಲವೊಮ್ಮೆ ಬೇರೆ ಬೇರೆ ರೀತಿಗಳಲ್ಲಿ ಜೀವನದ ಮೌಲ್ಯಗಳನ್ನು ವಿವರಿಸಿರಬಹುದು, ಆದರೆ ಅವೆಲ್ಲ ತಮ್ಮ ಸಮಾಜವು ಉತ್ತಮವಾಗಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರುವುದು ಎಂದು ತಿಳಿಯಬೇಕು. ಒಟ್ಟಿನಲ್ಲಿ, ಜೀವನ ಮೌಲ್ಯವನ್ನು ಪೂರ್ಣವಾಗಿ ತ್ಯಜಿಸಿದಲ್ಲಿ ಆ ಸಮಾಜವು ಉಳಿಯಲಾರದು ಎಂಬುವುದು ಸತ್ಯ. ಹಿಂದೆ ಚಾರ್ವಕರ ಸಮಾಜವು ಮೌಲ್ಯ ಜೀವನದ ವಿರುದ್ದ ಸ್ವಾರ್ಥ ಜೀವನವನ್ನು ಎತ್ತಿ ಹಿಡಿಯಲು ಪ್ರಯತ್ನಿಸಿತ್ತು, ಆದರೆ ಆ ಸಮಾಜವು ಮುಂದೆ ಸಾಗದೆ ಸಂಪೂರ್ಣವಾಗಿ ನಾಶವಾಯಿತು. ಆದರೆ ಆ ಪ್ರಾಚೀನ ವಾಮಾಚಾರಕ್ಕೆ ಆ ರೀತಿಯಲ್ಲಿ ಮೌಲ್ಯಗಳು ಇಲ್ಲವಾಗುವುದು ಇಷ್ಟವಿಲ್ಲ, ಕಾರಣ ಅಲ್ಲಿ ದೇವರು, ಧರ್ಮ ಇಲ್ಲ! ಅಂದರೆ, ಅವುಗಳ ಉದ್ದೇಶವು ದೇವರುಗಳು ಮತ್ತು ಧರ್ಮಗಳು ಇದ್ದೇ ಅದರೊಳಗಿಂದ ಈ ಚಾರ್ವಕರನ್ನು ಸೃಷ್ಟಿಸುವುದು ಆಗಿದೆ!! ಹೀಗಾದರೆ, ಆಮೇಲೆ ಒಂದು ಉತ್ತಮ ಸಮಾಜವನ್ನು ಸೃಷ್ಟಿಸುವವರು ಯಾರೂ ಇರುವುದಿಲ್ಲ, ಮತ್ತು ಒಂದು ವೇಳೆ ಇದ್ದರೂ ಎಲ್ಲಾ ಜನರು ಸೇರಿ ಆತನನ್ನೇ ಅತ್ಯಂತ ಪಾಪಿಯ ತರ ನೋಡುವರು!!! ಇದೇ ಆ ಪ್ರಾಚೀನ ವಾಮಾಚಾರದ ಅಂತಿಮ ಗುರಿ, ಇಲ್ಲಿ ದೇವರೂ ಇಲ್ಲ, ಧರ್ಮವೂ ಇಲ್ಲ, ಎಲ್ಲವನ್ನೂ ಅಯಾ ಗ್ರಂಥದೊಳಗೆ ಸೇರಿಸಿ ಬೀಗಹಾಕಿಬಿಡುವುದು. ನಂಬಿಕೆ, ಆಚಾರಗಳಲ್ಲಿ, ಮಾತ್ರ ತೊಡಗಿಸಿಕೊಂಡಲ್ಲಿ, ಆ ಪ್ರಾಚೀನ ವಾಮಾಚಾರವು ಆ ಸಾರ್ವತ್ರಿಕ ಚಾರ್ವಕರನ್ನು ಈ ಜಗತ್ತಲ್ಲಿ ಧರ್ಮ, ಪಂಥಗಳ ಅಡಿಯಲ್ಲೇ ಸಹಜವಾಗಿ ಸೃಷ್ಟಿಸುವುದು ಖಂಡಿತವೆಂಬುವುದರಲ್ಲಿ ಸಂಶಯವಿಲ್ಲ. ಈಗಾಗಲೇ ಅದು ಐವತ್ತು ಶೇಖಡವಾದರೂ ಈ ಶಾಶ್ವತ ಚಾರ್ವಕರನ್ನು ಧರ್ಮ, ದೇವರಡಿಯಲ್ಲಿ ಸಹಜವಾಗಿ ಸೃಷ್ಟಿಸಿದೆ. ಇನ್ನು, ಈ ಹಿನ್ನೆಲೆಯ ಬಲವನ್ನು ಬಳಸಿ, ಬಹುಬೇಗನೆ ಇನ್ನುಳಿದ ಐವತ್ತು ಶೇಖಡವನ್ನು ನುಂಗಿಬಿಡುವುದು!!

ಜೀವನ ಮೌಲ್ಯಗಳೆಂದರೇನು? ಇದಕ್ಕೆ ಉತ್ತರ ಬಹಳ ಚುಟುಕಾಗಿ ಹೇಳುವುದಾದರೆ, 'ತನ್ನ ಸ್ವಾರ್ಥವನ್ನು ಸ್ವಲ್ಪಮಟ್ಟಿಗಾದರೂ ಬದಿಗೊತ್ತಿ ಇತರರ ಹಿತದ ಕಡೆಗೂ ಗಮನಿಸುವುದು, ಮತ್ತು ಆ ನಿಟ್ಟಿನಲ್ಲಿ ತನ್ನ ಕರ್ತವ್ಯ ಬೋಧವನ್ನು ಹೆಚ್ಚಿಸುವುದು' ಆಗಿದೆ. ಈ ರೀತಿಯ ಸದ್ಗುಣಗಳು ಜೀವನ ಮೌಲ್ಯಗಳಾಗುವವು.

ಇಲ್ಲಿ, ನಮಗೆ ಒಂದು ಅಚ್ಚರಿ ಎದುರಾಗಿದೆ! ಅದೇನೆಂದರೆ ಚಾರ್ವಕ ಸಮಾಜದಂತೆ ಜಗತ್ತಿಗೆ ತನ್ನ ಮೌಲ್ಯ ರಹಿತ ನಿಲುವನ್ನು ಘೋಷಿಸಿ ಹೊರಟಿರುವ ಲೌಕಿಕಜೀವನ ಸಿದ್ಧಾಂತಗಳು ಬೇರೆಯೂ ಇವೆ. ಆದರೆ, ಅವುಗಳ ಆ ನಿಲುವು ಜಗತ್ತಿನ ಸರ್ವರಿಗೂ ಸ್ಪಷ್ಟವಾಗಿ ಕಾಣಿಸುವಂಥದ್ದು ಮತ್ತು ಆ ಹಿನ್ನೆಲೆಯಲ್ಲಿ ಅವನ್ನು ತ್ಯಜಿಸುವವರಿಗೆ ತ್ಯಜಿಸಲು, ಮತ್ತು ಸ್ವೀಕರಿಸುವವರಿಗೆ ಸ್ವೀಕರಿಸಲು ಅವು ಮುಕ್ತ ಅವಕಾಶವನ್ನು ಕೊಡುವವು, ಮತ್ತು ಅವು ಬಲವಂತಪಡಿಸುವುದಿಲ್ಲ. ಆದರೆ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಿದ್ಧಾಂತಗಳೆಂದು ಹೇಳಿಕೊಳ್ಳುವ ಧರ್ಮ, ಪಂಥಗಳು, ತಮ್ಮದೇ ಧರ್ಮ, ಪಂಥಗಳ 'ನಂಬಿಕೆ' ಎಂಬ ರೀತಿಯನ್ನು ಉಪಯೋಗಿಸಿ ಎಷ್ಟೋ ಜೀವನ ಮೌಲ್ಯಗಳನ್ನು ಆರಂಭದಿಂದಲೇ ಧ್ವಂಸ ಮಾಡುತ್ತಾ ಬಂದಿರುವವು. ಇಲ್ಲಿ ಯಾರಿಗೂ ಆ ಜೀವನ ಮೌಲ್ಯಗಳ ಧ್ವಂಸ ಮಾಡುವಿಕೆಯನ್ನು ನಿಲ್ಲಿಸುವಂತೆ ಹೇಳುವ ಧೈರ್ಯವೂ ಇಲ್ಲ. ಯಾಕೆಂದರೆ ಹಾಗೆ ಪ್ರಶ್ನಿಸಲು ಸಾಧ್ಯವಾಗದಂತೆ ಅವನ್ನು 'ದೈವ ನಿಂದನೆ' ಎಂದು ಹೇಳುತ್ತಾ ಜನರನ್ನು ಹೆದರಿಸಿ ಇಟ್ಟಿರುವುದು ಭಯಾನಕ ಬಂಧನ ಮತ್ತು ಬಲವಂತಪಡಿಸುವಿಕೆಯಾಗಿದೆ.

ಸಾವಿರಾರು ನಂಬಿಕೆಯ ಸಾವಿರಾರು ಆಚಾರಗಳನ್ನು ಅನುಷ್ಠಾನ ಮಾಡಿದರೂ ಅವುಗಳಲ್ಲಿ ಯಾವುವೆಲ್ಲಾ ಮಾನವನ ಜೀವನಮೌಲ್ಯವನ್ನು ನಾಶಪಡಿಸುವವು, ಅವೆಲ್ಲಾ ಅಧರ್ಮವಾಗುವವು. ಆದುದರಿಂದ ಎಲ್ಲಾ ಧರ್ಮಗಳಲ್ಲಿರುವ ಅಂಧ ನಂಬಿಕೆ, ಆಚಾರಗಳನ್ನು ಆಯಾ ಧರ್ಮ ಪಂಥದವರು ಪತ್ತೆ ಹಚ್ಚಿ ಅವುಗಳು ಜೀವನಮೌಲ್ಯಗಳನ್ನು ನಾಶ ಮಾಡದ ರೀತಿಯಲ್ಲಿ ಬದಲಾಯಿಸುವುದಾದರೆ ಅವೆಲ್ಲವೂ ಒಂದು ರೀತಿಯಲ್ಲಿ ಶುದ್ಧೀಕರಿಸಲ್ಪಡುವವು, ಮತ್ತು ಜಗತ್ತಿಗೆ ಶಾಂತಿ ನೆಮ್ಮದಿಯನ್ನು ತರುವಲ್ಲಿ ತಡೆಯಾಗಲಾರವು.

# ಈ ಜಗತ್ತನ್ನೇ ನಾಶ ಮಾಡುವ ದೆವ್ವ

ಒಂದು ಅಚ್ಚರಿ ಎಂದರೆ, "ತನ್ನದು" ಎಂಬ ಶಬ್ದವು ಈ ಜಗತ್ತನ್ನೇ ಆಳುತ್ತಿದೆ! ಹೌದು, ತಾಯಿಗೆ ತನ್ನ ಮಗುವು ತನ್ನದಾದುದರಿಂದ ಅದರ ಮೇಲೆ ಅತಿಯಾದ ಮಮತೆ, ಆದರೆ ನೆರೆಮನೆಯಲ್ಲಿ ಇರುವ ಮಗುವಿನ ಮೇಲೆ ಇಲ್ಲ. ಇದೇ ರೀತಿ ಸಂಬಂಧ, ಜಾತಿ, ಮನೆತನ, ಧರ್ಮ, ದೇಶ ಇತ್ಯಾದಿಗಳಾಗಿವೆ. ಆದರೆ, ಅದೇ 'ತನ್ನದು' ಭಾವನೆಯು ತನಗೆ ಅಥವಾ ತಮಗೆ ತಮ್ಮವರಿಂದಲೇ ತೊಂದರೆಯಾಗುವಲ್ಲಿ ಹೊರಟುಹೋಗುವುದು!! ಇಷ್ಟೇ, ಇಲ್ಲಿಗೆ ಶ್ರೀ ಸಾಮಾನ್ಯರ ಈ ಭೂಮಿಯ ಲೌಕಿಕ ಜೀವನದ ವಿವರಣೆ ಮುಗಿಯಿತು!!

ಇನ್ನು ಧಾರ್ಮಿಕ ಜೀವನದ ವಿವರಣೆಯೂ ಇದೇ 'ತನ್ನದು' ವಿನಲ್ಲೇ ಹೂತುಹೋಗಲ್ಪಟ್ಟಿದೆ!! ಇಲ್ಲಿ ಒಂದು ಅಂಶವನ್ನು ನಾವು ಮರೆಯಬಾರದು, ಅದೇನೆಂದರೆ, ನಾವು ಮಾತಾಡುತ್ತಿರುವುದು ಮಾನವನ ಜೀವನ ಮೌಲ್ಯಗಳ ಕುರಿತಾಗಿದೆ ಅದಲ್ಲದೆ ಆತನ ಪ್ರತ್ಯೇಕ ಜಮೀನು, ಅವನದೇ ಖಾತೆಯಲ್ಲಿರುವ ಹಣದ ಬಗ್ಗೆ ಅಲ್ಲ. ನಿಜವಾಗಿ ನೋಡಿದರೆ ಧರ್ಮಕ್ಕೂ 'ತನ್ನದು' ಭಾವನೆಗೂ ಯಾವುದೇ ಸಂಬಂಧವಿಲ್ಲ, ಯಾಕೆಂದರೆ ಸೃಷ್ಟಿಕರ್ತ ದೇವರು ಜಗತ್ತಿಗೆ ಒಬ್ಬನೆ ಎಂದು ಎಲ್ಲಾ ಧರ್ಮಗಳೂ ಒಪ್ಪಿವೆ. ಆದರೂ ಅವು 'ತಮ್ಮದು' ಎಂಬುವುದನ್ನು ಅಲ್ಲಿಯೂ ಉಪಯೋಗಿಸುವವು. ಅದು ಹೇಗೆಂದರೆ ಅಕ್ಕಿಗೂ ಯಾವುದಾದರೂ ಒಂದು ಅಂಗಡಿಗೂ ಯಾರದರೂ ಸಂಬಂಧ ಕಲ್ಪಿಸಿ ಜಗತ್ತಲ್ಲಿ ಆ ಅಂಗಡಿಯಲ್ಲಿ ಮಾತ್ರ ಅಕ್ಕಿ ದೊರಕುವುದು ಎಂಬ ರೀತಿಯ ಹುಚ್ಚು ನಂಬಿಕೆಯಾಗುವುದು. ಇನ್ನು, ಪಂಥ, ಪರಂಪರೆಗಳ ಶ್ರೇಷ್ಠತೆ ಇತ್ಯಾದಿಗಳು ಇದ್ದೇ ಇವೆ, ಇಲ್ಲಿಗೆ ಸಾಮಾನ್ಯರ ಧಾರ್ಮಿಕ ಜೀವನದ ವಿವರಣೆಯೂ ಮುಗಿಯಿತು!!

ಇನ್ನಿರುವುದು ಆಧ್ಯಾತ್ಮಿಕ ಜೀವನವಾಗಿದೆ. ಇಲ್ಲಿಯೂ, ಈ ಜಗತ್ತಿಗೆ ಒಂದೇ ಸೃಷ್ಟಿಕರ್ತ ದೇವರಾದರೂ, ಎಲ್ಲರೂ ಮೋಕ್ಷ ಮಾರ್ಗವನ್ನು 'ನಮ್ಮದು' ಎಂಬಲ್ಲಿಯೇ ತಿಳಿಸಲು ಪ್ರಯತ್ನಿಸುವರು. ಒಂದೊಂದು ಧರ್ಮಕ್ಕೂ ಅದೇ ರೀತಿ ಪಂಥಕ್ಕೂ ಅದರದೇ ಆದ ಮೋಕ್ಷ ಮಾರ್ಗಗಳಿವೆ ಈ ರೀತಿಯಲ್ಲಿ ಇಲ್ಲಿಯೂ 'ನಮ್ಮದು' ಮಾತ್ರ ಕೆಲಸ ಮಾಡುವುದು ಮತ್ತು ಇಲ್ಲಿಗೆ ಆಧ್ಯಾತ್ಮ ಜೀವನದ ವಿವರಣೆಯೂ ಮುಗಿಯುವುದು!! ಅಂದರೆ, ಹಲವು ಮೋಕ್ಷ ಸಿದ್ಧಾಂತಗಳು ಸಾವಿರಾರು ವರುಷಗಳಿಂದ ತಮ್ಮದು ಮಾತ್ರವೇ ಸರಿ ಎಂದು ವಾದ ಮಾಡುತ್ತಾ ಬಂದಿವೆ, ಮತ್ತು ಅವುಗಳಲ್ಲಿನ ಆ ವಾದ ಮಾಡಿ ಜಯಿಸುವ ಭಾವವು ಮೋಕ್ಷಾರ್ಥಿಗಳಿಗೆ ಎಂದಿಗೂ ಹೇಳಿದ್ದಲ್ಲ. ಅದು ಮಾನವನ ವಿಶಾಲ ಮನಸ್ಕತೆ ಅಥವಾ ಮುಕ್ತ ಭಾವವನ್ನೇ ನಾಶಪಡಿಸುವುದು!!

ಇನ್ನು, ಈ 'ನಮ್ಮದು' ಭಾವನೆಯು ಜಗತ್ತಿಗೆ ಕೊಟ್ಟಿರುವ ಸಂಭಾವನೆಯು ಬರೇ ದ್ವೇಷ, ಜಗಳ, ರಕ್ತಪಾತಗಳು ಮಾತ್ರವಾಗಿರುವುದು!! ಆದರೆ, ಮಹಾತ್ಮರ ಜೀವನವು ಈ 'ನನ್ನದು' ಎಂಬ ಆ ಮೂಲ ಅಜ್ಞಾನವನ್ನು ತೊಡೆದು ಹಾಕುವುದರಿಂದ ಮತ್ತು ಸಾರ್ವತ್ರಿಕ ಮೌಲ್ಯಗಳ ಕುರಿತು ಮಾತ್ರ ವಿಚಾರ

ಮಾಡುವುದರಿಂದ ಅವರು ಮಾತ್ರ ಈ ಜಗತ್ತಲ್ಲಿ ಜಗಳ, ರಕ್ತಪಾತಗಳನ್ನು ಎಂದೆಂದಿಗಾಗಿ ನಿಲ್ಲಿಸುವಲ್ಲಿ ಶಕ್ತರು ಎನ್ನಬಹುದು.

ಈ ಜಗತ್ತಲ್ಲಿ ಎಲ್ಲಾ ಧರ್ಮ, ಪಂಥಗಳಿಂದಲೂ ಕೋಟಿಗಟ್ಟಲೆ ಮಹಾತ್ಮರು ಸೃಷ್ಟಿಯಾಗಿ, ಈ ಜಗತ್ತನ್ನು, ರಕ್ತಪಾತಗಳಿಂದ ದೂರವಾಗಿಸಿ, ಆ ಪವಿತ್ರ ಪ್ರೀತಿಯಿಂದ ಜನರನ್ನು ಒಂದಾಗಿಸಲಿ ಎಂದು ಆಶಿಸೋಣ.

# ಧೈರ್ಯಗಳಲ್ಲಿ ಹಲವು ರೀತಿಗಳು ಮತ್ತು ಪ್ರಾಚೀನ ವಾಮಾಚಾರ

ಧೈರ್ಯಗಳಲ್ಲಿ ಹಲವು ವಿಧಗಳಿವೆ. ಈಗ, ಮೊದಲು ಭಯವನ್ನು ನೋಡುವುದಾದರೆ, ಸಾಮಾನ್ಯ ಮಾನವರಲ್ಲಿ ಶರೀರಕ್ಕೆ ಬರಬಹುದಾದ ಅಪಾಯ, ರೋಗ ಇತ್ಯಾದಿಗಳ ಕುರಿತಾದ ಭಯ, ಮತ್ತು ತನ್ನ ಸ್ಥಾನ, ಮಾನಗಳಿಗೆ ದಕ್ಕೆ ಆಗುವ ಭಯ, ಇತ್ಯಾದಿಗಳು ಮುಖ್ಯವಾಗಿವೆ. ಈ ತೊಂದರೆಗಳನ್ನು ಎದುರಿಸುವಲ್ಲಿ ಜನರು ತೋರಿಸುವ ಧೈರ್ಯವು ಒಂದು ರೀತಿಯ ಧೈರ್ಯವಾಗಿದೆ. ಇನ್ನು ದೇಶಸೇವೆಗಾಗಿ ಸೇನೆಯಲ್ಲಿ ತನ್ನ ಜೀವವನ್ನು ಕೊಡಲು ತಯಾರಾಗುವ ಧೈರ್ಯವು ಅದು ಇನ್ನೊಂದು ರೀತಿಯ ಧೈರ್ಯವಾಗಿದೆ. ಇವುಗಳು ಶರೀರಕ್ಕೆ ಸಂಬಂಧಿಸಿದ ಧೈರ್ಯಗಳಾಗಿವೆ.

ಜನರು ಸಮಾಜದಲ್ಲಿ ಜೀವಿಸುವಾಗ ಹೆಚ್ಚಿನವರೂ ತನ್ನ ಮನೆಯ ಅಥವಾ ತಮ್ಮ ಹತ್ತಿರದ ಜನರ ಆಸಕ್ತಿಗೆ ಮತ್ತು ಅವರ ಅಭಿಪ್ರಾಯದಂತೆ ನಡೆಯಲು ಬಯಸುವರು. ಅಲ್ಲಿ, ಎಲ್ಲರೂ ತಪ್ಪು ನಿರ್ಧಾರವನ್ನು ಮಾಡುತ್ತಿದ್ದಾರೆ ಎಂದು ಗೊತ್ತಿದ್ದರೂ ಅದನ್ನು ಎದುರಿಸುವಲ್ಲಿ ಭಯ ಪಡುವರು. ಆಗ ಆ ವ್ಯಕ್ತಿಯೂ ಆ ತಪ್ಪನ್ನು ಮಾಡಲು ತಯಾರಾಗುತ್ತಾನೆ!! ಆದರೆ, ಬಹಳ ಹಿಂದಿನ ಕಾಲದಿಂದಲೇ, ಕೆಲವು ಜನರು ಮಾತ್ರ ಆ ರೀತಿಯನ್ನು ಒಪ್ಪಲು ತಯಾರಾಗದೆ ಸತ್ಯಕ್ಕೆ ಬೇಕಾಗಿ ಜೀವಿಸಿದ್ದರು. ಈ ರೀತಿಯ ಜನರ ಧೈರ್ಯವು ಮತ್ತೊಂದು ರೀತಿಯಾಗಿದೆ. ಆದರೆ ಸ್ವಾರ್ಥವನ್ನು ತ್ಯಾಗಮಾಡಿ, ಸಮಾಜದ ಹಿತ ದೃಷ್ಟಿಯಿಂದ ಮತ್ತು ನೈತಿಕತೆಯ ದೃಷ್ಟಿಯಿಂದ ಅಂಥ ಜನರು ತೋರಿರುವ ಧೈರ್ಯವೇ ಸಮಾಜಕ್ಕೆ ಅತ್ಯಂತ ಉತ್ತಮ ಮತ್ತು ಅನಿವಾರ್ಯವಾದ ಧೈರ್ಯ ಎನ್ನಬಹುದು, ಯಾಕೆಂದರೆ ಉತ್ತಮ ವ್ಯಕ್ತಿತ್ವದ ಕೊಂಡಿಯು ಈ ಭೂಮಿಯಿಂದ ಎಂದೆಂದಿಗಾಗಿ ಕಳಚಿಹೋಗದಂತೆ ಇಂಥವರು ಅದನ್ನು ರಕ್ಷಿಸುತ್ತಾ ಬಂದಿದ್ದಾರೆ.

ಯಾರು ಸರಿಯಾಗಿ ಸತ್ಯವನ್ನು ತಿಳಿಯದೆ ದುಡುಕಿ ಧೈರ್ಯವನ್ನು ಪ್ರದರ್ಶಿಸುವರೋ ಅವರ ಧೈರ್ಯವು ಅವರಿಗೆ ಮಾರಕವಾಗಿ ಪರಿಣಮಿಸಲು ಸಾಧ್ಯವಿರುವ ಕಾರಣ ಆ ರೀತಿಯ ಧೈರ್ಯವು ಅನಗತ್ಯ ಮತ್ತು ಅಪಾಯಕಾರಿ ಧೈರ್ಯವಾಗುವುದು. ಆ ಪ್ರಾಚೀನ ವಾಮಾಚಾರವು ಸ್ವಾರ್ಥ, ಅನೈತಿಕತೆಯನ್ನು ಬೆಳೆಸುವಲ್ಲಿ ಜನರಿಗೆ ತುಂಬಾ ಧೈರ್ಯವನ್ನು ತುಂಬುತ್ತಾ ಇರುವುದು. ಇದು ನಿಜವಾಗಿಯೂ ಅತ್ಯಂತ ಅಪಾಯಕಾರಿಯಾಗುವುದು.

# ಇತರ ಧರ್ಮಗಳ ಕುರಿತು ಅಭಿಪ್ರಾಯ

ಯಾವ ಧರ್ಮದಲ್ಲಾದರೂ ಇರುವ ಒಳಿತಿನ ಭಾಗವನ್ನು ನಾವು ಒಪ್ಪಿಕೊಳ್ಳಲೇ ಬೇಕು, ಅದುವೇ ಪ್ರತ್ಯಕ್ಷ ದೇವರು, ಅದಲ್ಲ, ತನ್ನ ಅಲ್ಪತನ ಮತ್ತು ಧರ್ಮಾಂಧತೆಯ ಹಿನ್ನೆಲೆಯಲ್ಲಿ ಅದನ್ನು ಸುಳ್ಳು ಎಂದರೆ, ಆ ವ್ಯಕ್ತಿ ಈ ಬ್ರಹ್ಮಾಂಡದಲ್ಲೆಲ್ಲಾ ದೇವರನ್ನು ಹುಡುಕಿದರೂ ದೇವರು ಆತನಿಗೆ ಸಿಗಲಾರ, ಯಾಕೆಂದರೆ, ದೇವರು ಅಲ್ಲೇ ಆತನು ತುಳಿದ ಒಳಿತಿನಲ್ಲೇ ಇದ್ದನು!! ಇಂಥವರೇ ಆ ಪಕ್ಷಪಾತದ ಧರ್ಮದವರು, ಮತ್ತು ರಕ್ತಪಾತವನ್ನು ಆಗ್ರಹಿಸುವವರು.

ದೇವರನ್ನು ಮತ್ತು ಧರ್ಮವನ್ನು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂದು ತಿಳಿಯುವಲ್ಲಿ ಜನಸಾಮಾನ್ಯನೂ ಒಮ್ಮೆಲೆ ಮಹಾತ್ಮರಂತಾಗಿಬಿಡುವನು, ಯಾಕೆಂದರೆ ಅವನಿಗೆ ಸುಲಭದಲ್ಲಿ ತನ್ನ ಅಲ್ಪತನವನ್ನು ಬಿಡಲು ಮತ್ತು ಮಹತ್ತಾದ ವಿಶಾಲ ಮನಸ್ಕತೆಯನ್ನು ಪಡೆಯಲು ಅದು ಸಹಾಯ ಮಾಡುವುದು! ವಿಶಾಲಮನಸ್ಕತೆ ಇರುವ ಮಹಾತ್ಮರನ್ನು ಯಾರನ್ನಾದರೂ ಒಬ್ಬಾತ ಸೈತಾನ ಎಂದರೆ ಆ ಹೇಳುವಾತನು ತನ್ನ ದೇವರನ್ನೇ, ತಾನೇ ಅರಿಯದೆ, ಸೈತಾನಿಗೆ ಹೋಲಿಸುತ್ತಾನೆ ಎಂಬುವುದು ಸತ್ಯ! ಮಹಾತ್ಮರ ಸ್ವಭಾವವು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ ಆಗುವುದೆಂದು ನಮಗೆಲ್ಲಾ ತಿಳಿದಿದೆ. ಆಗ, ಯಾರಾದರೂ ಆ ಮಹಾತ್ಮನನ್ನು ಸೈತಾನ ಎಂದರೆ ಅಲ್ಲಿ ಏನು ಸಂಭವಿಸುವುದು? ಅಲ್ಲಿ ಆ ಆರೋಪಿಸಿದ ವ್ಯಕ್ತಿಗೆ ಸೈತಾನನೆಂದರೆ ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿ ಆಗುವುದು! ಸೈತಾನನ ತದ್ವಿರುದ್ಧ ಸ್ವಭಾವವು ದೇವರಿಗೆ ಇರುವುದು ಎಂದು ಆತನ ಧರ್ಮದಲ್ಲೇ ಹೇಳಿದೆ, ಆ ಹಿನ್ನೆಲೆಯಲ್ಲಿ, ದೇವರ ಸ್ವಭಾವವು, ಅವನ ಪ್ರಕಾರ, ಅಸತ್ಯ, ದ್ವೇಷ, ಮತ್ತು ಅನೈತಿಕತೆ ಆಗುವುದು!! ಅಂದರೆ, ಯಾರು ಮಹಾತ್ಮರನ್ನು ಸೈತಾನ ಎಂದು ಹೇಳುವನೋ ಆತನು ತನ್ನ ದೇವರ ಸ್ವಭಾವವನ್ನು ಅಸತ್ಯ, ದ್ವೇಷ, ಮತ್ತು ಅನೈತಿಕತೆ ಎಂದು ಹೇಳಿದಂತಾಗುವುದು. ಆದರೆ ಎಲ್ಲಾ ಧರ್ಮಗಳಲ್ಲೂ ಆ ಋಣಾತ್ಮಕ ಸ್ವಭಾವಗಳು ಸೈತಾನನದ್ದು ಎಂದೂ ಹೇಳಿರುವುದರಿಂದ, ಆ ವ್ಯಕ್ತಿಯು ತನ್ನ ದೇವರನ್ನೇ ಸೈತಾನನನ್ನಾಗಿ ಮಾಡಿದಂತೆ ಆಗುವುದು. ಆದರೆ, ದೇವರ ಸಂಕಲ್ಪವು ಎಂದಿಗೂ ಸೈತಾನ ಆಗದ ಕಾರಣ, ಆ ವ್ಯಕ್ತಿಯನ್ನು ಸೈತಾನನ ಭಕ್ತ ಎಂದು ಮಾತ್ರ ಹೇಳಬೇಕಾಗುವುದು.

# ಧರ್ಮ ಪ್ರಚಾರ ಮತ್ತು ಮತಾಂತರ

ಧರ್ಮವನ್ನು ಪ್ರಚಾರಮಾಡಲು ಅದು ಮಾರು ಕಟ್ಟೆಯ ವಸ್ತುವಲ್ಲ, ಅದು ನಾವು ನಾವೇ ಅನುಷ್ಠಿಸಬೇಕಾದ ಕರ್ಮವಾಗಿದೆ. ಸತ್ಯದ ಅನುಷ್ಠಾನ ಮಾತ್ರ ಇರುವಲ್ಲಿ ಪ್ರಚಾರ ಮಾಡುವ ಅವಕಾಶ ಯಾರಿಗೂ ಸಿಗಲಾರದು. ಸತ್ಯವನ್ನು ತಿಳಿಯಲು ಇಚ್ಚಿಸುವವರಿಗೆ ಅದರ ಕುರಿತು, ಸಾಧ್ಯವಾದಲ್ಲಿ, ತಿಳಿಸಿ ಕೊಡಬಹುದು ಅಷ್ಟೆ. ಧರ್ಮ ಪ್ರಚಾರವು ಮತಾಂತರದ ಜನಸಂಖ್ಯೆ ಹೆಚ್ಚಿಸುವಲ್ಲಿದೆ, ಆದರೆ, ಧರ್ಮ ಅನುಷ್ಠಾನವು, ಮನೋ ಶುದ್ದೀಕರಣದಿಂದ ಮನೆ ಮನೆಯ ಮಹಾತ್ಮರನ್ನು ಸೃಷ್ಟಿಸುವಲ್ಲಿದೆ.

ಮೂಲದಲ್ಲಿ, ಈ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೇ ಎಲ್ಲಾ ಧರ್ಮಗಳಲ್ಲೂ ಇರುವ ಸಾರಧರ್ಮವಾಗಿರುವಾಗ, ಇನ್ನು, ಒಬ್ಬನು ಶ್ರೇಷ್ಠಧರ್ಮಕ್ಕೆ ಬೇಕಾಗಿ ಮತಾಂತರವಾಗಲು ಸಾಧ್ಯವಿಲ್ಲ ಎಂದಾಯಿತು. ಅಂದರೆ, ಬರೇ ಆಚಾರಗಳ ವ್ಯತ್ಯಾಸಕ್ಕೆ ಮಾತ್ರ ಮತಾಂತರ ಆದಂತೆ ಆಗುವುದು. ಒಂದು ದಿಕ್ಕಿಗೆ ತಿರುಗಿ ಮಾಡುವ ಧರ್ಮಾಚರಣೆಯಿಂದ ಅದರ ವಿರುದ್ದ ದಿಕ್ಕಿಗೆ ತಿರುಗಿ ಮಾಡುವ ಧರ್ಮಾಚರಣೆಗೆ ವರ್ಗಾವಣೆ ಮಾಡಿದಂತೆ ಮಾತ್ರ ಈ ಮತಾಂತರಕ್ಕೆ ಅರ್ಥ ಬರುವುದು ಅಷ್ಟೆ!! ಈ ಕಾರಣದಿಂದ, ಧರ್ಮ ಮತ್ತು ಮತಾಂತರಗಳೊಳಗೆ ಯಾವ ಸಂಬಂಧವೂ ಇಲ್ಲ ಎಂದು ತಿಳಿದುಕೊಳ್ಳಬಹುದು. ಇನ್ನು, ಒಂದು ಉದಾಹರಣೆ ಸಂಭಾಷಣೆಯನ್ನು ಈ ಕೆಳಗೆ ಕೊಡಲಾಗಿದೆ ಅದನ್ನು ಗಮನಿಸಿರಿ.

ಒಂದು ಸಂಭಾಷಣೆಯು ಈ ಕೆಳಗಿನಂತಿದೆ.

ಪ್ರಶ್ನೆ- ಮತಾಂತರ ತಪ್ಪಲ್ಲವೇ?

ಧರ್ಮ ಪಂಡಿತ- ಮತಾಂತರ ತಪ್ಪಲ್ಲ, ಸಂವಿಧಾನವೂ ಅದನ್ನು ವಿರೋಧಿಸಿಲ್ಲ.

ಪ್ರಶ್ನೆ- ಒಂದು ದೇಶದಲ್ಲಿ ಎಷ್ಟು ಜನರನ್ನು ನಿಮ್ಮ ಧರ್ಮಕ್ಕೆ ಮತಾಂತರ ಮಾಡಬಹುದು ಎಂದು ನಿಮ್ಮ ಅಂದಾಜು?

ಧರ್ಮ ಪಂಡಿತ – ಈ ಜಗತ್ತಿನ ಎಲ್ಲರೂ ನಮ್ಮ ಧರ್ಮಕ್ಕೆ ಮತಾಂತರವಾಗುವ ತನಕವೂ ಸಾಧ್ಯ.

ಪ್ರಶ್ನೆ- ನೀವು ಮತಾಂತರವನ್ನು ಖಂಡಿತಾ ಪ್ರೋತ್ಸಾಹಿಸುವಿರಾದರೆ, ಇನ್ನೊಂದು ಧರ್ಮದವರು ನಿಮ್ಮ ಧರ್ಮವರನ್ನೆಲ್ಲಾ ಅವರ ಧರ್ಮಕ್ಕೆ ಮತಾಂತರ ಮಾಡುವಾಗ ನೀವು ಅದನ್ನು ಪ್ರೋತ್ಸಾಹಿಸಬೇಕಾಗುವುದು. ನೀವು ಅದರ ವಿರುದ್ದ ಒಂದು ಮಾತನ್ನೂ ಆಡುವುದಿಲ್ಲ ಎಂದು ಹೇಳಬಹುದೇ?

ಧರ್ಮ ಪಂಡಿತ- ಹಾಗೆ ಯಾರಾದರೂ ಮಾಡುವುದಾದರೆ, ನಾವು ಯಾವ ಬೆಲೆ ತೆತ್ತಾದರೂ ಅದನ್ನು ಎದುರಿಸುವೆವು.

ಪ್ರಶ್ನೆ- ಅಂದರೆ, ಅದರ ಅರ್ಥ, ಅಲ್ಲಿ ನೀವು ಅದನ್ನು ಪ್ರೋತ್ಸಾಹಿಸುವುದಿಲ್ಲ ಎಂದು, ಅಲ್ಲವೇ?

ಧರ್ಮ ಪಂಡಿತ –...................................... [ಮೌನ]

ಜನರಿಗೆ ಸೃಷ್ಟಿಕರ್ತ ದೇವರು ಬೇಕು, ಆದರೆ ಅವರದ್ದು ಮಾತ್ರ ಸಾಕು! ಜನರಿಗೆ ಧರ್ಮ ಬೇಕು, ಆದರೆ ಅವರದ್ದು ಮಾತ್ರ ಸಾಕು! ಜನರಿಗೆ ಮತಾಂತರವೂ ಬೇಕು, ಆದರೆ ಅದನ್ನು ಮಾಡುವವರು ಅವರು ಮಾತ್ರ ಆಗಿರಬೇಕು!

ಇಷ್ಟೆಲ್ಲಾ ದುಷ್ಟ ಬುದ್ದಿಯನ್ನು ತಮ್ಮಲ್ಲಿರಿಸುತ್ತಾ, ಈ ಜನರು ಹೇಗೆ ಆ ವಿಶಾಲ ಅರ್ಥವಿರುವ ಧರ್ಮವನ್ನು ಬೋಧಿಸುವರು ಎಂಬುವುದು, ನಿಜವಾಗಿಯೂ, ಒಂದು ಪವಾಡದಂತೆ ತೋರುವುದು!!

# ಜಾತಿಗಳು – ವರ್ಣಗಳು – ಪ್ರಾಚೀನ ವಾಮಾಚಾರ

ಜಾತಿಗಳು ಸಮಾಜದಲ್ಲಿ ಅನಿವಾರ್ಯ ಎನ್ನುವವರು ಆ ಮಾತನ್ನು ಸ್ಪಷ್ಟವಾದ ಕಾರಣ ಸಹಿತ ವಿವರಿಸಿ ಕೊಡಬೇಕು. ಅದಲ್ಲದೆ, ಯಾರಿಗೂ ನಂಬಿಕೆಯ ಹಿನ್ನೆಲೆಯಲ್ಲಿ ಆ ರೀತಿ ಹೇಳುವ ಹಕ್ಕಿಲ್ಲ. ಅಂದರೆ, ಧಾರ್ಮಿಕ ಹಿನ್ನೆಲೆಯಲ್ಲಿಯೇ ಹಾಗೆ ವಾದ ಮಾಡುವ ಪಂಡಿತರುಗಳು ವಿವರಿಸಿ ತಿಳಿಸಿ ಕೊಡಬೇಕಾಗುವುದು. ಆದರೆ ಅದು ಯಾರಿಗೂ ಎಂದಿಗೂ ಸಾಧ್ಯವಾಗಲಾರದು, ಯಾಕೆಂದರೆ ಧರ್ಮವು ಎಲ್ಲೂ ಜಾತಿ, ವರ್ಣಗಳ ಕುರಿತು ಹೇಳಿಲ್ಲ ಮತ್ತು ಹಾಗೆ ಹೇಳಿದಲ್ಲಿ ಅದು ಧರ್ಮವೇ ಅಲ್ಲದಾಗುವುದು!

ಧರ್ಮವು ಅಡಗಿರುವುದು ಸಾಮಾಜಿಕ ನ್ಯಾಯದಲ್ಲಿ, ಮತ್ತು ಸಾಮಾಜಿಕ ಅನ್ಯಾಯದಲ್ಲಿ ಅಲ್ಲ ಎಂದು ಎಲ್ಲರಿಗೂ ಗೊತ್ತಿದೆ. ಶೂದ್ರರು ವೇದವನ್ನು ಅಥವಾ ಜ್ಞಾನವನ್ನು ಪಡೆಯಬಾರದು ಮತ್ತು ಅವರು ಎಂದೆಂದಿಗೂ ಸೇವೆ ಮಾಡುವವರಾಗಿಯೇ ಇರಬೇಕು ಎಂದು ಎಲ್ಲಾದರೂ ಇಂದು ನ್ಯಾಯಾಲಯದಲ್ಲಿ ವಾದ ಮಾಡಿದರೆ, ಆ ವಾದ ಮಾಡುವ ವಕೀಲನನ್ನೇ ನ್ಯಾಯಾಧೀಶರು ಸೆರೆಮನೆಗೆ ಅಟ್ಟಬಹುದು. ಇಂದಿನ ಭಾರತದ ಸಂವಿಧಾನವೇ ಇಂದಿನ ಸಮಾಜದ ನಿಯಮ ಸಂಹಿತೆ ಅಥವಾ ಇಂದಿನ ಭಾರತದ ಸ್ಮೃತಿ ಆಗಿದೆ ಎನ್ನಬಹುದು. ಇದು ನಿಜವಾಗಿಯೂ ಎಲ್ಲಾ ಧರ್ಮದವರಿಗೂ ಒಂದೇ ರೀತಿಯಲ್ಲಿರಬೇಕಾಗಿದೆ. ಇನ್ನು, ಹಿಂದಿನ ಕಾಲದಲ್ಲಿ ಮಾಡಿರುವ ಈ ಶೂದ್ರ ಶೋಷಣೆಯು ಅದು ಅಂದೂ ಸಾಮಾಜಿಕ ನ್ಯಾಯವನ್ನು ಕೊಟ್ಟಿರಲಿಲ್ಲ, ಬದಲು ಮಾನವನು ಭೀಕರವಾಗಿ ಶೋಷಣೆಯಲ್ಲಿ ನರಳುವಂತೆ ಮಾಡಿದೆ. ಹಾಗಾದರೆ ನಿಜವಾಗಿಯೂ ಈ ರೀತಿಯ ಶೋಷಣೆಗಳನ್ನು ಸೃಷ್ಟಿ ಮಾಡಿದವರು ಯಾರು? ಎಲ್ಲರ ಆತ್ಮವೂ ಆ ದೇವರೇ ಆಗಿದ್ದು ಮಾನವರೆಲ್ಲಾ ಆ ಒಂದೇ ದೇವರು ಎಂದು ಹೇಳುವ ಧರ್ಮಕ್ಕೆ ಅದು ಸಾಧ್ಯವಿದೆಯೇ? ಇಲ್ಲ, ಖಂಡಿತಾ ಸಾಧ್ಯವಿಲ್ಲ. ಅದೇ ರೀತಿ, "ದೇವರ ಮಕ್ಕಳು ನಾವೆಲ್ಲ" ಎಂಬ ರೀತಿಯಲ್ಲಿ ಆ ಏಕ ಸೃಷ್ಟಿಕರ್ತ ದೇವರನ್ನು ಹೊಗಳುವ ಅದೇ ಧರ್ಮದ ಇನ್ನೊಂದು ರೀತಿಗೂ ಸಾಧ್ಯವೇ? ಇಲ್ಲ, ಅದೂ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ, ಧರ್ಮದ ಹಿನ್ನೆಲೆಯಲ್ಲಿ ಜಾತೀಯತೆ ಅಥವಾ ವರ್ಣವು ಹೇಳಲ್ಪಟ್ಟಿದೆ ಎಂದರೆ ಆ ಮಾತಿಗೆ ತಾತ್ವಿಕ ಆಧಾರವೇ ಇಲ್ಲದೆ ಅದು ಸುಳ್ಳು ಆಗುವುದು!! ಹಾಗಿದ್ದರೆ, ಈ ವರ್ಣ, ಜಾತೀಯತೆ ಎಲ್ಲಿಂದ ಆರಂಭವಾಯಿತು? ಅದು ರಾಜರ ಕಾಲದಿಂದ ಆರಂಭವಾಯಿತು. ಅಲ್ಲಿ ಸಮಾನತೆ ಎಂಬುವುದು ಇಲ್ಲವೇ ಇಲ್ಲವಾಗಿತ್ತು. ಅಲ್ಲಿ, ರಾಜನು ಪ್ರಜೆಗಳಿಗೆ ತಾನೇ ಪ್ರತ್ಯಕ್ಷ ದೇವರೆಂದು ಹೇಳಿಕೊಂಡಿದ್ದಾನೆ. ಮತ್ತು ಅವರೊಂದಿಗೆ ಬ್ರಾಹ್ಮಣರೂ ಈ ಭೂಮಿಯ ದೇವತೆಗಳೆಂದೂ ಸ್ವಯಂ ಘೋಷಿಸಿಕೊಂಡರು. ಅಂದರೆ, ಈ ಭೂಮಿಯ ಸುರರು ಅಥವಾ ಭೂಸುರರು ಎಂದು ತಮ್ಮನ್ನು ತಾವೇ ಬಣ್ಣಿಸಿದರು! ಆಗ ಉಳಿದವರು ತಾವಾಗಿಯೇ ಅವರ ಭಕ್ತರಾಗಬೇಕಾಯಿತು!! ಈ ರೀತಿಯಲ್ಲಿ, ಈ ಸಾಮಾಜಿಕ ಅಪಸ್ವರಗಳ ಸೃಷ್ಟಿಯು ಆ ಹಿಂದಿನ ರಾಜರುಗಳು ಮತ್ತು ಅಂದಿನ ಧರ್ಮಪಂಡಿತರುಗಳ ಸೃಷ್ಟಿಯೆಂದು ನಮಗೆ ತಿಳಿಯುವುದು. ಇವರು, ತಮಗೆ ಮತ್ತು ತಮ್ಮ ಸ್ವಾರ್ಥಗಳಿಗೆ ತಕ್ಕಂತೆ ಸಮಾಜವನ್ನು ರೂಪಿಸಿದರೆಂದು ಮತ್ತು ಅದಕ್ಕೆ ಧರ್ಮದ ಹೆಸರನ್ನು ಕೊಟ್ಟರು ಎಂದು ಇದರಿಂದ ಸ್ಪಷ್ಟವಾಗುವುದು. ಪ್ರಾಚೀನ ವಾಮಾಚಾರವು

ಮಾನವನಿಂದ ಮಾನವನನ್ನು ಬೇರ್ಪಡಿಸಲು ಹಲವು ರೀತಿಗಳಲ್ಲಿ ಪ್ರಯತ್ನಿಸುತ್ತಾ ಬಂದಿವೆ ಎಂಬುವುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

# ಕರ್ಮ ಸಿದ್ಧಾಂತ

ಕರ್ಮ ಸಿದ್ಧಾಂತವು, ಒಬ್ಬನ ವರ್ತಮಾನದ ಜನ್ಮದಲ್ಲಿ ಅನುಭವಿಸುವ ಕರ್ಮಗಳನ್ನು ಆತನ ಪ್ರಾರಬ್ಧಕರ್ಮ ಎಂದು ಹೇಳುವುದು. ಪ್ರಾರಬ್ಧ ಕರ್ಮ ಎಂದರೆ ಅದು ಒಬ್ಬಾತನ ಹಿಂದಿನ ಎಲ್ಲಾ ಜನ್ಮಗಳ ಸಂಚಿತ ಕರ್ಮಗಳ ಶೇಖರದಿಂದ ಈ ಜನ್ಮದಲ್ಲಿ ಅನುಭವಿಸಲೆಂದು ಪ್ರತ್ಯೇಕಿಸಿ ನೀಡಲ್ಪಟ್ಟ ಆ ಒಂದು ನಿರ್ಧಿಷ್ಟ ಪ್ರಮಾಣದ ಮಿಶ್ರ ಕರ್ಮಗಳಾಗಿವೆ. ಅಂದರೆ, ಕರ್ಮ ಸಿದ್ಧಾಂತ ಪ್ರಕಾರ ಅವುಗಳಲ್ಲಿ ಆತನ ಹಿಂದಿನ ಒಳ್ಳೆಯ ಹಾಗೂ ಕೆಟ್ಟ ಕರ್ಮಗಳ ಫಲಗಳೂ ಸೇರಿ ಇರುವವು ಎಂದಾಗಿದೆ.

ಒಬ್ಬನ ಹುಟ್ಟುಗುಣವು ಆತನ ಆತ್ಮದ ಬೆಳವಣಿಗೆಯನ್ನು ಪ್ರತಿನಿಧೀಕರಿಸುವುದು. ಅಂದರೆ, ಒಬ್ಬನು ಇದೇ ಆತ್ಮೋನ್ನತಿಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಕೊನೆಯ ಜನ್ಮದಲ್ಲಿ ಮೋಕ್ಷವನ್ನೂ ಪಡೆವನು ಎಂದಿದೆ. ಅಂದರೆ, ಅದು ಒಂದು ಮುಖ್ಯ ಅಂಶವನ್ನು ನಮಗೆ ತಿಳಿಸುವುದು. ಅದೇನೆಂದರೆ, ಒಬ್ಬನ ಹುಟ್ಟುಗುಣವು ಉತ್ತಮ ಆಗಬೇಕಿದ್ದಲ್ಲಿ, ಆತನ ಸಂಚಿತ ಕರ್ಮಗಳ ಒಟ್ಟು ಶೇಖರದ ಬಹು ಪಾಲು ಉತ್ತಮ ಕರ್ಮವಾಗಿರಲೇಬೇಕೆಂದಾಗಿದೆ. ಅದೇ ರೀತಿ, ಹುಟ್ಟು ದುಷ್ಟಗುಣವಿರುವವರ ಸಂಚಿತ ಕರ್ಮವು ಹೆಚ್ಚು ದುಷ್ಟಕರ್ಮದಿಂದ ಕೂಡಿರಬೇಕೆಂದೂ ಅದು ಸ್ಪಷ್ಟಪಡಿಸುವುದು. ಈಗ ವೈಜ್ಞಾನಿಕವಾಗಿ ನೋಡುವಾಗ, ಸಂಚಿತ ಕರ್ಮದಲ್ಲಿ ಅತೀ ಹೆಚ್ಚು ಒಳ್ಳೆಯ ಕರ್ಮವು ಒಳಗೊಂಡಿರುವ ಆ ಅತ್ಯುತ್ತಮ ಭೂಮಿಯ ಸಂಸಾರಿ ವ್ಯಕ್ತಿ, ಅಥವಾ ಅಧ್ಯಾತ್ಮ ವ್ಯಕ್ತಿಗಳಿಗೆ ಅವರ ಪ್ರಾರಬ್ಧ ಕರ್ಮವಾಗಿ ಅತೀ ಹೆಚ್ಚು ಉತ್ತಮ ಕರ್ಮಫಲಗಳೇ ಬರಬೇಕು. ಮಿಶ್ರಕರ್ಮಗಳು ವರ್ತಮಾನ ಜನ್ಮಕ್ಕೆ ಬಂದೊದಗುವಾಗ ಅಲ್ಲಿ ಎಷ್ಟೇ ಹೆಚ್ಚುಕಡಿಮೆಯಾದರೂ ಅದು ಒಂದು ಚಿಕ್ಕ ವ್ಯತ್ಯಾಸವನ್ನೇ ತೋರಿಸಬಹುದಷ್ಟೇ, ಆದರೆ ಅದು ಎಂದೂ ಒಂದು ದೊಡ್ಡ ವ್ಯತ್ಯಾಸವನ್ನು ತೋರಿಸಲು ಸಾಧ್ಯವೇ ಇಲ್ಲ. ಇದು ಸಾಂದ್ರತೆಯ ನಿಯಮವಾಗಿದೆ. ಆದರೆ, ಅಷ್ಟು ಹೆಚ್ಚು ಸಾಂದ್ರತೆಯಲ್ಲಿ ಉತ್ತಮ ಕರ್ಮಗಳು ಆ ಅತ್ಯುತ್ತಮ ವ್ಯಕ್ತಿಗಳಿಗೆ ಅವರ ಸಂಚಿತ ಕರ್ಮ ಶೇಖರದಲ್ಲಿ ಇದ್ದರೂ, ಎಲ್ಲಾ ಕಾಲದಲ್ಲೂ ಈ ಜಗತ್ತಿನಲ್ಲಿ ಆ ಕರ್ಮ ನಿಯಮಕ್ಕೇ ವಿರೋಧವಾದ ರೀತಿಯಲ್ಲಿ ಉತ್ತಮರು ಹೆಚ್ಚು ತೀವ್ರವಾಗಿ ಕಷ್ಟವನ್ನು ಅವರ ಜೀವನದಲ್ಲಿ [ಪ್ರಾರಬ್ಧವಾಗಿ] ಅನುಭವಿಸುವುದನ್ನು ನಾವು ಕಾಣುವೆವು!! ಈ ವಿಪರೀತ ಆಗುಹೋಗುವಿಕೆಯ ಕಾರಣವನ್ನು ತಿಳಿಸಲು ಈ ಸಿದ್ಧಾಂತಕ್ಕೆ ಸಾಧ್ಯವಾಗುವುದಿಲ್ಲ. ಎಷ್ಟೋ ಅತ್ಯುತ್ತಮ ವ್ಯಕ್ತಿಗಳು ಜೀವನ ಪೂರ್ತಿ ಕಷ್ಟದಲ್ಲಿದ್ದು ಸತ್ತುಹೋದ ನಿದರ್ಶನಗಳೂ ಸಾಕಷ್ಟು ಇವೆ. ಇನ್ನೊಂದು ರೀತಿಯ ದೊಡ್ಡ ವ್ಯತ್ಯಾಸವನ್ನು ಚಿಕ್ಕ ಮಗು ಅಕಾಲ ಮರಣವನ್ನು ಹೊಂದುವಾಗ ನಮಗೆ ಕಾಣಬಹುದು. ಅಂದರೆ, ಅಷ್ಟು ಕಡಿಮೆ ಪ್ರಾರಬ್ಧವನ್ನು ಹೊತ್ತುಕೊಂಡು ಒಂದು ಜನ್ಮ ಬರುವಾಗ, ಆ ಕರ್ಮ ನಿಯಮವು ಇಷ್ಟಕ್ಕೂ ಏರು ಪೇರು ಆಗುವುದು ಸಾಧ್ಯವೇ ಎಂಬ ಸಂಶಯ ಬರುವುದು. ಆದುದರಿಂದ, ಯಾವ ನಿಶ್ಚಿತ ನಿಯಮವನ್ನೂ ಅನುಸರಿಸದ, ಈ ಮಾನವ ಜೀವನದ ಆಗುಹೋಗುವಿಕೆಗಳ ಮೇಲೆ ನೇರ ಕೈವಾಡವನ್ನು ಹೊಂದಿರುವುದು ಕರ್ಮಸಿದ್ಧಾಂತವಲ್ಲ, ಬದಲು ಆ ಪ್ರಾಚೀನ ವಾಮಾಚಾರದ ನೇರ ಕೈವಾಡವೆಂದು ತಿಳಿದುಕೊಳ್ಳಬಹುದು.

# ದೇವರ ಪರೀಕ್ಷೆ ಎನ್ನುವುದು ದೇವರಿಗೇ ವಿರೋಧವಾದ ನಂಬಿಕೆ

ದೇವರ ಪರೀಕ್ಷೆ ಎಂದು ಹೇಳುವಾಗ ಅವರು ಏನನ್ನು ತಿಳಿದಿರುವರು ಎಂಬುವುದನ್ನು ಮೊದಲು ನೋಡಬೇಕು. ಅದು ಶಾಲೆಯಲ್ಲಿ ಮಕ್ಕಳು ಓದಿ ಕಲಿತು ಅನಂತರ ಮಾಡುವ ಪರೀಕ್ಷೆಯಲ್ಲ, ಅದು ದೇವರು ಮಾನವನಿಗೆ ಕೊಡುವ ನೋವು, ಹತ್ತಿರದ ಬಂಧುವಿನ ಸಾವು, ಅಂಗ ವೈಕಲ್ಯ, ಇತ್ಯಾದಿ ಸಹಿಸಲಸಾಧ್ಯವಾದ ಪರೀಕ್ಷೆಗಳಾಗಿವೆ! ಜನ್ಮವಿಡೀ ನರಳಾಡುವಂತೆ ಅಂಗಗಳನ್ನು ಕಳಕೊಂಡೇ ಹುಟ್ಟಿಸಿ ಮಾಡುವ ಪರೀಕ್ಷೆಯೂ ಅವುಗಳಲ್ಲಿ ಸೇರಿವೆ! ಏನೇ ಇರಲಿ, ಇವೆಲ್ಲವನ್ನೂ ದೇವರ ಲೋಕ ಸೇರಲು ಮಾನವನಿಗೆ ದೇವರು ಈ ಭೂಮಿಯಲ್ಲಿ ಕೊಡುವುದಾದರೆ, ಇನ್ನು, ಆತನು ಮಾನವನನ್ನು ಕಷ್ಟಪಡಲೆಂದೇ ಭೂಮಿಗೆ ಕಳುಹಿಸಿದಂತೆ ಆಗುವುದು. ಈ ರೀತಿ ಕಷ್ಟ ಕೊಡುವವನಲ್ಲಿ ಅನುಗ್ರಹವನ್ನು ಭಕ್ತರು ಹೇಗೆ ಬಯಸಲು ಸಾಧ್ಯ? ಭಕ್ತನು ಭಕ್ತಿಯಿಂದ ತನ್ನನ್ನು ಉತ್ತಮ ಮಾರ್ಗದಲ್ಲಿ ಜೀವಿಸುವಂತೆ ಅನುಗ್ರಹಿಸು ಎಂದು ದೇವರಲ್ಲಿ ಬೇಡುತ್ತಿದ್ದಂತೆ, ಆತನಿಗೆ ಕಷ್ಟದ ಪ್ರವಾಹವು ಬಂದೊದಗುವ ಆ ಸ್ಥಿತಿಯನ್ನು ಯಾರಿಗೂ ಊಹಿಸಲು ಕಷ್ಟವಾಗುವುದು. ಹಾಗಿದ್ದರೆ, ಈ ಅನುಗ್ರಹಕ್ಕಾಗಿ ಮಾಡುವ ಎಲ್ಲವೂ ಅರ್ಥ ಹೀನವಾಗುವುದು ಎಂದೇ ಹೇಳಬೇಕಾಗುವುದು. ದೇವರು ಕರುಣಾಮಯ ಎಂಬ ಶಬ್ದವನ್ನು, ಈ ಭೂಮಿಯಲ್ಲಿ ಹೇಗೆ ಉಚ್ಚರಿಸುವುದು?

ಇನ್ನೊಂದು ಸ್ಪಷ್ಟ ವಿರೋಧಾಭಾಸವನ್ನು ನೋಡೋಣ. ಉದಾಹರಣೆಗೆ, ಒಂದು ಸ್ಪರ್ಧೆ ಇದ್ದಲ್ಲಿ ಅದಕ್ಕೆ ಕೆಲವೊಮ್ಮೆ ಕಠಿಣ ನಿಯಮಗಳಿರಬಹುದು, ಆದರೆ ಅದು ಎಲ್ಲಾ ಸ್ಪರ್ಧಾಳುಗಳಿಗೆ ಒಂದೇ ತರವಾಗಿರುವುದು. ಆ ರೀತಿಯಲ್ಲಿ ನೋಡುವಾಗ, ದೇವರು ಭೂಮಿಯಲ್ಲಿ ಎಲ್ಲಾ ಮಾನವನಿಗೂ ಒಂದೇ ತರದ ಕಷ್ಟಗಳನ್ನು ಕೊಡಬೇಕಾಗುವುದು. ಆದರೆ ಹಾಗಿಲ್ಲ!! ಕೆಲವರು ಹುಟ್ಟು ಕುರುಡರು, ಕೆಲವರು ಕಾಲಿಲ್ಲದವರು, ಇನ್ನೂ ಕೆಲವರು ದರಿದ್ರರು, ಇನ್ನೂ ಕೆಲವರು ಮಕ್ಕಳನ್ನು ಕಳಕೊಂಡವರು, ಅದೇ ರೀತಿ ಅಕಾಲ ಮರಣವನ್ನು ಪಡೆದವರು ಹೀಗೆಲ್ಲಾ ಇವೆ. ಇತ್ತ, ಇತರರು ಶ್ರೀಮಂತಿಕೆ, ರೂಪ, ಸ್ಥಾನಮಾನ ಇತ್ಯಾದಿಗಳಿಂದ ಹಿಗ್ಗಿ ಜೀವಿಸುವುದನ್ನು ನಾವು ನೋಡುತ್ತೇವೆ, ಅವರಿಗೆ ಚಿಕ್ಕ ಪುಟ್ಟ ಸಾಮಾನ್ಯ ತೊಂದರೆಗಳು ಮಾತ್ರ ಇರುವುದು ಅಷ್ಟೇ. ಹೀಗಿರುವಾಗ, 'ದೇವರ ಆ ಪರೀಕ್ಷೆ' ಎಂಬಲ್ಲಿ ಅದು "ಕೆಲವರಿಗೆ ಮಾತ್ರ" ಎಂದೇ ಅರ್ಥ ಬರುವುದು. ಎಲ್ಲರಿಗೂ ಆಗಿದ್ದರೆ, ಜಗತ್ತಿನಲ್ಲಿ ಎಲ್ಲರಿಗೂ ಒಂದೇ ತೀವ್ರತೆಯ ಕಷ್ಟಗಳು ಇರುತ್ತಿತ್ತು, [ಕರ್ಮ ಸಿದ್ಧಾಂತವನ್ನು ನಾವು ಆಗಲೇ ನೋಡಿ ಆಗಿದೆ] ಈ ಕಾರಣದಿಂದಾಗಿ, 'ದೇವರ ಪರೀಕ್ಷೆ' ಎಂಬ ಜನರ ನಂಬಿಕೆಯು, ಸತ್ಯವೇ ದೇವರು, ಪ್ರೀತಿಯೇ ದೇವರು, ಎಂದು ಧರ್ಮ ಗ್ರಂಥಗಳು ಹೇಳುವ ಆ ನಿಜವಾದ ದೇವರ ಸಂಕಲ್ಪಕ್ಕೆ ವಿರುದ್ಧವಾದ ನಂಬಿಕೆ ಎನ್ನುವುದು.

# ತನ್ನಾಯ್ಕೆ [ಫ್ರೀ ವಿಲ್] ಎಂಬ ನಂಬಿಕೆ

ದೇವರು ಮಾನವನಿಗೆ ಕೊಟ್ಟಿರುವುದು ಎಂದು ಎಲ್ಲಾ ಧರ್ಮಗಳೂ ಹೇಳುವ ಆ 'ತನ್ನಾಯ್ಕೆ' ಕುರಿತು ನೋಡೋಣ. ದೇವರು ಮಾನವನಿಗೆ 'ತನ್ನಾಯ್ಕೆ' ಯನ್ನು ಕೊಟ್ಟಿದ್ದಲ್ಲಿ, ಅನಂತರ ಮಾನವನ ಜೀವನದಲ್ಲಿ ಉಪದೇಶ ಬಿಟ್ಟು, ದೇವರು ಬೇರೆ ಏನೂ ಮಾಡುವ ಹಾಗಿಲ್ಲ. ನಾವು ಒಬ್ಬಾತನಿಗೆ ತನ್ನಾಯ್ಕೆಯಲ್ಲೇ ಯಾವ ತಡೆಯೂ ಇಲ್ಲದೆ ಕೆಲಸ ಮಾಡಲು ಹೇಳುತ್ತಾ, ಅದೇ ಸಮಯ ಆತನ ಕೆಲಸಗಳಿಗೆ ಹಲವು ನಿಬಂಧನೆಯನ್ನು ವಿಧಿಸಿದರೆ ಆಗ ಆತನಿಗೆ ಕೊಟ್ಟ ಸ್ವಾತಂತ್ರ್ಯವು ಸ್ವಾತಂತ್ರ್ಯವೇ ಅಲ್ಲವಾಗುವುದು! ಅಂದರೆ, ಮಾನವನು ಕೆಟ್ಟ ಕರ್ಮ ಮಾಡಿದರೆ ಆತನಿಗೆ ನರಕವನ್ನೂ, ಉತ್ತಮ ಕರ್ಮ ಮಾಡಿದರೆ ಆತನಿಗೆ ಸ್ವರ್ಗವನ್ನೂ ದೇವರು ಕೊಡುವನೆಂಬುವುದನ್ನು ಮೊದಲೇ ಗ್ರಂಥಗಳಲ್ಲಿ ಆತನೇ ತಿಳಿಸಿದ್ದಾನೆ. ಹೀಗಿರುವಾಗ, ಇತರ ಯಾವ ರೀತಿಯ ನಿಬಂಧನೆ, ಶಿಕ್ಷೆ, ಇತ್ಯಾದಿಗಳನ್ನು ಮಾನವನ ಮೇಲೆ ಭೂಮಿಯಲ್ಲಿ ಮತ್ತೂ ಹೇರಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ದೇವರೇ ಕೊಟ್ಟ ಆ ಸ್ವಾತಂತ್ರ್ಯಕ್ಕೆ ವಿರೋಧವಾಗುವುದು. ಆದರೆ, ದೇವರು ಈ ಭೂಮಿಯ ಜೀವನಕ್ಕಾಗಿ ಸರಿಯಾದ ರೀತಿ, ನಿಯಮಗಳನ್ನು ಬೋಧಿಸುವಾಗ, ಅವುಗಳನ್ನು ಮೀರಿ ತಪ್ಪು ಮಾಡಿದಲ್ಲಿ, ಮಾನವನಿಗೆ ಇದೇ ಭೂಮಿಯಲ್ಲಿ ಶಿಕ್ಷೆಯನ್ನು ವಿಧಿಸುವ ಹಲವು ನಿಯಮಗಳನ್ನೂ ದೇವರೇ ಉಂಟು ಮಾಡಿದನೆಂದರೆ ಮತ್ತು ಆ ರೀತಿಯಲ್ಲಿ ಶಿಕ್ಷಿಸಿದರೆ, ಅದು 'ತನ್ನಾಯ್ಕೆ' ಎಂಬ ದೇವರದೇ ನಿಯಮಕ್ಕೆ ವಿರೋಧವಾಗುವುದು ಎಂಬುವುದು ಸ್ಪಷ್ಟವಾಗುವುದು. ಯಾಕೆಂದರೆ, ತನ್ನಾಯ್ಕೆ ನಿಯಮ ಪ್ರಕಾರ, ಆ ಶಿಕ್ಷೆಯನ್ನು ಆ ಜೀವಕ್ಕೆ ನರಕದಲ್ಲಿ ದೇವರು ಕೊಡಬೇಕಾಗಿರುವುದಾಗಿದೆ.

ಇನ್ನೊಂದು ರೀತಿಯ ವಿರೋಧವೆಂದರೆ, ದೇವರಲ್ಲ ಮಾನವನೇ ಧರ್ಮದ ಸಮಾಜಿಕ ರಕ್ಷಣೆ ಮತ್ತು ಶಿಕ್ಷಣೆಯ ಹೊಣೆಯನ್ನು ಹೊತ್ತು, ನಿಯಮಗಳನ್ನು ಸೃಷ್ಟಿಸಿದನೆಂದು ಹೇಳುವಾಗ ಆಗುವುದು! ಯಾಕೆಂದರೆ, ಆಗ ಮಾನವನು ತಾನು ನಂಬುವ ಆ ಸೃಷ್ಟಿಕರ್ತ ದೇವರ 'ತನ್ನಾಯ್ಕೆ' ಎಂಬ ನಿಯಮವನ್ನು ಮೀರಿದ ಎಂದು ಆಗುವುದು! ಅಂದರೆ, ಮೊದಲದರಲ್ಲಿ ದೇವರೇ ಆತನ 'ತನ್ನಾಯ್ಕೆ' ನಿಯಮವನ್ನು ಮೀರಿದರೆ, ಎರಡನೆಯದರಲ್ಲಿ ಮಾನವನು ಅದನ್ನು ಮೀರಿದಂತೆ ಆಗುವುದು ಎಂದು ಅರ್ಥ.

ಇನ್ನು, ಈ ಭೂಮಿಯಲ್ಲಿ, ಒಂದೇ ಸಾಹಚರ್ಯದಲ್ಲಿ ಬೆಳೆದವರಲ್ಲಿ ಒಬ್ಬ ಉತ್ತಮ ಸ್ವಭಾವದ ಹುಡುಗ ಮತ್ತು ಇನ್ನೊಬ್ಬ ಕೆಟ್ಟ ಸ್ವಭಾವದ ಹುಡುಗನಾಗಿ ಆ ಚಿಕ್ಕ ವಯಸ್ಸಿಂದಲೇ ಕಾಣಿಸುವುದಕ್ಕೆ ಕಾರಣವನ್ನು ಕೊಡಲು 'ತನ್ನಾಯ್ಕೆ'ಯು ಸಮಾರ್ಥವಾಗುವುದಿಲ್ಲ ಎಂಬುವುದು ಇನ್ನೊಂದು ವಿಷಯವಾಗಿದೆ. ಅಂದರೆ, ತನ್ನಾಯ್ಕೆ ಮಾಡುವ ವಯಸ್ಸನ್ನು ಪಡೆಯುವ ಮೊದಲೇ, ಅಷ್ಟು ಚಿಕ್ಕ ವಯಸ್ಸಲ್ಲಿ, ಆ ರೀತಿ ಬೇರೆ ಬೇರೆ ವ್ಯಕ್ತಿತ್ವವು ಪ್ರಕಟವಾಗಲು, ಅವರು ಹುಟ್ಟಿನಿಂದಲೇ ಬೇರೆ ಬೇರೆ ಸ್ವಭಾವವನ್ನು ಹೊತ್ತುಕೊಂಡು ಬಂದಿರುವುದನ್ನು ಮಾತ್ರ ಹೇಳುವುದು ಅಷ್ಟೆ! ಒಂದೇ ಜನ್ಮ ವಾದದಲ್ಲಿ, ದೇವರು ಆತ್ಮಗಳನ್ನು ಭೂಮಿಗೆ ಕಳಿಸಿಕೊಡುವಾಗ, ಈ ರೀತಿ ಒಳ್ಳೆಯ ಮತ್ತು ಕೆಟ್ಟ ಆತ್ಮಗಳನ್ನು ಸೃಷ್ಟಿಸಿ, ಈ ಪಕ್ಷಪಾತದ ರೀತಿಯಲ್ಲಿ, ಭೂಮಿಗೆ ಕಳಿಸಿಕೊಡುವನೇ? ಹಾಗಾದಲ್ಲಿ,

ದೇವರು ಮೊದಲೇ ಕೆಲವರನ್ನು ಸ್ವರ್ಗಕ್ಕೆ ತಯಾರು ಮಾಡಿ ಕಳುಹಿಸಿದ ಮತ್ತು ಹಲವರನ್ನು ನರಕಕ್ಕೆ ತಯಾರು ಮಾಡಿದ ಕಳುಹಿಸಿದ ಎಂಬ ಅಪವಾದಕ್ಕೆ ಒಳಗಾಗುವನು!!

ಈ ಎಲ್ಲಾ ಗೊಂದಲಗಳಿಗೆ ಉತ್ತರವು ಕೊನೆಗೂ ಹೊರಬಿದ್ದಿದೆ! ಹೌದು, ಧರ್ಮಗಳ ಹೆಸರಲ್ಲೂ ಮತ್ತು ಅವುಗಳು ಹೊರತಾಗಿರುವ ಕಡೆಗಳಲ್ಲೂ ಸೃಷ್ಟಿಯಾಗುವ ಆ ಭಯಾನಕ ಹಿಂಸೆ, ಅನೈತಿಕತೆಗಳು ಆ ಪ್ರಾಚೀನ ವಾಮಾಚಾರದ ರಹಸ್ಯ ಯೋಜನೆಯಾಗಿದೆ ಎಂಬುವುದು ಈಗ ಸಂಶಯಾತೀತವಾಗಿ ಸ್ಪಷ್ಟವಾಗಿದೆ.

# ತನ್ನಾಯ್ಕೆ ಮತ್ತು ಭವಿಷ್ಯವಾಣಿ

ಒಂದು ಧರ್ಮವು ತನ್ನಾಯ್ಕೆ [ಫ್ರೀ ವಿಲ್] ನ್ನು ಎತ್ತಿ ಹಿಡಿಯುವುದಾದರೆ, ಅದೇ ಧರ್ಮವು ಅದರಲ್ಲಿ ದೇವರು ಹೇಳಿರುವ ಭವಿಷ್ಯವಾಣಿಗಳಳಯನ್ನೂ ಎತ್ತಿ ಹಿಡಿಯಲು ಸಾಧ್ಯವಾಗದು. ಇದಕ್ಕೆ ಕಾರಣ ಏನೆಂದರೆ ಹಾಗೆ ಹೇಳಿದಲ್ಲಿ ಅವುಗಳು ತಮ್ಮ ತಮ್ಮ ಧರ್ಮಗಳನ್ನೇ ವಿರೋಧಿಸುವುವು! ನಾವು ತನ್ನಾಯ್ಕೆಯನ್ನು ದೇವರು ಮಾನವನಿಗೆ ಕೊಟ್ಟಿರುವುದೆಂದು ಎತ್ತಿ ಹಿಡಿಯುವುದಾದರೆ, ದೇವರೂ ಸೇರಿದಂತೆ ಯಾರಿಗೂ ಭವಿಷ್ಯವನ್ನು ಹೇಳಲು ಸಾಧ್ಯವಾಗಲಾರದು, ಯಾಕೆಂದರೆ, ಅದು ಮಾನವನ ಮುಕ್ತ ಜೀವನದ ಆಯ್ಕೆಯ ಪರಿಣಾಮ ಮತ್ತು ಅದು ಹರಿದು ಅದರ ರೀತಿಯಲ್ಲಿ ಮಾತ್ರ ಮುಂದೆ ಹೋಗಬೇಕಾಗಿದೆ. ತನ್ನಾಯ್ಕೆಯಲ್ಲಿ, ದೇವರು ಮಾನವನಿಗೆ ಆತನ ಇಷ್ಟದಂತೆ ಜೀವಿಸಲು ಅನುಮತಿ ಕೊಟ್ಟಿದ್ದಾನೆ. ಅಂದರೆ, ಆತನು ಸ್ವರ್ಗವನ್ನು ಬಯಸುವುದಾದರೆ ಆತನೇ ಅದನ್ನು ಕಷ್ಟಪಟ್ಟು ಪಡೆದುಕೊಳ್ಳಬೇಕು, ಅದಲ್ಲ ಕೆಟ್ಟದನ್ನು ಮಾಡುತ್ತಾ ನರಕ ಬಯಸುವುದಾದರೆ, ಅದಕ್ಕೆ ಆತನೇ ಜವಾಬ್ದಾರ ಎಂದು ಅದು ಹೇಳುವುದು. ಹೀಗಿರಲು, ದೇವರಿಗೆ ಜಗತ್ತಿನಲ್ಲಿ ಕೊನೆಯವರೆಗೂ ಅದನ್ನು ಮಾತ್ರ ನೋಡುತ್ತಾ ಇದ್ದು, ಕೊನೆಗೆ, ಸ್ವರ್ಗ ಮತ್ತು ನರಕಕ್ಕೆ ಜನರನ್ನು ಕೊಂಡೊಯ್ಯುವುದು ಮಾತ್ರ ಕೆಲಸವಾಗುವುದು. ಹೆಚ್ಚೆಂದರೆ, ಉಪದೇಶ ಮಾಡುವ ರೀತಿಯನ್ನು ಮಾತ್ರ ಅನುಸರಿಸಬಹುದು ಅಷ್ಟೆ. ಈ ರೀತಿಯಲ್ಲಿ ಹೇಳುವಾಗ, ಜಗತ್ತಿನಲ್ಲಿ ಕಾಲ ಹೋದಂತೆ ಮಾನವನು ಇದೇ ರೀತಿ ವರ್ತಿಸುವನು ಎಂದು ಮೊದಲಲ್ಲೇ ಭವಿಷ್ಯವಾಣಿಯನ್ನು ನುಡಿಯಲು ಸಾಧ್ಯವಾಗಲಾರದು, ಮೊದಲೇ ತಿಳಿಸಿದಂತೆ, ಹಾಗೆ ಮಾಡಿದಲ್ಲಿ, ಅದು ದೇವರು ಒಂದು ಆತ್ಮದ ಹುಟ್ಟಿನ ಮೊದಲೇ ಅದರ ತಲೆಬರಹ ಬರೆದ ಆ 'ವಿಧಿ' ಯ ರೀತಿಯೇ ಆಗುವುದು. ಅದು ತನ್ನಾಯ್ಕೆ ರೀತಿ ಆಗುವುದಿಲ್ಲ!

ಎಲ್ಲಾ ಧರ್ಮಗಳೂ ಕೊನೆಯ ಕಾಲದಲ್ಲಿ ಮಾನವನ ಸ್ವಭಾವವು ಕೆಟ್ಟದಾಗುವುದೆಂದು ಭವಿಷ್ಯ ನುಡಿದಿವೆ! ಹೀಗಿರುವಾಗ, ಈ ಕೆಟ್ಟ ಸ್ವಭಾವವು ಆ ಒಂದೇ ಜನ್ಮ ಇರುವ ಆ ಎಲ್ಲಾ ಆತ್ಮಗಳಿಗೆ ಆ ಕೊನೆಯ ಕಾಲದಲ್ಲಿ ಯಾಕೆ ಬರಬೇಕು? ಅದರ ಅಗತ್ಯವೇನು? ಅಂದರೆ, ಆದಿ ಕಾಲದಲ್ಲಿ ಹುಟ್ಟಿದ ಆತ್ಮಗಳಿಗೆ ಈ ತೊಂದರೆಗಳು ಬಹಳ ಕಡಿಮೆ ಇದ್ದು, ಮತ್ತು ಕೊನೆ ಕೊನೆಯಲ್ಲಿ ಬರುವ ಆತ್ಮಗಳಿಗೆ ಕೆಟ್ಟವರಾಗುವ ಸಾಧ್ಯತೆಯು ಹೆಚ್ಚಿಸಿದುದರ ಕಾರಣವೇನು ಎಂಬ ಪ್ರಶ್ನೆ ಬರುವುದು. ಅವುಗಳಿಗೆಲ್ಲಾ ಆದಿಯಲ್ಲಿ ಹುಟ್ಟಿ ಬಂದ ಆತ್ಮಗಳ ರೀತಿಯಲ್ಲಿ ಒಳ್ಳೆಯವರಾಗುವ ಸಮಾನ ಅವಕಾಶವಿರಬೇಕಲ್ಲಾ? ಇವೆಲ್ಲ, ಮೊದಲೇ ನಿಶ್ಚಯಿಸಲ್ಪಟ್ಟ ಆ 'ವಿಧಿ'ಯ ರೀತಿಯನ್ನು ಮಾತ್ರ ತೋರಿಸುತ್ತವೆ ಹೊರತು 'ತನ್ನಾಯ್ಕೆ' ರೀತಿಯನ್ನು ತೋರಿಸುವುದಿಲ್ಲ!! ಹೀಗಿರುವಾಗ, ಈ ಅಂತ್ಯಕಾಲದ ಮಾನವನ ಅತಿಕೆಟ್ಟ ಸ್ವಭಾವದ ಆ ಭವಿಷ್ಯವಾಣಿಯನ್ನು ಎಲ್ಲಾ ಧರ್ಮಗಳಲ್ಲೂ ಒಂದೇ ರೀತಿಯಲ್ಲಿ ತುರುಕಿಸಿದವರು ಯಾರು?

ಉಳಿದೆಲ್ಲಾ ಕಡೆ ಧರ್ಮಗಳು ತಮ್ಮೊಳಗೆ ಆಚಾರ, ನಂಬಿಕೆಗಳ ವಿಷಯಗಳಲ್ಲಿ ಬಹಳವಾಗಿ ವಿರೋಧಿಸಿ ರಕ್ತಪಾತ ಮಾಡಿಕೊಂಡರೂ, ಈ ಎಲ್ಲಾ ಧರ್ಮಗಳು, ಆ ಕೊನೆಯ ಕಾಲದ ಮಾನವನ ಸ್ವಭಾವ ನಾಶದ ಭವಿಷ್ಯವಾಣಿಗಳನ್ನು ಒಂದೇ ರೀತಿಯಲ್ಲಿ ಮೊದಲಲ್ಲೇ ಬರೆಯಲು ಯಾರು ಸ್ಫೂರ್ತಿಯನ್ನು

ನೀಡಿದರು ಎಂಬ ಪ್ರಶ್ನೆಗೆ ಉತ್ತರ "ಆ ಪ್ರಾಚೀನ ವಾಮಾಚಾರದ ಕೈವಾಡ" ಎಂಬುವುದು ಇಲ್ಲಿ ಮತ್ತೂ ಸ್ಪಷ್ಟತೆಯನ್ನು ಪಡೆಯುವುದು.

# ನಂಬಿಕೆಯು ಬೇರೊಂದು ರೀತಿಯಲ್ಲೂ ಅರ್ಥಹೀನವಾಗುವುದು

ಚುಟುಕಾಗಿ ಹೇಳುವುದಾದರೆ, ನಂಬಿಕೆ ಎಂಬ ಶಬ್ದವು 'ಸಂಶಯ' ಎಂಬ ಅರ್ಥವನ್ನು ಕೊಡುವುದು ಎಂಬುವುದನ್ನು ಒಂದು ಬದಿಗಿರಿಸಿ ಮತ್ತೂ ನೋಡಿದರೂ ಈ ನಂಬಿಕೆಯು ಇನ್ನೊಂದು ರೀತಿಯಲ್ಲಿ ತನ್ನ ಅರ್ಥವನ್ನು ಕಳಕೊಳ್ಳುವುದನ್ನು ನೋಡಬಹುದು!! ಉದಾಹರಣೆಗೆ, ಒಬ್ಬನ ಕೈಯಲ್ಲಿ ಒಂದು ವಸ್ತುವಿದ್ದು ಅದನ್ನು ಅದುಮಿ ಹಿಡಿದಿದ್ದಾನೆ ಎಂದು ತಿಳಿಯೋಣ, ಆತನು ತನ್ನ ಇಬ್ಬರು ಗೆಳೆಯರಲ್ಲಿ ತನ್ನ ಕೈಯಲ್ಲಿರುವ ವಸ್ತುವಿನ ಬಣ್ಣವು ಕಪ್ಪು ಅಥವಾ ಬಿಳಿ ಈ ಎರಡರಲ್ಲಿ ಯಾವುದು ಎಂದು ಕೇಳುವಾಗ, ಒಬ್ಬನು "ಕಪ್ಪು ಎಂದು ನಂಬುತ್ತೇನೆ" ಎಂದನು, ಇನ್ನೊಬ್ಬನು ಅದು "ಬಿಳಿ ಎಂದು ನಂಬುತ್ತೇನೆ" ಎಂದನು. ಇಲ್ಲಿ, ಅವರ ನಂಬಿಕೆಯ ರೀತಿಯು ಸರಿಯಾಗಿದೆ, ಯಾಕೆಂದರೆ ಇಬ್ಬರಿಗೂ ಕಪ್ಪು ಮತ್ತು ಬಿಳಿಯು 'ಏನೆಂದು ತಿಳಿದಿದೆ' ಆದರೆ ಆ ಕೈಗಳಲ್ಲಿ ಯಾವ ಬಣ್ಣವು ಯಾವುದರಲ್ಲಿ ಇರುವುದು ಎಂಬ ವಿಷಯದಲ್ಲಿ ಮಾತ್ರ ಸಂಶಯ ಇತ್ತು ಅದಕ್ಕೆ ಹಾಗೆಂದರು. ಆದರೆ, ಧರ್ಮಗಳ ರೀತಿ ಹೇಗಿದೆ ನೋಡಿ, ಅಲ್ಲಿ "ದೇವರನ್ನು ನಂಬುವವ" ಮತ್ತು "ದೇವರನ್ನು ನಂಬದವ" ಎಂಬ ವರ್ಗೀಕರಣವು ಅರ್ಥಹೀನ ರೀತಿಯಲ್ಲಿವೆ. ಹಲವು ಧರ್ಮಗಳ ಜನರು ಈ ಜಗತ್ತಿನ ಆ ಏಕ ಸೃಷ್ಟಿಕರ್ತನನ್ನು ದೇವರು ಎಂದು ನಂಬುವುದನ್ನು ನಾವು ನೋಡುತ್ತೇವೆ. ಇಲ್ಲಿ, ನಂಬಿಕೆಯ ಆ 'ಸಂಶಯ' ಎಂಬ ಅರ್ಥಹೀನ ರೀತಿಯನ್ನು ಹೊರತುಪಡಿಸಿದರೆ ಆ 'ಶಬ್ದವು' ಅದರದ್ದೇ ಆದ 'ಒಪ್ಪುವುದು' ಎಂಬ ಒಂದು ಅರ್ಥವನ್ನು ಪಡೆಯುವುದು. ಆದರೆ ಇನ್ನೊಬ್ಬನು ಅದೇ ಏಕ ಸೃಷ್ಟಿಕರ್ತನನ್ನು ಮೊದಲಿನವನ ಧರ್ಮವಲ್ಲದ ಆತನದ್ದೇ ಧರ್ಮದಲ್ಲಿ ನಂಬುವಾಗ ಅವನನ್ನು "ದೇವರನ್ನು ನಂಬದವ" ಎಂದು ಮೊದಲಿನವ ತೆಗಳುವನು!! ಅದು ಹೇಗೆ ಸಾಧ್ಯ? ತನ್ನ ಧರ್ಮದ ಬೇಲಿಯೊಳಗೆ ಮಾತ್ರ ಸೃಷ್ಟಿಕರ್ತ ದೇವನು ಕೈ ಕಾಲು ಮಡಚಿ ಇರಬೇಕೆಂದೇ? ಮಾತ್ರವಲ್ಲ, ಆ ಧರ್ಮಾಂಧತೆ, ತೆಗಳುವುದು, ದ್ವೇಷಿಸುವುದು, ಕೊಲೆಮಾಡುವುದು, ಇತ್ಯಾದಿಗಳವರೆಗೂ ಹೋಗುವುದು!! ಇದು ಆ ನಂಬಿಕೆಯ ಅರ್ಥವನ್ನು ಪೂರ್ಣವಾಗಿ ಕಳಕೊಳ್ಳುವಂತೆ ಮಾಡುವುದು!! ಒಬ್ಬಾತನು, ಈ ಪ್ರಪಂಚದ ಸೃಷ್ಟಿಕರ್ತನನ್ನು ನಂಬುತ್ತೇನೆ ಎಂದು ಹೇಳುವಾಗ ಆತನು ತನ್ನ ಧರ್ಮವಲ್ಲದ ಇನ್ನೊಂದು ಧರ್ಮದಲ್ಲಿದ್ದರೆ ಆವನು ಹೇಗೆ "ಅವಿಶ್ವಾಸಿ" ಅಥವಾ ದೇವರನ್ನು ನಂಬದವನಾಗುವನು? ಅಂದರೆ ತಮ್ಮ ಧರ್ಮದಲ್ಲಿದ್ದರೆ ಮಾತ್ರ ಒಬ್ಬಾತನಿಗೆ ಈ ಪ್ರಪಂಚದ ಸೃಷ್ಟಿಕರ್ತನನ್ನು ನಂಬುವ ಅನುಮತಿ ಸಿಗುವುದೆಂದೇ? ಒಟ್ಟಿನಲ್ಲಿ, ತನ್ನ ಮನೆ ಮೇಲೆ ಮಾತ್ರ ಸೂರ್ಯನಿದ್ದಾನೆ ಎಂಬಂತೆ, ಅರ್ಥ ಹೀನ ರೀತಿಯಲ್ಲಿ 'ಸೃಷ್ಟಿಕರ್ತನ' ನಂಬಿಕೆಯನ್ನು ಪ್ರದರ್ಶಿಸುವರು!! ತನ್ನ ಧರ್ಮದ ಸೃಷ್ಟಿಕರ್ತನೇ ಸರಿ ಆದರೆ ಇತರ ಧರ್ಮಗಳ ಎಲ್ಲಾ ಸೃಷ್ಟಿಕರ್ತರುಗಳು ತಪ್ಪು ಎನ್ನುವ ಪಂಡಿತನಲ್ಲಿ, ಆತನ ಸೃಷ್ಟಿಕರ್ತನು, ಇತರ ಮಾನವರೆಲ್ಲರನ್ನು ಯಾಕೆ ಇತರ ಧರ್ಮಗಳಲ್ಲಿ ಹುಟ್ಟಿಸಿ, ಆ ಸರಿಯಾದ ಧರ್ಮವು ಅವರಿಗೆಲ್ಲರಿಗೂ ಸಿಗದಂತೆ ಪಕ್ಷಪಾತ ಮಾಡಿದನೆಂದು ಕೇಳಬೇಕಾಗುವುದು.

# ಧರ್ಮಯುದ್ಧ ಎಂಬ ಶಬ್ದದ ಅರ್ಥ

ಧರ್ಮಯುದ್ಧ, ಎಂಬುವುದು ನಿಜವಾಗಿಯೂ ಅರ್ಥವೇ ಇಲ್ಲದ ಶಬ್ದವಾಗಿದೆ. ಯಾಕೆಂದರೆ ಯುದ್ಧ ಎಂದರೆ ಅದು ಶಾಂತಿಕಾಲದ ವಿರುದ್ಧ ಪದವಾಗಿದೆ. ಅದೇ ರೀತಿ, ಶಾಂತಿ ಎಂದರೆ ಅದು ಯುದ್ಧದ ಕಾಲವೂ ಅಲ್ಲ, ಹಾಗಾಗಿ, ಧರ್ಮಯುದ್ಧ ಎಂಬುವುದು, ನಿಜವಾಗಿ ನೋಡುವುದಾದರೆ, 'ಬೆಳಕಿನ ಕತ್ತಲೆ' ಎಂಬ ರೀತಿಯಲ್ಲಿ ಅರ್ಥ ಹೀನವಾಗುವುದು. ಆದುದರಿಂದ, ತಮ್ಮ ಧರ್ಮವು ಶಾಂತಿಯೆಂದು ಹೇಳುತ್ತಾ ಆ ತಮ್ಮ ಧರ್ಮವನ್ನು ಬೆಳೆಸಲು ಯಾರಾದರೂ ಯುದ್ಧ ಅಥವಾ ಹಿಂಸೆಯ ಮಾರ್ಗವನ್ನು ಹಿಡಿದರೆ ಅದು ನಿಜವಾಗಿಯೂ ಧರ್ಮದ ಹಾಗೂ ದೇವರ ದಾರಿಗೆ ವಿರುದ್ಧ ದಾರಿಯಾಗಿರುವುದು ಎಂದು ತಿಳಿಯಬೇಕಾಗಿದೆ. ಧರ್ಮಯುದ್ಧವನ್ನು ಹಲವು ರೀತಿಯಲ್ಲಿ ವಿವರಿಸಿದ್ದಾರೆ. ಜಗತ್ತಲ್ಲಿ ಎಲ್ಲೆಡೆಯೂ ತಮ್ಮ ಧರ್ಮವೇ ಬರಬೇಕೆಂಬ ಉದ್ದೇಶದಿಂದ ಮಾಡುವ ಆ ಮತಾಂತರದ ಧರ್ಮಯುದ್ಧ, ತಮ್ಮ ರಕ್ಷಣೆಗೆ ಬೇಕಾಗಿ ಮಾಡುವ ಧರ್ಮಯುದ್ಧ, ಅನ್ಯಾಯವಾದಾಗ ಮಾಡುವ ಧರ್ಮಯುದ್ಧ, ಮತ್ತು ಯುದ್ಧ ಭೂಮಿಯಲ್ಲಿ ಮೋಸದ ಯುದ್ಧ ಮಾಡದೆ ನಿಯಮಗಳನ್ನು ಅನುಸರಿಸಿ ಮಾಡುವ ಧರ್ಮಯುದ್ಧ, ಇವುಗಳು ಧರ್ಮಯುದ್ಧದ ವಿವಿಧ ರೀತಿಗಳಾಗಿವೆ.

ಮತಾಂತರದ ಧರ್ಮಯುದ್ಧವು ಎಷ್ಟು ಅರ್ಥಹೀನ ಎಂದರೆ ಅದನ್ನು ಕೇಳಿದರೆ ಒಂದು ಚಿಕ್ಕ ಮಗುವೂ ನಾಚುವುದು. ಎಲ್ಲಾ ಧರ್ಮಗಳಲ್ಲೂ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಬಗ್ಗೆ ಹೇಳಿದೆ ಎಂದು ಎಲ್ಲರಿಗೂ ತಿಳಿದಿದೆ. ಅಷ್ಟರಲ್ಲೇ ಶ್ರೇಷ್ಠ ಧರ್ಮದ ವಿವರಣೆ ಆಗಿಯಾಯಿತು. ಈ ಹಿನ್ನೆಲೆಯಲ್ಲಿ ಎಲ್ಲಾ ಧರ್ಮಗಳೂ ಶ್ರೇಷ್ಠವಾಗಿವೆ. ಹೀಗಿರುವಾಗ, ಧರ್ಮದ ಹಿನ್ನೆಲೆಯಲ್ಲಿ ಇನ್ನೊಂದು ಧರ್ಮಕ್ಕೆ ಯಾರಾದರೂ ಬದಲಾಗುವ ಅಗತ್ಯವಿಲ್ಲ, ಹಾಗೆ ಯಾರಾದರೂ ಮಾಡಿದರೆ ಅದು ತನ್ನ ಶರೀರವನ್ನು ಇನ್ನೊಂದು ಕಡೆ ಹುಡುಕುವಷ್ಟು ಅವಿವೇಕತನವಾಗುವುದು!! ಮಾತ್ರವಲ್ಲ, ಹಾಗೆ ಮಾಡಿದಲ್ಲಿ, ಆಗ ಆ ವ್ಯಕ್ತಿಯು ಬರೇ ರುಚಿ ಇಲ್ಲದ [ಸಾರವಿಲ್ಲದ] ಗೊಜ್ಜು ಆಚಾರಗಳ ವ್ಯತ್ಯಾಸವನ್ನು ಸವಿಯಲು ಮಾತ್ರ ಮತಾಂತರ ಆದಂತೆ ಆಗುವುದು!! ಆದರೆ, ಇದೇ ಅವಿವೇಕತನದ ಮತಾಂತರದ ಈ ಭಯಾನಕ ಧರ್ಮಯುದ್ಧವನ್ನು, ದೇವರಿಗಾಗಿ ಮಾಡುವ ಅತ್ಯುನ್ನತ ಸೇವೆ, ಅಥವಾ ತಮಗೆ ಸಂಬಂಧಿಸಿ ಸ್ವರ್ಗವನ್ನು ಪಡೆಯುವ ದಾರಿ ಎಂದು ನಂಬಿಸಿರುವುದು ಧರ್ಮದ ಹೆಸರಲ್ಲಿ ನಡೆವ ಅತ್ಯಂತ ಮೂರ್ಖತನದ ಕರ್ಮವಾಗುವುದು.

ಧರ್ಮಾಂಧರ ಕೈಯಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದೇ ಧರ್ಮಯುದ್ಧ ಎಂದು ಹೇಳುವಲ್ಲಿ, ಅದು ತಮ್ಮ ರಕ್ಷಣೆಯ ಕೆಲಸ ಮಾತ್ರವಾಗಿದೆ, ಅದನ್ನು ಧರ್ಮಯುದ್ಧ ಎಂದು ಕರೆಯುವ ಪ್ರಯತ್ನವೂ ಅಗತ್ಯವಿಲ್ಲ. ಅದೇ ರೀತಿ, ಅನ್ಯಾಯವಾದಲ್ಲಿ ಯುದ್ಧವನ್ನು ಸಾರುವುದೂ ಇದೆ, ಇದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಆಗ, ಅದು ಕೂಡಾ ಸಾಧಾರಣ ಯುದ್ಧಮಾತ್ರವಾಗುವುದು. ಅವುಗಳನ್ನು ಧರ್ಮಯುದ್ಧ ಎನ್ನುವ ಅಗತ್ಯವಿಲ್ಲ. ಅನ್ಯಾಯವಾಗುವಲ್ಲೇ ಯುದ್ಧಗಳ ಆರಂಭ ಎಂದು ತಿಳಿದಿರುವಾಗ, ಮತ್ತು ಅದು ಕಾಡು ಜನಾಂಗದ ಯುದ್ಧದಿಂದ ಹಿಡಿದು ಇಂದಿನ ತನಕ ಎಲ್ಲಾ ಯುದ್ಧಗಳಿಗೂ ಕಾರಣವಾಗಿರುವುದು. ಅನ್ಯಾಯದ ವಿರುದ್ಧ ಮಾಡಿರುವ ಆ ಯುದ್ಧಗಳನ್ನೆಲ್ಲಾ

ಧರ್ಮಯುದ್ಧಗಳು ಎಂದರೆ ಸಾಧಾರಣ ಯುದ್ಧ ಎಂಬವುದೇ ಇಲ್ಲವೆಂದು ಹೇಳಬೇಕಾಗುವುದು. ಆದುದರಿಂದ ಅನ್ಯಾಯದ ವಿರುದ್ಧ ಮಾಡಿರುವ ಯುದ್ಧಗಳು ಧರ್ಮಯುದ್ಧಗಳಲ್ಲ ಬದಲು ಯುದ್ಧ ಮಾತ್ರವೆಂದು ಎಂದು ತಿಳಿಯಬಹುದು.

ಧರ್ಮಯುದ್ಧಕ್ಕೆ ಇನ್ನೊಂದು ಅರ್ಥ ಕೊಟ್ಟಿರುವುದು, ಸತ್ಯಸಂಧವಾದ ಯುದ್ಧ ಎಂದು. ಸತ್ಯಸಂಧತೆಯಿಂದ ನಡೆದುಕೊಳ್ಳಲು ಹೆಚ್ಚಿನವರಿಗೂ ಶಾಂತಿಕಾಲದಲ್ಲೇ ಸಾಧ್ಯವಾಗದಿರುವಾಗ, ಇನ್ನು, ಯುದ್ಧಕಾಲಗಳಲ್ಲಿ ಅದು ಸಾಧ್ಯವೇ? ಸಾಧ್ಯವಾಗಿದೆಯೇ? ಅದು ಸಾಧ್ಯವಾಗಿಲ್ಲ ಎಂಬುವುದು ಪುರಾಣ ಇತಿಹಾಸಗಳಿಂದಲೂ ತಿಳಿದಿದೆ. ಹೀಗಿರುವಾಗ, ಧರ್ಮಯುದ್ಧದ ಆ ಅರ್ಥವೂ ಅರ್ಥಹೀನವಾಗಿಹೋಗುವುದು. ಹೀಗೆ, ಎಲ್ಲಾ ರೀತಿಗಳಲ್ಲೂ 'ಧರ್ಮಯುದ್ಧ' ಎಂಬ ಪದವು ಅರ್ಥಹೀನವಾಗಿದೆ ಎನ್ನಬಹುದು.

ಎಲ್ಲಾ ಧರ್ಮ, ಪಂಥಗಳಿಗೂ, ನಿಜವಾಗಿಯೂ ಧರ್ಮದ ಭಾಗವಲ್ಲದ, ಆದರೆ ಧರ್ಮದ ಭಾಗ ಎಂದು ಕರೆಯಲ್ಪಡುವ ಆ ಆಚಾರಗಳಿಗಾಗಿ ಹೊಡೆದಾಡಿ ಸಾಯುವ ದುರ್ಗತಿ ಬಂದಿದೆ ಎಂಬುವುದು ಅತ್ಯಂತ ದಯನೀಯವಾದ ವಿಚಾರವಾಗಿದೆ, ಯಾಕೆಂದರೆ 'ಧರ್ಮ'ವು ಎಲ್ಲಾ ಧರ್ಮಗಳಲ್ಲೂ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ರೂಪದಲ್ಲಿ ಆದಿಯಿಂದಲೇ ನೆಲೆಯಾಗಿದೆ!! ಅದನ್ನು ಪ್ರತಿಯೊಬ್ಬನೂ ತನ್ನ ಮನೋಪರಿಶುದ್ಧಿಯ ಮೂಲಕ ಪಡೆಯಲು ಪ್ರಯತ್ನಿಸಬೇಕು. ಇನ್ನಾದರೂ ಆಚಾರಗಳು ಧರ್ಮವಲ್ಲ ಎಂಬುವುದನ್ನು ಜಗತ್ತಿಗೆ ತಿಳಿಸುತ್ತಾ, ಈ ಜಗತ್ತಿನ ಜನರನ್ನು ತಮ್ಮ ತಮ್ಮ ಧರ್ಮದ ಜೀವಸಾರದ ಕಡೆಗೆ, ಎಲ್ಲಾ ಧರ್ಮಗಳ ಧರ್ಮ ಪಂಡಿತರುಗಳು ಕೊಂಡೊಯ್ಯುವರು ಎಂದು ಆಶಿಸೋಣ.

# ಧರ್ಮಗಳಲ್ಲಿನ ವಿರೋಧಾಭಾಸಗಳು

ಎಲ್ಲಾ ಧರ್ಮಗಳಲ್ಲೂ ವಿರೋಧಾಭಾಸಗಳು ಇವೆ. ಅವು ಈ ಪುರಾಣ ಕಥೆಗಳಿಂದ ಹೆಚ್ಚಾಗಿ ಬರುವುದು. ಹೆಚ್ಚಿನ ಮಹಾತ್ಮರೂ ಪುರಾಣ ಭಾಗವನ್ನು ಭಕ್ತಿಗೆ ಪ್ರೇರಣೆಯಾಗಿ ಮಾತ್ರ ಉಪಯೋಗಿಸಬೇಕು ಎಂದೂ ಅಕ್ಷರ ಪ್ರತಿ ಅದರ ಸತ್ಯತೆಯನ್ನು ಗಮನಿಸಬಾರದೆಂದೂ ಹೇಳಿರುವರು. ಆದರೆ ಇಂದೂ ಎಲ್ಲಾ ಪುರಾಣ ಕಥೆಗಳನ್ನು ಸತ್ಯ ಎಂದು ಸಾಧಿಸಲು ಚಡಪಡಿಸುವ ಜನರು ಬಹಳ ಇರುವರು! ಇದು ಇತರ ಧರ್ಮಗಳೊಂದಿಗಿರುವ ಭಿನ್ನತೆ, ಶತ್ರುತ್ವಗಳನ್ನು ಹೆಚ್ಚಿಸುವುದು ಮಾತ್ರವಲ್ಲ, ತಮ್ಮದೇ ಧರ್ಮಗಳ ಸತ್ಯತೆಯನ್ನು ಕುಗ್ಗಿಸಲು ಕಾರಣವೂ ಆಗುವುದು!

ಎಲ್ಲಾ ಧರ್ಮಗಳಲ್ಲೂ ಕೆಲವು ಪಂಡಿತರು ತಮ್ಮ ತಮ್ಮ ಧರ್ಮವು ವೈಜ್ಞಾನಿಕವಾಗಿದೆ ಎಂದು ತಿಳಿಸುವುದಕ್ಕೆ ಹಲವು ರೀತಿಯಲ್ಲಿ ಶ್ರಮವಹಿಸುವುದನ್ನು ನಾವು ಕಾಣುತ್ತೇವೆ. ಹಲವು ಕಡೆಗಳಲ್ಲಿ ಅವೈಜ್ಞಾನಿಕವಾದ ಮಾತುಗಳು ಇರುವಾಗ ಅವುಗಳಲ್ಲಿ ಕೆಲವೊಂದಕ್ಕೆ ತಮ್ಮ ರೀತಿಯಲ್ಲಿ ಏನೇನೋ ಸೇರಿಸಿ ವೈಜ್ಞಾನಿಕವೆಂದು ಹೇಳುವುದು ಬಹಳ ಬೇಸರದ ವಿಷಯವಾಗುವುದು. ಕೆಲವು ಶಬ್ದ, ವಾಕ್ಯ, ಇತ್ಯಾದಿಗಳನ್ನು ಕಲ್ಪನೆಯ ಸಹಾಯದಿಂದ ಎಳೆದು ವಿವರಿಸುತ್ತಾ, ಅತ್ಯಾಧುನಿಕ ವಿಜ್ಞಾನವನ್ನೂ ತಮ್ಮ ಧರ್ಮದಲ್ಲಿ ಹೇಳಿವೆ ಎಂದು ವಾದಿಸುವರು! ಬರೇ ಒಂದು ಉದಾಹರಣೆಯನ್ನು ನೋಡೋಣ. ಧರ್ಮ ಗ್ರಂಥದಲ್ಲಿರುವ ಸೂರ್ಯನ ಚಲನೆಯನ್ನು ಇಂದಿನ ವಿಜ್ಞಾನಿಗಳ ವಿವರಣೆಯಾದ ಸೌರ ಮಂಡಲದ ಒಟ್ಟು ಚಲನೆ ಎಂದು ಇಂದಿನ ಧರ್ಮ ಪಂಡಿತರು ತಮ್ಮ ಗ್ರಂಥದ ತಪ್ಪನ್ನು ಸರಿಪಡಿಸಿಕೊಳ್ಳಲು ಚಡಪಡಿಸುವಾಗ, ದೇವರು ಆ ಸಾವಿರಾರು ವರುಷಗಳ ಹಿಂದೆ ಏನೂ ತಿಳಿಯದ ಪಾಮರ ಜನರಿಗೆ ಆ ಕಠಿಣ ಅರ್ಥವನ್ನು ಉದ್ದೇಶಿಸುವನೇ ಎಂದು ನಮ್ಮ ಸಾಮಾನ್ಯ ಬುದ್ಧಿಯಿಂದ ನಮಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು. ಹಾಗೆ ದೇವರು ಉದ್ದೇಶಿಸಿದ ಎಂದಾದರೆ, ದೇವರು ಒಂದನೇ ತರಗತಿಯ ಮಕ್ಕಳಿಗೆ ಸ್ನಾತಕೋತ್ತರ ಪದವಿಯ ವಿಚಾರಗಳನ್ನು ಪಾಠ ಮಾಡುವ ಮೂರ್ಖ ಅಧ್ಯಾಪಕನಾಗುವುದಿಲ್ಲವೇ? ಜಗತ್ತಿನ ಎಲ್ಲಾ ಧರ್ಮ ಗ್ರಂಥಗಳಲ್ಲೂ, ಅಂದಿನ ಜಿಜ್ಞಾಸುಗಳು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ, ಇಂದಿನ ವಿಜ್ಞಾನದಂತೆ ನೇರ ಉತ್ತರ ಕೊಟ್ಟಿಲ್ಲ, ಎಲ್ಲಾ ಕಡೆಯೂ ಕೊಟ್ಟಿರುವುದು ಸಾಹಿತ್ಯದ ರೀತಿಯ ವಿವರಣೆ ಆಗುವುದು. ಅವು ಯಾರಿಗೆ ಬೇಕಾದರೂ ಹೇಗೆ ಬೇಕಾದರೂ ವಿವರಿಸುವ ರೀತಿಯಲ್ಲಿ ಇರುವುದು. ಅವುಗಳನ್ನು, ಬೇಕಾದಲ್ಲಿ, ಅತ್ಯಾಧುನಿಕ ವಿಜ್ಞಾನವನ್ನು ವಿವರಿಸುವಲ್ಲಿಯ ತನಕ, ಕಲ್ಪನೆಗಳ ಸಹಾಯದಿಂದ ಎಳೆದು ವಿವರಿಸಬಹುದು!

ಇದೇ ರೀತಿ ಹಲವು ಇತರ ಗೊಂದಲಗಳು ಮತ್ತು ವಿರೋಧಾಭಾಸಗಳು ಧರ್ಮಗಳಲ್ಲಿ ಇವೆ. ಆದುದರಿಂದ ಎಲ್ಲಾ ಧರ್ಮಗಳನ್ನು ಮತ್ತು ದೇವರುಗಳನ್ನು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂದು ವಿವರಿಸಿ, ನಾವು ಎಲ್ಲಾ ಧರ್ಮಗಳಿಗೂ ಅದೇ ರೀತಿ ದೇವರುಗಳಿಗೂ, ಎಲ್ಲರೂ ಆಸೆ ಪಡುವ, ಆ ನಿಜವಾದ ವೈಜ್ಞಾನಿಕ ರೀತಿಯನ್ನೇ ಸಮರ್ಪಿಸೋಣ. ಮಾತ್ರವಲ್ಲ, ಈ ವೈಜ್ಞಾನಿಕ ರೀತಿಯ ಹಿನ್ನೆಲೆಯಲ್ಲಿ, ಧರ್ಮ, ದೇವರನ್ನು ಎತ್ತಿ ಹಿಡಿದಿರುವ ಆ ಮಹಾತ್ಮರುಗಳ ದಾರಿಯನ್ನು ನಾವೆಲ್ಲಾ ಅನುಸರಿಸಿ, ಈ ಲೋಕಕ್ಕೆ ಅದ್ಭುತ ಶಾಂತಿಯನ್ನು ತರುವ ಪ್ರಯತ್ನವನ್ನು ಮಾಡೋಣ.

# ಧರ್ಮಗಳು ಹಲವು ಇಲ್ಲ

ಹೌದು. ಧರ್ಮವು ಆದಿಯಿಂದಲೇ ಒಂದೇ ಆಗಿ ಇದೆ. ಯಾಕೆಂದರೆ ಅವು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ ಆಗಿವೆ. ಇದನ್ನು ಗಟ್ಟಿಮಾಡಿಕೊಳ್ಳಲು ಒಂದು ಉದಾಹರಣಯನ್ನು ಉಪಯೋಗಿಸೋಣ, ಎಲ್ಲಾದರೂ ದೇವರುಗಳು ಸ್ವಪ್ನದಲ್ಲಿ ಬಂದು ಅಸತ್ಯ, ಧ್ವೇಷ ಕಳ್ಳತನ ನಿಮ್ಮ ಧರ್ಮ ಎಂದರೆ ಯಾರಾದರೂ ಆ ಮಾತನ್ನು ಕೇಳುವರೇ? ಇಲ್ಲ, ಆದುದರಿಂದ ಧರ್ಮವೆಂದರೆ "ದೇವರ ಹೆಸರಲ್ಲಿರುವ ಎಲ್ಲಾ ಮಾತುಗಳು" ಎಂಬ ವಾದವು ಸರಿ ಎಂದು ಹೇಳಬೇಕಾಗಿಲ್ಲ ಎಂದು ಅದು ತಿಳಿಸುವುದು. ಮತ್ತು ದೇವರ ಸ್ವಭಾವವನ್ನು ಮೀರಿ ಹೇಳುವ ಯಾವುದನ್ನೂ ನಾವು ದೇವರ ಮಾತೆಂದು ಒಪ್ಪಬೇಕಾಗಿಲ್ಲ ಎಂದೂ ಅದು ಹೇಳುವುದು. ಅಂದರೆ, ಅದು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಹಿನ್ನೆಲೆಯ ಮಾತುಗಳು ಎಂದೇ ಆಯಿತು. ಇನ್ನು, ಜನರು ಮಾಡಬೇಕಾಗಿರುವುದು, ಎಲ್ಲಾ ಧರ್ಮಗಳನ್ನು ಒಟ್ಟು ಸೇರಿಸಿ ಒಂದೇ ಮಾಡುವುದಲ್ಲ, ಬದಲು ಒಂದೇ ಆಗಿ ಆದಿಯಿಂದಲೇ ಇರುವ ಆ ಧರ್ಮವು ಎಲ್ಲಾ ಧರ್ಮಗಳಲ್ಲೂ ಎಲ್ಲಿ ಹುದುಗಿಕೊಂಡಿದೆ ಎಂದು ಪತ್ತೆ ಹಚ್ಚಿ ಅದನ್ನು ಬೆಳೆಸುವುದಾಗಿದೆ. ಆ ಒಂದು ಧರ್ಮವು ಎಲ್ಲೆಡೆ ಹುದುಗಿರುವುದನ್ನು ಕಾಣಬಯಸುವವರು, ಯಾರಿಗೂ ಸ್ವಲ್ಪವೂ ನೋವು ಆಗದ ರೀತಿಯಲ್ಲಿ, ಅದನ್ನು ಎಲ್ಲೆಡೆಯೂ ಮೇಲೆತ್ತುವ, ಆ ಪ್ರಯತ್ನವನ್ನು ಮಾತ್ರ ಮಾಡುವರು! ಜಗತ್ತಿಗೆ ಶಾಂತಿಯ ಸತ್ಯಯುಗವನ್ನು ತರುವ ಆ ಧರ್ಮದ ವಿಜಯವು ಧರ್ಮ, ಸಿದ್ಧಾಂತಗಳ ದಿಗ್ವಿಜಯಗಳಿಂದ ಬರುವುದಿಲ್ಲ, ಬದಲು ಎಲ್ಲೆಡೆಯೂ ಈ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯನ್ನು ಕಾಣುವ ಆ ಮಹಾದೃಷ್ಟಿಯ ಜಯದಿಂದ ಸಾಧ್ಯವಾಗುವುದೆಂಬುವುದನ್ನು ತಿಳಿಯಬೇಕಾಗಿದೆ.

## ಧರ್ಮ, ಪಂಥ, ಪರಂಪರೆಗಳನ್ನು ಯಾರಿಂದಲೂ ಸೃಷ್ಟಿಸಲು ಸಾಧ್ಯವಿಲ್ಲ

ಸಾರ್ವತ್ರಿಕ ಸತ್ಯವೆಂಬುವುದು ಧರ್ಮ, ಪಂಥಗಳ ಉಸಿರು, ಅದಿಲ್ಲವಾದರೆ ಯಾವ ಧರ್ಮವೂ ಇರುವುದಿಲ್ಲ ಮಾತ್ರವಲ್ಲ, ಈ ಸತ್ಯದಿಂದಲೇ ಇತರ ಅವುಗಳ ಭಾಗಗಳ ಪ್ರೀತಿ, ನೈತಿಕತೆ ಇತ್ಯಾದಿ ಉದಯವಾಗಿರುವುದು. ಆಗ, ಎಲ್ಲಾ ಧರ್ಮ, ಪಂಥಗಳಲ್ಲೂ ಸಾರ್ವತ್ರಿಕವಾಗಿರುವ ಸತ್ಯವು ಇರಲೇಬೇಕು ಎಂದಾಯಿತು. ಇನ್ನು, ದೇವರು, ಮಹಾತ್ಮರು ಹಾಗೂ ಪ್ರವಾದಿ ಇತ್ಯಾದಿ ಮಧ್ಯವರ್ತಿಗಳು ಅದನ್ನು ಹುಡುಕಿ ಜನರಿಗೆ ಹೇಳುವುದೊಂದೇ ಕೆಲಸವಾಗುವಾಗ, ಧರ್ಮವನ್ನು ಸೃಷ್ಟಿಸುವ ಕೆಲಸವನ್ನು ಹೇಗೆ ಮಾಡಲು ಸಾಧ್ಯ? ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಸಾರ್ವತ್ರಿಕ ಸತ್ಯವನ್ನು ಜಗತ್ತಿಗೆ ಕೊಟ್ಟಾಗ, ಯಾರೂ ಅದರ ಹಕ್ಕುಪತ್ರವನ್ನು ನಮ್ಮ ಧರ್ಮ, ಪಂಥ, ಗುರುಪರಂಪರೆ ಎಂಬ ರೂಪಗಳಲ್ಲಿ ಪಡೆಯಲೆಂದು ಜಗತ್ತಿನ ಮುಂದಿಡಲು ಸಾಧ್ಯವಿಲ್ಲ! ಹೀಗಿರುವಾಗ ಮಾನವನು ತಮ್ಮ ಧರ್ಮ, ಪಂಥಗಳಿಗೆ ನಾಮಕರಣ ಮಾಡಿ ಅದನ್ನು ತಮ್ಮದೇ ಎಂದು ಹೇಳಿಕೊಳ್ಳುವುದು ಶುದ್ಧ ಮೂರ್ಖತನವಾಗುವುದು. ಈ ರೀತಿಯಲ್ಲಿ ಧರ್ಮ, ಪಂಥ, ಪರಂಪರೆಯೆಂದು ಕೊಚ್ಚಿಕೊಳ್ಳುವವರು, ಮತಾಂಧತೆಯ ಅಪಾಯಕಾರಿ ಜನರು ಮಾತ್ರವಲ್ಲದೆ ಮೂರ್ಖರೂ ಆಗುವರು ಎಂದು ಸ್ಪಷ್ಟವಾಗುವುದು. ಇಲ್ಲೆಲ್ಲಾ ಬರೇ ಅವರವರ ಆ ಪ್ರತ್ಯೇಕ ಆಚಾರ, ನಂಬಿಕೆಗಳ ಸಾರರಹಿತ ಗೊಜ್ಜಿನ ಚೀಲಗಳನ್ನು ಮಾತ್ರ ಈ ಧರ್ಮ, ಪಂಥಗಳು ತಮ್ಮ ಪ್ರತ್ಯೇಕ ಧರ್ಮವೆಂದು ಹೆಸರಿಸಿರುವುದು ಎಂಬುವುದು ಮತ್ತೂ ಸ್ಪಷ್ಟವಾಗುವುದು!!!

# ಧರ್ಮ, ಮತ್ತು ಅದನ್ನು ಪಡೆಯುವ ದಾರಿ

ವಿಶಾಲ ಮನಸ್ಕತೆಯೇ ಧರ್ಮ, ಮತ್ತು ಆತ್ಮ ಪರಿಶೋಧನೆಯೇ ಅದನ್ನು ಪಡೆಯಲಿರುವ ದಾರಿಯಾಗಿದೆ. ನಾವು ಎಷ್ಟೇ ಕಷ್ಟ ಪಟ್ಟು ಬೇರೆ ರೀತಿಯಲ್ಲಿ ವಿವರಿಸಿದರೂ ಅಂತ್ಯದಲ್ಲಿ ಇಲ್ಲಿಗೆ ಬರಲೇಬೇಕು. ಅದರ ಬದಲು ಆ ಸಾರವನ್ನು ಮೊದಲಲ್ಲೇ ಅರಿಯುವುದು ಉತ್ತಮ [ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯು ವಿಶಾಲ ಮನಸ್ಕತೆಯ ಸ್ವಭಾವವಾಗಿದೆ, ಮತ್ತು ಸತ್ಯಚಿಂತನೆಯು ಆತ್ಮ ಪರಿಶೋಧನೆಯ ಉಪಕರಣವಾಗಿದೆ.] ಸಾವಿರಾರು ಧರ್ಮಗ್ರಂಥಗಳು ಮತ್ತು ಪಂಥಗ್ರಂಥಗಳು ಈ ಸತ್ಯವನ್ನು ಪೂರ್ತಿಯಾಗಿ ಗೊಂದಲದಲ್ಲಿ ಹೂತುಹಾಕಿವೆ!! ಆದರೆ ಅಲ್ಲಿ ನೋಡಿ, ಮಹಾತ್ಮರು ನಸುನಗುವರು, ಧರ್ಮದ ವಿಷಯವಾಗಿ, ಪಂಥ, ಪರಂಪರೆಗಳ ವಿಷಯವಾಗಿ ತಮ್ಮೊಳಗೆ ಜಗಳಾಡುವ ಜನರ ಮೂರ್ಖತನವೇ ಈ ನಸು ನಗುವಿಗೆ ಕಾರಣವಾಗಿದೆ. ಆ ನಿಜವಾದ ಧರ್ಮವೆಂಬ 'ವಿಶಾಲ ಮನಸ್ಕತೆ'ಗೆ ಬೇಲಿ ಹಾಕುವಾಗಲೇ ಈ ಪ್ರತ್ಯೇಕ ಧರ್ಮ, ಪಂಥಗಳು ಹುಟ್ಟಿಕೊಳ್ಳುವವು. ಅಂದರೆ, ಆ ಸಾರ್ವತ್ರಿಕ ನಿಜ ಧರ್ಮವನ್ನು ನಾಶಮಾಡದೆ ಆ ಸಂಕುಚಿತ ಧರ್ಮ, ಪಂಥ, ಪರಂಪರೆಗಳಿಗೆ ಹುಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಅರ್ಥ ಬರುವುದು!! ಆ ರೀತಿಯಲ್ಲಿ ಸೃಷ್ಟಿಯಾದವುಗಳು, ಸಾವಿರಾರು ವರುಷಗಳಲ್ಲಿ ಧರ್ಮಾಂಧತೆಯನ್ನು ಬೆಳೆಸಿರುವುದು ಅವುಗಳ ಸಹಜವಾದ ಕೆಲಸವೆಂದು ಮಾತ್ರ ಹೇಳಬೇಕಾಗಿದೆಯಷ್ಟೆ. ಇನ್ನು, ಸ್ವರ್ಗಕ್ಕಾದರೂ, ಮೋಕ್ಷಕ್ಕಾದರೂ, ಅಥವಾ ಜೀವನ ಧರ್ಮಕ್ಕಾದರೂ ನಮಗೆ ಬೇಕಾಗಿರುವುದು ಈ ನಮ್ಮ ಸ್ವಭಾವವನ್ನು ಪರಿಶುದ್ಧಗೊಳಿಸುವ ಆ ಆತ್ಮ ಪರಿಶೋಧನೆ ಮಾತ್ರವಾಗಿದೆ. ಅದಿಲ್ಲದೆ ಏನೂ ಸಿಗದು. ದಯವಿಟ್ಟು ಎಲ್ಲರೂ ಇಲ್ಲಿ ಸತ್ಯಸಂಧವಾಗಿ ಉತ್ತರಿಸಿರಿ, ನಿಜವಾಗಿಯೂ ಈಗ ಕಾಣಿಸುತ್ತಿರುವ ಧರ್ಮ, ಪಂಥ, ಮತ, ಪರಂಪರೆಗಳು ಯಾವುದರ ಮಹತ್ವವನ್ನು ಎತ್ತಿ ಹೇಳುತ್ತಿರುವವು? ಆತ್ಮ ಪರಿಶೋಧನೆಯನ್ನೇ ಅಥವಾ "ನಂಬಿಕೆ ಮತ್ತು ಆಚಾರಗಳನ್ನು ಅನುಷ್ಠಿಸಿ ಅವನ್ನೆಲ್ಲಾ ಗಳಿಸಬಹುದು" ಎಂಬ ರೀತಿಯನ್ನೇ? ತೊಂಬತ್ತು ಶೇಖಡ ಜನರೂ ಈ ಆಚಾರ ನಂಬಿಕೆಗಳೇ ಸರ್ವಸ್ವ ಎಂಬ ರೀತಿಯಲ್ಲಿ, ತಮ್ಮನ್ನು ತಾವು ಶುದ್ಧೀಕರಿಸದೆ, ತಾವು ಧಾರ್ಮಿಕರೆಂದು ವರ್ತಿಸುವುದನ್ನು ನಾವು ಕಾಣುತ್ತೇವೆ!! ಆ ಬೆರಳೆಣಿಕೆಯ ಮಹಾತ್ಮರು ಮಾತ್ರ ಆತ್ಮ ಪರಿಶೋಧನೆಯ ಮೂಲಕ ಆತ್ಮ ಶುದ್ಧೀಕರಣವನ್ನು ಹೇಳುವರು ಅಷ್ಟೆ. ಉಳಿದ ಸರ್ವರೂ ತಮ್ಮ ತಮ್ಮ ಧರ್ಮ, ಮತ, ಪಂಥ, ಪರಂಪರೆ ಇತ್ಯಾದಿಗಳನ್ನು ಹೊಗಳುತ್ತಾ, ಪ್ರಚಾರಮಾಡುತ್ತಾ ಅದನ್ನೇ ಧರ್ಮಪಾಲನೆ ಎಂದು ಹೇಳುತ್ತಾ ಬಂದಿರುವರು!! ಅಂದರೆ ಧರ್ಮಕ್ಕೆ "ನಮ್ಮದು" ಎಂಬ ಬೇಲಿಯನ್ನು ಹಾಕಲು ಸಾಧ್ಯವಿಲ್ಲ, ಹಾಗೆ ಹಾಕಿದ ಕ್ಷಣದಲ್ಲಿ ಅದರಲ್ಲಿನ ನಿಜವಾದ ಧರ್ಮವು ಸರ್ವನಾಶವಾಗುವುದು. ಇನ್ನು, ಉಳಿಯುವುದು ಸಂಕುಚಿತವಾದ ಆ ಬೇಲಿಯೊಳಗಿನ ಧರ್ಮಗಳು ಮಾತ್ರವಾಗುವುದು!! ದೌರ್ಭಾಗ್ಯವಶಾತ್, ನಮಗೆ ಇಂದು ಕಾಣಿಸುವ ಎಲ್ಲವೂ ಈ ಬೇಲಿಯೊಳಗಿನದ್ದು ಎಂದು ತಿಳಿದುಕೊಳ್ಳುವುದಕ್ಕೆ ಭಯವಾಗುವುದು. ಈ ರೀತಿಯ ಬೇಲಿಯೊಳಗಿನ ಧರ್ಮ, ಪಂಥಗಳು ನಿಜವಾದ ಧಾರ್ಮಿಕ ಜೀವನಕ್ಕೆ ಮಾರಕವಾಗಿದೆ ಎಂಬ ಸತ್ಯದ ಕಡೆಗೆ ಯಾರೂ ತಿರುಗಿಯೂ ನೋಡಲಿಲ್ಲ ಎಂಬುವುದು ಇನ್ನೊಂದು ಬಲು ಅಚ್ಚರಿಯ ವಿಷಯವಾಗಿರುವುದು!! ಮಾನವ ವಿಭಜನೆ ಮಾತ್ರವನ್ನು ಉದ್ದೇಶಿಸಿ ಕೆಲಸ ಮಾಡುತ್ತಿರುವ ಆ ಪ್ರಾಚೀನ ವಾಮಾಚಾರವು ಎಲ್ಲಾ ಕಾಲದಲ್ಲೂ

ಜನರನ್ನು "ಮಾನವ ಒಗ್ಗಟ್ಟು" ಎಂಬ ಕಡೆಗೆ ಚಿಂತಿಸಿದಂತೆ ಬಹಳವಾಗಿ ಪ್ರಯತ್ನಿಸಿದೆ ಎಂದು ಇದರಿಂದ ಸ್ಪಷ್ಟವಾಗುವುದು. ಅದರ ಬದಲು "ಮಾನವ ಒಗ್ಗಟ್ಟು" ಆಗದಂತೆ ದೇವರೇ ಮಾನವನಿಗೆ ಬೇರೆ ಬೇರೆ ಬಾಷೆ ಇತ್ಯಾದಿಗಳನ್ನು ಸೃಷ್ಟಿಸಿ ಕೊಟ್ಟಿದ್ದಾನೆ ಎಂಬ ಭಯಾನಕ ಅಮಾನವೀಯ ಕಥೆಗಳನ್ನು ಧರ್ಮದ ಮೂಲಕವೇ ಹೇಳಿಸಿದೆ!! ಆ ಮೂಲಕ ಆ ಪ್ರಾಚೀನ ವಾಮಾಚಾರ ವ್ಯವಸ್ಥೆಗೆ ಬೇಕಾಗಿರುವ ಮಾನವ ಕುಲದಲ್ಲಿ ಚಿರ ದ್ವೇಷ, ರಕ್ತಪಾತವನ್ನು ಅದು ಸುಲಭದಲ್ಲಿ ಗಳಿಸಿಕೊಂಡಿದೆ. ಒಂದು ಮನೆಯಲ್ಲಿ ಎಲ್ಲರೂ ಒಗ್ಗಟ್ಟಾದರೆ ಅದು ಆ ಮನೆಯನ್ನು ಸರ್ವನಾಶ ಮಾಡುವುದೇ? ಅದೇ ರೀತಿ, ಈ ಜಗತ್ತಿನ ಜನರೆಲ್ಲರೂ ಒಗ್ಗಟ್ಟಾದಲ್ಲಿ ದೇವರ ಪಟ್ಟ ತಾನಾಗಿ ಇಲ್ಲವಾಗುವುದೇ? ಅದು ಎಂದಿಗೂ ಆಗದು, ಬದಲು ಜಗತ್ತಿನಲ್ಲಿ ದೇವರ ಧರ್ಮವು ಅತ್ಯಂತ ಬೆಳಗುವುದು ಅಷ್ಟೆ. ಆಗ ಎಲ್ಲರೂ ಸೇರಿ ಆ ಆದರ್ಶ ದೇವರನ್ನು ಹೊಗಳುವರು ಅಷ್ಟೆ, ಯಾಕೆಂದರೆ ಉತ್ತಮರಿಗೆ ಅಲ್ಪತನವಿಲ್ಲ, ಆದರೆ ಅಲ್ಪತನವಿರುವುದು ಧ್ವೇಷ, ಅಸೂಯೆ ತುಂಬಿ ಇತರರಿಂದ ತಾವು ಬೇರೆಯಾಗಿರಲು ಪ್ರಯತ್ನಿಸುವ ಅಸುರರಲ್ಲಿ ಎಂದು ನಮಗೆ ತಿಳಿದಿದೆ. ನಿಜವಾಗಿ, ಮಾನವರು ಒಗ್ಗಟ್ಟಾಗುವುದನ್ನು ವಿರೋಧಿಸುವ ಈ ಅಸುರ ಜನರೇ ದೇವರನ್ನು ಸರ್ವನಾಶ ಮಾಡುವ ಆ ದುಷ್ಟಶಕ್ತಿಗಳು. ಮಾನವರು ಒಗ್ಗಟ್ಟಾಗಬಾರದು ಎಂಬ ರೀತಿಯ ಧರ್ಮವಿರುದ್ಧ ಪುರಾಣ ಕಥೆಗಳನ್ನು, ಮತ್ತು ಸಮಾಜಿಕ ವ್ಯವಸ್ಥೆಗಳನ್ನು ಧರ್ಮದೊಳಗೆ ಯಾರು ಯಾಕಾಗಿ ಸೇರಿಸುತ್ತಾರೆ ಎಂಬುವುದು ಈಗ ಸ್ಪಷ್ಟವಾಗಬಹುದು ಎಂದು ಭಾವಿಸುವೆನು. ಎಲ್ಲವೂ ದೇವರಿಂದಲೇ ಬರುವುದು ಎಂದು ನಂಬುವ ಅಜ್ಞಾನಿ ಮಾನವನು ಅವೆಲ್ಲವನ್ನೂ ದೇವರ ಮಾತೆಂದು ಅತ್ಯಂತ ನಂಬಿ ತಮ್ಮೊಳಗೆ ಹೊಡೆದಾಡಿ, ರಕ್ತಪಾತ ಮಾಡಿ, ಗಳಿಸಿಕೊಂಡ ಕ್ರೌರ್ಯ ಮತ್ತು ರಕ್ತವನ್ನು ದೇವರ ಪಾದಗಳಿಗೆ ಅರ್ಪಿಸಿ ಅದನ್ನು ತನ್ನ ದೊಡ್ಡ ಧಾರ್ಮಿಕ ಸೇವೆಯೆಂದು ತಿಳಿದುಕೊಂಡಿರುವನು!!! ಧರ್ಮವೆಂದರೆ ಮಾನವನ ಮನೋ ಶುದ್ದೀಕರಣವಾಗಿದೆ ಎಂದೂ, ಮತ್ತು ಜನರು ಪುರಾಣ ಕಥೆಗಳನ್ನು ಧರ್ಮದ ಸಾರವೆಂದು ಎಂದೂ ತಪ್ಪು ತಿಳಿದುಕೊಳ್ಳಬಾರದು ಎಂದೂ ಮಹಾತ್ಮರು ಎಚ್ಚರಿಸುತ್ತಾ ಬಂದಿರುವುದನ್ನು ಇಲ್ಲಿ ನಾವು ನೆನೆಯಬೇಕಾಗಿದೆ.

# ಸೃಷ್ಟಿಕರ್ತ ದೇವನ ಸತ್ಯ ಮತ್ತು ಆ ಮೂಲ ಸತ್ಯ

ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಸತ್ಯದ ವೈಜ್ಞಾನಿಕ ನಿರ್ವಚನೆಯಾಗಿದೆ. ಯಾವುದು ಇದೆಯೋ ಅದು ಮಾತ್ರ ಸತ್ಯವಾಗಲು ಸಾಧ್ಯವೆಂದು ಮೊದಲೇ ನಮಗೆ ತಿಳಿದಿದೆ. ಸತ್ಯವೆಂದರೆ ಇದ್ದದ್ದನು ಇದ್ದ ಹಾಗೆ ನೋಡುವುದು, ಹೇಳುವುದು, ಮಾಡುವುದು ಇವೆಲ್ಲಾ ಆಗುವುದು ಎಂದೂ ಹೇಳುತ್ತೇವೆ. ಅಂದರೆ, ಸೃಷ್ಟಿಕರ್ತ ದೇವರು ಇದ್ದಲ್ಲಿ ಆತನು ಒಂದು ಜಾತಿ ಹಣ್ಣನ್ನು ತಯಾರು ಮಾಡಿ ಇನ್ನೊಂದು ಜಾತಿ ಹಣ್ಣನ್ನು ಅದೇ ಸಂಕಲ್ಪದಲ್ಲೇ ತಯಾರು ಮಾಡಲು ಸಾಧ್ಯವಿಲ್ಲ, ಇನ್ನೊಂದು ಜಾತಿ ಹಣ್ಣಿನ ಸೃಷ್ಟಿ ಆಗ ಬೇಕಿದ್ದರೆ ಅದನ್ನು ಪ್ರತ್ಯೇಕವಾಗಿ ಸಂಕಲ್ಪಿಸಿ ಸೃಷ್ಟಿಸಬೇಕಾಗುವುದು. ಮೊದಲಿನ ಹಣ್ಣಿನ ಸಂಕಲ್ಪದ ಮೇಲೆ ಸೃಷ್ಟಿಸಿದರೆ ಎರಡು ಹಣ್ಣುಗಳು ತಮ್ಮ ಅಸ್ತಿತ್ವವನ್ನು ಕಳಕೊಳ್ಳುವವು. ಹೀಗೆ, ಸೃಷ್ಟಿಕರ್ತನು ಆ ರೀತಿಯನ್ನು ಮಾತ್ರ ಅವಲಂಭಿಸುವನು. ದೇವರು ಆರು ದಿವಸಗಳಲ್ಲಿ ಒಂದೊಂದಾಗಿ ಸೃಷ್ಟಿಸುತ್ತಾ ಬಂದನು ಎಂದು ಕೆಲವು ಪುರಾಣಗಳು ಹೇಳುವಾಗ ಇದೇ ಅರ್ಥ ಅಲ್ಲಿ ಬರುವುದು. ಇಲ್ಲವಾದರೆ ದೇವರಿಗೆ ಒಂದೇ ದಿನದಲ್ಲಿ ಮತ್ತು ಒಂದೇ ಸಂಕಲ್ಪದಲ್ಲಿ ಎಲ್ಲವನ್ನೂ ಸೃಷ್ಟಿಸಬಹುದಿತ್ತು!! ಅಂದರೆ ಆತನೂ ಆತನಲ್ಲದ ಒಂದು ನಿಯಮಕ್ಕೆ ಬದ್ದನಾಗಿ ಸೃಷ್ಟಿಸಬೇಕಾಯಿತು ಎಂಬ ಸತ್ಯವು ನಮಗೆ ದೊರಕುವುದು. ಆದುದರಿಂದಲೇ ಸೃಷ್ಟಿಕರ್ತ ದೇವನು ಇದ್ದಲ್ಲಿ ಆತನಿಗೆ ಮೂಲದ ಸತ್ಯದ ನಿಯಮಗಳನ್ನು ಅಥವಾ ಮೂಲಸತ್ಯವನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ, ಬದಲು ಆ ಮೊದಲೇ ಇದ್ದ ಆ ಮೂಲದ ಸತ್ಯದ ನಿಯಮದ ಸಹಾಯದಿಂದ ಮಾತ್ರ ಇತರ ಸತ್ಯಗಳ ಸೃಷ್ಟಿಯನ್ನುಮಾಡಿದನು ಎಂದು ಹೇಳಬೇಕಾಗುವುದು. ಅಂದರೆ, ಯಾವುದು ಅತ್ಯಂತ ಮೂಲದಲ್ಲಿರುವುದೋ ಅದುವೇ ಮೂಲ ಸತ್ಯವಾಗುವುದು. ಇಲ್ಲಿ, ಮೂಲ ಸತ್ಯವು ಆ ಮೂಲದ ಪ್ರಕೃತಿಯ ನಿಯಮಗಳಾಗಿವೆ. ಈ ಹಿನ್ನೆಲೆಯಲ್ಲೇ, ಇತ್ತ ದೇವರ ವ್ಯಕ್ತಿತ್ವದ ಮೂಲದ ಸತ್ಯದ ಬಗ್ಗೆ ಹೇಳುವಾಗ, ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೈತಿಕತೆಯು ದೇವರ ಅಸ್ತಿತ್ವದ[ವ್ಯಕ್ತಿತ್ವದ]ಸಾರ ಅಥವಾ 'ದೇವತ್ವ'ದ ಮೂಲ ನಿಯಮವಾಗುವುದು ಎನ್ನುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದನ್ನು[ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ ಗುಣಗಳನ್ನು], ದೇವರನ್ನೇ ಸೃಷ್ಟಿಸುವ ಆ ಮೂಲದೇವರು ಅಥವಾ ದೇವರ ಕಾರಣ ಎನ್ನಬಹುದು. ಈ ಮೂಲ ಕಾರಣವನ್ನು ಹೊತ್ತ ಶಕ್ತಿಯು ಮಾತ್ರ ದೇವಶಕ್ತಿಯಾಗಲು ಸಾಧ್ಯ, ಮತ್ತು ಅವುಗಳು ಇಲ್ಲದ ಶಕ್ತಿಯು ಇತರ ಅಥವಾ ಅಸುರ ಶಕ್ತಿಯಾಗುವುದು ಎಂಬಲ್ಲಿ ಪುರಾಣಗಳ ರೀತಿಯಲ್ಲೂ ದೇವರು ಹುಟ್ಟಿಕೊಂಡಿರುವುದು ಈ ಪವಿತ್ರ ಮೂಲ ಸ್ವಭಾಗಳಿಂದ ಎಂದೂ ಹೇಳಬಹುದು.

ಈ ಜಗತ್ತನ್ನು ಮೇಲೆತ್ತಲು ಸಾಧ್ಯವಾಗುವ ಅತ್ಯಂತ ಸುಲಭದ ದಾರಿಯನ್ನು ಒಂದೇ ಶಬ್ದದಲ್ಲಿ ಹೇಳಬಹುದು. ಅದುವೇ 'ವಿಶಾಲ ಮನಸ್ಕತೆ.' ಅದರಿಂದ ಈ ಜಗತ್ತಿನ ಸರ್ವ ತೊಂದರೆಗಳೂ ಬಗೆಹರಿಯುವುದು. ಆದರೆ ಇವನ್ನು ಬೆರಳೆಣಿಕೆಯ ಮಹಾತ್ಮರನ್ನು ಬಿಟ್ಟಲ್ಲಿ ಬೇರೆಲ್ಲೂ ನಮಗೆ ಕಾಣಲು ಸಾಧ್ಯವಾಗುವುದಿಲ್ಲ! ಧರ್ಮ, ಪಂಥಗಳಲ್ಲಿ ಈ ವಿಶಾಲ ಮನಸ್ಕತೆಯ ಸೃಷ್ಟಿಯು, ಕೈಗಾರಿಕಾ ರೀತಿಯಲ್ಲಿ, ಆ ದೊಡ್ಡ ಪ್ರಮಾಣದಲ್ಲಿ ಆಗಬೇಕಾಗಿತ್ತು. ಆದರೆ ದೌರ್ಭಾಗ್ಯವಶಾತ್, ಅವುಗಳಲ್ಲಿ

ಅವುಗಳು ಸೃಷ್ಟಿಯಾಗುವ ಬದಲು ಕೈಗಾರಿಕಾ ರೀತಿಯಲ್ಲಿ ಸಂಕುಚಿತ ಮನೋಭಾವ ಮತ್ತು ಅವುಗಳ ಮಕ್ಕಳಾದ ಆ ದ್ವೇಷ, ರಕ್ತಪಾತಗಳು ಸೃಷ್ಟಿಯಾಗುತ್ತಿವೆ!

ನೀವು ಎಲ್ಲೇ ಹೋಗಿ ಈ 'ನಮ್ಮ' ಎಂಬುವುದು ಇದ್ದೇ ಇದೆ. ಮನೆತನ, ಜಾತಿ, ಭಾಷೆ, ಧರ್ಮ, ಪಂಥ, ರಾಜ್ಯ, ದೇಶ, ಇವೆಲ್ಲಾ ನಮ್ಮನ್ನು ಒಗ್ಗೂಡಿಸಲು ಮಾಡುವ ಯತ್ನಗಳಾದರೂ ಅವೆಲ್ಲಾ ನಿಜವಾಗಿಯೂ ನಮ್ಮನ್ನು ತಮ್ಮೊಳಗೆ ದೂರ ಮಾಡುವಲ್ಲಿ ಹೆಚ್ಚು ಕೆಲಸ ಮಾಡುವವು!! ಮೇಲಿನ ಪ್ರತಿಯೊಂದನ್ನು ನೋಡಿದಾಗಲೂ ಅವುಗಳು ಭಯಾನಕ ಹಿಂಸೆಗಳನ್ನು ಈ ಜಗತ್ತಲ್ಲಿ ಸೃಷ್ಟಿಸಿದೆ ಎಂದು ತಿಳಿಯುವುದು. ನಿಜವಾಗಿಯೂ ನಮಗೆ ಆ ವಿಶಾಲ ಮನಸ್ಕತೆ ಇದ್ದಲ್ಲಿ ಇವುಗಳಿಗೆ ಒತ್ತುಕೊಡದೆಯೇ ಒಗ್ಗೂಡಿ ಜೀವಿಸಬಹುದು ಎಂಬುವುದು ಸತ್ಯ. ಆ ಮಹಾತ್ಮರು ನಮಗೆ ಇದನ್ನು ಮೊದಲೇ ಸೂಚಿಸಿದ್ದಾರೆ, ಆದರೆ ಜನರು ತಮ್ಮ ಸ್ವಾರ್ಥವನ್ನು ಬಿಡಲು ತಯಾರಾಗುವರೇ? ಚುಟುಕಾಗಿ ಹೇಳುವುದಾದರೆ, ನಿಜವಾದ ದೇವರು ಮತ್ತು ಧರ್ಮ ಯಾರಿಗೂ ಬೇಕಾಗಿಲ್ಲ ಬದಲು ಅವುಗಳ ಹೆಸರು ಮತ್ತು ಗ್ರಂಥದ ವಾಕ್ಯಗಳು ಹಾಗೂ ಸ್ವಲ್ಪ ಆಚರಣೆಗಳು ಬೇಕಾಗಿದೆ ಅಷ್ಟೆ! ಮಹಾತ್ಮರ ಮಾತನ್ನು ಲೆಕ್ಕಿಸದಿರಲು ಮಾನವನ ಸ್ವಾರ್ಥವೇ ಕಾರಣವಾಗಿದೆ.

ಮಹಾತ್ಮರು ಈ ಭೂಮಿಯೇ ಒಂದು ಕುಟುಂಬ ಎಂದು ಆ ವಿಶಾಲ ಮನಸ್ಕತೆಯನ್ನು ಕೊಟ್ಟರು. ಮತ್ತು 'ನೀವು ಯಾರೂ ಜಾತಿ ಶೋಷಣೆ ಮಾಡಬೇಡಿ, ಪಂಥ, ಧರ್ಮವೆಂದು ಹೊಡೆದಾಡಿ ಅವುಗಳ ನಿಜವಾದ ಉದ್ದೇಶವನ್ನೇ ಧ್ವಂಸ ಮಾಡಬೇಡಿ' ಎಂದು ಒತ್ತಿ ಹೇಳಿದರು, ಆದರೆ ಅಲ್ಪನಾದ ಮಾನವ, ಆ ತನ್ನ ಅಲ್ಪತನದ ದೃಷ್ಟಿಯಿಂದ ಧರ್ಮ, ಪಂಥಗಳ ಶ್ರೇಷ್ಠತೆಯನ್ನು ವಿವರಿಸುವುದನ್ನು ಇನ್ನೂ ನಿಲ್ಲಿಸಲಿಲ್ಲ! ನಿಲ್ಲಿಸಿದರೆ, 'ನಾವು ಮೇಲು ಜಾತಿಯವರು' ಎಂದು ಹೇಳಿಕೊಳ್ಳುವುದು ಸಾಧ್ಯವಾಗುವುದೇ? ಮತ್ತು 'ನಾವು ಶ್ರೇಷ್ಠ ಧರ್ಮದವರು' ಎಂದು ಕೊಚ್ಚಿಕೊಳ್ಳುವುದು ಸಾಧ್ಯವಾಗುವುದೇ? ಈ ರೀತಿಯಲ್ಲಿ, ಈ ಜಗತ್ತಲ್ಲಿ, ಬಹಳ ಹಿಂದಿನಿಂದಲೇ, ಧರ್ಮ, ಪಂಥಗಳನ್ನು ದುರುಪಯೋಗ ಮಾಡಿರುವುದು ನಮಗೆ ಕಾಣಿಸುವುದು.

ಆಡಳಿತಾ ಸೌಕರ್ಯಕ್ಕಾಗಿ ನಾವು ರಾಜ್ಯ, ರಾಷ್ಟ್ರಗಳಾಗಿದ್ದೇವೆ. ಆದರೆ ನಾವೆಲ್ಲಾ ಆ ಮಹಾತ್ಮರು ಹೇಳುವಂತೆ ಈ ಭೂಮಿ ತಾಯಿಯ ಮಕ್ಕಳು. ನಾವು ಹುಟ್ಟಿದ ದೇಶವು, ಈ ಹಿನ್ನೆಲೆಯಲ್ಲಿ, ನಮ್ಮ ತಾಯಿಯಾಗುವುದಿಲ್ಲ ಬದಲು ನಮ್ಮ ಸಹೋದರಿ ಮಾತ್ರ ಆಗುವಳು. ಇನ್ನೂ ಹಲವು ನಮ್ಮ ಸಹೋದರಿಯರು ಈ ಭೂಮಿಯಲ್ಲಿರುವರು ಎಂಬ ಆ ವಿಶಾಲ ಮನಸ್ಕತೆಯ ಭಾವನೆಯು ಇದರಿಂದ ಸೃಷ್ಟಿಯಾಗುವುದು. ಮಾನವ ಕುಲವೆಂಬ ಈ ಕುಟುಂಬವು ನಿಂತಿರುವುದು ಒಂದು ದೇಶದಲ್ಲಿ ಅಲ್ಲ, ಬದಲು ಈ ಭೂಮಿ ತಾಯಿಯ ಮಡಿಲಲ್ಲಿ ಎಂಬುವುದನ್ನು ಮರೆಯಬಾರದು. ಚಿಕ್ಕ ಪುಟ್ಟ ನಂಬಿಕೆ, ಆಚಾರಗಳೂ ಈ ಭೂಮಿಯಲ್ಲಿ ಎಷ್ಟು ದ್ವೇಷವನ್ನು ಮತ್ತು ಅಪಾಯವನ್ನು ಸೃಷ್ಟಿಸಿದೆ ಎಂದು ನಮಗೆಲ್ಲರಿಗೂ ಗೊತ್ತು, ಅದಕ್ಕಾಗಿ ಈ ಜಗತ್ತಿನ ಎಲ್ಲಾ ದೇಶಗಳೂ ಒಟ್ಟಾಗಿ 'ಈ ಭೂಮಿ ತಾಯಿಯ

ಮಕ್ಕಳು ನಾವು' ಎಂಬ ಭಾವನೆಯನ್ನು ಬೃಹತ್ತಾಗಿ ಬೆಳೆಸಬೇಕಾಗಿದೆ, ಆಗ ಮಾತ್ರ ಅಲ್ಪರಾದ ಜನರು ಅದನ್ನು ಕೇಳಿ, ತನ್ನ ಭಾಷೆ, ಮನೆತನ, ಜಾತಿ, ಧರ್ಮ, ದೇಶ, ಇತ್ಯಾದಿಗಳ ಬಗ್ಗೆ ಕೊಚ್ಚಿಕೊಳ್ಳುವುದನ್ನು ನಿಲ್ಲಿಸುವರು! ಈ ಜಾಗತಿಕ ಒಕ್ಕೂಟದ ಚಿಂತನೆ ಮುಂದುವರಿಯುವುದಾದರೆ ಜಗತ್ತಲ್ಲಿ ಶಾಂತಿ ನೆಲೆಯಾಗುವುದು ಖಂಡಿತ.

ಇದು ಬರೇ ಕಾಲ್ಪನಿಕವಲ್ಲ, ಸಾಧ್ಯವಾಗಬಹುದು! ಇದಕ್ಕಾಗಿ, ನಂಬಿಕೆ ಎಂಬ ಆ ಬಂಧನಗಳಿಂದ ಕೋಟಿ ಪಾಲು ಮಹತ್ವದ 'ಸತ್ಯ' ಎಂಬ ಆ ನಿತ್ಯ ಸ್ವಾತಂತ್ರ್ಯದೆಡೆಗೆ ನಾವು ಸ್ವಲ್ಪ ಸರಿದರೆ ಸಾಕಾಗುವುದು! ಯಾರಾದರೂ "ದೇವರು ಸತ್ಯ" ಎಂದು ಅರ್ಥಮಾಡಿಕೊಂಡಾಗ "ಅದು ಪ್ರಾಯೋಗಿಕವಲ್ಲ" ಎಂದು ಹೇಳಿದರೆ, ಹಾಗೆ ಹೇಳುವ ನಂಬಿಕೆಯವನು ಒಬ್ಬ ಆಸ್ತಿಕನೇ ಆಗುವುದಿಲ್ಲ, ಯಾಕೆಂದರೆ ಆಗ ಆತನು ತನ್ನ ದೇವರ ಸತ್ಯದ ಸಂಕಲ್ಪವನ್ನೇ ಧ್ವಂಸಮಾಡಬಯಸುವ ಸೈತಾನನಾಗುವನು!!!

# ಇರುವ ಒಂದೇ ಧರ್ಮಕ್ಕೆ ಹಲವು ಹೆಸರುಗಳು

ನಿಜವಾಗಿಯೂ ನೋಡಿ, ಈ ಜಗತ್ತಿನಲ್ಲಿ ಯಾರು ಧರ್ಮವನ್ನು ಹೊಸದಾಗಿ ಸೃಷ್ಟಿಸಿದ್ದಾರೆ? ಎಲ್ಲರೂ ಒಂದಿಷ್ಟು ಅವರದ್ದೇ ಆದ ಹೊಸ ನಂಬಿಕೆಯ ಆಚರಣೆಗಳನ್ನು ಕೊಟ್ಟು ಹೋಗಿದ್ದಾರೆ! ಆದರೆ ಆ ಆಚರಣೆಗಳ ಮಧ್ಯದಲ್ಲಿ ಎಲ್ಲೋ ಹುದುಗಿರುವ ಆ ನಿಜ ಸಾರವಾದ ಧರ್ಮವನ್ನು ಮಾತ್ರ ತೆಗೆದು ನೋಡಿದಾಗ, ಅವೆಲ್ಲಾ ಸಹಸ್ರ ಸಹಸ್ರ ವರುಷಗಳ ಹಿಂದೆ, ಧರ್ಮಕ್ಕೆ ಯಾರೂ ಹೆಸರಿಡದ ಕಾಲದಲ್ಲೇ, ಆ ಮರದಡಿಯ ವಿಶಾಲ ಮನಸ್ಕತೆಯ ಮಹಾತ್ಮರ ಮಾತುಗಳು ಮಾತ್ರವಾಗಿದೆ ಎಂದು ಸ್ಪಷ್ಟವಾಗುವುದು. ಆದುದರಿಂದ ಧರ್ಮವು, ಈ ಜಗತ್ತಲ್ಲಿ ಯಾವುದಾದರೂ ಒಂದು ಹೆಸರಿನಿಂದ ಕರೆಯಲ್ಪಡುವ ಮೊದಲೇ ಹುಟ್ಟಿಕೊಂಡಿದೆ ಎಂದು ತಿಳಿಯಬಹುದು. ಇನ್ನು, ಒಮ್ಮೆ ಹುಟ್ಟಿರುವುದು ಅದು ಇನ್ನೊಮ್ಮೆ ಹುಟ್ಟುವುದು ಸಾಧ್ಯವಿಲ್ಲದ ಕಾರಣ, ಅದೇ ಕೊನೆಯ ಧರ್ಮ ಎಂದೂ ಹೇಳಬಹುದಾಗಿದೆ. ಆದರೆ, ಅನಂತರದಲ್ಲಿ ಆ ಸತ್ಯಗಳನ್ನು ತಮ್ಮ ತಮ್ಮ ನಂಬಿಕೆಗಳ ಗೂಡಿನೊಳಗಿಂದ ಎತ್ತಿ ಹಿಡಿಯಲು ಶ್ರಮ ಪಟ್ಟಾಗ, ಪರಂಪರೆ, ಪಂಥ, ಮತ, ಧರ್ಮಗಳು ಹುಟ್ಟಿಕೊಂಡವು!! ಅವುಗಳು ಜನರನ್ನು "ನಮ್ಮದು" ಎಂಬ ಸಂಕುಚಿತ ರೀತಿಯಲ್ಲಿ ಒಗ್ಗಟ್ಟಾಗಲು ಹೇಳುವಾಗ, ಇತರ ಕಡೆ, ಅವು ಸಹಸ್ರ ಜನರಿಗೆ ಶತ್ರುಗಳಾಗಿ ಪರಿಣಮಿಸಿದವು! ಮಾತ್ರವಲ್ಲ, ಕಾಲಾಂತರದಲ್ಲಿ, ತಮ್ಮಲ್ಲೇ ಒಗ್ಗಟ್ಟು ಮುರಿದು ಹೊಸ ಪಂಥಗಳಾಗಿ ವಿಭಜಿಸಲ್ಪಟ್ಟು ತಮ್ಮೊಳಗೆ ರಕ್ತಪಾತ ಮಾಡಿದವು, ಮತ್ತು ಹೀಗೆ ಎರಡೂ ಕಡೆಯೂ ಸರ್ವ ನಾಶವನ್ನೇ ತಂದೊಡ್ಡಿದವು!! ಆದುದರಿಂದ, ಜಗತ್ತಲ್ಲಿ ಎಲ್ಲಾ ಧರ್ಮ, ಪಂಥಗಳಲ್ಲೂ ಹುದುಗಿರುವ ಆ ಸಾರಧರ್ಮವನ್ನು ಎಲ್ಲರೂ ಸೇರಿ ಎತ್ತಿ ಹಿಡಿವ ಆ ಸುಲಭದ ಕೆಲಸವನ್ನು ಮಾಡಿದಲ್ಲಿ, ಯಾರಿಗೂ ತೊಂದರೆ ಆಗದ ರೀತಿಯಲ್ಲಿ, ಮತ್ತು ಅವರವರ ಧರ್ಮ, ಪಂಥಗಳ ರಚನೆಗಳಲ್ಲಿ ಬದಲಾವಣೆ ಮಾಡದೆಯೇ, ಮಾನವರೆಲ್ಲರೂ ಒಂದಾಗುವ ಆ ಅದ್ಭುತ ಜಾಗತಿಕ ಒಗ್ಗಟ್ಟು ಸೃಷ್ಟಿಯಾಗಬಹುದು. ಈ ಜಾಗತಿಕ ಒಗ್ಗಾಟ್ಟಾಗುವಿಕೆಯು ಆ ಪ್ರಾಚೀನ ವಾಮಾಚಾರದ ಪ್ರಭಾವವನ್ನು ಖಂಡಿತವಾಗಿಯೂ ಗಣನೀಯವಾಗಿ ಕುಗ್ಗಿಸುವುದೆಂಬುವುದರಲ್ಲಿ ಸಂಶಯವಿಲ್ಲ.

# ಧರ್ಮವು ನಮಗೆ ನೀಡುವ ತಿಳುವಳಿಕೆ

ಇತರರಿಗೂ ಒಳ್ಳೆಯದಾಗುವ ರೀತಿಯಲ್ಲಿ ಮತ್ತು ತಮಗೂ ಒಳ್ಳೆಯದಾಗುವ ರೀತಿಯಲ್ಲಿ ಸಂತೋಷದಿಂದ, ಈ ಜಗತ್ತಿನಲ್ಲಿ ಜೀವಿಸುವಂತೆ ಧರ್ಮವು ನಮಗೆ ತಿಳಿಸುವುದು. ಅದಕ್ಕೆ, ಅದು ಸಮಾಜದಲ್ಲಿ ನೈತಿಕ ನಿಯಮ ಸಂಹಿತೆಯನ್ನು ಉಂಟು ಮಾಡಿದೆ. ತಪ್ಪು ಮಾಡಿದವರಿಗೆ ಶಿಕ್ಷೆ ಮತ್ತು ಉತ್ತಮರಿಗೆ ಪ್ರೋತ್ಸಾಹವನ್ನು ಅದು ಕೊಡುವುದು. ಆದರೆ ದೇವರು ಮತ್ತು ಮೋಕ್ಷವು ವ್ಯಯಕ್ತಿಕವಾದದ್ದು, ದೇವರಿಲ್ಲದ ಧರ್ಮಗಳು ಈ ಜಗತ್ತಿನಲ್ಲಿ ಇರುವಾಗ, ದೇವರು, ಧರ್ಮದ ಒಂದು ಮುಖ್ಯ ಭಾಗವಲ್ಲ ಎಂದು ಅದು ಸ್ಪಷ್ಟಗೊಳಿಸುವುದು. ಆದುದರಿಂದ, ಧರ್ಮವು ಸನ್ನಡತೆಯನ್ನು ಮಾತ್ರ ಉದ್ದೇಶಿಸಿದೆ ಎಂದು ಅದು ತಿಳಿಸುವುದು. ದುರಾದೃಷ್ಟವಶಾತ್, ಜಗತ್ತು ಹಿಂದಿನಿಂದಲೇ ಧರ್ಮವನ್ನು ಕಾಪಾಡುತ್ತಾ ಬಂದಿರುವುದು ಆಚಾರಗಳಲ್ಲಿ! ಅದು ಮಾತ್ರವಲ್ಲದೆ, ಆ ಆಚಾರಗಳು ವಿಚಾರಗಳ ನೇರ ಪ್ರಶ್ನೆಗಳಿಂದ ಸಡಿಲವಾಗಬಾರದೆಂದು ಅದಕ್ಕೆ 'ನಂಬಿಕೆ' ಎಂಬ ಆ ಸರ್ಪ ಬಂಧನವನ್ನೂ ಹಾಕಲಾಯಿತು, ಈ ಬಂಧನವು ಇಂದಿಗೂ ಅವನ್ನು ಕಾಪಾಡುತ್ತಾ ಬರುತ್ತಿವೆ. ನಂಬಿಕೆಯು ಸ್ವಲ್ಪವಾದರೂ ಕದಲಿದರೆ ಜಗತ್ತೇ ಅಲ್ಲೋಲ ಕಲ್ಲೋಲವಾಗುವಂತೆ ಅದನ್ನು ವಿನ್ಯಾಸಗೊಳಿಸಿರುವುದು ಇನ್ನೊಂದು ಅದ್ಭುತ ತಂತ್ರ ಜ್ಞಾನವಾಗಿರುವುದು. ನಿಜವಾಗಿ ನೋಡುವಾಗ, ಈ ಜಗತ್ತೇ ಧರ್ಮವನ್ನು ಅಪಹಾಸ್ಯ ಮಾಡುತ್ತಿದೆ. ಅವಕ್ಕೆಲ್ಲಾ ಕಾರಣ ಎಲ್ಲಾ ಧರ್ಮ, ಪಂಥಗಳಲ್ಲೂ ಹಿಂದೆ ಆ ಸ್ವಾರ್ಥಿಗಳು ಮಾಡಿಟ್ಟ ನಂಬಿಕೆಗಳು ಮತ್ತು ಆಚಾರಗಳು! ಪುಣ್ಯ ಕಟ್ಟಿಕೋ ಎಂದಾಗ ಅದಕ್ಕೆ ನಮ್ಮಲ್ಲಿ ಕೆಲವು ಬಾಹ್ಯ ಆಚಾರಗಳಿವೆ, ಪಾಪವನ್ನು ಕಳೆದುಕೋ ಅಂದರೂ ಅದಕ್ಕೂ ನಮ್ಮಲ್ಲಿ ಬಾಹ್ಯ ಆಚಾರಗಳಿವೆ! ನಿನ್ನಲ್ಲಿರುವ ಆ ಸೈತಾನನನ್ನು ಓಡಿಸು ಎಂದರೆ, ನಾವು ಅದಕ್ಕೂ ಬಾಹ್ಯ ಆಚಾರವನ್ನು ಮಾಡಿ ಆಗಿದೆ. ಅಂತೂ ಈ ಆಚಾರಗಳ ಮರೆಯಲ್ಲಿ ಮಾನವನು, ಧರ್ಮಕ್ಕೆ ವಿರುದ್ಧವಾದ ರೀತಿಯಲ್ಲಿ, ತನ್ನ ನೀಚ ಬುದ್ಧಿಯನ್ನು ಆರಾಮವಾಗಿ ಕರ್ಚುಮಾಡುತ್ತಾ, ಮೋಸ, ಹಿಂಸೆ, ವ್ಯಭಿಚಾರ ಇತ್ಯಾದಿಗಳನ್ನು ಇನ್ನೂ ಸಮಾಜದಲ್ಲಿ ಬೆಳೆಸುತ್ತಾ ಬರುತ್ತಿದ್ದಾನೆ! ಈಗ ಶಾಲಾ ಕಾಲೇಜುಗಳಲ್ಲಿನ ಮಕ್ಕಳನ್ನು ನೋಡಿದರೇ ಸಾಕಾಗುವುದು, ಅವರ ನೈತಿಕ ಜೀವನದಲ್ಲಿ ಎಷ್ಟು ಬದಲಾವಣೆ ಬಂದಾಗಿದೆ ಎಂದು!! ಮಾತ್ರವಲ್ಲ, ಇನ್ನೂ ಮುಂದೆ ಇದೇ ನಿಟ್ಟಿನಲ್ಲಿ ಹೋದಲ್ಲಿ ತಮ್ಮ ಧರ್ಮ ಏನಾಗಬಹುದು ಎಂದು ನಂಬಿಕೆಯ ಆಚಾರ-ಧರ್ಮದವರು ಉತ್ತರ ಕೊಡಬೇಕಾಗುವುದು. ಈ ಜಗತ್ತಿನ ಜನಸಂಖ್ಯೆಯಲ್ಲಿ ಮಹಾತ್ಮರುಗಳ ಧರ್ಮವಾದ ಆ ಸತ್ಯ, ಆತ್ಮೀಯ ಪ್ರೀತಿ ಮತ್ತು ನೈತಿಕತೆಯನ್ನು ಮಾತ್ರ ಬಯಸುವ ಆ ಧರ್ಮನಿಷ್ಠರು ಎಷ್ಟು ಜನರಿಗಿರಬಹುದು? ಇದ್ದಲ್ಲಿ, ಅವರು ಬಹಳ ಅಲ್ಪ ಸಂಖ್ಯಾತರು ಮಾತ್ರ ಆಗುವರು! ಹೀಗಿರುವಾಗ, ಜಗತ್ತಿನ ಎಲ್ಲೆಡೆಯೂ, ಈ ನಂಬಿಕೆಯ ಆಚಾರ-ಧರ್ಮ ಮತ್ತು ಅವುಗಳ ಮರಿಗಳಾದ ಧರ್ಮ ಪ್ರಚಾರ, ಮತಾಂತರ, ಧರ್ಮದ ಮೇಲಿನ ದುರಭಿಮಾನ, ಧರ್ಮಾಂಧತೆ, ಧರ್ಮಕ್ಕಾಗಿ ರಕ್ತಪಾತ, ಇವೆಲ್ಲಾ ಒಬ್ಬಾತನು ಧರ್ಮಕ್ಕಾಗಿ ಮಾಡುವ ಮಹತ್ಕಾರ್ಯ ಎಂದು ಬಹಳ ಹಿಂದಿನಿಂದಲೇ ಜನರಿಗೆ ಹೇಳಿ ನಂಬಿಸಿದವರು ಯಾರೆಂದು ಸ್ಪಷ್ಟವಾಗುವುದು. ಅಂದರೆ, ಮಹಾತ್ಮರನ್ನು ಒಂದು ಮೂಲೆಗೆ ದೂಡಿ, ತಮ್ಮ ತಮ್ಮ ಧರ್ಮಗಳನ್ನು ಆಚಾರಗಳ ಸಹಾಯದಿಂದ ಬಹಳ ಸುಲಭಗೊಳಿಸಿದ್ದಾರೆ ಆ ಹಿಂದಿನ ಸ್ವಾರ್ಥಿ ಧರ್ಮಪಾಲಕ

ಮಾನವರು!! 'ಕತ್ತಲೆಯ ಪಾತ್ರೆಯಲ್ಲಿ ಬೆಳಕಿನ ಅಮೃತವನ್ನು ಹಿಡಿದಿಡುವೆನು' ಎಂಬ ವಾದವೇ ಇವರದು!! ಮೋಸ, ಮೋಸ, ಜಗತ್ತೇ ಆ ಪ್ರಾಚೀನ ವಾಮಾಚಾರದ ಸಂಚಿನ ಮೋಸಕ್ಕೆ ಬಲಿಯಾಗಿ ನರಳಾಡುತ್ತಿದೆ.

ಇದು ಮುಂದುವರಿದಲ್ಲಿ ಮಾನವನ ಶಾಶ್ವತ ಅಳಿವು ಖಚಿತವಾಗುವುದು. ನಿಮ್ಮ ಮಕ್ಕಳನ್ನು ಉಳಿಸಬೇಕಾ ಅಥವಾ ಪುನಃ ಅನಾಗರೀಕ ಕಾಡು ಮಾನವರನ್ನಾಗಿ, ಆ ಹಿಂಸೆ, ಕಾಮದ ಮೃಗಗಳನ್ನಾಗಿ ಮಾಡಬೇಕಾ ಎಂಬುವುದು ನಿಮ್ಮ ತೀರ್ಮಾನಕ್ಕೆ ಬಿಟ್ಟಿದೆ. ನಿಮ್ಮ ಉತ್ತರ ಧನಾತ್ಮಕವಾದರೆ ನೀವು ಇಂದಿನಿಂದಲೇ ನಿಮ್ಮ ನಿಮ್ಮ ಧರ್ಮವನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಲೇಬೇಕಾಗುವುದು.

# ಧರ್ಮಗಳು ತಮ್ಮ ದೇವರುಗಳನ್ನೇ ವಿರೋಧಿಸುವವು

ಸೃಷ್ಟಿಕರ್ತ ದೇವರು ಇರುವ ಎಲ್ಲಾ ಧರ್ಮಗಳೂ ಮಾನವನಿಗೆ ಆ ಸೃಷ್ಟಿಕರ್ತನು 'ಮುಕ್ತ ಆಯ್ಕೆ' ಅಥವಾ 'ಸ್ವ-ಇಚ್ಛೆ'ಯನ್ನು ಕೊಟ್ಟಿದ್ದಾನೆ ಎಂದಿದೆ. ಅಂದರೆ ಅದರ ಅರ್ಥ, 'ಒಬ್ಬ ಮಾನವನಿಗೆ, ಈ ಭೂಮಿಯಲ್ಲಿ ತನ್ನ ಇಚ್ಛೆಯಂತೆ ಉತ್ತಮನಾಗಿಯೋ ಅಥವಾ ಕೆಟ್ಟವನಾಗಿಯೋ ಜೀವಿಸಿ, ಮರಣಾನಂತರ ಅದರ ಫಲಕ್ಕನುಸರಿಸಿ ಸ್ವರ್ಗವನ್ನೋ ಅಥವಾ ನರಕವನ್ನೋ ಸೇರಲಿರುವ ಪೂರ್ಣ ಸ್ವಾತಂತ್ರ್ಯ' ಎಂದಾಗಿದೆ. ಇಲ್ಲಿಯೇ ನಾವು ಸರಿಯಾಗಿ ಗಮನಿಸಬೇಕಾಗಿರುವುದು, ಆ ದೇವರೇ ಮಾನವನ ಸ್ವಂತ ಇಚ್ಛೆಯನ್ನು ಪ್ರೋಹ್ಸಾಹಿಸುವಾಗ, ಈ ದೇವರು ಹೇಳಿದಂತೆ ನುಡಿವ ಧರ್ಮಗಳು ಮಾನವನನ್ನು ಬಲಾತ್ಕಾರವಾಗಿ ಮತಾಂತರ ಮಾಡುವುದು, ಶೋಷಣೆ ಮಾಡುವುದು ಇತ್ಯಾದಿ ಕರ್ಮಗಳು ಪಾಪ ಕರ್ಮಗಳಾಗುವವು ಎಂದು ಸ್ಪಷ್ಟವಾಗುವುದಿಲ್ಲವೇ?

ನಿಜವಾಗಿಯೂ ಧರ್ಮವೆಂದರೆ ಅದು ಜನರಲ್ಲಿ ನೈತಿಕತೆಯ ಬೋಧವನ್ನು ಉಂಟುಮಾಡಬೇಕಾಗಿದೆ, ಬರೇ ವಿವರಣೆ, ಬೋಧನೆಯು ಧರ್ಮ ಆಗುವುದಿಲ್ಲ. ಜನ ಎಷ್ಟು ಬಡಬಡ ಎಂದು ಉಪದೇಶಿಸಿದರೂ ಉಪದೇಶಿಸುವಾತನು ಸತ್ಯಸಂಧನಲ್ಲವಾದರೆ ಅಂಥವರಿಂದ ಜನರಲ್ಲಿ ನೈತಿಕತೆಯ ಬೋಧವನ್ನು ಉಂಟುಮಾಡಲು ಸಾಧ್ಯವಾಗಲಾರದು. ಯಾವ ಧರ್ಮದಲ್ಲಾದರೂ ಸರಿ, ಆ ನೈತಿಕ ಜೀವನ ನಡೆಸುವ ಅದ್ಭುತ ಮಹಾತ್ಮರೇ ಈ ಕಾರ್ಯಗಳಿಗೆ ನಿಜವಾಗಿಯೂ ಬೇಕಾಗಿರುವುದು, ಅದಲ್ಲದೆ, ಬರೇ "ತಾನು ತನ್ನದು" ಎಂದು ಸ್ವಾರ್ಥದ ಜೀವನ ನಡೆಸುವ ಯಾರಿಂದಲೂ ಅದು ಎಂದಿಗೂ ಸಾಧ್ಯವಿಲ್ಲ, ಅವರು ಸ್ವಾರ್ಥದ ಧರ್ಮಾಂಧತೆಯನ್ನು ಮಾತ್ರ ಬೆಳೆಸುವರು ಅಷ್ಟೆ. ಜಾತೀಯತೆ, ಅಸ್ಪೃಶ್ಯತೆ, ಇತ್ಯಾದಿಗಳು ಈ ಜಗತ್ತನ್ನು ಆವರಿಸಿಕೊಳ್ಳಲೂ, ಮಹಾತ್ಮರ ಧರ್ಮದ ವಿವರಣೆಯನ್ನು ಕಸದ ಬುಟ್ಟಿಗೆ ತಳ್ಳಿ, ನಂಬಿಕೆ, ಆಚಾರ ರೀತಿಯನ್ನೇ ಮತ್ತೆ ಮತ್ತೆ ಧರ್ಮದ ನಿಜವಾದ ವಿವರಣೆಯಾಗಿ ಬದಲಾಯಿಸಿ ಜಗತ್ತಿಗೆ ತೋರಿಸುವಲ್ಲಿ ಮಾತ್ರ ಅವರ ಕೆಲಸ ಸೀಮಿತ ಗೊಂಡಿರುವುದು. ಇದನ್ನು ಹಿಂದಿನ ಹಲವು ಮಹಾತ್ಮರು ಹೇಳಿರುವರಲ್ಲದೆ, ನಮಗೆ ಇಂದೂ ಕಾಣುವ ಸತ್ಯವಾಗಿ ನಮ್ಮ ಕಣ್ಣ ಮುಂದೆಯೇ ಇರುವುದು. ಮಹಾತ್ಮನಾಗುವುದು ಯಾರಿಂದಲೂ ಸಾಧ್ಯವಿದೆ, ಅದಕ್ಕೆ ಸನ್ಯಾಸದ ಅಗತ್ಯವಿಲ್ಲ, ಅದಕ್ಕೆ ಬೇಕಾಗಿರುವುದು ಬರೇ ಆ ಸತ್ಯಸಂಧವಾದ ವಿಶಾಲ ಮನಸ್ಕತೆ ಮಾತ್ರವಾಗಿದೆ. ಈ ಹಿನ್ನೆಲೆಯಲ್ಲಿ, ಇನ್ನಾದರೂ ಧರ್ಮವನ್ನು ಅದರ ಸಾರದ ಭಾಗದಲ್ಲಿ ಮುಖ್ಯವಾಗಿ ವಿವರಿಸಿ ತಮ್ಮನ್ನು, ತಮ್ಮವರನ್ನು ಮತ್ತು ಈ ಜಗತ್ತನ್ನು ರಕ್ಷಿಸುವ ಆ ಮಹತ್ ಕಾರ್ಯವನ್ನು ಎಲ್ಲಾ ಧರ್ಮ, ಪಂಥಗಳ ಜನರು ಮಾಡಲು ಮುಂದಾಗುವರು ಎಂಬ ಭರವಸೆಯನ್ನು ನಾವು ಇರಿಸಿಕೊಳ್ಳೋಣ.

ಸ್ತ್ರೀಯರು ಪ್ರಕೃತಿಯ ಪಾಲುದಾರರು. ಪುರುಷನಿಗೆ ಇರುವಷ್ಟೇ ಸ್ವಾತಂತ್ರ್ಯ ಸ್ತ್ರೀಗೂ ಇದೆ. ಅದರ ಮೇಲೆ ದೇವರು ಕೊಟ್ಟ ತನ್ನಿಷ್ಟದಂತೆ ಜೀವಿಸುವ ಸ್ವಾತಂತ್ರ್ಯವಿದೆ!! ಹೀಗಿರುವಾಗ ಸ್ತ್ರೀಯರನ್ನು ಮಾತ್ರ ಸಹಸ್ರವರುಷಗಳಿಂದಲೂ ನಿಯಂತ್ರಿಸಲು ಯಾವ ಧರ್ಮಕ್ಕೂ ಹಕ್ಕು ಇರಲಿಲ್ಲ ಎಂದು ನೆನಪಿಸಬೇಕು. ಹಾಗೆ ನಿಯಂತ್ರಿಸಿದಲ್ಲಿ, ಅದು ದೇವರು ಮಾನವನಿಗೆ ಕೊಟ್ಟ ಮುಕ್ತ ಆಯ್ಕೆಯೆಂಬ ಆ ದೇವರ ಮಾತನ್ನೇ ಧರ್ಮಗಳು ತಳ್ಳಿಹಾಕಿದಂತಾಗುವುದು! ಇಲ್ಲಿ, ದೇವರ ಮಾತೋ ದೊಡ್ಡದು ಅಥವಾ

ಮಾನವನ ಧರ್ಮದ ಸ್ವಂತ ಸ್ವಾರ್ಥ ವ್ಯಾಖ್ಯಾನವೋ ದೊಡ್ಡದು ಎಂದು ನಾವು ಆಲೋಚಿಸಬೇಕಾಗುವುದು.

ಬಂಧನವಲ್ಲ, ಬದಲು ಸ್ವಾತಂತ್ರ್ಯವು ಧರ್ಮದ ಜೀವಾಳವಾಗಿರುವುದು. ತಪ್ಪು ಮಾಡಿದವರಿಗೆ ಶಿಕ್ಷಿಸಬೇಕು ಎಂಬುವುದು ನಿಯಮವಾಗಿದೆ, ಆದರೆ ಅದರ ಅರ್ಥ ಎಲ್ಲರ ಸ್ವಾತಂತ್ರ್ಯವನ್ನು ಇಲ್ಲವಾಗಿಸಬೇಕೆಂದು ಅಲ್ಲ. ಸತ್ಯ, ನೀತಿಯನ್ನು ಜಗತ್ತಿಗೆ ಸಾರುವಲ್ಲಿ ಆ ಸ್ತ್ರೀಯರೇ ಮುಂದೆ ಬರುವ ಕಾಲ ಮಿಂಚಿದೆ. ಈಗೀಗ ಸ್ತ್ರೀಯರಲ್ಲಿ ತಮ್ಮ ಸ್ವಾತಂತ್ರ್ಯದ ದುರುಪಯೋಗವು ಹೆಚ್ಚುತ್ತಿದೆ ಎಂಬುವುದರಲ್ಲಿ ಸಂಶಯವಿಲ್ಲ. ಆದರೆ ಅದಕ್ಕೆ ಕಾರಣ ಆ ಸ್ತ್ರೀಯರ ಮನದಲ್ಲಿ ಉಂಟಾಗಿರುವ ಲೈಂಗಿಕತೆಗಿರುವ ಹೆಚ್ಚಿನ ಮಹತ್ವವಾಗಿದೆ. ಇದು ನಿಜವಾಗಿಯೂ ಪುರುಷರಿಗಾದರೂ, ಸ್ತ್ರೀಯರಿಗಾದರೂ ಅಪಾಯಕಾರಿಯಾಗುವುದು ಖಂಡಿತ, ಯಾಕೆಂದರೆ ಅಂಥವರು ತಮ್ಮ ಜೀವನದಲ್ಲಿ ಮುಂದೆ ಮಾನಸಿಕವಾಗಿ ನೋವನ್ನು ಬಹಳವಾಗಿ ಅನುಭವಿಸಬೇಕಾಗಿ ಬರುವುದು ಖಂಡಿತ. ಅವರ ದಾಂಪತ್ಯಜೀವನವನ್ನು ಕಸಕ್ಕಿಂತಲೂ ಕಡೆಯಾಗಿ ಮಾತ್ರ ಅವರದೇ ಸುಪ್ತಮನಸ್ಸು ಒತ್ತಿ ಹೇಳುತ್ತಿರುವುದು! ಹಾಗಾಗಿ ಅವರಲ್ಲಿ ದಾಂಪತ್ಯ ವಿರಸ, ವಿವಾಹ ವಿಚ್ಛೇಧನ ಇತ್ಯಾದಿಗಳನ್ನು ಬಹಳವಾಗಿ ಕಾಣಲು ಸಾಧ್ಯವಾಗುವುದು. ಹಿಂದಿನ ಕಾಲದ ಸಮಾಜದಲ್ಲಿ ಪುರುಷರು ಮಾತ್ರ, ವೇಶ್ಯೆಗಳು ಎಂಬ ಆ ಸಮಾಜದಿಂದ ದೂರವಿರಿಸಲ್ಪಟ್ಟ ಸ್ತ್ರೀಯರ ಸಹವಾಸ ಮಾಡುತ್ತಿದ್ದರು, ಮತ್ತು ಮನೆಗೆ ಬಂದು ಹೆಂಡತಿಗೆ ಒದೆಯುತ್ತಿದ್ದರು, ಆದರೆ ಇಂದು ಹೆಂಗಸರು ಮತ್ತು ಗಂಡಸರಲ್ಲಿ ಹೆಚ್ಚಿನವರೂ ಮದುವೆ ಮೊದಲೇ, ಹಣಕಲ್ಲದ ಆದರೆ ಸುಖಕ್ಕಾಗಿ, ವೇಶ್ಯಾವಾಟಿಕೆ ಮಾಡುವವರೇ ಆಗಿರುವರು. ಆದುದರಿಂದ ಇಂದು ದಾಂಪತ್ಯಕ್ಕೆ ಎರಡು ಕಡೆಯಿಂದಲೂ ಒದೆತ ಸಿಗುವಂತಾಗಿದೆ. ಈ ಕಾರಣದಿಂದ ಎರಡು ಕಡೆಯಿಂದಲೂ ವಿವಾಹ ವಿಚ್ಛೇಧನವನ್ನು ಬಯಸುವ ಸಾಧ್ಯತೆಗಳನ್ನು ಅವು ಹೆಚ್ಚಿಸುವವು.

ಇದರಿಂದ ಸಮಾಜವು ಪಾರಾಗಬೇಕಾದರೆ ಇನ್ನುಳಿದ ಆ ಒಂದು ದಾರಿಯು, ಅದು ಸ್ತ್ರೀಯರಿಗೂ, ಪುರುಷರಿಗೂ ಆ ಮಹತ್ತಾದ ಮಹಾತ್ಮರ ಜೀವನವನ್ನು ಅರಿಯುವಂತೆ ಮಾಡುವುದಾಗಿದೆ. ನಿಜವಾಗಿಯೂ, ಈ ಮಹಾತ್ಮರು ತಮ್ಮ ಜೀವನದಲ್ಲಿ ಈ ಇಹದ ಸುಖವನ್ನು ಇತರರಿಗಿಂತ ಅತ್ಯಧಿಕ ಪ್ರಮಾಣದಲ್ಲಿ ಅನುಭವಿಸುವರು ಎಂಬ ಸತ್ಯವು ಜನರಿಗೆ ತಿಳಿದಿಲ್ಲ ಅಷ್ಟೆ. ಅದನ್ನು ಸ್ಪಷ್ಟವಾಗಿ ಜನರಿಗೆ ಅರ್ಥ ಮಾಡಿಕೊಡುವಲ್ಲಿ ಎಲ್ಲರೂ ಆ ಜೀವನವನ್ನೇ ಬಯಸುವರು ಎಂಬುವುದರಲ್ಲಿ ಸಂಶಯವಿಲ್ಲ. ಅದರೊಂದಿಗೆ, ಮಹಾತ್ಮರ ಆ ಆದರ್ಶ ಜೀವನದ ಆನಂದವು ಅದ್ಭುತ ರೀತಿಯಲ್ಲಿ, ಮನ, ಮನೆ, ಹಾಗೂ ಲೋಕ ಶಾಂತಿಯನ್ನೂ ಉಂಟು ಮಾಡುವುದು ಎಂಬುವುದು, ರಾಜ್ಯ, ದೇಶ, ಹಾಗೂ ಲೋಕಕ್ಕೂ ಅನಿವಾರ್ಯವಾಗಿ ಬೇಕಾಗಿರುವ ಆ ದೊಡ್ಡ ಪರಿಹಾರವೂ ಆಗಿರುವುದು.

ಆ ಪ್ರಾಚೀನ ವಾಮಾಚಾರವು ಇರುವಾಗಲೇ ಅದರ ಪ್ರಭಾವದ ಕಗ್ಗತ್ತಲೆಯಿಂದ ಮೇಲೆ ಬರಲು ಈ ಮಹಾತ್ಮರ ಜೀವನ ಜ್ಯೋತಿಗಳಿಗೆ ಮಾತ್ರ ಸಾಧ್ಯ ಎಂಬುವುದರಲ್ಲಿ ಸಂಶಯವೇ ಇಲ್ಲ. ಆ ಜ್ಯೋತಿಯ ಬೆಳಕು ಹೆಚ್ಚಾಗುವಾಗಲೇ ಆ ಶಾಂತಿಯ ಪವಿತ್ರ ಸತ್ಯಯುಗದ ಆರಂಭ. ಅಲ್ಲಿಯ ತನಕ ಜನರು ಇದೇ

ಭಯಾನಕ ಕತ್ತಲಲ್ಲಿ ನರಳಬೇಕಾಗುವುದು. ಎಲ್ಲಾ ಧರ್ಮಗಳ ಕನಸಾಗಿರುವ ಆ ಸತ್ಯಯುಗವನ್ನು ನನಸು ಮಾಡಲು, ಜಗತ್ತಿನ ಎಲ್ಲಾ ಧರ್ಮಗಳಲ್ಲೂ ಮಹಾತ್ಮರುಗಳು ಕೋಟಿಗಟ್ಟಲೆ ಸಂಖ್ಯೆಯಲ್ಲಿ ಸೃಷ್ಟಿಯಾಗಲಿ ಎಂದು ಆಶಿಸೋಣ.

# ಪೂರ್ಣ ಸತ್ಯವನ್ನು ಕಾಣಬಹುದಾದ ಸ್ಥಳ

ಪೂರ್ಣ ಸತ್ಯವನ್ನು ಉತ್ತಮರಲ್ಲಿ ಹಾಗೂ ಮಹಾತ್ಮರಲ್ಲಿ ಕಾಣಬಹುದು. ಆದರೆ ಇತರ ಕಡೆ ಜನರು ಸತ್ಯವೆಂದೇ ಹೇಳತ್ತಾ ಜನರನ್ನು ಮೋಸ ಮಾಡುವರು, ವಂಚಿಸುವರು. ಇಲ್ಲಿ ಒಂದು ಅಚ್ಚರಿಯನ್ನು ನೋಡಬಹುದು. ಜನರು ಇತರರಲ್ಲಿ ಸತ್ಯಸಂಧತೆಯನ್ನೇ ಕಾಣಬಯಸುವರು ಎಂಬುವುದೇ ಅದಾಗಿದೆ! ಒಬ್ಬ ಕಳ್ಳನೂ, ತನ್ನ ಗೆಳೆಯ-ಕಳ್ಳನ ಕೈಯಲ್ಲಿರುವ, ತಾನು ಕದ್ದ ಹಣವನ್ನು, ಮೋಸ ಮಾಡದೆ, ಎಲ್ಲವನ್ನೂ ಆತನು ತನಗೆ ಹಿಂತಿರುಗಿಸುವಲ್ಲಿ, ತನ್ನ ಗೆಳೆಯ-ಕಳ್ಳನ ಸತ್ಯಸಂಧತೆಯನ್ನೇ ನಿರೀಕ್ಷಿಸುತ್ತಾನೆ!! ಜಗತ್ತು ಸತ್ಯವನ್ನೇ ಬಯಸುವುದು, ಮತ್ತು ಅಸತ್ಯವು ಅದಕ್ಕೆ ಬೇಕಾಗಿಲ್ಲ, ಆದರೆ ತೊಂದರೆಯು ವ್ಯಕ್ತಿಯಲ್ಲಿದೆ, ಆತನ ಆಸೆ, ಆಸಕ್ತಿಗಳು, ಅಸತ್ಯವನ್ನು ಹೇಳುವಂತೆ ಬಲವಂತ ಮಾಡುವವು. ಇದೇ ರೀತಿ, ಧರ್ಮ, ಪಂಥಗಳು, ತಮ್ಮದು ಶ್ರೇಷ್ಠ ಧರ್ಮ ಎಂದು ತೋರಿಸುವಲ್ಲಿ ಅಸತ್ಯವನ್ನು ಸೃಷ್ಟಿಸಿ ಹಾಕುವವು ಮತ್ತು ಮತಾಂತರ ಎಂಬ ಅದರ ಲಾಭವನ್ನು ಪಡೆಯುವವು. ಆದರೆ, ನಿಜವಾಗಿಯೂ ಧರ್ಮವಿರುವುದು ಒಬ್ಬಾತನ ಉತ್ತಮ-ಜೀವನ ಅನುಷ್ಠಾನದಲ್ಲಿ ಮಾತ್ರ ಆಗುವುದು. ಆದರೆ ಮೂಢ ಜನರು, ಇತರ ಧರ್ಮ, ಪಂಥಗಳ ಪುರಾಣ ಕಥೆಗಳ ಲೋಪದಲ್ಲೋ, ತತ್ವಗಳ ಸೂಕ್ಷ್ಮ ಲೋಪಗಳಲ್ಲೋ, ತಪ್ಪನ್ನು ಕಂಡು ಹುಡುಕಿ, ನಿಂದಿಸಿ, ಇತರ ಧರ್ಮಗಳಿಗಿಂತ ತಾವು ಶ್ರೇಷ್ಠರು ಎಂದು ಹೇಳುತ್ತಾ ಸಹಸ್ರಾರು ವರುಷವನ್ನೇ ಆ ವಾದಗಳಿಗಾಗಿ ಮತ್ತು ದಿಗ್ವಿಜಯ, ಮತಾಂತರಗಳಿಗಾಗಿ ಮೀಸಲಾಗಿಟ್ಟಿರುವುದು ನಮಗೆಲ್ಲಾ ತಿಳಿದ ವಿಚಾರವಾಗಿದೆ!!

ತಾವು ಇತರರಿಗಿಂತ ಶ್ರೇಷ್ಠ ಎಂಬಲ್ಲಿ ಧರ್ಮದ ವಾದವಿರುವುದಿಲ್ಲ. ಆದರೆ, ಹೇಗೆ ಶ್ರೇಷ್ಠ ವ್ಯಕ್ತಿತ್ವವನ್ನು ಪಡೆಯಬಹುದು ಎಂಬ ವಾದದಲ್ಲಿ ಮಾತ್ರ ಧರ್ಮವು ಅಡಕವಾಗಿರುವುದು.

# ಧರ್ಮ ಪಂಡಿತರಿಗೂ ವಿಜ್ಞಾನಿಗಳಿಗೂ ಇರುವ ವ್ಯತ್ಯಾಸ

ವಿಜ್ಞಾನಿಗಳಲ್ಲಿ ನಾಲ್ವರಿಗೆ ಒಂದೇ ವಿಷಯದ ಕುರಿತು ಬೇರೆ ಬೇರೆ ವಿಚಾರವು ಮನಸ್ಸಿಗೆ ಹೊಳೆದರೆ ಅವರೆಲ್ಲಾ ಒಟ್ಟಾಗಿ ಒಂದು ಕಡೆ ಕುಳಿತು ಆ ವಿಚಾರಗಳನ್ನೆಲ್ಲಾ ಮುಂದಿಟ್ಟು ಅವುಗಳು ಎಲ್ಲದರಿಂದ ಉತ್ತರವನ್ನು[ಸಾರ್ವತ್ರಿಕವಾದುದನ್ನು] ಹೇಗೆ ಪಡೆಯಬಹುದು ಎಂದು ಆಲೋಚಿಸುವರು ಮತ್ತು ಪಡೆಯುವರು. ಅದು ಕೊನೆಗೂ ಉಪಕರಣ, ಯಂತ್ರ ಇತ್ಯಾದಿಗಳ ರೀತಿಯಲ್ಲಿ ಜನರ ನಿತ್ಯ ಜೀವನದ ಅವಿಭಾಜ್ಯ ಭಾಗವಾಗುವುದು. ಆದರೆ ನಾಲ್ಕು ಧರ್ಮದ ಪಂಡಿತರುಗಳು ಸೇರಿದಾಗ, ಅವರು, ತಮ್ಮ ತಮ್ಮ ಧರ್ಮದ ಬೇರೆ ಬೇರೆ ವಿಚಾರಗಳನ್ನು ಮುಂದಿಟ್ಟು, ಸೃಷ್ಟಿಕರ್ತ ದೇವರು ಜಗತ್ತಿನ ಎಲ್ಲರಿಗೂ ಒಬ್ಬನೇ ಎಂಬ ಉತ್ತರವು ಎದುರೇ ಇದ್ದರೂ, ಆ ಕಡೆ ನೋಡದೆ, ತಮ್ಮ ತಮ್ಮ ವಿಚಾರಗಳೇ ಶ್ರೇಷ್ಠ ಎಂದು ವಾದಿಸುತ್ತಾ ಹೊಡೆದಾಡಿ ಹೊರಗೆ ಬರುವರು ಮತ್ತು ಆ ದ್ವೇಷವನ್ನು ಸಮಾಜದ ಜನರ ನಿತ್ಯ ಜೀವನದಲ್ಲಿ ಬಿತ್ತಿ ಬಿಡುವರು!!

ಜೀವನದಲ್ಲಿ, ದೇವರು ಹೇಳುವ ಆ ಸತ್ಯದ ದಾರಿಯ ಬಗ್ಗೆ ಸಾವಿರಾರು ವರುಷಗಳಿಂದ ಮಾತನಾಡುತ್ತಾ ಬಂದವರು ಈ ಧರ್ಮ ಪಂಡಿತರುಗಳು, ಆದರೆ ಸತ್ಯವನ್ನು ಅರಿಯುವ ನಿಜವಾದ ವಿಧಾನವು ಮಾತ್ರ ವಿಜ್ಞಾನಿಗಳಲ್ಲಿ ಆಗಿಹೋಗಿದೆ ಅಷ್ಟೆ! ಸತ್ಯವನ್ನು ನಂಬಿಕೆಗಳ ಮೂಲಕ ಎಂದೂ ತೋರಿಸಿಕೊಡಲು ಯಾರಿಂದಲೂ ಸಾಧ್ಯವಿಲ್ಲ, ಈ ಅರ್ಥಹೀನ ರೀತಿಯೇ ಎಲ್ಲಾ ತೊಂದರೆಗೂ ಕಾರಣವಾಗಿರುವುದು ಎಂಬುವುದು ಒಂದು ಪರಮ ಸತ್ಯವಾಗಿದೆ. ಇಷ್ಟು ಸಾವಿರ ವರುಷಗಳ ಕೊನೆಯಲ್ಲಿಯೂ ಜಗತ್ತಿನ ಮುಂದೆ, ವಿಜ್ಞಾನಿಗಳು ಮಾಡುವಂತೆ, ಧರ್ಮ ಅಥವಾ ದೇವರ ಒಂದು ಸಾರ್ವತ್ರಿಕ ನಿರ್ವಚನೆಯನ್ನಾದರೂ ಸೃಷ್ಟಿಸಲು ಸಾಧ್ಯವಾಯಿತೇ? ಅದೂ ಇಲ್ಲ!! ಈ ನಂಬಿಕೆಗಳಿಗೆ ಒಂದು ನಿರ್ಧಿಷ್ಠ ಸತ್ಯದ ಮೂಲವೇ ಇಲ್ಲದಿರುವಾಗ, ಇನ್ನು ಏನು ಸತ್ಯದ ಬೋಧನೆ? ಎಲ್ಲಿಂದ ಸತ್ಯದ ಬೆಳಕಾಗಿರುವ ಆ ಧರ್ಮ-ಬೋಧನೆ?

# ನಿಜವಾದ ದೇವ ನಿಂದನೆ ಮತ್ತು ಧರ್ಮ ನಿಂದನೆ

ಪ್ರಪಂಚವೇ ದೇವರ ಮನೆಯಾಗಿರುವಾಗ ಮತ್ತು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಗಳೇ ಧರ್ಮವಾಗಿರುವಾಗ, ಇನ್ನು ನಾವು ಯಾವೆಲ್ಲಾ ತರದಲ್ಲಿ ಮನುಷ್ಯನನ್ನು ಮನುಷ್ಯನಿಂದ ದೂರ ಮಾಡಲು ಪ್ರಯತ್ನಿಸುತ್ತೇವೆ ಅವೆಲ್ಲ ದೇವ ನಿಂದನೆ ಮತ್ತು ಧರ್ಮ ನಿಂದನೆಯಾಗುವುದು. ಅವುಗಳಲ್ಲಿ, ಧರ್ಮಗಳು, ಪಂಥಗಳು, ಪರಂಪರೆಗಳು, ಜಾತಿಗಳು, ತಮ್ಮ ತಮ್ಮ ಸೃಷ್ಟಿಕರ್ತ ದೇವರುಗಳೇ ಸರಿಯೆಂಬ ವಾದ, ಇತ್ಯಾದಿಗಳೆಲ್ಲವೂ, ದೇವ ಮತ್ತು ಧರ್ಮನಿಂದನೆಗಳಾಗಿ ಸೇರಿಕೊಂಡಿರುವವು!! ಸಾವಿರ ವರುಷ ಇದರ ಕುರಿತು ವಿವೇಕದ ಸಹಾಯ ಪಡೆದು ಧ್ಯಾನ ಮಾಡಿದರೂ ಕೊನೆಯಲ್ಲಿ ಇದೇ ಉತ್ತರ ಬರುವುದು. ಆದರೆ ವಿವೇಕವನ್ನು ಬಿಟ್ಟು, ತೋಳ್ಬಲವನ್ನು ಉಪಯೋಗಿಸಿ ಸತ್ಯವನ್ನು ಪಡೆಯಬಹುದು ಎಂದು ತಿಳಿಯುವಲ್ಲಿ ಮಾತ್ರ ಇದಕ್ಕೆ ಬೇರೆ ಉತ್ತರ ಬರಬಹುದಷ್ಟೆ!!

# ಮನುಷ್ಯರ ತಪ್ಪು - ಧರ್ಮದ ತಪ್ಪು

ಧರ್ಮ, ಪಂಥಗಳಲ್ಲಿ ಒಳ್ಳೆಯವರು ಯಾರೂ ಜೀವಿಸಿಲ್ಲ ಎಂದು ಯಾರೂ ಹೇಳುವುದಿಲ್ಲ. ಎಷ್ಟೋ ಮಹಾತ್ಮರು ಧರ್ಮ, ಪಂಥಗಳೊಳಗಿದ್ದು ಜೀವಿಸಿರುವರು. ಅವರಲ್ಲಿ ನಿಸ್ವಾರ್ಥ ಸೇವೆಯನ್ನು ಮಾಡಿರುವ ಎಷ್ಟೋ ಮಹಾತ್ಮರನ್ನೂ ನಮಗೆ ತಿಳಿದಿದೆ. ಆದರೆ ನೆನಪಿರಲಿ, ಒಂದು ಧರ್ಮವೆಂದರೆ ಅದು ಬೆರಳೆಣಿಕೆಯ ಮಹಾತ್ಮರು ಮಾತ್ರವಲ್ಲ, ಅದು, ಆ ಧರ್ಮ, ಪಂಥಗಳಲ್ಲಿ ಜೀವಿಸುವ ಎಲ್ಲಾ ಜನರನ್ನು ಪ್ರತಿನಿಧೀಕರಿಸುವುದು.

ಮೊದಲು ಧರ್ಮ ಎಂದರೇನು ಎಂಬುವುದನ್ನು ತಿಳಿಯಬೇಕಾಗಿದೆ. ಧರ್ಮವು ಒಂದು ಗ್ರಂಥವಲ್ಲ. ಅದು ಒಂದು ಶಿಲ್ಪ ಕಲಾಕೃತಿಯೋ ಅಥವಾ ಕವಿತೆಯೋ ಆಗಿದ್ದಲ್ಲಿ, ಅದನ್ನು ನೋಡಿ ಅಥವಾ ಕೇಳಿ ಚೆನ್ನಾಗಿದ್ದರೆ ಸಂತೋಷಪಟ್ಟುಕೊಳ್ಳಬಹುದಾಗಿತ್ತು, ಆದರೆ ಧರ್ಮವು ನೋಡಿ ಅಥವಾ ಕೇಳಿ ಸಂತೋಷಪಟ್ಟುಕೊಳ್ಳುವ ರೀತಿಯದ್ದಲ್ಲ, ಅದು ಮಾನವನ ಅನುಷ್ಠಾನವನ್ನು ನೇರ ಅವಲಂಬಿಸಿದುದಾಗಿದೆ.

ಮಾನವರು ಇಲ್ಲವಾಗಿದ್ದರೆ ಧರ್ಮಗಳೂ ಈ ಭೂಮಿಯಲ್ಲಿ ಇರುತ್ತಿರಲಿಲ್ಲ. ದೇವರು ಇಲ್ಲದ ಧರ್ಮಗಳೂ ಇವೆಯೆಂಬಲ್ಲಿ ಮಾನವರ ನಡತೆಯನ್ನು ಸರಿಪಡಿಸುವುದೇ ಧರ್ಮಗಳ ಮುಖ್ಯ ಉದ್ದೇಶವಾಗಿದೆ ಎಂಬುವುದು ಸ್ಪಷ್ಟವಾಗುವುದು. ಹೀಗಿರುವಾಗ ಮನುಷ್ಯರು ಒಂದು ಧರ್ಮ ಅಥವಾ ಪಂಥದೊಳಗೆ ಯಾವ ರೀತಿಯಲ್ಲಿ ಜೀವಿಸುವರೋ ಅದು ಆ ಧರ್ಮ, ಪಂಥಗಳ ಶ್ರೇಷ್ಠತೆಯನ್ನು ನಿರ್ಧರಿಸುವುದು, ಪುಸ್ತಕ ಅಥವಾ ಗ್ರಂಥಗಳು ನಿರ್ಧರಿಸಲಾರವು. ಇದಕ್ಕೆ ಒಂದು ಉದಾಹರಣೆಯು, ವಿಜ್ಞಾನಿಗಳು "ನಾವು ಪುಸ್ತಕದಲ್ಲಿ ಸರಿಯಾಗಿ ಬರೆದಿದ್ದೇವೆ ಆದರೆ ಅದು ಪ್ರಾಯೋಗಿಕ ತಲದಲ್ಲಿ ಕೆಲಸ ಮಾಡಲಾರದು" ಎಂದು ಹೇಳಿದರೆ ಯಾರಾದರೂ ಒಪ್ಪುವರೇ? ಇಲ್ಲ. ಯಾರು ಒಪ್ಪುವುದಿಲ್ಲ. ಯಾಕೆಂದರೆ ಪ್ರಾಯೋಗಿಕ ತಲದಲ್ಲಿ ಎಲ್ಲೆಡೆಯೂ ಒಂದೇ ರೀತಿಯಲ್ಲಿ ಕೆಲಸಮಾಡಲು ಸಾಧ್ಯವಾದರೆ ಮಾತ್ರ ಅದು ವಿಜ್ಞಾನವಾಗುವುದು ಎಂದು ನಾವು ಹೇಳುವೆವು. ಪುಸ್ತಕದಲ್ಲಿ ಏನು ಬರೆದಿದ್ದರೂ ಅದು ಪ್ರಾಯೋಗಿಕ ತಲದಲ್ಲಿ ಕೆಲಸಮಾಡಲು ಸಮರ್ಥವಾಗದಿದ್ದಲ್ಲಿ ಅದನ್ನು ವಿಜ್ಞಾನವೆಂದು ಹೇಳಲು ಯಾರೂ ತಯಾರಾಗುವುದಿಲ್ಲ ಎಂದು ನಮಗೆ ತಿಳಿದಿದೆ. ಅದೇ ರೀತಿ ಧರ್ಮಗಳೂ ಆಗಿವೆ. ಆದುದರಿಂದ ತಮ್ಮ ಧರ್ಮ ಗ್ರಂಥಗಳನ್ನು ಮಾತ್ರ ಹೊಗಳಿ ಧರ್ಮದ ಶ್ರೇಷ್ಠತೆಯನ್ನು ಮೆರೆಸಲು ಯಾರಿಂದಲೂ ಸಾಧ್ಯವಿಲ್ಲ, ಬದಲು ತಮ್ಮ ತಮ್ಮ ಧರ್ಮಗಳಲ್ಲಿರುವ ಜನರ ಜೀವನದಲ್ಲಿ ಸತ್ಯ, ಪ್ರೀತಿ, ನೀತಿಯನ್ನು ಎಷ್ಟರ ಮಟ್ಟಿಗೆ ಒಂದು ಧರ್ಮಕ್ಕೆ ಬೆಳೆಸಿ ತರಲು ಸಾಧ್ಯವಾಯಿತು, ಅಷ್ಟು ಮಾತ್ರ ಆ ಧರ್ಮದ ಶ್ರೇಷ್ಠತೆಯಾಗುವುದು. ಇದು ಒಂದು ಪರಮ ಸತ್ಯವಾಗಿದೆ. ಆ ರೀತಿಯಲ್ಲಿ ಜೀವಿಸುವ ಜನರನ್ನು ಎಲ್ಲಾ ಧರ್ಮ, ಪಂಥಗಳು ಮೊದಲು ಲೆಕ್ಕಹಾಕಿ ನೋಡಲಿ. ಮತ್ತು ಈ ಹಿನ್ನೆಲೆಯಲ್ಲಿ ತಮ್ಮ ಧರ್ಮ, ಪಂಥಗಳ ಶ್ರೇಷ್ಠತೆಯನ್ನು ತುಂಬಾ ಮೆರೆಸಲಿ. ಆಗ ಜಗತ್ತು ಸ್ವರ್ಗವಾಗುವುದು. ಜಗದಲ್ಲಿ ಪ್ರೀತಿ ನಲಿದಾಡುವುದು. ನೈತಿಕತೆಯು ಅದ್ಭುತಕರವಾಗಿ ಗೌರವಿಸಲ್ಪಡುವುದು. ಮಹಾತ್ಮರ ಮತ್ತು ಸಜ್ಜನರ ಕೈಗೆ ಧರ್ಮಗಳು ಹಿಂತಿರುಗಿಸಲ್ಪಡುವವು. ಆದರೆ ನಿಜವಾಗಿ ನೋಡುವುದಾದರೆ, ನಮಗೆಲ್ಲರಿಗೂ

ತಿಳಿದಂತೆ, ಈ ಜಗತ್ತಿನಲ್ಲಿ, ತಮ್ಮ ತಮ್ಮ ಗ್ರಂಥಗಳನ್ನು ಬೇಕಾದಂತೆ ವಾದಿಸುತ್ತಾ ಜನರನ್ನು ತಮ್ಮಲ್ಲಿಗೆ ಆಕರ್ಷಿಸಿಕೊಳ್ಳುವ ಕೆಲಸವು ನಿರಂತರ ನಡೆಯುತ್ತಾ ಬಂದಿದೆ. ನಿಸ್ವಾರ್ಥ ಧರ್ಮದ ಪ್ರಚಾರವನ್ನು ಬೆರಳೆಣಿಕೆಯ ಕೆಲವು ವಿಶೇಷ ಮಹಾತ್ಮರು ಮಾತ್ರ ಮಾಡುವರಷ್ಟೆ. ಈ ಕಾರಣದಿಂದಾಗಿಯೇ, ಜಗತ್ತಿನ ಶಾಂತಿಗಾಗಿ ಮಾತ್ರ ಇರಬೇಕಾದ ಧರ್ಮ, ಪಂಥಗಳು, ಭಯಾನಕ ಹಿಂಸೆ, ಕ್ರೌರ್ಯಗಳನ್ನು ತಮ್ಮಲ್ಲಿ ಬೆಳೆಸುವಂತಾಗಿರುವುದು. ತಮ್ಮ ಧರ್ಮದಲ್ಲಿರುವವರ ಸ್ವಭಾವ ಶುದ್ಧೀಕರಣವು ಧರ್ಮದ ಮುಖ್ಯ ಉದ್ದೇಶವಾಗದಿದ್ದಲ್ಲಿ, ಅದು, ಹಿಂದಿನಂತೆ, ತಮ್ಮ ತಮ್ಮ ಧರ್ಮದೊಳಗಿನ ಜನಸಂಖ್ಯೆಯ ವರ್ಧನೆಯನ್ನು ಮಾತ್ರ ನೋಡುವವು. ಆಮಿಷ ರೀತಿ, ಬಲವಂತದ ರೀತಿ, ಅಥವಾ ಇನ್ನು ಬೇರೆ ಏನಾದರೂ ರೀತಿಗಳನ್ನು ಉಪಯೋಗಿಸಿ ಜಗತ್ತಿನ ಜನರೆಲ್ಲರನ್ನು ತಮ್ಮಲ್ಲಿ ಸೇರಿಸಿಕೊಳ್ಳುವ, ಧಾರ್ಮಿಕ ಕಾರ್ಯವೆಂದು ಹೇಳಿಕೊಳ್ಳುವ, ಆ ಕೆಲಸಗಳಲ್ಲಿ ನಿರತವಾಗುವವು. ಇದನ್ನೇ ದೇವರ ಸೇವೆ ಮತ್ತು ಧರ್ಮದ ಸೇವೆಯೆಂದೂ ಪ್ರಚಾರ ಮಾಡುವವು. ಈ ರೀತಿಯಲ್ಲಿ ಧರ್ಮ, ದೇವರುಗಳ ಭಯಾನಕ ವ್ಯಾಖ್ಯಾನಗಳಿಂದಾಗಿ ಈ ಜಗತ್ತು ಸರ್ವನಾಶದೆಡೆಗೆ ಮುನ್ನುಗ್ಗುತ್ತಿರುವುದು! ಇನ್ನಾದಾರೂ ಧರ್ಮ, ಪಂಥಗಳು, ಅವುಗಳ ನಿಜ ಸಾರವಾದ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ, ಶಾಂತಿಗಳನ್ನು ಅಳವಡಿಸಿಕೊಂಡು ಈ ಜಗತ್ತನ್ನು ರಕ್ಷಿಸುವ ವಿಶಾಲಮನಸ್ಕತೆಯನ್ನು ಬೆಳೆಸಿಕೊಳ್ಳುವಂತಾಗಲಿ.

# ಧರ್ಮ ಮತ್ತು ಮಾನವನ ಸ್ವಭಾವ ಶುದ್ಧಿ

ಮಾನವನ ಹುಟ್ಟಿನಿಂದಿರುವ ಸಹಜ ಸ್ವಭಾವಗಳಲ್ಲಿ ಎರಡು ತರದವುಗಳಿವೆ. ಒಂದು ಧನಾತ್ಮಕ ಸ್ವಭಾವವಾದರೆ ಇನ್ನೊಂದು ಋಣಾತ್ಮಕ ಸ್ವಭಾವವಾಗಿರುವುದು. ತಾಯಿ-ಮಗುವಿನ ಸಂಬಂಧದಲ್ಲಿ ಕಾಣಿಸುವ ನಿಸ್ವಾರ್ಥ ಪ್ರೀತಿಯು ಧನಾತ್ಮಕವಾದರೆ ಇನ್ನು ಸ್ವಾರ್ಥ ಮೂಲದಿಂದಿರುವ ದ್ವೇಷ, ಅಸೂಯೆ, ಇತ್ಯಾದಿಗಳು ಋಣಾತ್ಮಕಗಳಾಗಿವೆ. ಧರ್ಮಗಳ ಸೃಷ್ಟಿಯು, ಈ ಋಣಾತ್ಮಕ ಮೂಲದಿಂದ ಹುಟ್ಟಿ ಬರುವ ಸಹಜ ಸ್ವಭಾವದಿಂದ ಮಾನವನನ್ನು ಮೇಲೆತ್ತಿ ಆತನನ್ನು ಒಬ್ಬ ಉತ್ತಮ ಮಾನವನನ್ನಾಗಿ ಮಾಡುವುದಕ್ಕಾಗಿರುವುದು. ಮನಸ್ಸಿನೊಳಗಿನ ದಾನವನನ್ನು ತೊಲಗಿಸಿ ಅಲ್ಲಿ ಶುದ್ಧ ಮಾನವನನ್ನು ಪ್ರತಿಷ್ಠಾಪಿಸುವ ಈ ಕೆಲಸವೇ ನಿಜವಾದ ಧರ್ಮಪ್ರಚಾರದ ಕೆಲಸವಾಗಿರಬೇಕಾಗಿದೆ. ಆದರೆ ಧರ್ಮಗಳು ತಾವೇ ಸ್ವತಃ ಸ್ವಾರ್ಥವೆಂಬ ಮತಾಂತರ, ಧ್ವೇಷ, ಇತ್ಯಾದಿ ಋಣಾತ್ಮಕ ಸ್ವಭಾವಕ್ಕೆ ಬಲಿಯಾಗಿ ಹೋಗಿರುವುದು ಒಂದು ದುರಂತವಾಗಿದೆ! ಹೀಗಿರುವಾಗ, ಧರ್ಮಗಳ ಉಸಿರಾಗಿರುವ ಆ ಸಾರ್ವತ್ರಿಕ ಪ್ರೀತಿಗೆ ಧರ್ಮದೊಳಗೆ ಬಂದು ಸೇರಿಕೊಳ್ಳಲು ಯಾವದಾರಿಯೂ ಇಲ್ಲವಾಗಿಬಿಡುವುದು. ಆಗ ನಿಜವಾದ ಧರ್ಮಗಳೇ ಜಗತ್ತಿನಲ್ಲಿ ಇಲ್ಲವಾಗುವುದು. ಮಹಾತ್ಮರುಗಳು ನಿಜ ಧರ್ಮಕ್ಕಾಗಿ ಎಷ್ಟೇ ಶ್ರಮವಹಿಸಿದರೂ ಅವರ ಮಾತಿಗೆ ಯಾರೂ ಕಿವಿಗೊಡಲಿಲ್ಲ! ಎಲ್ಲರ ಶ್ರದ್ಧೆಯು, ತಮ್ಮ ತಮ್ಮ ಧರ್ಮಗಳಲ್ಲಿನ ಜನಸಂಖ್ಯೆ ವರ್ಧನೆಯಲ್ಲಿ ಮಾತ್ರ ಕೇಂದ್ರೀಕೃತವಾಗಿರುವುದು!!

# ಧರ್ಮಪ್ರಚಾರದ ಶುದ್ಧ ರೀತಿ

ಸತ್ಯ, ಪ್ರೀತಿ, ನೀತಿಗಳಿಗೆ ಶ್ಲೋಕಗಳ ಅಗತ್ಯವಿದೆಯೇ? ಅಥವಾ ಗ್ರಂಥ, ಗ್ರಂಥಾಲಯಗಳ ಅಗತ್ಯವಿದೆಯೇ? ಇಲ್ಲ ಎಂಬುವುದು ಸತ್ಯ. ಆದರೆ ಅವುಗಳನ್ನು ಹೊರತಾಗಿರುವ ದೇವರು, ಧರ್ಮಗಳು ಇರಲು ಸಾಧ್ಯವೇ? ಅಲ್ಲೂ 'ಇಲ್ಲ' ಎಂಬುವುದೇ ಸತ್ಯವಾದ ಉತ್ತರವಾಗುವುದು!! ಅಂದರೆ, ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ, ಇವುಗಳನ್ನು ಜೀವಿಸಿ ತೋರಿಸುವುದೇ ನಿಜವಾದ ಧರ್ಮಪ್ರಚಾರವಾಗಿದೆ. ಓದಿ ನೆನಪಿಟ್ಟುಕೊಂಡು ಧರ್ಮವನ್ನು ವಿವರಿಸುವುದು ಒಬ್ಬ ಪಾಪಿಗೂ ಸಾಧ್ಯವಾಗುವ ಕೆಲಸವಾಗಿದೆ. ಮಹಾತ್ಮರು ಧರ್ಮದ ನಿಜವಾದ ಪಾಲಕರು ಮತ್ತು ಪ್ರಚಾರಕರು. ಅವರು, ತಾವು ಧರ್ಮಮಾರ್ಗದಲ್ಲಿ ಜೀವಿಸಿ, ಅದನ್ನು ಜಗತ್ತಿಗೆ ಎತ್ತಿ ಹಿಡಿದಿದ್ದಾರೆ. ಆದರೆ ಇಂದು ಜಗತ್ತಿನ ಎಲ್ಲಾ ಭಾಗದಲ್ಲೂ ಅಧರ್ಮ ಮಾರ್ಗದಲ್ಲಿ ಜೀವಿಸುವವರೇ ಹೆಚ್ಚಾಗಿ ಧರ್ಮ ರಕ್ಷಣೆಯ ಹೊಣೆಹೊತ್ತವರಂತೆ ಕಾಣಿಸಿಕೊಳ್ಳುವರು. ಇದು ಜಗತ್ತನ್ನು ಸರ್ವನಾಶದತ್ತ ನಡೆಸುವುದು.

# ಆಸ್ತಿಕರು ಮತ್ತು ನಾಸ್ತಿಕರು

ಜಗತ್ತಿನ ಎಲ್ಲಾ ಧರ್ಮ, ಪಂಥಗಳಿಗೆ ಸಂಬಂಧಿಸಿ ಹೇಳುವಾಗ, ಈ ಜಗತ್ತಿಗೆ ಮೂಲ ಕಾರಣವಾದ ಒಂದು ಪವಿತ್ರ ಶಕ್ತಿಯನ್ನು ಒಪ್ಪುವವರನ್ನು[ದೇವರನ್ನು ನಂಬುವವರನ್ನು] ಆಸ್ತಿಕರೆಂದೂ ಆದರೆ ಅದನ್ನು ಒಪ್ಪದವರನ್ನು [ದೇವರನ್ನು ನಂಬದವರನ್ನು] ನಾಸ್ತಿಕರೆಂದೂ ಸಾಮಾನ್ಯವಾಗಿ ಜನರು ತಿಳುದುಕೊಂಡಿರುವರು.

ಇಲ್ಲಿ ಒಂದು ಅಂಶವನ್ನು ಹೇಳಬೇಕಾಗಿದೆ. ಅದಕ್ಕಾಗಿ ಮೊದಲಲ್ಲಿ, ದೇವರ ಚೈತನ್ಯದ ಸ್ವಭಾವವನ್ನು ನೋಡೋಣ. ಇಲ್ಲಿ, ಜಗತ್ತಿನ ಎಲ್ಲಾ ದೇವಸಂಕಲ್ಪಗಳ ಚೈತನ್ಯವು ಪವಿತ್ರವಾಗಿದೆ ಎಂದು ಎಲ್ಲಾ ಶಾಸ್ತ್ರಗಳು ಹೇಳುವವು. ಅಂದರೆ, ಜನರು ಆ 'ಪವಿತ್ರತೆ'ಯನ್ನು ಒಪ್ಪಿರುವುದೇ ಜನರ ಆಸ್ತಿಕತನಕ್ಕೂ ಕಾರಣವಾಗಿರುವುದು ಎಂದು ಅರ್ಥ. ಪವಿತ್ರವಲ್ಲದಿದ್ದಲ್ಲಿ, ಯಾವ ಕಾಲಕ್ಕೂ, ಸಗುಣ ದೇವರಾಗಲೀ ಅಥವಾ ನಿರ್ಗುಣ ದೇವರಾಗಲೀ, ಅದು ದೇವರೇ ಆಗುವುದಿಲ್ಲ ಎಂಬುವುದು ಸರ್ವ ಸಮ್ಮತವೆಂದು ಇದು ತೋರಿಸುವುದು. ಈಗ ಪವಿತ್ರತೆ ಎಂದರೆ ಏನು ಎಂದು ನೋಡೋಣ. ಪವಿತ್ರತೆಯನ್ನು ನಾವು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂದೇ ಹೇಳಬೇಕಾಗಿದೆ, ಯಾಕೆಂದರೆ ಇವುಗಳು ಹೊರತಾದ ಪವಿತ್ರತೆ ಈ ಜಗತ್ತಿನಲ್ಲಿ ಇಲ್ಲ. ಅಂದರೆ ಸಗುಣವಾದರೂ, ನಿರ್ಗುಣವಾದರೂ, ದೇವರ ಮೂಲ ಚೈತನ್ಯವು ಪವಿತ್ರವಾಗಿರುವುದು ಎಂದು ಹೇಳುವಲ್ಲಿ, ಅದು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಗಳನ್ನು ಜಗತ್ತಿನಲ್ಲಿ ಸೃಷ್ಟಿಸಲು ಶಕ್ತವಾಗಿರುವಂಥಹ ಪವಿತ್ರ ಶಕ್ತಿಯನ್ನು ಮಾತ್ರ ಹೊಂದಿರುವುದು ಎಂದು ಸ್ಪಷ್ಟವಾಗುವುದು. ಹಾಗಿದ್ದಲ್ಲಿ ನಾವೆಲ್ಲ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯನ್ನೇ ಮೂಲದಲ್ಲಿ ಆಸ್ತಿಕತನಕ್ಕೂ ಕಾರಣ ಎಂದು ಹೇಳಿದಂತಾಯಿತು. ಅಂದರೆ ಈ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯನ್ನು ಈ ಜಗತ್ತಲ್ಲಿ ಸೃಷ್ಟಿಸುವ ಆ ಪವಿತ್ರ ಕಾರಣ ಚೈತನ್ಯವನ್ನೇ ಆಸ್ತಿಕನಾಗಲು ಒಬ್ಬನು ಒಪ್ಪಬೇಕಾಗಿರುವುದು ಎಂದು ಶಾಸ್ತ್ರಗಳೂ ಒತ್ತಾಯಿಸಿದಂತೆ ಆಗುವುದು. ಒಬ್ಬ ಕಳ್ಳನಿಗೆ ಅಥವಾ ಕೆಟ್ಟವನಿಗೆ ಉತ್ತಮನು ಆದರ್ಶನಾಗುವುದಿಲ್ಲ ಎಂಬ ಕಾರಣವಿರುವುದರಿಂದ, ಯಾರು ಅಸತ್ಯ, ದ್ವೇಷ, ಅನೀತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವರೋ ಅವರಿಗೆ ಪವಿತ್ರ ದೇವರು ಆದರ್ಶ ಆಗುವುದಿಲ್ಲ!! ಈ ಹಿನ್ನೆಲೆಯಲ್ಲಿ, ಅಂಥವರು ಆಸ್ತಿಕರೆಂದು ಹೇಳಿಕೊಂಡರೂ ಅವರೆಂದೂ ಆಸ್ತಿಕರಾಗುವುದಿಲ್ಲ, ಬದಲು ನಾಸ್ತಿಕರಾಗುವರೆಂದು ಇಲ್ಲಿ ಸ್ಪಷ್ಟವಾಗುವುದು. ಚುಟುಕಾಗಿ ಹೇಳುವುದಾದರೆ ಆಸ್ತಿಕನೆಂದರೆ ದೇವರನ್ನು ಸತ್ಯ, ಪ್ರೀತಿ, ನೀತಿಯೆಂದು ಅಥವಾ ಅವುಗಳ ಮೂಲ ಕಾರಣವೆಂದು ಖಂಡಿತವಾಗಿಯೂ ತಿಳಿದುಕೊಂಡಿರುವವನು ಎಂದು ಹೇಳಬೇಕಾಗುವುದು. ಬೇರೆ ಬೇರೆ ಧರ್ಮಗಳಲ್ಲಿ ವ್ಯತ್ಯಸ್ಥವಾಗಿ ವಿವರಿಸಿರುವ ಪುರಾಣಗಳ ಸೃಷ್ಟಿಕರ್ತ ದೇವರುಗಳನ್ನು "ನಂಬುವ" ಆ ರೀತಿಯು, ಅದು ತಾರ್ಕಿಕ ಅಥವಾ ವೈಜ್ಞಾನಿಕ ರೀತಿಯ, ಆಸ್ತಿಕವಾದವಾಗುವುದಿಲ್ಲ ಎಂದೂ ತಿಳಿದುಬರುವುದು. ಯಾಕೆಂದರೆ, ಅಲ್ಲಿ ದೇವರನ್ನೇ ಮೋಸ ಮಾಡುವ ಒಬ್ಬ ಪಾಪಿ ರಾಕ್ಷಸನಿಗೂ ದೇವರ ಭಕ್ತನಾಗಿ ದೊಡ್ಡ ಆಸ್ತಿಕನಾಗಬಹುದು!

ದೇವರನ್ನು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂದು ತಿಳಿದುಕೊಳ್ಳುವ ವಿಧಾನವೇ, ಆ ಸತ್ಯಸಂಧವಾದ, ತಾರ್ಕಿಕ ಮತ್ತು ವೈಜ್ಞಾನಿಕ ರೀತಿಯ, ಆಸ್ತಿಕ-ಪ್ರತಿಪಾದನೆ ಎಂದು ಇಲ್ಲಿ ನಮಗೆ ಸ್ಪಷ್ಟವಾಗುವುದು.

# ದೇವರ ಕಡೆಗಿನ ದಾರಿ ಮತ್ತು ದೇವರೆಂಬ ಗುರಿ

ಕೆಲವರು, ದೇವರ ಕಡೆಗಿನ ದಾರಿಗಳು ಹಲವು, ಆದರೆ ದೇವರೆಂಬ ಗುರಿಯು ಒಂದು ಎಂದು ಹೇಳುವರು. ಇದರ ಬಗ್ಗೆ ಹೇಳುವಾಗ, ಹಾಗೆ ಆಗಿರಬೇಕೆಂದು ನಾನು ಆಶಿಸುತ್ತೇನೆ ಎಂದು ಹೇಳುತ್ತೇನೆ, ಆದರೆ ನಿಜಸ್ಥಿತಿಯಲ್ಲಿ ಅದು ಹಾಗಿಲ್ಲ ಎಂಬುವುದು ಬೇಸರದ ವಿಷಯವಾಗಿದೆ. ಮೊದಲು ಎಲ್ಲಾ ಧರ್ಮ, ಪಂಥ, ಸಂಪ್ರದಾಯಗಳ ಗುರಿಗಳು ಒಂದೇ ಆಗಿದೆಯೇ ಎಂದು ನೋಡೋಣ. ಗುರಿಗಳು ಒಂದೇ ಆಗಿಲ್ಲ, ಯಾಕೆಂದರೆ ಒಂದು ಧರ್ಮ, ದೇವರು, ಒಂದು ರೀತಿಯಲ್ಲಿ ವಿವರಿಸಲ್ಪಟ್ಟರೆ ಇನ್ನೊಂದು ಧರ್ಮ, ದೇವರು, ಇನ್ನೊಂದು ರೀತಿಯಲ್ಲಿ ವಿವರಿಸಲ್ಪಟ್ಟಿರುವುದು. ಸಗುಣ ದೇವರು, ನಿರ್ಗುಣ ದೇವರು, ರೂಪ ಇರುವ ದೇವರು, ರೂಪ ಇಲ್ಲದ ದೇವರು, ಅದೇ ರೀತಿ, ಸಾತ್ವಿಕ ದೇವರು, ತಾಮಸಿಕ ದೇವರು, ಅವತಾರ ದೇವರು, ಹೀಗೆ ದೇವರುಗಳ ರೀತಿಗಳೇ ಹಲವು ಇರುವವು, ಅಂದರೆ ಗುರಿಗಳು ಹಲವು ಎಂದು ಅರ್ಥ. ಮಾತ್ರವಲ್ಲ, ಆ ದೇವರುಗಳ ಸ್ವರ್ಗ ಇತ್ಯಾದಿಗಳ ವಿವರಣೆಗಳೂ ಬೇರೆ ಬೇರೆ ಆಗಿವೆ. ಹೀಗಿರುವಾಗ, 'ಹಲವು ಗುರಿಗಳು, ಅವುಗಳಿಗೆ ಹಲವು ದಾರಿಗಳು,' ಎಂದಲ್ಲಿ ಮಾತ್ರ ಅದು ಸತ್ಯದ ಮಾತಾಗುವುದು.

ನಮಗೆ ಒಂದೇ ಗುರಿ ಬೇಕಿದ್ದಲ್ಲಿ, ಅದು ಎಲ್ಲಾ ದೇವರ ಮತ್ತು ಎಲ್ಲಾ ಧರ್ಮಗಳ ಸ್ವಭಾವ ವಿವರಣೆಗಳಲ್ಲಿ ಮಾತ್ರ ಸಿಗುವುದು, ಅದುವೇ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯಾಗಿದೆ. ಯಾಕೆಂದರೆ ಅದನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ದೇವರ ಸ್ವಭಾವವೇ ದೇವರ ಅಸ್ತಿತ್ವವಾಗಿರುವಾಗ, ಅದರ ಹಿನ್ನೆಲೆಯಲ್ಲಿ ದೇವರು, ಧರ್ಮಗಳನ್ನು ವಿವರಿಸಿದಲ್ಲಿ ನಮಗೆಲ್ಲಾ, ನಿಜವಾದ, ಆ ಒಂದೇ ಗುರಿ ಸಿಗುವುದು. ಈ ಗುರಿಗಳನ್ನು ಸಾಧಿಸುವಲ್ಲಿ ಯಾವ ಧರ್ಮ, ಪಂಥ, ಸಂಪ್ರದಾಯಗಳಿಗೂ ತಮ್ಮ ತಮ್ಮೊಳಗೆ ಹೊಡೆದಾಡಿಕೊಳ್ಳುವ ಅವಕಾಶ ಇರುವುದಿಲ್ಲ, ಅದೇ ರೀತಿ, ಧರ್ಮ, ಪಂಥಗಳಲ್ಲಿ ಬದಲಾವಣೆ ಮಾಡುವ ಅಗತ್ಯವೂ ಬರುವುದಿಲ್ಲ. ಆದರೆ, ಇಲ್ಲಿ, ಎಲ್ಲಾ ಧರ್ಮ, ಪಂಥಗಳ ಗುರಿಸಾಧಿಸುವ ದಾರಿಗಳೂ ಆ ಆತ್ಮೀಯ ಮತ್ತು ಅನಂತ 'ಶಾಂತಿ'ಯೆಂಬ ಹೆದ್ದಾರಿಯೇ ಆಗಿಬಿಡುವವು ಎಂಬುವುದು ಜಗತ್ತಿಗೆ ಅತ್ಯಂತ ಲಾಭದಾಯಕವಾಗಿ ಪರಿಣಮಿಸುವುದು!

# ದೇವರನ್ನೇ ನಂಬದ ಧರ್ಮಗಳು ಮತ್ತು ದೇವರ ಮೇಲಿನ ಭಯ

ದೇವರನ್ನೇ ನಂಬದ ಧರ್ಮಗಳ ಜನರಿಗೆ ದೇವರ ಹೆದರಿಕೆ ಇಲ್ಲ, ಮತ್ತು ಅದು ಈ ಜಗತ್ತಿಗೆ ಅಪಾಯ ಎಂದು ಹೇಳಿಕೊಳ್ಳುವವರು ಇದ್ದಾರೆ. ನಾವು ನಿಜವಾಗಿಯೂ ದೇವರಿಲ್ಲದ ಧರ್ಮಗಳನ್ನು ಮತ್ತು ದೇವರನ್ನು ಭಯ ಭಕ್ತಿಯಿಂದ ಪಾಲಿಸುವ ಧರ್ಮಗಳನ್ನು ಹೋಲಿಸಿ ನೋಡಿದರೆ, ನಮಗೆ ದೇವರ ಭಯವನ್ನು ಹೊತ್ತುಕೊಂಡಿರುವ ಧರ್ಮಗಳಿಂದಲೇ ಹೆಚ್ಚು ಹಿಂಸೆ ಮಾನವರಿಗೆ ಉಂಟಾಗಿದೆ ಎಂದು ಸ್ಪಷ್ಟವಾಗುವುದು. ಆ ದೇವರ ಹೆಸರಲ್ಲಿ ಕೊಚ್ಚಿ ಕೊಚ್ಚಿ ಕೊಂದು ಹಾಕಿರುವ ಘಟನೆಗಳು ಅಷ್ಟಿಷ್ಟಲ್ಲ. ಈಗ ಹೇಳಿ, ಜಗತ್ತನ್ನು ಅಧರ್ಮದ ಕಡೆಗೆ ಹೆಚ್ಚು ಕೊಂಡು ಹೋಗಿರುವುದು ಯಾವುದು?

ತಿಳಿದೂ ತಪ್ಪು ಮಾಡುವವನು ಎಂದೆಂದಿಗೂ ಅದನ್ನು ನಿಲ್ಲಿಸಲಾರ. ಅಧರ್ಮದ ದಾರಿಯಲ್ಲಿ ನಡೆದರೆ ಆತನಿಗೆ ದೇವರಿಂದ ಬರುವ ಶಾಪ, ದೇವರು ಅತನಿಗೆ ಕಲ್ಪಿಸುವ ಘೋರ ನರಕ ಶಿಕ್ಷೆ, ಇತ್ಯಾದಿಗಳನ್ನು ಕಂಠಪಾಠ ಮಾಡಿ ತಿಳಿದುಕೊಂಡಿರುವವರೇ ಅದಕ್ಕೆ ಎಳ್ಳಷ್ಟೂ ಹೆದರದೆ ಕೆಟ್ಟತನದ ಪರಮಾವಧಿಯಲ್ಲಿ ಜೀವಿಸಲು ಧೈರ್ಯಪಡುವುದಾದರೆ ಇನ್ನು ಈ ಜಗತ್ತಿಗೆ ಉಳಿಗಾಲವಿಲ್ಲ. ನರಕವನ್ನು ಅಷ್ಟು ಭಯಾನಕವಾಗಿ ಧರ್ಮಗಳಲ್ಲಿ ವಿವರಿಸಿದರೂ, ಕಳ್ಳತನ, ಮೋಸ, ವಂಚನೆ, ದುಶ್ಚಟ, ಶಾಲಾ ಕಾಲೇಜುಗಳಲ್ಲಿಯೂ ಸೇರಿ ಎಲ್ಲೆಡೆ ನಡೆಯುವ ವ್ಯಭಿಚಾರ ಕ್ರಿಯೆಗಳು, ಜಾತಿ ಹಿನ್ನೆಲೆಯ ಹಿಂಸೆ, ಧರ್ಮಾಂಧರ ರಕ್ತಪಾತ, ಹೀಗೆ ಎಲ್ಲಿ ನೋಡಿದರೂ ದೇವರ ಮೇಲಿನ ಭಯ ಕಾಣಿಸದಾಗಿ, ಆ ಭಯದ ವಿವರಣೆಗಳು ಎಲ್ಲವೂ ನಿಶ್ಪ್ರಯೋಜಕಗಳಾಗಿಹೋದವು! ಇನ್ನೊಮ್ಮೆ ನೆನಪಿಸಬೇಕಾದ ಅಂಶವೆಂದರೆ ಅವರೆಲ್ಲರಿಗೂ ನರಕದ ಭಯಾನಕ ವಿವರಣೆ ಸ್ಪಷ್ಟವಾಗಿ ತಿಳಿದಿದೆ ಎಂಬುವುದನ್ನಾಗಿದೆ!!! ನಮಗೆ ಇದು ಚುಟುಕಾಗಿ ಮತ್ತು ಸ್ಪಷ್ಟವಾಗಿ ಒಂದು ಮುಖ್ಯ ಅಂಶವನ್ನು ತಿಳಿಸುವುದು. ಅದೇನೆಂದರೆ, ಒಳಿತಿನ ಜೀವನ ದಾರಿಯನ್ನು ಅಥವಾ ಧರ್ಮವನ್ನು ನಿರ್ಣಯಿಸುವುದು ಅದು ದೇವರಲ್ಲ, ಅದೇ ರೀತಿ, ದೇವರ ಮೇಲಿನ ಅಥವಾ ನರಕದ ಭಯವೂ ಅಲ್ಲ, ಬದಲು ದೇವತ್ವವೆಂಬ ಆದರ್ಶಗಳಾಗಿವೆ. ಇದುವೇ ಆ ಪ್ರಮುಖ ಅಂಶವಾಗಿರುವುದು. ದೇವರಿಲ್ಲದ ಧರ್ಮಗಳಲ್ಲಿ ಇತರ ಧರ್ಮಗಳಿಗಿಂತಲೂ ಅಹಿಂಸೆಗೆ ಹೆಚ್ಚು ಒತ್ತು ಕೊಟ್ಟಿರುವುದನ್ನು ಗಮನಿಸಬಹುದು. ಇದು ನಿಜವಾಗಿಯೂ ಆ ಕರುಣಾಮಯನೆಂದು ಸಾವಿರಾರು ವರುಷಗಳಲ್ಲಿ ಹೊಗಳುತ್ತಾ ಬಂದಿರುವ ದೇವರು ಇರುವ ಧರ್ಮಗಳಲ್ಲಿ ಕಾಣಿಸಬೇಕಾಗಿತ್ತು!! ಆದರೆ ಅಲ್ಲಿ, ಹೆಚ್ಚಿನ ಕಡೆಗಳಲ್ಲೂ, ಧರ್ಮಯುದ್ಧಗಳೇ ಕಾಣಸಿಗುವುದು ನಿಜಕ್ಕೂ ಅಚ್ಚರಿ ಮೂಡಿಸುವ ವಿಷಯವಾಗಿದೆ! ಜಾಗತಿಕವಾಗಿ ಎಲ್ಲಾ ಧರ್ಮಗಳಲ್ಲೂ ಕಂಡುಬರುವ ಧರ್ಮಾಂಧತೆಯೆಂಬ ಭೀಕರ ಬೆಂಕಿಯಿಂದ, ಮುಂದೆ “ಆ ಕರುಣಾಮಯ ಸೃಷ್ಟಿಕರ್ತ ದೇವರು, ಜನರಿಗೆ ತನ್ನಲ್ಲಿರುವ ಕರುಣಾಮೃತವನ್ನು ಧಾರೆಯೆರೆದು ಕಾಪಾಡಬಲ್ಲ,” ಎಂಬ ಭರವಸೆಯು ಇದರಿಂದ ಸಂಪೂರ್ಣವಾಗಿಯೂ ಇಲ್ಲವಾಗುವುದು. ಮಾತ್ರವಲ್ಲ, ಮಾನವನೇ ‘ಮಾನವೀಯತೆ’ ಎಂಬ ಆಯುಧದೊಂದಿಗೆ ಸ್ವತಃ ಎಚ್ಚೆತ್ತುಕೊಳ್ಳಬೇಕಾಗುವುದು ಎಂಬ ಸಂದೇಶವನ್ನು ಇದು ಜಗತ್ತಿಗೆ ಸ್ಪಷ್ಟವಾಗಿ ರವಾನಿಸುವುದು ಎಂದೂ ತಿಳಿದುಕೊಳ್ಳಬಹುದು.

# ಧರ್ಮಗಳ ಹೆಸರಲ್ಲಿ ಮಾಡುವ ತಪ್ಪುಗಳು ಮತ್ತು ಧರ್ಮದ ಸಂಬಂಧ

ಹೆಚ್ಚಿನವರು ಧರ್ಮದ ಹೆಸರಲ್ಲಿ ಮಾಡುವ ತಪ್ಪು ಅದು ಧರ್ಮಕ್ಕೆ ಸಂಬಂಧಿಸಿಲ್ಲ ಎನ್ನುವರು. ಈಗ ಧರ್ಮ ಎಂದರೇನು? ಅದು, ತಾನೂ ಚೆನ್ನಾಗಿದ್ದು ಇತರರೂ ಚೆನ್ನಾಗಿರಬೇಕೆಂಬ ನಿಲುವು. ಇದು ವ್ಯಕ್ತಿಯಾದರೂ ಸಮಾಜವಾದರೂ ಇದೊಂದೇ ನಿಲುವು ಇರುವುದು. ತಮ್ಮ ಸ್ವಾರ್ಥದಿಂದಾಗಿ ಇತರರಿಗೆ ತೊಂದರೆಯಾಗುವ ಕಳ್ಳರು ಇತ್ಯಾದಿ ಕಿಡಿಗೇಡಿಗಳನ್ನು ಶಿಕ್ಷಿಸುವುದು ಮತ್ತು ಉತ್ತಮರನ್ನು ರಕ್ಷಿಸುವುದು ಧರ್ಮದ ಕೆಲಸ ಅಷ್ಟೇ. ಹೆಚ್ಚು ವಿವರಿಸದೆ, ಒಂದೇ ವಾಕ್ಯದಲ್ಲಿ ಅದನ್ನು ತಿಳಿಯಬಹುದು. ಧರ್ಮದೊಳಗೆ ಕೆಡುಕು ಮಾಡುವಾಗ ಅದು ಧರ್ಮಕ್ಕೆ ಸಂಬಂಧಿಸಿದುದಲ್ಲವಾದರೆ, ಇನ್ನು, ನಿಮ್ಮ ಧರ್ಮದೊಳಗಿದ್ದ ಮತ್ತು ಇರುವ, ನಿಮ್ಮ ಧರ್ಮದ ಬೆನ್ನೆಲುಬು ಆಗಿರುವ, ಆ ಮಹಾ ವ್ಯಕ್ತಿಗಳು ಎಲ್ಲರೂ ನಿಮ್ಮ ಧರ್ಮಕ್ಕೆ ಸಂಬಂಧಿಸಿದವರಲ್ಲ ಎಂದು ಹೇಳಬೇಕಾಗುವುದು, ಯಾಕೆಂದರೆ ಎರಡು ವರ್ಗದವರೂ ಧರ್ಮವು ಮಾಡುತ್ತಿರುವ ಆ ಒಂದೇ ಪರೀಕ್ಷೆಗೆ ಹಾಜರಾದವರಾಗಿರುವರು. ಇನ್ನು, ಬೇರೆ ರೀತಿಯಲ್ಲಿ ನೋಡುವಾಗ, ನಿಮ್ಮ ಧರ್ಮದ ಮಹಾತ್ಮರಿಗೆ ಮತ್ತು ನಿಮ್ಮ ದೇವರಿಗೆ ಅಥವಾ ಪ್ರವಾದಿಗಳಿಗೆ ಸ್ವಲ್ಪವೂ ಅಪಮಾನವಾಗುವಂತೆ ಯಾರಾದರೂ ವರ್ತಿಸಿದರೆ, ನೀವು ಸುಮ್ಮನೆ ಇರುವುದಿಲ್ಲ ಅಲ್ಲವೇ? ಆದರೆ ನಿಮ್ಮ ಧರ್ಮದಲ್ಲಿ ಇಷ್ಟೆಲ್ಲಾ ಅನ್ಯಾಯದ ಪಾಪಕರ್ಮಗಳ ಸುರಿಮಳೆ ನಡೆವಾಗ ನಿಮಗೆ ಏನೂ ಅನಿಸುವುದಿಲ್ಲ, ಅಪಮಾನವಾಗುವುದಿಲ್ಲ, ಇದು ಆಶ್ಚರ್ಯಗಳಲ್ಲಿ ಅತಿ ದೊಡ್ಡದು! ದಿನ ನಿತ್ಯ ಧರ್ಮವನ್ನು ಅತ್ಯಂತ ನೀಚವಾಗಿ ಚಿತ್ರಿಸುವ ಮತ್ತು ಆ ಹೆಸರಲ್ಲಿ ಶೋಷಣೆ, ರಕ್ತಪಾತ ಮಾಡುವಾಗ ನಿಮ್ಮ ಧಾರ್ಮಿಕ ಬೋಧ ಮತ್ತು ಆ ಆವೇಶ ಎಲ್ಲಿ ಹೋಯಿತು? ಜಗತ್ತೇ ಯಾಕೆ ಎದ್ದು ನಿಂತು ಪ್ರಭಲವಾಗಿ ಖಂಡಿಸುವುದಿಲ್ಲ? ಆ ಜಾತೀ ಶೋಷಣೆ, ಅನಾಚಾರಗಳು, ಧರ್ಮಾಂಧರ ಹಿಂಸೆ, ರಕ್ತಪಾತ ಇವೆಲ್ಲಾ ಧರ್ಮವನ್ನು ಎತ್ತಿ ಹಿಡಿಯುವ ಚಟುವಟಿಕೆಯೇ? ಯಾರಾದರೂ ಮಾತನಾಡುವಾಗ, ಬರೆಯುವಾಗ ಒಂದು ಶಬ್ದ ಹೆಚ್ಚು ಆದರೆ ಆಗ ಮಾತ್ರ ಜಗತ್ತೇ ಎದ್ದು ನಿಂತು ಧರ್ಮ ನಿಂದನೆ ಎಂದು ಇರುವ ಆವೇಶವನ್ನೆಲ್ಲಾ ಅಲ್ಲಿಗೆ ಹಾಕಿ, ನಿಮ್ಮ ಧರ್ಮವನ್ನು ರಕ್ಷಿಸುವ ಕ್ರಿಯೆಯನ್ನು ಅಲ್ಲಿಗೆ ಮುಕ್ತಾಯ ಮಾಡುವಿರಿ. ಅದೇ ವೇಳೆ ತಮ್ಮ ತಮ್ಮ ಧರ್ಮದೊಳಗೆ ಕೆಟ್ಟತನ ಆಕಾಶದೆತ್ತರಕ್ಕೆ ಬೆಳೆದರೂ ಯಾರಿಗೂ ಅದು ಧರ್ಮ ನಿಂದನೆ ಆಗುವುದೇ ಇಲ್ಲ, ಧರ್ಮದ ಮೇಲಿನ ಪ್ರೀತಿ, ಆ ಆವೇಶ ಅಲ್ಲಿ ಕಾಣಿಸುವುದು ಕೂಡಾ ಇಲ್ಲ! ನಿಜವಾಗಿಯೂ ಧರ್ಮ ಯಾರಿಗೆ ಬೇಕು? ಎಲ್ಲವೂ ಸ್ವಾರ್ಥ. ಈ ಸ್ವಾರ್ಥದಿಂದ ಇನ್ನು ಎಷ್ಟು ಕಾಲ ಈ ಯಾಂತ್ರಿಕ ಧರ್ಮವನ್ನು ಕಾಪಾಡಲು ಸಾಧ್ಯ? ಜಗತ್ತಿನ ಎಲ್ಲೆಡೆಯೂ ಧರ್ಮವನ್ನು ತಮಗೆ ಹೇಗೆ ಬೇಕೋ ಹಾಗೆ ಚಿತ್ರಿಸಿಕೊಳ್ಳುತ್ತಾರೆ ಮತ್ತು ಅದರ ಲಾಭವನ್ನು ಪಡೆಯುತ್ತಾರೆ ಅಷ್ಟೆ. ಆ ಪ್ರಾಚೀನ ವಾಮಾಚಾರವು ಪೂರ್ತಿಯಾಗಿ ಈ ಜಗತ್ತನ್ನು ಗೆಲ್ಲಲು ಇನ್ನು ಬಹಳ ಕಡಿಮೆ ದೂರವೇ ಇರುವುದೆಂದು ಇದು ಸ್ಪಷ್ಟಪಡಿಸುವುದು!

ಆದುದರಿಂದ, ಧರ್ಮದ ಹೆಸರಲ್ಲಿ ಅಯಾ ಧರ್ಮದೊಳಗೆ ಮಾಡುವ ಅನಾಚಾರ,ಅನೈತಿಕತೆ, ಶೋಷಣೆ, ಹಿಂಸೆ, ರಕ್ತಪಾತಗಳೆಂಬ ಪಾಪಕರ್ಮಗಳು, ಇವೇ ನಿಜವಾದ ಮತ್ತು ಅತ್ಯಂತ

ಭಯಾನಕವಾದ ದೈವ ನಿಂದನೆ ಮತ್ತು ಧರ್ಮನಿಂದನೆಯಾಗುವುದು. ಅದರ ಬಗ್ಗೆ ಕಾಳಜಿ ವಹಿಸದೆ, ಮತ್ತು ಅದು ತಮಗೆ ಸಂಬಂಧಿಸಿಲ್ಲ ಎಂದು ಹೇಳುವವರೇ ಆ ನಿಜವಾದ ನಾಸ್ತಿಕರು ಎನ್ನಬಹುದು.

# ಭೌತಿಕವಾದಿಗಳ 'ಎಲ್ಲವೂ ಸುಳ್ಳು' ಎಂಬ ವಾದ

ಮರಣಾನಂತರ ಏನೂ ಇಲ್ಲ ಎನ್ನುವ ಭೌತಿಕವಾದಿಗಳು ಕೂಡಾ ಒಂದು ರೀತಿಯ ನಂಬಿಕೆಯವರು, ಮತ್ತು ಅವರೂ ಒಂದು ಆಧಾರ ರಹಿತ ನಂಬಿಕೆಯ ಪಂಥವನ್ನು ಕಟ್ಟಿಕೊಂಡಿದ್ದಾರೆ. ಆದರೆ, ಅವರನ್ನು ಯಾರೂ ಮತಾಂತರ ಮಾಡುವ ಅಗತ್ಯವಿಲ್ಲ. ಆದರೆ, ಅವರು ಅವರ ಆ ಪಂಥದ ಹೆಸರಲ್ಲಿ ಅನೈತಿಕತೆಯನ್ನು ಜಗತ್ತಿನಲ್ಲಿ ಹೆಚ್ಚಿಸದಿದ್ದರೆ ಸಾಕಾಗುವುದು ಅಷ್ಟೆ. ಸೂಕ್ಷ್ಮ ಜಗತ್ತನ್ನು ನಂಬಿ ರಕ್ತಪಾತ ಮಾಡುವುದಕ್ಕಿಂತ ಅದೇ ಮೇಲು.

ಇನ್ನು, ನಿಜವಾಗಿಯೂ ಸತ್ಯವನ್ನು ತಿಳಿಯಲು ಬಯಸುವ ಭೌತಿಕವಾದಿಗಳಿಗೆ ಕೆಲವು ಸೂಚನೆಯನ್ನು ಕೊಡಬಹುದು ಅಷ್ಟೆ, ಯಾಕೆಂದರೆ ಇವುಗಳು ಸಾರ್ವತ್ರಿಕವಾಗಿ ಸ್ಥೂಲ ಜಗತ್ತಿನಲ್ಲಿ ತೋರಿಸುವಂಥವುಗಳಲ್ಲ. ಆದರೆ ವ್ಯಯಕ್ತಿಕ ಅನುಭವ ಮಾತ್ರವಾಗಿ ಸಿಗುವವುಗಳು. ಆ ಎಲ್ಲಾ ವ್ಯಯಕ್ತಿಕ ಅನುಭವವನ್ನು ಪಡೆದ ವ್ಯಕ್ತಿಗಳನ್ನು, ನ್ಯಾಯಾಲಯದಲ್ಲಿ ಸಾಕ್ಷಿಗಳನ್ನು ತಂದು ನಿಲ್ಲಿಸುವ ತರ, ತಂದು ಅವರ ಮುಂದೆ ನಿಲ್ಲಿಸಬಹುದು. ನ್ಯಾಯಾಲಯದಲ್ಲಿ ಸಾಕ್ಷಿಗಳ ಸಂಖ್ಯೆ ಹೆಚ್ಚು ಹೆಚ್ಚು ಆದಂತೆ ಅದು ಸತ್ಯ ಎಂದು ನ್ಯಾಯಾಧೀಶರಿಗೆ ಹೆಚ್ಚು ಹೆಚ್ಚು ತಿಳಿಯುವುದು, ಅದೇ ರೀತಿ ಇಲ್ಲಿಯೂ ಹೆಚ್ಚು ಹೆಚ್ಚು ನಿಜವಾದ ಸಾಕ್ಷಿಗಳು ಸಿಕ್ಕಿದಲ್ಲಿ ಅದನ್ನು ಸತ್ಯವೆಂದು ತೋರಿಸಿಕೊಡಬಹುದು, ಅಷ್ಟೆ.

- ಸತ್ತ ಆತ್ಮಗಳು ಇವೆ ಮತ್ತು ದೆವ್ವಗಳು ಇವೆ ಎಂಬುವುದಕ್ಕೆ ಹಲವು ಧರ್ಮಗಳು ಮತ್ತು ಅವುಗಳ ಗ್ರಂಥಗಳ ಸಾಕ್ಷ್ಯಗಳಿವೆ.
- ಹಿಂದಿನ ಕಾಲದಿಂದಲೇ ನೋಡಿದಲ್ಲಿ, ಕೋಟಿಗಟ್ಟಲೆ, ಸಾಮಾನ್ಯ ಮಾನವರ ಹಾಗೂ ಮಹಾತ್ಮರ ಅನುಭವವೂ ಸಾಕ್ಷಿಗಳಾಗಿ ಇವೆ. ಇವರಲ್ಲಿ ಸುಳ್ಳನ್ನೇ ಹೇಳದ ಅತ್ಯಂತ ಸತ್ಯ ನಿಷ್ಠರಾದ ಮಹಾತ್ಮರು ಸೇರಿರುವರು ಎಂಬುವುದು ಇನ್ನೊಂದು ಸತ್ಯವಾಗಿದೆ. ಇಂಥ ಸತ್ಯ ನಿಷ್ಠರು ಬರೇ ಸತ್ತ ನಂತರದ ಅಸ್ತಿತ್ವದ ಬಗ್ಗೆ ಮಾತ್ರ ಸುಳ್ಳು ಹೇಳುವರೇ?
- ದೇವರನ್ನೇ ನಂಬದ ಧರ್ಮಗಳೂ, ಸತ್ತ ನಂತರದಲ್ಲಿ ಮನುಷ್ಯನ ಜೀವಾತ್ಮದ ಅಸ್ತಿತ್ವವನ್ನು ಒಪ್ಪುವವು.

- ವೈಜ್ಞಾನಿಕ ರೀತಿಯದ್ದೆಂದೇ ಹೇಳಲ್ಪಡುವ ದರ್ಶನ ಶಾಸ್ತ್ರಗಳೂ ಸೃಷ್ಟಿಕರ್ತ ದೇವರನ್ನು ಒಪ್ಪದಿದ್ದರೂ ಸತ್ತ ನಂತರದ ಆತ್ಮದ ಅಸ್ತಿತ್ವವನ್ನು ಒಪ್ಪುವವು.

ಇಷ್ಟೆಲ್ಲಾ ಕೋಟಿಗಟ್ಟಲೆ ಸಾಕ್ಷ್ಯಾಧಾರಗಳು ಇರುವಾಗ ಮತ್ತು ಅದನ್ನು ಒಂದೇ ರೀತಿಯಲ್ಲಿ ಎತ್ತಿ ತೋರಿಸುವ ಗ್ರಂಥಗಳು ಇರುವಾಗ, ಇತ್ತ, ಆತ್ಮ ಮತ್ತು ದೆವ್ವಗಳು ಇಲ್ಲವೆಂದು ಹೇಳುವವರಿಗೆ, ತಮಗೆ ಸತ್ತ ಆತ್ಮದ ಮತ್ತು ದೆವ್ವಗಳ ಅನುಭವ ಆಗಿಲ್ಲ ಎಂಬ ಒಂದು ವಾದ {ಒಪ್ಪಿಕೊಳ್ಳುವಿಕೆ} ಮಾತ್ರ ಇರುವುದು. ಅಂದರೆ, ಸಾಮಾನ್ಯ ಜನರಿಗೆಲ್ಲರಿಗೂ ದೆವ್ವಗಳ ಅನುಭವವಾಗುವುದಿಲ್ಲ [ಅದು

ವ್ಯಯಕ್ತಿಕ] ಎಂದು ಈ ಜಗತ್ತಿನಲ್ಲಿ ಎಲ್ಲರಿಗೂ ತಿಳಿದಿದ್ದರೂ ಇವರು ಮಾತ್ರ ತಮಗೆ ಆ ಅನುಭವ ಆಗಿಲ್ಲವೆಂದು ಆ ಕೊರತೆಯನ್ನು ಮತ್ತೂ ಮತ್ತೂ ಹೇಳುತ್ತಿರುವರು ಎಂದು ಮಾತ್ರ ಅವರ ವಾದದಿಂದ ನಮಗೆ ತಿಳಿದುಬರುವುದು.

# ಜಾತಿ ಪರ ವಾದ

ಜಾತಿಯನ್ನು ಹೊಗಳುವುದು ಮತ್ತು ಕೊಳೆತ ವಸ್ತುವನ್ನು ಹೊಗಳುವುದು ಒಂದೇ ಆಗುವುದು. ಯಾಕೆಂದರೆ ಮಹಾತ್ಮರು ಕಣ್ಣೀರಿಟ್ಟು ಹೇಳಿದ ಮಾತುಗಳನ್ನು ಕಸದಂತೆ ದೂರ ಎಸೆದು, ಸ್ವಾರ್ಥದ ಮಹಾ ಪಾಪದ ದುರ್ವಾಸನೆಯನ್ನು ಮಲ್ಲಿಗೆಯ ಸುಗಂಧಕ್ಕೆ ಹೋಲಿಸಿ ಜನರನ್ನು ಮೋಸ ಮಾಡಿದ ಆ ವಾಮ ಬುದ್ಧಿಯು ಈ ಜಾತಿಯಾಗುವುದು. ನಂಬಿಕೆಗಳನ್ನು ಉಪಯೋಗಿಸಿ ಮುಗ್ಧ ಜನರನ್ನು ಸಾವಿರಾರು ವರುಷಗಳಷ್ಟು ಅತಿ ನೀಚವಾಗಿ ಶೋಷಿಸಿದ ಭೀಕರ ವರ್ತನೆಯ ವರ್ಣತಂತುಗಳು ಅವುಗಳಲ್ಲಿ ಅಡಕವಾಗಿವೆ. ಮೇಲು, ಕೀಳು ವರ್ಗಗಳೆಂದು ಭೇದವಿಲ್ಲದೆ ಈ ಭೂಮಿಯ ಎಲ್ಲರೂ ಆಂಗ್ಲರ ರಾಜಕೀಯ "ಶೋಷಣೆ"ಯನ್ನು ತೆಗಳುತ್ತಿರುವಾಗ, ಮತ್ತು ಆ ಶೋಷಣೆಯಿಂದ ದೂರವಾಗಲು, ಅವರನ್ನು ಈ ದೇಶದಿಂದ ದೂರ ಮಾಡಲು ಲಕ್ಷಗಟ್ಟಲೆ ಜನ ಮುಂದೆ ಬಂದು, ಸಾವಿರಾರು ಜನ ಜೀವವನ್ನೇ ದಾನ ಎರೆದಾಗ, ಇತ್ತ ದೇವರ, ಧರ್ಮದ ಹೆಸರಲ್ಲಿ, ಅತ್ಯಂತ ಹೀನವಾಗಿ 'ಶೋಷಣೆ' ಮಾಡಿದ ಈ ಜಾತಿಗಳನ್ನು ಮಾತ್ರ ಜನರು ತಲೆಯಲ್ಲಿ ಇಂದೂ ಹೊತ್ತುಕೊಂಡಿದ್ದಾರೆ, ಹೊಗಳುತ್ತಿದ್ದಾರೆ, ಮಾತ್ರವಲ್ಲ ಅವುಗಳಲ್ಲಿ ರಾಜಕೀಯದ ಆಟವನ್ನೂ ಆಡುತ್ತಿದ್ದಾರೆ. ಅಯ್ಯೋ, ಇದೆಂಥ ವೈಪರೀತ್ಯ!!

ತಾನು ಶೋಷಿಸಲ್ಪಡಬಾರದು ಮತ್ತು ತಮ್ಮವರು ಶೋಷಿಸಲ್ಪಡಬಾರದು ಎಂಬ ಬಯಕೆಯು ಎಲ್ಲಾ ಮಾನವನಿಗೂ ಇರುವುದು, ಆ ಶೋಷಿಸಲ್ಪಡುವವನ ಸ್ಥಾನದಲ್ಲಿ ನಾವು ನಿಂತು, ಹಿಂದೆ ಏನೆಲ್ಲಾ ತರದಲ್ಲಿ, ಜಾತಿ ಹಿನ್ನೆಲೆಯಲ್ಲಿ, ಶೋಷಿಸಲ್ಪಟ್ಟಿದೆ, ಅವೆಲ್ಲವನ್ನೂ ನಾವು ಮಾನಸಿಕವಾಗಿ ಅನುಭವಿಸಿ ನೋಡಿದಾಗ ಮಾತ್ರ ಹೃದಯ ಹಿಂಡಿದ ಅನುಭವವಾಗುವುದು. ಹಾಗೆ ಮಾಡದವನು 'ಅದು ಆತನ ಹಿಂದಿನ ಜನ್ಮದ ಕರ್ಮ' ಅಥವಾ 'ತಲೆ ಬರಹ' ಎಂಬ ಹಿಂದಿನವರ ಆ ಕ್ರೌರ್ಯದ ಮಾತನ್ನೇ ಆವರ್ತಿಸುವನು! ಮಾನವನು ಆ ಶೋಷಣೆಯನ್ನು ತಾಳಲಾರದೆ, ಅಂದು, ತಾನು ತನ್ನ ಕಣ್ಣೀರಲ್ಲೇ ಹರಿದು ದುಃಖದ ಸಾಗರವನ್ನು ಸೇರುವಾಗ, ಅಂದಿನ ಆ ಸಮಾಜದಲ್ಲಿ ಧರ್ಮ ಎಲ್ಲಿತ್ತು? ಅದೇ ರೀತಿ ಇಂದೂ ಹಲವು ಕಡೆಗಳಲ್ಲಿ ಅವುಗಳ ಅಸ್ಥಿ ಪಂಜರಗಳು ಒಡಾಡುತ್ತಿರುವಾಗ, ಇಂದೂ, ಧರ್ಮ ಎಲ್ಲಿದೆ ಎಂಬ ಪ್ರಶ್ನೆಗೆ ನಾವು ಉತ್ತರಿಸಬೇಕಾಗುವುದು.

ಇನ್ನಾದರೂ, ಈ ಜಾತಿಗಳಿಗೆ ತಿಲಾಂಜಲಿ ಕೊಡುವಲ್ಲಿ ಜನರು ಪ್ರಬುದ್ಧರಾಗುವರು ಎಂದು ಆಶಿಸೋಣ. ಈ ಮಹತ್ ಕಾರ್ಯವನ್ನು ನಿರ್ವಹಿಸಲು ನಾವು ಮೊದಲಿಗೆ ಮಾನವೀಯತೆಯನ್ನು ಬೆಳೆಸುತ್ತಾ ಮಹಾತ್ಮರಾಗೋಣ ಮತ್ತು ಈ ನೀಚ ಜಾತಿ ಭ್ರಮೆಯೆಂಬ ಕಗ್ಗತ್ತಲೆಯನ್ನು, ಎಲ್ಲರ ಮನದಿಂದಲೂ, ಆ ಸತ್ಯದ ದಿವ್ಯ ಬೆಳಕಿನ ಸಹಾಯದಿಂದ ಹೋಗಲಾಡಿಸೋಣ.

# ಧರ್ಮದ ಸಾರವೇ ಧರ್ಮ

ನಾನು ನನ್ನ ಮಾತುಗಳಿಂದ ಏನನ್ನು ಹೊಸತಾಗಿ ಸೃಷ್ಟಿಸಲು ಬಯಸುವುದಿಲ್ಲ ಬದಲಿಗೆ ಆ ಪ್ರಾಚೀನ ವಾಮಾಚಾರದ ಕರಾಳ ಹಸ್ತದಿಂದ ಈ ಜಗತ್ತು ಹೇಗೆ ರಕ್ಷಣೆಯನ್ನು ಪಡೆಯಬಹುದು ಎಂದು ಮಾತ್ರ ಚಿಂತಿಸುವೆನು. ಇನ್ನು ಧರ್ಮದ ಸಾರವೇ ಆ ನಿಜವಾದ ಧರ್ಮವಾಗುವುದು ಎಂಬುವುದರ ಬಗ್ಗೆ ಎಲ್ಲಾ ಧರ್ಮಗಳ ಪಂಡಿತರುಗಳ ಅಭಿಪ್ರಾಯವನ್ನು ಕೇಳೋಣ.

ಪ್ರಶ್ನೆ- ಧರ್ಮಗಳ ಪಂಡಿತರುಗಳೇ, ನಿಮ್ಮ ನಿಮ್ಮ ಧರ್ಮವು ಯಾವುದಕ್ಕಾಗಿದೆ?

ಉತ್ತರ- [ಎಲ್ಲಾ ಪಂಡಿತರುಗಳು ಒಕ್ಕೊರಳಲ್ಲಿ] ಶಾಂತಿಗಾಗಿ.

ಪ್ರಶ್ನೆ- ಧರ್ಮಗಳ ಪಂಡಿತರುಗಳೇ, ನಿಮ್ಮ ನಿಮ್ಮ ಧರ್ಮ ಮತ್ತು ದೇವರುಗಳು ಇನ್ನೊಬ್ಬರನ್ನು ನೋಯಿಸಬೇಕು ಎಂದಿದೆಯಾ?

ಉತ್ತರ- [ಎಲ್ಲಾ ಪಂಡಿತರುಗಳು ಒಕ್ಕೊರಳಲ್ಲಿ] ಇಲ್ಲವೇ ಇಲ್ಲ.

ಪ್ರಶ್ನೆ- ಧರ್ಮಗಳ ಪಂಡಿತರುಗಳೇ, ನಿಮ್ಮ ನಿಮ್ಮ ದೇವರು ಮತ್ತು ಧರ್ಮಗಳು ಸುಳ್ಳು, ವಂಚನೆ, ದ್ವೇಷ, ಅನೈತಿಕ ಜೀವನ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದಾ?

ಉತ್ತರ- [ಎಲ್ಲಾ ಪಂಡಿತರುಗಳು ಒಕ್ಕೊರಳಲ್ಲಿ] ಇಲ್ಲ, ಅದೆಂದಿಗೂ ಸಾಧ್ಯವಾಗದು.

ಪ್ರಶ್ನೆ- ಧರ್ಮಗಳ ಪಂಡಿತರುಗಳೇ, ನಿಮ್ಮ ನಿಮ್ಮ ದೇವರು ಸುಳ್ಳ, ಕ್ರೂರಿ, ಅನೈತಿಕ ವ್ಯಕ್ತಿ ಎಂದು ಯಾರಾದರೂ ಅಂದರೆ ನೀವು ಒಪ್ಪುವಿರೇ?

ಉತ್ತರ- [ಎಲ್ಲರೂ ಒಕ್ಕೊರಳಲ್ಲಿ] ಅದನ್ನು ಎಂದಿಗೂ ನಾವು ಒಪ್ಪಲಾರೆವು. ಆತನು ಕರುಣಾಮಯನು.

ಇಷ್ಟರಲ್ಲಿ ಧರ್ಮ, ಮತ್ತು ದೇವರ ಸ್ವಭಾವ ಮತ್ತು ಜನರಿಂದ ಧರ್ಮಗಳು ಏನನ್ನು ಬಯಸುವವು ಎಂಬುವುದು ಸ್ಪಷ್ಟವಾಯಿತು, ಮಾತ್ರವಲ್ಲ, ಅವುಗಳನ್ನು ಎಲ್ಲರೂ ಒಕ್ಕೊರಳಲ್ಲಿ ಒಪ್ಪುವರು. ಅಚ್ಚರಿ ಎಂದರೆ, ಇದಲ್ಲದೆ ಇನ್ನು ಧರ್ಮವಾಗಿ ಬೇರೆ ಏನೂ ಉಳಿದಿಲ್ಲ ಮತ್ತು ಆ 'ಸಾರ' ಹೊರತು ಬೇರೆ ರೀತಿಯಲ್ಲಿ ಧರ್ಮವನ್ನು ಅವರು ಒಪ್ಪಲಾರರು ಎಂದೂ ಸ್ಪಷ್ಟವಾಯಿತು. ಹಾಗಿದ್ದರೆ, ಇನ್ನಿರುವುದೆಲ್ಲಾ ಒಂದೊಂದು ಊರ ನಂಬಿಕೆ, ಆಚಾರಗಳು ಮಾತ್ರ!! ಅವುಗಳು ಧರ್ಮವಲ್ಲ, ಖಂಡಿತಾ ಧರ್ಮವಲ್ಲ!! ಈಗಲಾದರೂ ಧರ್ಮ ಮತ್ತು ದೇವಸಂಕಲ್ಪಗಳು ಸಾರ್ವತ್ರಿಕ ಎಂದು ತಿಳಿದುಕೊಳ್ಳಬಹುದು. ಇದನ್ನು ಪ್ರಾಚೀನ ಕಾಲದಲ್ಲೇ ಮಹಾತ್ಮರು ಜನರಿಗೆ ಉಪದೇಶಿಸಿದ್ದರು. ಕಾಲಾನಂತರದಲ್ಲಿ ಬಂದ ಪರಂಪರೆ, ಪಂಥ, ಧರ್ಮಗಳು ಈ ಸಾರ್ವತ್ರಿಕ ಧರ್ಮವನ್ನು ಆಚಾರಗಳಿಂದಲೇ ತುಂಬಿದ ಗೋಣಿಚೀಲದೊಳಗೆ ಎಲ್ಲೋ ಮೂಲೆಯಲ್ಲಿ ಇರಿಸಿ 'ನಮ್ಮ ಧರ್ಮ ಬೇರೆ' 'ನಮ್ಮಧರ್ಮ ನಿಮ್ಮಕ್ಕಿಂತ ಶ್ರೇಷ್ಠ' ಎಂದು ಆಚಾರಗಳನ್ನೇ ಆ ಧರ್ಮದ ಬದಲು ಎಲ್ಲರಿಗೂ

ತೋರಿಸುತ್ತಾ, ಅವುಗಳ ಮೇಲೆಯೇ ಸಾವಿರಾರು ವರುಷಗಳಿಂದ ವಾದ ಮಾಡುತ್ತಾ ಬಂದಿವೆ! ಶಾಂತಿಯನ್ನು ಜಗತ್ತಿಗೆ ತರುವ ಬದಲು, ಪ್ರೀತಿಯನ್ನು ಜಗತ್ತಲ್ಲಿ ಹೆಚ್ಚಿಸುವ ಬದಲು, ಎಲ್ಲರೂ ಒಂದಾಗುವ ಬದಲು, ತಮ್ಮೊಳಗೆ ಹೊಡೆದಾಡಿ ರಕ್ತಪಾತ ಮಾಡಿ ಈ ಭೂಮಿಯನ್ನು ಭೀಕರ ನರಕವನ್ನಾಗಿ ಮಾಡಿವೆ!!

ಆ ಎಲ್ಲಾ ಧರ್ಮ ಪಂಡಿತರುಗಳು ಮೇಲಿನ ಮಾತಿನಲ್ಲಿ ಒಪ್ಪಿಕೊಂಡ ಆ 'ನಿಜ ಧರ್ಮ'ವನ್ನು ಮಾತ್ರ ನಾನು ಹೇಳುವುದು ಅದಲ್ಲದೆ, ಹೊಸತಾಗಿ ಏನೂ ಹೇಳಿಲ್ಲ. ಆಚಾರಗಳಿಗೆ ಇನ್ನಾದರೂ ಕಡಿಮೆ ಒತ್ತು ಕೊಟ್ಟು, ಆ ಸಾರ್ವತ್ರಿಕ ಧರ್ಮವನ್ನು[ಧರ್ಮದ ಸಾರ ಭಾಗವನ್ನು] ಎತ್ತಿ ಹೇಳಿದರೆ ನಮಗೆ ಈ ಜಗತ್ತಿಗೇ ಶಾಂತಿಯ ಆ ಸತ್ಯ ಯುಗವನ್ನೇ ತರಲು ಸಾಧ್ಯವಾಗಬಹುದು. ಇದನ್ನು ಮಾತ್ರ ನಾನು ಉದ್ದೇಶಿಸಿರುವುದು ಎಂದು ನೆನಪಿಡಬೇಕಾಗಿದೆ. ನಮಗೆ ಆ ಮುಂಬರುವ ಆಪತ್ತಿನಿಂದ ರಕ್ಷಣೆಯನ್ನು ಪಡೆಯಲೂ ಇದುವೇ ಆ ಏಕೈಕ ಪರಿಹಾರವಾಗುವುದು ಎಂಬುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

# ಜಗತ್ತಿಗೆ ಆಧ್ಯಾತ್ಮ ಮತ್ತು ಧಾರ್ಮಿಕ ಹೊಸತನದ ಅಗತ್ಯತೆ

ಎಲ್ಲಾ ಧಾರ್ಮಿಕತೆಯೂ ತಮ್ಮ ಧರ್ಮದಲ್ಲೇ ಇರುವುದು ಮತ್ತು ಇನ್ನು ಧರ್ಮದ ವಿಚಾರವಾಗಿ ಯಾರೂ ಹೊಸತಾಗಿ ಹೇಳಬೇಕಾಗಿಲ್ಲ, ಎಂದು ಎಲ್ಲಾ ಧರ್ಮದ ಧರ್ಮಾಂಧ ಪಂಡಿತರುಗಳು ಹೇಳುವುದಿದೆ. ಹೊಸತನವೆಂದರೆ ಏನು, ಹೊಸ ಬಣ್ಣದ ಬಟ್ಟೆಯ ತರವೇ? ಇದುವೇ ಹೆಚ್ಚಿನ ಜನರಲ್ಲಿರುವ ಆಧ್ಯಾತ್ಮದ ಮತ್ತು ಧರ್ಮದ ಬಗೆಗಿನ ತಪ್ಪು ತಿಳುವಳಿಕೆಯಾಗಿದೆ! ಸನ್ಯಾಸಿಗಳು ತಮ್ಮ ತಮ್ಮ ಮೋಕ್ಷಕ್ಕಾಗಿ ಮಾತ್ರ ಸೀಮಿತವಾಗಿರುವವರು [ಸೀಮಿತವಾಗಿರಬೇಕಾದವರು ಎಂದು ಶಾಸ್ತ್ರಗಳು ವಿಧಿಸಿವೆ], ಯೋಗಿಗಳಲ್ಲಿ ಅಪರೂಪಕ್ಕೆ ಮೋಕ್ಷಾರ್ಥಿಗಳು ಇರುವರು, ಇನ್ನು ಅವರಲ್ಲಿ ಹೆಚ್ಚಿನವರೂ ಏನಾದರೂ ಒಂದು ಸಿದ್ದಿಯನ್ನು ಅಥವಾ ಉತ್ತಮ ಅರೋಗ್ಯವನ್ನು ಪಡೆಯಲಿರುವ ಮಾರ್ಗದಲ್ಲಿ ತಲ್ಲೀನರಾದವರು ಮತ್ತು ಅದಕ್ಕೆ ಹೆಚ್ಚು ಮಹತ್ವವನ್ನು ಕೊಡುವವರು. ಇದೆಲ್ಲಾ ನಿಮಗೆ ತಿಳಿದಿದೆ. ಇದು ಯಾವುದೂ ತಪ್ಪು ಎಂದು ಹೇಳುವುದಿಲ್ಲ. ಯಾಕೆಂದರೆ ಅದು ಮಾನವನ ಜೀವನದ ತೊಂದರೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸುವಲ್ಲಿ ಸಹಾಯಕವಾಗುವುದು ಮಾತ್ರವಲ್ಲ ಅದು ಅವರವರ ಅಭಿರುಚಿಯನ್ನು ಹೊಂದಿಕೊಂಡಿರುವುದು. ಆದರೆ ಇಲ್ಲಿ ಒಂದು ವಿಚಾರವನ್ನು ನಾವು ತಿಳಿಯಬೇಕಾಗಿದೆ. ಅದೇನೆಂದರೆ ಜಗತ್ತಿನಲ್ಲಿ 'ಧರ್ಮ' ಎಂಬ ಪದವನ್ನು ಉಪಯೋಗಿಸಿದಲ್ಲಿ, ಅಲ್ಲಿ ಇವುಗಳಿಗೆ ಯಾವುದಕ್ಕೂ ನೇರವಾದ ಸ್ಥಾನವೇ ಇರುವುದಿಲ್ಲ. ಮೇಲಿನ ಆ ಕ್ರಿಯೆಗಳಿಂದ ಮತ್ತು ಸಾಧನೆಗಳಿಂದ ಈ ಜಗತ್ತಲ್ಲಿ ಧರ್ಮವನ್ನು ಬೆಳೆಸಲು ಸಾಧ್ಯವಾಗದು. ಅದಕ್ಕೆ ನೇರವಾಗಿ ಸಂಬಂಧಿಸಿದ ಒಂದು ಬೇರೆ ಮನುಷ್ಯ ವರ್ಗವಿದೆ, ಅವರನ್ನು ಕರೆಯೋಣ, ಅವರೇ ಧರ್ಮದ ನಿಜವಾದ ರಕ್ಷಕರು, ಅವರು ಬೇರೆ ಯಾರೂ ಅಲ್ಲ, ಅವರೇ, ನಾವು ಮೊದಲಿನಿಂದಲೂ ಮಹತ್ವದ ಸ್ಥಾನವನ್ನು ಕೊಟ್ಟು ಗೌರವಿಸುವ ಆ ಮಹಾತ್ಮರುಗಳಾಗಿರುವರು!! ಇವರಿಲ್ಲದ ದೇಶ ಸ್ಮಶಾನಕ್ಕೆ ಸಮ. ಇವರನ್ನು ಸೃಷ್ಟಿಸದ ಧರ್ಮ, ಅದು ಅನುಷ್ಠಾನ ಹೀನ ಧರ್ಮವಾಗುವುದು. ಇವರಿಲ್ಲದಲ್ಲಿ, ಅಸುರ ಸಂತತಿಗಳು ಬೆಳೆವವು! ಇವರಿಲ್ಲದಲ್ಲಿ ನೈತಿಕತೆಯ ಅಂತ್ಯವಾಗುವುದು! ಹೇ ಧರ್ಮವೇ, ನಿನ್ನುಸಿರು ನಿಜವಾಗಿಯೂ ಇಲ್ಲಿದೆ! ಅವರ ಮನಸ್ಸನ್ನು ಸಾಮಾನ್ಯರ ಮನಸ್ಸಿನೊಂದಿಗೆ ಹೋಲಿಸಲು ಸಾಧ್ಯವಾಗದು ಎಂಬುವುದನ್ನು ನಾವು ಮೊದಲು ನೆನಪಿಡಬೇಕಾಗಿದೆ, ಯಾಕೆಂದರೆ ಒಬ್ಬ ಸ್ವಾರ್ಥಿಯ ಮನಸ್ಸು ಮಹಾತ್ಮನ ಮನಸ್ಸಿನ ಅಗಾಧತೆಯನ್ನು ಅರಿಯಲು ಶಕ್ತವಾಗುವುದಿಲ್ಲ. ಕುಡುಕನಿಗೆ ಅವನ ಸ್ವಭಾವವೇ ಸರಿಯಾಗಿ ಮತ್ತು ಆನಂದದಾಯಕವಾಗಿ ಕಾಣಿಸುವಂತೆ, ಪ್ರತಿಯೊಬ್ಬನೂ ತನ್ನ ಧಾರ್ಮಿಕ ಬೆಳವಣಿಗೆಯ ಯಾವುದೋ ಒಂದು ಹಂತದಲ್ಲಿದ್ದು, ಅಲ್ಲಿಂದ ಈ ಜಗತ್ತನ್ನು ಇಣುಕಿ ನೋಡಿ ಬೆಲೆಕಟ್ಟಲು ಪ್ರಯತ್ನಿಸುವನು ಅಷ್ಟೆ.

ನಾವು ರೋಗದಿಂದ ಗುಣಮುಖರಾದ ನಂತರವೂ ಮದ್ದನ್ನು ಸೇವಿಸುವುದಿಲ್ಲ. ಅದೇ ರೀತಿ ಇನ್ನೊಂದು ಉದಾಹರಣೆಯನ್ನು ಹೇಳುವುದಾದರೆ, ನಮ್ಮ ತಲೆ ನೋವು ಹೋದ ನಂತರವೂ ನಾವು ನಮ್ಮ ಹಾಸಿಗೆಯಲ್ಲೇ ಮಲಗಿಕೊಂಡಿರುವುದಿಲ್ಲ, ಯಾಕೆಂದರೆ ಅಲ್ಲಿ ಪೂರ್ತಿಯಾಗಿ ನಮಗೆ ನಮ್ಮ ಸಮಸ್ಯೆ ಪರಿಹಾರವಾಗಿದೆ. ಅದೇ ರೀತಿ ನಮ್ಮ ಜಗತ್ತಿನಲ್ಲಿ ಅಥವಾ ಸಮಾಜದಲ್ಲಿ ಸತ್ಯ, ಪ್ರೀತಿ, ನೀತಿಯಿಂದೊಡಗೂಡಿದ ಆ ಆನಂದದ ಧಾರ್ಮಿಕ ಜೀವನವು ಯಾವಾಗ ಹಬ್ಬಿ ಹಸಿರಾಗಿ

ಕಂಗೊಳಿಸುವುದೋ, ಅಂದು ಮಾತ್ರ ನಮ್ಮ ನಮ್ಮ ಧರ್ಮವು ಪರಿಪೂರ್ಣವಾಗುವುದು. ಅಂದರೆ, ಆ ರೀತಿಯಲ್ಲಿ ಧರ್ಮವು ಪರಿಪೂರ್ಣವಾದಲ್ಲಿ, ಅದರ ನಂತರ ನಮಗೆ ಹೊಸ ರೀತಿಯೋ ಅಥವಾ ಇನ್ನಾವುದೋ ಬೇಕಾಗುವುದಿಲ್ಲ. ಆದರೆ ಶೋಷಣೆ, ಹಿಂಸೆ, ರಕ್ತಪಾತಗಳು ಧರ್ಮಗಳ ಹಿನ್ನೆಲೆಯಲ್ಲಿ ಎಲ್ಲಿಯ ತನಕ ಇರುವುದೋ ಅಲ್ಲಿಯ ತನಕ ನಮಗೆ ಅದನ್ನು ಸರಿ ಪಡಿಸಲಿರುವ ಪ್ರಯತ್ನವೂ ಬೇಕಾಗುವುದು. ಅದಕ್ಕೆ ನಮಗೆ ಎಲ್ಲಕ್ಕಿಂತಲೂ ಅನಿವಾರ್ಯವಾಗುವುದು ಆ ನಮ್ಮ ಮಹಾತ್ಮರುಗಳಾಗಿರುವರು. ಇವರ ಸಂಖ್ಯೆಯು ಹೆಚ್ಚುತ್ತಾ ಬಂದಲ್ಲಿ ಮಾತ್ರ ಜಗತ್ತಿಗೆ ಧರ್ಮದ ತಿರುಳು ದೊರಕುವುದು, ಇಲ್ಲಾವಾದಲ್ಲಿ, ಬರೇ ಧರ್ಮದ ರಸರಹಿತ ಗೊಜ್ಜು ಮಾತ್ರ ಜಗಿಯಬೇಕಾಗಿ ಬಂದು, ಈ ಜಗತ್ತು, ಅಂಧಾಚಾರಗಳೊಂದಿಗೆ ಭಯಾನಕ ಕರ್ಮಗಳಲ್ಲಿ ತನ್ನನ್ನು ತಾನು ಮತ್ತೂ ಮತ್ತೂ ತೊಡಗಿಸಿಕೊಳ್ಳುತ್ತಾ ಮುಂದುವರಿಯುವುದು!!

ಸತ್ಯಚಿಂತನೆಯ ಮೂಲಕ ಮಾತ್ರ ಮಹಾತ್ಮರ ಸೃಷ್ಟಿ ಸಾಧ್ಯವೆಂಬ ಕಾರಣಕ್ಕೆ, ಈ ಜಗತ್ತಿಗೆ ಇಂದು ಅನಿವಾರ್ಯವಾದುದೇ ಸಾಮೂಹಿಕವಾದ ಸತ್ಯಚಿಂತನೆಯಾಗಿದೆ. ಅದರಿಂದ ಹೃದಯ, ಬುದ್ಧಿ, ಮನಸ್ಸುಗಳು ಪವಿತ್ರವಾಗಿ ಸ್ತ್ರೀ, ಪುರುಷ, ವೃದ್ಧ, ವೃದ್ಧೆ, ಮಕ್ಕಳೆಂದು ಬೇಧವಿಲ್ಲದೆ ಸರ್ವರೂ ತಮ್ಮ ಲೌಕಿಕ ಜೀವನವನ್ನು ಆ ಅದ್ಭುತಕರವಾದ ಶಾಂತಿ, ಆನಂದದಿಂದ ಜೀವಿಸುವಂತಾಗುವುದು! ಇದು ಮಹತ್ವದ ಆದರ್ಶ ಜೀವನವನ್ನು ಜಗತ್ತಿಗೆ ನೀಡುವ ಒಂದು ಮಹತ್ತಾದ ಮತ್ತು ಸರ್ವ ಧರ್ಮ, ಪಂಥಗಳಲ್ಲೂ ಅನುಸರಿಸಬಹುದಾದ ಜೀವನ ರೀತಿಯಾಗಿದೆ. ಅಂದರೆ ಇದುವೇ ಮಹಾತ್ಮರ ಜೀವನ ರೀತಿಯಾಗಿದೆ! ಈ ವಿಶಾಲ ಮನಸ್ಕತೆ ಎಂಬ ಧಾರ್ಮಿಕ ಪರಿಪೂರ್ಣತೆಯನ್ನು ನಾವು ಆದಷ್ಟು ಬೇಗನೆ ಪಡೆದು ಮುಂಬರಲಿರುವ ಆ ಭಯಾನಕ ಪ್ರಾಚೀನ ವಾಮಾಚಾರದ ರಕ್ತಪಾತಗಳ ಸರಮಾಲೆಗಳನ್ನೇ ಎಂದೆಂದಿಗಾಗಿ ಇಲ್ಲವಾಗಿಸಿಬಿಡೋಣ.

# ಪುರಾಣ ಸೃಷ್ಟಿಕರ್ತ ಮತ್ತು ಸ್ವಭಾವ ಸೃಷ್ಟಿಕರ್ತ

ಈ ವಿಷಯವಾಗಿ ವಿವರಣೆಯನ್ನು ಮೊದಲೇ ಕೊಟ್ಟಿದ್ದೇನೆ. ಇನ್ನು, ಉದಾಹರಣೆಯ ಸಹಾಯದಿಂದ ಸ್ಪಷ್ಟಪಡಿಸಲು ಪ್ರಯತ್ನಿಸಬಹುದು. ನಾವು ಯಾರೂ ಮಾವಿನ ಹಣ್ಣನ್ನ ಸೇಬು ಹಣ್ಣು ಎಂದು ಹೇಳುವುದಿಲ್ಲ, ಅದೇ ರೀತಿ ಸೇಬು ಹಣ್ಣನ್ನು ಮಾವಿನ ಹಣ್ಣೆಂದು ಹೇಳುವುದಿಲ್ಲ. ಅದೇ ರೀತಿ, ದೇವರನ್ನು ಸೈತಾನನೆಂದು ಹೇಳುವುದಿಲ್ಲ, ಮತ್ತು ಸೈತಾನನನ್ನು ದೇವರೆಂದೂ ಹೇಳುವುದಿಲ್ಲ. ಇನ್ನು, ಮೇಲಿನ ಉದಾಹರಣೆಯನ್ನೇ ತೆಗೆಯೋಣ. ನಮಗೆ ತೋರಿಸಿ ಕೊಡಲು ಹಣ್ಣುಗಳು ಇಲ್ಲದಿರುವಾಗ, ಆ ಹಣ್ಣನ್ನು ಕಾಣದ ಮತ್ತು ಅದರ ಬಗ್ಗೆ ಗೊತ್ತೇ ಇಲ್ಲದ ಜನರಿಗೆ, ಅವುಗಳ ಪ್ರತ್ಯೇಕತೆಯನ್ನು ತಿಳಿಸಿಕೊಡಲು ನಾವು ಆ ಹಣ್ಣುಗಳ ರೂಪ, ಅವುಗಳ ರುಚಿಯ ಪ್ರತ್ಯೇಕತೆ, ಮತ್ತು ಅದಕ್ಕೆ ಸಂಬಂಧಿಸಿದ ಮರಗಳ ಪ್ರತ್ಯೇಕತೆ, ಇತ್ಯಾದಿ ವಿವರಣೆಯ ಮೂಲಕ ತಿಳಿಸಿಕೊಡಬಹುದು. ಇದೇ ರೀತಿಯಲ್ಲಿ, ಕಣ್ಣಿಗೆ ಕಾಣಿಸದ ಆ ದೇವರು ಮತ್ತು ಸೈತಾನ ತಮ್ಮೊಳಗಿನ ವ್ಯತ್ಯಾಸವನ್ನು ತಿಳಿಸಿಕೊಡಬೇಕಷ್ಟೆ. ಆದರೆ, ಆ ದೇವರ ಪ್ರತ್ಯೇಕತೆಯನ್ನು ತಿಳಿಸಿಕೊಡುವಲ್ಲಿ ಆ ದೇವರ ನಾಮ, ರೂಪ ಯಾವುದೂ ಇಲ್ಲಿ ಪ್ರಯೋಜನಕ್ಕೆ ಬರಲಾರದು! ಇಲ್ಲಿ, ಆ ದೇವರ ಸ್ವಭಾವ ಮತ್ತು ಸೈತಾನನ ಸ್ವಭಾವದ ವ್ಯತ್ಯಾಸವನ್ನು ಹೇಳಿದಲ್ಲಿ ಮಾತ್ರ ಮಾನವನನಿಗೆ ದೇವರು ಮತ್ತು ಸೈತಾನನನ್ನು ಪ್ರತ್ಯೇಕಿಸಿ ತಿಳಿಯಲು ಸಾಧ್ಯವಾಗುವುದು. ಒಬ್ಬ ದುಷ್ಟ, ಪಾಪಿ, ಮತ್ತು ಕ್ರೂರಿಯಾದವನನ್ನು, ಆತನು ದೇವರ ಅವತಾರವೆಂದರೆ ಎಲ್ಲರೂ ನಗುವರು, ಅದೇ ರೀತಿ ಒಬ್ಬ ತ್ಯಾಗಜೀವಿಯಾಗಿ ಜೀವಿಸುವ ಆ ಸಾರ್ವತ್ರಿಕ ಪ್ರೀತಿಯ ಮಹಾತ್ಮ ಅಥವಾ ಹೃದಯವಂತನನ್ನು ಸೈತಾನ ಎಂದರೂ ಎಲ್ಲರೂ ನಗುವರು. ಆದುದರಿಂದ ದೇವರು ಎಂದರೆ ದೇವರ ಸ್ವಭಾವವೆಂದೂ ಮತ್ತು ಸೈತಾನ ಎಂದರೆ ಸೈತಾನನ ಸ್ವಭಾವವೆಂದೂ ಇಲ್ಲಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಈ ರೀತಿ 'ದೇವರ ಸ್ವಭಾವವೇ ದೇವರು' ಎಂಬ ಹಿನ್ನೆಲೆಯಲ್ಲಿ, ನಮಗೆ ದೇವರು ದೇವರಾಗಿಯೇ ಸಿಗುವನು ಮತ್ತು ಸೈತಾನ ಸೈತಾನನಾಗಿಯೇ ಸಿಗುವನು. ಸೈತಾನನಿಗೂ ಅದನ್ನು ಮೋಸ ಮಾಡಲು ಸಾಧ್ಯವಾಗಲಾರದು! ಆದುದರಿಂದ ಆ ಸೃಷ್ಟಿಕರ್ತ ದೇವರನ್ನು ವ್ಯಕ್ತಿಯಾಗಿ ಬಣ್ಣಿಸುವಾಗ, ಆತನು ಸ್ವಭಾವ-ಸೃಷ್ಟಿಕರ್ತನಾದಲ್ಲಿ, ಆತನು ಸರ್ವರಿಗೂ, ಎಂದೆಂದಿಗೂ ದೇವರಾಗಿಯೇ ಸಿಗುವನು ಮತ್ತು ಆತನನ್ನು ಯಾರಿಂದಲೂ ಅದಲುಬದಲು ಮಾಡಿ ತೋರಿಸಿ ಈ ಜಗತ್ತಲ್ಲಿ ಶೋಷಣೆ, ಹಿಂಸೆ, ರಕ್ತಪಾತವನ್ನು ಮಾಡಿಸಲೂ ಸಾಧ್ಯವಾಗದು ಎಂಬುವುದೂ ಸತ್ಯವಾಗುವುದು. ಹೀಗಾದಲ್ಲಿ, ಪ್ರಾಚೀನ ವಾಮಾಚಾರವೂ ತನಗೆ ಏನೂ ಮಾಡಲಾಗದೆ ಸೋತು ಹೋಗುವುದು!

# ದೇವರ ಮತ್ತು ಧರ್ಮದ ಅತ್ಯಂತ ಶ್ರೇಷ್ಠ ಗುರಿ

ಯುದ್ಧವಿಲ್ಲದ [ಪ್ರೀತಿಯ] ಜಗತ್ತು, ಮತ್ತು ನೈತಿಕತೆಯ ಜೀವನವನ್ನು ನಡೆಸುವ ಜಗತ್ತು, ಎಂಬವುಗಳೇ ದೇವರು ಮತ್ತು ಧರ್ಮದ ಪರಮ ಶ್ರೇಷ್ಠ ಗುರಿಗಳಾಗಿವೆ ಎಂಬುವುದರಲ್ಲಿ ಸಂಶಯ ಇರಲಾರದು. ಮೊದಲೇ ವಿವರಿಸಿರುವ ಆ ಧರ್ಮದ ಸಾರಕ್ಕೆ ಹೆಚ್ಚು ಒತ್ತು ಕೊಟ್ಟಲ್ಲಿ ಅದನ್ನು ಮಾನವರಿಗೆ ಪಡೆಯಬಹುದಾಗಿದೆ. ಈ ರೀತಿಯಲ್ಲಿ ಜೀವಿಸಲು ಕಠಿಣ ಪರಿಶ್ರಮ ಏನೂ ಇಲ್ಲ, ಬರೇ "ನಾವು, ನಾವು" ಎಂಬ ಭ್ರಮೆಯನ್ನು ಮಾತ್ರ ದೂರ ಮಾಡಿದರೆ ಸಾಕಾಗುವುದು. ನಾವು ಮಾತ್ರ ಈ ಭೂಮಿಯಲ್ಲಿ ಇದ್ದಲ್ಲಿ ಶಾಂತಿ ಬರುವುದೆಂದು ತಿಳಿದಿರೇನು? ಅದು ಒಂದು ಭ್ರಮೆ ಮಾತ್ರ!! ನಾವು ಮಾತ್ರವಾಗಿರುವ ಒಂದು ಕುಟುಂಬದೊಳಗೆ ಶಾಂತಿ ಇದೆಯೇ? ಇಲ್ಲ, ಇನ್ನು, ಈ ಜಗತ್ತಲ್ಲಿ ತಮ್ಮ ಒಂದೇ ಧರ್ಮ ಮಾತ್ರ ಇದ್ದಲ್ಲಿ ಈ ಜಗತ್ತಿನಲ್ಲಿ ಶಾಂತಿಯನ್ನು ಅದು ಹರಿಸುವುದೇ? ಎಂದಿಗೂ ಇಲ್ಲ. ಅಲ್ಲಿ ಹಲವು ಪಂಥ, ಸಂಪ್ರದಾಯಗಳು ಉಂಟಾಗಿ ಅವು ತಮ್ಮೊಳಗೆ ಹೊಡೆದಾಡಿ ರಕ್ತಪಾತ ಮಾಡುವವು! ಮಾತ್ರವಲ್ಲ, ಈ ಜಗತ್ತೆಲ್ಲಾ ಒಂದೇ ಧರ್ಮ ಅಥವಾ ಪಂಥವಾಗಬೇಕೆಂದು ಯಾರು ಆಸೆ ಪಟ್ಟರೂ ಅದು ನಡೆಯಲಾರದು. ಯಾಕೆಂದರೆ ಅದು ಇದುವರೆಗೂ ನಡೆದಿಲ್ಲ! ಇನ್ನು, ಆ ಒಂದು ಮುಖ್ಯ ವಿಷಯವನ್ನೂ ಅದರೊಂದಿಗೆ ಸೇರಿಸಿ ಹೇಳುವೆನು. ಅದೇನೆಂದರೆ, ಆ ಪ್ರಾಚೀನ ವಾಮಾಚಾರ ಅದನ್ನು ನಡೆಸಿಲ್ಲ ಎಂದು, ಮತ್ತು ಅದು ಎಂದಿಗೂ ಅದನ್ನು ನಡೆಸುವುದೂ ಇಲ್ಲ, ನೆನಪಿಡಿರಿ!! ಆದರೆ, ಈ ಜಗತ್ತನ್ನೆಲ್ಲಾ ತಮ್ಮ ಒಂದೇ ಧರ್ಮ ಅಥವಾ ಪಂಥವೇ ಆವರಿಸಿರಬೇಕು, ಮತ್ತು ಅಂತಿಮ ಜಯ ತಮಗೆ ಎಂಬೆಲ್ಲಾ ಭ್ರಮೆಯನ್ನು ಜನರ ಮನದಲ್ಲಿ ಸೇರಿಸಿ, ಬಹಳ ಸುಲಭವಾಗಿ ಆ ದೇವರು, ಧರ್ಮದ ಹೆಸರಲ್ಲಿ ಸಾಕಷ್ಟು ಹಿಂಸೆ, ರಕ್ತವನ್ನು ಅವು ಹಿಂದಿನಿಂದಲೇ ಪಡೆಯುತ್ತಿರುವವು!! ಈ ಅಜ್ಞಾನಿ ಮಾನವನು, ನಿಜವಾಗಿಯೂ ತಾನು ಅವುಗಳ ಸೇವೆಯನ್ನು ಮಾಡುತ್ತಿರುವುದು ಎಂಬ ಸತ್ಯವನ್ನೂ ತಿಳಿಯದೆ, ತನ್ನ ಆವೇಶವನ್ನೆಲ್ಲಾ ಅಲ್ಲಿಗೆ ಹಾಕಿದ್ದಾನೆ!! ಇತ್ತ, ಆ ದೇವರೇ ಬಯಸುವ ಆ ಸಾರ್ವತ್ರಿಕ ಪ್ರೀತಿಯನ್ನು ಸರ್ವನಾಶ ಮಾಡಿದ್ದಾನೆ!! ಮಾತ್ರವಲ್ಲ, ಏನೂ ತಿಳಿಯದೆ, ಆ ಪ್ರಾಚೀನ ವಾಮಾಚಾರದ ಈ ರೀತಿಯ ಸೇವೆಯೇ ಅತ್ಯಂತ ಶ್ರೇಷ್ಠ ದೇವರ ಸೇವೆಯೆಂದು ಬಣ್ಣಿಸುತ್ತಾ, ಇಂದೂ, ವಾದ, ಪ್ರತಿವಾದ, ದಿಗ್ವಿಜಯಗಳಿಗೆ ಜನರನ್ನು ಸಾಲುಗಟ್ಟಿ ನಿಲ್ಲಿಸುತ್ತಿದ್ದಾನೆ!!

ಮಹಾತ್ಮರೆಲ್ಲರೂ ಜಾತೀಯತೆ ಮತ್ತು ಧರ್ಮಾಂಧತೆಗಳ ಸಮಾಜಗಳ ಮಧ್ಯ, ಎಲ್ಲರಂತೆ, ಮಕ್ಕಳಾಗಿ ಬೆಳೆದು ಬಂದವರು ಎಂಬುವುದನ್ನು ನೆನಪಿಡಬೇಕು. ಅವರು ಯಾರೂ ಯಾವುದೇ ಲಾಭಕ್ಕಾಗಿ ದೇವರು, ಧರ್ಮದ ಪರ ಮಾತಾಡುವವರಲ್ಲ ಎಂದೂ ತಿಳಿಯಬೇಕು. ಆದರೆ, ಅವರು ಆ ದೇವರ ನಿಜವಾದ ಆಸೆ ಅಥವಾ ಇಚ್ಛೆ ಏನಿರಬಹುದು ಎಂದು ತಮ್ಮ ಸ್ವಂಥ ಮನಸ್ಸಿನೊಳಗೆ ಪರಿಶೋಧನೆ ನಡೆಸಿ, ಅದು ಯುದ್ಧ ರಹಿತ ಭೂಮಿ ಎಂದು ಮನಗೊಳ್ಳುವರು, ಪ್ರೀತಿ ಸಹಿತ ಭೂಮಿ ಎಂದು ಮನಗೊಳ್ಳುವರು, ಮತ್ತು ತಮ್ಮ ಮಕ್ಕಳು ಮರಿಗಳು ವಿವಾಹ ವಿಚ್ಛೇಧನ ಇತ್ಯಾದಿಗಳ ಮೂಲಕ ಅನಾಥರಾಗದಿರುವ ಮತ್ತು ಮನೆಶಾಂತಿಯನ್ನೂ ತರುವ ಆ ನೈತಿಕ ಜೀವನದ ಭೂಮಿ ಎಂದು ಮನಗೊಳ್ಳುವರು. ಇದುವೇ ಅವರ ನಿಜವಾದ ಧರ್ಮಬೋಧವಾಗಿರುವುದು, ಮತ್ತು ಅವರ

ಧರ್ಮಬೋಧನೆಯು ಇದೇ ಆಗಿರುವುದು. ಅಂದರೆ, ಒಬ್ಬ ಮಹಾತ್ಮನಾಗಬೇಕಾದರೆ ಆತ ಸ್ವತಃ ಇವುಗಳನ್ನು ಆಲೋಚಿಸಿ, ಮನಗಂಡು ಅನುಷ್ಠಿಸಿದರೆ ಸಾಕಾಗುವುದು. ಇದಕ್ಕೆ ಏನೂ ಕಷ್ಟವಿಲ್ಲ. ಉಪವಾಸ, ಸನ್ಯಾಸಗಳ ಅಗತ್ಯವಿಲ್ಲ, ಅತಿಯಾದ ಧ್ಯಾನ, ಮೌನಗಳ ಅಗತ್ಯವಿಲ್ಲ. ಹೀಗಿರಲು ಇದನ್ನು ಎಲ್ಲಾ ಮಾನವರಿಗೂ ತನ್ನ ಜೀವನದಲ್ಲಿ ಅನುಷ್ಠಿಸುವುದು ಅತ್ಯಂತ ಸುಲಭವಾಗುವುದು! ಎಲ್ಲರೂ ತಮ್ಮ ತಮ್ಮ ಧರ್ಮ ಪಂಥಗಳೊಳಗಿದ್ದು, ಆ ದೇವರು ನಿಜವಾಗಿಯೂ ಬಯಸುವ ಈ ರೀತಿಯ ಧಾರ್ಮಿಕ ಜೀವನವನ್ನು ಅನುಷ್ಠಿಸಿ, ಆ ಮೂಲಕ ಅವರವರ ರೀತಿಯ ಸ್ವರ್ಗವನ್ನು ಅಥವಾ ಮೋಕ್ಷವನ್ನು ಅವರವರ ರೀತಿಯಲ್ಲೇ ಪಡೆಯಬಹುದು. ಇನ್ನು, "ದೇವರು ಇಲ್ಲ" ಎಂದು ವಾದ ಮಾಡುವವರು, ಈ ರೀತಿಯಲ್ಲಿ ಜೀವಿಸಿ, ತಮ್ಮ ಮನದ ಶಾಂತಿ ಮತ್ತು ಮನೆಯ ಶಾಂತಿಯನ್ನು ಪಡೆವರು, ಹಾಗೂ ಲೋಕ ಶಾಂತಿಗೂ ಪೂರಕವಾಗುವರು. ಇದು ಮಾತ್ರವಲ್ಲದೆ, ವಿವಾಹ ವಿಚ್ಛೇಧನ ಇತ್ಯಾದಿ ಭಯಾನಕ ಮಾನಸಿಕ ಹಿಂಸೆಗಳಿಂದ ಪರಿಹಾರವನ್ನೂ ಪಡೆಯುವರು ಎಂಬುವುದನ್ನೂ ನಮಗೆ ಖಚಿತವಾಗಿ ತಿಳಿದುಕೊಳ್ಳಬಹುದಾಗಿದೆ.

# ದೇವರು ಮತ್ತು ಧರ್ಮದ ಚುಟುಕು ವಿವರಣೆ

ದೇವರು ಮತ್ತು ಧರ್ಮವು ಯಾಕೆ ಚುಟುಕಾಗಿ ವಿವರಿಸಲ್ಪಡಬೇಕೆಂಬುವುದಕ್ಕೆ ಕಾರಣಗಳನ್ನು ನೋಡೋಣ. ಸೃಷ್ಟಿಕರ್ತ ದೇವನಿದ್ದಲ್ಲಿ ಆತ ಏನು ಹೇಳುವನು? ತನ್ನ ಮಕ್ಕಳಲ್ಲಿ ಒಬ್ಬ ಮೇಲು ಜಾತಿಯವನಾಗಿದ್ದು ಇನ್ನೊಬ್ಬ ಕೀಳು ಜಾತಿಯ ಶೂದ್ರನಾಗಿ ಆತನು ಜೀವನ ಪರ್ಯಂತ ಮೇಲು ಜಾತಿಯವನ ಸೇವೆ ಮಾಡುತ್ತಿರಬೇಕು ಎನ್ನುವನೇ? ಇಲ್ಲ, ಅದೇ ರೀತಿ ತನ್ನ ಒಂದು ಧರ್ಮದ ಮಕ್ಕಳು ಇನ್ನೊಂದು ಧರ್ಮದ ಮಕ್ಕಳು ತಮ್ಮೊಳಗೆ ಭೀಕರ ರಕ್ತಪಾತ ಮಾಡಿ ಎಲ್ಲರೂ ಸತ್ತು ಹೋಗಬೇಕೆಂದು ಹೇಳುವನೇ? ಇಲ್ಲ. ಅಥವಾ ಹಳೆಯ ತನ್ನ ಧರ್ಮಗಳು ಸರಿಯಿಲ್ಲ, ಆದುದರಿಂದ ತನ್ನ ಹೊಸತಾಗಿ ನಿರ್ಮಿಸಿದ ಧರ್ಮಕ್ಕೆ ನೀವೆಲ್ಲಾ ವರ್ಗಾವಣೆಯಾಗಿ ಎಂದು ಹೇಳುವನೇ? ಇಲ್ಲ. ತನ್ನ ಹಳೆ ಧರ್ಮದಲ್ಲಿ ಸ್ವಲ್ಪ ವಿಚಾರಗಳನ್ನು ಹೇಳುವುದಕ್ಕೆ ಮರೆತು ಹೋಗಿದೆ, ಅದನ್ನು ತನ್ನ ಅತ್ಯಾಧುನಿಕ ಆವೃತ್ತಿಯ ಧರ್ಮದಲ್ಲಿ ಸೇರಿಸಿದ್ದೇನೆ ಎಂದು ತನ್ನ ನೆನಪು ಶಕ್ತಿಯ ಕೊರತೆಯನ್ನು ಹೇಳುವನೇ? ಇಲ್ಲ. ಹಾಗಿದ್ದರೆ ಮತ್ಯಾಕೆ ಇದೆಲ್ಲವನ್ನು ದೇವರ ಹೆಸರಲ್ಲಿ ಮಾಡಿದ್ದೀರಿ ಮತ್ತು ಮಾಡುತ್ತಿದ್ದೀರಿ? ಉತ್ತರ ಕೊಡಿ. ದೇವರ ನಿಜ ಸ್ವರೂಪವಾದ ಸಾರ್ವತ್ರಿಕ ಸತ್ಯ , ಪ್ರೀತಿ, ನೀತಿಯನ್ನು ಮೂಲೆಗೆ ಹಾಕಿ ಹಲವು ಹಲವು ಪುಸ್ತಕಗಳಲ್ಲಿ ಹಲವು ಹಲವು ಆಚಾರಗಳನ್ನು ಪುಟಗಟ್ಟಲೆ ವರ್ಣಿಸಿ, ಆ ಸೃಷ್ಟಿಕರ್ತನನ್ನು ಆಮಿಷಕ್ಕೆ ಬಲಿಯಾಗುವ ಕೀಳು ಮಾನವನ ತರ ವಿವರಿಸಿದ್ದೀರಲ್ಲಾ, ಇದೆಂಥಹ ದೈವನಿಂದನೆ!! ಸೃಷ್ಟಿಕರ್ತನಿಂದ ಸೃಷ್ಟಿಸಲ್ಪಟ್ಟದ್ದೆಂದು ಹೇಳಲ್ಪಡುವ, ಆದರೆ, ಒಂದಕ್ಕೊಂದು ವಿರುದ್ಧವಾಗಿರುವ ಆಚಾರಗಳನ್ನು ಈ ಜಗತ್ತಿನಲ್ಲಿ ನೋಡುವಾಗಲಾದರೂ ಇವೆಲ್ಲಾ ಸೃಷ್ಟಿಕರ್ತನದ್ದಲ್ಲವೆಂದೂ ಆತನು ಈ ರೀತಿ ವಿಚಿತ್ರವಾಗಿ ವರ್ತಿಸಲಾರನೆಂದು ಗೊತ್ತಾಗಿಲ್ಲವೆ? ಮಹಾತ್ಮರು ಹಿಂದಿನ ಕಾಲದಿಂದಲೇ ಪಂಡಿತರುಗಳ ಸ್ವಾರ್ಥದ ಈ ಮೋಸವನ್ನು ನಿಮಗೆ ಅಗಾಗ್ಗ ತಿಳಿಸಿ ಎಚ್ಚರಿಸುತ್ತಾ ಬಂದಿರುವರು, ನೀವು ಅವರ ಮಾತನ್ನು ಕೇಳಿದಿರೇ? ಇಲ್ಲ. ಆ ಸಹಸ್ರಾರು ವರುಷಗಳಲ್ಲಿ ಧರ್ಮ, ಜಾತಿಯ ಹಿನ್ನೆಲೆಯಲ್ಲಿ ಶೋಷಣೆಗಳಿಗೆ ಒಳಗಾದ ಆ ಆತ್ಮಗಳಿಗೆ ಮಾಡಿರುವ ಅನ್ಯಾಯಕ್ಕೆ ಪ್ರಾಯಶ್ಚಿತ್ತವನ್ನು ಜೀವನ ಪೂರ್ತಿ ಮಾಡಿದರೂ ಸಾಕಾಗಲಾರದು. ಒಮ್ಮೆ ಆ ದೌರ್ಜನ್ಯಕ್ಕೆ, ಶೋಷಣೆಗೆ, ಒಳಗಾದವರ ಆ ಸ್ಥಾನದಲ್ಲಿ ನಮ್ಮನ್ನೇ ನಿಲ್ಲಿಸಿ ನೋಡೋಣ, ಆಗ ಮಾತ್ರ ಅದು ಘೋರ ಪಾಪ ಕರ್ಮವೆಂದು ನಮಗೆ ತಿಳಿಯುವುದು. ಮಾನವೀಯತೆಯ ಹೃದಯವಿದ್ದಲ್ಲಿ, ಧರ್ಮ, ಜಾತಿಯ ಹೆಸರಲ್ಲಿ ಆ ದಾರುಣ ಜೀವನಕ್ಕೆ ಒಳಗಾದ ಮುಗ್ಧ ಮಾನವರನ್ನು ಒಮ್ಮೆ ನೆನಪಿಸಿಕೊಳ್ಳೋಣ. ಆಗ ಹೊರಟು ಬರುವ ಕಣ್ಣೀರ ನದಿಗೆ ಜನರು ಪವಿತ್ರವೆಂದು ತಿಳಿದಿರುವ ಆ ಗಂಗೆಗಿಂತಲೂ ಹೆಚ್ಚು ಪವಿತ್ರತೆ ಇರುವುದು. ದೇವರನ್ನು ತನ್ನ ಸ್ವಾರ್ಥಕ್ಕೆ ಬೇಕಾದಂತೆ ಜಗತ್ತಿನ ಸರ್ವ ಕಡೆಗಳಲ್ಲೂ ದುರುಪಯೋಗ ಮಾಡುತ್ತಾ, ದೇವರ ಕರುಣೆ, ದಯೆ, ಇತ್ಯಾದಿಗಳ ಕುರಿತು ಕೋಟಿಗಟ್ಟಲೆ ಪುಸ್ತಕಗಳನ್ನು ಬರೆದು ಹಾಕಿದುದರಲ್ಲಿ ಏನು ವಿಶೇಷತೆ ಇದೆ? ಅನುಷ್ಠಾನದಲ್ಲಿ ಜೀವಿಸಿದ ಮಹಾತ್ಮರುಗಳ ಮಾತನ್ನು ಮತ್ತು ಜೀವನವನ್ನು ಯಾರು ಅನುಸರಿಸಿದ್ದಾರೆ? ಅವರ ವಿಶಾಲ ಮನಸ್ಕತೆಯ ಪವಿತ್ರ ಪ್ರೀತಿಯ ಮಾತು ನಿಮಗೆ ದೈವನಿಂದನೆಯಾಯಿತು!! ಇನ್ನು ಉಳಿಗಾಲವಿಲ್ಲ, ದೇವರನ್ನು, ದೇವರ ಮಾತನ್ನು ಉಳಿಸುವ

ನೆಪದಲ್ಲಿ ಆ ದೇವರನ್ನೇ ಅಳಿಸಿ ಹಾಕಿ ಆಗಿದೆ. ಇದೇ ಸ್ಥಿತಿ ಮುಂದುವರಿಯುವುದಾದರೆ ಜಗತ್ತು ಶಾಂತಿಯೆಡೆಗೆ ಎಂದೂ ಮರುಳುವುದಿಲ್ಲ!!

ದೇವರು, ವ್ಯಕ್ತಿಯಾದರೂ, ತತ್ವವಾದರೂ ಅದು ಎಂದೂ ಕೆಟ್ಟದನ್ನು ಸೃಷ್ಟಿಸಲಾರದು. ಸೃಷ್ಟಿಕರ್ತನಾದುದರಿಂದ ಆತನಿಗೆ ಯಾವ ಧರ್ಮವೂ ವಿಶೇಷವಾಗಲಾರದು, ಆದರೆ ಆತನು ತನ್ನ ಮಕ್ಕಳು ಶಾಂತಿಯಿಂದ ಜೀವಿಸಬೇಕು ಎಂಬುವುದನ್ನು ಆಶಿಸುವನು ಅಷ್ಟೆ. ನೀವೇ ಹೇಳಿ, ಆತನು ತನ್ನದೇ ಒಂದು ಧರ್ಮದಿಂದ ಇನ್ನೊಂದಕ್ಕೆ ಮತಾಂತರವನ್ನು ಆಶಿಸುವನೇ? ಮಾನವನಿಗೆ ಬೇಕಾದ ಧರ್ಮದ ಸರ್ವ ಸಾರವೂ ಸತ್ಯ, ಪ್ರೀತಿ, ನೀತಿಯಲ್ಲಿ ಅಡಕವಾಗಿದೆ, ಮತ್ತು ಅದನ್ನು ಆತನು ಎಲ್ಲಾ ಧರ್ಮಗಳಲ್ಲೂ ಮೊದಲಲ್ಲೇ ಹೇಳಿ ಮುಗಿಸಿದ್ದಾನೆ. ಇನ್ನು ಈ ಆಚಾರಗಳು, ಜಾತೀಯತೆ, ಧರ್ಮಾಂಧತೆಗಳಿಂದ ಶೋಷಣೆ, ರಕ್ತಪಾತ ಮಾಡಲು ಆತನು ಹೇಳಿದನೇ ಮತ್ತು ಹೇಳುವನೇ? ಇಲ್ಲ, ಇಲ್ಲ. ಆದುದರಿಂದ ನಮಗೆ ದೇವರು ಎಂದರೆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯ ಮೂಲವೆಂದೂ ಧರ್ಮವನ್ನು ಈ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯನ್ನು ಜೀವನದಲ್ಲಿ ಬೆಳೆಸುವ ದಾರಿಯೆಂದು ಚುಟುಕಾಗಿ ವಿವರಿಸಿದರೆ, ಅದು ದೇವರು ಮತ್ತು ಧರ್ಮದ ಪೂರ್ತಿ ವಿವರಣೆ ಆಗುವುದು. ನಮಗೆ ಇದರಿಂದ ಮುಂಬರಲಿರುವ ಎಲ್ಲಾ ಅನಾಹುತಗಳಿಂದಲೂ ಪಾರಾಗುವ ಒಂದು ಅವಕಾಶವೂ ಉಂಟಾಗುವುದು.

# ಪ್ರಾಚೀನ ವಾಮಾಚಾರದ ರಹಸ್ಯ ಕೈವಾಡ ಕಾಣಿಸುವ ಸ್ಥಳಗಳು

ಉತ್ತಮರನ್ನು ಅಧಮರನ್ನಾಗಿ ಮಾಡುವಲ್ಲಿ, ಆದರೆ ಆ ರಹಸ್ಯ ಕೆಲಸವು ಜನರಿಗೆ 'ಸಹಜ' ಎಂದು ತೋರುವ ರೀತಿಯಲ್ಲಿ ಮಾತ್ರ ಆ ಪ್ರಾಚೀನ ವಾಮಚಾರವು ಈ ಜಗತ್ತಿನಲ್ಲಿ ಬದಲಾವಣೆಯನ್ನು ತರುತ್ತಿರುವುದು. ಅದು ಅನೈತಿಕ ಕಾಮದ ಆಸೆಯನ್ನು ಹೆಚ್ಚಿಸುತ್ತಾ ಹೋಗುವುದು ಮತ್ತು ಎಲ್ಲರೂ ಇತರ ಧರ್ಮದ ದೇವರನ್ನು ಧ್ವೇಷಿಸುವಂತೆ ಮಾಡಿ, ಆ ಧ್ವೇಷ ಸಂಕಲ್ಪದ ಹಿನ್ನೆಲೆಯಲ್ಲಿ, ಈ ಜಗತ್ತಿನ ಎಲ್ಲಾ ದೇವಸಂಕಲ್ಪಗಳನ್ನು ನಾಶ[ಶಕ್ತಿಹೀನ]ಮಾಡುತ್ತಿರುವುದು. ಆ ವಾಮಾಚಾರ ಸಂಕಲ್ಪ ಲೋಕದಲ್ಲಿ 'ದೇವರು' ಎಂಬುವುದು ಮಾನವನ ಸದ್ಗುಣಗಳ ಒಂದು ಅತಿ ದೊಡ್ಡ ಆದರ್ಶ ಸಂಕಲ್ಪವಾಗಿ ಮಾತ್ರ ಪರಿಗಣಿಸಲ್ಪಟ್ಟಿರುವುದು. ಅಂದರೆ, ದೇವ, ದೇವತೆ, ಸೃಷ್ಟಿಕರ್ತ ದೇವರು, ಇತ್ಯಾದಿ ರೀತಿಯಲ್ಲಿ ಹಲವು ದೇವರುಗಳು ಮತ್ತು ಅವುಗಳ ಹಲವು ವಿಧಗಳ ಪುರಾಣದ ಹಿನ್ನೆಲೆಯಲ್ಲಿ ಅಲ್ಲಿ ಸಂಕಲ್ಪಿಸಲ್ಪಟ್ಟಿಲ್ಲ ಎಂದು ಅರ್ಥ. ಒಂದು ಧರ್ಮದಲ್ಲಿರುವವರು ಇತರ ಎಲ್ಲಾ ಧರ್ಮಗಳ ದೇವರನ್ನು ಸೈತಾನ ಎಂದಾಗ, ಅಲ್ಲಿ, ಆ ಪ್ರಾಚೀನ ವಾಮಾಚಾರದ ಸಂಕಲ್ಪ ರೀತಿಯ ಪ್ರಕಾರ, ನಡೆವುದು ಈ ಜಗತ್ತಿನ ಎಲ್ಲಾ ದೇವಸಂಕಲ್ಪದ ಒಟ್ಟು ಸದ್ಗುಣ ಆದರ್ಶವನ್ನು ಕೊಲ್ಲುವುದಾಗಿದೆ! ಈ ಅಂಶವನ್ನು ಸರಿಯಾಗಿ ಗಮನಿಸಬೇಕು. ಅಂದರೆ, ಜನರು ಇತರ ಧರ್ಮದ ದೇವರನ್ನು ನಿಂದಿಸುವಾಗ ಮತ್ತು ಇತರ ರೀತಿಗಳಲ್ಲಿ ಧ್ವಂಸ ಮಾಡುವಾಗ, ಅದು ತನ್ನದೇ ದೇವರನ್ನು ಹಲವು ಪಟ್ಟು ಸೈತಾನನ್ನಾಗಿ ಮಾಡುವುದಕ್ಕೆ ಸಮವಾಗುವುದು ಎಂದು ಅರ್ಥ! ಈ ಎಲ್ಲಾ ಮೋಸದ ಕೆಲಸಗಳ ಪರಿಣಾಮವಾಗಿ, ಅವುಗಳ ಪ್ರಕಾರ, ಮುಂದೆ, ಕಾಲ ಹೋದಂತೆ ಅನಿವಾರ್ಯವಾಗಿ ಧರ್ಮಗಳೆಲ್ಲವೂ ನಾಶವಾಗಲೇ ಬೇಕು, ಮತ್ತು ಧರ್ಮಗಳ ಹೆಸರುಗಳು ಮಾತ್ರ ಅಧರ್ಮ, ಅನೈತಿಕತೆಗಳನ್ನು 'ಧರ್ಮ' ಎಂದು ತಿಳಿಯುತ್ತಾ ಅವನ್ನು ಹೊತ್ತುಕೊಂಡಿರಬೇಕು ಎಂದಾಗಿದೆ! ಯಾವ ಧರ್ಮವೂ ಇದನ್ನು ತಪ್ಪಿಸುವ ಹಾಗಿಲ್ಲ ಮತ್ತು ಅದು ಸಾಧ್ಯವೂ ಇಲ್ಲ! ಮುಂದೆ, ಕೆಲವು ನೂರು ವರುಷಗಳ ಅಂತರದಲ್ಲಿ ಎಲ್ಲವೂ ಒಂದೇ ರೀತಿಯಲ್ಲಿ ನಾಡು ಅಥವಾ ನಗರದಲ್ಲಿ ಜೀವಿಸುವ ಕಾಡು ಜನಾಂಗವಾಗಿ ಮಾರ್ಪಡುವವು! ಇದನ್ನು ಎಲ್ಲಾ ಧರ್ಮಗಳಲ್ಲೂ ಹಲವು ಸಹಸ್ರ ವರುಷಗಳ ಮೊದಲೇ ಅವು ಸೂಚಿಸಿವೆ!! ಆದರೆ, ಅವುಗಳನ್ನು ಜಗತ್ತಿಗೆ ಸಹಜವಾಗಿ ಬರುವ ಆ ಅತ್ಯಂತ ಕೆಟ್ಟ [ಜನರಿರುವ] ಕಾಲ ಎಂದು ಎಲ್ಲಾ ಧರ್ಮಗಳು ಒಂದೇ ರೀತಿಯಲ್ಲಿ ಬಣ್ಣಿಸುವಂತೆ, ಮತ್ತು ಅದು ದೇವರದೇ ನುಡಿ ಎಂಬಂತೆ ಚಿತ್ರಿಸಿವೆ ಅಷ್ಟೆ!! ಕಾರಣವೇ ಇಲ್ಲದೆ ಕಾಲವು ಜಗತ್ತಿನ ಎಲ್ಲಾ ಜನರನ್ನು ಹೇಗೆ ಕೆಟ್ಟವರನ್ನಾಗಿ ಮಾಡುವುದು ಎಂಬ ಪ್ರಶ್ನೆಯನ್ನು ಯಾರೂ ಧರ್ಮ ನಂಬಿಕೆಯೊಳಗೆ ಹಾಕುವಹಾಗಿಲ್ಲ, ಯಾಕೆಂದರೆ, ನಂಬಿಕೆಗಳ ಪ್ರಕಾರ ಪ್ರಶ್ನೆಯನ್ನು ಯಾರೂ ಹಾಕಬಾರದು, ಮತ್ತು "ಧರ್ಮದ ಮಾತುಗಳನ್ನು ಆಳದಲ್ಲಿ ನಂಬಿ ಅದರ ವಿರುದ್ಧ ಆಲೋಚನೆಯನ್ನೂ ಮಾಡದೆ ಜೀವಿಸಿದರೆ ಮಾತ್ರ ದೇವರಿಗೆ ಸಂತೋಷವಾಗುವುದು ಮತ್ತು ಆ ವ್ಯಕ್ತಿಗೆ ಸ್ವರ್ಗಕ್ಕೆ ಹೋಗಲು ಸಾಧ್ಯವಾಗುವುದು!" ಹಲವು ಸಹಸ್ರ ವರುಷಗಳಿಂದಲೂ ಈ ಧರ್ಮಗಳು ತಮ್ಮ ಧರ್ಮಗಳ ಮುಖ್ಯ ಪಾಲನೆ ಎಂದು ಈ ರೀತಿಯನ್ನೇ ಪಾಲಿಸುತ್ತಾ ಬಂದಿರುವವು!! ಆ ಪ್ರಾಚೀನ ವಾಮಾಚಾರದ ಇರವಿನ ಬಗ್ಗೆ ಇದುವರೆಗೂ ಯಾರಿಗೂ ತಿಳಿಯದೆ ಆಗಲು ಈ ಅಂಧ ನಂಬಿಕೆಗಳು ಒಂದು ಮುಖ್ಯ ಕಾರಣವಾಗಿ ಪರಿಣಮಿಸಿದವು.

ಆ ಪ್ರಾಚೀನ ವಾಮಾಚಾರದ ರಹಸ್ಯ ಕೈವಾಡವು ಇನ್ನೂ ಹಲವು ಕಡೆಗಳಲ್ಲಿ ನಮಗೆ ಗೋಚರವಾಗುವುದು. ಅದರಲ್ಲಿ ಒಂದು ತಿಳಿಸಬಾರದ ವಿಷಯವಾದರೂ ಅದರ ಒಂದು ಚಿಕ್ಕ ಸುಳಿವನ್ನು ಮಾತ್ರ ಇಲ್ಲಿ ಕೊಡುವೆನು. ಜಗತ್ತಿನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸ್ಥಾಪಕ ಸ್ಥಾನದಲ್ಲಿರುವವರು, ಅವತಾರ ಪುರುಷರು ಎಂಬವರು, ಪೂಜ್ಯನೀಯರು, ಮರದಡಿಯ ಮಹಾತ್ಮರು, ಎಂದು ಈ ವರ್ಗದ ಎಲ್ಲರನ್ನೂ ಪರೀಕ್ಷಿಸಿ ನೋಡಿರಿ, ಆಗ ತಿಳಿಯುವುದು ಅವರೆಲ್ಲರೂ ಅವರ ಕಾಲದ ಇತರ ಮಾನವರಿಂದ ಭಯಾನಕ ಮಾನಸಿಕ ಅಥವಾ ಶಾರೀರಿಕ ಹಿಂಸೆಗೆ ಒಳಗಾದವರು ಎಂದು, ಇದು ಅತ್ಯಂತ ರಹಸ್ಯಗಳಲ್ಲಿ ಒಂದಾಗಿದೆ!!

# ಸಮಾಜ ಬಂಧು

ನಾವು ಈ ಜಗತ್ತಿನ ಎಲ್ಲೆಡೆ ಹೋಗಿ ಪರಿಶೀಲಿಸಿದರೂ, ನಮಗೆ ಸಿಗುವ ಒಂದು ಸತ್ಯಾಂಶವೇನೆಂದರೆ ಸಮಾಜದ ಅಥವಾ ಜಗತ್ತಿನ ಉದ್ಧಾರಕ್ಕಾಗಿ, ನೇರವಾಗಿ ಸಂಬಂಧಿಸುವವರು ಮಹಾತ್ಮರು ಮಾತ್ರವಾಗಿರುವರು ಎಂದಾಗಿದೆ! ಎಲ್ಲಾ ಧರ್ಮಗಳಲ್ಲಿ ಸ್ವರ್ಗಕ್ಕೆ ಹೋಗುವ ದಾರಿಯಲ್ಲಿರುವವರು ಇರುವರು. ಅದೇ ರೀತಿ ಮೋಕ್ಷವನ್ನು ಪಡೆಯುವ ದಾರಿಯಲ್ಲಿ ಇರುವವರಿರುವರು. ಪಿತೃ ಲೋಕವನ್ನಾದರೂ ಸೇರಿ ಬಿಡಲು ಪುರೋಹಿತರನ್ನು ಆಶ್ರಯಿಸುವವರಿರುವರು. ಆರೋಗ್ಯವನ್ನು ಉತ್ತಮಗೊಳಿಸುವ ವಿಧಾನಗಳನ್ನು ಅನುಸರಿಸುವವರಿರುವರು. ಅದೇ ರೀತಿ, ತನ್ನ ಕಷ್ಟ ನಿವಾರಣೆಗಾಗಿ ಹಲವು ದೇವರುಗಳನ್ನು ಅಥವಾ ಇತರ ಶಕ್ತಿಗಳನ್ನು ಆಶ್ರಯಿಸುವವರಿರುವರು. ಆದರೆ, ಅಚ್ಚರಿ ಎಂದರೆ ಈ ಮಾನವನಿಗಾಗಿ ಯಾವ ಲಾಭದ ಭಾವವೂ ಇಲ್ಲದೆ ಮುಕ್ತವಾಗಿ ಕಣ್ಣೀರು ಹಾಕುವಲ್ಲಿ ಮತ್ತು ಆತನ ಲೌಕಿಕ ಜೀವನದ ತೊಂದರೆಗಳನ್ನು ನಿವಾರಿಸುವಲ್ಲಿ ಹಾಗೂ ಆತನ ಸ್ವಭಾವ ಶುದ್ಧೀಕರಣದಲ್ಲಿ ನೇರವಾಗಿ ಶ್ರದ್ಧೆವಹಿಸುವವರೆಂದರೆ ಮಹಾತ್ಮರು ಮಾತ್ರ ಆಗಿರುವರು! ಆದುದರಿಂದ ಮಾಹಾತ್ಮರುಗಳೇ ಈ ಜಗತ್ತಿನ ನಿಜವಾದ ಬಂಧುಗಳು ಎನ್ನಬಹುದು.

# ಮಹಾತ್ಮರ ಜೀವನ

ಸಂಸಾರದ ತ್ಯಾಗವು ಅನಿವಾರ್ಯವಾಗಿರುವುದು ಸನ್ಯಾಸಿಗಳಿಗೆ ಎಂದು ಶಾಸ್ತ್ರವು ಹೇಳುವುದು. ಯಾಕೆಂದರೆ ಆತನು ತನ್ನ ಅಸ್ತಿತ್ವವನ್ನು ಸೂಕ್ಷ್ಮ ಲೋಕದಲ್ಲಿ ಎಂದೆಂದಿಗಾಗಿ ಇಲ್ಲವಾಗಿಸುವ ಪ್ರಯತ್ನದಲ್ಲಿರುವನು, ಅದಕ್ಕಾಗಿ ಆತನು ಎಲ್ಲವನ್ನೂ ತ್ಯಜಿಸಬೇಕಾಗಿದೆ. ಆದರೆ, ಮಹಾತ್ಮರಾಗಬೇಕಾದರೆ, ಜನರು ಸಾಮಾನ್ಯವಾಗಿ ತಪ್ಪಾಗಿ ತಿಳಿದಿರುವಂತೆ, ಸರ್ವವನ್ನೂ ತ್ಯಾಗಮಾಡಬೇಕಾಗಿಲ್ಲ. ಮಹಾತ್ಮನು ಸಂಸಾರದಲ್ಲಿದ್ದೇ ಮನೋ ಪರಿಶುದ್ಧಗೊಳಿಸುವ ಹಿನ್ನೆಲೆಯಲ್ಲಿ, ಆ ಶಾಂತಿಯ ಮತ್ತು ಆನಂದದ ವಿಶಾಲ ಮನಸ್ಕತೆಯನ್ನು ಪಡೆಯುವನು. ಆದುದರಿಂದ ಈ ಮಹಾತ್ಮರ ಜೀವನವನ್ನು ಜನಸಾಮಾನ್ಯರಿಗೂ ಸಾಧನೆಯ ಬಲದಿಂದ ಪಡೆದು ಆನಂದಿಸಬಹುದಾಗಿದೆ! ಮಾನವನು ಅನೈತಿಕತೆ ಮತ್ತು ಸುಖದ ಬೆನ್ನೆತ್ತಿ ಮೊದಲಲ್ಲಿ ಹೋಗುವನು, ಹೀಗೆ ಹೋದಲ್ಲಿ, ಮದುವೆಯಾದ ನಂತರ ಸಾಯುವ ತನಕವೂ ಹರಡಿಕೊಂಡಿರುವ ಆ ನಿಜವಾದ ಆತ್ಮೀಯ ದಾಂಪತ್ಯ ಸುಖದಿಂದ ಖಂಡಿತವಾಗಿಯೂ ವಂಚಿತನಾಗುವನು. ಅದನ್ನು ಮರೆಯಲು ವ್ಯಕ್ತಿಯ ವ್ಯಕ್ತಿತ್ವವು ಪುನಃ ಅನೈತಿಕತೆಯಲ್ಲಿ ಪರಸ್ತ್ರೀ ಅಥವಾ ಪರಪುರುಷ ಸಂಬಂಧವನ್ನು ಪಡೆಯಲು ಮುಂದಾಗುವುದು, ಆಗಲೇ, ಆ ವ್ಯಕ್ತಿತ್ವವು ಆ ಪ್ರಾಚೀನ ವಾಮಾಚಾರದ ಕಾಮ ಮತ್ತು ಕ್ರೌರ್ಯದ ಭೂತವಾಗಿ ಬದಲಾಗಿರುವುದು. ಇನ್ನು, ಆ ಭೂತಕ್ಕೆ ಏನು ಜೀವನ? ಇನ್ನೂ ಬದುಕಿದ್ದರೆ, ಮುದಿ ಭೂತಗಳಾಗಿ ತನ್ನ ಹತ್ತಿರದಲ್ಲಿರುವವರಿಗೆ ಭಯಾನಕ ಮಾನಸಿಕ ಯಾತನೆಯನ್ನು ನೀಡಿ, ತಾನೂ ಶಾಂತಿಯನ್ನು ಕಾಣದೆ ಕೊನೆಯುಸಿರು ಎಳೆಯುವುದು. ಈ ಭೂಮಿಯಲ್ಲಿ ಎಲ್ಲರೂ ಸ್ವತಂತ್ರರು, ಅದೇ ರೀತಿ, ಎಲ್ಲರಿಗೂ ಅವರವರ ಅಭಿಪ್ರಾಯವಿದೆ, ಜೀವಿಸುವ ಸ್ವಾತಂತ್ರ್ಯವಿದೆ. ಆದರೆ, ಆ ನೈಮಿಷಿಕ ಆರಂಭದ ಅನೈತಿಕ ಸ್ವಾತಂತ್ರ್ಯವು ಅವರ ದಾಂಪತ್ಯ ಜೀವನದಲ್ಲಿ ಮಾನಸಿಕ ಹಿಂಸೆ ಮತ್ತು ಕಣ್ಣೀರನ್ನು ತಂದುಕೊಡಬಾರದು ಎಂಬುವುದು ಮಾತ್ರ ಮಹಾತ್ಮರ ಕಳಕಳಿಯಾಗಿದೆ. ಈ ಪ್ರಾಚೀನ ವಾಮಾಚಾರವು ಈ ಜಗತ್ತಲ್ಲಿ ಬಹಳವಾಗಿ ಮಾನಸಿಕ ರೋಗವನ್ನು ತನ್ನ ಕಾರ್ಯಗಳಿಗಾಗಿ ಉಪಯೋಗಿಸುವವು ಎಂಬುವುದು ಒಂದು ಭಯಾನಕ ಸತ್ಯವಾಗಿದೆ. ಈ ರೋಗದ ನಿರಂತರ ಹೆಚ್ಚಾಗುವಿಕೆಯು ಕೂಡಾ ಮಾನವನು ತನ್ನ ಉತ್ತಮ ತೀರ್ಮಾನಗಳಲ್ಲಿ ನೆಲೆ ನಿಲ್ಲದಂತೆ ಆಗುವುದಕ್ಕೆ ಇನ್ನೊಂದು ಕಾರಣವಾಗಿರುವುದು. ಇಲ್ಲೆಲ್ಲಾ, ಸತ್ಯಚಿಂತನೆ ಮತ್ತು ಜೀವನದ ಬಗ್ಗೆ ಇರುವ ಸ್ಪಷ್ಟ ನಿಲುವುಗಳು ಮುಂದಿನ ಕಣ್ಣೀರಿನ ಜೀವನವು ಆ ವ್ಯಕ್ತಿಗೆ ಬಾರದಂತೆ, ಆತನಿಗೆ ನೆರವಾಗುವುದು ಎಂಬುವುದರಲ್ಲಿ ಸಂಶಯವಿಲ್ಲ. ಈ ಕಾರಣದಿಂದಲೇ, ಸುಲಭದ ಆ ಮಹಾತ್ಮರ ಜೀವನವನ್ನು ಪತಿ, ಪತ್ನಿಯರು ಇಬ್ಬರೂ ಸೇರಿ ಸತ್ಯಸಂಧವಾಗಿ ಅನುಸರಿಸಿದಲ್ಲಿ, ಅವರ ಹಿಂದಿನ ಅನೈತಿಕ ಜೀವನದ ಸುಪ್ತ ಪ್ರಭಾವವು ನಿಂತು ಹೋಗಿ, ಅತ್ಯಂತ ಆತ್ಮೀಯ ದಾಂಪತ್ಯ ಜೀವನವನ್ನು ಪಡೆದು, ಈ ಇಹದ ಜೀವನವನ್ನು ಕೊನೆಯ ತನಕ, ಜಗತ್ತಿಗೆ ಅದ್ಭುತ ಬೆಳಕಾಗುತ್ತಾ, ಆನಂದಿಸಬಹುದು ಎಂದು ಆ ಮಹಾಜೀವನ ರೀತಿಯು ಹೇಳುವುದು.

# ಮಕ್ಕಳು, ಜಾತೀಯತೆ, ಮತ್ತು ಧರ್ಮಾಂಧತೆ

ಪ್ರಾಚೀನ ವಾಮಾಚಾರದ ರಹಸ್ಯಗಳ ವಿಚಾರವಾಗಿ ಇನ್ನೊಂದು ವಿಚಾರವನ್ನು ಕೂಡಾ ಇಲ್ಲಿ ತಿಳಿದಿರುವುದು ಉತ್ತಮ ಎಂದು ನನಗನಿಸುವುದು. ಮಾನವನ ಜೀವನದ ಬಾಲ್ಯದ ಕಾಲವು, ಅಂದರೆ, ಹನ್ನೆರಡು ವರುಷಗಳೊಳಗಿನ ಕಾಲದಲ್ಲೇ ಎಲ್ಲರೂ ಜಾತೀಯತೆಯನ್ನೂ, ಧರ್ಮಾಂಧತೆಯನ್ನೂ ಪಡೆದಿರುವರು!!!! ಅನಂತರ ಹೆಚ್ಚುವ ಜಾತೀಯತೆ ಮತ್ತು ಧರ್ಮಾಂಧತೆಯು ಅವರೇ ಮಕ್ಕಳಾಗಿರುವಾಗ ಮಾಡಿಟ್ಟ ಆ ಬಾಲ್ಯದ ಜಾತೀಯತೆ ಮತ್ತು ಧರ್ಮಾಂಧತೆಯ ಬೆಳವಣಿಗೆಯ ಮುಂದುವರಿಯುವಿಕೆ ಮಾತ್ರವಾಗಿರುವುದು! ಈ ತಂತ್ರವು ಆ ಪ್ರಾಚೀನ ವಾಮಾಚಾರದ ರಹಸ್ಯ ಯೋಜನೆಗಳಲ್ಲಿ ಒಂದು ಮುಖ್ಯ ಪಾತ್ರವನ್ನು ವಹಿಸುತ್ತಿರುವುದು ಸ್ಪಷ್ಟವಾಗಿ ತಿಳಿದುಬಂದಿದೆ. ಆದುದರಿಂದ ಮಕ್ಕಳಾಗಿರುವಾಗ ಅವರಿಗೆ ಜಾತೀಯತೆ ಮತ್ತು ಧರ್ಮಾಂಧತೆಗಳ ವಿಷವನ್ನು ದಯವಿಟ್ಟು ಯಾರೂ ಉಣಿಸದಿರಿ ಎಂದು ಜಗತ್ತಿನ ಎಲ್ಲಾ ಧರ್ಮ, ಪಂಥಗಳ ಮಾನವರಲ್ಲೂ ಕೇಳಿಕೊಳ್ಳುವೆನು.

# ಮಹಾತ್ಮರ ಎರಡು ರೀತಿಯ ಜೀವನ ಆನಂದ

ಈ ಮಾನವ ಜೀವನವನ್ನು ಪರಿಶೀಲಿಸಿದಾಗ ನಮಗೆ ಅದರಲ್ಲಿ ಎರಡು ಭಾಗಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಒಂದು ವ್ಯಕ್ತಿಜೀವನ ಮತ್ತು ಇನ್ನೊಂದು ಸುಖಜೀವನ. ವ್ಯಕ್ತಿಜೀವನದಲ್ಲಿ ಆತನು ಆತ್ಮೀಯ ಸಂಬಂಧವನ್ನು ಹೆಚ್ಚಿಸಿ ಮತ್ತು ಶಾಂತಿಯನ್ನು ಹೆಚ್ಚಿಸಿ, ತನ್ನ ಜೀವನದ ಹೆಚ್ಚಿನ ಕಾಲವನ್ನೂ ಆನಂದದಲ್ಲಿ ಜೀವಿಸುವನು. ಆದರೆ, ಇನ್ನೊಂದು ಭಾಗದ ಜೀವನವಾದ ಆ ಸುಖಜೀವನದಲ್ಲಿ ಮಾನವನು ಸುಖ ಸೌಕರ್ಯದ ಜೀವನವನ್ನು ಅನುಭವಿಸುವನು.

ಈಗ, ಈ ಮೇಲಿನ ಎರಡು ರೀತಿಯ ಜೀವನವು ಸಾಮಾನ್ಯರಲ್ಲಿ ಮತ್ತು ಮಹಾತ್ಮರಲ್ಲಿ ಹೇಗೆ ಉಪಯೋಗಿಸಲ್ಪಡುವುದು ಎಂಬುವುದನ್ನು ನಾವು ನೋಡೋಣ. ಮೊದಲು ಸಾಮಾನ್ಯ ಮಾನವನ ಜೀವನವನ್ನು ಪರಿಶೀಲಿಸೋಣ. ಸಾಮಾನ್ಯನ ಜೀವನದಲ್ಲಿ, ಆತನು, ತನ್ನ ಜೀವನವನ್ನು ಸುಖಜೀವನದಲ್ಲೇ ಪೂರ್ತಿ ಮುಳುಗಿಸಿ ಬಿಡುವನು. ಅಂದರೆ, ಆತನು ತನ್ನ ಸುಖ, ಸೌಕರ್ಯಗಳ ವರ್ಧನೆಯೇ ಜೀವನ ಎಂದು ತಿಳಿದು ಜೀವಿಸುವವನಾಗುವನು. ಆಗ, ಆತನಿಗೆ ಯಾರಲ್ಲೂ ಆತ್ಮೀಯತೆಯನ್ನು ಇರಿಸಿಕೊಳ್ಳುವ ಜೀವನ ಮತ್ತು ಶಾಂತಿ ನೆಮ್ಮದಿಯ ಜೀವನವು ನಷ್ಟವಾಗುವುದು. ಮಾತ್ರವಲ್ಲ, ಆತನಿಗೆ ಇನ್ನೊಂದು ಶಾಪವೂ ಬರುವುದು! ಅದುವೇ 'ಇನ್ನೂ ಬೇಕು ಮತ್ತು ಇನ್ನೂ ಬೆಳೆಯಬೇಕು' ಎಂಬ ಆಸೆಯ 'ಕಾಡುವಿಕೆ' ಆಗಿದೆ. ಈ ಆಸೆಯ ಕಾಡುವಿಕೆಯಿಂದಾಗಿ ಆತನಿಗೆ ಆಗಲೇ ತನ್ನಲ್ಲಿರುವ ಆ ಸುಖ, ಸೌಕರ್ಯಗಳೂ ಆನಂದವನ್ನು ತಾರದೆಹೋಗುವವು! ಒಟ್ಟಿನಲ್ಲಿ, ಆತನು ಈ ಜಗತ್ತಿನ ಏನನ್ನೂ ಹೆಚ್ಚು ಕಾಲ ಆನಂಧಿಸುವುದಿಲ್ಲ ಮತ್ತು ಮಾನಸಿಕವಾಗಿ ಸಾಯುವ ತನಕವೂ ಹಿಂಸಿಸಲ್ಪಡುವನು. ಈ ರೀತಿ, ಸಾಮಾನ್ಯನ ಜೀವನವು ಜೀವನವೇ ಅಲ್ಲದ ಆ ಭಯಾನಕ ಕೊರಗುವಿಕೆ ಮಾತ್ರವಾಗುವುದು.

ಇನ್ನು, ಮಹಾತ್ಮರ ಜೀವನವನ್ನು ಪರಿಶೀಲಿಸೋಣ. ಮಹಾತ್ಮರು ತಮ್ಮ ಸಾಧನೆಯ ಮೂಲಕ ಆ ಮನಶ್ಯಾಂತಿ, ಮನೆ ಶಾಂತಿಯನ್ನು ಪಡೆದಿರುತ್ತಾರೆ. ಅಂದರೆ, ಅವರಿಗೆ ಆತ್ಮೀಯ ಸಂಬಂಧವನ್ನು ಬೇಕಾದಲ್ಲಿ ಇರಿಸಿಕೊಳ್ಳಲು ಸಾಧ್ಯವಾಗುವುದು. ಮತ್ತು ಶಾಂತಿಯಿಂದ ನೆಮ್ಮದಿಯಿಂದ ಜೀವಿಸಲು ಸಾಧ್ಯವಾಗುವುದು. ಆಗ ಅವರಿಗೆ ವ್ಯಕ್ತಿಜೀವನವು ಪೂರ್ತಿಯಾಗಿ ದೊರಕುವುದು. ಮಾತ್ರವಲ್ಲ, ಅವರಲ್ಲಿ, ಇನ್ನೂ ಬೇಕೆಂಬ ಕಾಡುವಿಕೆ ಇಲ್ಲವಾದುದರಿಂದ, ಅವರಿಗೆ ತಮ್ಮ ಜೀವನದಲ್ಲಿ, ಸುಖ, ಸೌಕರ್ಯವನ್ನು ಅವರ ಅರ್ಹತೆಗೆ ಬರುವಷ್ಟು, ತೃಪ್ತಿಯಿಂದ, ಆನಂದಿಸಲೂ ಸಾಧ್ಯವಾಗುವುದು!! ಹೀಗಿರುವಾಗ, ಮಹಾತ್ಮರು ಮಾನವ ಜೀವನದ ಎರಡು ಭಾಗಗಳನ್ನೂ ಪೂರ್ತಿಯಾಗಿ ಮತ್ತು ಆನಂದದಿಂದ ಅನುಭವಿಸುವವರಾಗುವರು. ಈ ರೀತಿಯಲ್ಲಿ ನೋಡುವಾಗ, ಮಹಾತ್ಮರು ಜೀವನದ ಎರಡು ಭಾಗಗಳನ್ನೂ ಆನಂದಿಸುವವರೆಂದೂ, ಜನಸಾಮಾನ್ಯರು ಮಾನವ ಜೀವನದ ಎರಡೂ ಭಾಗಗಳನ್ನೂ ಕಳಕೊಳ್ಳುವವರು ಎಂದೂ ತಿಳಿದುಕೊಳ್ಳಬಹುದು. ಮನಸ್ಸು ಸುಖವನ್ನು ಅನುಭವಿಸುವ ಸ್ಥಳವಾದರೆ, ಹೃದಯವು ಮಾನವ ಜೀವನದ ಸಾರವಾದ ಆ ಆತ್ಮೀಯತೆಯನ್ನು ಅನುಭವಿಸುವ ಸ್ಥಳವಾಗಿದೆ. ಈ ಎರಡು ಸೇರಿದಾಗ ಮಾತ್ರ ಮಾನವ ಜೀವನವಾಗುವುದು. ಈ

ರೀತಿಯಲ್ಲಿ, ಈ ಎರಡೂ ನದಿಗಳು ಸಂಗಮಿಸುವ ಜೀವನದ ಅತ್ಯಂತ ಆನಂದದ ನೆಲೆಯೇ, 'ಮಹಾತ್ಮರ ಜೀವನ' ಎಂಬ ಆ ಆನಂದ ಸಾಗರವಾಗಿರುವುದು.

ಈ ಆನಂದ ಸಾಗರವನ್ನು ಸೇರಲು ಸಾಧ್ಯವಾಗುವ ಆ ಸತ್ಯಜೀವನವನ್ನು, ಸರ್ವ ಧರ್ಮ, ಪಂಥದ ಜನರೂ ಪಡೆಯುವಂತಾಗಲಿ, ಮತ್ತು ಅದರಿಂದ ಹುಟ್ಟಿಬರುವ ಮಹಾತ್ಮರುಗಳು ಅನಂತ ಸತ್ಯಯುಗವನ್ನೇ ಈ ಧರೆಯಲ್ಲಿ ಸೃಷ್ಟಿಸಲಿ.

# ಧರ್ಮ, ಆಧ್ಯಾತ್ಮ, ಅವುಗಳ ಮಿಶ್ರಣದ ಅಪಾಯ, ಮತ್ತು ಪ್ರತ್ಯೇಕವಾಗಿ ತಿಳಿಯುವಲ್ಲಿನ ಲಾಭ

ಧರ್ಮ ಎಂದರೆ ಒಂದು ಗ್ರಂಥವೇ? ಸ್ವಲ್ಪ ನಂಬಿಕೆಗಳ ಆಚರಣೆಗಳೇ? ದೇವರೇ? ಸ್ವರ್ಗವೇ? ಮೋಕ್ಷವೇ? ಇವುಗಳಲ್ಲಿ ಯಾವುದೂ ಧರ್ಮದ ಭಾಗವಲ್ಲ! ಜನರು ಈ ಎಲ್ಲಾ ಆಧ್ಯಾತ್ಮಿಕ ವಿಚಾರಗಳನ್ನೇ ಧರ್ಮ ಎಂದು ತಪ್ಪು ತಿಳಿದುಕೊಂಡಿರುವರು. ಅಂದರೆ, ಆಧ್ಯಾತ್ಮ ಮತ್ತು ಧರ್ಮವು ಬೇರೆ ಬೇರೆ ಎಂದು ಅರ್ಥ. ಆಧ್ಯಾತ್ಮ ಇಲ್ಲದೆ ಧರ್ಮಕ್ಕೆ ಅಸ್ತಿತ್ವ ಇದೆ, ಆದರೆ ಧರ್ಮ ಇಲ್ಲದೆ ಆಧ್ಯಾತ್ಮಕ್ಕೆ ಅಸ್ತಿತ್ವವಿರುವುದಿಲ್ಲ. ಯಾಕೆಂದರೆ ಧರ್ಮವು ಮಾನವನ ಸ್ವಭಾವ ಶುದ್ಧಿಯನ್ನು ಹೇಳುವುದು. ಈ ಸ್ವಭಾವ ಶುದ್ಧಿ ಇಲ್ಲದೆ ಯಾವ ಸ್ವರ್ಗ ಅಥವಾ ಮೋಕ್ಷಗಳು ಈ ಜಗತ್ತಿನ ಯಾವ ತರದ ಆಧ್ಯಾತ್ಮಕ್ಕೂ ಸಾಧ್ಯವಾಗದು!! ಇನ್ನು, ದೇವರೇ ಇಲ್ಲದ ಧರ್ಮಗಳೂ ಇವೆ, ಮಾತ್ರವಲ್ಲ ಒಂದೇ ಧರ್ಮದೊಳಗೆ ಹಲವು ದೇವರು ಮತ್ತು ಅವುಗಳ ಹಲವು ರೀತಿಯ ಮೋಕ್ಷಗಳು ಇವೆ, ಎಂದೆಲ್ಲಾ ಆಗುವಾಗ, ಒಂದು ಧರ್ಮವನ್ನು ಯಾರಿಗೂ ಸ್ಪಷ್ಟವಾಗಿ ನಿರ್ವಚಿಸಲು ಸಾಧ್ಯವಾಗದಷ್ಟು ಗೊಂದಲಮಯವಾಗಿ ಹೋಯಿತು. ಇನ್ನು, ಇಂದು, ಧರ್ಮಗಳು ನಿರ್ವಚಿಸಲ್ಪಟ್ಟಿರುವುದು "ಒಂದು ಧರ್ಮಗ್ರಂಥ ಮತ್ತು ಅದರ ನಂಬಿಕೆ ಮತ್ತು ಆಚರಣೆಗಳನ್ನಾಗಿದೆ" ಎಂದು ನಮಗೆ ಎಲ್ಲರಿಗೂ ತಿಳಿದಿದೆ!! ಇದು ಧರ್ಮದ ನಿಜವಾದ ನಿರ್ವಚನೆಯೇ?

ಧರ್ಮ ಮತ್ತು ಆಧ್ಯಾತ್ಮವು ಜಗತ್ತಿನ ಯಾವುದೇ ಧರ್ಮದ ಎರಡು ಬೇರೆ ಬೇರೆ ಭಾಗಗಳಾಗಿವೆ. ಎಲ್ಲೆಡೆಯೂ ಇವು ಎರಡೂ ಮಿಶ್ರವಾಗಿಯೇ ಇರುವುದು. ಆದುದರಿಂದಲೇ ಧರ್ಮ ಎಂದ ಕೂಡಲೇ ಆ ಆಚಾರ, ನಂಬಿಕೆಗಳ ನೆನಪು ಮಾತ್ರ ಬಂದು ಅವುಗಳ ವೈರುಧ್ಯಗಳ ಹಿನ್ನೆಲೆಯಲ್ಲಿ ಧ್ವೇಷ, ರಕ್ತಪಾತವಾಗುವುದು. ಆದರೆ, ನಿಜವಾಗಿಯೂ ಧರ್ಮವು "ಇತರರು ಮತ್ತು ತಾನು ಚೆನ್ನಾಗಿ ಜೀವಿಸಬೇಕು" ಎಂಬ ರೀತಿಯಲ್ಲಿ ಒಂದು ಸಮಾಜಕ್ಕೆ ಬೇಕಾಗಿರುವ ವ್ಯಕ್ತಿ ಮತ್ತು ಸಮಾಜಿಕ ನಿಯಮಗಳು ಮಾತ್ರವಾಗಿವೆ. ಈ ನಿಯಮಗಳು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಹಿನ್ನೆಲೆಯಲ್ಲೇ ಇರುವ ಕಾರಣ, ಮತ್ತು ಅಲ್ಲಿ ಆಚಾರಗಳು, ದೇವರು, ಸ್ವರ್ಗ ಇತ್ಯಾದಿಗಳ ವೈರುಧ್ಯಗಳು ಇಲ್ಲದ ಕಾರಣ, ಧರ್ಮದೊಳಗೆ ಧ್ವೇಷ, ರಕ್ತಪಾತ ನಡೆಯುವ ಸಾಧ್ಯತೆ ಇರುವುದಿಲ್ಲ. ಇನ್ನು, ಆಧ್ಯಾತ್ಮವನ್ನು ಬೇರೆಯಾಗಿ ನೋಡಿದಾಗ, ಆಧ್ಯಾತ್ಮವು ಅವರವರ ಆಯ್ಕೆ ಎಂದು ಮಾತ್ರ ಆಗುವ ಕಾರಣ, ಯಾರೂ ಅದರ ಹಿನ್ನೆಲೆಯಲ್ಲಿ ರಕ್ತಪಾತ ಮಾಡಲಾರರು. ಹೀಗೆ ಜಗತ್ತಿನಲ್ಲಿ ಶಾಂತಿಯು ನೆಲೆಯಾಗಲು ಸಾಧ್ಯವಾಗುವುದು. ಇದುವೇ ಇವೆರಡನ್ನು ಮಿಶ್ರ ಮಾಡದೆ, ಪ್ರತ್ಯೇಕವಾಗಿ ತಿಳಿಯುವುದರಿಂದ ಜಗತ್ತಿಗೆ ಸಿಗುವ ಲಾಭವಾಗಿರುವುದು.

ಧರ್ಮದ ಅಡಿಪಾಯದಿಂದ ನೋಡುವಲ್ಲಿ ಧರ್ಮದ ಅರ್ಥವು ತ್ಯಾಗದ ಜೀವನ ಎಂದಾಗಿದೆ. ಅಧರ್ಮ ಎಂದರೆ ಸ್ವಾರ್ಥದ ಜೀವನ ಎಂದು ಅರ್ಥ. ಧರ್ಮ ಅಥವಾ ತ್ಯಾಗದ ಜೀವನವನ್ನು ಬಹಳ ಸರಳವಾಗಿ

ನಿರ್ವಚಿಸುವುದಾದರೆ, ಅದು, "ಇತರರೂ ಚೆನ್ನಾಗಿ ಜೀವಿಸಬೇಕು ಮತ್ತು ತಾನೂ ಚೆನ್ನಾಗಿ ಜೀವಿಸಬೇಕು ಎಂಬ ರೀತಿಯಲ್ಲಿನ ಸಾಮಾಜಿಕ ಮತ್ತು ವ್ಯಯಕ್ತಿಕ ನಿಯಮಗಳು" ಎಂದು ಹೇಳಬಹುದು. ಯಾವುದೋ ಒಂದು ದೇವರನ್ನು ನಂಬುವುದೋ, ಪುರಾಣ ಕಥೆಯನ್ನು ಪಠಿಸುವುದೋ, ಮತಾಂತರ ಮಾಡುವುದೋ, ಪ್ರಾಣಿಯನ್ನು ಕೊಂದು ತ್ಯಾಗವೆಂದು ಹೇಳಿ ಧರ್ಮ ಮಾರ್ಗಿಗಳಾಗುವುದೋ, ವರ್ಣಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಶೂದ್ರನನ್ನು ದೂರವಿರಿಸುವುದೋ, ಇವು ಯಾವುದೂ ಧರ್ಮವಲ್ಲ. ಅವು ಧರ್ಮದ ಹತ್ತಿರಕ್ಕೂ ಬರಲಾರದ ಸ್ವಾರ್ಥ ರೀತಿಯ ಶೋಷಣೆಗಳು ಮಾತ್ರ. ಇನ್ನು, ಧರ್ಮವು ಇತರರೂ ಮತ್ತು ತಾನೂ ಚೆನ್ನಾಗಿ ಇರಲು ಒಬ್ಬಾತನು ಏನೆಲ್ಲಾ ಮಾಡಲು ಸಾಧ್ಯ ಅದನ್ನು ಮಾಡಲು ಮಾನವನಿಗೆ ಸೂಚನೆ ನೀಡುವುದು ಅಷ್ಟೇ. ಇದಕ್ಕೆ ಗ್ರಂಥಗಳ ಅಗತ್ಯವಿಲ್ಲ, ಅದನ್ನು ಅರ್ಥ ಮಾಡಿಸಿ ಕೊಡುವ ಗುರುವಿನ ಅಗತ್ಯವಿಲ್ಲ. ಯಾಕೆಂದರೆ ಎಲ್ಲರಿಗೂ ಇತರರು ತನಗೆ ತೊಂದರೆ ಯಾವುದೆಲ್ಲಾ ರೀತಿಯಲ್ಲಿ ಕೊಡುವರು ಎಂದು ಸ್ಪಷ್ಟವಾಗಿ ಗೊತ್ತಿದೆ, ಮತ್ತು ಆ ತೊಂದರೆಗಳನ್ನು ತಾನು ಇತರರಿಗೆ ಮಾಡದಿದ್ದರೆ ಅದೇ ಧರ್ಮ ಆಗುವುದು. ಸಾರಧರ್ಮವು ಮಾನವರೆಲ್ಲರೂ ಸಮಾನರು ಎಂದು ಹೇಳುವುದು, ಆದರೆ ಯಾವಾಗ ತಾನು ಅಥವಾ ತಾವು, ವರ್ಣ, ಜಾತಿ, ಧರ್ಮಗಳಲ್ಲಿ ಇತರರಿಗಿಂತ ಮೇಲಿನವ ಅಥವಾ ಮೇಲಿನವರು ಎಂದು ಸಾಧಿಸಿ ಅದರಿಂದ ಲಾಭಪಡೆಯಬೇಕೋ, ಆಗ, ಮೊದಲಿಗೆ, ಇತರರ ಒಳಿತನ್ನು ಮುಖ್ಯವಾಗಿ ಕಾಣುವ ಆ ಸಾರಧರ್ಮದ ಹೃದಯವನ್ನೇ ನಾಶಮಾಡಬೇಕಾಗಿ ಬರುವುದು. ಹಾಗೆ ಮಾಡುವಾಗ, ಆ ಗುಟ್ಟು ಯಾರಿಗೂ ತಿಳಿಯದ ಹಾಗೆ ಮಾಡುವಲ್ಲಿ ಮಾತ್ರ ಧರ್ಮವನ್ನು ದೊಡ್ಡ ದೊಡ್ಡ ವಿವರಣೆಗಳೊಂದಿಗೆ ದೊಡ್ಡದಾಗಿ ಚಿತ್ರಿಸುವ ಅಗತ್ಯ ಬರುವುದು! ಆಗ ಅದಕ್ಕೆ ಗ್ರಂಥಾಲಯವೇ ಅಗತ್ಯವಾಗುವುದು. ಇನ್ನೊಂದು ವಿಷಯವನ್ನೂ ದಯವಿಟ್ಟು ತಿಳಿಯಲು ಪ್ರಯತ್ನಿಸಬೇಕು. ಧರ್ಮವು ಆಯಾ ಸಮಾಜ ಕಂಡುಹಿಡಿದಿರುವ ಶಾಸ್ತ್ರಗಳಿಕೆಗಳು ಅಲ್ಲ. ಎಲ್ಲಾ ಧರ್ಮಗಳಲ್ಲೂ ಆ ರೀತಿಯ ಶಾಸ್ತ್ರಗಳು ಹಲವು ಇವೆ. ಅವನ್ನು ಆ ಕಾಲದ ಜನರ ವೈಜ್ಞಾನಿಕ ಕಂಡುಹಿಡಿಯುವಿಕೆ ಎಂಬಲ್ಲಿ ಮಾತ್ರ ಹೇಳಬಹುದಷ್ಟೇ. ಉದಾಹರಣೆಗೆ, ಎಲ್ಲಾ ಧರ್ಮಗಳಲ್ಲೂ ಹಿಂದಿನಿಂದಲೇ ಅವರದೇ ಆದ ವೈದ್ಯರು ಮತ್ತು ಔಷದಿಗಳು ಎಲ್ಲಾ ಇದ್ದವು. ಇವೆಲ್ಲ ಧರ್ಮದೊಂದಿಗೆ ಸೇರಿಸಿಕೊಳ್ಳುವುದು ಸರಿಯಲ್ಲ. ಹಾಗಿದ್ದರೆ, ಪಾಶ್ಚಾತ್ಯ ದೇಶದವರು ಕಂಡು ಹಿಡಿದ ಸರ್ವವನ್ನೂ ಅವರ ಧರ್ಮದೊಂದಿಗೆ ಹೋಲಿಸಿದರೆ, ಇನ್ನಾವ ಧರ್ಮಕ್ಕೂ ಆ ಧರ್ಮದ ಮುಂದೆ ನಿಲ್ಲಲು ಸಾಧ್ಯವಾಗಲಾರದು!! ಹೀಗೆ, ಗ್ರಂಥವಿಲ್ಲದ, ಮತ್ತು ಮಂತ್ರ, ತಂತ್ರಗಳಿಲ್ಲದ, ಬರೇ 'ಇತರರು ಮತ್ತು ತಾನೂ ಚೆನ್ನಾಗಿ ಜೀವಿಸುವ' ಆ ಆದರ್ಶಗಳ ಅನುಷ್ಠಾನವಾದ 'ಧರ್ಮ'ವು ಇಷ್ಟೆಲ್ಲಾ ಗೊಂದಲಗಳೊಳಗೆ ಹುದುಗಿ ಹೋಗಿರುವುದು ನಮಗೆ ಸ್ಪಷ್ಟವಾಗಿ ಕಾಣಿಸುವುದು. ನಿಜವಾಗಿಯೂ, ಧರ್ಮವು ಅತಿ ಸರಳವಾಗಿದೆ ಮತ್ತು ಚಿಕ್ಕ ಮಕ್ಕಳಿಗೂ ಅದನ್ನು ಪೂರ್ಣವಾಗಿ ಅನುಷ್ಠಿಸಲೂ ಸಾಧ್ಯವೆಂಬ ರೀತಿಯಲ್ಲಿ ಸ್ಪಷ್ಟವಾಗಿದೆ. ಇದನ್ನು ಸರ್ವ ಧರ್ಮಗಳಲ್ಲೂ ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಲ್ಲಿ ಅದು ಒಂದು ಅದ್ಭುತ ಸತ್ಯಯುಗವನ್ನೇ ಸೃಷ್ಟಿಸುವುದು. ಎಲ್ಲರ ನಂಬಿಕೆ, ಆಚಾರಗಳು ಇದರಿಂದ ಇಲ್ಲವಾಗುವುದಿಲ್ಲ. ಆದರೆ ಅವನ್ನು ಪ್ರತ್ಯೇಕಿಸಿ ಆಧ್ಯಾತ್ಮವೆಂದು ಗುರುತಿಸಿ ಅವರವರ ಆಯ್ಕೆಯ ರೀತಿಯಲ್ಲಿ ಪಾಲಿಸಿಕೊಳ್ಳಬಹುದು. ಅಲ್ಲಿ, ಅವರು ಅವರ ದೇವರಿಂದ ಅವರ ರೀತಿಯಲ್ಲೇ ಅನುಗ್ರಹವನ್ನು ಪಡೆಯಬಹುದು. ಅದೇ ರೀತಿ, ಸತ್ತ ನಂತರ ಅವರವರ ದೇವರ

ಲೋಕವನ್ನು ಸೇರುವುದೋ ಅಥವಾ ಇನ್ನಿತರ ಸ್ವರ್ಗಲೋಕಗಳನ್ನು ಸೇರುವುದೋ, ಅವೆಲ್ಲವನ್ನು ಅವರವರ ಇಷ್ಟದಂತೆ ಮಾಡಿಕೊಳ್ಳಬಹುದು.

ಇನ್ನು ಉಳಿದಿರುವುದು, ಈ 'ಇತರರೂ ಚೆನ್ನಾಗಿರಬೇಕು ಮತ್ತು ತಾನೂ ಚೆನ್ನಾಗಿರಬೇಕು' ಎಂಬಲ್ಲಿ ಆ ಆದರ್ಶವನ್ನು ಹೃದಯಕ್ಕೆ ತರಲು ಮಾನವರಿಗೆ ಸುಲಭದ ಸಾಧನೆ ಏನು ಎಂದಾಗಿದೆ. ಬರೇ ನಿಯಮಗಳಿದ್ದಲ್ಲಿ ಸಮಾಜವು ಉದ್ಧಾರವಾಗಲಾರದು, ಅಲ್ಲಿ ರಹಸ್ಯವಾಗಿ ಮೋಸ, ವಂಚನೆಗಳು ತಾಂಡವವಾಡುವವು ಅಷ್ಟೆ. ಆದುದರಿಂದಲೇ ಈ ಧರ್ಮವು ಮಾನವನ ಹೃದಯದಲ್ಲಿ ಹುಟ್ಟಬೇಕು ಎನ್ನುವುದು. ಇದನ್ನು ಹೇಗೆ ಸಾಧಿಸಬಹುದು ಎಂದು ನೋಡೋಣ. ಇದನ್ನು ಅರಿಯುವುದು ಬಹಳ ಸುಲಭವಾಗಿದೆ. ಇತರರು ಚೆನ್ನಾಗಿರಬೇಕು ಎಂಬಲ್ಲಿ ಮಾನವನಿಗೆ ಯಾವ ಭಾವನೆ ಬೇಕು ಎಂದು ಆಲೋಚಿಸುವಾಗ ಅದು ನಿಸ್ವಾರ್ಥ ಭಾವನೆ ಎಂದು ಸ್ಪಷ್ಟವಾಗುವುದು. ಇನ್ನು, ಈ ನಿಸ್ವಾರ್ಥ ಭಾವನೆಯನ್ನು ಸುಲಭದಲ್ಲಿ ಹೇಗೆ ಬೆಳೆಸಬಹುದೆಂದು ನೋಡಬೇಕಾಗಿದೆ. ಬರೇ ಮಾತುಗಳು ಕಂಠಪಾಠದ ತರವಾಗಿ ಪ್ರಾಯೋಗಿಕವಾಗಲಾರದು, ಅದಕ್ಕೆ ಮಾನವನು ಈ ಭಾವನೆಯನ್ನು ಬೆಳೆಸುವ ದಾರಿಯನ್ನು ನೋಡಬೇಕಾಗಿದೆ. ತನಗೆ ತೊಂದರೆಗಳು ಬರಬಾರದು ಎಂದು ಆಗ್ರಹಿಸುವಲ್ಲಿ ಅವು ಇತರರಿಗೂ ಬರಬಾರದು ಎಂಬ ನಿಸ್ವಾರ್ಥ ಭಾವನೆಯನ್ನು ನಮಗೆ ಆ ಸಾರ್ವತ್ರಿಕ ಸತ್ಯ, ಸಾರ್ವತ್ರಿಕ ಪ್ರೀತಿ, ಮತ್ತು ಆ ಸಾರ್ವತ್ರಿಕ ನೈತಿಕತೆಯ ಹಿನ್ನೆಲೆಯಲ್ಲಿ ಮಾತ್ರ ಪಡೆಯಲು ಸಾಧ್ಯವಾಗುವುದು. ಇವುಗಳ ಹಿನ್ನೆಲೆ ಇಲ್ಲದೆ ಯಾವ ಕಾಲಕ್ಕೂ ನಾವು ನಿಸ್ವಾರ್ಥಿಗಳಾಗಲಾರೆವು. ಆದುದರಿಂದ ಈ ಮೂರು ಸ್ವಭಾವಗಳ ಹಿನ್ನೆಲೆಯಲ್ಲಿ ನಾವು ಗುಂಪು, ಗುಂಪುಗಳಾಗಿ ಮನೆ ಮನೆಗಳಲ್ಲಿ ಮತ್ತು ಆರಾಧನಾಲಯಗಳಲ್ಲಿ ಕುಳಿತು ಆಗಾಗ್ಗ ಸತ್ಯಚಿಂತನೆ ಎಂಬ ಆ ಧರ್ಮಜೀವನ ಅಥವಾ ಸತ್ಯಜೀವನವನ್ನು ಪಡೆಯುವ ಆ ತರ್ಕಚಿಂತನೆಯನ್ನು ಮಾಡಬೇಕಾಗಿದೆ. ಇದರೊಂದಿಗೆ, ಎಲ್ಲಾ ಧರ್ಮ, ಪಂಥದವರೂ ಸೇರಿರುವ ಆ ಸಾರ್ವಜನಿಕ ಸತ್ಯಚಿಂತನೆಯನ್ನೂ ಆಗಾಗ್ಗ ಮಾಡುವುದಾದರೆ, ಆ ಸತ್ಯಯುಗವು ನಮ್ಮೆಲ್ಲರ ಮನೆಬಾಗಿಲಿಗೆ ಬಂದೇಬಿಡುವುದು!!! ಸತ್ಯಯುಗವನ್ನು ಯಾವ ರಾಜರಿಗೂ ಸೃಷ್ಟಿಸಲು ಸಾಧ್ಯವಾಗುವುದಿಲ್ಲ, ಇದನ್ನು ಯಾವ ಸರಕಾರಕ್ಕೂ ಸೃಷ್ಟಿಸಲು ಸಾಧ್ಯವಾಗುವುದಿಲ್ಲ, ಮಾತ್ರವಲ್ಲ, ಇದನ್ನು ಯಾವ ಪಾಂಡಿತ್ಯದಿಂದಲೂ ಸೃಷ್ಟಿಸಲು ಸಾಧ್ಯವಿಲ್ಲ, ಆದರೆ ಇದನ್ನು ಮಾನವರ ಹೃದಯಗಳಿಗೆ ಮಾತ್ರ ಸೃಷ್ಟಿಸಲು ಸಾಧ್ಯವಾಗುವುದು ಎಂಬುವುದನ್ನು ನಾವು ಮರೆಯಬಾರದು.

# ದೇವರು ಸೈತಾನ ಮತ್ತು ಮಹಾತ್ಮ

ಮೊದಲು ನಾವು ದೇವರು ಮತ್ತು ಸೈತಾನ ಎಂದರೆ ಏನು ಎಂಬುವುದನ್ನು ತಿಳಿಯಬೇಕು. ದೇವರು ಮತ್ತು ಸೈತಾನ ಇಬ್ಬರಿಗೂ ಶಕ್ತಿ ಇವೆ. ದೇವರ ಶಕ್ತಿ ಬಹಳ ಹೆಚ್ಚು ಎಂದು ಹೇಳಬಹುದೇ ಹೊರತು ಮಾನವನ ಜೀವನದಲ್ಲಿ ಭಕ್ತರ ಕಷ್ಟಗಳನ್ನು ಪರಿಹರಿಸುವಲ್ಲಿ ದೇವರ ಆ ನೇರ ಪ್ರಭಾವವು ಕಾಣಿಸದಾದಾಗ ಮತ್ತು ಇತರ ದುಷ್ಟಶಕ್ತಿಗಳೂ ಬಹಳ ತೊಂದರೆಗಳನ್ನು ಭಕ್ತರಿಗೆ ನೀಡುವಾಗ, ಆ ದೇವರು ಸರ್ವಶಕ್ತನೆಂಬ ಮಾತಿಗೆ ಮಾನವನಿಗೆ ನೇರ ಸಾಕ್ಷ್ಯಾಧಾರಗಳು ಇಲ್ಲವಾಗಿಬಿಡುವವು. ಇನ್ನು, ಇವುಗಳು ತಮ್ಮೊಳಗಿನ ವ್ಯತ್ಯಾಸವನ್ನು ಮಾತ್ರ ನಾವು ನೋಡುವುದಾದರೆ, ದೇವರು ಶ್ರೇಷ್ಠ ಸ್ವಭಾವವನ್ನು ಹೊಂದಿರಲೇಬೇಕು ಎಂದು ತಿಳಿಯುವುದು. ಕ್ರೂರಿಯಾಗಿರುವುದು ಅಥವಾ ಇನ್ನಿತರ ಭಯಾನಕ ಸ್ವಭಾವಗಳು ಅವು ಸೈತಾನನ ಸ್ವಭಾವ ಎಂದೂ ಹೇಳಬೇಕಾಗುವುದು. ಆದುದರಿಂದ, ಯಾರಾದರೂ ದೇವರಲ್ಲೂ ಆ ದುಷ್ಟ ಸ್ವಭಾಗಳು ಇವೆ ಎಂದು ವಿವರಿಸುವುದು ಮತ್ತು ಆ ಎರಡು ಶಕ್ತಿಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲವೆಂದು ವಿವರಿಸುವುದೂ ಒಂದೇ ಆಗುವುದೆಂದು ಹೇಳಬಹುದು.

ಮಾನವರಲ್ಲೂ ದೈವೀಕ ಸ್ವಭಾವ ಎಂದು ಹೇಳುವ ಆ ಮಹತ್ತಾದ ಸ್ವಭಾವಗಳು ಇದ್ದಲ್ಲಿ, ಅವರನ್ನು ಜಗತ್ತು 'ಮಹಾತ್ಮ' ಎಂದು ಗುರುತಿಸಿರುವುದನ್ನು ನಾವು ಕಾಣುತ್ತೇವೆ. ಅಂದರೆ, ಈ ಮಹಾತ್ಮರು ನಿಸ್ವಾರ್ಥಿಗಳಾಗಿರುವವರು ಮತ್ತು ಅವರು ಸತ್ಯವಾದಿಗಳಾಗಿರುವರು, ಅಂದರೆ, ಯಾವುದಾದರೂ ಒಂದನ್ನು ಕಣ್ಣು ಮುಚ್ಚಿ ನಂಬುವವರೋ ಅಥವಾ ಪ್ರೋತ್ಸಾಹಿಸುವವರೋ ಆಗಿರುವುದಿಲ್ಲ ಎಂದು ಅರ್ಥ. ಸತ್ಯ, ನ್ಯಾಯ ಎಲ್ಲಿದ್ದರೂ ಅವನ್ನು ಹಿಡಿದೆತ್ತುವವರು ಈ ಮಹಾತ್ಮರುಗಳು. ಆದರೆ, ನಂಬಿಕೆಯವರು ಎಲ್ಲಾ ಧರ್ಮಗಳಲ್ಲೂ ತಮ್ಮ ತಮ್ಮದನ್ನು ಮಾತ್ರ ಕಣ್ಣು ಮುಚ್ಚಿ ನಂಬುತ್ತಾ, ಇತರರ ನಂಬಿಕೆ, ಆಚಾರ, ಗ್ರಂಥಗಳಲ್ಲಿ ತಪ್ಪನ್ನು ಮಾತ್ರ ತೋರಿಸುತ್ತಾ ಮತಾಂತರದ ವರೆಗೆ ಮುಂದುವರಿಯುವರು ಮತ್ತು ಅದರಲ್ಲೇ ತಮ್ಮ ಎಲ್ಲಾ ಶ್ರದ್ದೆಯನ್ನು ಇಟ್ಟು ಜೀವಿಸುವರು!! ಇದರಿಂದಲೇ ಪ್ರೀತಿಯ ಕಡಲು ಆಗಿರುವ ಹಿಂದಿನ ಹಲವು ಆಧ್ಯಾತ್ಮ ವ್ಯಕ್ತಿಗಳನ್ನು ಇತರ ಧರ್ಮದ ಹಲವು ಧರ್ಮ ಪಂಡಿತರುಗಳು ಸೈತಾನ ಎಂದು ಕರೆದಿರುವುದು!! ಇದರ ಅರ್ಥ ಇಷ್ಟೇ, ದೇವರಿಗೆ ಸೈತಾನನಗಿಂತ ಬೇರೆ ಇರುವ ಆ ಒಂದೇ ಒಂದು ಮತ್ತು ಆ ಮುಖ್ಯ ವ್ಯತ್ಯಾಸವನ್ನೂ ಮಾನವನು ನೋಡದೆ, ಬರೇ ತಮ್ಮ ಧರ್ಮ ಪುಸ್ತಕದಲ್ಲಿರುವ ಎಲ್ಲವನ್ನೂ ಸರಿ ಮತ್ತು ಶ್ರೇಷ್ಠ ಎಂದು ವಾದಿಸುವ ರೀತಿ ಇವರದು!! ತಮ್ಮದೇ ದೇವರು ಆಗ ಭಯಾನಕವಾಗಿ ಕಾಣಿಸಿದರೂ ಅದು ಅವರಿಗೆ ಚಿಂತೆಯ ವಿಷಯವೇ ಅಲ್ಲ! ದೇವರನ್ನು ಆ ಪವಿತ್ರ ಸ್ವಭಾವದ ಹಿನ್ನೆಲೆಯಲ್ಲಿ ನೋಡಿರುತ್ತಿದ್ದರೆ, ಈ ರೀತಿಯಲ್ಲಿ, ತಮ್ಮ ಧರ್ಮದವರಲ್ಲದ ಇತರ ಧರ್ಮಗಳ ಮಹಾತ್ಮರನ್ನು ಯಾವ ಕಾಲಕ್ಕೂ ಸೈತಾನ ಅಥವಾ ದಾರಿ ತಪ್ಪಿದ ಆತ್ಮಗಳು ಎಂದೆಲ್ಲಾ ಹೇಳಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ.

ಒಂದು ವಿಚಾರವನ್ನು ಇಲ್ಲಿ ನಾವು ಅರಿತಲ್ಲಿ ಅದು ಹಲವು ಗೊಂದಲಗಳನ್ನು ಇಲ್ಲವಾಗಿಸುವುದು. ಅದೇನೆಂದರೆ, ಸೈತಾನನಿಗೆ ಎಂದಿಗೂ ಉತ್ತಮನಾಗಿರಲು ಸಾಧ್ಯವಿಲ್ಲ ಎಂಬುವುದೇ ಆ ವಿಚಾರವಾಗಿದೆ.

ಅಂದರೆ, ಉದಾಹರಣೆಗೆ ಸೂರ್ಯನಿಗೆ ಎಂದಿಗೂ ಕತ್ತಲೆಯನ್ನು ಸೃಷ್ಟಿಸಲು ಸಾಧ್ಯವಾಗಲಾರದು, ಅದೇ ರೀತಿ, ಕತ್ತಲೆಗೆ ಎಂದಿಗೂ ಬೆಳಕನ್ನೂ ಸೃಷ್ಟಿಸಲು ಸಾಧ್ಯವಾಗಲಾರದು. ಹಾಗೆ ಸೃಷ್ಟಿಸಿದಲ್ಲಿ ಅವುಗಳು ತಮ್ಮ ಅಸ್ತಿತ್ವವನ್ನೇ ಕಳಕೊಳ್ಳುವವು. ಅದೇ ರೀತಿ, ಸೈತಾನನಿಗೆ ಈ ಜಗತ್ತಲ್ಲಿ ಒಳಿತನ್ನು ಸೃಷ್ಟಿಸಲು ಸಾಧ್ಯವಾಗಲಾರದು. ಆದರೆ ಆತನಿಗೆ ಒಳಿತಿನ ಅಥವಾ ಉತ್ತಮನ ತರ ನಟಿಸಲು ಮಾತ್ರ ಸಾಧ್ಯವಾಗುವುದು ಅಷ್ಟೆ. ಇದರ ಅರ್ಥ, ಯಾವ ಸೈತಾನನಿಗೂ ನಿಜವಾಗಿಯೂ ಜೀವನ ಪರ್ಯಂತ ಉತ್ತಮನಾಗಿದ್ದು ಮತ್ತು ಜಗತ್ತಿಗೆ ಮಾದರಿಯಾಗಿದ್ದು ಜೀವಿಸಲು ಸಾಧ್ಯವಾಗಲಾರದು ಎಂದಾಗಿದೆ, ಯಾಕೆಂದರೆ ಹಾಗೆ ಮಾಡಿದಲ್ಲಿ ಸೈತಾನನು ತನ್ನ ಅಸ್ತಿತ್ವವನ್ನೇ ಕಳಕೊಳ್ಳುವನು!! ಆದುದರಿಂದ ಜೀವನ ಪರ್ಯಂತ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯಲ್ಲಿಯೇ, ನಿಸ್ವಾರ್ಥದಿಂದ, ಇತರ ಮಾನವರಿಗಾಗಿ ಜೀವಿಸಿ ಹೋದ ಆ ಅದ್ಭುತ ಮಹಾತ್ಮರುಗಳನ್ನು ಸೈತಾನರು ಎನ್ನುವುದು, ಅದು ನಿಜವಾಗಿಯೂ, ಅತಿ ಭಯಾನಕ ದೈವ ನಿಂದನೆ ಮಾತ್ರ ಆಗುವುದು ಎಂದು ನಾವು ತಿಳಿಯಬೇಕು.

# ಪರಿಹಾರ ಮಾರ್ಗಕ್ಕೆ ಇರುವ ಕೆಲವು ತಡೆಗಳು

ಈ ಜಗತ್ತು ಆ ಪ್ರಾಚೀನ ವಾಮಾಚಾರದ ಕೈಯೊಳಗೆ ಸಿಕ್ಕಿಕೊಂಡಿರುವುದನ್ನು ನಾನು ಹಲವು ರೀತಿಯಲ್ಲಿ ತೋರಿಸಿಕೊಡುವ ಪ್ರಯತ್ನವನ್ನು ಮಾಡಿದ್ದೇನೆ. ನಾನು ಬರೇ ತರ್ಕವನ್ನು ಉಪಯೋಗಿಸಿಲ್ಲ, ಬದಲು, ಸಾರ್ವತ್ರಿಕ ಸತ್ಯದ ಹಿನ್ನೆಲೆಯ ತರ್ಕವನ್ನು ಎಲ್ಲಾ ಕಡೆಯೂ ಉಪಯೋಗಿಸಿರುವುದು ಎಂದು ತಿಳಿಯಬೇಕು. ಆ ರೀತಿಯನ್ನೇ ಅವಲಂಭಿಸಿ ಸತ್ಯವನ್ನು ತಿಳಿಸುವ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ನಂಬಿಕೆಯವರ ವಿಷಯವೇ ಬೇರೆ, ಅವರು ಇತರ ಯಾವುದೂ ಸರಿ ಇಲ್ಲ ಎಂದೂ, ತಮ್ಮದು ಮಾತ್ರ ಸರಿ ಎಂದು ನಂಬುವವರು. ಅಲ್ಲಿ ಪ್ರಶ್ನೆಗಳಿಗೂ ಅವಕಾಶವಿಲ್ಲ ಮತ್ತು ತರ್ಕವೂ ಇಲ್ಲ. ಆದರೆ, ತಮ್ಮಲ್ಲಿ ಇರುವುದನ್ನು ಹೇಗಾದರೂ ಮಾಡಿ "ಸರಿ" ಮಾಡುವ ಆ ಮೊಂಡು ವಾದಗಳು ಮಾತ್ರ ಇರುವವು. ಅಂದರೆ, ಕೊನೆಯಲ್ಲಿ ನಂಬಿಕೆಯವನು ತನ್ನದು ಮಾತ್ರ ಸರಿ ಅಥವಾ ಹೆಚ್ಚು ಸರಿ ಎಂಬಲ್ಲಿ ತನ್ನ ವಾದವನ್ನು ನಿಲ್ಲಿಸುವನು!! ಈಗ, ಎಲ್ಲಾ ಧರ್ಮ, ಪಂಥದವರೂ ಇದೇ ರೀತಿ ವಾದ ಮಾಡುವಾಗ, ಆ "ನಿಜವಾದ ಸತ್ಯ"ವನ್ನು ಇವರು ಎಲ್ಲರೂ ಸೇರಿ ಆಲೋಚಿಸಲೂ ಸಾಧ್ಯವಾಗದ ಶೋಚನೀಯ ಸ್ಥಿತಿಗೆ ನೂಕುತ್ತಿರುವುದು ಸ್ಪಷ್ಟವಾಗುವುದು!!

ಇನ್ನು, ನನಗೆ ತಿಳಿಸಲಿರುವ ಒಂದು ಮುಖ್ಯ ವಿಷಯವೆಂದರೆ, ಅದು ಆ ಪ್ರಾಚೀನ ವಾಮಾಚಾರದ ಪ್ರಭಾವವನ್ನು ತಡೆಗಟ್ಟಲಿರುವ ಪರಿಹಾರವಾದ "ಜಾಗತಿಕ ಒಗ್ಗಟ್ಟು, ಧರ್ಮ, ಪಂಥಗಳ ಸಾರ ಜೀವನದ ಹಿನ್ನೆಲೆಯಲ್ಲಿ" ಎಂಬ ಆಶಯದ ಕುರಿತು ಆಗಿದೆ. ಈ ಪರಿಹಾರ ಮಾರ್ಗದಲ್ಲಿ ಯಾರೂ ಅವರವರ ಧರ್ಮವನ್ನು ಬಿಡಬೇಕೆಂದಿಲ್ಲ. ಅದೇ ರೀತಿ, ಅವರವರ ಅಚಾರ ನಂಬಿಕೆಗಳನ್ನೂ ಬಿಡಬೇಕೆಂದಿಲ್ಲ. ಒಟ್ಟು ಮಾಡಬೇಕಾಗಿರುವ ಕೆಲಸ ಏನೆಂದರೆ ಆ ಪ್ರಾಚೀನ ವಾಮಾಚಾರದ ಪ್ರಭಾವದಿಂದ ಬಿಡಿಸಿಕೊಳ್ಳುವುದಕ್ಕಾಗಿ, ಜಗತ್ತಿನ ಎಲ್ಲಾ ಜನರು, ತಮ್ಮ ತಮ್ಮ ಧರ್ಮ, ಪಂಥಗಳ ಸಾರದ ಭಾಗಕ್ಕೆ ಹೆಚ್ಚು ಒತ್ತು ಕೊಡುವುದಾಗಿದೆ. ಯಾಕೆಂದರೆ ಈ ಸಾರದ ಭಾಗದಲ್ಲಿ ಎಲ್ಲಾ ಧರ್ಮ, ಪಂಥಗಳಲ್ಲೂ ಒಂದೇ ರೀತಿಯಲ್ಲಿ ಹೇಳಿರುವುದನ್ನು ನಮಗೆ ಕಾಣಬಹುದು. ಇಲ್ಲಿ ನಮಗೆ ಒಂದಾಗಿ ಕುಳಿತು ಸಾರ್ವಜನಿಕ ಸತ್ಯಚಿಂತನೆಯನ್ನು ಮಾಡಬಹುದು. ಈ ರೀತಿಯಲ್ಲಿ ಸಾರ್ವಜನಿಕ ಸತ್ಯಚಿಂತನೆಗಳು ಅಲ್ಲಲ್ಲಿ ಏರ್ಪಡಿಸಲ್ಪಡುವಾಗ ಜಗತ್ತು ತಾನಾಗಿ ಒಂದಾಗುವುದು! ಸತ್ಯಚಿಂತನೆಯ ಪ್ರತ್ಯೇಕತೆ ಎಂದರೆ ಅಲ್ಲಿ ಒಳಿತಿನ ಬಗ್ಗೆ ಮಾತಾಡುವುದಾಗಿದೆ, ಆದರೆ ಯಾವಕಾಲಕ್ಕೂ ನೋವನ್ನು ಉಂಟು ಮಾಡುವ ತರದಲ್ಲಿ ದೂಷಿಸುವ ರೀತಿ ಇಲ್ಲ. ಮನೆ, ಆಲಯಗಳಲ್ಲಿ ಈ ಸಾರದ ಜೀವನದ ಕುರಿತಾದ ಸತ್ಯಚಿಂತನೆಯ ಹೊರತಾಗಿ ಈ ಸಾರ್ವಜನಿಕ ಸತ್ಯಚಿಂತನೆಯೂ ಸೇರಿದಾಗ ಪರಿಹಾರ ಮಾರ್ಗವು ಪೂರ್ಣ ಪ್ರಮಾಣದ ಫಲವನ್ನು ಕೊಡಲು ಆರಂಭಿಸುವುದು. ಆಗ ನಿಧಾವಾಗಿ ಜಗತ್ತು ಆ ಸತ್ಯಯುಗದ ಪಾವನ ಭೂಮಿಯನ್ನು, ಸತ್ಯಚಿಂತನೆಯಿಂದ ತೊಳೆದು ಪವಿತ್ರಗೊಳಿಸಿದ ತನ್ನ ಪಾದಗಳಿಂದ ಸ್ಪರ್ಶಿಸುವುದು!

ಈಗೀಗ ಎಲ್ಲಾ ಧರ್ಮ, ಪಂಥಗಳಲ್ಲೂ ಹೆಚ್ಚೆಚ್ಚು ಧರ್ಮಪಂಡಿತರುಗಳು ಧರ್ಮ, ಪಂಥಗಳ ಸಾರದ ಕಡೆಗೆ ಗಮನ ಹರಿಸುವುದನ್ನು ನಮಗೆ ಕಾಣಲು ಸಾಧ್ಯವಾಗುವುದು. ಆದುದರಿಂದ ಜಾಗತಿಕ ಪರಿಹಾರವೆಂಬ ಈ ಮಹಾಕಾರ್ಯವು ಅಂಥವರಿಂದಲೇ ಆರಂಭವಾಗಲಿ. ಧರ್ಮದ ಸಾರದ ಕಡೆಗೆ ಶ್ರದ್ದೆ ಇಟ್ಟಿರುವ ಈ ಜಗತ್ತಿನ ಸರ್ವ ಧರ್ಮ, ಪಂಥಗಳ ಆ ಎಲ್ಲಾ ಧರ್ಮಪಂಡಿತರುಗಳಿಗೂ ನನ್ನ ಹೃತ್ಪೂರ್ವಕ ನಮನಗಳು.

ಈ ಮಹಾಕಾರ್ಯಕ್ಕೆ ಅಡ್ಡಿಯಾಗಿ ಬರುವ ಇನ್ನೊಂದು ರೀತಿಯ ಮನುಷ್ಯವರ್ಗವು ಎಲ್ಲಾ ಧರ್ಮ, ಪಂಥಗಳಲ್ಲೂ ಇರುವವು. ಅವೇ ಅನೈತಿಕ ಮಾರ್ಗಿಗಳ ವರ್ಗವಾಗಿದೆ!! ಈ ವರ್ಗದವರು ಈ ಜಗತ್ತಲ್ಲಿ ನೈತಿಕತೆಯು ಬೆಳೆದು ಬರುವುದನ್ನು ನೇರ ಅಥವಾ ಪರೋಕ್ಷವಾಗಿ ತಪ್ಪಿಸಲು ಪ್ರಯತ್ನಿಸುವರು!! ತಾನು ಅನೈತಿಕ ಮಾರ್ಗದಲ್ಲಿರುವಾಗ, ತಮ್ಮ ಕಿರಿಯರನ್ನೂ ಅವರದೇ ಮಟ್ಟಕ್ಕೆ ತಗ್ಗಿಸುವ ಸಮಾಜ ಘಾತಕ ಕೆಲಸವನ್ನು ಇವರು ಮಾಡುವರು. ಉದಾಹರಣೆಗೆ, ಕುಡಿತ, ಗಾಂಜಾ ಸೇವನೆ, ಇತ್ಯಾದಿ ವ್ಯಸನಗಳಿಗೆ ಸಮಾಜದಲ್ಲಿ ಇತರರೂ ಬಲಿಯಾಗುವಂತೆ ಇತರರಲ್ಲಿ ಪ್ರಲೋಭಿಸುವ ಕೆಲಸವನ್ನು ಇವರು ಮಾಡುವರು. ಅದೇ ರೀತಿಯಲ್ಲಿ, ಒಂದು ವರ್ಗ ಹೆಣ್ಣು, ಗಂಡುಗಳು ಇಂದು ಅನೈತಿಕ ಕಾಮ ವ್ಯಸನಿಗಳಾಗಿ ಅದಕ್ಕೆ ಆಂಗ್ಲ ಭಾಷೆಯ ಹೊಸ ಹೊಸ ಹೆಸರನ್ನು ಕೊಟ್ಟು, ಸಮಾಜದಲ್ಲಿ ಭಯಾನಕ ರೀತಿಯಲ್ಲಿ, ಜನರು ಅದರ ಪ್ರಲೋಭನೆ ಒಳಗಾಗುವಂತೆ ಮಾಡುವರು. ಈ ಮೇಲಿನ ಪರಿಹಾರ ಮಾರ್ಗಕ್ಕೆ ಇದರಷ್ಟು ತಡೆಯನ್ನು ಇನ್ನು ಯಾವುದೂ ಉಂಟುಮಾಡಲಾರದು!!

ನಾವು ತಿಳಿಯಬೇಕಾಗಿರುವುದು ಏನೆಂದರೆ, ಈ ಮೇಲೆ ಸೂಚಿಸಿರುವ ಪರಿಹಾರ ಮಾರ್ಗವು ಯಾರ ವ್ಯಯಕ್ತಿಕ ಸ್ವಾತಂತ್ರ್ಯವನ್ನೂ ಇಲ್ಲವಾಗಿಸುವುದಿಲ್ಲ ಎಂದಾಗಿದೆ! ಅದು ಒಬ್ಬನಿಗೆ ಆತನ ರೀತಿಯಲ್ಲಿ ಜೀವಿಸುವ ಹಕ್ಕು ಇದೆ ಎಂದೇ ಹೇಳುವುದು. ಆದರೆ, ಇಲ್ಲಿ, ಆ ವ್ಯಸನವಿರುವ ಸಹೋದರ, ಸಹೋದರಿಯರಲ್ಲಿ "ನೀವು ದಯವಿಟ್ಟು ಇತರರನ್ನು ಆ ಅನೈತಿಕ ದಾರಿಗೆ ಪ್ರಲೋಭಿಸದಿರಿ" ಎಂಬ ಒಂದು ಬೇಡಿಕೆಯನ್ನು ಮಾತ್ರವೇ ಇಟ್ಟಿದೆಯಷ್ಟೆ. ಕನಿಷ್ಠ ಪಕ್ಷ ಒಬ್ಬ ವ್ಯಕ್ತಿ ಅದನ್ನಾದರೂ ಪಾಲಿಸಿದಲ್ಲಿ, ಮುಂದೆ ಆತನದೇ ಬೆಂಕಿ-ಜೀವನವು ಆತನಿಗೆ ಹಲವು ನೋವಿನ ಪಾಠಗಳನ್ನು ಕಲಿಸುವಾಗ, ಅದರಿಂದ ಪಾರಾಗಲು ಈ ಮಹಾಜೀವನದ ಬಯಕೆ ಆತನಲ್ಲಿ ಉಂಟಾದಲ್ಲಿ, ಆತನಿಗೆ ಆ ಆನಂದದ ಮಹಾ ಜೀವನವನ್ನು ಪಡೆಯುವ ಆ ಒಂದು ಅವಕಾಶವು ಕೈತಪ್ಪಿಹೋಗಲಾರದು.

ಈ ಜಗತ್ತಲ್ಲಿ ಎಲ್ಲಾದರೂ ಯಾವ ಧರ್ಮ, ಪಂಥದಲ್ಲಾದರೂ, ಮೇಲು ಮೇಲಿನ ಆದರ್ಶ ಜೀವನವು, ಮೇಲು ಮೇಲಿನ ಮಹಾತ್ಮರ ಹಂತವಾಗುವುದು. ಅದೇ ರೀತಿ, ಮೇಲು ಮೇಲಿನ ಆದರ್ಶ'ರಹಿತ' ಜೀವನಗಳು ಕೆಳಕೆಳಗಿನ ಮಾನವ ಜೀವನ ರೀತಿಗಳಾಗುವವು. ಈ ಹಿನ್ನೆಲೆಯಲ್ಲಿ ಒಂದೇ ತಾಯಿಯ ಮಕ್ಕಳಲ್ಲಿ ಕೆಲವರು ಮೇಲಿನ ಹಂತದ ಮಹಾತ್ಮರು ಮತ್ತು ಇನ್ನು ಕೆಲವರು ಕೆಳ ಮಟ್ಟದ ಜೀವನವನ್ನು ಅವಲಂಭಿಸುವವರು ಇರುತ್ತಾರೆ. ಉದಾಹರಣೆಗೆ, ಜಗತ್ತಿನ ಎಲ್ಲಾ ಧರ್ಮ, ಪಂಥಗಳಲ್ಲಿರುವ ಸಸ್ಯಾಹಾರಿಗಳ ಆ ಸಸ್ಯಾಹಾರ ಜೀವನವು ಒಂದು ಮೇಲಿನ ಆದರ್ಶವಾಗಿದೆ. ಪ್ರಾಣಿಹಿಂಸೆಯಲ್ಲಿ ಆ ಪ್ರಾಣಿ ಪಡುವ ನೋವನ್ನು ಮಾನವನು ಕಡಿಮೆ ಮಾಡುವ ಒಂದು ಮೇಲಿನ

ಆದರ್ಶವು ಇದಾಗಿದೆ. ಮಾಂಸಹಾರಿಗಳಿಗೆ ಮಾಂಸಹಾರಿಗಳಾಗಿ ಜೀವಿಸುವ ಪೂರ್ಣ ಸ್ವಾತಂತ್ರ್ಯವಿದೆ, ಮತ್ತು ಧರ್ಮದ ಸಾರದಲ್ಲಿ ಬದುಕುವ ಈ ಸತ್ಯಜೀವನಕ್ಕೆ ಮತ್ತು ಆ ಜಾಗತಿಕ ಪರಿಹಾರ ಕಾರ್ಯಕ್ಕೂ ಈ ಸಸ್ಯಾಹಾರವು ಒಂದು ಅನಿವಾರ್ಯವೇನೂ ಅಲ್ಲ. ಆದರೆ, ಮಿದುಳು ಇರುವ ಮತ್ತು ನೋವು ಮಾನವರಷ್ಟೇ ಪ್ರಮಾಣದಲ್ಲಿ ಅನುಭವಾಗುವ ಆ ಪ್ರಾಣಿಗಳನ್ನು ಹಿಂಸೆ ಮಾಡುವುದರೊಂದಿಗೆ ಮಾನವನ ಮನಸ್ಸಿನ ಕ್ರೌರ್ಯವನ್ನೂ ಹೆಚ್ಚಿಸಲು ಪ್ರೇರೇಪಿಸುವ ಮಾಂಸಾಹಾರ ಕ್ರಮವನ್ನು ಸಸ್ಯಾಹಾರ ಆದರ್ಶಕ್ಕೆ ಸಮ ಎಂಬ ರೀತಿಯಲ್ಲಿ ಮಾತ್ರ ವಾದಿಸಬೇಡಿ. ಅದನ್ನು ದೇವರೇ ಬಂದು ವಾದ ಮಾಡಿದರೂ ಪ್ರಯೋಜನವಾಗದು.

ಒಟ್ಟಿನಲ್ಲಿ ಹೇಳುವುದಾದರೆ, ಸರ್ವ ಧರ್ಮ, ಪಂಥಗಳಲ್ಲೂ ಮೇಲಿನ ಆದರ್ಶ ಜೀವನದಲ್ಲಿ ಜೀವಿಸುವ ಎಲ್ಲರಿಗೂ, ಆದರ್ಶದಲ್ಲಿ ಕೆಳಗೆ ಇರುವವರು, ಆ ಮೇಲಿನ ಆದರ್ಶದ ರೀತಿಯಲ್ಲಿ ಜೀವಿಸುವುದಕ್ಕೆ ಅವರಿಗೆ ತಡೆಯಾಗದೆ ಅವರ ರೀತಿಯಲ್ಲಿ ಜೀವಿಸಲು ಅನುವು ಮಾಡಿಕೊಟ್ಟರೆ ಸಾಕಾಗುವುದು. ಆಗ, ಅಲ್ಲಿ, ಸರ್ವರಿಗೂ ತಮಗೆ ಬೇಕಾದ ರೀತಿಯಲ್ಲಿ ಜೀವಿಸುವ ಸ್ವಾತಂತ್ರ್ಯವೂ ಇರುವುದು, ಮತ್ತು ಅದರೊಂದಿಗೆ ಒಂದು ಮಹಾ ಸತ್ಯಯುಗಕ್ಕೆ ಇವೆಲ್ಲದರ ಮಧ್ಯೆ ಉದಯಿಸಿ ಬರಲು ಸ್ವಲ್ಪ ಸ್ಥಳಾವಕಾಶವೂ ದೊರಕುವುದು!

ನನ್ನ ಪ್ರೀತಿಯ ಸಹೋದರ ಸಹೋದರಿಯರೇ, ನಾನು ಕಂಡ ಆ ಅಪಾಯವನ್ನು ನಿಮ್ಮ ಮುಂದಿರಿಸಿ, ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ, ಈ ರಹಸ್ಯವನ್ನು ಕಂಡುಹಿಡಿಯುವಲ್ಲಿ, ನಾನು ಬಹಳ ದೊಡ್ಡ ಅಪಾಯವನ್ನು ಎದುರಿಸಬೇಕಾಯಿತು. ಅದು ಈಗ ಕಡಿಮೆಯಾಗಿದೆ ಆದರೂ ಪೂರ್ತಿಯಾಗಿ ಹೋಗಿಲ್ಲ. ಆದರೆ, ನನಗೆ ಆ ಸತ್ಯಗಳನ್ನು ಕೊನೆಗೂ ಜಗತ್ತಿನ ಮುಂದಿರಿಸಲು ಸಾಧ್ಯವಾದ ಆ ನೆಮ್ಮದಿ ಮಾತ್ರ ಸಾಕಾಗುವುದು. ಈ ನನ್ನ ಮಾತುಗಳನ್ನು, ಇತರರಿಗೆ, ಯಾರಾದರೂ ತಿಳಿಸಲು ಇಚ್ಛೆ ಪಡುವುದಾದರೆ, ಅವರು ಬಹಳ ಶಾಂತವಾದ ರೀತಿಯಲ್ಲಿ ಮಾತ್ರ ವಿವರಿಸಿ ತಿಳಿಸಬೇಕಾಗುವುದು. ಆದರೆ, ಕೋಪ, ಧ್ವೇಷಗಳಿಂದ ನನ್ನ ಮಾತುಗಳನ್ನು ಯಾವ ಕಾಲಕ್ಕೂ ಯಾರೂ ವಿವರಿಸಬಾರದು. ನನ್ನ ಮಾತುಗಳ ಕೆಲವೊಂದನ್ನು ಮಾತ್ರ ತೆಗೆದು ಅವರವರಿಗೆ ಸರಿಯಾಗಿ ಹೊಂದಿಸಿ ಹೇಳುವಹಾಗಿಲ್ಲ. ಯಾಕೆಂದರೆ, ಆ ಸಾರ್ವತ್ರಿಕ ಸತ್ಯದ ಆ ಸಾರ್ವತ್ರಿಕ ಪ್ರೀತಿಯು ಜನರನ್ನು ಎಂದೂ ವಿಭಜಿಸಲಾರದು, ಬದಲು, ಅದು ಮಾನವ ಹೃದಯಗಳನ್ನು ಒಂದುಗೂಡಿಸುವಲ್ಲಿ ಮಾತ್ರ ತನ್ನ ಮಾತುಗಳನ್ನು ತೊಡಗುವುದು. ನಾನು, ನನ್ನ ಕೈಲಾದ ಮಟ್ಟಿಗೆ ನನ್ನ ಆ ಮನೋಶಕ್ತಿಯ ಸಹಾಯದಿಂದ ಈ ಜಗತ್ತಿಗೆ ಒಳಿತು ಮಾಡಲು ಪ್ರಯತ್ನಿಸುವೆನು. ಆದರೆ, ಆ ಪ್ರಾಚೀನ ವಾಮಾಚಾರದ ವಿರುದ್ದದ ಆ ಏಕೈಕ ಪರಿಹಾರವು ಇರುವುದು ಈ ಜಗತ್ತಿನ ಸರ್ವರ ಒಂದಾಗುವಿಕೆಯಲ್ಲಿ ಎಂಬುವುದನ್ನು ಮರೆಯಬಾರದು. ನನಗೆ ಧರ್ಮ, ಪಂಥ, ಪರಂಪರೆ ಎಂಬೆಲ್ಲಾ ರೀತಿಗಳನ್ನು ಸ್ವಪ್ನದಲ್ಲೂ ನೆನೆಯಲು ಸಾಧ್ಯವಾಗುವುದಿಲ್ಲ, ಯಾಕೆಂದರೆ ನನಗೆ ಅತ್ಯಂತ ಸ್ಪಷ್ಟವಾಗಿ ಇವೆಲ್ಲಾ ಆ ಪ್ರಾಚೀನ ವಾಮಾಚಾರದ ಉಪಕರಣಗಳಾಗಿಹೋಗಿವೆ ಎಂದು ತಿಳಿದಿದೆ. ನಾವು, ನಮ್ಮ ಮನೆಯಲ್ಲಿ ಒಂದು ಚಿಕ್ಕ ಆಚಾರದಲ್ಲಿ ಬಹಳ ಗಂಭೀರವಾಗಿ ಮಗ್ನವಾಗಿರುವಾಗ, ಇತ್ತ, ಅದರ ವಿರುದ್ದ ರೀತಿಯಲ್ಲಿ, ಬಹಳ ಗಂಭೀರವಾಗಿ ಇನ್ನೊಂದು ಧರ್ಮ ಅಥವಾ ಪಂಥದ ಮನೆಯಲ್ಲಿ ಆಚರಣೆ ನಡೆಯುವುದು!! ನಿಮ್ಮ ಆಚರಣೆಯ ಮಹತ್ವವನ್ನು ಆ ವಿರುದ್ದ ಆಚರಣೆಯ ಮನೆಯಲ್ಲಿ ಹೇಳಿದಲ್ಲಿ, ಅವರ ಆಚರಣೆಯ ಮಹತ್ವವನ್ನು ಅವರ ಬಾಯಿಯಿಂದ ನೀವು ಕೇಳಬೇಕಾಗುವುದು!! ಇಂಥ ಆಚರಣೆಗಳ ರಾಶಿಗಳೇ ಧರ್ಮ, ಪಂಥಗಳಲ್ಲಿ ತುಂಬಿರುವುದು ಅಷ್ಟೇ! ಮಹಾತ್ಮರು ಹೇಳಿರುವುದೇನೆಂದರೆ, ಮಾನವರು ತಮ್ಮ ನಂಬಿಕೆ, ಆಚರಣೆಯೇ ಸರ್ವಸ್ವವೆಂಬ ಆ ಬಾವಿಯೊಳಗಿನ ಕಪ್ಪೆಗಳಂತಾಗಿ ಭಯಾನಕ ಧ್ವೇಷ, ಹಿಂಸೆ, ರಕ್ತಪಾತಗಳಿಗೆ ಕಾರಣವಾಗಬಾರದು ಎಂದಾಗಿದೆ. ಆದುದರಿಂದ ಎಲ್ಲರೂ ಆ ಸತ್ಯಸಂಧವಾದ ಚಿಂತನೆಯ ಸಹಾಯದಿಂದ ತಮ್ಮ ತಮ್ಮ ಧರ್ಮ, ಪಂಥಗಳ ಸಾರದಲ್ಲಿ ಜೀವನವನ್ನು ನಡೆಸುವುದಾದರೆ, ಮತ್ತು ನಂಬಿಕೆ, ಆಚಾರಗಳನ್ನು ಅವರವರ ಆಯ್ಕೆಯ ತರ ಆಚರಿಸುವುದಾದರೆ, ಈ ಜಗತ್ತಿನ ಎಲ್ಲಾ, ಧರ್ಮ, ಪಂಥಗಳೂ ತಾವಾಗಿ ಶುದ್ದೀಕರಿಸಲ್ಪಡುವವು. ಈ ರೀತಿಯಲ್ಲಿ, ಮಾನವನ ಮನ, ಮನೆ, ಹಾಗೂ ಲೋಕವು ಆ ದಿವ್ಯ ಶಾಂತಿಯಿಂದ ನಲಿದಾಡುವುವಂತಾಗುವುದು.

# ಪ್ರಶ್ನೋತ್ತರಗಳು

## ದೇವರು, ಧರ್ಮ, ನಂಬಿಕೆ, ಆಚಾರ, ಮತ್ತು ಆಧ್ಯಾತ್ಮ ಇವುಗಳ ಹಿನ್ನೆಲೆಯಲ್ಲಿ ನಿಮ್ಮ ನಿಲುವನ್ನು ಸ್ಪಷ್ಟಪಡಿಸಬಹುದೇ?

ಉತ್ತರ- ನಾನು ಆಚಾರ, ನಂಬಿಕೆಗಳನ್ನು ಬೇಡ ಎಂದು ಹೇಳುವುದಿಲ್ಲ. ನಾನು ಯಾವೆಲ್ಲಾ ಆಚಾರಗಳು ಮಾನವನನ್ನು ತಮ್ಮೊಳಗೆ ಬೇರ್ಪಡಿಸುವುದೋ ಮತ್ತು ಮಾನವೀಯತೆಯೇ ಇಲ್ಲದವುಗಳಾಗಿರುವುದೋ ಅವುಗಳ ಬಗ್ಗೆ ಎಚ್ಚರಿಕೆಯಿಂದ ಇರಲು ಹೇಳಿದ್ದೇನೆ ಅಷ್ಟೆ. ಆ ಪ್ರಾಚೀನ ವಾಮಾಚಾರವು ಮಾನವನನ್ನು ಬೇರ್ಪಡಿಸಲು ಮತ್ತು ರಕ್ತಪಾತ ಮಾಡಲು ಇದೇ ಆಚಾರ, ನಂಬಿಕೆಗಳ ಭಾಗವನ್ನೇ ಕಾರಣವಾಗಿ ಉಪಯೋಗಿಸುತ್ತಿರುವುದು ಎಂಬುವುದನ್ನು ಸ್ಪಷ್ಟವಾಗಿ ಕಂಡ ಕಾರಣವೇ ನಾನು ಅದನ್ನು ಜಗತ್ತಿಗೆ ತಿಳಿಸುವ ಪ್ರಯತ್ನವನ್ನು ಮಾಡಿರುವುದು, ಇಲ್ಲವಾದರೆ ನಾನು ನನ್ನ ಮೌನವ್ರತದೊಂದಿಗೆ ನನ್ನಷ್ಟಕ್ಕೆ ಆ ಹಿಂದಿನ ರೀತಿಯ ಆಧ್ಯಾತ್ಮಿಕ ಸಾಧನೆಯಲ್ಲಿ ನಿರತನಾಗಿರುತ್ತಿದ್ದೆನು ಎಂಬ ಸತ್ಯವನ್ನೂ ಇಲ್ಲಿ ತಿಳಿಸುವುದು ಉತ್ತಮ ಎಂದು ನನಗನಿಸುತ್ತದೆ. ಇದರಿಂದ, ನನಗೆ, ದೇವರುಗಳು ಮತ್ತು ಧರ್ಮಗಳು ಆ ನಿಜವಾದ ಶಾಂತಿಯ ಧಾಮಗಳಾಗಬೇಕೆಂಬ ಕಾಳಜಿ ಮಾತ್ರ ಇರುವುದು ಎಂದು ತಿಳಿಯಬೇಕು. ಮಾತ್ರವಲ್ಲ, ಧರ್ಮ, ಪಂಥಗಳು ಇತರ ಧರ್ಮ, ಪಂಥಗಳ ಮೇಲೆ ಮಾಡುತ್ತಿರುವಂತೆ, ಅವುಗಳ ನಿಂದನೆಯ ಕೆಲಸ ನನಗೆ ಇಲ್ಲ ಎಂದೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಜಗತ್ತಿನ ಎಲ್ಲಾ ಧರ್ಮ, ಪಂಥಗಳ ಜನರು ಇತರ ಧರ್ಮದ ದೇವರು, ನಂಬಿಕೆ, ಆಚಾರಗಳನ್ನು ಒಪ್ಪುವುದಿಲ್ಲ! ಈ ಹಿನ್ನೆಲೆಯಲ್ಲಿ, ಇಡೀ ಜಗತ್ತಿನ ನಿಲುವನ್ನು ನಿಮಗೆ ಇದರಲ್ಲಿ ಒಂದರಲ್ಲಿ ಕಾಣಬಹುದು! ನಾನು ಎಲ್ಲಾ ಧರ್ಮಗಳನ್ನು ಮತ್ತು ದೇವರುಗಳನ್ನು ಒಪ್ಪುತ್ತೇನೆ ಎಂಬುವುದನ್ನು ಪ್ರತ್ಯೇಕವಾಗಿ ತಿಳಿದಿರಬೇಕು. ಆದರೆ, ಯಾವ ಪುರಾಣ ಕಥೆ, ನಂಬಿಕೆ, ಆಚಾರಗಳ ಹಿನ್ನೆಯಲ್ಲಿ ಒಪ್ಪುವುದಲ್ಲ, ಬದಲು ಆ ಎಲ್ಲಾ ದೇವರುಗಳಲ್ಲಿ ಸಾರ್ವತ್ರಿಕ ಸತ್ಯವಿದೆ, ಸಾರ್ವತ್ರಿಕ ಪ್ರೀತಿ ಇದೆ, ಮತ್ತು ನೈತಿಕತೆ ಇದೆ, ಎಂದು ಆಯಾ ಧರ್ಮ, ಪಂಥಗಳು ತಿಳಿಸಿರುವ ಕಾರಣ, ಆ ಧರ್ಮ, ಪಂಥಗಳು ಹೇಳಿರುವ ಆ ಸ್ವಭಾವ-ದೇವರನ್ನು ಮತ್ತು ಸ್ವಭಾವ-ಧರ್ಮಗಳನ್ನು ಮಾತ್ರ ಒಪ್ಪಿರುವುದು ಎಂದೂ ತಿಳಿಯಬೇಕು. ನಾನು ಸತ್ಯಸಂಧವಾಗಿ, ಮೇಲೆ ಹೇಳಿದ ರೀತಿಯಲ್ಲಿ, ಎಲ್ಲಾ ದೇವರುಗಳು ಮತ್ತು ಧರ್ಮಗಳನ್ನು ಒಪ್ಪುವಾಗ, ಇತರ ಎಲ್ಲಾ ಕಡೆಯೂ “ತಮ್ಮದಲ್ಲದ ಇತರ ಯಾವ ದೇವರು ಮತ್ತು ಧರ್ಮವನ್ನು ಒಪ್ಪುವುದಿಲ್ಲ” ಎಂಬ ರೀತಿಯು ಹಿಂದಿನಿಂದಲೇ ಜಗತ್ತಿನಲ್ಲಿರುವ ಆ ದೇವರ ಅರ್ಥವನ್ನೇ ತಿಳಿಯದ ರೀತಿಯಲ್ಲಿ ಕಣ್ಣು ಮುಚ್ಚಿ ನಂಬುವ ರೀತಿ ಮಾತ್ರವಾಗಿ ಕಾಣಿಸುವುದು! ಈ ಧರ್ಮ, ಪಂಥಗಳ ಹೆಚ್ಚಿನ ಧರ್ಮಪಂಡಿತರುಗಳು ಹೇಳುವ ಆ “ನಮ್ಮ ದೇವರು” ಮತ್ತು “ನಮ್ಮ ಧರ್ಮ” ಎಂಬ ಆ ದೇವರು ಮತ್ತು ಧರ್ಮವು, ಈ ಪ್ರಪಂಚದಲ್ಲೇ ಇಲ್ಲ ಎಂಬುವುದನ್ನು ನಾವು ಮರೆಯಬಾರದು. ‘ನಾವು ಆರಾಧಿಸುವ ದೇವರು’ ಅಥವಾ ‘ನಾನು ಅನುಸರಿಸುವ ಧರ್ಮ’ ಎಂದು “ಸೂಚಿಸುವ” ರೀತಿಯಲ್ಲಿ ಮಾತ್ರ ನಮಗೆ ಹೇಳಬಹುದೇ ಹೊರತು, ಭಾವನೆಯಿಂದ “ನಮ್ಮದು” ಮಾಡಿಕೊಳ್ಳುವ ತರದಲ್ಲಿ ಎಂದೂ ಆ ವಿಶಾಲ ಸತ್ಯಗಳನ್ನು ಹೇಳಲೇಬಾರದು. ನಮ್ಮಲ್ಲಿಯೇ ನಾವು ಕೇಳೋಣ, ಆ ದೇವರು ಮತ್ತು ಧರ್ಮವು “ನಮ್ಮ” ಮನೆಯಾ ಅಥವಾ “ನಮ್ಮ” ಹಿತ್ತಲಾ? ಹಾಗೆ “ನಮ್ಮದು” ಮಾಡಿದುದರ ಫಲವೇ, ಧರ್ಮಗಳು ಶಾಂತಿಯನ್ನು ಕೊಡುವ ಬದಲು ಧರ್ಮಾಂಧತೆಯ ಬೆಂಕಿಯನ್ನು ಕೊಟ್ಟು ಸುಟ್ಟು ಹಾಕಿರುವುದು!! ಇದು ಮಾತ್ರವಲ್ಲ, ದೇವರನ್ನು “ನಮ್ಮ ದೇವರು” ಎಂದು ಹೇಳುವಾಗ, ಆ ದೇವಸಂಕಲ್ಪವನ್ನು ಜನರು, ತಮ್ಮ ಲಾಭಕ್ಕಾಗಿ ಮಾತ್ರ ಉಪಯೋಗಿಸುವ, ಆ ದೇವರಲ್ಲದ ಬರೇ “ಸೂಕ್ಷ್ಮಶಕ್ತಿ” ಯ ಹಂತಕ್ಕೆ ಇಳಿಸಿದಂತೆಯೂ ಆಗುವುದು!! ಇದು ಎಷ್ಟು ಭಯಾನಕ ದೈವ ನಿಂದನೆ!!

ನಮಗೆ ದೇವರು ಬೇಕು, ಮತ್ತು ನಮಗೆ ಸೈತಾನ ಬೇಡ ಖಂಡಿತ ಅಲ್ಲವೇ? ಹೌದು, ನನಗಂತೂ ದೇವರೇ ಬೇಕು ಮತ್ತು ಸೈತಾನ ಎಂದೂ ಬೇಡ. ಆದರೆ, ಎಲ್ಲರೂ ಇದನ್ನು ಒಪ್ಪುವುದಾದರೆ, ಎಲ್ಲಾ ಧರ್ಮ, ಪಂಥದವರು ಒಟ್ಟಿಗೆ ಕುಳಿತು ಆ ದೇವರನ್ನು ಪ್ರಾರ್ಥಿಸಿಸೋಣ, ಆಗಬಹುದೇ? ಈಗ, ಜನರಿಗೆ ತಮ್ಮ ದೇವರು, ಸೃಷ್ಟಿಕರ್ತ ದೇವರಾಗಿ ಅಥವಾ ದೇವರ ಅರ್ಥದಲ್ಲಿ ಇರಬೇಕಾ ಅಥವಾ ಬಾಯಿ ಮಾತಲ್ಲಿ ಬಡ ಬಡ ಹೇಳಿ, ಕಾರ್ಯಕ್ಕೆ ಬರುವಾಗ, ಬರೇ ಅವರವರ ಆ ನಂಬಿಕೆ, ಆಚಾರಗಳ ಆ ಚಿಕ್ಕ ಚಿಕ್ಕ ಗ್ರಾಮ

ದೇವತೆಗಳ ತರ ಮಾತ್ರ ತಮ್ಮದಾಗಿಸುವ ರೀತಿ ಸಾಕಾ ಎಂಬುವುದು ಸ್ಪಷ್ಟವಾಗಿ ತಿಳಿಯುವುದು. ಈ ಜಗತ್ತಲ್ಲಿ, ನಂಬಿಕೆ, ಆಚಾರಗಳಿಂದ ಇದುವರೆಗೂ ಆಗಿರುವುದು, ಅತ್ಯಂತ ಮೇಲಿನ ದೇವರು, ಧರ್ಮಗಳ ಆಚಾರಗಳಿಂದ ಹಿಡಿದು ಕೊನೆಯಲ್ಲಿ ಸಿಗುವ ಆ ಕುಲದ ಆಚಾರ, ಜಾತಿ, ಉಪಜಾತಿಗಳ ಆಚಾರಗಳ ತನಕದ ಆ ಬರೇ ಜನರನ್ನು ಬೇರ್ಪಡಿಸುವಿಕೆ ಮಾತ್ರ ಎಂಬವುದನ್ನು ನಿಮಗೆ ಇಲ್ಲಿ ತಿಳಿಸಲು ಇಚ್ಛಿಸುತ್ತೇನೆ. ಪ್ರಾಚೀನ ವಾಮಾಚಾರವು ಈ ರೀತಿ ಬೇರ್ಪಡಿಸುತ್ತಾ ಹೋಗುವುದು ಯಾಕೆಂದರೆ, "ಬೇರ್ಪಟ್ಟಲ್ಲಿ ಮಾತ್ರ ಶತ್ರುತ್ವ"ಕ್ಕೆ ಅವಕಾಶ ಎಂಬುವುದೇ ಅವುಗಳ ಮೂಲ ಸಿದ್ಧಾಂತವಾಗಿದೆ. ಆದರೆ, "ನಾವು ಎಲ್ಲರೂ ಒಂದು" ಎಂಬ ಭಾವನೆ ಇರುವಲ್ಲಿ ಶತ್ರುತ್ವಕ್ಕೆ ಅವಕಾಶವಿಲ್ಲ!! ಅಂದರೆ, "ನಾವು ಒಂದು" ಎಂಬ ಭಾವನೆಯಲ್ಲಿ ಆ ಪ್ರಾಚೀನ ವಾಮಾಚಾರ ಶಕ್ತಿಗಳಿಗೆ ಏನು ಮಾಡಲೂ ಸಾಧ್ಯವಾಗದೆ ಅವು ಸೋತು ಹೋಗುವವು. ಇದೇ, ಕೊನೆಗೂ ಮಾನವರಿಗೆ ಅವುಗಳ ವಿರುದ್ಧ ಜಯಗಳಿಸಲು ಇರುವ ಏಕೈಕ ಉಪಾಯ ಮತ್ತು ಪರಿಹಾರವೆಂದು ನಾನು ಕಂಡುಕೊಂಡಿರುವ ಆ ಕೊನೆಯ ಸತ್ಯವೂ ಆಗಿದೆ!! ಈ ಕಾರಣದಿಂದಲೇ ಈ ಜಗತ್ತಿನ ಮಾನವರೆಲ್ಲ ಒಂದಾಗಬೇಕು ಎಂದು ನಾನು ಹೇಳುವುದು, ಮತ್ತು ಪ್ರತ್ಯೇಕವಾಗಿಯೂ ಈ ಪ್ರಾಚೀನ ವಾಮಾಚಾರವು ದೊಡ್ಡ ಲಾಭವನ್ನು ಗಳಿಸುತ್ತಿರುವ ಧರ್ಮ, ಪಂಥಗಳ ಹಿನ್ನೆಲೆಯಲ್ಲಿಯೂ ಯಾವುದಾದರೂ ರೀತಿಯ ಸಹಾಯದಿಂದ ಒಂದಾಗಬೇಕು ಎಂದೂ ಪ್ರಯತ್ನಿಸುತ್ತಿರುವುದು ಎಂದು ತಿಳಿಯಬೇಕು.

ಈ ರೀತಿಯಲ್ಲಿ ಭಯಾನಕವಾಗಿ ಬೇರ್ಪಟ್ಟು ಚಲ್ಲಾಪಿಲ್ಲಿಯಾಗಿ ಇರುವ, ಈ ಪ್ರಾಚೀನ ವಾಮಾಚಾರ ಪೀಡಿತ, ಸಮಾಜವನ್ನು ಒಂದುಗೂಡಿಸಲು ಸಾಧ್ಯವಾಗುವ ಆ ಸ್ಥಳವಾದರೂ ಯಾವುದು? ಇದಕ್ಕೆ ಇರುವ ಆ ಏಕ ಮಾರ್ಗವೇ ಎಲ್ಲರಿಗೂ ಸಾಮಾನ್ಯವಾಗಿರುವ ಒಂದು ಸ್ಥಳವನ್ನು ಹುಡುಕುವುದಾಗಿದೆ. ಮಾನವೀಯತೆಯು ಮಾತ್ರ ಒಂದು ಕಡೆ ಇದ್ದರೆ ಅದು ಪ್ರಯೋಜನವಾಗಲಾರದು, ಅದು ಜಾತ್ಯಾತೀತವಾಗಿ ಅಥವಾ ಧರ್ಮ, ಪಂಥಗಳನ್ನು ಗಣನೆಗೆ ತೆಗೆಯದೆ ಇರುವ ಕಾರಣ, ಅದರೊಂದಿಗೆ ಈ ಧರ್ಮ, ಪಂಥಗಳ ಹೆಸರಲ್ಲಿ ಒಂದಾಗುವ ರೀತಿಯು ಅತ್ಯಗತ್ಯಬೇಕಾಗುವುದು. ಅದನ್ನು ಆಲೋಚಿಸಿದಾಗ, ಅದು ಕಂಡುಬರುವುದು ಎಲ್ಲ ಧರ್ಮ, ಪಂಥಗಳ ಆ "ಸಾರಭಾಗ" ದಲ್ಲಿ ಎಂದು ಸ್ಪಷ್ಟವಾಗುವುದು. ಅಲ್ಲಿ ಜಗತ್ತಿನ ಸರ್ವರೂ ಧಾರ್ಮಿಕವಾಗಿ ಒಂದೇ ಆಗಿರುವುದನ್ನು ನಾವು ಕಾಣುತ್ತೇವೆ!! ಹೀಗಿರುವಾಗ, ಎಲ್ಲರೂ ಅವರವರ ದೇವರು ಮತ್ತು ಧರ್ಮಗಳ ಆ "ಸಾರಭಾಗ" ವನ್ನು ಹೆಚ್ಚು ಒತ್ತುಕೊಟ್ಟು ಬೆಳೆಸಿದರೆ, ಆಗ ಎಲ್ಲರಿಗೂ ಸಾಮಾನ್ಯವಾಗಿರುವ ಆ "ಸಾರಭಾಗ" ದಲ್ಲಿ ಸರ್ವರಿಗೂ ಒಂದಾಗಬಹುದಾಗಿದೆ! ಉಳಿದ ದೇವರು ಮತ್ತು ಆಧ್ಯಾತ್ಮ ಭಾಗಗಳನ್ನು ಅವರವರ "ಆಯ್ಕೆ" ಯ ತರ ಅವರವರ ರೀತಿಯಂತೆ ಅನುಷ್ಠಿಸಿಕೊಳ್ಳಬಹುದಾಗಿದೆ. ಹೀಗಾದಲ್ಲಿ, ಧರ್ಮ, ಪಂಥಗಳನ್ನು ಬದಲಾಯಿಸದೆಯೇ ನಮಗೆ ಸುಲಭದಲ್ಲಿ ಆ ಪ್ರಾಚೀನ ವಾಮಾಚಾರದ ವಿರುದ್ಧ ಪರಿಹಾರವನ್ನು ಕಾಣಲು ಸಾಧ್ಯವಾಗುವುದು!! ಆಗ ಪ್ರಾಚೀನ ವಾಮಾಚಾರವು ಸೋತು ಸುಣ್ಣವಾಗಿ ಹೋಗುವುದು ಮತ್ತು ಆ ಮಾನವನ ಜಯದಿಂದ ಆ ಆನಂದದ ಸತ್ಯಯುಗವೇ ಈ ಧರೆಯಲ್ಲಿ ಸೃಷ್ಟಿಯಾಗುವುದು. ಇದಕ್ಕಿಂತ ಹೆಚ್ಚಿನದನ್ನು "ದೇವರು" ಮತ್ತು "ಧರ್ಮ"ದಿಂದ ಪಡೆಯಲು ಸಾಧ್ಯವಿದೆಯೇ?

ಕೆಲವರು ಕಣ್ಣಿಗೆ ಕಾಣಿಸುವುದು ಮಾತ್ರ ಸತ್ಯ ಎಂದು ಹೇಳುವರು, ಇದು ಅಚ್ಚರಿಯಾಗಿದೆ! ಆದರೆ ಕಣ್ಣಿನಿಂದ ಕಾಣದ ವಿಚಾರಗಳ ಬಗ್ಗೆ ಈ ಜಗತ್ತಿನಲ್ಲಿ ಸಾವಿರಗಟ್ಟಲೆ ಬಗೆಗಳಲ್ಲಿ ಹೇಳಿರುವರು ಎಂಬುವುದು ಅದಕ್ಕಿಂತಲೂ ಅಚ್ಚರಿಯಾಗುವುದು!! ಒಟ್ಟಿನಲ್ಲಿ, ಯಾರಿಗೂ ಯಾವುದು ಸರಿ, ಏನು ಸರಿ, ಎಂದೆಲ್ಲಾ ಎಲ್ಲವೂ ಗೊಂದಲದ ಬೀಡಾಗಿಹೋಗಿದೆ! ಹೀಗಿರಲು, ಮಾನವನು, ಈ ಪ್ರಾಚೀನ ವಾಮಾಚಾರದ ವಿಚಾರವನ್ನೂ ಸಾವಿರಗಟ್ಟಲೆಯಲ್ಲಿ ಒಂದು ಹೊಸ ಗೊಂದಲವಾಗಿ ತಿಳಿಯುವ ಸಾಧ್ಯತೆ ಇದೆ. ಅದಕ್ಕೆಂದೇ ಹಲವು ಸಂದೇಶಗಳನ್ನು ಬರೆದು ಆ ಪ್ರಾಚೀನ ವಾಮಾಚಾರದ ಇರವನ್ನು ಸ್ಪಷ್ಟಪಡಿಸುವ ಪ್ರಯತ್ನವನ್ನು ಮಾಡಿದ್ದೇನೆ ಹೊರತು ಅದು ಹೊಸ ಪಂಥ, ಪರಂಪರೆಯನ್ನು ಸೃಷ್ಟಿಸಲು ಅಲ್ಲ ಎಂದು ಪ್ರತ್ಯೇಕವಾಗಿ ತಿಳಿಯಬೇಕು. ಸತ್ಯವನ್ನು [ವೈಜ್ಞಾನಿಕ ರೀತಿಯ] ತರ್ಕದ ಮೂಲಕ ಕಾಣಬಹುದು, ಆದರೆ ನಂಬಿಕೆಯ ಮೂಲಕ ಕಾಣಲು ಎಂದೂ ಸಾಧ್ಯವಿಲ್ಲ. ಯಾಕೆಂದರೆ, ಕಥೆಯಲ್ಲಿ "ಯಾಕೆ" ಎಂಬ ಪ್ರಶ್ನೆ ಸಾಧ್ಯವಿಲ್ಲ ಎಂಬಂತೆ, ನಂಬಿಕೆಯಲ್ಲಿ ತರ್ಕವೇ ಸಾಧ್ಯವಿಲ್ಲ. ಮಾತ್ರವಲ್ಲ, ನಂಬಿಕೆ ಎಂದು ಹೇಳುತ್ತಾ ಒಬ್ಬನ ಸೂಕ್ಷ್ಮದ ಅನುಭವವನ್ನು ಇನ್ನೊಬ್ಬನಿಗೆ ಸ್ಪಷ್ಟಪಡಿಸಲೂ ಅಲ್ಲಿ ಸಾಧ್ಯವಾಗದು, ಹೀಗಿರುವಾಗ, ಅಲ್ಲಿ ಮುಕ್ತವಾದ, ಯಾವ ಪಕ್ಷಕ್ಕೂ ಅಥವಾ ಬದಿಗೂ ವಾಲದ, ನ್ಯಾಯಾಧೀಶರು ಬಳಸುವ ಆ ಸತ್ಯದ ಹಿನ್ನೆಲೆಯ ತರ್ಕ [ಸತ್ಯಚಿಂತನೆ] ಒಂದೇ ಸತ್ಯವನ್ನು ಮಾನವನಿಗೆ ತಿಳಿಸಿಕೊಡಲು ಶಕ್ತವಾಗುವುದು.

ನಾನು ಜನರಿಗೆ ಆ ಪ್ರಾಚೀನ ವಾಮಾಚಾರದ ಅಪಾಯವನ್ನು ಮಾತ್ರ ಹೇಳುವೆನು. ಹಾಗೆ ಹೇಳುವುದರಿಂದ ಯಾವುದೇ ಒಂದು ಧರ್ಮ, ಪಂಥ, ಪರಂಪರೆ, ಶಾಸ್ತ್ರವನ್ನು ನಾನು ಎತ್ತಿ ಹಿಡಿಯುವುದಿಲ್ಲ. ಅದೇ ರೀತಿಯಲ್ಲಿ ಯಾವುದನ್ನು ನಿಂದಿಸುವುದೂ ಇಲ್ಲ.

ಇನ್ನು, ಒಂದು ಮುಖ್ಯವಾದ ವಿಷಯವೆಂದರೆ, ನನ್ನ ನಿಲುವು, ಈ ಭೂಮಿಯ ಎಲ್ಲೆಡೆಯೂ ಸತ್ಯ ಮತ್ತು ಪ್ರೀತಿಯ ಸಾಗರವೇ ಹರಿದು ಜನರು ಎಲ್ಲರೂ ಸಂತಸದಿಂದ ಜೀವಿಸಬೇಕು ಎಂದು ಮಾತ್ರವಾಗಿದೆ. ನಾನು ಎಲ್ಲಾ ಧರ್ಮಗಳು ಬಯಸುವ ಆ ಶಾಂತಿಯ ಉಪಾಸಕನಾಗಿರುವೆನು. ಆದರೆ, ಆದರ ವಿರುದ್ಧದ "ಯುದ್ಧ"ವನ್ನು ಎಂದೂ, ಯಾವ ಹಿನ್ನೆಲೆಯಲ್ಲೂ, ಪ್ರೋತ್ಸಾಹಿಸುವುದಿಲ್ಲ. ಯಾಕೆಂದರೆ, ಹಿಂಸೆ, ಯುದ್ಧ, ಅನೈತಿಕತೆ ಇವುಗಳು ಆ ಪ್ರಾಚೀನ ವಾಮಾಚಾರದ ಉಪಕರಣಗಳಾಗಿವೆ ಎಂದು ನನಗೆ ಅತ್ಯಂತ ಸ್ಪಷ್ಟವಾಗಿ ತಿಳಿದಿದೆ. ಈ ಹಿನ್ನೆಲೆಯಲ್ಲಿ, ನಾನು ಹೇಳುತ್ತಿರುವ ಯಾವ ವಿಚಾರವನ್ನಾದರೂ, ಯಾವ ವ್ಯಕ್ತಿಯಾದರೂ, ಜನರ ಮಧ್ಯೆ ದ್ವೇಷವನ್ನು ಬಿತ್ತುವ ರೀತಿಯಲ್ಲಿ ಅಥವಾ ಗಲಾಟೆ ಮಾಡುವ ರೀತಿಯಲ್ಲಿ ತಿರುಚಿ ಮಾತಾಡಬಾರದು. ಹಾಗೆ ಮಾಡುವುದನ್ನು ಯಾವ ಕಾಲಕ್ಕೂ ನಾನು ಒಪ್ಪಲಾರೆ. ಹಾಗೆ ಮಾಡಿದಲ್ಲಿ, ಅದು ಯಾರೇ ಆಗಿರಲಿ, ಅದಕ್ಕೆ ಆ ವ್ಯಕ್ತಿಯೇ ಹೊಣೆಯಾಗುವನು. ನನ್ನ ಹೃದಯವು ನನಗೆ ಹೀಗೆ ಉಪದೇಶಿಸುವುದು, "ನಿನಗೆ ಸಾಧ್ಯವಿದ್ದರೆ, ಸತ್ಯವನ್ನು ನೇರವಾಗಿ ಆದರೆ ಪ್ರೀತಿಯಿಂದಲೇ ವಿವರಿಸು, ಅದಕ್ಕಿಂತ ಮೇಲಿನ ಧಾರ್ಮಿಕ ರೀತಿ ಇನ್ನೊಂದಿಲ್ಲ. ಅಲ್ಲವಾದರೆ, ಕೂಡಲೆ ಎಲ್ಲವನ್ನು ಬಿಟ್ಟು ವಿರಮಿಸು, ಯಾಕೆಂದರೆ ಯಾರೂ ನಿನ್ನಿಂದಾಗಿ ಬೇಸರ, ತೊಂದರೆಗಳಿಗೆ ಒಳಗಾಗಬಾರದು, ಹಾಗಾದಲ್ಲಿ ಅದು ಅಧರ್ಮವಾಗುವುದು."

ಭೂಮಿಯನ್ನು ನರಕ ಮಾಡಿದವನಿಗೆ ಸ್ವರ್ಗದಲ್ಲಿ ಸ್ಥಾನ ಲಭಿಸುವುದೇ? ಆದುದರಿಂದ 'ನನ್ನ ನಿಲುವು' ಈ ಭೂಮಿಯನ್ನು ನನಗೆ ಸಾಧ್ಯವಾಗುವಷ್ಟು ಆತ್ಮೀಯ ಪ್ರೀತಿಯ ಸ್ವರ್ಗವನ್ನಾಗಿ ಪರಿವರ್ತಿಸುವಲ್ಲಿ ಮಾತ್ರ ಇರುವುದು ಎಂದು ನನ್ನ ಹೃದಯಾಳದಿಂದ ನಿಮಗೆ ತಿಳಿಸುವೆನು.

---

## ಧರ್ಮಗಳ ಸಾರದ ಭಾಗ ಅಥವಾ ಸಾರಧರ್ಮ ಎಂದರೇನು?

ಉತ್ತರ- ಇದನ್ನು ಹಿಂದೆಯೇ ಸಾಕಷ್ಟು ಸಲ ವಿವರಿಸಿ ಆಗಿದೆ, ಆದರೆ ಇಲ್ಲಿ ಚುಟುಕಾಗಿ ತಿಳಿಸಿಬಿಡುತ್ತೇನೆ. ಯಾವುದು ಇಲ್ಲವಾದರೆ ಒಂದು ವಸ್ತುವಿನ ಅಸ್ತಿತ್ವವೇ ಇಲ್ಲವಾಗುವುದೋ ಅದುವೇ ಅದರ ಸಾರವಾಗಿದೆ. ಕಬ್ಬಿನ ಹಾಲು ಕಬ್ಬಿನ ಸಾರವಾಗಿದೆ, ಮತ್ತು ಅದಿಲ್ಲವಾದರೆ ಕಬ್ಬಿನ ಗೊಜ್ಜು ಯಾರಿಗೂ ಬೇಡ! ಇದೇ ರೀತಿ, ಧರ್ಮಕ್ಕೂ ಸಾರವಿದೆ. ಆ ಸಾರವೇ ಸಾರ್ವತ್ರಿಕ ಸತ್ಯ, ಸಾರ್ವತ್ರಿಕ ಪ್ರೀತಿ, ಮತ್ತು ಸಾರ್ವತ್ರಿಕ ನೀತಿಯಾಗುವುದು. ಯಾಕೆಂದರೆ, ಈ ಸ್ವಭಾವ-ಸಾರದ ಹಿನ್ನೆಲೆಯು ಇಲ್ಲದ ಯಾವ ಒಂದು ಧರ್ಮ ಅಥವಾ ಪಂಥಕ್ಕೆ ಅಸ್ತಿತ್ವವೇ ಇಲ್ಲವಾಗುವುದು. ಯಾರಿಗಾದರೂ ಅವರ ಧರ್ಮ ಅಥವಾ ಪಂಥದಲ್ಲಿ ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಗಳು "ಇಲ್ಲ" ಎಂದು ಹೇಳಲು ಸಾಧ್ಯವಾಗುವುದೇ? ಅದು ಎಂದಿಗೂ ಸಾಧ್ಯವಾಗಲಾರದು. ಈ ಕಾರಣದಿಂದಾಗಿ, "ಎಲ್ಲಾ ಧರ್ಮಗಳ ಆ ಸಾರದ ಹಿನ್ನೆಲೆಯಲ್ಲಿ ಮಾಡಿರುವ ಸಮಾಜದಲ್ಲಿ ಎಲ್ಲರೂ ತಮ್ಮೊಳಗೆ ತೊಂದರೆಯನ್ನು ಉಂಟುಮಾಡದೆ ಚೆನ್ನಾಗಿ ಜೀವಿಸಬೇಕು ಎಂಬ ಧರ್ಮ ನಿಯಮಗಳನ್ನು" ನಾವು "ಸಾರಧರ್ಮ" ಎನ್ನುವುದು. ಕೆಲವೊಂದು ಚಿಕ್ಕ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಇತರ ಎಲ್ಲಾ ಸಾರಧರ್ಮ ನಿಯಮಗಳು ಎಲ್ಲಾ ಧರ್ಮಗಳಿಗೂ ಸಾಮಾನ್ಯವಾಗಿಯೇ ಇರುವುದು. ಉದಾಹರಣೆಗೆ, "ಕಳ್ಳತನ ಮಾಡಬಾರದು" ಎಂಬುವುದರಲ್ಲಿ ಯಾವ ಧರ್ಮಕ್ಕಾದರೂ ಅಭಿಪ್ರಾಯ ವ್ಯತ್ಯಾಸವಿರಬಹುದೇ? ಇರಲಾರದು ಎಂಬುವುದೇ ಅದರ ಉತ್ತರ. ಇದೇ ರೀತಿಯ ಹಲವು ನಿಯಮಗಳು ಒಟ್ಟು ಸೇರುವಾಗ ಎಲ್ಲಾ ಧರ್ಮ, ಪಂಥಗಳ ಆ "ಸಾರಧರ್ಮ" ವಾಗುವುದು ಎಂದು ತಿಳಿಯಬೇಕು.

ದೇವರು, ಅನುಗ್ರಹ, ಮತ್ತು ಮೋಕ್ಷ ಸಾಧನೆ ಇತ್ಯಾದಿಗಳನ್ನು ಅವರವರ ದೇವರ ಮತ್ತು ಧರ್ಮದ ಹಿನ್ನೆಲೆಯಲ್ಲಿ ಮತ್ತು ಅವರವರ ರೀತಿಯಲ್ಲೇ ಅನುಷ್ಠಿಸಿಕೊಳ್ಳಬಹುದಾಗಿದೆ. ಈಗ, ಎಲ್ಲಾ ಧರ್ಮ, ಪಂಥಗಳೂ ಏನನ್ನೂ ಕಳಕೊಳ್ಳದೆ ಮೊದಲಿನಂತೆ ಇರುವುದಾದರೂ, ನಮಗೆ ಎಲ್ಲರಿಗೂ ಒಂದಾಗಲು ಸಾಧ್ಯವಾಗುವ ಒಂದು ಸ್ಥಳವು ಸಾರಧರ್ಮದ ರೂಪದಲ್ಲಿ ಸಿಗುವುದು!!

## ಸಾರ್ವತ್ರಿಕ ಸತ್ಯ ಎಂದರೇನು?

ಉತ್ತರ- ಸತ್ಯ ಎಂದರೇನು? ಒಬ್ಬ ವ್ಯಕ್ತಿಯ ಕೈಯಲ್ಲಿ ಒಂದು ಪಾತ್ರೆ ಇದೆ ಎಂದು ಆತನು ಹೇಳಿದಾಗ, ಆ ವ್ಯಕ್ತಿಯ ಕೈಯಲ್ಲಿ ಪಾತ್ರೆ ಇದ್ದರೆ ಅದು ಸತ್ಯವಾಗುವುದು. ಇದು ಮಾನವರ ವ್ಯಾವಹಾರಿಕ ನೆಲೆಯಲ್ಲಿ ಉಪಯೋಗಿಸುವ ಸತ್ಯದ ರೀತಿಯಾಗಿದೆ. ಆದರೆ ದೇವರು ಮತ್ತು ಧರ್ಮಗಳು ಮಾತನಾಡುವುದು ಪ್ರಪಂಚದ ಹಿನ್ನೆಲೆಯಲ್ಲಿ ಎಂದು ಮರೆಯಬಾರದು. ಆಗ ಅಲ್ಲಿಗೂ ಇದೇ ಮಾನವನ ವ್ಯಾವಹಾರಿಕ ರೀತಿಯ ಆ ಕೆಳ ಹಂತದ ಸತ್ಯದ ವಿವರಣೆಯನ್ನು ಕೊಡಲು ಸಾಧ್ಯವೇ ಇಲ್ಲ ಎಂದು ಸಾಮಾನ್ಯ ಬುದ್ಧಿಗೂ ಅರ್ಥವಾಗುವುದು. ಸೃಷ್ಟಿಕರ್ತ ದೇವರು ಇದ್ದಲ್ಲಿ ಆತನ ಧರ್ಮವು ಈ ಜಗತ್ತಿನ ಮಾನವರಿಗೆ ಪೂರ್ತಿಯಾಗಿ ಮಾತ್ರವಲ್ಲ ಅನ್ಯಗ್ರಹ ಜೀವಿಗಳಿಗೂ ಸೇರಿ ಒಂದೇ ಆಗಿರಬೇಕು ಎಂಬುವುದು ದೇವನೀತಿಯಾಗುವುದು. ಈ ರೀತಿಯಲ್ಲಿ, ಅಲ್ಲಿ ಸತ್ಯವು ಜಗತ್ತಿನ ಎಲ್ಲಾ ಮಾನವರಿಗೆ ಒಂದೇ ಸಮಾನವಾಗಿರುವ ನಿಯಮಗಳ ಹಿನ್ನೆಲೆಯಲ್ಲಿ ಇರಲೇಬೇಕು. ಆದರೆ, ಧರ್ಮ, ಪಂಥಗಳು ತಮ್ಮ ಪುರಾಣಗಳಲ್ಲಿ ವಿವರಿಸುವ ರೀತಿಯಲ್ಲಿ ಮಾತ್ರ ತಮಗೆ ತಾವೇ ಬೇಲಿ ಹಾಕಿಕೊಂಡು, ಅದರೊಳಗೆ ಮಾತ್ರ 'ಎಲ್ಲವೂ ಇರುವುದು' ಎನ್ನುವ ರೀತಿಯಲ್ಲಿರುವವು! ಆ ರೀತಿ ಅಲ್ಲದೆ ಅವುಗಳು ಸ್ವಲ್ಪವೂ ಬೇರೆ ಪುರಾಣದ ಮತ್ತು ಧರ್ಮದ ರೀತಿಯನ್ನು ಒಪ್ಪುವುದಿಲ್ಲ! ಇಲ್ಲಿ, ಧರ್ಮ, ಪಂಥಗಳು 'ಸತ್ಯ' ವನ್ನು ಮಾನವನ ನಿತ್ಯದ ವ್ಯಾವಹಾರಿಕ ಸತ್ಯದ ಹಿನ್ನೆಲೆಯಲ್ಲಿ ಮಾತ್ರ ಉಪಯೋಗಿಸಿರುವುದು ಸ್ಪಷ್ಟವಾಗುವುದು! ನಿಜವಾಗಿಯೂ, ದೇವರು ಮತ್ತು ಧರ್ಮಗಳು, ಎಲ್ಲ ಕಡೆಯೂ ಒಂದೇ ಆಗಿರುವ, ಆ ಬೇಲಿ ಇಲ್ಲದ ಆಕಾಶದ ತರ ಮಾತ್ರ ಚಿತ್ರಿಸಲ್ಪಡಬೇಕಾಗಿತ್ತು. ಸೂರ್ಯನು ನಮಗೆಲ್ಲ ಒಬ್ಬನೇ ಎಂಬ ಸತ್ಯವು ಸಾರ್ವತ್ರಿಕ ಸತ್ಯವಾಗಿದೆ. ಅದೇ ರೀತಿಯಲ್ಲಿ, ನಾವೆಲ್ಲಾ ಆ ಸೂರ್ಯನನ್ನು ಒಂದೇ ರೀತಿಯಲ್ಲಿ ವಿವರಿಸುತ್ತೇವೆ. ನೀಲಿ ಸೂರ್ಯ, ಹಸುರು ಸೂರ್ಯ ಎಂದು ವಿವರಿಸಿದ್ದನ್ನು ನಾವು ಇದುವರೆಗೂ ನೋಡಿಲ್ಲ. ಇದೇ ತರ ಬೇಲಿ ಇಲ್ಲದೆ ನಾವು ದೇವರು ಮತ್ತು ಧರ್ಮವನ್ನು ತಿಳಿದುಕೊಳ್ಳಬೇಕಾಗಿತ್ತು. ಅಂದರೆ, ಈ ಬೇಲಿಗಳು, ದೇವರು ಮತ್ತು ಧರ್ಮದ ನಿಜ ಅಸ್ತಿತ್ವವಾದ ಆ ಸಾರ್ವತ್ರಿಕ ಸತ್ಯವನ್ನೇ ಧ್ವಂಸ ಮಾಡಿದವು ಎಂದು ಅರ್ಥ. ಇನ್ನು, ಆ ಪ್ರಾಚೀನ ವಾಮಾಚಾರಕ್ಕೆ ಈ ಬೇಲಿಗಳಿಂದಾಗಿ ಆದ ಲಾಭವು ಅಷ್ಟಿಷ್ಟಲ್ಲ ಎಂಬುವುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ, ಅದನ್ನು ಎಲ್ಲರಿಗೂ ಅಂದಾಜಿಸಬಹುದಾಗಿದೆ.

## ಸಾರ್ವತ್ರಿಕ ಪ್ರೀತಿ ಎಂದರೇನು?

ಉತ್ತರ- ಸಾರ್ವತ್ರಿಕ ಪ್ರೀತಿಯು ದೇವರ ಸ್ವಭಾವವನ್ನೇ ಹೇಳುವುದು. ಸೃಷ್ಟಿಕರ್ತ ದೇವರಿಗೆ ತನ್ನ ಸೃಷ್ಟಿಯ ಎಲ್ಲಾ ಮಾನವರೂ ಒಂದೇ ರೀತಿ ಆದರೂ. ದೇವರ ಉಪದೇಶದ ಪ್ರಕಾರ, ಸತ್ಯದಲ್ಲಿ ಜೀವಿಸುವ ಭೂಮಿಯ ಜನರ ಮೇಲೆ, ಪ್ರತ್ಯೇಕ ಒಲವು ಇರಲೇಬೇಕಾಗುವುದು. ಯಾರು ಕೆಟ್ಟ ದಾರಿಗೆ ಇಳಿಯದೆ ಉತ್ತಮ ವ್ಯಕ್ತಿತ್ವವನ್ನು ಪಡೆಯಲು ಪ್ರಯತ್ನಿಸುವರೋ ಅವರ ಮೇಲೆ ಹೆಚ್ಚು ಪ್ರೀತಿಯನ್ನು ಹೊಂದಿರಲೂ ಬೇಕು ಎಂಬುವುದು ದೇವನೀತಿಯಾಗುವುದು. ಅಂದರೆ, ಅಸುರ ಅಥವಾ ಸೈತಾನನ ಮೇಲೆ ದೇವರಿಗೆ ಪ್ರೀತಿ ಎಂಬುವುದು ಅರ್ಥ ಹೀನವಾಗುವುದು ಎಂದು ಅರ್ಥ. ಈ ದೈವಿಕತೆಯ ಸ್ವಭಾವದ ಹಿನ್ನೆಲೆಯಲ್ಲಿ, ಜಗತ್ತಿನ ಎಲ್ಲಾ ಉತ್ತಮರ ಮೇಲೆ ಇರುವ ಆ ಆತ್ಮೀಯ ಪ್ರೀತಿಯನ್ನೇ ಸಾರ್ವತ್ರಿಕ ಪ್ರೀತಿ ಎನ್ನಬಹುದು. ಕೆಲವು ಆಧ್ಯಾತ್ಮಿಕ ವ್ಯಕ್ತಿಗಳು, ಎಲ್ಲಾ ಕೆಟ್ಟವರನ್ನೂ ಸೇರಿ, ಎಲ್ಲರಲ್ಲೂ ಒಂದೇ ತರದಲ್ಲಿ ಪ್ರೀತಿಸುವುದನ್ನು ಸಾರ್ವತ್ರಿಕ ಪ್ರೀತಿ ಎನ್ನುವರು! ಅದು ಆ ಆಧ್ಯಾತ್ಮಿಕ ವ್ಯಕ್ತಿಯು ಮಾತ್ರ ಇಟ್ಟುಕೊಳ್ಳಬಹುದಾದ ಒಂದು ಅನುಷ್ಠಾನ ಮಾತ್ರವಾಗುವುದು, ಸಮಾಜದಲ್ಲಿ ಅದಕ್ಕೆ ಸ್ಥಾನವಿಲ್ಲ. ಯಾಕೆಂದರೆ, ಆ ರೀತಿಯು ಎಂದೂ ಧರ್ಮವಾಗುವುದಿಲ್ಲ! ಸಮಾಜದಲ್ಲಿ ದುಷ್ಟರನ್ನು ಶಿಕ್ಷಿಸದೆ, ಅವರನ್ನು ರಕ್ಷಿಸಿದರೆ ಅದು ಉತ್ತಮರ ಸರ್ವನಾಶ ಮಾತ್ರವಾಗಿ ಪರಿಣಮಿಸಿ, ಭೀಕರ ಅಧರ್ಮವಾಗುವುದು! ಅಂದರೆ, ಧರ್ಮದ ಸರ್ವನಾಶ ಎಂದು ಅರ್ಥ. ಆದರೆ ಜಗತ್ತಿನಲ್ಲಿ ಹೆಚ್ಚಿನವರು ಇತರ ಧರ್ಮ, ಪಂಥಗಳಲ್ಲಿರುವ ಉತ್ತಮರನ್ನು ಬಿಟ್ಟು ತಮ್ಮ ಧರ್ಮದೊಳಗೆ ಮಾತ್ರ ಈ ಸಾರ್ವತ್ರಿಕ ಪ್ರೀತಿಯನ್ನು ಇಟ್ಟುಕೊಳ್ಳುವರು!! ಇತರ ಧರ್ಮದವರು ಎಷ್ಟೇ ಉತ್ತಮರಾದರೂ, ಅವರು ಅವಿಶ್ವಾಸಿಗಳು ಅಥವಾ ಮ್ಲೇಚ್ಚರು ಎಂಬ ಹೆಸರ ಅಡಿಯಲ್ಲಿ ಹಾಕಿಬಿಡುವರು! ಮಾತ್ರವಲ್ಲ, ಅವರನ್ನು ತಮ್ಮ ಧರ್ಮದೊಳಗಿನ ಅತಿ ದೊಡ್ಡ ಪಾಪಿಗಿಂತಲೂ ಪಾಪಿ ಎಂಬ ತರದಲ್ಲಿ, ಆವರಿಗೆ ಮರಣಾ ನಂತರ ಯಾವ ಗತಿಯೂ ಇಲ್ಲದೆ ಪಿಶಾಚಿಯಾಗಿ ಅಲೆಯಬೇಕಾಗುವುದು ಎಂದು ತಮ್ಮೊಳಗೆ ಆರೋಪಿಸುತ್ತಾ, ತಮ್ಮ ತಮ್ಮ ಧರ್ಮಗಳ ಶ್ರೇಷ್ಠತೆಗಾಗಿ ಆ ರೀತಿಯಲ್ಲಿ ಚಿತ್ರಿಸುತ್ತಾ ಬಂದಿರುವರು!!! ಈ

ರೀತಿಯಲ್ಲಿ, ಮತ್ತು ಇತರ ಧರ್ಮದ ದೃಷ್ಟಿಯಿಂದ ಮಾತ್ರ ಪ್ರತಿ ಧರ್ಮವನ್ನು ನೋಡಿದಾಗ, ನಮಗೆ ಈ ಭೂಮಿಯಲ್ಲಿ ಅವಿಶ್ವಾಸಿಗಳು ಮಾತ್ರ ಸಿಗುವರು!! ಈ ಪ್ರಪಂಚ ಸೃಷ್ಟಿಕರ್ತನು, ಎಲ್ಲಾ ಧರ್ಮಗಳಲ್ಲೂ ಈ ರೀತಿಯಲ್ಲಿ ಹೇಳುತ್ತಾ ಅವಿಶ್ವಾಸಿಗಳನ್ನು ಮಾತ್ರ ಸೃಷ್ಟಿಮಾಡಿ, ತನಗೆ ಯಾರೊಬ್ಬ ವಿಶ್ವಾಸಿಯೂ ಇಲ್ಲದಂತೆ ಮಾಡಿಕೊಳ್ಳುವನೇ? ಆದುದರಿಂದ, ಆ ಸಾರ್ವತ್ರಿಕ ಪ್ರೀತಿಯೆಂದರೆ, ಈ ಜಗತ್ತಿನ ಎಲ್ಲಾ ಉತ್ತಮರನ್ನು, ಅವರು ಎಲ್ಲಿರುವರು ಎಂದು ನೋಡದೆ, ಅವರ ಮೇಲೆ ಆತ್ಮೀಯ ಪ್ರೀತಿಯನ್ನು ಹರಿಸುವುದು ಎಂದು ತಿಳಿಯಬಹುದು.

---

## ಸಾರ್ವತ್ರಿಕ ನೈತಿಕತೆ ಎಂದರೇನು?

ಉತ್ತರ- ಜಗತ್ತು ನೈತಿಕತೆ ಎಂಬುವುದನ್ನು ಉದ್ದೇಶಿಸಿರುವುದು ಒಂದು ಸಮಾಜದ ಒಟ್ಟು ಒಳಿತಿನ ಹಿನ್ನೆಲೆಯಲ್ಲಿ ಆಗಿರುವುದು. ಆ ಹಿನ್ನೆಲೆಯಲ್ಲಿ ನೈತಿಕತೆಯು ವ್ಯಕ್ತಿ ಪ್ರಧಾನವಾಗಿಟ್ಟು ಮಾಡಿದ್ದಲ್ಲ ಎಂದು ತಿಳಿಯಬಹುದು. ಆದರೆ, ಸಮಾಜ ಪ್ರಧಾನವಾಗಿ ಮಾಡಿದ್ದು ಎಂದರೂ ಅದು ಉದ್ದೇಶಿಸುವುದು ಸಮಾಜದ ಪ್ರತಿ ವ್ಯಕ್ತಿಯ ಒಳಿತನ್ನೇ ಆಗಿದೆ ಎಂಬುವುದನ್ನೂ ಮರೆಯಬಾರದು. ಒಟ್ಟಿನಲ್ಲಿ, ನೈತಿಕತೆ ಎಂದರೆ, ವ್ಯಕ್ತಿಯು, ಇತರರನ್ನು ಕಡೆಗಣಿಸಿ, ನೇರವಾಗಿ ತನ್ನದೇ ಒಳಿತಿನ ರೀತಿಯಲ್ಲಿ ಜೀವಿಸುವ ರೀತಿಯ ಬದಲು, ಅದು ಸಮಾಜದ ಜನರ ಮೂಲಕ ಹರಿದು ಬಂದು ವ್ಯಕ್ತಿಯ ಒಳಿತನ್ನೇ ಮಾಡಿಕೊಡುವ ರೀತಿಯಾಗಿದೆ ಎಂದು ತಿಳಿಯಬಹುದು. ಅಂದರೆ, "ಇತರರೂ ಚೆನ್ನಾಗಿ ಇರಬೇಕು, ಮತ್ತು ತಾನೂ ಚೆನ್ನಾಗಿರಬೇಕು" ಎಂಬ ಭಾವನೆಯ ಹಿನ್ನೆಲೆಯ ನಿಯಮದ ರೀತಿಯಲ್ಲಿ ಇದು ಇರುವ ಕಾರಣ ಈ ನೈತಿಕತೆಯನ್ನು "ಧರ್ಮ" ಎಂದೂ ಕರೆಯಬಹುದು. ಆದರೆ, ಈ ನೈತಿಕತೆಯನ್ನು ಮಾನವೀಯತೆಗೆ ವಿರುದ್ಧವಾದ ರೀತಿಯಲ್ಲಿ ಜನರು ಬರೆದು ಸೇರಿಸಿ ಸಮಾಜವನ್ನು ಸರ್ವನಾಶ ಮಾಡಿರುವರು ಎಂಬುವುದು ಸತ್ಯವಾಗಿದೆ. ಹೆಣ್ಣಿಗೆ ವಿದ್ಯೆ ಇಲ್ಲ, ಸತಿ ಸಹಗಮನ ಪದ್ಧತಿ, ದೇವ ದಾಸಿ ಪದ್ಧತಿ, ಶೂದ್ರನ ನೀತಿ, ಕ್ಷತ್ರಿಯನ ನೀತಿ, ಎಂದು ಅದು ಖಿಡಿವಾಣವಿಲ್ಲದೆ ಹಬ್ಬಿದವು, ಅದರ ಫಲವೇ ಶೋಷಣೆ, ನೋವು, ಹಿಂಸೆ, ಅನಾಚಾರಗಳು!! ಈಗ ಈ ನಿಟ್ಟಿನಲ್ಲಿ ನೈತಿಕತೆಯು ಧರ್ಮವಾಗುವುದೇ ಎಂದು ಕೇಳಿದರೆ "ಎಂದಿಗೂ ಇಲ್ಲ" ಎಂಬುವುದೇ ಅದರ ಉತ್ತರ ಆಗುವುದು. ಆದುದರಿಂದ ಎಲ್ಲಾ ಧರ್ಮ, ಪಂಥಗಳ ನೈತಿಕತೆಯ ವಿವರಣೆಗಳನ್ನು ಅದೇ ರೀತಿಯಲ್ಲಿ ಒಪ್ಪಿಕೊಳ್ಳುವ ಹಾಗಿಲ್ಲ ಎಂದು ತಿಳಿಯಬೇಕು. ಇಲ್ಲಿ, ಮಾನವೀಯತೆಗೆ ವಿರುದ್ಧವಲ್ಲದ ರೀತಿಯಲ್ಲಿ 'ಇತರರೂ ಚೆನ್ನಾಗಿ ಇರಬೇಕು, ಮತ್ತು ತಾನೂ ಚೆನ್ನಾಗಿ ಇರಬೇಕು' ಎಂಬ ಹಿನ್ನೆಯಲ್ಲಿ ಸರ್ವರಿಗೂ ಒಳಿತಾಗುವ ನೈತಿಕತೆಯನ್ನು ಮಾತ್ರ ಪ್ರತ್ಯೇಕಿಸಿ ನೋಡಬೇಕಾಗಿದೆ. ಹೀಗೆ ನೋಡುವಾಗ ನಮಗೆ ಕಳ್ಳತನ ಮಾಡಬಾರದು, ವಂಚಿಸಬಾರದು, ಪರಸ್ತ್ರೀ, ಪರಪುರುಷ ಸಂಘ ಮಾಡಬಾರದು, ಸುಳ್ಳು ಹೇಳಬಾರದು, ಮದುವೆಯ ನಂತರವೇ ಮಿಲನ, ಇತ್ಯಾದಿ ಎಲ್ಲಾ ಧರ್ಮ ಪಂಥಗಳಿಗೂ ಸಾಮಾನ್ಯವಾಗಿರುವ ಅದೆಷ್ಟೋ ನೈತಿಕ ಅಂಶಗಳು ಸಿಗುವವು. ಇದನ್ನೇ "ಸಾರ್ವತ್ರಿಕ ನೈತಿಕತೆ" ಎನ್ನುವುದು. ಇದು ಧರ್ಮ, ಪಂಥಗಳ ಸಾರದ ಭಾಗದಲ್ಲೂ ಸೇರಿಕೊಳ್ಳುತ್ತವೆ ಎಂಬುವುದನ್ನು ಪ್ರತ್ಯೇಕವಾಗಿ ತಿಳಿಯಬೇಕಾಗಿದೆ.

---

## ಈ ಜಗತ್ತಿನ ಎಲ್ಲಾ ಪುರಾಣಗಳಲ್ಲೂ ದೇವತೆಗಳು ಮತ್ತು ದೇವರುಗಳು, ನೈತಿಕವೆಂದು ವಿವರಿಸಲಾಗದ ಕೆಲವು ಕರ್ಮಗಳನ್ನು ಮಾಡಿರುವುದು ತಿಳಿಯುವುದು. ಆದರೆ ನೀವು ಎಲ್ಲಾ ದೇವರುಗಳನ್ನೂ ಶ್ರೇಷ್ಠವೆಂದೇ ಚಿತ್ರಿಸುವಿರಿ. ಈಗ, ಇದು ಸತ್ಯಕ್ಕೆ ವಿರುದ್ಧವಾಗುವುದಿಲ್ಲವೇ?

ಉತ್ತರ- ನೈತಿಕತೆಯು ದೇವಸಂಕಲ್ಪಕ್ಕೆ ಅನಿವಾರ್ಯವಾಗಿದೆ ಎಂಬ ಸತ್ಯವನ್ನು ಹಿಂತೆಗೆಯುವುದಲ್ಲ ಇಲ್ಲಿ ನಾವು ಮಾಡಬೇಕಾಗಿರುವುದು. ಅದೇ ರೀತಿ, ಅನೈತಿಕತೆ ಇದ್ದಲ್ಲಿ ಅವನ್ನೆಲ್ಲ ನೈತಿಕವೆಂದು ಸಾಧಿಸುವ ರೀತಿಯೂ ಅಲ್ಲ, ಹಾಗಿದ್ದರೆ ಸಾಧಿಸಲು ಹೊರಟರೆ ಅದು ಸತ್ಯವಿರುದ್ಧವಾಗುವುದು. ಇದಕ್ಕೆ ಇರುವ ಆ ಒಂದೇ ರೀತಿ ಎಂದರೆ ನಾವು ಎಲ್ಲರೂ 'ಹಿಂದಿನ' ಎಲ್ಲಾ ದೇವಸಂಕಲ್ಪಗಳ ಆ ಉತ್ತಮ ಭಾಗಗಳಿಗೆ ಮಾತ್ರ ಒತ್ತುಕೊಟ್ಟು ಇತರ ಭಾಗವನ್ನು "ಬಿಟ್ಟುಬಿಡುವುದು" ಆಗಿದೆ. ಈಗ, ಇಲ್ಲಿ ಅನೈತಿಕತೆಯನ್ನು ಒಪ್ಪಿಕೊಳ್ಳಲೂ ಇಲ್ಲ, ಇತ್ತ ಎಲ್ಲಾ ದೇವರುಗಳ ನೈತಿಕ ಭಾಗವನ್ನು

ಒಪ್ಪಿಯೂ ಆಗುವುದು. ಹೀಗಿರುವಾಗ ಇಲ್ಲಿ ಸತ್ಯವನ್ನು ವಿರೋಧಿಸುವುದಿಲ್ಲ ಎಂದು ಸ್ಪಷ್ಟವಾಗುವುದು. ಇಲ್ಲಿ "ಆಚಾರಕ್ಕೆ ಕುಂದು ಉಂಟಾಯಿತು" ಎನ್ನಲು ಸಾಧ್ಯವಿಲ್ಲ ಯಾಕೆಂದರೆ, ದೇವರನ್ನು ಅಥವಾ ದೇವರುಗಳನ್ನು ನಾವು ಇಲ್ಲಿ ಸ್ವಭಾವದಲ್ಲಿ ಅತ್ಯಂತ ಮೇಲೆ ಎತ್ತಿ ಹಿಡಿದಿದ್ದೇವೆ. ಯಾವ ದೇವರೇ ಆದರೂ, ತನ್ನನ್ನು ಹೊಗಳುವವನನ್ನು ಶಿಕ್ಷಿಸಲಾರನು. ಆದುದರಿಂದ ದೇವರ ಕೋಪದ ಬಗ್ಗೆಯೂ ಹೆದರುವ ಅಗತ್ಯವಿಲ್ಲ. ಈ ರೀತಿ, ನಂಬಿಕೆ, ಅಚಾರಗಳ ತೊಂದರೆಗಳು ಇಲ್ಲಿ ಇಲ್ಲ ಎಂದು ತಿಳಿಯಬಹುದು. ಇಂದಿನ ದೇವಮಾನವರನ್ನು ಉದ್ದೇಶಿಸಿ ಹೇಳುವುದಲ್ಲ ಎಂದು ತಿಳಿಯಬೇಕು. ಅಂಥವರಲ್ಲಿ ಯಾರಾದರೂ ತಪ್ಪು ಮಾಡಿದರೆ, ಆ ದೇವಮಾನವರಿಗೆ [ಅವರು ಇಂದಿನ ಕಾಲದಲ್ಲಿ ಜೀವಿಸುವ ಕಾರಣ] ತಕ್ಕ ಶಿಕ್ಷೆ ನ್ಯಾಯಾಲಯವು ಕೊಡುವುದು.

ಇಲ್ಲಿ ಯಾರೂ ಅನೈತಿಕ ವಿಚಾರಗಳನ್ನು ನೈತಿಕ ಎಂದು ತಿರುಚುವ ಗೋಜಿಗೆ ಹೋಗುವುದಿಲ್ಲ, ಅದರ ಬದಲು ದೇವರನ್ನು ಒಟ್ಟಾಗಿ ನೈತಿಕತೆಯ ಆದರ್ಶವಾಗಿ ಚಿತ್ರಿಸುವುದೆಂದು ತಿಳಿಯಬೇಕು. ಇನ್ನು ಜಗತ್ತಲ್ಲಿ ಆಸ್ತಿಕರು ಇದುವರೆಗೂ ಇತರ ದೇವರ ಅನೈತಿಕತೆಯನ್ನು ಎತ್ತಿ ಹೇಳುತ್ತಾ, ತನ್ನ ದೇವರನ್ನು ಹಲವು ರೀತಿಯಲ್ಲಿ ವಿವರಿಸಿ ಎಲ್ಲವೂ ನೈತಿಕದಲ್ಲೇ ಇದೆ ಎಂಬಂತೆ ಚಿತ್ರಿಸುವರು. ಒಟ್ಟಿನಲ್ಲಿ ನಾವು ಇಲ್ಲಿ ತಿಳಿಯಬೇಕಾದ ಅಂಶವೆಂದರೆ "ದೇವರು" ಎಂಬ ಸಂಕಲ್ಪಕ್ಕೆ ಇದುವರೆಗೂ ಸಾರ್ವತ್ರಿಕ ಮನ್ನಣೆ ಸಿಗಲಿಲ್ಲ ಎಂದು ಮಾತ್ರವಾಗಿದೆ!! ಇನ್ನು, "ಬೆಳಕು ಎಂಬುವುದಕ್ಕೆ ಕತ್ತಲೆಯನ್ನು ಹೇರುವುದು ನ್ಯಾಯ ವಿರುದ್ಧ" ಎಂಬ ಸತ್ಯದ ಆಧಾರವನ್ನು ಇಟ್ಟುಕೊಂಡೇ, ನಮಗೆ ಎಲ್ಲ "ದೇವರು" ಸಂಕಲ್ಪಗಳನ್ನೂ "ಆದರ್ಶದ ನಿಧಿ" ಎಂದು ಮಾತ್ರ ಚಿತ್ರಿಸಬಹುದು. ಇನ್ನು, ಜನರು ತಾವು ಬದಲಾಯಿಸಿಕೊಳ್ಳಬೇಕಾಗಿರುವುದು, ತಮ್ಮ ದೇವರನ್ನು ಮಾತ್ರ ಹೊಗಳಿ ಇತರ ದೇವರನ್ನು ತೆಗಳುವ ಬದಲು, ಎಲ್ಲಾ ದೇವಸಂಕಲ್ಪಗಳನ್ನು ಆದರ್ಶದ ಹಿನ್ನೆಲೆಯಲ್ಲಿ ಶ್ರೇಷ್ಠ ಎಂದು ತಿಳಿಯುವ ಕೆಲಸ ಮಾತ್ರವಾಗಿದೆ. ಆದರೆ, ನಾಸ್ತಿಕರು ಈ ರೀತಿಯ ಕುರಿತು ಅಸಮಾಧಾನ ಪಟ್ಟರೆ, ಅವರಿಗೆ, "ಆ "ಹಿಂದಿನ" ದೇವರುಗಳನ್ನು ನಿಂದಿಸಿದಲ್ಲಿ, ಈ ಜಗತ್ತಿನಲ್ಲಿ, ಜನರನ್ನು ಉತ್ತಮರನ್ನಾಗಿ ಪರಿವರ್ತಿಸಲು ಸಾಧ್ಯವಾಗುವುದೇ" ಎಂಬ ಮರು ಪ್ರಶ್ನೆಯನ್ನು ಕೇಳಬೇಕಾಗುವುದು. ಹಾಗೆ ನಿಂದಿಸುವುದರಿಂದ ಯಾರೂ ಉತ್ತಮರಾಗುವುದಿಲ್ಲ, ಬದಲು ಸಮಾಜದಲ್ಲಿ ದ್ವೇಷಕ್ಕೆ ಮಾತ್ರ ಅದು ಕಾರಣವಾಗುವುದು. ಮಾತ್ರವಲ್ಲ, ಅದು ಆ ಪ್ರಾಚೀನ ವಾಮಾಚಾರಕ್ಕೆ ಪೂರಕವಾದ ಕೆಲಸವೂ ಆಗುವುದು.

ನಾವು ದೇವರುಗಳ ಮತ್ತು ಧರ್ಮಗಳ ಆ ಸಾರ ಭಾಗದಲ್ಲಿ ಜೀವಿಸೋಣ. ಈ ರೀತಿಯಲ್ಲಿ ನಾವು ಜೀವಿಸಲು ಆರಂಭಿಸಿದಾಗ, ಜಗತ್ತು ಯುದ್ಧ, ಹಿಂಸೆ, ಜಗಳ, ದ್ವೇಷ, ಅನೈತಿಕತೆಗಳ ಚಟದಿಂದ ತಾನಾಗಿ ದೂರ ಸರಿಯುವುದು. ಆಗಲೇ ಈ ಭೂಮಿಯು ಆನಂದದ ಆ ಶಾಂತಿ-ಸ್ವರ್ಗವಾಗುವುದು.

---

## ನೀವು ಕೆಲವೊಮ್ಮೆ ಪುರಾಣ ಕಥೆಗಳಲ್ಲಿನ ತಪ್ಪುಗಳನ್ನು ಎತ್ತಿ ಹೇಳುವಿರಲ್ಲ ಅದರ ಅಗತ್ಯವಿದೆಯೇ?

ಉತ್ತರ- ನನ್ನ ಸಹೋದರ, ನನಗೆ ಯಾವ ದೇವರು, ಅಥವಾ ಧರ್ಮದ ಮೇಲೆ ಸ್ವಲ್ಪವೂ ದ್ವೇಷವಿಲ್ಲ. ಯಾಕೆಂದರೆ ನನಗೆ ಪ್ರತ್ಯೇಕವಾಗಿ ಯಾವ ಧರ್ಮ, ಪಂಥ, ಮತ, ಪರಂಪರೆಗಳಿಲ್ಲ. ಆದುದರಿಂದ ಅದಕ್ಕಾಗಿ ವಾದದಲ್ಲಿ ಜಯಿಸಿ ಜನರನ್ನು ಸೇರಿಸುವ ಅಥವಾ ದಿಗ್ವಿಜಯ ಮಾಡಬೇಕೆಂಬ ಆ ದೊಡ್ಡ ಜವಾಬ್ದಾರಿಯೂ ಇಲ್ಲ. ಇನ್ನು, ನಾನು ಯಾಕಾಗಿ ಕೆಲವು ಪುರಾಣಗಳಲ್ಲಿ ಇರುವ ವಿರೋಧಾಭಾಸಗಳನ್ನು ಎತ್ತಿ ತೋರಿಸಿರುವುದು ಎಂದರೆ, ಆ ಪ್ರಾಚೀನ ವಾಮಾಚಾರದ ಕೆಲಸವು, ಈ ಧರ್ಮ, ಪಂಥಗಳ ಹಿನ್ನೆಲೆಯಲ್ಲೇ ಹೆಚ್ಚಾಗಿ ನಡೆಯುತ್ತಿರುವುದು ಎಂದು ಎಚ್ಚರಿಸುವುದಕ್ಕೆ ಮಾತ್ರವಾಗಿದೆ. ಯಾರೇ ಆದರೂ, [ನಂಬಿಕೆಯ ರೀತಿಯಲ್ಲಿ ನಂಬಿಸುವುದನ್ನು ಬಿಟ್ಟಲ್ಲಿ,] ಸರಿಯಾದ ತರ್ಕದ ಸಾಕ್ಷ್ಯಾಧಾರವಿಲ್ಲದೆ ಯಾರ ಮಾತನ್ನೂ ಇದುವರೆಗೂ ಒಪ್ಪಿದ್ದಿಲ್ಲ ಮತ್ತು ಅವನ್ನು ಸುಳ್ಳು ಎಂದು ತಳ್ಳಿಬಿಡುವರು. ಸ್ವಪ್ನವೋ ಅಥವಾ ಸೂಕ್ಷ್ಮದ ಕೆಲವು ನಿಮಿಷಗಳ ದರ್ಶನವೋ ಅಲ್ಲದ, ಹಲವು ವರುಷಗಳು ಬೇಹುಗಾರಿಕೆ ಮಾಡಿದ ಫಲವಾಗಿ ದೊರಕಿರುವ, ನಾನು ಕಂಡ ಆ ಪ್ರಾಚೀನ ವಾಮಾಚಾರದ ರಹಸ್ಯ ಸತ್ಯಗಳ ಆ ಭಯಾನಕ ಅಪಾಯಗಳನ್ನು 'ಸುಳ್ಳು' ಎಂದು ತಳ್ಳಿದರೆ, ಎಲ್ಲವೂ ಅಲ್ಲಿಗೆ ಮುಗಿಯುವುದೆಂದು ನನ್ನ ಹೃದಯವು ನನಗೆ ಹೇಳುವುದು. ಅಂದರೆ, ಆ ಅಪಾಯಗಳಿಂದ ಕಷ್ಟಪಡಬೇಕಾದವರು ನೀವುಗಳೇ ಆಗಿರುವಿರಿ ಎಂದು ಅರ್ಥ!! ಆದುದರಿಂದ, ನಾನು ಮಾಡುತ್ತಿರುವುದು ಎಲ್ಲವೂ ನಿಮಗಾಗಿ ಮಾತ್ರ ಎಂದು ತಿಳಿಯಬೇಕು, ನನಗಾಗಿ ನಾನು ಏನೂ

ಮಾಡಿಯೂ ಇಲ್ಲ. ಹೀಗಿರುವಾಗ, ಆ ಅಪಾಯಗಳ ಸತ್ಯಾವಸ್ಥೆಯನ್ನು ನಿಮ್ಮ ಮುಂದೆ ಇಡುವುದಕ್ಕೆ ಇರುವ ಆ ಏಕೈಕ ಮಾರ್ಗವಾಗಿ ನನಗೆ 'ಸತ್ಯದ ಹಿನ್ನೆಲೆಯ' ವಾದವನ್ನು ಮಾಡಬೇಕಾಯಿತು ಎಂದು ತಿಳಿಯಬೇಕು. ದುರದೃಷ್ಟವಶಾತ್, ಇಂದೂ, ಪುರಾಣ ಕಥೆಗಳನ್ನೇ ನೂರಕ್ಕೆ ನೂರು ಸರಿ ಎಂದು ವಾದಿಸಿ, ಆ ಹಿನ್ನೆಲೆಯಲ್ಲಿ, ಧ್ವೇಷ, ಧರ್ಮಾಂಧತೆಗಳನ್ನು ಬೆಳೆಸುತ್ತಿರುವುದನ್ನು ನೋಡುವಾಗ, ಆ ಪ್ರಾಚೀನ ವಾಮಾಚಾರದ ಈ ರೀತಿಯ ಭಯಾನಕ ಕುತಂತ್ರವನ್ನು ಇಲ್ಲವಾಗಿಸಲು ಆಲೋಚಿದೆ. ಇದಕ್ಕೆ ಬೇಕಾಗಿ ಮಾತ್ರ ಆ ರೀತಿ ಪುರಾಣ ಕಥೆಗಳಲ್ಲಿನ ಕೆಲವು ವಿರೋಧಾಭಾಸವನ್ನು ವಿವರಿಸಿದ್ದೇನೆ ಅಷ್ಟೆ. ಅಂದರೆ, ಈ ವಿವರಣೆಗಳು ಯಾವುದೇ ದೇವರು ಅಥವಾ ಧರ್ಮವನ್ನು ನಿಂದಿಸುವ ಉದ್ದೇಶದಿಂದ ಅಲ್ಲ ಎಂಬುವುದನ್ನು ಪ್ರತ್ಯೇಕವಾಗಿ ತಿಳಿಯಬೇಕಾಗಿದೆ.

---

## ಧರ್ಮ, ಪಂಥಗಳ ಜನರು ಆ ಪ್ರಾಚೀನ ವಾಮಾಚಾರವನ್ನು ತಮ್ಮ ಧರ್ಮದಲ್ಲಿ ಹೇಳಿಲ್ಲ ಎಂದು ವಾದ ಮಾಡಿದರೆ, ಅದಕ್ಕೆ ನಿಮ್ಮ ಉತ್ತರ ಏನು?

ಉತ್ತರ- ಬಹಳ ಚಿಕ್ಕ ಉತ್ತರ ಮಾತ್ರ ಅದಕ್ಕೆ ಇರುವುದು. ನಿಜವಾಗಿಯೂ ಎಲ್ಲಾ ಧರ್ಮ, ಪಂಥಗಳೂ ಇದೇ ಪ್ರಾಚೀನ ವಾಮಾಚಾರವನ್ನು ತಮಗೆ ಅದರ ಅರಿವಿಲ್ಲದೆಯೇ ಒಪ್ಪಿದೆ, ಅಂದರೆ, ಅವುಗಳಿಗೆ ಅದು ಪ್ರಾಚೀನ ವಾಮಾಚಾರ ಎಂದು ತಿಳಿದಿಲ್ಲ ಎಂದು ಅರ್ಥ!! ಒಂದು ಕಡೆ ಅಸುರ ಶಕ್ತಿ ಎಂದು ಹೇಳಿದರೆ ಇನ್ನೊಂದು ಕಡೆ ಅದನ್ನು ಸೈತಾನ ಎಂದು ಕರೆದಿದ್ದಾರೆ ಅಷ್ಟೆ. ನೀವು ಎಲ್ಲಾ ಧರ್ಮದ ಪಂಡಿತರುಗಳ ಪ್ರವಚನವನ್ನು ಕೇಳುವಾಗಲೂ ಅವರು "ಸೈತಾನನು ಮಾನವನ ಪ್ರತಿ ಕರ್ಮದಲ್ಲೂ ಸೇರಿ ಮಾನವನ ಸದ್ಗುಣವನ್ನು ಇಲ್ಲವಾಗಿಸುವನು" ಎಂದು ಎಚ್ಚರಿಸುವುದನ್ನು ನೋಡುವಿರಿ. ಮಾತ್ರವಲ್ಲ, ಅವರವರ ಧರ್ಮದ ವಿರುದ್ದ ರೀತಿಯಲ್ಲಿ ಜೀವಿಸುವಂತೆ ಜನರನ್ನು ಪ್ರಲೋಭಿಸುವನೆಂದೂ ಹೇಳುತ್ತಾ ಬಂದಿರುವರು!! ಕೊನೆಯ ಕಾಲದಲ್ಲಿ ಕೆಟ್ಟ ಜನರನ್ನು ಆ ಸೈತಾನನು ಅತಿಯಾಗಿ ಎಬ್ಬಿಸುವನೆಂದೂ ಹೇಳುವರು. ಈಗ, ನಾನು ಹೇಳುವ ಅದೇ ಪ್ರಾಚೀನ ವಾಮಾಚಾರ ವಿವರಣೆಯನ್ನೇ ಎಲ್ಲರೂ ಅವರ ರೀತಿಯಲ್ಲಿ ವಿವರಿಸಿರುವುದು ಎಂದು ಸ್ಪಷ್ಟವಾಗುವುದು, ಆದರೆ, ಅಲ್ಲಿ ಅದಕ್ಕೆ ಕಾರಣವಾಗುವುದು ಆ "ಪುರಾಣಕಥೆ" ಯೊಳಗಿನ ಅಸುರ ಅಥವಾ ಸೈತಾನ ಎಂದು ಮಾತ್ರ, ಮತ್ತು ನಾನು ಹೇಳುವ ಆ ಪ್ರಾಚೀನ ವಾಮಾಚಾರವು, "ಮಾನವನೇ ಪ್ರಾಚೀನ ಕಾಲದಲ್ಲಿ ಮಾಡಿಟ್ಟ", ಆ ತಾನಾಗಿ ತನ್ನನ್ನು ಬೆಳೆಸಿಕೊಳ್ಳುವ ರೀತಿಯ, ಸೂಕ್ಷ್ಮದ, ಒಂದು ಪ್ರತ್ಯೇಕ ವಾಮಾಚಾರ ವ್ಯವಸ್ಥೆ ಆಗುವುದು ಎಂಬ ಒಂದು ವ್ಯತ್ಯಾಸ ಮಾತ್ರ ಇರುವುದು ಎಂದು ತಿಳಿಯಬೇಕು. ಹೀಗೆ, ಎರಡು ಕಡೆಯೂ ಆ ಒಂದೇ ಸೂರ್ಯನನ್ನು ಬೊಟ್ಟುಮಾಡಿ ತೋರಿಸುವಂತೆ, ಆ ಒಂದನ್ನೇ ಬೊಟ್ಟು ಮಾಡಿ ತೋರಿಸುವಾಗ, "ಪ್ರಾಚೀನ ವಾಮಾಚಾರ ಇಲ್ಲ" ಎಂದು ಹೇಳಿ, ನಾನು ತೋರಿಸುವ ಸೂರ್ಯನನ್ನು ಇಲ್ಲ ಎಂದು ನೀವು ಹೇಳಿದರೆ, ಆ ಅಸುರ ಅಥವಾ ಸೈತಾನನ ವಿವರಣೆ ಎಂಬ ನೀವು ತೋರಿಸುವ ಸೂರ್ಯನೂ ಅದರೊಂದಿಗೆ ತಾನಾಗಿ ಇಲ್ಲವಾಗುವನು ಎಂಬ ತೊಂದರೆ ಅಲ್ಲಿ ಸೃಷ್ಟಿಯಾಗುವುದು.

---

## ಎಲ್ಲಾ ಧರ್ಮಗಳೂ ಶಾಂತಿಗಾಗಿಯೇ ನೆಲೆಯಾಗಿವೆ ಅಲ್ಲವೇ?

ಉತ್ತರ- ಈ ಜಗತ್ತಿನಲ್ಲಿ ಲಕ್ಷಗಟ್ಟಲೆ ಗುರುಗಳು ಮತ್ತು ಪ್ರವಾದಿಗಳು ಆಗಿ ಹೋದರು, ಮತ್ತು ಈಗಲೂ ಹಲವರು ಇರುವರು. ಇವರೆಲ್ಲರೂ ಶಾಂತಿಯನ್ನೇ ಪ್ರತಿಪಾದಿಸಿರುವುದು, ಅಂದರೆ, ಶಾಂತಿಯ ಪ್ರತಿಪಾದನೆಯು ಹೊಸತೇನೂ ಅಲ್ಲ! ಇದು ಯಾಕೆಂದರೆ ಶಾಂತಿಯನ್ನು ಪ್ರತಿಪಾದಿಸದಿದ್ದರೆ ಅದೊಂದು ಧರ್ಮವೋ, ಪಂಥವೋ, ಅಥವಾ ದೇವರ ಮಾತೋ ಆಗಲಾರದು! ಆದರೆ, ಇಲ್ಲೆಲ್ಲಾ ಶಾಂತಿಯು ಸೃಷ್ಟಿಯಾಗಿರುವುದು, ಅವರವರ ದೇವರು, ಧರ್ಮ, ಪಂಥಗಳೆಂಬ ಬೇಲಿಯೊಳಗೆ, ಮತ್ತು ಈ ಎಲ್ಲಾ ಭಯಾನಕ ಧ್ವೇಷ, ಹಿಂಸೆ, ರಕ್ತಪಾತಗಳಿಗೂ ಅವು ಕಾರಣವಾಗಿರುವುದು ಎಂಬುವುದು ನಮ್ಮನ್ನು ಬೆಚ್ಚಿ ಬೀಳಿಸುವುದು! ಅಂದರೆ, ತಮ್ಮ ಬೇಲಿಯೊಳಗಿನ ಶಾಂತಿಯೇ ಇತರ ಕಡೆಗಳಲ್ಲಿ ಧ್ವೇಷ, ರಕ್ತಪಾತಗಳನ್ನು ಸೃಷ್ಟಿಸಿದವು ಎಂದು ಅರ್ಥ. ಹಿಂದಿನಿಂದಲೇ ಎಲ್ಲಾ ಧರ್ಮ, ಪಂಥಗಳು ತಮ್ಮ ತಮ್ಮ ಧರ್ಮ, ಪಂಥಗಳನ್ನು ಆ ಶಾಂತಿಯ ಧರ್ಮ, ಪಂಥಗಳು ಎಂದು ಹೇಳುತ್ತಾ ಬಂದಿರುವುದು ಈ ಹಿನ್ನೆಲೆಯಲ್ಲಿ ಮಾತ್ರ ಎಂದು ತಿಳಿಯಬೇಕು. ಎಲ್ಲವನ್ನೂ ಒಟ್ಟಾಗಿ ನೋಡುವಾಗ,

ಈ ರೀತಿಯ ಶಾಂತಿಗಳ ಇನ್ನೊಂದು ಮುಖವೇ ಆ ಭಯಾನಕ ಅಶಾಂತಿಗಳು ಎಂದು ಸ್ಪಷ್ಟವಾಗಿ ತಿಳಿದು ಬರುವುದು!!!

ಆ ಪ್ರಾಚೀನ ವಾಮಾಚಾರವು ಇದುವರೆಗೂ ಶಾಂತಿಯೆಂದು ಹೇಳುತ್ತಾ, ಹೇಗೆ ಜನರನ್ನು ಮೋಸ ಮಾಡುತ್ತಾ ಬಂದಿದೆ ಎಂದು ಇಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ!

---

## ಸಮಾಜದಲ್ಲಿ ಜೀವಿಸಲು, ನಂಬಿಕೆ ಅನಿವಾರ್ಯವೆಂದು ಹೇಳುವರು ಸರಿಯೇ?

ಉತ್ತರ- ಇದನ್ನು ಉತ್ತರಿಸುವ ಮೊದಲು 'ನಂಬಿಕೆ' ಎಂದರೇನು ಎಂಬುವುದನ್ನು ನೋಡೋಣ. ನಿಜವಾಗಿಯೂ 'ನಂಬಿಕೆ'ಯೆಂಬುವುದು ಯಾವುದಾದರು ಒಂದರ ಅಸ್ತಿತ್ವವನ್ನು ಪ್ರತಿನಿಧೀಕರಿಸುವುದಿಲ್ಲ. ಅದು ಮಾನವನ ಅರಿವಿನ ಕೊರತೆಯನ್ನು ಮಾತ್ರ ಹೇಳುವುದು. ಇನ್ನು, 'ಸತ್ಯ' ಎಂದಾಗ ಆ ವ್ಯಕ್ತಿಯಲ್ಲಿ ಇರುವಿಕೆಯ ಭಾವದ ಅರಿವನ್ನು ಕಾಣಬಹುದು. ಅದೇ ರೀತಿಯಲ್ಲಿ 'ಅಸತ್ಯ' ಎಂದಾಗಲೂ ಇಲ್ಲವೆಂಬ ಅರಿವನ್ನು ಆತನಲ್ಲಿ ಕಾಣಬಹುದು. ಆದರೆ ಒಬ್ಬನು 'ನಂಬುವೆನು' ಎಂದಾಗ ಅಲ್ಲಿ ಈ ಎರಡು ರೀತಿಯ ಅರಿವೂ ಇಲ್ಲವಾಗುವುದು. ಅಂದರೆ ಅದು ಎರಡು ರೀತಿಯಿಂದಲೂ ಅರಿವಿನ ಅಭಾವ ಮಾತ್ರವಾಗಿರುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅರಿವಿನ ಅಭಾವವಾದ ಕಾರಣ ನಂಬಿಕೆಯನ್ನು ಅಜ್ಞಾನ ಎನ್ನಬಹುದು. ಅರಿವು ಇದ್ದಲ್ಲಿ ಸಂಶಯ ಇರುವುದಿಲ್ಲ. ಆದರೆ ಅರಿವು ಇಲ್ಲದಲ್ಲಿ ಸಂಶಯ ಇರುವುದು. ಈ ರೀತಿಯಲ್ಲಿ ನಂಬುವುದು ಎಂದರೆ ಸಂಶಯಿಸುವುದು ಎಂದು ಹೇಳಬಹುದು. ಉದಾಹರಣೆಗೆ ಯಾರಾದರೂ ಒಬ್ಬನನ್ನು, ನೀವು ಆತನ ಬಗ್ಗೆ ಸ್ಪಷ್ಟವಾಗಿ ಅರಿತು ಕೊಳ್ಳದಿದ್ದರೆ, ಆತನನ್ನು ಕೆಟ್ಟವ ಅಥವಾ ಒಳ್ಳೆಯವ ಎಂದು ಹೇಗೆ ನಿಮಗೆ ಇನ್ನೊಬ್ಬರು ತಿಳಿಸುವರೋ, ಅದೇ ರೀತಿ ನೀವು ನಂಬುವಿರಿ ಅಥವಾ ಇನ್ನೊಂದು ಶಬ್ದವನ್ನು ಉಪಯೋಗಿಸುವುದಾದರೆ ಸಂಶಯಿಸುವಿರಿ. ಆಗ ನೀವು ಅತ್ಯಂತ ದೊಡ್ಡ ಅಪರಾಧವನ್ನು ಎಸಗುವ ಸಾಧ್ಯತೆಯು ಹೆಚ್ಚಾಗುವುದು. ಈ ರೀತಿಯ ನಂಬುವಿಕೆಯು ಅಥವಾ ಸಂಶಯಿಸುವಿಕೆಯು ಸಮಾಜಕ್ಕೆ ಅನಿವಾರ್ಯವೆಂದು ಹೇಳುವುದಾದರೆ, ಆಶ್ಚರ್ಯವಾಗುವುದು. ಆದುದರಿಂದ ಸಮಾಜದಲ್ಲಿ ಜೀವಿಸಲು ನಂಬಿಕೆ ಅಥವಾ ಸಂಶಯವಲ್ಲ, ಬದಲು ಸತ್ಯದ ಅರಿವು ಮುಖ್ಯವೆಂದು ತಿಳಿದುಕೊಳ್ಳಬಹುದು.

ಸಮಾಜದಲ್ಲಿ, ಪೊಲೀಸ್ ಠಾಣೆ, ನ್ಯಾಯಾಲಯ, ಎಂದು ಎಲ್ಲೆಡೆಯಲ್ಲೂ "ನಾನು ಹೀಗೆಂದು ನಂಬುತ್ತೇನೆ" ಎಂದರೆ ಯಾರೂ ಕೇಳುವುದಿಲ್ಲ. ಅಲ್ಲೆಲ್ಲಾ ಸತ್ಯವನ್ನು ತೋರುವ ಸಾಕ್ಷ್ಯಾಧಾರಗಳು ಬೇಕಾಗುವುದು. ಇನ್ನು, ಮನೆಯಲ್ಲಾದರೂ ಸಮಾಜದಲ್ಲಾದರೂ ಯಾರೂ ನಂಬಿ ಜೀವಿಸುವುದಿಲ್ಲ. ನಂಬಿಕೆ ಎಂದರೆ ತರ್ಕವಿಲ್ಲದೆ ಒಪ್ಪಿಕೊಳ್ಳುವುದಾಗಿದೆ. ಎಲ್ಲರೂ ಕೋಪ, ಅಸೂಯೆ, ಮತ್ತು ಜಗಳ ಆಡುವಾಗ, ಆ ತಮ್ಮ ತಮ್ಮ ಪರವಾಗಿ ಮಾಡುವ ತರ್ಕಕ್ಕೆ ಲೆಕ್ಕವೇ ಇಲ್ಲ ಎಂಬುವುದನ್ನು ಇಲ್ಲಿ ನೆನೆಯಬೇಕು!! ಇಲ್ಲೆಲ್ಲಾ ನಂಬಿಕೆ ಎಲ್ಲಿದೆ ಎಂದು ತಿಳಿಯುವುದಿಲ್ಲ. ಇನ್ನು, ಎಲ್ಲರಿಗೂ 'ಬೇಕಾಗಿರುವುದು' ಸತ್ಯಸಂಧತೆ ಎಂಬುವುದು ಸತ್ಯ. ಅದು ಸಮಾಜದಲ್ಲಿ, ತಾನು ಇತರರಿಗೆ ತೋರದಿದ್ದರೂ, ಇತರರು ತನ್ನನ್ನು ವಂಚಿಸದೆ ಸತ್ಯಸಂಧತೆಯನ್ನು ತೋರಬೇಕೆಂದು ಬಯಸುವುದು ಇದೆ!! ಒಬ್ಬ ಕಳ್ಳನು ಕೂಡಾ ಇನ್ನೊಬ್ಬ ಕಳ್ಳನು ಆತನನ್ನು ವಂಚಿಸದೆ ಸತ್ಯಸಂಧತೆಯನ್ನು ತೋರಬೇಕೆಂದು ಬಯಸುವನು!!! ಆದರೆ ನಂಬಿಕೆಯಿಂದ ಮನೆ, ಸಮಾಜ ಶಾಂತಿಯನ್ನು ಪಡೆಯುವುದು ಎಂಬುವುದು ಅರ್ಥಹೀನವಾಗುವುದು. ಅದರೆ, ಸತ್ಯಸಂಧತೆ ಇದ್ದಲ್ಲಿ ಮಾತ್ರ ಮನೆ, ಸಮಾಜ ಶಾಂತಿಯನ್ನು ಪಡೆಯುವುದು ಎಂಬ ಸತ್ಯವನ್ನು ಜನರು ಮರೆತಿದ್ದಾರೆ.

ಇದರೊಂದಿಗೆ, ಆತ್ಮೀಯ ಪ್ರೀತಿಯು ಪರಸ್ಪರ ಅರಿತುಕೊಳ್ಳುವಿಕೆಯಿಂದ ಮಾತ್ರ ಹುಟ್ಟಿಕೊಳ್ಳುವುದು, ಹೊರತು ಅದು ನಂಬಿಕೆಯಿಂದ ಎಂದೂ ಹುಟ್ಟಿಕೊಳ್ಳುವುದಿಲ್ಲ ಎಂಬುವುದನ್ನು ಪ್ರತ್ಯೇಕವಾಗಿ ತಿಳಿದುಕೊಳ್ಳಬೇಕು.

## ಸಾಮಾಜಿಕ ಜೀವನದಲ್ಲಿ ಈ ನಂಬಿಕೆ ಎಲ್ಲೂ ಕೆಲಸ ಮಾಡಿಲ್ಲವೇ?

ಉತ್ತರ- ಇಲ್ಲ. ಸಾಮಾಜಿಕ ಜೀವನದಲ್ಲಿ, ಪೊಲೀಸ್ ಅಧಿಕಾರಿಗಳಾಗಲೀ, ನ್ಯಾಯಾಧೀಶರಾಗಲೀ, ಯಾರ ಮಾತನ್ನು ನಂಬಿಕೆಯ ಹಿನ್ನೆಲೆಯಲ್ಲಿ ಸ್ವೀಕರಿಸುವುದಿಲ್ಲ. ಅವರು ತನಿಕೆ ಮತ್ತು ಆಧಾರಗಳ ಹಿನ್ನೆಲೆಯಲ್ಲಿ ಮಾತ್ರ ನಿಗಮನಕ್ಕೆ ಬರುವರು. ಇದು ಸಮಾಜದ ತೊಂಬತ್ತು ಶೇಕಡ ಭಾಗವನ್ನೂ ಹಬ್ಬಿರುವುದು. ಇನ್ನು ಯಾರಿಗೂ ಇದುವರೆಗೂ ತಿಳಿಯದ ಇತರ ಕೆಲವು ವಿಚಾರಗಳ ಕುರಿತು ಹೇಳುವುದಾದರೆ, ಅವುಗಳು ನಂಬಿಕೆಗಳಲ್ಲ, ಅವು ಸಾಧ್ಯತೆಗಳಾಗುವವು. ಆದರೆ ನಂಬಿಕೆಯಿಂದಲೇ ಜಗತ್ತಿನಲ್ಲಿ ಪ್ರೀತಿಯಿಂದಿರಲು ಸಾಧ್ಯವೆಂಬ ವಾದಕ್ಕೆ ಅರ್ಥವೇ ಇಲ್ಲ ಎಂದು ಹೇಳಬಹುದು. ಕಾರಣ, ಪ್ರೀತಿಯ ಮೂಲ ತ್ಯಾಗ ಭಾವನೆಯಾಗುವುದು. ಅದು ನಂಬಿಕೆಯಲ್ಲ. ಕೆಳಮಟ್ಟದ ಸ್ವಾರ್ಥ ಪ್ರೀತಿಯಲ್ಲಾದರೂ ತನಗೆ ಲಾಭ ಇಲ್ಲವಾದಾಗ ಪ್ರೀತಿಯೂ ಕಡಿಮೆಯಾಗುವುದನ್ನು ನಾವು ಕಾಣುತ್ತೇವೆ. ಅದೇ ರೀತಿ ತನ್ನ ಅಹಂಕಾರಕ್ಕೆ ದಕ್ಕೆಯಾಗುವಾಗಲೂ ಪ್ರೀತಿ ಹೊರಟು ಹೋಗಿ ದ್ವೇಷವು ಉಂಟಾಗುವುದನ್ನು ನಾವು ಕಾಣುತ್ತೇವೆ. ಇಲ್ಲೆಲ್ಲಾ ಪ್ರೀತಿ ಮತ್ತು ನಂಬಿಕೆಗಳಿಗೆ ತಮ್ಮೊಳಗೆ ಯಾವ ಸಂಬಂಧವೂ ಇಲ್ಲ ಎಂಬುವುದಾಗಿ ಸ್ಪಷ್ಟವಾಗುವುದು. ನಂಬಿಕೆಯಿಂದಾಗಿ ಪ್ರೀತಿ ಹುಟ್ಟಿಕೊಂಡು, ಅದು ಸಮಾಜದಲ್ಲಿ ಎಲ್ಲರನ್ನೂ ಸಂತೋಷದಿಂದಿರುವಂತೆ ಮಾಡುವುದು, ಎಂದು ಹೇಳುವುದು ತಪ್ಪು ಎಂದು ಇದರಿಂದ ಸ್ಪಷ್ಟವಾಗಿ ತಿಳಿದುಬರುವುದು.

## ಧಾರ್ಮಿಕ ನಂಬಿಕೆಗಳ ಕುರಿತು ಏನು ಹೇಳಬಹುದು?

ಉತ್ತರ- ಧಾರ್ಮಿಕ ಅಥವಾ ಆಧ್ಯಾತ್ಮಿಕ ಎಂದ ಕೂಡಲೆ ಅಲ್ಲಿ ನಂಬಿಕೆಗೆ ಬೇರೆ ಅರ್ಥ ಬರುವುದಿಲ್ಲ. ಆದರೆ ಅದನ್ನು ಇಲ್ಲಿ ಸ್ವಲ್ಪ ವಿವರಣೆಯ ಮೂಲಕ ಸ್ಪಷ್ಟಪಡಿಸಬೇಕಾಗಿದೆ. ಸತ್ಯ ಗೊತ್ತಿಲ್ಲದಿರುವ ಸ್ಥಿತಿಯಲ್ಲಿ ನಂಬಿಕೆಯು ಹುಟ್ಟಿಕೊಳ್ಳುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಂಬಿಕೆಯು ಸಂಶಯದ ಸ್ಥಿತಿಯಲ್ಲಿದೆ ಎಂದು ತಿಳಿಯಬಹುದು. ಸತ್ಯ ಸ್ಪಷ್ಟವಾದಾಗ ನಂಬಿಕೆ ಹೊರಟುಹೋಗುವುದು. ಮೊದಲೇ ವಿವರಿಸಿರುವಂತೆ ಸೂರ್ಯನು ತಲೆ ಮೇಲಿರುವಾಗ 'ನಾನು ಆ ಸೂರ್ಯನನ್ನು ನಂಬುತ್ತೇನೆ' ಎಂದು ಕಣ್ಣಿದ್ದವರು ಯಾರೂ ಹೇಳುವುದಿಲ್ಲ. ಅದೇ ರೀತಿ ಸತ್ಯ ತಿಳಿದಿರುವಾಗ ಯಾರೂ ನಂಬಿಕೆಯೆಂಬ ಪದವನ್ನೇ ಬಳಸುವುದಿಲ್ಲ. ಹಾಗೆ ನೋಡುವಾಗ ದೇವರನ್ನು ನಂಬುವುದು ಎಂದರೆ ದೇವರ ಇರುವಿಕೆಯನ್ನು, ಅದು ಸತ್ಯ ಎಂದು ಹೇಳಿದಂತೆ ಆಗುವುದಿಲ್ಲ, ಸಂಶಯದಿಂದ ನೋಡಿದಂತಾಗುವುದು. ಇದು ಸರಿಯಾದ ರೀತಿಯೇ? ದೇವರನ್ನು ಜಗತ್ತಿನ ಸರ್ವರೂ ಸತ್ಯ, ಪ್ರೀತಿ, ನೀತಿಯೆಂದು ಅರಿತುಕೊಳ್ಳುವ ರೀತಿಯಲ್ಲವೆ ನಿಜವಾದ ರೀತಿಯಾಗಿರಬೇಕಾಗಿರುವುದು? ಇಷ್ಟರಲ್ಲೇ ನಮಗೆ ಆತ್ಮೀಯ ಪ್ರೀತಿಯ ಆ ಕರುಣಾಮಯ ದೇವರು, ಆ ಸತ್ಯಸಂಧ ಭಕ್ತಿ, ಮತ್ತು ಪವಿತ್ರವಾದ ಆ ಧರ್ಮ, ಇವುಗಳೆಲ್ಲಾ ಅತ್ಯಂತ ಪರಿಶುದ್ದ ರೂಪದಲ್ಲಿ ದೊರಕುವುದಿಲ್ಲವೇ? ಇನ್ನು ಆ ದೇವರ ಹೆಸರಲ್ಲಿ ತಮ್ಮೊಳಗೆ ವಿರೋಧಿಸುವ ಆ ಸಾವಿರಾರು ನಂಬಿಕೆಗಳ ಅಗತ್ಯವಾದರೂ ಏನು? ಇನ್ನು, ನಂಬಿಕೆಗಳು ಇದುವರೆಗೂ ನಮಗೆ ಏನಾದರೂ ಒಳಿತನ್ನುಂಟುಮಾಡಿದೆಯೇ ಎಂದು ನೋಡಿದಾಗ ಅದರ ಉತ್ತರ 'ಅದು ಸಮಾಜಕ್ಕೆ ಒಳಿತನ್ನುಂಟುಮಾಡುವಲ್ಲಿ ಏನೂ ಮಾಡಿಲ್ಲ ಆದರೆ ಸಮಾಜವನ್ನು ಒಡೆಯುವಲ್ಲಿ ಮತ್ತು ತಮ್ಮ ತಮ್ಮೊಳಗೆ ಹಿಂಸಿಸುವಲ್ಲಿ ಕೆಲಸ ಮಾಡಿದೆ' ಎಂದಾಗುವುದು! ಇದು ಎಲ್ಲರಿಗೂ ತಿಳಿದಿರುವ ಸತ್ಯವೂ ಆಗಿರುವುದು. ಶಾಂತಿಗಾಗಿ ಹುಟ್ಟಿಕೊಂಡಿರುವ ಈ ನಂಬಿಕೆಯ ಧರ್ಮ, ಪಂಥಗಳು ಸಾವಿರಾರು ವರುಷಗಳ ಹಿಂದಿನಿಂದಲೇ ಭೀಕರ ಧರ್ಮಾಂಧತೆಯ ಯುದ್ದ, ಹಿಂಸಾಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವು. ಇತರ ಯುದ್ದಗಳಿಗಿಂತಲೂ ಭಿನ್ನವಾಗಿ ಈ ನಂಬಿಕೆಯ ಧರ್ಮಾಂಧತೆಯ ಭ್ರಮೆಯು, ಸಣ್ಣ, ಪುಟ್ಟ ಮಕ್ಕಳನ್ನೂ ಬಿಡದೆ, ಹೆಂಗಸರು ವೃದ್ದೆಯರೆಂದೂ ನೋಡದೆ ಎಲ್ಲರನ್ನೂ ಕೊಂದು ಹಾಕಿದವು. ಎಷ್ಟೋ ತಾಯಂದಿರು ಅತ್ಯಾಚಾರಕ್ಕೆ ಬಲಿಯಾಗಿ ಹೋದರು, ಆದರೂ ಕರುಣೆಯ ದೇವರೆಂದು ಹಾಡಿ ಹೊಗಳುವ ಈ ನಂಬಿಕೆಗಳ ಧರ್ಮ, ಪಂಥಗಳನ್ನು ಅನುಸರಿಸುವ ಮನುಷ್ಯ ಜೀವಿಗಳಿಗೆ ಸ್ವಲ್ಪವೂ ಕರುಣೆ ಬರಲಿಲ್ಲ, ಬದಲು ಕ್ರೌರ್ಯದ ಅಟ್ಟಹಾಸ ಮಾಡಿದವು. ಇದೇ ರೀತಿ ಇನ್ನೆಷ್ಟೋ ಧಾರ್ಮಿಕ ನಂಬಿಕೆಗಳು ಸಮಾಜವನ್ನು ನುಚ್ಚುನೂರು ಮಾಡಿವೆ! ಆದರೂ ನಂಬಿಕೆಯ ಸ್ವಾರ್ಥಿ ಜನಗಳು ಇನ್ನೂ, ಏನನ್ನು ಹೇಳುತ್ತಿರುವರು ಎಂದು ಆಲಿಸಿ, ಅವರು ಮತ್ತೂ ಹೇಳುವುದು ಅದನ್ನೇ, ದೇವರು,ಧರ್ಮಗಳು ಅವರವರ ನಂಬಿಕೆಗಳಿಗೆ ಬಿಟ್ಟ ವಿಚಾರ, ಮತ್ತು ಆ ನಂಬಿಕೆಗಳಿಂದ ಮಾತ್ರ ದೇವರನ್ನು ಸೇರಲು ಮತ್ತು ಧಾರ್ಮಿಕ ಜೀವನವನ್ನು ನಡೆಸಲು ಸಾಧ್ಯ ಎಂದಾಗಿದೆ!!

ಸತ್ಯ, ಪ್ರೀತಿ ನೀತಿಯೇ ದೇವರು ಮತ್ತು ಧರ್ಮ ಎಂದು ಅರಿತುಕೊಳ್ಳುವ ಆ ವಿಧಾನವನ್ನು ಈ ಜಗತ್ತಿನ ಎಲ್ಲರೂ ಅನುಸರಿಸುತ್ತಾ ಬಂದಿದ್ದರೆ, ಎಂದೋ ಈ ಭೂಮಿ ಶಾಂತಿಯ ಸಾಗರದಲ್ಲಿ ತೇಲಾಡುತ್ತಿತ್ತು. ಆ ಜಾತೀ ಶೋಷಣೆ, ಧರ್ಮಾಂಧರ ರಕ್ತಪಾತಗಳು ಉಂಟಾಗುತ್ತಿರಲಿಲ್ಲ. ದೇವರನ್ನು ಮತ್ತು ಧರ್ಮವನ್ನು ಅರಿತುಕೊಳ್ಳುವ ರೀತಿಯಲ್ಲೇ ಮುಂದುವರಿಯುತ್ತಾ ಬಂದಿದ್ದಲ್ಲಿ, ಈ ಜಗತ್ತಿನಲ್ಲಿ, 'ಶಾಂತಿಸ್ಥಾಪನೆ' ಎಂಬ ಧರ್ಮಗಳ ಆ ಮುಖ್ಯ ಉದ್ದೇಶವನ್ನು ಎಂದೋ ಅವುಗಳಿಗೆ ನಿರ್ವಹಿಸಿ ಆಗುತ್ತಿತ್ತು!

---

## ಕೆಲವು ಜನರು ಭಾರತದಲ್ಲಿ ನಂಬಿಕೆ ರೀತಿಯೇ ಇಲ್ಲ, ಬರೇ ಸತ್ಯದ ಅನ್ವೇಷಣೆಯ ರೀತಿ ಎನ್ನುವರು ಇದು ಸರಿಯೇ?

ಉತ್ತರ- ನಾವು ಈ ಭಾರತದಲ್ಲಿ ಪುರಾಣಗಳು ಮತ್ತು ಅವುಗಳ ದೇವರುಗಳ ನಂಬಿಕೆ, ಆಚಾರಗಳನ್ನೇ ನೋಡುತ್ತಿರುವುದು! ದರ್ಶನಗಳು ಮತ್ತು ಉಪನಿಶತ್ತುಗಳು ಕೆಲವು ಮಠ, ಆಶ್ರಮಗಳಲ್ಲಿ ಮಾತ್ರ ಕಾಣಲು ಸಾಧ್ಯ. ತೊಂಬತ್ತೈದು ಶೇಖಡ ಜನರೂ ದೇವರು, ನಂಬಿಕೆ, ಆಚಾರಗಳಲ್ಲಿ ತೊಡಗಿರುವುದನ್ನು ನಾವು ನಿತ್ಯವೂ ಕಾಣುತ್ತೇವೆ. ನಿಜವಾಗಿಯೂ ಭಾರತ ಸಂಸ್ಕೃತಿಯು ಪೌರಾಣಿಕ ನಂಬಿಕೆ, ಆಚಾರಗಳ ನಂಬಿಕೆ, ಆಧ್ಯಾತ್ಮಿಕ ನಂಬಿಕೆ, ಮತ್ತು ಸಾಮಾಜಿಕ ನಂಬಿಕೆ ಎಂದು ಹಲವು ಕ್ಷೇತ್ರಗಳಲ್ಲಿ ಕಾಣಸಿಗುವವು. ನೀವು 'ಭಾರತದಲ್ಲಿ ನಂಬಿಕೆಯ ರೀತಿ ಇಲ್ಲ' ಎಂದು ನಂಬಿದರೆ, ನಿಮ್ಮನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.

---

## ಧರ್ಮಗಳಲ್ಲಿ ಪ್ರಶ್ನೆಗಳನ್ನು ಹಾಕಿ ಸಿಕ್ಕಿದ ವಿಚಾರಗಳೂ ನಂಬಿಕೆಗಳಾಗುವವೇ?

ಉತ್ತರ- ಪ್ರಶ್ನೆಗಳನ್ನು ಎರಡು ರೀತಿಯಲ್ಲಿ ಕೇಳುವರು ಅವುಗಳಲ್ಲಿ ಒಂದು ಪುರಾಣ ಕಥೆಯೊಳಗಿನ ಪ್ರಶ್ನೆಗಳು. ಯಾವುದೇ ಪುರಾಣ ಕಥೆಯೊಳಗೆ ಏನಿದ್ದರೂ ಅವು ಜನರಿಗೆ ನಂಬಿಕೆಯ ರೂಪದಲ್ಲೇ ಸಿಗುವವು. ಅದರೊಳಗೆ ಒಂದು ಮೂಲ ವಸ್ತುವನ್ನು ಕಂಡುಹಿಡಿದುದನ್ನು ತರ್ಕ ಬದ್ಧವಾಗಿ ವಿವರಿಸಿದರೂ ಆ ವಿಚಾರವು ಮಾತ್ರ ವಿಜ್ಞಾನವಾಗಬಹುದು ಹೊರತು ಆ ಪುರಾಣ ಕಥೆಯ ದೇವರು ಅಥವಾ ದೇವರುಗಳು ಮತ್ತು ಆ ದೇವರ ಹಿನ್ನೆಲೆಯ ನಂಬಿಕೆ, ಆಚಾರಗಳು ಹಾಗೇ ಇರುವವು!! ಇನ್ನು, ದರ್ಶನಗಳ ರೀತಿಯಲ್ಲಿ ಈ ಜಗತ್ತಲ್ಲಿ ಹಲವು ಕಡೆಗಳಲ್ಲಿ ವಿಚಾರಗಳನ್ನು ಪ್ರಶ್ನೆ-ಉತ್ತರಗಳ ರೀತಿಯಲ್ಲಿ ಮಂಡಿಸುವುದನ್ನು ನಮಗೆ ಕಾಣಬಹುದು. ಆದರೆ ಅದೇ ಸಮಯದಲ್ಲಿ ತಮ್ಮೊಳಗೆ ಅವು ಸರಿಯಲ್ಲ ಎಂಬ ಆ "ಖಂಡನೆಗಳು" ಅಲ್ಲಿ ಇರುವಾಗ, ಅಲ್ಲಿ ವಿಜ್ಞಾನದ ರೀತಿಯ ಆ ಸರ್ವಸಮ್ಮತ ಸತ್ಯವು ಇನ್ನೂ ಸಿಗಲಿಲ್ಲ ಎಂದು ಸ್ಪಷ್ಟವಾಗುವುದು. ಇದರ ಫಲವಾಗಿಯೇ ಎಲ್ಲಾ ದರ್ಶನ ಮತಗಳು, ಪುರಾಣ ನಂಬಿಕೆಗಳಂತೆ, ತಾವೇ ಸರಿ ಎಂದು ವಾದದಲ್ಲಿ ಜಯಗಳಿಸಿ ಜಗತ್ತನ್ನೇ ಹಬ್ಬುವ ಆಸೆಯನ್ನು ಇಟ್ಟು ವಾದ ಪ್ರತಿವಾದದಲ್ಲಿ ಇಷ್ಟೆಲ್ಲಾ ವರುಷಗಳನ್ನು ವ್ಯಯಮಾಡಿರುವುದು, ಮತ್ತು ಇಂದಿಗೂ ಆ ಪ್ರಶ್ನೆ-ಉತ್ತರಗಳ ಆ ವಾದಗಳಲ್ಲಿನ ಪ್ರಶ್ನೆಗಳು ಇತ್ಯರ್ಥವಾಗಲ್ಪಡಲಿಲ್ಲ!!!! ಇನ್ನು, ಕೆಲವು ಶಾರೀರಿಕ ಮತ್ತು ಮಾನಸಿಕವಾಗಿ ಆರೋಗ್ಯವನ್ನು ಕೊಡುವ ಶಾಸ್ತ್ರಗಳು, ಅವುಗಳು ಹಲವು ವಿಧಗಳಲ್ಲಿ ಈ ಜಗತ್ತಲ್ಲಿ ಎಲ್ಲಾ ಕಡೆಗಳಲ್ಲೂ ಇವೆ. ಇವನ್ನು ಮಾತ್ರ ಪ್ರತ್ಯೇಕವಾಗಿ ನಂಬಿಕೆಗಳಲ್ಲ ಬದಲು ಶಾಸ್ತ್ರಗಳು ಎಂದು ಹೇಳಬಹುದು ಅಷ್ಟೆ. ಆದರೆ, ಧರ್ಮ, ಪಂಥಗಳಲ್ಲಿ ನಂಬಿಕೆಗಳೇ ಇಲ್ಲ ಎಂದು ಇವುಗಳ ಹಿನ್ನೆಲೆಯಲ್ಲಿ ಹೇಳುವುದು ಸತ್ಯವಾಗುವುದಿಲ್ಲ.

---

## ನೀವು ಹೇಳುತ್ತಿರುವ ಪ್ರಾಚೀನ ವಾಮಾಚಾರವನ್ನೂ ನಿಯಂತ್ರಿಸುವ ಇನ್ನೊಂದು ರೀತಿಯ ಶಕ್ತಿಯು ಈ ಪ್ರಪಂಚದಲ್ಲಿ ಇದೆಯೇ ಅಥವಾ ಆ ನಿಟ್ಟಿನಲ್ಲಿ ನಿಮಗೆ ಸಂಶಯವಾದರೂ ಇದೆಯೇ?

ಉತ್ತರ- ನನ್ನ ಸೂಕ್ಷ್ಮದ ಬೇಹುಗಾರಿಕೆಯಲ್ಲಿ ಈ ಪ್ರಾಚೀನ ವಾಮಾಚಾರವನ್ನು ಇನ್ನೂ ಹೊರಗಿಂದ ನಿಯಂತ್ರಿಸುವ ಯಾವ ಶಕ್ತಿಯ ಸ್ಪಷ್ಟ ಸೂಚನೆಗಳು ದೊರಕಿಲ್ಲ. ಯಾಕೆಂದರೆ, ಈ ಪ್ರಾಚೀನ

ವಾಮಾಚಾರವು ನಿಯಂತ್ರಿಸುವುದು ಹೇಗೆ ಮತ್ತು ಎಲ್ಲಿಂದ ಎಂದು ಸ್ಪಷ್ಟವಾಗಿಯೂ ಗೊತ್ತಾಗಿರುವುದು. ಮಾತ್ರವಲ್ಲ, ಅವುಗಳು ಈ ಬಾಹ್ಯ ಸೂಕ್ಷ್ಮವಲಯದ ಸರ್ವ ಶಕ್ತಿಗಳಲ್ಲೂ ಸೇರಿರುವುದು ಅತ್ಯಂತ ಸ್ಪಷ್ಟವಾಗಿ ತಿಳಿದಿದೆ. ಇಲ್ಲಿ ಪ್ರಾಚೀನ ವಾಮಾಚಾರದ ಹಿಂದೆ ಯಾರ ಕೈವಾಡವೂ ಇರಲಾರದು ಎಂದು ಹೇಳಲು ಇರುವ ಒಂದು ಮುಖ್ಯ ಅಂಶವೆಂದರೆ, ಈ ಪ್ರಾಚೀನ ವಾಮಾಚಾರವು ಮಾನವನ ಮನಸ್ಸಿಗೆ ಸಂಬಂಧಿಸಿದಂತಿರುವ ಬರೇ ವಾಮಾಚಾರ ತಂತ್ರಗಳನ್ನು ಮಾತ್ರ ಉಪಯೋಗಿಸುವವು ಎಂಬ ಕಾರಣವಾಗಿದೆ. ಆದರೂ, ಇನ್ನೂ ಸ್ವಲ್ಪ ಮುಂದೆ ಕಲ್ಪನೆಯಲ್ಲಿ ಹೋದರೆ, ತರ್ಕಕ್ಕೆ ನಿಲುಕುವ ಕೆಲವು ಅಧಾರಗಳ ಹಿನ್ನೆಲೆಯಲ್ಲಿ ನಮಗೆ ಸಂಶಯಿಸಬಹುದಾದ ಒಂದೇ ಒಂದು ಸಾಧ್ಯತೆಯು ಅನ್ಯಗ್ರಹ ಜೀವಿಗಳ ನಿಯಂತ್ರಣವಾಗಿದೆ!! ಇಲ್ಲಿ, ನಾವು ಆ ನಿಯಂತ್ರಣದ ಸಾಧ್ಯತೆಗಳನ್ನು ಮಾತ್ರ ನೋಡೋಣ. ಅವುಗಳಿಗೆ ಸಂಬಂಧಿಸಿರುವ ಕೆಲವು ವೈಜ್ಞಾನಿಕ ಅಂಶಗಳನ್ನು ಈ ಕೆಳಗೆ ತಿಳಿಸುವೆನು.

1. ವಿಜ್ಞಾನವು ಅನ್ಯಗ್ರಹಗಳಲ್ಲಿ ವೈಜ್ಞಾನಿಕವಾಗಿ ಬಹಳವಾಗಿ ಬೆಳೆದಿರುವ ಮೂರನೇ ವಿಧದ ಸಂಸ್ಕೃತಿಯ ಜೀವಿಗಳ ಸಾಧ್ಯತೆಯ ಬಗ್ಗೆ ಹೇಳುವುದು. ಈ ಮೂರನೇ ವಿಧದ ಸಂಸ್ಕೃತಿಯನ್ನು ತಲುಪಿದ ಈ ಪ್ರಪಂಚದ ಜೀವಿಗಳಿಗೆ, ಮಾನವನ ಮನೋ ಶಕ್ತಿಯನ್ನು, ನಾವು ಈ ಭೂಮಿಯಲ್ಲಿ ಆಹಾರ, ಉಪಯೋಗ ವಸ್ತು, ಇಂಧನ, ಇತ್ಯಾದಿಗಳನ್ನು ಉಪಯೋಗಿಸುವಂತೆ ಆ ರೂಪಗಳಲ್ಲಿ ಉಪಯೋಗಿಸುವ ಶಕ್ತಿ ಇರಬಹುದೆಂಬುವುದು ನಮಗೆ ಸಂಶಯಿಸಬಹುದಾಗಿದೆ.

2. ಇದಕ್ಕೆ ಸರಿಯಾಗಿ ಈ ಭೂಮಿಯಲ್ಲಿ ಮನುಷ್ಯ, ಪ್ರಾಣಿಗಳ ಮನಸ್ಸು ಅವುಗಳಿಗೆ ಬೇಕಾದಷ್ಟು ಲಭ್ಯವೂ ಹೌದು.

3. ಇನ್ನು, ಸಂಶಯಿಸಲು ಇರುವ ಅಂಶವೆಂದರೆ ಈ ಪ್ರಾಚೀನ ವಾಮಾಚಾರದ ಶಾಂತವಲ್ಲದ ಶಕ್ತಿಯುತವಾದ ಭಾವಯುಕ್ತ ಮನೋಶಕ್ತಿಯ ಶೇಖರಿಸುವಿಕೆಯಾಗಿದೆ. ಅವುಗಳ ನಿರಂತರ ಕ್ರೌರ್ಯ ಮತ್ತು ಅನೈತಿಕ, ವಿಕೃತ, ಕಾಮ ಭಾವನೆಗಳ ಶೇಖರಿಸುವಿಕೆಯು ನಮ್ಮನ್ನು ಅದು ಅನ್ಯಗ್ರಹ ಜೀವಿಗಳಿಗಾಗಿ ತಯಾರು ಮಾಡುತ್ತಿರಬಹುದೇ ಎಂಬ ಸಂಶಯದ ಕಡೆಗೆ ಕೊಂಡುಹೋಗುವುದು. ಮನಸ್ಸು ತೀವ್ರ ಚಾಲಕ ಶಕ್ತಿಯನ್ನು ಈ ಸ್ಥಿತಿಯಲ್ಲಿ ಪಡೆದಿರುವುದು ಎಂಬುವುದೇ ಅವುಗಳ ಮೇಲಿನ ಸಂಶಯವು ತೀವ್ರಗೊಳ್ಳಲು ಕಾರಣವಾಗಿರುವುದು.

4. ಇನ್ನು, ಈ ಭೂಮಿಯಲ್ಲಿ ಶೇಖರಿಸಲ್ಪಟ್ಟ ಮನೋಶಕ್ತಿಯನ್ನು ಇನ್ನೊಂದು ನಕ್ಷತ್ರದ ಭೂಮಿಗೆ ಕೊಂಡುಹೋಗಲು ಸಾಧ್ಯವಾಗುವ ಸಾರಿಗೆ ವ್ಯವಸ್ಥೆಯನ್ನು ನೋಡುವುದಾದರೆ, ವಿಜ್ಞಾನವು ಅದು “ಟೆಲಿಪೋರ್ಟೇಷನ್” ಎಂಬ ವ್ಯವಸ್ಥೆ ಮಾಡಿದಲ್ಲಿ ಸಾಧ್ಯ ಎಂದೂ ಹೇಳುವುದು!!

5. ಈ ಟೆಲಿಪೋರ್ಟೇಶನ್ ಗೆ ಕೊಂಡುಹೋಗುವ ಸ್ಥಳದಲ್ಲಿ ಹಾಗೂ ಅದನ್ನು ಪಡೆಯುವ ಆ ಎರಡು ಸ್ಥಳಗಳಲ್ಲೂ ಅದಕ್ಕೆ ಸಂಬಂಧಪಟ್ಟ ಉಪಕರಣಗಳನ್ನು ಸ್ಥಾಪಿಸಲೇಬೇಕಾಗುವುದು. ಇದಕ್ಕೆ ಸರಿ ಎಂಬಂತೆ ಈ ಭೂಮಿಗೆ ಅನ್ಯಗ್ರಹ ಜೀವಿಗಳು ಬಂದು ಹೋಗಿರುವ ಹಲವು ಘಟನೆಗಳು ನಡೆದಿರುವುದಾಗಿ ಜಗತ್ತು ಅಲ್ಲಲ್ಲಿ ಹೇಳುತ್ತಾ ಬಂದಿರುವುದು. ಮಾತ್ರವಲ್ಲ ಕೆಲವು ಭೂಮಿಯಲ್ಲಿ ಕಂಡ ವಸ್ತುಗಳು ವೈಜ್ಞಾನಿಕ ವಸ್ತುವಿನಂತೆ ಇದ್ದರೂ ಅವುಗಳ ಕಾಲವು ಅತ್ಯಂತ ಪ್ರಾಚೀನವಾಗಿರುವುದು ವಿಜ್ಞಾನಿಗಳ ತಲೆ ಕೆಡಿಸಿರುವುದನ್ನೂ ನಾವು ಕೇಳಿದ್ದೇವೆ. ಈ ವೈಜ್ಞಾನಿಕ ವಸ್ತುಗಳು ಟೆಲಿಪೋರ್ಟೇಶನ್ ಗಾಗಿ ಅನ್ಯಗ್ರಹ ಜೀವಿಗಳು ಉಪಯೋಗಿಸುತ್ತಿರಲು ಸಾಧ್ಯತೆ ಇದೆ ಎಂಬ ಸಂಶಯವು ಇನ್ನೊಂದಾಗಿದೆ.

6. ಇನ್ನು, ಟೆಲಿಪೋರ್ಟೇಶನ್ ಮೂಲಕ ಅತ್ಯಂತ ಸೂಕ್ಷ್ಮ ಕಣವನ್ನು ಮಾತ್ರ ಕೊಂಡು ಹೋಗಬಹುದೆಂದೂ ವಿಜ್ಞಾನ ಹೇಳುವುದು. ಆ ರೀತಿಯಲ್ಲಿ ನೋಡುವಾಗಲೂ ಮನಸ್ಸು ಅತ್ಯಂತ ಸೂಕ್ಷ್ಮವಾಗಿರುವ ಕಾರಣ ಅದನ್ನು ಖಂಡಿತವಾಗಿಯೂ ಟೆಲಿಪೋರ್ಟೇಶನ್ ಮಾಡಬಹುದೆಂದು ವೈಜ್ಞಾನಿಕವಾಗಿಯೂ ಸಾಧ್ಯತೆಯು ಸ್ಪಷ್ಟವಾಗುವುದು.

ಈ ಎಲ್ಲಾ ಅಂಶಗಳ ಆಧಾರದಲ್ಲಿ ಈ ಪ್ರಾಚೀನ ವಾಮಾಚಾರದ ಹಿಂದೆ ಅನ್ಯಗ್ರಹ ಜೀವಿಗಳ ನಿಯಂತ್ರಣವನ್ನು ನಮಗೆ ಸಂಶಯಿಸಲು ಸಾಧ್ಯವಾಗುವುದು.

## ಯೋಗ, ಮತ್ತು ಮಹಾತ್ಮರ ಜೀವನದಲ್ಲಿ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ತಿಳಿಸಬಹುದೇ?

ಉತ್ತರ- ಯೋಗ ಎಂದು ಹೇಳುವಾಗ ಮೊದಲು ಅವಲ್ಲಿ ಎರಡು ದೊಡ್ಡ ವಿಭಾಗವಿದೆ. ಒಂದು ವ್ಯಾಯಾಮ[ಹಠ] ಯೋಗ, ಈ ಯೋಗವೇ ಇಂದು ಜಗತ್ಪ್ರಸಿದ್ಧವಾಗಿರುವುದು. ಇನ್ನೊಂದು ಆಧ್ಯಾತ್ಮ ಯೋಗ, ಇದು ಮೋಕ್ಷಾರ್ಥಿಗಳಿಗಾಗಿ ಇರುವುದು. ಅದನ್ನು ಕನಿಷ್ಠ ಪ್ರಮಾಣದಲ್ಲಿ ಉಪಯೋಗಿಸುವಾಗ ಅದು ಮನಶ್ಯಾಂತಿಯನ್ನು ಬಯಸುವವರಿಗೆ ಮಾತ್ರ ಸೀಮಿತ ಆಗುವುದು.

ಮೇಲಿನ ಎರಡರಲ್ಲಿ, ನಾವು ಇಲ್ಲಿ ಮಾತನಾಡುವ ವಿಷಯವು ಆಧ್ಯಾತ್ಮಿಕ ಯೋಗದ ಬಗ್ಗೆ ಆಗಿರುವುದೆಂದು ತಿಳಿಯಬೇಕು. ಈ ಯೋಗದಲ್ಲಿ ಸಾಧಕರು ಮನಸ್ಸಿನ ಆಳಕ್ಕೆ ತೆರಳಿ, ಮನಸ್ಸೇ ಇಲ್ಲದ ಸ್ಥಿತಿಯನ್ನು ಕಂಡು, ತನ್ನ ಅಸ್ತಿತ್ವವು ವಿಶಾಲವಾಗಿದೆ ಎಂದು ಆ ಅನುಭವದ ಮೂಲಕ ತಿಳಿಯುವರು. ಮಹಾತ್ಮರ ಜೀವನದ ಸಾಧನೆಯೂ ತನ್ನ ವ್ಯಕ್ತಿತ್ವದ ವೈಶಾಲ್ಯತೆಯನ್ನೇ ಹೇಳುವುದು. ಆದರೆ, ಮಹಾತ್ಮರು "ಮನಸ್ಸು ಇರುವಲ್ಲಿ ಮತ್ತು ಮನಸ್ಸಿನ ಜಾಗ್ರತ ಅವಸ್ಥೆಯಲ್ಲೇ" ಅವನ್ನು ಪಡೆಯುವರು. ಅದಕ್ಕೆ ಇನ್ನೊಂದು ಹೆಸರೇ ವಿಶಾಲ ಮನಸ್ಕತೆಯಾಗಿದೆ. ಇವುಗಳೇ ಈ ಎರಡರ ಸಾಮ್ಯತೆ ಹಾಗೂ ವ್ಯತ್ಯಾಸವಾಗಿದೆ.

ಆಧ್ಯಾತ್ಮ ಯೋಗದ ಆ ಮೇಲಿನ ಗುರಿಯಾದ ಸಮಾಧಿಯನ್ನು ಗಳಿಸಲು ಸಾಧನೆ ಮಾಡುವ ಆ ಸಾಧಕರು ಸಾಮಾನ್ಯವಾಗಿ ಲೌಕಿಕ ಜೀವನವನ್ನು ಬಿಟ್ಟಿರುವುದು ನಮಗೆ ಕಾಣಿಸುವುದು. ಆದರೆ ಮಹಾತ್ಮರು ಗೃಹಸ್ಥಾಶ್ರಮಿಗಳಾಗಿಯೇ ಅವರ ಗುರಿಯನ್ನು ಪಡೆಯುವರು!! ಇನ್ನು, ಮಹಾತ್ಮರು ತಮ್ಮ ಜೀವನದ ಬಹಳ ಸಮಯವನ್ನು, ಯೋಗಿಗಳಂತೆ, ಮನಸ್ಸಿನ ಸಾಗರದ ಆಳಕ್ಕೆ ಮುಳುಗುವುದಕ್ಕೆ ವ್ಯಯ ಮಾಡದೆ, ಮತ್ತು ಅಲ್ಲಿ ಉಸಿರುಗಟ್ಟದೆ, ನೀರಿನ ಮೇಲಿಂದ ಸುಲಭದಲ್ಲಿ ಈಜಿಕೊಂಡೇ ಆ ವಿಶಾಲ ಮನಸ್ಕತೆಯನ್ನು ಪಡೆಯುತ್ತಾರೆ!! ಆ ಮನೋ ಸಾಗರದ ಆಳಕ್ಕೆ ಉಸಿರುಗಟ್ಟಿ ಇಳಿಯುವುದು ಕೋಟಿಗೆ ಒಬ್ಬನಿಗೆ ಮಾತ್ರ ಸಾಧ್ಯ ಎಂದು ಅದೇ ಸಮಾಧಿ ಶಾಸ್ತ್ರಗಳು ಹೇಳುತ್ತಿರುವಾಗ, ಇತ್ತ ಮಹಾತ್ಮನಾಗಲು ಸತ್ಯಸಂಧತೆಯಿಂದ ಕೂಡಿದ ದೃಢ ಮನಸ್ಸೊಂದು ಇದ್ದರೆ, ಕೋಟಿ ಜನರಿಗೂ ವಿಶಾಲ ಮನಸ್ಕತೆಯನ್ನು ಪಡೆಯಲು ಸಾಧ್ಯ ಎಂಬ ಆ ದೊಡ್ಡ ವ್ಯತ್ಯಾಸವನ್ನು ನಮಗೆ ಕಾಣಬಹುದಾಗಿದೆ!! ಈ ಸಾಧ್ಯತೆಯ ಕಾರಣದಿಂದಾಗಿ ಮಾತ್ರ ಈ ಜಗತ್ತಿಗೆ ಸತ್ಯಯುಗವನ್ನು ತರುವಲ್ಲಿ ಎಲ್ಲಕ್ಕಿಂತಲೂ ಈ ಮಹಾತ್ಮರ ರೀತಿಯೇ ಅನಿವಾರ್ಯವಾಗಿರುವುದು ಎಂದು ಹೇಳಿರುವುದು.

## ತಂತ್ರ ಶಾಸ್ತ್ರ ಯೋಗ ಮತ್ತು ಪತಂಜಲಿ ಯೋಗವನ್ನು ಜೊತೆಗೊಳಿಸಿ ವಿವರಿಸಬಹುದೇ?

ಉತ್ತರ- ತಂತ್ರಶಾಸ್ತ್ರ-ಯೋಗ ಮತ್ತು ಪತಂಜಲಿ-ಯೋಗವನ್ನು ಜೊತೆಗೊಳಿಸುವುದು ಅಪಾಯಕಾರಿಯಾಗುವುದು. ಪತಂಜಲಿ ಯೋಗವು ಯಮ, ನಿಯಮ, ಎಂದು ನೈತಿಕತೆ ಮತ್ತು ಪವಿತ್ರತೆಯನ್ನು ಪ್ರತಿಪಾದಿಸುವಾಗ, ಈ ತಂತ್ರಶಾಸ್ತ್ರ-ಯೋಗವು ಅವನ್ನು ಪ್ರತಿಪಾದಿಸುವುದಿಲ್ಲ. ಆಗ, ಅಲ್ಲಿ ದೊಡ್ಡ ತಪ್ಪು ಸೃಷ್ಟಿಯಾಗುವುದು. ಹಾಗೆ ಮಿಶ್ರಗೊಳಿಸಿದ ಯಾರೇ ಮಹಾತ್ಮನಾಗಲು ಸಾಧ್ಯವಾಗಲಾರದು. ಮಾತ್ರವಲ್ಲ, ಅವರು ಯೋಗದ ಹೆಸರು ಹೇಳುತ್ತಾ ಈ 'ತಂತ್ರಶಾಸ್ತ್ರದ ರೀತಿಯ ನೈತಿಕತೆಯನ್ನು ಗೌಣ ಮಾಡುವ ರೀತಿ'ಯಲ್ಲಿ ಮಾತನಾಡವ ಸಾಧ್ಯತೆಯೂ ಇದೆ. ಆಗ "ಈ ರೀತಿಯ ತಾಂತ್ರಿಕ ನಿಯಮಗಳನ್ನು ಸಮಾಜದ ಹತ್ತಿರಕ್ಕೂ ತರಬಾರದು, ಮತ್ತು ಅವುಗಳು ಬರೇ ಸಾಧಕರಲ್ಲಿ ಮಾತ್ರ ಸಮಾಜದಿಂದ ದೂರ ಮತ್ತು ಬಹಳ ಗುಪ್ತವಾಗಿ ಇರಬೇಕು" ಎಂಬ ಹಿಂದಿನ ಯೋಗಿ, ಮಹಾತ್ಮರುಗಳು ಹಾಕಿರುವ ಆ ಕಟ್ಟುಪಾಡನ್ನು ಮೀರಿದಂತಾಗುವುದು. ಹಾಗೆ ಮಿಶ್ರವಾದಾಗ, ಜನಸಾಮಾನ್ಯರಿಗೂ ಅವುಗಳ ಪ್ರಭಾವವು ಅಲ್ಪ ಪ್ರಮಾಣದಲ್ಲಿಯಾದರೂ ಬಂದು ಸೇರುವವು, ಮತ್ತು ಅದರಿಂದ ಬಹಳ ಜನರು ಅನೈತಿಕತೆಯನ್ನು ದೂರವಿರಿಸುವುದನ್ನು ಕೊನೆಗೊಳಿಸುವಂತಾಗುವುದು. ಇದು ಸಮಾಜದ ಅಧಃಪತನಕ್ಕೆ ಕಾರಣವಾಗುವುದು. ನೈತಿಕತೆ ಇಲ್ಲದ ಸಮಾಜವು ಅಧಾರ್ಮಿಕ ಸಮಾಜ ಎಂದು ಎಲ್ಲರಿಗೂ ತಿಳಿದಿದೆ, ಮತ್ತು ಈ ಹಿನ್ನೆಲೆಯಲ್ಲಿ ಇವು ಧರ್ಮ ವಿರುದ್ಧವಾಗುವುದು. ಇನ್ನು, ಈ ತರದ ಮಿಶ್ರಣ ರೀತಿಯು ಕೆಲವು ಕಡೆ ಯೋಗದ ಹೆಸರಲ್ಲಿ, ಗಂಡು, ಹೆಣ್ಣುಗಳ ಕುಣಿತ, ಮತ್ತು ಸೇರುವಿಕೆಯೂ ಒಳಗೊಂಡಂತೆ ಹಲವು ಭಯಾನಕ ಹೊಸ ಆಚಾರಗಳ ಪಂಥಗಳ ಸೃಷ್ಟಿಗೂ

ಕಾರಣವಾಗಿರುವುದು. ಸಾಮಾನ್ಯ ಜನರಲ್ಲಿ ಹೆಚ್ಚಿನ ಜನರಿಗೂ ಇದು ಸುಲಭದ ಮನರಂಜನೆಯಾಗುವುದರಿಂದ ಅವರು ಅದನ್ನು ತುಂಬಾ ಪ್ರೋತ್ಸಾಹಿಸುವರು!

---

## ಯೋಗದ ಸಾಮಾಜಿಕ ಮುಖ ಅಥವಾ ಸಾಮಾಜಿಕ ಪಾತ್ರ ಎಂದರೆ ಏನು?

ಉತ್ತರ- ಯೋಗವನ್ನು ಎರಡಾಗಿ ವಿಭಾಗಿಸಿದ್ದಾರೆ. ಅವುಗಳಲ್ಲಿ ಒಂದು ಹಠ ಯೋಗ ಅಥವಾ ವ್ಯಾಯಾಮ ಯೋಗ, ಇನ್ನೊಂದು ಆಧ್ಯಾತ್ಮ ಯೋಗವಾಗಿದೆ. ಈ ಆಧ್ಯಾತ್ಮ ಯೋಗವನ್ನು ಹೇಳುವಾಗ ಅದರ ಪಾತ್ರವನ್ನು ಸಾಮಾನ್ಯವಾಗಿ ಎರಡು ಕಡೆ ವಿವರಿಸುವರು. ಒಂದು "ಯೋಗವು ಆತ್ಮ, ಮೋಕ್ಷ, ಇತ್ಯಾದಿ ಕಡೆಯಲ್ಲಿ" ಎಂದು, ಇನ್ನೊಂದು "ಯೋಗವು ಸಾಮಾಜಿಕ ಜೀವನದಲ್ಲಿ" ಎಂದಾಗಿದೆ.

ಯೋಗವು ವ್ಯಾಯಾಮಕ್ಕಾಗಿ ಮತ್ತು ಮೋಕ್ಷಕ್ಕಾಗಿ ಆದಲ್ಲಿ ಅವು ಬರೇ ವ್ಯಕ್ತಿಗೆ ಸಂಬಂಧಿಸಿದುದಾಗುವುದು. ಆದರೆ ಸಾಮಾಜಿಕ ನಿಟ್ಟಿನ ಆ ಯೋಗ ವಿವರಣೆಗಳು ಮಾತ್ರವೇ ಧಾರ್ಮಿಕ ಮುಖವನ್ನು ಪಡೆಯುವುದು ಎಂಬುವುದನ್ನು ಮರೆಯಬಾರದು. ಇನ್ನು, "ಏಕತೆ"ಯೇ ಆಧ್ಯಾತ್ಮ ಯೋಗದ ಅಡಿಪಾಯವಾಗಿದೆ. ಅದು ಅಧ್ಯಾತ್ಮ ಯೋಗದ "ಆತ್ಮ, ಪರಮಾತ್ಮನ ಒಂದಾಗುವಿಕೆ" ಎಂದು ಹೇಳುವಲ್ಲಿ ಅಥವಾ ಬರೇ "ಭೋಧ ವಿಕಾಸದ" ಬಗ್ಗೆ ಹೇಳುವಲ್ಲಿ ಅದು ಯೋಗದ ಬರೇ ಆಧ್ಯಾತ್ಮದ ಪಾತ್ರವನ್ನು ಮಾತ್ರ ವಹಿಸುವುದು. ಅದನ್ನು ಸಾಮಾಜಿಕವಾಗಿ ಪರಿವರ್ತಿಸಲು ಬಹಳ ಕಷ್ಟವಿದೆ.

ಚುಟುಕಾಗಿ ಹೇಳುವುದಾದರೆ, ಆತ್ಮ ಮತ್ತು ವ್ಯಕ್ತಿತ್ವವು ಬೇರೆ ಬೇರೆಯಾಗಿದೆ. ಯಾರು ಕೂಡಾ ಆತ್ಮವನ್ನು ಸಾಮಾಜಿಕ ಜೀವನವನ್ನು ನಡೆಸುವಲ್ಲಿ ವ್ಯವಹರಿಸುವ ಆ ವ್ಯಕ್ತಿತ್ವ ಎಂದು ತಿಳಿಯುವುದಿಲ್ಲ, ಬದಲು ಅದು ನಮ್ಮ ವ್ಯವಹಾರವೆಲ್ಲ ನಿಂತಲ್ಲಿನ ನಮ್ಮ ಆಂತರ್ಯದ ಅಸ್ತಿತ್ವವೆಂದು ಮಾತ್ರ ಹೇಳುವರು.

ಇದುವರೆಗೂ, "ಆತ್ಮ ಎಲ್ಲರಿಗೂ ಒಂದೇ", "ದೇವರ ಮಕ್ಕಳು ನಾವೆಲ್ಲ", ಎಂದೆಲ್ಲಾ ಆ ಆಧ್ಯಾತ್ಮದ ಯೋಗದ ಆ ಆಧ್ಯಾತ್ಮ ಪಾತ್ರ[ಮುಖ]ದಲ್ಲೇ ಬಂದಾಗಿದೆ. ಆದರೆ, ಅದು ಹಿಂದಿನ ಕಾಲದಲ್ಲಿ ವರ್ಣ ಬೇಧವನ್ನು ಹಾಗೂ ಅದರಿಂದ ಆಗಿರುವ ಆ ಭೀಕರ ಮಾನವರ ಶೋಷಣೆಯನ್ನು ಕಡಿಮೆಗೊಳಿಸಿರಲಿಲ್ಲ!!! ಇಂದೂ, ಜಾತೀಯತೆಯು ನಲಿದಾಡುತ್ತಿದೆ! ಕೆಲವು ದೊಡ್ಡ ಆಚಾರ್ಯಗಳೂ 'ಆಧ್ಯಾತ್ಮ ಯೋಗ' ಎಂದು ಹೇಳುತ್ತಾ ಅಸ್ಪೃಶ್ಯತೆಯನ್ನು ತೋರಿಸಿದುದನ್ನು ನಾವೆಲ್ಲಾ ಓದಿ ತಿಳಿದಿರುವ ವಿಚಾರವಾಗಿದೆ. ಅಂದರೆ, ಯೋಗದ ತನ್ನ ಸಾಮಾಜಿಕ ಮುಖ[ಪಾತ್ರ]ದಲ್ಲಿ ಮಾತ್ರ ಮಾನವನ ಆತ್ಮವಲ್ಲದ ಆ "ವ್ಯಕ್ತಿತ್ವದ ವಿಕಾಸ" ದ ಬಗ್ಗೆ ಹೇಳುವುದು ಎಂದು ತಿಳಿಯಬೇಕು. ಅಂದರೆ, ವ್ಯಯಕ್ತಿಕ ಮೋಕ್ಷ ಅಥವಾ ಬೋಧ ಯೋಗದಲ್ಲಿ ಆತ್ಮ ಅಥವಾ ಬೋಧವನ್ನು ವಿಶಾಲಗೊಳಿಸುವಾಗ, ಅದು ವ್ಯಯಕ್ತಿಕ ಮಾತ್ರವಾಗಿ ಹೋಗಿ, ಸಮಾಜ ಪರಿವರ್ತನೆಗೆ ಕಾರಣವಾಗಿಲ್ಲ ಎಂದು ಅರ್ಥ. ಈ ಮಾತಿನ ಸತ್ಯತೆಯನ್ನು ಈ ವರೆಗಿನ ಹಲವು ಸಹಸ್ರವರುಷಗಳ ಅನುಭವದ ಹಿನ್ನೆಲೆಯ ಆಧಾರದಲ್ಲಿ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಈಗ, ಈ ಯೋಗದ 'ಸಾಮಾಜಿಕ ಮುಖ'ದಲ್ಲಿ ಇರುವ ಆ ಐಕ್ಯಕ ಏಕತೆಯ ರೀತಿಯನ್ನು ನೋಡೋಣ. ಯೋಗದ ಈ ಸಾಮಾಜಿಕ ಮುಖವು ವ್ಯಕ್ತಿತ್ವದ ವಿಕಾಸವನ್ನು ಹೇಳುವುದು. ಇಲ್ಲಿ ಹೇಳುವ ಆ ಯೋಗದ ಆಧಾರ 'ಏಕತೆ' ಯು ವಿಶಾಲ ಮನಸ್ಕತೆಯಾಗಿದೆ. ಈ ವಿಶಾಲ ಮನಸ್ಕತೆಯು, ಮಾನವೀಯತೆ ಹಾಗೂ ಸಾರ್ವತ್ರಿಕ ಪ್ರೀತಿಯ ಹಿನ್ನೆಲೆಯಲ್ಲಿ, ಮನಸ್ಸನ್ನು ಇಡೀ ಜಗತ್ತಿನಷ್ಟೆ ವಿಕಾಸಗೊಳಿಸುವುದು. ಈ ಏಕತೆಯ ಪ್ರತ್ಯೇಕತೆಯು ಇದು ಮನಶ್ಯಾಂತಿ, ಮನೆ ಶಾಂತಿ, ಹಾಗೂ ಲೋಕ ಶಾಂತಿಯೆಂಬ ಈ ಮೂರನ್ನು ಕೊಡಬಲ್ಲ ಅತ್ಯದ್ಭುತ ಏಕತೆಯ ಯೋಗ ರೀತಿ ಎಂಬುವುದಾಗಿದೆ!! ಮಾತ್ರವಲ್ಲ, ಈ "ವಿಶಾಲ ಮನಸ್ಕತೆಯೇ" ಧರ್ಮದ ತಿರುಳು. ಅತ್ಯಂತ ಉತ್ಕೃಷ್ಟ ಮಾನವ ಲೌಕಿಕ ಜೀವನದ ಆಧಾರ ಸ್ಥಂಭ. ಇದನ್ನು ದೂರಕ್ಕೆ ದೂಡಿದವನಿಗೆ ದೇವರು ಇಲ್ಲ, ಮತ್ತು ಧರ್ಮವೂ ಇಲ್ಲ! ಸ್ವಾರ್ಥವನ್ನು ಬದಿಗಿರಿಸಲು ನಮ್ಮಲ್ಲಿ ಹೇಳುವುದು ಇದೇ ವಿಶಾಲ ಮನಸ್ಕತೆಯಾಗಿದೆ. ಇನ್ನು, "ಕಳ್ಳತನ ಮಾಡಬೇಡ", "ವಂಚಿಸ ಬೇಡ" ಎಂದೆಲ್ಲಾ ನೈತಿಕತೆರ್ಗಳನ್ನು ಧರ್ಮವು ಈ ಜಗತ್ತಿಗೆ ಕೊಡುವಾಗ, ಅದಕ್ಕೆ ಅದರ ಕಾರಣವನ್ನು ಅದು ಕೊಡುವುದು ಇದೇ ವಿಶಾಲ ಮನಸ್ಕತೆಯನ್ನು ಆಗಿದೆ. ಈ ವಿಶಾಲ ಮನಸ್ಕತೆ ಆ ಕಾರಣವನ್ನು ಹೇಗೆ ಕೊಡುವುದು ಎಂದು ಒಂದು ಚಿಕ್ಕ ಉದಾಹರಣೆಯ ಮೂಲಕ ನೋಡೋಣ. ವಿಶಾಲ ಮನಸ್ಕತೆಯು ಕೇಳುವುದು, " 'ನಿನ್ನ ಮನೆಯನ್ನು ಇತರರು ಕಳ್ಳತನ ಮಾಡಿದರೆ ನೀನು

ಒಪ್ಪುವಿಯಾ?' ಮತ್ತು 'ನಿನ್ನನ್ನು ಇತರರು ವಂಚಿಸಿದರೆ ನೀನು ಆ ವಂಚನೆಯನ್ನು ಒಪ್ಪುವಿಯಾ?'" ಎಂದು. ಮತ್ತು ಇದೇ ಕಾರಣಕ್ಕೆ ಒಬ್ಬಾತನು ಕಳ್ಳತನ, ವಂಚನೆ, ಇತ್ಯಾದಿಗಳನ್ನು ಇತರರಿಗೂ ಮಾಡಬಾರದು ಎಂದು ಸ್ಪಷ್ಟವಾಗಿ ಅದು ವಿವರಿಸಿಕೊಡುವುದು. ಅಂದರೆ, ಧರ್ಮವು ನೈತಿಕತೆಯನ್ನು ಹೇಳುವಾಗ, ಅದಕ್ಕೆ ಅಡಿಪಾಯವು ಇದೇ "ತನ್ನೊಂದಿಗೆ ಇತರರೂ ಚೆನ್ನಾಗಿ ಜೀವಿಸಬೇಕು" ಎಂಬ ಆ ವಿಶಾಲ ಮನಸ್ಕತೆಯ "ಸಾಮಾಜಿಕ ಯೋಗ" ವಾಗಿದೆ ಎಂದು ಅರ್ಥ.

ಮಹಾತ್ಮರ ರೀತಿಯಾದ ಆ "ಸಾಮಾಜಿಕ ಯೋಗ"ವು ತನ್ನ ಆ ಸಾಮಾಜಿಕ ಪಾತ್ರದಲ್ಲಿ, ಮುಂದೆ, ಆ ಶಾಂತಿಯ ಮತ್ತು ಸಮಾನತೆಯ ಆ ಅದ್ಭುತ ಸತ್ಯಯುಗವನ್ನು ಈ ಜಗತ್ತಿಗೆ ತರಲಿ ಎಂದು ಆಶಿಸೋಣ. ಮಾತ್ರವಲ್ಲ, ಹಿಂದಿನ ಆ ಮರದಡಿಯ ಯೋಗಿ, ಮಹಾತ್ಮರ ರೀತಿಯಲ್ಲದ, ಹಳ್ಳಿ, ಪೇಟೆ, ನಗರಗಳ ಕೋಟಿಗಟ್ಟಲೆ ಮಹಾತ್ಮರುಗಳನ್ನು ಈ ಸಾಮಾಜಿಕ ಯೋಗ ಸೃಷ್ಟಿಸಿ, ಪಾಪಿಗಳ ತುಳಿತಕ್ಕೆ ಒಳಗಾಗಿ ಬೆನ್ನುಬಾಗಿ ಮುದಿಯಾಗಿಹೋದ ಪಾವನ ಭೂಮಿತಾಯಿಯನ್ನು, ಆ ಶಾಂತಿ, ಆನಂದಗಳ ನಿತ್ಯಯೌವನದ ಮಹಾತಾಯಿಯನ್ನಾಗಿ ಬದಲಾಯಿಸುವಂತಾಗಲಿ ಎಂದು ಬಯಸೋಣ.

---

## ನೀವು ಪ್ರಾಚೀನ ವಾಮಾಚಾರವನ್ನು ಅತಿ ಪ್ರಾಚೀನವೆಂದೂ ಹಾಗೂ ಸ್ವತಃ ಬುದ್ಧಿಯನ್ನು ಉಪಯೋಗಿಸಿ ತಮ್ಮ ವ್ಯವಸ್ಥೆಯನ್ನೇ ಮತ್ತೂ ಬೆಳೆಸಲು ಸಾಧ್ಯವಾಗುವ ಏಕಮಾತ್ರ ವಾಮಾಚಾರ ವ್ಯವಸ್ಥೆ ಎಂದೂ ಹೇಳುವಿರಿ. ಅದರೊಂದಿಗೆ ಅವು ಎಲ್ಲಾ ಧನಾತ್ಮಕ ಹಾಗೂ ಋಣಾತ್ಮಕ ಶಕ್ತಿಗಳ ಒಳಗಿಂದಲೂ ರಹಸ್ಯವಾಗಿ ಪ್ರಕಟವಾಗುತ್ತಿವೆ ಎಂದೂ ಹೇಳಿರುವಿರಿ. ಈ ಅಂಶಗಳನ್ನು ಮತ್ತೂ ದೃಢೀಕರಿಸುವ, ಹಾಗೂ ಈ ವರೆಗೆ ವಿವರಿಸಿದುದರ ಹೊರತಾಗಿ ಬೇರೆ ಉದಾಹರಣೆಗಳ ಸಹಾಯದಿಂದ ವಿವರಿಸಬಹುದೇ?

ಉತ್ತರ- ಈ ವರೆಗೆ ನಾನು ಈ ಬಗ್ಗೆ ಹಲವು ತರ್ಕ ಬದ್ಧವಾದ ಸತ್ಯಗಳನ್ನು ತಿಳಿಸಿರುವೆನು. ಇನ್ನೂ ನೀವು ಕೇಳುವುದಾದರೆ, ನಾನು ಇಲ್ಲಿ ಒಂದು ನೇರ ಉತ್ತರವನ್ನು ಕೊಡಬೇಕಾಗುವುದು. ಈ ನೇರ ಉತ್ತರವನ್ನು ಕೇಳುವಷ್ಟು ಹೃದಯವಂತಿಕೆಯನ್ನು ನಿಮ್ಮಲ್ಲಿ ನಾನು ಕೇಳಿಕೊಳ್ಳುವೆನು. ನಾನು ಪ್ರಾಚೀನ ವಾಮಾಚಾರದ ಎಲ್ಲಾ ವಿಚಾರಗಳನ್ನು ಈ ಮೊದಲೇ ಹೇಳಿರುವುದರಿಂದ ಅದರ ಇತರ ವಿವರಣೆಗಳು ಇಲ್ಲಿ ಅಗತ್ಯವಿಲ್ಲ. ಈ ಮೊದಲೇ ತಿಳಿಸಿರುವಂತೆ, ಪ್ರಾಚೀನ ವಾಮಾಚಾರಕ್ಕೆ ಅತ್ಯಂತ ಮುಖ್ಯವಾದ ಎರಡು ಮಾನವ ಮನಸ್ಸಿನ ಭಾವವೆಂದರೆ ಕ್ರೌರ್ಯ ಮತ್ತು ಅನೈತಿಕ ವಿಕೃತ ಕಾಮಗಳಾಗಿವೆ.

ಜಗತ್ತಿನಲ್ಲಿ ಮಾನವರ ಮನದ ಕ್ರೌರ್ಯದ ಸಾಂದ್ರತೆಯನ್ನು ಹೆಚ್ಚಿಸಲು ಈ ಪ್ರಾಚೀನ ವಾಮಾಚಾರವು ಮಾನವನಿಂದ ಮಾನವನನ್ನು ಪ್ರತ್ಯೇಕಿಸುವ ವಿಧಾನವನ್ನೇ ಬಳಸುವವು. ಅವು ಮಾನವನನ್ನು ಹಲವು ಬಣಗಳಲ್ಲಿ ಸೇರಿಸಿಬಿಡುವವು. ಯಾಕೆಂದರೆ, ಈ ರೀತಿ ಬಣಗಳಾಗಿ ವಿಭಾಗವಾಗದಿದ್ದಲ್ಲಿ ದ್ವೇಷ, ಹಿಂಸೆ, ರಕ್ತಪಾತಕ್ಕೆ ಅವಕಾಶವೇ ಇರುವುದಿಲ್ಲ. ಆದುದರಿಂದ ಅವುಗಳಿಗೆ ಈ ವಿಭಜಿಸುವಿಕೆ ಅಗತ್ಯವಾಗಿದೆ ಮತ್ತು ಅವು ಅದನ್ನು ಮಾಡುತ್ತಾ ಇದುವರೆಗೂ ಬಂದಿವೆ! ಇದಕ್ಕೆ ಬೇಕಾಗಿ ಅವು ರಾಜರನ್ನು, ಧರ್ಮಗಳನ್ನು, ಪಂಥಗಳನ್ನೆಲ್ಲಾ ಬಳಸಿಕೊಂಡವು!! ನಮಗೆ ಸ್ಪಷ್ಟವಾಗಿಯೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವ ಒಂದು ಸತ್ಯವೆಂದರೆ ಅದು ಈ ಧರ್ಮಗಳು ಹುಟ್ಟುವಾಗ, ಅವುಗಳು ಮುಂದೆ ಹಲವು ಹೋಳುಗಳಾಗಿ ವಿಭಜಿಸಲ್ಪಡಲಿ ಎಂದು ಅಂದು ಆ ಯೋಗಿ ಅಥವಾ ಪ್ರವಾದಿ ಮತ್ತು ಆಯಾ ಧರ್ಮಗಳ ದೇವರುಗಳು ಉದ್ದೇಶಿಸಿರಲಾರರು ಎಂದಾಗಿದೆ. ಹಾಗಿದ್ದರೆ, ಅನಂತರ ಜಗತ್ತಿನ ಎಲ್ಲಾ ಧರ್ಮಗಳು ಇಷ್ಟು ಹೋಳುಗಳಾಗಿ ವಿಭಜಿಸಲು ಯಾವ ಶಕ್ತಿ ಕಾರಣವಾಯಿತು? ಇನ್ನು, ಈ ಪ್ರಶ್ನೆಗೆ "ಅದು ಮಾನವನ ಸ್ವಭಾವ" ಎಂದು ಹೇಳಿ ಜಾರಿಕೊಳ್ಳುವವರಿಗಾಗಿ ಮಾತ್ರ "ಆವರ್ತನೆಯ ಘಟನೆಗಳು" ಎಂಬ ಒಂದು ಸತ್ಯವನ್ನು ಇಲ್ಲಿ ಎತ್ತಿ ಹೇಳಲು ಉದ್ದೇಶಿಸುವೆನು. ಇದನ್ನು ನೋಡಿಯಾದರೂ ಆ ಪ್ರಾಚೀನ ವಾಮಾಚಾರದ ಪ್ರಭಾವದ ಇರವು ಸ್ಪಷ್ಟವಾಗಿ ಅರಿವಾಗಬಹುದು. ಯಾಕೆಂದರೆ, ಈ ಆವರ್ತನೆಯ ಘಟನೆಗಳನ್ನು ಬರೇ 'ಮಾನವ ಸ್ವಭಾವ' ಅಥವಾ 'ಕಾಕತಾಳಿ'ಯಾಗಿ ಚಿತ್ರಿಸಲು ಸಾಧ್ಯವಾಗುವುದಿಲ್ಲ.

ಈಗ ಆವರ್ತನೆಯ ಘಟನಾವಳಿಗಳನ್ನು ಒಮ್ಮೆ ನೋಡೋಣ. ನಾವು ಜಗತ್ತಿನ ಧರ್ಮಗಳ ಹಿನ್ನೆಲೆಯಲ್ಲಿ ಬಹಳ ಹಿಂದೆ ಹೋದರೆ, ಅಲ್ಲಿ ನಮಗೆ ಸಿಗುವುದು ವೇದಕಾಲವಾಗಿದೆ. ಈ ವೇದ

ಕಾಲದಲ್ಲೇ ಮಾನವರು ಮುಖ್ಯವಾಗಿ ಎರಡಾಗಿ ವಿಭಾಗಿಸಲ್ಪಟ್ಟಿದ್ದರು. ಅವರಲ್ಲಿ ಒಂದು ವರ್ಗವು ಕರ್ಮಮಾರ್ಗವನ್ನೇ ಶ್ರೇಷ್ಠ ಎಂದು ವಾದಿಸುವಾಗ ಇನ್ನೊಂದು ಜ್ಞಾನ ಮಾರ್ಗವನ್ನೇ ಶ್ರೇಷ್ಠ ಎಂದು ವಾದ ಮಾಡುತ್ತಿದ್ದವು!! ಅದರ ನಂತರದ ಹಲವು ಸಹಸ್ರ ವಿಭಜನೆಗಳ ಕುರಿತು ಎಲ್ಲರಿಗೂ ತಿಳಿದಿರುವ ವಿಚಾರಗಳಾಗಿವೆ ಅದು ಈಗ ಬೇಕಾಗಿಲ್ಲ. ಇನ್ನು, ಯಹೂದಿಯರಲ್ಲೂ ಇದೇ ರೀತಿ ಮೊದಲಿಗೆ ಆರ್ತೊಡೋಕ್ಸ್ ಮತ್ತು ರಿಫೋರ್ಮ್ ಎಂಬ ವಿಭಜನೆಯಾಗಿದೆ, [ಅನಂತರದಲ್ಲಿ ಎಲ್ಲದರಲ್ಲೂ ಮತ್ತೂ ಹಲವಾರು ವಿಭಜನೆಯಾಗಿದೆಯಾದರೂ ಇಲ್ಲಿ ನಾವು ಈಗ ನೋಡುತ್ತಿರುವುದು ಆ ಮುಖ್ಯ ವಿಭಜನೆಯನ್ನು ಮಾತ್ರವಾಗಿದೆ.] ಇನ್ನು ಕ್ರಿಶ್ಚಿಯನ್ ಧರ್ಮದಲ್ಲಿ ಕೆಥೋಲಿಕ್ ಮತ್ತು ಪ್ರೊಟೆಸ್ಟಂಟ್ಸ್ ಎಂಬ ಮುಖ್ಯ ವಿಭಜನೆ ಆಗಿದೆ. ಇನ್ನು, ಇಸ್ಲಾಂ ನಲ್ಲಿ ಸುನ್ನಿ ಮತ್ತು ಶಿಯಾ ಎಂಬ ಮುಖ್ಯ ವಿಭಜನೆ ಆಗಿರುವುದು ತಿಳಿದಿದೆ. ಬೌದ್ಧರಲ್ಲಿ ಮಹಾಯಾನ ಮತ್ತು ಹೀನಯಾನ ಎಂಬ ಮುಖ್ಯ ವಿಭಜನೆ, ಮತ್ತು ಜೈನರಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಮುಖ್ಯ ವಿಭಜನೆ!!! ಹೀಗೆ ಎಲ್ಲಾ ಧರ್ಮಗಳಲ್ಲಿಯೂ ಎರಡು ಮುಖ್ಯ ವಿಭಜನೆಯನ್ನು ಕಾಣಬಹುದಾಗಿದೆ. ಇನ್ನೂ ಕೆಲವರು "ಒಂದು ಎರಡಾಗುವಾಗ ಮೊದಲಲ್ಲಿ ಎರಡಾಗಿ ವಿಭಜನೆ ಆಗಲೇಬೇಕಲ್ಲಾ" ಎಂದು ಹೇಳುವ ಸಾಧ್ಯತೆ ಇದೆ, ಅದಕ್ಕೆ ನಾವು ನೋಡಬೇಕಾದುದು ಈ ಮುಖ್ಯ ವಿಭಜನೆ ಮೊದಲ ವಿಭಜನೆ ಏನೂ ಆಗಿರಬೇಕಾಗಿಲ್ಲ ಎಂಬುವುದನ್ನಾಗಿದೆ. ಉದಾಹರಣೆ 'ಪ್ರೊಟೆಸ್ಟಂಟ್' ಎಂಬ ವಿಭಜನೆಯು ಕ್ರಿಶ್ಚಿಯನರಲ್ಲಿ ಹಲವು ವಿಭಜನೆಗಳು ಆದ ಬಳಿಕ ಬಂದದ್ದಾಗಿದೆ. ಇವೆಲ್ಲಾ ಪೂರ್ವಯೋಜಿತ ಕೆಲಸದಂತೆ ಕಾಣುವವು ಮತ್ತು ಅವುಗಳ ಹಿಂದೆ ಯಾವುದೋ ಅದೃಶ್ಯ ಶಕ್ತಿಯ ಕೈವಾಡ ಇರುವಂತೆ ನಮಗೆ ಅವು ಸ್ಪಷ್ಟಪಡಿಸುವವು!! ಇನ್ನು, ಒಂದು ಧರ್ಮವು ಹೆಚ್ಚು ಒಡೆಯಲ್ಪಟ್ಟಂತೆ ಅಷ್ಟು ಹೆಚ್ಚು ಅದು ಆ ಪ್ರಾಚೀನ ವಾಮಾಚಾರದ ಪ್ರಭಾವಕ್ಕೆ ಒಳಗಾಗುವುದು ಎಂದು ತಿಳಿಯಬೇಕು. ಎಲ್ಲಾ ಧರ್ಮಗಳು ಹಲವು ಸಂಖ್ಯೆಯಲ್ಲಿ ಈಗಾಗಲೇ ಒಡೆದು ಹೋಗಿರುವ ಹಿನ್ನೆಲೆಯಲ್ಲಿ ಆ ಪ್ರಾಚೀನ ವಾಮಾಚಾರವು ಅದರ ಕೊನೆಯ ಗುರಿಯ ಬಹಳ ಹತ್ತಿರದಲ್ಲಿರುವಂತೆ ಕಾಣಿಸುವುದು. ಕೊನೆಯ ಗುರಿ ಎಂದರೆ ಬೇರೇನಲ್ಲ, ಒಳಿತು ಎಂದರೂ ಕೆಡುಕು ಎಂದರೂ ಮಾನವನಿಗೆ ಕೆಡುಕು ಮಾತ್ರವೇ ಗೊತ್ತಿರುವ ಮತ್ತು ಮಾಡುವ ಕಾಲವಾಗಿದೆ! ಧರ್ಮ, ಪಂಥಗಳ ಎಲ್ಲಾ ತರದ ಆಚಾರಗಳು ಇಂದಿಗಿಂತಲೂ ಅಂದು ಹೆಚ್ಚು ಇದ್ದರೂ, ಅಂದರೆ ಧರ್ಮ, ಪಂಥ, ದೇವರುಗಳು ದೊಡ್ಡ ಮಟ್ಟಿಗೆ ಎದುರೇ ಇದ್ದರೂ, ಮಾನವನು ಮಾತ್ರ ಅಸುರ ಭಕ್ತನಾಗಿ ಅಸುರನ ರೀತಿಯಲ್ಲಿ ಜೀವಿಸುವ ಕಾಲವಾಗಿದೆ! ಒಂದು ಕಡೆ ಕ್ರೌರ್ಯ ಮತ್ತು ಅನೈತಿಕ ವಿಕೃತ ಕಾಮ ಮತ್ತು ಇನ್ನೊಂದು ಕಡೆ ಅಸಹಾಯಕ ಮಾನವರ ನೋವಿನ ಚೀರುವಿಕೆ, ಇವುಗಳು ಮಾತ್ರ ಇರುವ ಕಾಲವಾಗಿದೆ. ಅಂದರೆ, ಅಲ್ಲಿ ದೇವರು, ಧರ್ಮಗಳು ಎಲ್ಲವೂ ಆ ಅಸುರ ಜೀವನವನ್ನು ಸಹಜವಾಗಿಯೇ ಒಪ್ಪಿಕೊಂಡಿರುವ ಸ್ಥಿತಿ ಎಂದು ಅರ್ಥ!!! ಇಂದು, ಆ ನಿಟ್ಟಿನ ವೇಗವು ಬಹಳವಾಗಿ ಹೆಚ್ಚಿ ಮುನ್ನುಗ್ಗುವಂತೆ ಕಾಣಿಸುವುದು. ಈ ವೇಗವು ಮತ್ತೂ ಹೆಚ್ಚಾಗುವುದು. ಇದನ್ನು ಯಾರಿಗೂ ತಡೆಯಲು ಸಾಧ್ಯವಾಗಲಾರದೆಂಬುವುದೇ "ಮುಂದೆ ದೇವರುಗಳು ಮತ್ತು ಧರ್ಮಗಳು ಸರ್ವನಾಶವಾಗುವುದು" ಎಂದು ಹೇಳುವಲ್ಲಿನ ಅರ್ಥ ಎಂಬುವುದನ್ನು ಪ್ರತ್ಯೇಕವಾಗಿ ತಿಳಿಯಬೇಕು. ಆಚಾರಗಳು ಮಾನವನನ್ನು ಎಂದೂ ಒಳಿತಿನತ್ತ ಕೊಂಡುಹೋಗುವ ಅಥವಾ ಮನೋಶುದ್ದೀಕರಣದ ಉಪಕರಣವಾಗಲಾರದು, ಆದುದರಿಂದಲೇ ಈ ದೇವರುಗಳ ಮತ್ತು ಧರ್ಮ, ಪಂಥಗಳ ಸರ್ವನಾಶವು ಮುಂದೆ ಈ ಆಚಾರ, ನಂಬಿಕೆಗಳ ಮೂಲಕ, ಸರ್ವರೂ ನೋಡನೋಡುತ್ತಾ ಇದ್ದಂತೆ ನಡೆಯುವುದು!! ಎಲ್ಲಾ ಧರ್ಮ, ಪಂಥಗಳಲ್ಲೂ ದೇವರ ಪೂಜೆ, ಜಾತ್ರೆ, ಯಾಂತ್ರಿಕ ಪ್ರಾರ್ಥನೆ, ಉಪವಾಸಗಳಂಥ ಬರೇ ಗೌಜು ಒಂದು ಕಡೆ ನಡೆಯುತ್ತಾ, ಮುಂದುವರಿಯುತ್ತಾ, ಕೊನೆಗೆ ಆ ಭಯಾನಕ ರಕ್ಕಸ ಸ್ವಭಾವದ ಹಂತಕ್ಕೆ ಹೋಗಿ ತಲುಪುವುದು!! ಒಟ್ಟಿನಲ್ಲಿ ಆ ಪ್ರಾಚೀನ ವಾಮಾಚಾರ ಬಯಸಿದ "ಹೆಸರಿಗೆ ದೇವರು ಮತ್ತು ದೇವರ ಧರ್ಮ, ಆದರೆ ಫಲವು, ಸೈತಾನ ಅಥವಾ ರಕ್ಕಸ ಮತ್ತು ರಕ್ಕಸನ ಜೀವನ ರೀತಿ" ಎಂಬ ಗುರಿಗೆ ತಲುಪಿಯೇ ತಲುಪುವುದು. ಈಗ "ಹರಸಾಹಸ ಪಟ್ಟರೆ" ಈ ಭೂಮಿಯ ಮಾನವರನ್ನು ರಕ್ಷಿಸಿಕೊಳ್ಳುವ ಆ ಕೊನೆಗಳಿಗೆಯ ಒಂದು ದಾರಿ ಇರುವುದು. ಇದನ್ನೂ ಕಳಕೊಂಡರೆ ಎಲ್ಲವೂ ಮುಗಿಯಿತು ಎಂದೇ ತಿಳಿಯಬೇಕಾಗುವುದು!

ನಾವು ಇಲ್ಲಿ ಒಂದು ಅಂಶವನ್ನು ಪ್ರತ್ಯೇಕವಾಗಿ ತಿಳಿಯಬೇಕಾಗಿದೆ. ನಮಗೆ ದೇವರುಗಳು ಮತ್ತು ಧರ್ಮಗಳು ಬೇಕಾಗಿದೆ. ಆದರೆ ನಮಗೆ ಆ ಪ್ರಾಚೀನ ವಾಮಾಚಾರದ ಭಯಾನಕ ಪ್ರಭಾವವು ಬೇಡವೇ ಬೇಡವಾಗಿದೆ ಅಷ್ಟೆ. ಇನ್ನು, ಯಾರಿಗೂ ತೊಂದರೆಯನ್ನು ಉಂಟು ಮಾಡದ ಆಚಾರಗಳನ್ನು ಇಲ್ಲಿ ಇಲ್ಲದಂತೆ ಮಾಡುವ ಪ್ರಯತ್ನವೂ ಬೇಕಾಗಿಲ್ಲ. ಆದರೆ ಅವು ಮಾನವನಲ್ಲಿ ಮಾಡಿರುವ ಆ ದೇವರ ಮತ್ತು ಧರ್ಮದ ತಿರುಳನ್ನು ಮರೆಯುವಂತೆ ಮಾಡಿ, "ಎಲ್ಲವನ್ನೂ ಯಾಂತ್ರಿಕಗೊಳಿಸಿ", ಹೃದಯ ಶೂನ್ಯತೆಯನ್ನು ತಂದೊಡ್ಡಿದ ಆ ಪ್ರಾಚೀನ ವಾಮಾಚಾರದ ಉದ್ದೇಶದ ಪ್ರಭಾವದಿಂದ ಎಲ್ಲರೂ

ಪಾರಾಗಬೇಕಾಗಿದೆ ಅಷ್ಟೆ. ಇದಕ್ಕೆ ನಮ್ಮ ಮನಸ್ಸನ್ನು ನಾವೇ ತಿದ್ದಿಕೊಳ್ಳುವ ದಾರಿಗೆ ಬರಬೇಕಾಗುವುದು. ಎಲ್ಲಾ ಧರ್ಮ, ಪಂಥಗಳಲ್ಲಿ ಹೇಳಿರುವ ಆ ವಿಶಾಲ ಮನಸ್ಕತೆಯನ್ನು ಹುಡುಕಿ ಅವುಗಳನ್ನು ಸಾರಿ ಹೇಳಬೇಕಾಗುವುದು. ಇದನ್ನು ದೊಡ್ಡ ದೊಡ್ಡ ಹೋಮ, ಹವನಗಳಿಂದ ಅಥವಾ ದೇವರಿಗೆ ವಿಶೇಷ ಪ್ರಾರ್ಥನೆ, ಹರಕೆ, ಉಪವಾಸ, ಇತ್ಯಾದಿ ಆಚಾರಗಳಿಂದ ಪಡೆಯಲು ಸಾಧ್ಯವಿಲ್ಲ ಎಂಬುವುದನ್ನು ಮರೆಯಬಾರದು. ಅದಕ್ಕೆ ಮಹಾತ್ಮರ ಆ ಬಾಹ್ಯ ಮತ್ತು ಆಂತರ್ಯದ ಸತ್ಯಚಿಂತನೆ ರೀತಿಯೊಂದೇ ದಾರಿಯಾಗಿರುವುದು.

ಮಾನವನು ಮನಸ್ಸು ಮಾಡಿದರೆ ಆತನಿಗೆ ಮುಂದೆ ದೊರಕಬಹುದು ಸತ್ಯಯುಗ, ಇಲ್ಲವಾದರೆ, ಈ ಸ್ಥಿತಿಯೇ ಮುಂದುವರಿದು ಸಿಗುವುದು ದೇವರು, ಧರ್ಮವೆಲ್ಲ ಪೂರ್ತಿಯಾಗಿ ಮರೆಯಾಗಿಹೋದ ಆ ಕರಾಳಯುಗ.

---

## ಇನ್ನೂ ಜಗತ್ತಿಗೆ ತಿಳಿಸದ ಆ ಪ್ರಾಚೀನ ವಾಮಾಚಾರದ ಹಲವು ರಹಸ್ಯಗಳು ತಮ್ಮಲ್ಲೇ ಇವೆ ಎಂದಿದ್ದೀರಿ. ಆದರೆ ಮತಾಂತರದ ವಿರುದ್ಧವಿರುವ ಆ ನಿಮ್ಮ ಸ್ಪಷ್ಟ ನಿಲುವಿಗೆ ಹಿನ್ನೆಲೆಯಾಗಿ ಏನಾದರೂ ಪ್ರತ್ಯೇಕ ರಹಸ್ಯ ಇದೆಯೇ?

ಉತ್ತರ- ನನ್ನ ಸಹೋದರ, ನಿಜವಾಗಿಯೂ ಇನ್ನೂ ಜನತೆಗೆ ತಿಳಿಸದ ಹಲವು ಪ್ರಾಚೀನ ವಾಮಾಚರದ ರಹಸ್ಯ ಸತ್ಯಗಳು ನನ್ನ ಹೃದಯದಲ್ಲೇ ಇವೆ. ಅವುಗಳಲ್ಲಿ ಯಾವುದೊಂದು ಕೂಡಾ ಮಾನವರಿಗೆ ಅಪಾಯವಾಗುವಲ್ಲೇ ಇರುವುದು ಹೊರತು ಲಾಭವನ್ನು ಉಂಟು ಮಾಡುವವು ಇಲ್ಲ. ಆದರೆ, ನೀವು ಈಗ ಕೇಳಿರುವ ಪ್ರಶ್ನೆಯು ಅಷ್ಟೊಂದು ರಹಸ್ಯವಾಗಿ ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲದ ಕಾರಣ ಅದನ್ನು ಹೇಳುವೆನು. ನಾನು ಮೊದಲೇ ತಿಳಿಸಿರುವಂತೆ ಈ ಪ್ರಾಚೀನ ವಾಮಾಚಾರ ವ್ಯವಸ್ಥೆಯು ಎರಡು ಮುಖ್ಯ ಆಶಯ ಅಥವಾ ಸಂಕಲ್ಪಗಳ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತವೆ. ಅವುಗಳು ದೇವರು ಎಂಬುವುದು ಒಂದು ಸಂಕಲ್ಪ ಅಥವಾ ಆಶಯವಾದರೆ ಸೈತಾನ ಅಥವಾ ಅಸುರ ಎಂಬುವುದು ಇನ್ನೊಂದು ಸಂಕಲ್ಪವಾಗಿದೆ. ಇವುಗಳಲ್ಲಿ ದೇವರು ಸಂಕಲ್ಪವನ್ನು ಅವುಗಳು ಎಲ್ಲಾ ಆದರ್ಶ ಸ್ವಭಾವ ಅಥವಾ ಉತ್ತಮ ಸ್ವಭಾಗಳ ಪ್ರತಿನಿಧಿಯಾಗಿ ಇರಿಸಿಕೊಳ್ಳುವವು, ಮತ್ತು ಸೈತಾನ ಅಥವಾ ಅಸುರ ಸಂಕಲ್ಪವನ್ನು ಅವು ಮಾನವನ ಕೆಟ್ಟ ಸ್ವಭಾವಗಳ ಪ್ರತಿನಿಧಿಯಾಗಿರಿಸಿಕೊಳ್ಳುವವು. ಈಗ ಹೇಳುತ್ತಿರುವುದು ಪುರಾಣ ಕಥೆಗಳ ವಿಚಾರವಲ್ಲ ಎಂದು ಪ್ರತ್ಯೇಕವಾಗಿ ಅರಿತಿರಬೇಕು. ಈ ಪ್ರಾಚೀನ ವಾಮಾಚಾರಕ್ಕೆ ಸೈತಾನನ ಅಥವಾ ಅಸುರ ಸ್ವಭಾವವನ್ನು ಈ ಜಗತ್ತಲ್ಲಿ ಹೆಚ್ಚಾಗಿಸುತ್ತಾ ಬರಬೇಕು ಅಷ್ಟೆ. ಯಾಕೆಂದರೆ ಅವುಗಳಿಗೆ ತಮ್ಮ ವ್ಯವಸ್ಥೆಗೆ ಅನಿವಾರ್ಯವಾದ ಆ ಕ್ರೌರ್ಯ ಮತ್ತು ಅನೈತಿಕ ಕಾಮ ಭಾವನೆಗಳು ಹೀಗೆ ಮಾಡುವುದರಿಂದ "ಮಾತ್ರ" ಲಭಿಸುವುದು. ಧರ್ಮವು ಅವೆರಡನ್ನೂ ಕಡಿಮೆಗೊಳಿಸುವ ಮುಖ್ಯ ಮಾರ್ಗವಾದುದರಿಂದ, ಅವುಗಳಿಗೆ ಧರ್ಮ, ಪಂಥ, ಪರಂಪರೆ, ಆಚಾರಗಳು ತಮ್ಮೊಳಗೆ ದ್ವೇಷ, ಹಿಂಸೆ, ರಕ್ತಪಾತ ಮಾಡುವುದರಿಂದ, ಇತರ ಕಡೆಗಳಲ್ಲಿನ ದ್ವೇಷ, ರಕ್ತಪಾತದ ಲಾಭಕ್ಕಿಂತಲೂ ಎರಡುಪಾಲು ಹೆಚ್ಚು ಲಾಭ ದೊರಕುವುದು! ಅವುಗಳಿಗೆ ರಾಜರುಗಳ ಯುದ್ಧದಿಂದ ತುಂಬಾ ಕ್ರೌರ್ಯ ಭಾವನೆಯು ಸಿಕ್ಕಿದೆಯಾದರೂ ಮತ್ತು ಅವುಗಳನ್ನು ಉಪಯೋಗಿಸಿವೆಯಾದರೂ, ಅವುಗಳಿಗೆ 'ಧಾರ್ಮಿಕ ಹಿನ್ನೆಲೆ ಇಲ್ಲ' ಎಂಬ ಒಂದು ಕೊರತೆ ಇತ್ತು. ಅಂದರೆ, ಅವುಗಳಿಗೆ "ದೇವರು, ಧರ್ಮ ಸಂಕಲ್ಪಗಳ ನಾಶ" ಮಾಡುವ ಕ್ರೌರ್ಯ ಭಾವನೆಯು ಸಿಕ್ಕಿದ್ದಲ್ಲಿ ದೊಡ್ಡ ಲಾಭವಾಗುವುದು ಎಂದು ಅರ್ಥ. ಈ ಕ್ರೌರ್ಯ ಭಾವನೆಯು ಮಾನವನ ಸ್ವಭಾವವನ್ನು ಸುಲಭದಲ್ಲಿ ಪಾತಾಳಕ್ಕೆ ತಗ್ಗಿಸಿ ಮಾನವರನ್ನು ಅಸುರರನ್ನಾಗಿ ಮಾಡಲು ಅತ್ಯಂತ ಸುಲಭವಾಗುವುದು!! ಇದಕ್ಕಾಗಿ ಅವು ಈ ವಿಭಜಿಸಲ್ಪಟ್ಟ ಧರ್ಮ, ಪಂಥ, ಪರಂಪರೆ, ಜಾತೀ ಆಚಾರ, ಕುಲಾಚಾರ, ಸಂಪ್ರದಾಯ, ಇತ್ಯಾದಿಗಳನ್ನು, ದೇವರ ಮತ್ತು ಧರ್ಮದ ಹಿನ್ನೆಲೆಯಲ್ಲೇ ಮಾಡಿಟ್ಟಿರುವ ಕಾರಣ, ಅವುಗಳನ್ನು ತಮ್ಮೊಳಗೆ ದ್ವೇಷಿಸುವಂತೆ ಮಾಡುವ ಮತ್ತು ರಕ್ತಪಾತ ಮಾಡಿಸಿ, ದೇವರು ಮತ್ತು ಧರ್ಮದ ನಾಶದ ಕ್ರೌರ್ಯವನ್ನು ಪಡೆದುಕೊಳ್ಳುವುದು!! ಈ ದೇವರನ್ನು ಮತ್ತು ಧರ್ಮವನ್ನು ನಾಶ ಮಾಡುವ ಆ ಅತ್ಯಂತ ಪಾಪ ಕೆಲಸವನ್ನು, ಮಾನವನಿಂದ, ಪ್ರತ್ಯೇಕವಾಗಿ, ಆಸ್ತಿಕರು ಅಥವಾ ಭಕ್ತರಿಂದಲೇ ಹಲವು ರೀತಿಗಳಲ್ಲಿ ಭೀಕರವಾಗಿ ಮಾಡಿಸುತ್ತಾ ಬಂದವು ಎಂಬುವುದೇ ಭಯಾನಕ ಸತ್ಯವಾಗುವುದು!!! ಈ ರೀತಿಯಲ್ಲಿ, ಅವು ಮಾನವರನ್ನು ಇತರ ಧರ್ಮದ ದೇವರ ನೆಪದಲ್ಲಿ "ದೇವರು ಸಂಕಲ್ಪ" ದ ಕೊಲೆಗಾರರನ್ನಾಗಿ ಮಾಡುತ್ತಾ ಬಂದಿರುವವು. ಮಾನವನು ಇದೇನನ್ನೂ ತಿಳಿಯದೆ ದೇವರು ಸಂಕಲ್ಪವನ್ನು ಕೊಲೆ ಮಾಡುತ್ತಾ ಇಷ್ಟು ಸಹಸ್ರ ವರುಷ ತಮ್ಮ ಧರ್ಮಕ್ಕೆ ಜಯವಾಗಿದೆ ಎಂಬ ಆ

"ನಂಬಿಕೆ" ಯೊಂದಿಗೆ ಮುಗುಳು ನಗುತ್ತಾ ಬಂದಿರುವನು!!! ಮಾತ್ರವಲ್ಲ, ತಮ್ಮ ಮುಂದಿನ ಜಯದ ಬಗ್ಗೆ, ಕೋಟಿಗಟ್ಟಲೆ ಹಣ ಮತ್ತು ಸಮಯ ಸುರಿದು, ಆ ಆಲೋಚನೆಗಳಲ್ಲೇ ಮಗ್ನನಾಗಿ ಯೋಜನೆಗಳನ್ನು ಹಾಕುತ್ತಿದ್ದಾನೆ!!! ಅಯ್ಯೋ ದೇವರೆ, ದೇವರನ್ನೇ ಕೊಲ್ಲುವುದಕ್ಕೆ ದೇವರದೇ ಧರ್ಮವನ್ನು ಮತ್ತು ಆಸ್ತಿಕರನ್ನೇ ಉಪಯೋಗಿಸುವುದು ಎಂಥ ಶೋಚನೀಯ ಸ್ಥಿತಿ!!! ಈ ರೀತಿ ಮಾನವರಿಂದ ಮಾಡಿಸಿದಲ್ಲಿ ಮಾನವರಲ್ಲಿ ಸ್ವಭಾವ ಅಧಃಪತನವಾಗಬೇಕು ಎಂಬುವುದು ಆ ಪ್ರಾಚೀನ ವಾಮಾಚಾರದ ಮೊದಲಿಂದಲೇ ಇದ್ದ ಲೆಕ್ಕಾಚಾರವಾಗಿದೆ, ಅದೇ ರೀತಿ, ಈ ಜಗತ್ತಲ್ಲಿ ಕೆಟ್ಟವರ ಸಂಖ್ಯೆ ಹೆಚ್ಚಾಗಿರುವುದನ್ನು ನಾವು ಕಾಣುವೆವು. ಈ ಜಗತ್ತಿನಲ್ಲಿ ಕೆಟ್ಟವರು ಹೆಚ್ಚಾಗಿರುವುದನ್ನೂ ಕೂಡಾ "ದೇವರ ಲೀಲೆ" ಅಥವಾ "ದೇವರ ಇಚ್ಛೆ" ಎಂದು, ಈ ಎಲ್ಲಾ ಧರ್ಮಗಳು, ದೇವರ ಸಂಕಲ್ಪವನ್ನು ನಾಶಮಾಡುವುದರೊಂದಿಗೆ, ದೇವರ ಮೇಲೆಯೇ ಆ ಅಪವಾದವನ್ನೂ ಹೊರಿಸಿಬಿಟ್ಟಿವೆಯಲ್ಲಾ, ಅಯ್ಯೋ ಇದೆಂಥ ಮಹಾ ಪಾಪ!! ಉರಿಯುತ್ತಿರುವ ಬಲ್ಬುಗಳ ಸಂಖ್ಯೆ ಹೆಚ್ಚಾದರೆ, ಒಟ್ಟು ಬೆಳಕು ಹೆಚ್ಚಾಗುವುದು ಎಂದು ನಮಗೆ ಗೊತ್ತಿದೆ. ಆದರೆ, ಈ ಧರ್ಮ, ಪಂಥಗಳು ಹೆಚ್ಚಾದಾಗ "ಉತ್ತಮ ಸ್ವಭಾವ" ಎಂಬ ಆ ಧರ್ಮಗಳು ಸೃಷ್ಟಿಸಬೇಕಾದ ಬೆಳಕುಗಳು ಹೆಚ್ಚಾಗುವ ಬದಲು ಕತ್ತಲೆ ಎಂಬ "ನೀಚ, ಭಯಾನಕ ಸ್ವಭಾವಗಳು" ಹೆಚ್ಚಾಗುತ್ತಾ ಬಂದಿವೆ ಎಂದಾಗ, ಈ ಪ್ರಾಚೀನ ವಾಮಾಚಾರವೇ ಇದಕ್ಕೆ ಕಾರಣ ಎಂಬುವುದನ್ನು ಅರಿಯುವುದು ಸುಲಭವಾಗುವುದು. ಇನ್ನು, ಈ ಎಲ್ಲಾ ಧರ್ಮಗಳಲ್ಲಿ ಸರ್ವವೂ ತಮ್ಮೊಳಗೆ ಒಂದಕ್ಕೊಂದು ವಿರುದ್ಧವಾಗಿ ಹೇಳಲ್ಪಟ್ಟಿದ್ದರೂ, ಆ ಕೊನೆಯ ಕಾಲದಲ್ಲಿ ಮಾನವರ ಸ್ವಭಾವವು ಬಹಳ ಕೆಟ್ಟದಾಗುವುದೆಂಬುವುದನ್ನು ಮಾತ್ರ ಎಲ್ಲಾ ಧರ್ಮಗಳಲ್ಲೂ "ಒಂದೇ ರೀತಿಯಲ್ಲಿ" ದೇವರ ಭವಿಷ್ಯವಾಣಿಯೆಂದು ಆದಿಯಲ್ಲಿಯೇ ನುಡಿದಿರುವುದು ಆ ಪ್ರಾಚೀನ ವಾಮಾಚಾರದ ಕೊನೆಯ ಗುರಿಯನ್ನು ಮಾತ್ರ ಪ್ರತಿಫಲಿಸುವವು!!! ದೇವರು ಈ ರೀತಿಯಲ್ಲಿ ಯೋಜನೆ ಹಾಕಿರಲಾರ, ಯಾಕೆಂದರೆ, ಆದಿ ಕಾಲದ ಜನರಲ್ಲಿ ಹೆಚ್ಚು ಪ್ರೀತಿ ಮತ್ತು ಕೊನೆಯ ಕಾಲದ ಮಾನವರಲ್ಲಿ [ಕಾರಣವಿಲ್ಲದೆ] ತುಂಬಾ ಹಗೆತನ ದೇವರಿಗೆ ಇದ್ದಂತೆ ಆ ಯೋಜನೆ ತೋರುವುದು. ಈ ಯೋಜನೆಯು ದೇವರ ಯೋಜನೆಯೋ ಅಥವಾ ಆ ಪ್ರಾಚೀನ ವಾಮಾಚಾರದ ಯೋಜನೆಯೋ ಎಂದು ನಮಗೆ ಈಗ ತೀರ್ಮಾನಕ್ಕೆ ಬರಲು ಸುಲಭವಾಗುವುದು.

ಈಗ, ನಿಮ್ಮ ಪ್ರಶ್ನೆಯ ಉತ್ತರವನ್ನು ಚರ್ಚಿಸೋಣ. ಈ ಮತಾಂತರದಲ್ಲಿ ಅದೇ ರೀತಿಯ "ದೇವ ಸಂಕಲ್ಪ" ದ ಕೊಲೆಯು ಮತ್ತೂ ಶಕ್ತಿಯುತವಾಗಿ ನಡೆಯುವುದು!! ಇದು ಹೇಗೆಂದರೆ, ಮತಾಂತರವಾದ ಜನರು "ಮೊದಲ" ತನ್ನ ದೇವರನ್ನು ದ್ವೇಷಿಸುವುದು ಮತ್ತು ಅವುಗಳ ವಿರುದ್ಧ ಹೀನಾಯವಾಗಿ ನಿಂದಿಸುವ ರೀತಿಯಾಗಿದೆ. ಇಲ್ಲಿ, ಇತರ ಧರ್ಮದ ದೇವರನ್ನು ವಿರೋಧಿಸುವ ರೀತಿಗಿಂತಲೂ ಪ್ರಭಲವಾಗಿ, ತಾನು ನೇರವಾಗಿ ಹಿಂದೆ ಪೂಜಿಸಿದ್ದ ದೇವ ಸಂಕಲ್ಪವನ್ನೇ ನಾಶಮಾಡುವ ರೀತಿ ಆ ಪ್ರಾಚೀನ ವಾಮಾಚಾರಕ್ಕೆ ಸಿಗುವುದು!! ಇದು ಪ್ರಾಚೀನ ವಾಮಾಚಾರಕ್ಕೆ ದೇವರ ಸಂಕಲ್ಪವನ್ನು ನಾಶಮಾಡುವಲ್ಲಿ 'ತುಂಬಾ' ಲಾಭಮಾಡಿ ಕೊಡುವುದು. ಆದುದರಿಂದಲೇ, 'ಧರ್ಮ, ಪಂಥಗಳ ಹಿನ್ನಲೆಯಲ್ಲೇ' ಎಲ್ಲರೂ ಜಾಗತಿಕವಾಗಿ ಒಂದಾಗುವ ರೀತಿಯೇ ಇನ್ನುಳಿದ ಯಾವ ಹಿನ್ನೆಲೆಯ ಜಾಗತಿಕ ಒಂದಾಗುವಿಕೆಗಿಂತಲೂ ಅನಿವಾರ್ಯವಾದ ರೀತಿ ಎಂದು ನಾನು ಆ ಪರಿಹಾರದ ವಿವರಣೆಯಲ್ಲಿ ವಿವರಿಸಿರುವುದು, ಮತ್ತು ಮತಾಂತರವನ್ನು ಅಧರ್ಮ ಚಟುವಟಿಕೆಯೆಂದು ಹೇಳಿರುವುದು ಎಂದು ತಿಳಿಯಬೇಕು. ದೌರ್ಭಾಗ್ಯವಶಾತ್, ದೇವರದೇ ಆರಾಧನೆಯ ಹೆಸರಲ್ಲಿ, ಇಲ್ಲಿಯ ತನಕ [ಸಾವಿರಾರು ವರ್ಷಗಳು], ಈ ಧರ್ಮ, ಪಂಥಗಳು ಲಕ್ಷಗಟ್ಟಲೆ ಆರಾಧನಾಲಯಗಳನ್ನು, ದೇವರ ವಿಗ್ರಹಗಳನ್ನು, ದೇವರ ಪುಸ್ತಕ ಎಂದೇ ಕರೆಯಲ್ಪಡುವ ಧರ್ಮ ಗ್ರಂಥಗಳನ್ನು ನಾಶಮಾಡಿ ಆ ಪ್ರಾಚೀನ ವಾಮಾಚಾರಕ್ಕೆ ಅತಿ ದೊಡ್ಡ ಸೇವೆ ಮಾಡಿ ಆಗಿದೆ!! ಇವೆಲ್ಲಾ ಆ ಪ್ರಾಚೀನ ವಾಮಾಚಾರದ ದೇವರನ್ನು[ಉತ್ತಮ ಸ್ವಭಾವವನ್ನು] ಮತ್ತು ಧರ್ಮ[ಉತ್ತಮ ಸ್ವಭಾವ]ವನ್ನು ಕೊಲ್ಲುವ ಹಲವು ಉಪಾಯಗಳು ಎಂದು ತಿಳಿಯದ ಮಾನವನು ಇಂದೂ ಖಡ್ಗವನ್ನು ಮುಂದಿನ ಕಾಳಗಕ್ಕೆ ಗುಟ್ಟಿನಲ್ಲಿ ಮಸೆಯುತ್ತಾ ಇದ್ದಾನೆ!!! ಒಟ್ಟಿನಲ್ಲಿ, ಮಾನವರು ಮೋಸಹೋದರು, ಮತ್ತು ಇಂದು ಯಾವುದೂ ಯಾರ ಹಿಡಿತದಲ್ಲೂ ಇಲ್ಲದೆ ಆ ಪ್ರಾಚೀನ ವಾಮಾಚಾರದ ಮುಂದಿನ ಬಲಿಪಶುಗಳಾಗಿ ತಲೆ ಒಡ್ಡಿ ಕೂರುವ ಪರಿಸ್ಥಿತಿ ಮಾತ್ರ ಇರುವುದು ಆಷ್ಟೆ!! ನನ್ನ ಸಹೋದರ, ನಿನಗೆ ಏನಾದರೂ ಈ ಪ್ರಾಚೀನ ವಾಮಾಚಾರದ ಕೈಗಳಿಂದ ತಪ್ಪಿಸಿಕೊಳ್ಳಬೇಕು ಎಂದು ಇದ್ದಲ್ಲಿ ಮೊದಲು ಈ "ನಂಬಿಕೆ" ಎಂಬ ಆ ಪ್ರಾಚೀನ ವಾಮಾಚಾರವು ಮಾಡಿಟ್ಟ ಬಾಂಬನ್ನು ನಿರ್ವೀರ್ಯಗೊಳಿಸಿ ಅದೇ ಸ್ಥಾನದಲ್ಲಿ ದೇವರೆಂದೇ ಕರೆಯಲ್ಪಡುವ ಆ "ಸತ್ಯ"ದ ಪರ್ವತವನ್ನೇ ತಯಾರಿಸು. ದೇವರು ಮತ್ತು ಧರ್ಮವನ್ನು ನಂಬಿಕೆಯ ಹಿನ್ನೆಲೆಯಲ್ಲಿ ನೋಡುವುದನ್ನು ನಿಲ್ಲಿಸಿ ಆ ಪವಿತ್ರ ಸತ್ಯದ ಹಿನ್ನೆಲೆಯಲ್ಲಿ ನೋಡು!!!

## ಕೆಲವು ವಿಶೇಷ ಆಧ್ಯಾತ್ಮಿಕ ವ್ಯಕ್ತಿಗಳು ನೈತಿಕತೆಗೆ ಕಡಿಮೆ ಪ್ರಾಮುಖ್ಯತೆಯನ್ನು ಕೊಡುವರು. ನಮಗೆ ನೈತಿಕತೆ ಇಲ್ಲದೆ ಮಹಾತ್ಮರಾಗಲು ಸಾಧ್ಯವಿದೆಯೇ?

ಉತ್ತರ- ನೈತಿಕತೆ ಇಲ್ಲದೆ ಮಹಾತ್ಮರಾಗಲು ಸಾಧ್ಯವಾಗಲಾರದು. ಉದಾಹರಣೆಗೆ, ನೈತಿಕತೆ ಇಲ್ಲದಿರುವುದು ದೇವತ್ವ ವಾಗುವುದಿಲ್ಲ. ನೈತಿಕತೆ ಇಲ್ಲದಿರುವುದು ಧರ್ಮವಾಗುವುದಿಲ್ಲ. ನೈತಿಕತೆ ಇಲ್ಲದೆ ಸಾತ್ವಿಕತೆ ಸಾಧ್ಯವಿಲ್ಲ ಮತ್ತು ಅದಿಲ್ಲದೆ ಏಕಾಗ್ರತೆಯ ಯೋಗಗಳು ಸಾಧ್ಯವಿಲ್ಲ. ಅದೇ ರೀತಿ, ನೈತಿಕತೆ ಇಲ್ಲದೆ ಮಹಾತ್ಮರು ಇಲ್ಲ. ವಿವೇಕಾನಂದ ಸ್ವಾಮಿಗಳಿಗೆ ಅಂದಿನ ಕಾಲದ ಸ್ತ್ರೀಯರ ನಡತೆಯೇ ಸರಿ ಕಾಣಿಸದಿರುವಾಗ, ತಾನು ಈ ಭಾರತದ ಸ್ತ್ರೀಯರನ್ನು ಸೀತಾ ಮಾತೆಯ ತರ ಪತಿವ್ರತೆಯರನ್ನಾಗಿ ಮರಣಾನಂತರವಾದರೂ ಮೇಲಿಂದ ನಿರಂತರ ಶ್ರಮವಹಿಸಿ ಮಾಡುವೆನು ಎಂದು ಪ್ರತಿಜ್ಞೆಯನ್ನು ಮಾಡಿದ್ದರು!! ಆದರೆ, ನಡೆದದ್ದು ಮಾತ್ರ ಅದರ ವಿರುದ್ಧವಾಗಿದೆ. ಅಂದಿಗಿಂತಲೂ ಬಹಳ ಹೆಚ್ಚು ಸಂಖ್ಯೆಯಲ್ಲಿ ಇಂದು ಸ್ತ್ರೀಯರು ನೈತಿಕತೆಯಿಂದ ಜಾರಿ ಹೋಗಿರುವುದನ್ನು ನಾವು ಕಾಣುವೆವು!! ಆ ಪ್ರಾಚೀನ ವಾಮಾಚಾರದ ಪ್ರಭಲ ಕೈವಾಡವು ಇಲ್ಲೂ ನಮಗೆ ಕಾಣಿಸುವುದು. ಆದರೆ, ಇಲ್ಲಿ, ನಮಗೆ ಸ್ವಾಮೀಜಿಯವರ ಮಾತನ್ನು "ಧರ್ಮ ಮತ್ತು ಆಧ್ಯಾತ್ಮದಲ್ಲಿ ನೈತಿಕತೆಯ ಅನಿವಾರ್ಯತೆ"ಯ ಕುರಿತಾಗಿ ಕೇಳಿರುವ ಮಾತಾಗಿ ತೆಗೆಯಬಹುದು. ಒಟ್ಟಿನಲ್ಲಿ, ಆ ಸಾರ್ವತ್ರಿಕ ಶುದ್ಧ ನೈತಿಕತೆಗಳಿಗೆ ಬೆಲೆ ಕೊಡದಿದ್ದಲ್ಲಿ, ಯಾರಿಗೂ 'ನಿಜವಾದ' ಧರ್ಮ ಮತ್ತು ಆಧ್ಯಾತ್ಮದ ಬಗ್ಗೆ ಮಾತಾಡಲೂ ಅರ್ಹತೆ ಇರುವುದಿಲ್ಲ.

## ಜಗತ್ತಿನಲ್ಲಿ ಹಲವು ಗುರುಗಳು ಹಲವು ಜನರಿಗೆ ಶಾಂತಿಯನ್ನು ಕೊಡಲಿಲ್ಲವೇ?

ಉತ್ತರ- ಖಂಡಿತವಾಗಿಯೂ ಕೊಟ್ಟಿದ್ದಾರೆ ಮತ್ತು ಅವರ ಕೆಲಸವನ್ನು ನನ್ನ ಹೃದಯದಿಂದ ಕೊಂಡಾಡುತ್ತೇನೆ. ನಾನು ಇದುವರೆಗೂ ಹೇಳಿದುದರ ಅರ್ಥವನ್ನು ಏನೆಲ್ಲಾ ತಪ್ಪು ಕಲ್ಪನೆಗಳಿಗೆ ದಯವಿಟ್ಟು ಗುರಿಪಡಿಸದಿರಿ. ನಾನು ಉದ್ದೇಶಿಸುವುದು ಆ ರೀತಿಯ ಗುರುಗಳು ತಮ್ಮಲ್ಲಿಗೆ ಬಂದವರಿಗೆ ಕೊಡುವ ಶಾಂತಿಯ ಬಗ್ಗೆಯಲ್ಲ. ಆ ರೀತಿಯು ಆದಿ ಕಾಲದಿಂದಲೇ ಇದೆ, ಅದು ಮತ್ತೂ ಹೆಚ್ಚಾಗುತ್ತಾ ಬಂದಿದೆ. ಎಲ್ಲಾ ಧರ್ಮಗಳಲ್ಲೂ ಆ ರೀತಿಯ ಗುರುಗಳು ತಮ್ಮ ಕೆಲಸವನ್ನು ಮಾಡುತ್ತಾ ಬಂದಿರುವರು. ಅದೇ ರೀತಿ ಅಲ್ಲಿಗೆ ಹೋಗಿ ಮನಶ್ಯಾಂತಿಯನ್ನು ಪಡೆದವರೂ ತುಂಬಾ ಮಂದಿ ಇರುವರು. ಅದು ಮಾತ್ರವಲ್ಲ, ಆರಾಧನಾಲಯಗಳು ಹಲವು ಪಟ್ಟುಗಳಲ್ಲಿ ಹೆಚ್ಚಿದೆ, ಆಚಾರ, ಮತ್ತು ನಂಬಿಕೆಯ ಹಿನ್ನೆಲೆಯ ಎಲ್ಲವೂ ಎಲ್ಲಾ ಧರ್ಮ, ಪಂಥಗಳಲ್ಲೂ ಹಲವು ಪಟ್ಟು ಹೆಚ್ಚಿದೆ. ಧರ್ಮದ ಪ್ರವಚನಗಳು ಸಾವಿರ ಪಟ್ಟು ಇಂದಿನ ಕಾಲದಲ್ಲಿ ಹಲವು ಮಾಧ್ಯಮಗಳ ಹಿನ್ನೆಲೆಯಲ್ಲಿ ಹೆಚ್ಚಿದೆ!!! ನಾನು ಹೇಳುತ್ತಿರುವ ಅಂಶವು, ಇಷ್ಟೆಲ್ಲಾ ಆದರೂ, ಜಗತ್ತಲ್ಲಿ ಭಯಾನಕವಾಗಿ ದ್ವೇಷ, ಹಿಂಸೆ, ರಕ್ತಪಾತ, ಅನೈತಿಕತೆಗಳು ಬಹಳ ಹೆಚ್ಚಾಗುತ್ತಾ ಹೋಗುತ್ತಿವೆ ಎಂಬುವುದರ ಬಗ್ಗೆ ಮತ್ತು ಅದರ ಕಾರಣದ ಬಗ್ಗೆಯಾಗಿದೆ. ಅಂದರೆ, ಎಲ್ಲವೂ ಇದೇ ರೀತಿಯಲ್ಲಿ ಮುಂದುವರಿದೇ ಮುಂದೆ ಒಂದು ದಿನ ಅತ್ಯಂತ ಕ್ರೌರ್ಯದ ಹಾಗೂ ಮದುವೆಯೇ ಇಲ್ಲದ ಅನೈತಿಕ ಸಮಾಜ ಸೃಷ್ಟಿಯಾಗುವುದು ಎಂದಾಗುವುದು. ಅದು ತಪ್ಪು ಎಂದು ನಿಮ್ಮ ಮನಸ್ಸಲ್ಲಿ ಬಂದರೆ, ಬರೇ ಐವತ್ತು ವರುಷದ ಹಿಂದೆಯ ಸಮಾಜವನ್ನಾದರೂ ಹೋಲಿಸಿ ನೋಡಿರಿ!!! ಅಲ್ಲಿಂದ ಇಲ್ಲಿಗೆ ಆದ ಆ ಬದಲಾವಣೆ ಒಂದು ಸಾಕು ಮುಂದೆ ನೂರಾರು ವರುಷಗಳಲ್ಲಿ ಏನಾಗಬಹುದು ಎಂದು ಸ್ವತಃ ತೀರ್ಮಾನಕ್ಕೆ ಬರಲು.

ಒಟ್ಟಿನಲ್ಲಿ ಈಗ ನಡೆಯುತ್ತಿರುವುದು ಎಲ್ಲವೂ ಆ ಪ್ರಾಚೀನ ವಾಮಾಚಾರದ ಇರವು ಮತ್ತು ಅವುಗಳ ರಹಸ್ಯಗಳು ತಿಳಿಯದೆ ಇರುವ ರೀತಿಗಳಾಗಿವೆ. ಆದರೆ ಅದು ಧರ್ಮದ ಸರ್ವನಾಶದಲ್ಲಿ ಅಂತ್ಯಕಾಲ ಅಥವಾ ಕಲಿಯುಗ ಎಂದು ಸುಮ್ಮನೆ ಕೂರುವುದು ಹೊರತು ಅದೇನೂ ಮಾಡಲಾರದು!! ಆದುದರಿಂದ ನಾನು ಹೇಳುತ್ತಿರುವುದೆಲ್ಲಾ ಇತ್ತ ಆ ಪ್ರಾಚೀನ ವಾಮಾಚಾರದ ಕಡೆಯ ಆ ಶಾಶ್ವತ ಧರ್ಮನಾಶದ ಪರಿಹಾರ ಮಾರ್ಗದ ಬಗ್ಗೆ ಮಾತ್ರವೆಂದು ತಿಳಿದುಕೊಳ್ಳಬೇಕು.

## ಒಳ್ಳೆಯದು ಮತ್ತು ಕೆಟ್ಟದ್ದು ಎರಡನ್ನು ಸೃಷ್ಟಿಸಿದ್ದು ದೇವರು ಎಂದು ಹೇಳುವುದು ಸರಿಯಾಗುವುದೇ?

ಉತ್ತರ- ಪುರಾಣ ಕಥೆಯನ್ನು ಹಿಂಬಾಲಿಸಿ ಹೋದಲ್ಲಿ ಹೀಗೆಲ್ಲಾ ಅನಾಹುತಗಳಾಗುವುದು ಸ್ವಾಭಾವಿಕವಾಗಿದೆ. ಸೃಷ್ಟಿಕರ್ತನು ಎಲ್ಲವನ್ನೂ ಸೃಷ್ಟಿಸಿದ್ದಾನೆ ಎಂಬ ಪುರಾಣದಲ್ಲಿ ಮಾತು ಸರಿಯಾಗಬೇಕಿದ್ದರೆ ಮೇಲಿನ ರೀತಿಯ ವಿವರಣೆ ಅನಿವಾರ್ಯವಾಗುವುದು. ಇಲ್ಲವಾದರೆ ಕೆಟ್ಟದ್ದನ್ನು ಸೃಷ್ಟಿಸಲು ಇನ್ನೊಬ್ಬ ಸೃಷ್ಟಿಕರ್ತನನ್ನು ತರಬೇಕಾಗುವುದು. ಎರಡು ಸೃಷ್ಟಿಕರ್ತರು ಸಾಧ್ಯವಿಲ್ಲದ ಕಾರಣ "ಎಲ್ಲವನ್ನೂ ಸೃಷ್ಟಿಕರ್ತನೇ ಮಾಡುವನು" ಎಂದು ಹೇಳಿರುವುದು. ಹೀಗೆ, ಈ ರೀತಿಯಲ್ಲಿ ತಮ್ಮಲ್ಲಿ ಕೇಳಿದ ಪ್ರಶ್ನೆಗೆ ಸುಲಭದಲ್ಲಿ ಉತ್ತರವನ್ನು ಹೇಳಿ ಆರಾಮವಾಗಿ ಧರ್ಮಪಂಡಿತರುಗಳು ಕೂತಿರುವರು! ಆದರೆ, ಅದರ ನಂತರ ಅಲ್ಲಿ ಏನು ಸಂಭವಿಸುವುದು ಎಂಬುವುದರ ಬಗ್ಗೆ ಅವರು ತಲೆಕೆಡಿಸಿಕೊಂಡಿಲ್ಲ ಎಂಬುವುದು ನಿಜವಾಗಿಯೂ ಅಚ್ಚರಿಯನ್ನು ಉಂಟುಮಾಡುವುದು! ಅಲ್ಲಿ ತಮ್ಮ ತಮ್ಮ ದೇವರುಗಳನ್ನು ಅಧಃಪತನದ ಕೂಪಕ್ಕೆ ತಳ್ಳಿಹಾಕಿರುವುದು ಎಂಬ ಸತ್ಯವನ್ನು ಅವರು ಅರಿತಿಲ್ಲ ಎಂದು ತೋರುವುದು. ಉದಾಹರಣೆಗೆ, ನಾಯಕ ಮತ್ತು ಖಳನಾಯಕ ಒಬ್ಬನೇ ಆಗಿರುವ ಒಂದು ನಾಟಕವಾಗಲಿ ಅಥವಾ ಸಿನೆಮವಾಗಲಿ ತೋರಿಸಿಕೊಡಿ, ನಿಮಗೆ ಸಾಧ್ಯವಾಗುವುದೇ? ಇಲ್ಲ, ಯಾಕೆಂದರೆ ಅಂಥಹ ವ್ಯಕ್ತಿತ್ವವು ವಿಕೃತ ಮನಸ್ಸಿನ ಮಾನವನನ್ನು ಮಾತ್ರ ತೋರಿಸುವುದು ಹೊರತು ಸಾಮಾನ್ಯ ಮಾನವನ ಸ್ವಭಾವವನ್ನೂ ತೋರಿಸುವುದಿಲ್ಲ. ಸಾಮಾನ್ಯ ಮಾನವವರು ಯಾರೂ ತನ್ನದೇ ಮಗುವಿಗೆ ಆಹಾರ ಬಟ್ಟೆಯನ್ನು ಪ್ರೀತಿಯಿಂದ ಕೊಟ್ಟು, ಸ್ವಲ್ಪ ಕಳೆದ ನಂತರ, ಆ ಮಗುವಿನ ಕಾಲು ಮುರಿದು ಹಾಕುವ ಅಥವಾ ಇನ್ನಾವ ಕಷ್ಟವನ್ನು ಕೊಡುವ ರೀತಿಯಲ್ಲಿ [ವಿಕೃತವಾಗಿ] ವರ್ತಿಸಲಾರ. ಆದರೆ ಧರ್ಮಪಂಡಿತರುಗಳು ಈ ವಿಕೃತ ಸ್ವಭಾವವನ್ನು ತಮ್ಮ ದೇವರಿಗೇ ಕೊಟ್ಟು ಆರಾಮವಾಗಿ ಕೂತಿದ್ದಾರೆ!!! ಪ್ರತಿಯೊಂದಕ್ಕೂ "ದೇವರು ಮಾನವನನ್ನು ಪರೀಕ್ಷೆ ಮಾಡಲು ಹಾಗೆ ಮಾಡಿದನು" ಎಂದು ಜಾರಿಕೊಳ್ಳುವವರು ದೇವರು ವಿಕೃತ ಕಾಮ, ಅಸೂಯೆ, ಹಗೆತನ, ಶೋಷಣೆ, ಕಳ್ಳತನ, ವಂಚನೆ, ವೇಶ್ಯಾವಾಟಿಕೆ, ಇತ್ಯಾದಿ ಸಾವಿರಾರು ಕೆಟ್ಟತನವನ್ನು ಸೃಷ್ಟಿಸಿದನೆಂದರೆ ಒಪ್ಪಲು ಆಗುವುದೇ? ಇನ್ನು, ಆತನು ಸೃಷ್ಟಿಸಿರುವ ಒಳ್ಳೆಯತನವು ಬಹಳ ಕಡಿಮೆ ಮತ್ತು ಇಂಥ ನೀಚ ಕೆಟ್ಟತನ ಬಹಳ ಹೆಚ್ಚು ಎಂದು ಆಗುವುದು! ಅಂದರೆ, ಸೈತಾನನ ಭಾಗವೇ ಆತನಲ್ಲಿ ಹೆಚ್ಚು ಆಗುವುದು, ಹಾಗಿರುವಾಗ, ಇನ್ನೊಬ್ಬ ಸೈತಾನನ ಅಗತ್ಯವೇನು? ನಿಜವಾಗಿಯೂ ಇದಕ್ಕಿಂತ ದೊಡ್ಡ ದೈವ ನಿಂದನೆ ಇನ್ನಾವುದು ಇದೆ? ಇದಕ್ಕಿಂತ ದೊಡ್ಡ ಅಧರ್ಮ ಇನ್ನಾವುದು ಇದೆ? ಧರ್ಮ, ಅಧರ್ಮ ಮಿಶ್ರವಾಗಿರುವ ಪಾತ್ರೆಯಿಂದ ಇನ್ನು ಹೇಗೆ ಇವರು ಧರ್ಮವನ್ನು ಮಾತ್ರ ಜನರಿಗೆ ವಿವರಿಸುವರು?

ಮಹಾತ್ಮರು ಎಂದಿಗೂ ದೇವರ ಮೇಲೆ ಈ ತಪ್ಪನ್ನು ಮಾಡಲಾರರು. ಅವರು ಎಂದೆಂದಿಗೂ ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೈತಿಕತೆಯ ನಿಧಿಯೆಂದು ಮಾತ್ರ ದೇವರನ್ನು ವಿವರಿಸುವರು. ಹಾಗಾಗಿ ಮಹಾತ್ಮರ ದೇವನು ಎಂದೂ ಪವಿತ್ರತೆಯ ಅದ್ಭುತ ದೇವರೇ ಆಗಿ, ಜಗತ್ತಿನ ಎಲ್ಲಾ ದೇವರುಗಳಲ್ಲಿ, ಮಾನವನ ಹೃದಯದ ಸದ್ಗುಣಗಳಲ್ಲಿ, ಮತ್ತು ಅವುಗಳ ಕಾರಣಗಳಲ್ಲಿ ಕಲ್ಪಾಂತ್ಯದವರೆಗೂ ನೆಲೆಯಾಗಿ ಇರುವನು.

## ಆವರ್ತನೆಯ ಜಪವು ಮಹಾತ್ಮರನ್ನು ಸೃಷ್ಟಿಸಲಾರದು ಎಂದು ನೀವು ಹೇಳುವಿರಿ, ಹಾಗಿದ್ದರೆ, ವಾಲ್ಮೀಕಿಯು ಜಪವನ್ನು ಮಾಡಿ ಮನೋಶುದ್ಧಿಯನ್ನು ಪಡೆಯಲಿಲ್ಲವೇ?

ಉತ್ತರ- ಜಪ ಎಂದರೇನು ಎಂಬುವುದನ್ನು ನಾವು ಮೊದಲು ತಿಳಿಯಬೇಕು. ಜಪದ ಮುಖ್ಯವಾದ ಭಾಗವು ಆವರ್ತನೆಯಾಗಿದೆ. ನಾವು ಜಪ ಮಾಡುವವರಲ್ಲಿ ಜಪಮಾಲೆ ಉಪಯೋಗಿಸಿ ಎಣಿಸುವುದನ್ನು ಎಲ್ಲಾ ಧರ್ಮಗಳಲ್ಲೂ ನೋಡುತ್ತೇವೆ. ಅಂದರೆ, ಜಪಕ್ಕೆ ಯಾವುದೇ ಸಂಕಲ್ಪವು ಸ್ವಂತದ್ದೆಂದು ಇಲ್ಲ ಎಂದು ಅರ್ಥ. ಸಂಕಲ್ಪವೆಂದರೆ "ಇದು ಹೀಗೆ" ಎಂಬ ಒಂದು ಅರ್ಥವನ್ನು ಒಳಗೊಂಡಿರುವುದು. ಸತ್ಯಸಂಧನಾಗಿ ಇದ್ದಲ್ಲಿ, ಒಬ್ಬ ವ್ಯಕ್ತಿಯು ಆತನ ಸಂಕಲ್ಪದಂತೆ ಇರುವ ವ್ಯಕ್ತಿಯಾಗಿ ಕಾಲಕ್ರಮೇಣ ಬದಲಾಗುವನು ಎಂಬುವುದು ಮನೋವಿಜ್ಞಾನವಾಗಿದೆ. ಮನಸ್ಸನ್ನೇ ದಾಟಲು ಪ್ರಯತ್ನಿಸುವ ರಾಜಯೋಗಿಗಳ ಆ ಯೋಗ ಮಾರ್ಗವಾಗಲೀ ಅಥವಾ ಜ್ಞಾನಿಗಳ

ಬ್ರುಹ್ಮಭಾವವಾಗಲೀ, ಆತ್ಮದ ಅಥವಾ ಬ್ರುಹ್ಮದ ಪವಿತ್ರತೆಯ ಸಂಕಲ್ಪವನ್ನು ಅನುಸರಿಸಿಯೇ ಇರುವುದು.

ವಾಲ್ಮೀಕಿಯಲ್ಲಿ, ನಿಜವಾಗಿಯೂ, ಆತನು ಮಾಡಿದ ಜಪವು ಎಣಿಸುವ ಆವರ್ತನೆಯ ರೀತಿಯದ್ದಲ್ಲ ಆತನು ಜಪ ಸರವನ್ನೂ ಎಂದೂ ಉಪಯೋಗಿಸಿರಲಿಲ್ಲ [ಹುತ್ತದೊಳಗೆ ಜಪಸರ ಎಣಿಸಲು ಸಾಧ್ಯವಿಲ್ಲ]. ಆತನನ್ನು ಅಂತ್ಯದಲ್ಲಿ ಮಹಾತ್ಮನನ್ನಾಗಿ ಮಾಡಿದುದು ಆತನಲ್ಲಿ ಮೊದಲಲ್ಲಿ ಉಂಟಾಗಿದ್ದ "ತನ್ನ ತಪ್ಪಿನ ಅರಿವಿನ ಬೋಧ" ವಾಗಿದೆ. ಆ ಬೋಧದ ಫಲವಾಗಿ ಉದಿಸಿದ 'ವೈರಾಗ್ಯ' ವು ಎಷ್ಟು ಇತ್ತೆಂದರೆ ಆತನು ತನ್ನ ಮನೆ, ಹೆಂಡತಿ, ಮಕ್ಕಳು ಎಲ್ಲವನ್ನೂ ಬಿಟ್ಟು ಹೋಗುವಷ್ಟು ಇತ್ತು! ಅದು ಹೆಚ್ಚು ಕಡಿಮೆ ಬುದ್ಧನ ವೈರಾಗ್ಯದಷ್ಟೇ ಇತ್ತು ಎಂದು ಸ್ಪಷ್ಟವಾಗುವುದು! ಅಂದರೆ, ಆತನ ಮನಸ್ಸು ತಾನು ಮಾಡಿದ ತಪ್ಪನ್ನು ತಾನೇ ಅತ್ಯಂತ ಮೇಲೆ ಎತ್ತಿ ಹಿಡಿದುದರ [ಆತ್ಮಾವಲೋಕನದ] ಪರಿಣಾಮವಾಗಿ ಅದು ಆತನಿಗೆ ಅತ್ಯಂತ ಶಕ್ತಿಯುತವಾದ ಪಶ್ಚಾತಾಪವನ್ನು ತಂದುಕೊಟ್ಟಿತು. ಇದು ಆತನಲ್ಲಿ ಅತ್ಯಂತ ಮೇಲಿನ ವೈರಾಗ್ಯವನ್ನು ಮೂಡಿಸಿತು ಎಂದು ಅರ್ಥ. ಇಲ್ಲಿ ಒಂದು ಸತ್ಯವು ನಮಗೆ ಸ್ಪಷ್ಟವಾಗುವುದು, ಯಾರು ತನ್ನ ತಪ್ಪನ್ನು ಆಳದಲ್ಲಿ ಅರಿತು, ಅತ್ಯಂತ ಹೆಚ್ಚು ಪಶ್ಚಾತಾಪವನ್ನು ಅನುಭವಿಸುವನೋ ಆತನು ಎಷ್ಟೇ ಕೆಟ್ಟವ್ಯಕ್ತಿಯಾಗಿದ್ದರೂ ಅವನಿಗೆ ಮಹಾತ್ಮನಾಗುವ 'ಅರ್ಹತೆ'ಯು ಸೃಷ್ಟಿಯಾಗುವುದು!! ಒಟ್ಟಿನಲ್ಲಿ, ವಾಲ್ಮೀಕಿಯಲ್ಲಿ ತಾನು ಇದುವರೆಗೂ ಮಾಡಿರುವುದು ಅತ್ಯಂತ ದೊಡ್ಡ ತಪ್ಪು ಎಂಬ ಅದೇ ಭಾವನೆಯು ತಳವೂರಿತ್ತು. ಈ ಕಾರಣವಲ್ಲದೆ ವಾಲ್ಮೀಕಿಯು, ತಾನು ಜಪ ಮಾಡುವ ಆ ಶಬ್ದದ ಅರ್ಥವನ್ನೂ ತಿಳಿಯದೆ, 'ಮರ ಮರ' ಎಂದು ಬರೇ ಶಬ್ದವನ್ನು ಮಾತ್ರ ಜಪಿಸಿದರಿಂದ ಈ ಮಹಾತ್ಮನ ಸ್ಥಿತಿಯನ್ನು ಪಡೆದಿದ್ದಲ್ಲ. ಇನ್ನು, ದೇವರ ನಾಮದಲ್ಲಿ ದೇವರ ಮಹಿಮೆಯನ್ನು ಭಕ್ತನು ಸಂಕಲ್ಪಿಸಿದಲ್ಲಿ "ಮಾತ್ರ" ಆ ಜಪವು ಜಪವಾಗಿರದೆ, ಅದು ದೇವರ ಮಹಿಮೆಯ[ಸದ್ಗುಣಗಳ] ಗುಣಗಾನ ಎಂಬ [ಸತ್ಯ]ಚಿಂತನೆಯೇ ಆಗುವುದು. ಆಗ ಅಲ್ಲಿಯೂ ಅದು ಆವರ್ತನೆಯ ಜಪದ ರೀತಿಯಾಗುವುದಿಲ್ಲ! ಒಬ್ಬನು ಆ ಒಂದು ಶಬ್ದವನ್ನು ನಿರಂತರ ಉಚ್ಚಾರ ಮಾಡುವಾಗ, ನಿಜವಾಗಿಯೂ, ಆ ಕ್ರಿಯೆಯು ಇತರ ವಿಚಾರಗಳು ಆತನ ಮನಸ್ಸಿಗೆ ಬಾರದೆ ಅವನ್ನು ತಡೆಯಲು ಸಹಾಯ ಮಾಡುವುದು ಅಷ್ಟೆ. ಅದೇ ರೀತಿಯಲ್ಲಿ, ವಾಲ್ಮೀಕಿಯ ಧ್ಯಾನದ ಆದಿಯಲ್ಲಿ ಇದ್ದ ಆ ಅತ್ಯಂತ ಆಳದ "ಹಿಂಸೆ ಮಾಡುವುದು ತಪ್ಪು, ಹಿಂಸೆ ಮಾಡಲೇಬಾರದು" ಎಂಬ ಭಾವಯುಕ್ತ ಅರ್ಥವು ಯಾವ ಹೊರ ಇತರ ಆಸೆಗಳಿಂದ ಭಾದಿಸಲ್ಪಡದೆ ಜಪದ ಕಾಲದಲ್ಲಿ ಬೆಳೆಯುತ್ತಾ ಹೋಯಿತು.

ಯಾವುದಾದರೂ ಒಂದು ಶಬ್ದವನ್ನು ಮನಸ್ಸನ್ನು ಶಾಂತಗೊಳಿಸುವ ಧ್ಯಾನಕ್ಕೆ ಉಪಯೋಗಿಸುವ ಕ್ರಮವಿದೆ. ಮನಸ್ಸನ್ನು ಶಾಂತಗೊಳಿಸುವ ಧ್ಯಾನಕ್ಕೆ ಸಾಧಾರಣವಾಗಿ ಪ್ರಶಾಂತತೆ ಅಥವಾ ಯಾವುದಾದರೂ ಒಂದು ಸಂಗೀತ ಅದಲ್ಲವಾದರೆ ನದಿ, ಸಾಗರಗಳ ಶಬ್ದವನ್ನು ಅವಲಂಭಿಸುವರು. ಅಂಥವರಲ್ಲಿ ಕೆಲವರು ಸರಾಗವಾಗಿ ಉಚ್ಚರಿಸಲ್ಪಡುವ ದೇವನಾಮವನ್ನು ಉಪಯೋಗಿಸುವುದೂ ಇದೆ. ವಾಲ್ಮೀಕಿಯಲ್ಲಿ, ಅತನು ಅವಲಂಭಿಸಿರುವ ಶಬ್ದವು ಮನೋಶಾಂತಿಯನ್ನೂ ಆತನಿಗೆ ಆಳದಲ್ಲಿ ತಂದು ಕೊಟ್ಟಿತು.

ಹೀಗೆ, ಈ ಮನೋಶಾಂತಿಯ ಬಲವೂ ವಾಲ್ಮೀಕಿಗೆ ಸೇರಿ ಬಂದಾಗ, ಮನೋಶಾಂತಿಯ ಸಾಗರ ಮತ್ತು ಆ ವೈರಾಗ್ಯ ತಂದ ಸತ್ಯಚಿಂತನೆಯ ಕಾರಣದಿಂದ ಹರಿದು ಬಂದ ಆ ಕರುಣಾರಸದ ಮಹಾಸಾಗರಗಳ ಸಂಗಮದ ಮಹಾತ್ಮನಾಗಿ ಉದಿಸಿಬಂದನು!! ಈ ಸಂಗಮ ಸಾಗರಗಳು ಮಹಾತ್ಮರಲ್ಲಿರುವ "ವಿಶಾಲಮನಸ್ಕತೆ"ಯೆಂಬ ಆ ಪವಿತ್ರವಾದ ಸಾರ್ವತ್ರಿಕ ಪ್ರೀತಿಯ ಸಾಗರವಾಗಿರುವುದು ಎಂದು ತಿಳಿಯಬೇಕು. ನಾಮದ ಆವರ್ತನೆಯು ಮಾತ್ರ ಮನೋಶುದ್ಧಿಯನ್ನು ತರುವುದಾದರೆ, ಅಸುರರ ಉದ್ದೇಶ ಏನಿದ್ದರೂ, ಅವರ ಕೋಟಿಗಟ್ಟಲೆ ಜಪವು ಆ ಅಸುರರ ವ್ಯಕ್ತಿತ್ವಗಳಲ್ಲಿ ಬದಲಾವಣೆಯನ್ನು ತರಲೇಬೇಕಾಗಿತ್ತು, ಆದರೆ ಅವರು ಅಷ್ಟು ಜಪವನ್ನು ಮಾಡಿಯೂ ಮತ್ತೂ ಕೆಟ್ಟ ಸ್ವಭಾವದ ವ್ಯಕ್ತಿಗಳಾಗಿ ಬಾಳಿದರು ಎಂಬುವುದನ್ನು ನಾವು ಮರೆಯಬಾರದು. ಕೊನೆಯಲ್ಲಿ, ವಾಲ್ಮೀಕಿಯು ತನ್ನ ಸಾಧನೆಯೆಲ್ಲ ಮುಗಿಸಿದ ಬಳಿಕ ಒಮ್ಮೆ ಕಾಡಲ್ಲಿ ನಡೆಯುತ್ತಾ ಇರುವಾಗ, ಎರಡು ಹಕ್ಕಿಗಳು ತಮ್ಮೊಳಗೆ ಆತ್ಮೀಯವಾಗಿ ಹತ್ತಿರ ಹತ್ತಿರ ಕುಳಿತು ಸಂತೋಷದಿಂದ ಇರುವುದನ್ನು ಕಂಡನು. ಆ ಸಂಧರ್ಭದಲ್ಲಿ, ಇನ್ನೊಬ್ಬ ಬೇಡನು ಅವುಗಳಲ್ಲಿ ಒಂದನ್ನು ಕೊಂದು ಹಾಕಿದನು. ಇದು, ಸಾರ್ವತ್ರಿಕ ಪ್ರೀತಿಯನ್ನು ಹೊಂದಿರುವ, ಆ ಹಿಂದಿನ ಕ್ರೂರ ಬೇಡನ, ಇಂದಿನ ವಾಲ್ಮೀಕಿ ಎಂಬ ಮಹಾತ್ಮ ಹೃದಯಕ್ಕೆ ತಡೆಯಲಾರದಂತೆ ಮಾಡಿತು!

ಮನಸ್ಸನ್ನು ಪವಿತ್ರತೆಯ ಮತ್ತು ಕರುಣೆಯ ಸಾಗರವಾಗಿಸಿದ ಹೇ ಮಹಾತ್ಮರುಗಳೇ, ನಿಜವಾಗಿಯೂ ನೀವೇ ದೇವರುಗಳು.

---

## ಸತ್ಯ ಅಥವಾ ಸತ್ಯದ ಅರಿವು ನಂಬಿಕೆಗಿಂತ ಬಹಳ ಮೇಲು ಎಂದು ಮೊದಲೇ ಹಲವು ಕಡೆ ಉದಾಹರಣೆಯ ಸಹಿತ ನೀವು ವಿವರಿಸಿದ್ದೀರಿ. ಆದರೂ, ಜಗತ್ತು ನಂಬಿಕೆಯಲ್ಲಿ ಹೂತು ಹೋಗಿರುವ ಕಾರಣ, ಇನ್ನೊಂದು ಉದಾಹರಣೆಯ ಮೂಲಕ ಅದನ್ನು ವಿವರಿಸಬಹುದೇ?

ಉತ್ತರ- ಜಗತ್ತು, ಸರಿಯಾದ ಕಾರಣಕ್ಕೆ ತಲೆ ಬಾಗಲೇಬೇಕು. ಈ ಕಾರಣಗಳಿಗೆ ತಲೆ ಬಾಗಿರುವ ಸ್ಪಷ್ಟ ಉದಾಹರಣೆಯೇ ನಮ್ಮ ಮುಂದಿರುವ ಮತ್ತು ನಾವು ಅನುಭವಿಸುತ್ತಿರುವ ಈ ಎಲ್ಲಾ ತರದ ವೈಜ್ಞಾನಿಕ ಸೌಕರ್ಯಗಳಾಗಿರುವುದು. ಅಂದರೆ, ವೈಜ್ಞಾನಿಕವಾದುವೆಲ್ಲಾ "ಕಾರಣ ಸಹಿತ ವಿವರಣೆಯ" ಮೂರ್ತ ರೂಪಾಂತರಗಳಾಗಿವೆ ಎಂದು ಅರ್ಥ. ಇತ್ತ, 'ನಂಬಿಕೆ'ಯು 'ಕಾರಣ ಕೊಡದಿರುವಿಕೆ'ಯ ಮೂರ್ತ ರೂಪಾಂತರವಾಗುವವು! ಕಾರಣವೇ[ಸತ್ಯ ತಿಳಿದಿರುವ ಸ್ಥಿತಿ] ನಿಜವಾಗಿಯೂ ನಮ್ಮ ಜೀವನವನ್ನು ರಕ್ಷಿಸುವುದು. ಪ್ರಳಯ, ಭೂಕಂಪನ ಇತ್ಯಾದಿಗಳ ಮುನ್ಸೂಚನೆಯು ಎಷ್ಟೋ ಜನರ ಜೀವವನ್ನು ರಕ್ಷಿಸುವುದು. ಅದೇ ರೀತಿ, ರೋಗದ ವೇಗದ ಪತ್ತೆಯೂ ಜೀವವನ್ನು ಉಳಿಸಬಹುದು. ಆದರೆ ತರ್ಕವನ್ನು ಕಳಕೊಂಡ ನಂಬಿಕೆಯು ಆ ಭ್ರಮೆಯ ತರದಲ್ಲಿ ಈ ಜಗತ್ತಿನಲ್ಲಿ ಶೋಷಣೆ, ದ್ವೇಷ, ಹಿಂಸೆ, ರಕ್ತಪಾತವನ್ನು ಮಾಡುತ್ತಿದೆ. ಯಾವಾಗ 'ಅರಿವು' ಈ 'ನಂಬಿಕೆ'ಯ ಬದಲು ಬರುವುದೋ, ಆಗ, ಕೊನೆಯ ಪಕ್ಷ, ಅಪರಾಧಗಳು ಇಂದಿನ ಅಪರಾಧಗಳ ಸಂಖ್ಯೆಯ ಅರ್ಧದಷ್ಟಾದರೂ ಇಳಿಯುವುದರಲ್ಲಿ ಸಂಶಯವಿಲ್ಲ. ಇನ್ನು, ಮಹಾತ್ಮರ ಸಂಖ್ಯೆ ಹೆಚ್ಚಾದರೆ, ಅಲ್ಲಿ ಆ ಸಮಾಜವು ಶಾಂತಿಯ ಸ್ವರ್ಗವಾಗಿ ಪರಿವರ್ತಿಸಲ್ಪಡುವುದು ಎಂಬುವುದರಲ್ಲೂ ಸಂಶಯವಿಲ್ಲ.

---

## ಮಾನವ ಜೀವನದಲ್ಲಿ ಯಾವುದಕ್ಕೆ ಹೆಚ್ಚು ಬೆಲೆ ಕೊಡಬೇಕು?

ಉತ್ತರ- ಒಂದು ಎಂಬ ಸಂಖ್ಯೆಯು ಯಾವುದಾದರೂ ಒಂದು ಬಗೆಯ ಅಸ್ತಿತ್ವ ಮಾತ್ರವಾಗಿದೆ. ಅಂದರೆ, ನಿಜವಾಗಿಯೂ ಸಂಖ್ಯೆಯು ಆರಂಭವಾಗುವುದು ಎರಡರಿಂದ ಆಗುವುದು. ನಾವು ಆವರ್ತನೆಯನ್ನು ಆರಂಭಿಸುವಾಗ ಮಾತ್ರ ಸಂಖ್ಯೆಯ ಆರಂಭವಾಗುವುದು!! ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಾವು ಯಾವುದಾದರೊಂದನ್ನು ಪೂರ್ತಿಮಾಡಿ, ಇನ್ನೊಂದು ಅದೇ ತರ ಆವರ್ತಿಸದಿದ್ದರೆ ಮುಂದಿನ ಸಂಖ್ಯೆಯ ಸೃಷ್ಟಿ ಆಗುವುದಿಲ್ಲ!

ನಾವು ಕಾಣುವ ದೊಡ್ಡ ದೊಡ್ಡ ಸಂಖ್ಯೆಗಳು ಯಾವುದೋ ಒಂದು 'ಬಗೆ' ಯ [ಅಸ್ತಿತ್ವದ] ದೊಡ್ಡ ದೊಡ್ಡ ಆವರ್ತನೆಗಳ ಪ್ರತಿನಿಧಿಗಳು ಮಾತ್ರವಾಗಿವೆ ಎಂದರೆ ಅಚ್ಚರಿಯಾಗುವುದಿಲ್ಲವೇ? ಸಾವಿರ ರೂಪಾಯಿ ಅಂದರೆ ಅದು ಸಾವಿರ ಒಂದು ರೂಪಾಯಿಗಳ[ಅವುಗಳು ಬೇರೆ ಬೇರೆ ರೂಪಾಯಿಗಳಾದರೂ] ಸಾವಿರ ಆವರ್ತನೆಯಾಗಿದೆ, ಅಂದರೆ, ಐದು ರೂಪಾಯಿಗಳ ಸಾವಿರ ಆವರ್ತನೆ ಅಲ್ಲ! ಸಾವಿರ ಡಾಲರ್ ಆದರೆ, ಅಲ್ಲಿ ವ್ಯತ್ಯಾಸ ಇರುವುದು "ಡಾಲರ್" ಎಂಬ 'ಬಗೆ'ಯಲ್ಲಿ ಅಥವಾ ಮೂಲ ಅಸ್ತಿತ್ವದಲ್ಲಿ ಮಾತ್ರ ಎಂದು ತಿಳಿಯಬೇಕು. ನೂರು ಹಣ್ಣುಗಳು ಅಂದರೆ ಇದೇ ರೀತಿ ಆಗುವುದು. ಇಲ್ಲಿ, ಅವುಗಳು ಯಾವುದೋ ಒಂದು 'ಬಗೆ'ಯ ಹಣ್ಣಿನ ಆವರ್ತನೆ ಮಾತ್ರವಾಗುವುದು! ಇನ್ನು ಹಲವು ತರದ ಹಣ್ಣುಗಳು ಸೇರಿದ ಬುಟ್ಟಿಯಲ್ಲಿ ನೂರು ಹಣ್ಣುಗಳು ಎಂದರೆ, ಅಲ್ಲಿ ಅವು ನೂರು ತರಕಾರಿ, ಚಕ್ಕುಲಿ, ಇತ್ಯಾದಿಗಳ ನೂರು ಆವರ್ತನೆಯಲ್ಲ ಅದು ನೂರು ವಿವಿಧ ಹಣ್ಣುಗಳ ಆವರ್ತನೆ ಎಂದು ಅರ್ಥವನ್ನು ಕೊಡುವುದು.

ಎಲ್ಲವೂ ನಮಗೆ ಜೀವನದಲ್ಲಿ ಆವರ್ತನೆಯ ರೂಪದಲ್ಲಿ ಸಿಗುವುದು. ಆದುದರಿಂದ ಅದರ ಕಡೆಗೆ ಗಮನ ಅತಿಯಾಗಿ ಕೊಡುವ ಅಗತ್ಯವಿಲ್ಲ. ಆದರೆ, ನಾವು ಎಂದೂ ಸುಖವಾಗಿರಬೇಕೆಂದು ಬಯಸುವ ಆ ನಮ್ಮ ಜೀವನವು ಮಾತ್ರ ಆವರ್ತನಾ ರಹಿತವಾಗಿದೆ, ಮತ್ತು ಅದು ಒಂದೇ ಒಂದು ಸಲ ಮಾತ್ರ ನಮಗೆ ಸಿಗುವುದು. ಆದುದರಿಂದ ನಾವು ನಮ್ಮ ಶಾಂತಿಯ ಆ ಆನಂದದ ಜೀವನಕ್ಕಾಗಿ ಎಲ್ಲಕಿಂತಲೂ

ಹೆಚ್ಚು ಗಮನ ಹರಿಸಬೇಕಾಗುವುದು. ಬರೇ ಜಿಪುಣನ ಜೀವನದ ಅವಸ್ಥೆಯನ್ನು ಆಲೋಚಿಸಿರಿ. ಆತನು ತನ್ನ ಜಿಪುಣತನ ಒಂದರಲ್ಲೇ ಪ್ರತಿ ದಿನವೂ ಕಣ್ಣಿಲ್ಲದವರಿಗಿಂತಲೂ ಹೆಚ್ಚು ಕೊರಗುವನು!! ಅಂದರೆ, ಸಾಮಾನ್ಯರಿಗೆ ಆ ಹಣ ಕರ್ಚು ಮಾಡುವಾಗ ಹೊಟ್ಟೆ ಉರಿಯುವ ಅನುಭವ ಆಗುವುದಿಲ್ಲ ಎಂದು ಅರ್ಥ. ಇನ್ನು, ಅಸೂಯೆಯವನ ಅವಸ್ಥೆ, ಮದದಲ್ಲಿರುವವನ ಅವಸ್ಥೆ, ಎಂದು ಈ ಎಲ್ಲವೂ ಮಾನವನಿಗೆ ಆ ಆನಂದದ ಜೀವನ ಕೈ ತಪ್ಪುವಂತೆ ಮಾಡುವಲ್ಲೇ ಇರುವವುಗಳು ಎಂಬುವುದನ್ನು ನೆನಪಿಡಬೇಕು.

ನಾವು ಮಾಡುವ ಎಲ್ಲವೂ ಉತ್ತಮ ಜೀವನಕ್ಕಾಗಿ, ಅಂದರೆ ಆನಂದ, ಶಾಂತಿಯ ಜೀವನಕ್ಕಾಗಿ. ಆದರೆ ಹೆಚ್ಚಿನವರೂ ಈ ಆನಂದದ ಜೀವನವನ್ನು ಜಗಳ, ಅಹಂಕಾರ, ಅಸೂಯೆ ಇತ್ಯಾದಿಗಳಲ್ಲಿ ಮೊದಲೇ ಕಳಕೊಂಡು, ಅದನ್ನು ದಿನ ನಿತ್ಯವೂ ಬದಲಾಗುವ ವ್ಯಕ್ತಿತ್ವದ ಜೀವನವಾಗಿಯೂ ಪರಿವರ್ತಿಸಿಕೊಂಡಿದ್ದಾರೆ!! ಅಂದರೆ, ವ್ಯಕ್ತಿತ್ವವು, ಸಾಗರವನ್ನು ಸೇರುವ ತನಕ ಕಡಿಯದ ನದಿಯ ತರ ಇರಬೇಕೇ ಹೊರತು ಅದು ದಿನಕ್ಕೊಂದರಂತೆ ಬದಲಾಗುವ ತರ ಇರಬಾರದು. ಇದರಿಂದಾಗಿ ಆತನಿಗೆ ಒಂದು ಶಾಶ್ವತ ವ್ಯಕ್ತಿತ್ವವೇ ಸೃಷ್ಟಿಯಾಗುವುದಿಲ್ಲ. ಶಾಶ್ವತ ವ್ಯಕ್ತಿತ್ವವಿಲ್ಲದ ಆ ದಿನಗೂಲಿಯ ತರದ ಆ ವ್ಯಕ್ತಿತ್ವದವನಿಗೆ, ಹಿಂದಿನ ಮತ್ತು ಮುಂದಿನ ದಿನಗಳ ಬರವಸೆ ಇಲ್ಲದಿರುವುದರಿಂದ, ಜೀವನದ ಒಂದು ಕಿರುಗಾಳಿಯೂ ಬಿರುಗಾಳಿಯ ತರವಾಗಿಬಿಡುವುದು. ಆತನು ಮಹಾತ್ಮನೆಂದೂ ಆಗಲಾರನು, ಮಾತ್ರವಲ್ಲ ನಂಬಲರ್ಹನಲ್ಲದ ವ್ಯಕ್ತಿಯಾಗಿ, ಯಾರ ಪ್ರೀತಿಗೂ ಪಾತ್ರನಾಗದ ಜೀವನವನ್ನು ನಡೆಸಿ, ಎಲ್ಲರೂ ಒಟ್ಟಿಗೆ ಇದ್ದರೂ, ಆ ನಿತ್ಯ ಅನಾಥನ ಜೀವನವನ್ನು ಮುಗಿಸಬೇಕಾಗುವುದು! ಆದುದರಿಂದ ಜೀವನ ಎಂಬ ಈ ಆವರ್ತನಾ ರಹಿತ ನಿಧಿಯನ್ನು ಅನುಭವಿಸಬೇಕಾದರೆ, ಅನಗತ್ಯವಾದವುಗಳು ಯಾವುದು ಎಂಬುವುದನ್ನು ಮೊದಲು ಹುಡುಕಿ ಅದನ್ನು ಕಡಿಮೆಗೊಳಿಸಬೇಕಾಗುವುದು.

ಮಾನವರಲ್ಲಿ "ನನಗೆ ಖುಷಿ ತೋರುವುದೇ ನನ್ನ ಉತ್ತಮ ಜೀವನ" ಎಂದು ಹೇಳುವವರು ಇರುವರು, ಆದರೆ ಇಂದಿನ ಖುಷಿಯ ಸಿಹಿ ರುಚಿಯು ನಾಳೆಯ ಕಹಿ ರುಚಿಯಾಗುವಾಗ ಆತನು ನಾಳೆ ಇನ್ನೊಬ್ಬ ವ್ಯಕ್ತಿಯಾಗುವನು, ಅದೂ ಕಹಿಯಾಗುವಾಗ ಇನ್ನೊಂದು ದಿನ ಮತ್ತೊಂದು ವ್ಯಕ್ತಿತ್ವವನ್ನು ಪಡೆವನು!!!! ಈ ರೀತಿಯಲ್ಲಿ ಸಾಯುವುದರೊಳಗಾಗಿ ಸಾವಿರಾರು ವ್ಯಕ್ತಿತ್ವವನ್ನು ಪಡೆಯುವನು. ಅಂದರೆ, ಖುಷಿಯ ಬೆನ್ನತ್ತಿ ಹೋದಲ್ಲಿ ಅದು ಯಾವುದೇ ವ್ಯಕ್ತಿತ್ವವನ್ನು ಆತನಲ್ಲಿ ಶಾಶ್ವತವಾಗಿ ರೂಪಿಸುವುದಿಲ್ಲ, ಬದಲು ಆತನ ಖುಷಿಯು ಆತನ ವ್ಯಕ್ತಿತ್ವವನ್ನು ಬದಲಿಸುತ್ತಾ ಇರುವುದು ಎಂದು ಅರ್ಥ! ಅಂಥವರಿಗೆ ಸತ್ಯ, ಪ್ರೀತಿ, ನೈತಿಕತೆಯು ಇರುವುದಿಲ್ಲ. ಅವರಿಗೆ ಶಾಶ್ವತ ಗೆಳೆಯರು ಇರಲಾರರು. ಈ ರೀತಿಯಲ್ಲಿ ಜೀವನವು ಸೋಲನ್ನು ಕಾಣುವುದು.

ಮಹಾತ್ಮರ ಜೀವನವನ್ನು ಅನುಸರಿಸುವಾಗ, ಅದು ಪೂರ್ತಿ ಜೀವನವನ್ನು ಒಟ್ಟಾಗಿ ಉತ್ತಮಗೊಳಿಸುವಲ್ಲಿ ಹೆಚ್ಚು ಗಮನಿಸುವುದು. ಆಗ, ಅಲ್ಲಿ ನಾವು ನಿತ್ಯ ತೃಪ್ತರಾಗಿರುತ್ತೇವೆ. ತೃಪ್ತಿ ಇದ್ದಲ್ಲಿ ಮಾತ್ರ ಶಾಂತಿ ಇರಲು ಸಾಧ್ಯ, ಹೀಗೆ, ನಮ್ಮ ಜೀವನವೆಂಬ ನಿಧಿಯನ್ನು, ನಗರದಲ್ಲಿದ್ದರೂ ಅಥವಾ ಒತ್ತಡದ ಕೆಲಸಗಳಲ್ಲಿ ಇದ್ದರೂ, ನಿಜವಾಗಿಯೂ ಆನಂದಿಸುವಂತೆ ಮಾಡುವುದು.

---

## ಜಗತ್ತಲ್ಲಿ ಧರ್ಮ ಮತ್ತು ಅಧರ್ಮವನ್ನು 'ನೇರ-ಸತ್ಯ'ದ ಹಿನ್ನೆಲೆಯಲ್ಲಿ ಚುಟುಕಾಗಿ ಹೇಗೆ ವಿವರಿಸಬಹುದು?

ಉತ್ತರ- ನನ್ನ ಸಹೋದರ, ಈ ಪ್ರಶ್ನೆಯನ್ನು ಏನೋ ನೀವು ಕೇಳಿದ್ದೀರಿ. ಆದರೆ ದಯವಿಟ್ಟು ಅದರ ಉತ್ತರವನ್ನು ಕೇಳುವಷ್ಟು ಹೃದಯವಂತಿಕೆಯನ್ನು ಇಟ್ಟುಕೊಳ್ಳಲು ಮೊದಲು ಕೇಳಿಕೊಳ್ಳುತ್ತೇನೆ!

ಸತ್ಯವನ್ನು ಸತ್ಯದ ರೂಪದಲ್ಲೇ ಹೇಳುವಾಗ ಅದು ಹೆಚ್ಚಿನ ಜನರಿಗೂ ಹಿಡಿಸುವುದಿಲ್ಲ ಎಂದು ಗೊತ್ತಿದೆಯಲ್ಲಾ. ಸತ್ಯವು ಸತ್ಯವಂತರಿಗೆ ಮಾತ್ರ ಸಿಹಿಯಾಗುವುದು. ಆದರೆ, ಇತರರಿಗೆ ಕಹಿಯಾಗುವುದು. ಇಲ್ಲಿ, ಮೊದಲು ಆಧ್ಯಾತ್ಮವನ್ನು ಧರ್ಮದಿಂದ ಪ್ರತ್ಯೇಕಿಸಿರಿ, ಯಾಕೆಂದರೆ, ಅದು ಪ್ರತಿ ಧರ್ಮದಲ್ಲೂ ಬೇರೆ ಬೇರೆಯಾಗಿರುವುದು. ಮಾತ್ರವಲ್ಲ, ಅದಕ್ಕೆ ಆಧ್ಯಾತ್ಮವೆಂಬ ಒಂದು ಪ್ರತ್ಯೇಕ ಶಬ್ದವೇ ಇದೆಯಲ್ಲಾ? ಇನ್ನು, ನೇರ-ಸತ್ಯದಲ್ಲಿಯೇ ಹೇಳಬೇಕಿದ್ದರೆ, ಅದು ನಿಸ್ಪಕ್ಷಪಾತತೆಯೇ ಧರ್ಮ ಮತ್ತು ಪಕ್ಷಪಾತತೆಯೇ ಅಧರ್ಮವಾಗುವುದು ಎಂದು ಹೇಳಬೇಕಾಗಿದೆ! ಯಾಕೆಂದರೆ, ತಮಗೆ ಮಾತ್ರವೆಂದು ಎಂದಿಗೂ ಹೇಳಲು ಸಾಧ್ಯವಾಗದ ಆ ಸಾರ್ವತ್ರಿಕ ಸತ್ಯವೇ ಧರ್ಮದ ಬೆನ್ನೆಲುಬು

ಆಗಿರುವುದು ಮತ್ತು ಅದಿಲ್ಲವಾದಲ್ಲಿ ಧರ್ಮ ಮತ್ತು ದೇವರು ಈ ಎರಡೂ ಸಾಧ್ಯವಿಲ್ಲ ಎಂದು ನಮಗೆ ತಿಳಿದಿದೆ. ಸಾರ್ವತ್ರಿಕ ಸತ್ಯದ ಆ ನಿಜವಾದ ಧರ್ಮವೇ ನಿಮಗೆ ಬೇಕಿದ್ದಲ್ಲಿ, ಮೊದಲಿಗೆ ನಿಸ್ಪಕ್ಷಪಾತತೆಯನ್ನು ತಾಳಲೇಬೇಕಾಗುವುದು. ಇನ್ನು, ಪಕ್ಷಪಾತಿಗೆ ಯಾವ ಸತ್ಯವೂ ಇಲ್ಲ ಮತ್ತು ಯಾವ ಧರ್ಮವೂ ಇಲ್ಲ ಮಾತ್ರವಲ್ಲ, ಅಂಥವರು ಧರ್ಮವೇ ಹೇಳುವ ಪ್ರಕಾರ ಅತ್ಯಂತ ನಿಕೃಷ್ಟರು ಆಗುವರು. ಇಷ್ಟೇ ಸಹೋದರ, ಚುಟುಕು ಮಾತುಗಳಲ್ಲಿ ವಿವರಿಸಲಿರುವುದು. ಆದರೆ, ಹೃದಯವಂತಿಕೆ ಬೇಕು ಎಂದು ಅಂದೆನಲ್ಲ ಅದು ಯಾಕೆ ಗೊತ್ತಾ? ಅದು ಈ ಪರಮ ಸಾರ್ವತ್ರಿಕ ಸತ್ಯದ ಹಿನ್ನೆಲೆಯ ಆ ಪಕ್ಷಪಾತ ರಹಿತವಾದ ನಿಟ್ಟಿನಲ್ಲಿ ನಿಮಗೆ ಈ ಜಗತ್ತಲ್ಲಿ ಎಲ್ಲೂ ಯಾವೊಂದು ಧರ್ಮ, ಪಂಥ, ಸಿದ್ಧಾಂತ, ಪರಂಪರೆ ಎಂದು ಯಾವುದೂ ಸಿಗಲಾರದೆಂಬ ಬೆಚ್ಚಿ ಬೀಳಿಸುವ ಸತ್ಯವನ್ನು ಅರಗಿಸಿಕೊಳ್ಳುವುದಕ್ಕಾಗಿತ್ತು!! ಎಲ್ಲವೂ ಬೇಲಿಯೊಳಗಿನ ಅಥವಾ ಹಿಂದೆ ಮಹಾತ್ಮರು ಹೇಳಿರುವಂತೆ ಬಾವಿಯೊಳಗಿನ ಕಪ್ಪೆಗಳು. ಅಂದರೆ, ತಮ್ಮ ಬಾವಿಯೇ "ಸಾಗರ" ಎಂದು ಹೇಳಿಕೊಳ್ಳುವ ರೀತಿ ಮಾತ್ರವಾಗಿವೆ!!

ಕುಳಿತು ಸತ್ಯಸಂಧವಾಗಿ ಆಲೋಚಿಸಿ ನೋಡಿದಾಗ ತಿಳಿವುದು, ಎಲ್ಲವೂ "ತಮ್ಮ ಪರ" ಎಂಬ ರೀತಿಯಲ್ಲಿ ಮಾತ್ರ ಬೆಳೆದು ಬಂದಿವೆ ಎಂದು!! ಧರ್ಮವನ್ನು ಎಂದೂ "ತಮ್ಮ ಪರ" ಎಂಬ ರೀತಿಯಲ್ಲಿ ವಿವರಿಸಲು ಸಾಧ್ಯವೇ ಇಲ್ಲ, ಅದು ನ್ಯಾಯಾಧೀಶನು ಕಳ್ಳತನ ಮಾಡುವುದನ್ನು 'ಸರಿ' ಎಂದು ಸಾರಿದಷ್ಟು ಭೀಕರ ವಿರೋಧಾಭಾಸವಾಗುವುದು! ಇನ್ನಾದರೂ ಮಾನವರು, ಈ ಎಲ್ಲದಕ್ಕೂ ಕಾರಣವಾಗಿರುವ, ಆ ನಂಬಿಕೆಯ ಅಂಧತೆಯಿಂದ ಹೊರಬಂದು ಸತ್ಯದ ಬೆಳಕನ್ನು ಪಡೆಯಲು ಪ್ರಯತ್ನಿಸುವರೆಂದು ಆಶಿಸೋಣ. ಆ ಪ್ರಾಚೀನ ವಾಮಾಚಾರವು ಮಾನವನನ್ನು ಹೇಗೆ ತನ್ನ ಅಂಕೆಯಲ್ಲಿ ಇದುವರೆಗೂ ಹಿಡಿದಿರಿಸಿಕೊಂಡು ಬಂದಿದೆ ಎಂಬುವುದು ನಮಗೆ ಮತ್ತೂ ಇಲ್ಲಿ ಸ್ಪಷ್ಟವಾಗುವುದು.

---

## ನೀವು ಮನೋ ವಿಜ್ಞಾನವೇ ಅಲ್ಲದೆ ಸೂಕ್ಷ್ಮ ಜಗತ್ತಿನಲ್ಲಿ ಬೇರೊಂದಿಲ್ಲ ಎನ್ನುವಿರಲ್ಲ, ಹಾಗಿದ್ದರೆ ಮನೋ ವಿಜ್ಞಾನವು ದೆವ್ವ ಆತ್ಮಗಳನ್ನು ಒಪ್ಪುವುದಿಲ್ಲ ಇದಕ್ಕೆ ನೀವು ಹೇಗೆ ಉತ್ತರಿಸುವಿರಿ?

ಉತ್ತರ- ವಿಜ್ಞಾನವು ಎಂದೂ ನಂಬುವುದನ್ನು ಪ್ರೋತ್ಸಾಹಿಸುವುದಿಲ್ಲ ಮತ್ತು ತರ್ಕವನ್ನು ಪ್ರೋತ್ಸಾಹಿಸುವುದು ಎಂಬ ಕಾರಣದಿಂದ ಇಲ್ಲಿ ವಿವರಣೆಯು ಮತ್ತೂ ಸುಲಭವಾಗುವುದು. ನಿರೀಶ್ವರ ವಾದಿಗಳು ಎಂಬ ಜನರು ಬರೇ ವಾದಿಗಳಾಗಿಬಿಡುವ ಕಾರಣ ಅವರು ಇತರರಂತೆ ನಂಬಿಕೆಯವರೇ ಆಗಿರುವರು. ಅವರ ಕೆಲಸ 'ತಮ್ಮ ಪರ' ವಾದ ಮಾತ್ರವಾಗಿದೆ! ಈ "ಪರ" ಎಂಬುವುದು ಇದ್ದಲ್ಲಿ ಸತ್ಯವು ಎಂದಿಗೂ ಇರುವುದಿಲ್ಲ ಎಂಬುವುದು ಒಂದು ಮಹಾ ಸತ್ಯವಾಗುವುದು.

ಸತ್ಯಸಂಧ ತರ್ಕವು ಮಾತ್ರ ಸತ್ಯವನ್ನು ಹೊರತರಬಹುದಷ್ಟೇ ಎಂದು ನಮಗೆ ತಿಳಿದಿದೆ. ಈಗ ನಾನು ಹೇಳುತ್ತಿರುವುದು ತರ್ಕಬದ್ಧವಾಗಿಯೇ ಇದ್ದಲ್ಲಿ, ಅದರ ಬಗ್ಗೆ ಮನೋ ವಿಜ್ಞಾನಿಗಳಿಗೂ ಚಿಂತಿಸಬಹುದು ಎಂಬ ಕಾರಣಕ್ಕೆ ಮಾತ್ರ ನಾನು ಈಗ ಉತ್ತರವನ್ನು ಹೇಳುವೆನು. ಮೊದಲು ನಾನು ಕಂಡ ರಹಸ್ಯ ಸತ್ಯಗಳನ್ನು ಪ್ರತ್ಯೇಕ ಅಂಶಗಳ ರೀತಿಯಲ್ಲಿ ಚುಟುಕಾಗಿ ಈ ಕೆಳಗೆ ಸೂಚಿಸುವೆನು.

1. ಸೂಕ್ಷ್ಮದ ಸ್ತರಗಳಲ್ಲಿ ಇರುವ ಪ್ರತಿಯೊಂದು ಅಸ್ತಿತ್ವಗಳು ಮಾನವ ಮನೋಶಕ್ತಿಗಳು ಮಾತ್ರವಾಗಿವೆ.

2. ಅವುಗಳಲ್ಲಿ ಚಿಕ್ಕ ಚಿಕ್ಕ ದೇವತೆಗಳು, ಸೃಷ್ಟಿಕರ್ತ ಎಂದು ಹೇಳಿಕೊಳ್ಳುವ ದೇವತೆಗಳು, ದೆವ್ವ, ಮತ್ತೂ ಕೆಳಗಿನ ಭೀಕರ ಪಿಶಾಚಿ,ಇತ್ಯಾದಿ ಹಲವು ಸೇರಿವೆ.

3. ಭೂಮಿಯಲ್ಲಿ ದೇವತೆಗಳಿಗೆ ಮನೋಶಕ್ತಿ[ಆತ್ಮ ಶಕ್ತಿ] ಕೊಟ್ಟು ನಿತ್ಯಪೂಜೆಯ ಮೂಲಕ ಶಕ್ತಿ ಬೆಳೆಸುವ ರೀತಿಯನ್ನು ಹಲವು ತರದ ಆಗಮ ತಂತ್ರ ಶಾಸ್ತ್ರಗಳು ಹೇಳುತ್ತವೆ. ಅವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

4. ಈ ಜಗತ್ತಿನ ಹಲವು ಧರ್ಮ, ಪಂಥಗಳು ಇದ್ದರೂ ಸತ್ತ ನಂತರದ ಆತ್ಮದ ವಿವರಣೆಯನ್ನು "ಒಂದೇ ತರ" ದಲ್ಲಿ ಕೊಟ್ಟಿಲ್ಲ, ಮತ್ತು ಅವು ಇನ್ನೂ ವಾದ ಮಾಡುವುದರಲ್ಲೇ ಇವೆಯಷ್ಟೆ. ಇದು, ಆ ನಿಜವಾದ ಸತ್ತ ನಂತರದ ಆತ್ಮದ ರಹಸ್ಯವು ಇನ್ನೂ ಹೊರಬಂದಿಲ್ಲ ಎಂಬುವುದನ್ನೇ ತೋರಿಸುವುದು!

ಈಗ, ನಾನು ಸೂಕ್ಷ್ಮದಲ್ಲಿ ಕಂಡ ಎಲ್ಲಾ ದೈವಿಕ ಹಾಗೂ ಹಲವು ತರದ ಋಣಾತ್ಮಕ ಅಸ್ತಿತ್ವಗಳು ಎಲ್ಲವೂ ಈ ಮಾನವನ ಮನಸ್ಸಿನಿಂದ ಮಾತ್ರ ತಯಾರಾಗಿರುವ ಅಥವಾ ಬಂದಿರುವ ಅಸ್ತಿತ್ವಗಳಾಗಿವೆ. ಅಲ್ಲಿ, ಸೃಷ್ಟಿಕರ್ತ ಎಂದು ಈ ದೇವತೆಗಳೇ ಹೇಳುವುದನ್ನೂ ನಾನು ಸ್ಪಷ್ಟವಾಗಿ ನೋಡಿದ್ದೇನೆ! ಸೃಷ್ಟಿಕರ್ತನು ಒಬ್ಬನೇ ಎಂದು ಹೇಳುತ್ತಾ, ಧರ್ಮಾಂಧತೆಯಿಂದ [ಆ ಒಬ್ಬನೇ] ಸೃಷ್ಟಿಕರ್ತನ ಈ ಭೂಮಿಯ ಮಕ್ಕಳು, ಹಿಂಸೆ, ರಕ್ತಪಾತವನ್ನು ಮಾಡುತ್ತಾ ಬಂದಿರುವುದಕ್ಕೆ ಇರುವ ಕಾರಣವು ಇದುವರೆಗೂ ಸಿಗದಿರುವುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಮಾತ್ರವಲ್ಲ, ಸೃಷ್ಟಿಕರ್ತನು ಒಂದೇ ರೀತಿಯಲ್ಲಿ ಎಲ್ಲಾ ಕಡೆ ಹೇಳದೆ, ಹಲವು ಕಡೆಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ನಂಬಿಕೆ, ಆಚಾರ, ವಿಚಾರಗಳು ಹೇಳಿರುವುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಈ ರೀತಿ, ಸೂಕ್ಷ್ಮದಲ್ಲಿ ಎಲ್ಲವೂ ಮಾನವನ ಮನಸ್ಸಿನ ಉತ್ಪನ್ನಗಳೇ ಆಗಿರಲು, ಅವನ್ನು ಮನೋ ವಿಜ್ಞಾನಕ್ಕೆ ಸೇರಿಸದೆ ಇನ್ನೇನು ಮಾಡಲಿ?

ಮನೋಶಕ್ತಿಯ ಬಗ್ಗೆ ವಿವರಿಸಿ ಹೇಳುವ ಮನೋ ವಿಜ್ಞಾನವು ಒಂದು ಮುಖ್ಯವಾದುದನ್ನು ಮುಂದೆ ಕಂಡು ಹಿಡಿಯಬೇಕಾಗಿದೆ. ಮನಸ್ಸಿನ ವ್ಯಕ್ತಿತ್ವವನ್ನು ಪ್ರತ್ಯೇಕಿಸಿ ಅವನ್ನು ಉಪಯೋಗಿಸಬಹುದೆಂಬ ವಿಜ್ಞಾನವೇ ಅದಾಗಿದೆ. ಈ ವಿಜ್ಞಾನವನ್ನು ಹಲವು ವಿಧಾನಗಳಲ್ಲಿ ವಿವರಿಸುವುದನ್ನು ನಾವು ದೇವಾಚಾರದಲ್ಲೂ, ವಾಮಾಚಾರದಲ್ಲೂ ಕಾಣುವೆವು. ಜಗತ್ತಿನಲ್ಲಿ ಎಲ್ಲೆಡೆಯೂ ಇವು ಬೇರೆ ಬೇರೆ ರೀತಿಗಳಿಂದ ನಡೆಯುತ್ತಾ ಬಂದಿವೆ. ಆತ್ಮ, ಅಥವಾ ದೆವ್ವ ಅಂದರೆ ಜೀವಂತವಾಗಿರುವಾಗ ಮತ್ತು ಸತ್ತ ನಂತರದ ಮಾನವನ ವ್ಯಕ್ತಿತ್ವವಾಗಿದೆ ಎಂದು ಸಾಮಾನ್ಯವಾಗಿ ಹೇಳಲ್ಪಡುವುದು.

ಇನ್ನು, ಆ ಪ್ರಾಚೀನ ವಾಮಾಚಾರದಲ್ಲಿ, ಈ ಆತ್ಮ, ದೆವ್ವಗಳು, ಆ ಸಾಂಪ್ರದಾಯಿಕವಾಗಿ ಅವುಗಳ ಅಸ್ತಿತ್ವದ ಬಗ್ಗೆ ಇತರ ಕಡೆ ಕೊಟ್ಟಿರುವ ವಿವರಣೆಗಳಿಗಿಂತ ಹೇಗೆ ನಿಜ ಸ್ಥಿತಿಯಲ್ಲಿ ತುಂಬಾ ಭಿನ್ನವಾಗಿವೆ ಎಂಬುವುದನ್ನು ನೋಡೋಣ.

ನಾವು ಮೊದಲು ತಿಳಿದಂತೆ ಜೀವಂತ ಮಾನವನ ಆತ್ಮಗಳು ಬರೇ 'ಒಂದು' ವ್ಯಕ್ತಿತ್ವವನ್ನು ಮಾತ್ರ ಹೊಂದಿರುವುದು ಅಲ್ಲ, ಬದಲು ಅವು ಹುಟ್ಟಿನಲ್ಲೇ ಹಲವು ವ್ಯಕ್ತಿತ್ವವನ್ನು ಹೊಂದಿರುವ ಹಲವು ವ್ಯಕ್ತಿತ್ವಗಳ ಒಂದು ಪುಂಜವಾಗಿದೆ! ಈ ಪುಂಜದಲ್ಲಿ ಸತ್ತ ತನ್ನದೇ ಮನೆಯ ಹಿರಿಯರ ವ್ಯಕ್ತಿತ್ವವು ಇರಬಹುದು ಅದೇ ರೀತಿ, ಇತರ ಕಡೆಯ ಜನರ ವ್ಯಕ್ತಿತ್ವವೂ ಇರಬಹುದು. ಅಂದರೆ, ಬಾಹ್ಯದಲ್ಲಿ ಎಲ್ಲರಿಗೂ ಒಂದು ವ್ಯಕ್ತಿತ್ವವೇ ಇರುವಂತೆ ಕಾಣಿಸಿದರೂ ಎಲ್ಲರ ಒಳಗೆ ಹಲವು ವ್ಯಕ್ತಿತ್ವಗಳ ಒಂದು ಪುಂಜವೇ ಇದೆ ಎಂದು ಅರ್ಥ. ದೆವ್ವ ಮೈಮೇಲೆ ಬರುವುದೆಂದರೆ, ಅದು ಸಹಜವಾದ ಬಾಹ್ಯದ ವ್ಯಕ್ತಿತ್ವದ ಸ್ಥಿತಿಯನ್ನು ಬಿಟ್ಟು, ಆ ಒಳಗಿನ ಪುಂಜದ ಒಂದು ವ್ಯಕ್ತಿತ್ವವು ನೇರವಾಗಿ ಹೊರಗೆ ಪ್ರಕಟವಾಗುವುದಾಗಿದೆ. ಈ ಪುಂಜವಲ್ಲದೆ ಬೇರೆ ಒಂದು ವ್ಯಕ್ತಿತ್ವಕ್ಕೂ ಪ್ರಕಟವಾಗಲು ಸಾಧ್ಯವಿದೆ. ಆದರೆ ಇಲ್ಲಿ ಒಂದು ನಿಯಮ ಅಂದರೆ, ಆ ಪ್ರಾಚೀನ ವಾಮಾಚಾರವು ಬಯಸದೆ ಈ ಕೆಲಸವು ಯಾವುದೂ ಆಗುವುದಿಲ್ಲ!! ಅವುಗಳಿಗೆ ಇಂಥ ಅಪರೂಪದ ಪ್ರಕಟವಾಗುವಿಕೆಯಿಂದ ಲಾಭವಿರುವ ಕಾರಣ ಅವುಗಳು ಅವನ್ನು ಬಹಳ ಅಪರೂಪವಾಗಿ ಮಾಡುವವು. ಈ ರೀತಿ ಅಪರೂಪಕ್ಕಲ್ಲದೆ ಎಲ್ಲರಿಗೂ ಅವು ಮಾಡಿದರೆ, ಎಲ್ಲರಿಗೂ ದೆವ್ವದ ಅಸ್ತಿತ್ವವು ಸ್ಪಷ್ಟವಾಗಿ, ಎಲ್ಲರೂ ಬರೇ ಸ್ವಾರ್ಥಕಲ್ಲದೆ, ಸತ್ಯಸಂಧವಾಗಿ ದೇವರ ಕಡೆಗೆ ತಿರುಗುವ ಸಾಧ್ಯತೆಯನ್ನು ಆ ಪ್ರಾಚೀನ ವಾಮಾಚಾರವು ಅರಿತಿದೆ, ಮತ್ತು ಅದು ಅದಕ್ಕೆ ಬೇಕಾಗಿಲ್ಲ! ಈ ಭೂಮಿಯಲ್ಲಿ ಇದುವರೆಗೂ ದೆವ್ವ ಇದೆಯೋ ಇಲ್ಲವೋ ಎಂದು ಸ್ಪಷ್ಟವಾಗದ ಸ್ಥಿತಿಯೇ ಈಗಲೂ [ದೇವರ ಅಸ್ತಿತ್ವದ ತರವೇ] ಮುಂದುವರಿಯುತ್ತಿರುವುದೂ, ಈ ಪ್ರಾಚೀನ ವಾಮಾಚಾರದ ಆ ಅದ್ಭುತ ನಿಯಂತ್ರಣ ಕಲೆ ಅಥವಾ ಸಾಮರ್ಥ್ಯದಿಂದ ಮಾತ್ರವಾಗಿದೆ. ಮಾನವನು ಸತ್ಯವೆಂದು ಸರಿಯಾಗಿ ಗೊತ್ತಾದಲ್ಲಿ ಎಲ್ಲರೂ ಉತ್ತಮರಾಗಿಬಿಡುವ ಸಾಧ್ಯತೆ ಇರುವ ಕಾರಣ ಅದು ಎಲ್ಲವನ್ನೂ ಗೊಂದಲದಲ್ಲೇ [ಸಂಶಯದಲ್ಲಿ] ಇರಿಸಿಕೊಂಡು ಬರುವ ರೀತಿಯನ್ನೇ ಅನುಸರಿಸಿರುವುದು.

ಇಲ್ಲಿ ಒಂದು ವಿಚಾರವನ್ನೂ ಹೇಳಿ ಮುಗಿಸುವೆನು. ಈ ಪ್ರಾಚೀನ ವಾಮಾಚಾರವು ಒಬ್ಬನಿಂದಲೇ ಸಾವಿರಾರು ಆತನ ಆಂಶಿಕ ವ್ಯಕ್ತಿತ್ವದ ದೆವ್ವವನ್ನು ಆತನು ಜೀವಂತವಾಗಿರುವಾಗಲೇ ತಯಾರಿಸುತ್ತಾ

ಹೋಗುವವು. ಈ ಎಲ್ಲಾ ತಯಾರು ಮಾಡಲ್ಪಟ್ಟ ದೆವ್ವಗಳು ಅದೇ ವ್ಯಕ್ತಿಯ ಮತ್ತು ಆತನದೇ ಕುಟುಂಬದ ಶತ್ರುವಾಗಿ ಮಾತ್ರ ತಯಾರಿಸಲ್ಪಡುವವು!! ಅಂದರೆ, ಒಬ್ಬನ ದೆವ್ವವು ಆತನಿಗೇ ಮೊದಲ ಶತ್ರುವಾಗುವುದು, ಮತ್ತು ಆತನ ಕುಟುಂಬದ ಸದಸ್ಯರಿಗೂ ಶತ್ರುವಾಗುವ ತರದಲ್ಲೇ ತಯಾರಿಸಲ್ಪಡುವುದು ಎಂದು ಅರ್ಥ. ಇದೇ ಕಾರಣದಿಂದಾಗಿ ಮಾತ್ರ ಈ ಭೂಮಿಯಲ್ಲಿ ಜೀವಿಸಿರುವಾಗ ಅತ್ಯಂತ ಪ್ರೀತಿ ಕೊಟ್ಟ ತಂದೆ, ತಾಯಂದಿರು ಕೂಡಾ ಸತ್ತ ನಂತರ "ಪಿತೃ ದೋಷ" ದ ಪ್ರೇತವಾಗಿ ಕಾಣಿಸುವುದು ಮತ್ತು ಮಕ್ಕಳನ್ನು ಕಾಡುವುದು ಎಂಬುವುದನ್ನು ಇಲ್ಲಿ ನೆನೆಯಬೇಕು. ಈ ಪ್ರಾಚೀನ ವಾಮಾಚಾರದ ರೀತಿಯು ಮೊದಲಿಂದಲೇ ಜಗತ್ತಿನಲ್ಲಿ ಎಲ್ಲ ಧರ್ಮ, ಪಂಥದವರಿಗೂ ಒಂದೇ ರೀತಿಯಲ್ಲಿ ಇರುವುದು. ಪ್ರಾಚೀನ ವಾಮಾಚಾರಕ್ಕೆ ಅಗತ್ಯದ ಕೆಲವು ಕಡೆಗಳಲ್ಲಿ ಅವುಗಳು 'ಪಿತೃ ದೋಷ' ದ ತರ ಪ್ರಕಟವಾಗಬೇಕು ಎಂದಾಗ ಅವು ಪ್ರಕಟವಾಗಿ ತಮ್ಮ ಮಕ್ಕಳನ್ನು ಕಾಡುವವು!! ಹಾಗಿಲ್ಲದ ಕಡೆಗಳಲ್ಲಿ, ಅವುಗಳಿಗೆ ಸೂಕ್ಷ್ಮದಲ್ಲಿ ಇತರ ಕೆಲಸ ಕೊಡಲ್ಪಟ್ಟಿರುತ್ತದೆ.

ಇನ್ನು, ಒಬ್ಬನು ಸತ್ತ ನಂತರ, ಆತನು ಜೀವಂತವಾಗಿರುವಾಗ ತಯಾರು ಮಾಡಲ್ಪಟ್ಟ ಆತನದ್ದೇ ಈ ಸಾವಿರಾರು ದೆವ್ವಗಳಲ್ಲಿ ಯಾವ ದೆವ್ವಕ್ಕೆ ನೀವು ಮೋಕ್ಷವನ್ನು ಉಂಟುಮಾಡುತ್ತೀರಿ? ಎಲ್ಲರಿಗೂ ಗೊತ್ತಿರುವುದು ಸಾಯುವಾಗ ಒಂದು ಆತ್ಮ ಹೊರಗೆ ಹೋಗುವುದು ಎಂದಾಗಿದೆ. ಅದರ ಮೊದಲೇ ಹೊರಗೆ ನಡೆದಿರುವ [ಪ್ರತ್ಯೇಕಿಸಲ್ಪಟ್ಟ] ಸಾವಿರಾರು ಆತನದೇ ದೆವ್ವ ವ್ಯಕ್ತಿಗಳು ಅಲ್ಲಿರುವಾಗ, ಮೋಕ್ಷದ ಅರ್ಥವೇ ಇಲ್ಲವಾಗಿಬಿಡುವುದು! ಒಟ್ಟಿನಲ್ಲಿ, ಈ ಜಗತ್ತಿನ ಸಾವಿರಾರು ಬೇರೆ ಬೇರೆ ಮೋಕ್ಷ ಶಾಸ್ತ್ರಗಳು ಬರೇ ಮಾನವನ ವಿಭಜನೆಗೆ ಮಾತ್ರ ಪರೋಕ್ಷವಾಗಿ ಬಳಸಲ್ಪಟ್ಟವು ಅಷ್ಟೆ!!

ಇನ್ನು, ಒಬ್ಬನನ್ನು ಕೊಲೆಗೈದ ನಂತರ ಅವು ಯಾಕೆ ಆ ಕೊಲೆ ಮಾಡಿದವನ ಮೇಲೆ ಹಗೆತನವನ್ನು ಇಟ್ಟು ಆತನನ್ನು ಕೊಲ್ಲುವ ಬದಲು, ತಮ್ಮ ಮನೆಯವರಿಗೇ ಬಂದು ತೊಂದರೆ ಕೊಡುತ್ತದೆ ಎಂಬುವುದಕ್ಕೂ, ಆ ಪ್ರಾಚೀನ ವಾಮಾಚಾರದ, ಅವುಗಳ ತಯಾರಿಯ ರೀತಿಯಾದ "ತನಗೆ ತಾನು ಶತ್ರು, ಮತ್ತು ತಮಗೆ ತಾವೇ ಶತ್ರು" ಎಂಬ 'ರೀತಿಯೇ' ಕಾರಣವಾಗಿದೆ ಎಂಬುವುದನ್ನೂ ತಿಳಿಸುವೆನು.

ಇಲ್ಲಿ, ನನಗೆ ಮನೋಶಾಸ್ತ್ರದವರ ಅಥವಾ ಸಾಂಪ್ರದಾಯಿಕ ಶಾಸ್ತ್ರದವರ ಪರ ಅಥವಾ ವಿರೋಧವಾಗಿ ಮಾತಾಡುವುದಲ್ಲ ಉದ್ದೇಶವಿರುವುದು, ಬದಲು ನಾನು ನೋಡಿದ್ದನ್ನು ತರ್ಕ ಬದ್ಧವಾಗಿ ನಿಮ್ಮ ಮುಂದೆ ಇಡುವ ಪ್ರಯತ್ನವನ್ನು ಮಾಡುವುದು ಮಾತ್ರವಾಗಿದೆ ಎಂದು ತಿಳಿಯಬೇಕು.

---

## ಸತ್ಯಚಿಂತನೆಯಿಂದ ಈ ಜಗತ್ತು ಶಾಂತಿಯನ್ನು ಪಡೆಯಬಹುದು ಎಂಬುವುದಕ್ಕೆ ಇನ್ನೂ ಹೆಚ್ಚಿನ ವಿವರಣೆಯನ್ನು ಕೊಡಬಹುದೇ?

ಉತ್ತರ- ನಂಬಿಕೆಯು ಚಿಂತನೆಯನ್ನೇ ತಡೆ ಹಿಡಿಯಿತು! ಅವನ್ನು ಬಿಟ್ಟು, ಇನ್ನು ನಾವು ತತ್ವ ಶಾಸ್ತ್ರ, ದರ್ಶನ ಶಾಸ್ತ್ರ, ಮತ್ತು ಇತರ ಧಾರ್ಮಿಕ ಶಾಸ್ತ್ರಗಳನ್ನು ನೋಡಿದರೆ, ಅವುಗಳು ತಮ್ಮ ದೃಷ್ಟಿಕೋನಗಳನ್ನು ಮಾತ್ರ ಹೇಳಿದವು, ಹಾಗಾಗಿ ಅವುಗಳು ಅಯಾ ದೃಷ್ಟಿಕೋನಗಳನ್ನು "ತಮ್ಮ ಪರ" ಚಿಂತನೆಯ ಮೂಲಕ ಸಾಧಿಸುವ ಮಂಡನೆ, ಖಂಡನೆಗಳನ್ನು ಮಾಡುತ್ತಾ ಬಂದವು!! ಇವುಗಳು ಇಂದಿಗೂ ಒಮ್ಮತವಾಗಲೂ ಇಲ್ಲ, ಮುಂದೆ ಆಗುವುದೂ ಇಲ್ಲ. ಆ ರೀತಿಯಲ್ಲಿ ಇವುಗಳೆಲ್ಲವೂ ನಂಬಿಕೆ ತರವೇ ಆದವು!!

ನಾನು ನಿಮಗೆ ನಂಬಿಕೆಯನ್ನು ಮತ್ತು ದೃಷ್ಟಿಕೋನಗಳನ್ನು ಕೊಟ್ಟಿಲ್ಲ ಎಂಬುವುದನ್ನು ಪ್ರತ್ಯೇಕವಾಗಿ ತಿಳಿಯಬೇಕು. ಯಾಕೆಂದರೆ ಅವುಗಳಿಗೆ ಆ ಸಾರ್ವತ್ರಿಕ ಸತ್ಯವನ್ನು ಕಂಡುಕೊಳ್ಳುವ ಶಕ್ತಿ ಇಲ್ಲ. ಈ ನಂಬಿಕೆಗಳು ಮತ್ತು ದೃಷ್ಟಿಕೋನಗಳು ಕಲ್ಪಾಂತ್ಯದವರೆಗೂ ಇದೇ ರೀತಿ "ನಮ್ಮದೇ ಸರಿ" ಎಂದು ಹೇಳಿದ್ದನ್ನೇ ಹೇಳುತ್ತಾ ಇರುವವು!! ಸತ್ಯವನ್ನು ನಮ್ಮ ಅಭಿರುಚಿಯ ದೃಷ್ಟಿಕೋನದಲ್ಲಿ ತೀರ್ಮಾನಿಸಲು ಸಾಧ್ಯವಿಲ್ಲ. ಸತ್ಯಕ್ಕಾಗಿ ನಾವು ಮುಕ್ತ ಸತ್ಯಚಿಂತನೆಯನ್ನು ಮಾಡಬೇಕಾಗಿದೆ. ಅದಕ್ಕೆ ನಾವು, ಮೊದಲು ಮಾಡಬೇಕಾದುದು ನಮ್ಮ ಸುತ್ತ, ಹಾಕಿರುವ ಆ "ನಮ್ಮ ಧರ್ಮ", "ನಮ್ಮ ಪಂಥ", "ನಮ್ಮ ಮತ" "ನಮ್ಮ ಗುರು ಪರಂಪರೆ" ಇತ್ಯಾದಿ ಬಂಧನಗಳಿಂದ ಪಾರಾಗಿ, ಆ ಸತ್ಯ, ಧರ್ಮ, ದೇವರು ಎಂದು ಮುಕ್ತವಾಗಿ ಚಿಂತಿಸಲು ಆರಂಭಿಸುವುದಾಗಿದೆ. ಇದರ ಅರ್ಥ ಅವರವರ ದೇವರು, ಧರ್ಮ, ಗುರುಗಳನ್ನು ಬಿಡಬೇಕೆಂದು "ಅಲ್ಲ" ಎಂಬುವುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅಂದರೆ, "ನಮ್ಮದು ಮಾತ್ರವೇ ಸರಿ" ಯೆಂಬ ಭ್ರಮೆಯ ಬಂಧನದಿಂದ ಪಾರಾಗಬೇಕಾಗಿದೆ ಎಂದು ಅರ್ಥ.

ಸತ್ಯವನ್ನು ಯಾವ ದೇವರು ಅಥವಾ ಗುರುಗಳು ಹೇಳಿದರೂ ಅವೆಲ್ಲ ಸತ್ಯವೇ ಆಗುವುದು, ಮತ್ತು ಅಸತ್ಯವನ್ನು ಯಾವ ದೇವರು ಅಥವಾ ಗುರುಗಳು ಹೇಳಿದರೂ ಅವು ಅಸತ್ಯವೇ ಆಗುವುದು ಎಂಬ ನಿಲುವು ನಮಗೆ ಅಗತ್ಯವಾಗಿಯೂ ಬೇಕಾಗುವುದು. ಇನ್ನು, "ನಮ್ಮ ದೇವರು" ಮತ್ತು "ನಮ್ಮ ಗುರುಗಳು ಅಥವಾ ಪ್ರವಾದಿಗಳು" ಎಂಬ ಆ ಭಾವನಾತ್ಮಕ ನಂಟು ಮತ್ತು ಅಂಟುಗಳು ಮಾತ್ರದಿಂದ ನಮಗೆ ಆ ನಿತ್ಯ ಸತ್ಯವು ದೊರಕಬೇಕೆಂದಿಲ್ಲ!! ವಿಜ್ಞಾನವು, ಈ "ನಾವು" ಎಂಬ ಭಾವನಾತ್ಮಕ ನಂಟು, ಅಂಟುಗಳ ಆ ಬಂಧನದಿಂದ ಬಿಡುಗಡೆ ಹೊಂದಿದ ಆ ಸತ್ಯಾನ್ವೇಷಣೆಯ ಮುಕ್ತ ರೀತಿಗೆ ಒಂದು ಉದಾಹರಣೆಯಾಗಿದೆ.

ಜನಸಾಮಾನ್ಯರಿಗೆ ಜಗತ್ತಲ್ಲಿ ಇದುವರೆಗೂ ನಂಬಿಕೆಗಳನ್ನು ಅಥವಾ ಕೆಲವು ನಿರ್ಧಿಷ್ಟ ಚಿಂತನೆಗಳನ್ನು ಪಠಣಕ್ಕಾಗಿ ಕೊಟ್ಟಿರುವವರು ಹೊರತು, ಸಾರ್ವತ್ರಿಕವಾಗಿ, ಜನಸಾಮಾನ್ಯರಿಗೆಲ್ಲ ಆ ಮುಕ್ತವಾದ ಸತ್ಯಚಿಂತನೆಯನ್ನು "ನಿತ್ಯ" ಧಾರ್ಮಿಕ ಅನುಷ್ಠಾನ, ನಿಷ್ಠೆಗಳಾಗಿ ಯಾರೂ ಕೊಟ್ಟಿಲ್ಲ ಎಂಬುವುದು ಶೋಚನೀಯವಾಗಿದೆ! ಅಂದರೆ, "ಚಿಂತಿಸಲು ಮರದಡಿಯ ಆಧ್ಯಾತ್ಮಿಕ ವ್ಯಕ್ತಿ, ಮತ್ತು ಅದನ್ನು ಒಪ್ಪಿಕೊಳ್ಳಲು ಮತ್ತು ಅವನ್ನೇ ಸರಿ ಎಂದು ವಾದ ಮಾಡಲು ಮಾತ್ರ ಸಾಮಾನ್ಯ ಜನರು" ಎಂಬ ರೀತಿಯಲ್ಲೇ ಬಂದಿರುವುದು. ಅಂದರೆ, ಜನಸಾಮಾನ್ಯರಿಗೆ ನಿತ್ಯಾನುಷ್ಠಾನವಾಗಿ ಸತ್ಯಚಿಂತನೆಯು ಇರಲಿಲ್ಲ ಎಂದು ಅರ್ಥ! ಅದನ್ನು ಹಿಂದೆಯೇ ಜನ ಸಾಮಾನ್ಯರಿಗೆ ಕೊಟ್ಟಿರುತ್ತಿದ್ದರೆ, ಇಂದು ಈ ಜಗತ್ತು ಅದ್ಭುತವಾದ ಶಾಂತಿಯ ಮತ್ತು ಆನಂದದ ಸ್ವರ್ಗವೇ ಆಗುತ್ತಿತ್ತು! ಅಂದರೆ, ಪ್ರಾಚೀನ ಕಾಲದಲ್ಲೇ, "ವರ್ಣಗಳು ಎಂಬ ಧರ್ಮವನ್ನು ಪಾಲಿಸಲೇಬೇಕು" ಎಂದು ಜನಸಾಮಾನ್ಯರಿಗೆ ತಿಳಿಸಿದಾಗ, ಜನಸಾಮಾನ್ಯರು ತಮ್ಮ ಚಿಂತನೆಯಿಂದ "ಅದರ ಅಗತ್ಯವೇನು?" ಎಂಬ ಪ್ರಶ್ನೆಯನ್ನು ಹಾಕಿ ಆಳದಲ್ಲಿ ಚಿಂತಿಸಿ ಅದು ಅನಗತ್ಯ ಮತ್ತು ಅಪಾಯಕಾರಿ ಎಂದು ಉತ್ತರವನ್ನು ಹೇಳಿ ಆ ಪೊಳ್ಳು, ಸ್ವಾರ್ಥ, ವಾದಗಳನ್ನು ಅಂದೇ ಅಲ್ಲೇ ಬಿಟ್ಟು ಬಿಡುತ್ತಿದ್ದರು!! ಸ್ಪಷ್ಟ ಅಧರ್ಮವೇ ಆದ ಆ ಮೇಲು ಜಾತಿ ಭಾವನೆ ಮತ್ತು ಆ ಹಿನ್ನೆಲೆಯ ಸಹಸ್ರಾರು ವರುಷಗಳ ಶೋಷಣೆ ಎಂಬುವುದೇ ಸೃಷ್ಟಿಯಾಗುತ್ತಿರಲಿಲ್ಲ!!! ಹಾಗಿದ್ದರೆ, ಯಾವುದು ಈ ಭೀಕರ ಅಧರ್ಮವನ್ನು ಹೊತ್ತುಕೊಂಡು ಇದುವರೆಗೂ ಬಂದಿರುವುದು? ಅದು ಹೇರಲ್ಪಟ್ಟ ಆ ನಂಬಿಕೆಗಳೆಂದು ಸ್ಪಷ್ಟವಾಗುವುದು!!!

ಪವಿತ್ರ ಸತ್ಯಚಿಂತನೆಯ ಪರಿಣಾಮವಾಗಿ ಎಲ್ಲರೂ ಅದ್ಭುತ ಜ್ಞಾನಿಗಳು ಆಗಿರುವಾಗ, ತಾವು ಮಾತ್ರ ಮೇಲೆ ಎಂದು ವಾದ ಮಾಡಿ ನಂಬಿಸಲು ಯಾರಿಗೂ ಸ್ವಲ್ಪವೂ ಸ್ಥಳಸಿಗುತ್ತಿರಲಿಲ್ಲ! ಇತರರಿಗಿಂತ ತಾವು ಶ್ರೀಮಂತರು ಎಂದು ಹೇಳಬೇಕಾದರೆ, ನಮ್ಮಲ್ಲಿ ಇತರರಿಗಿಂತ ಹೆಚ್ಚು ಹಣವಿರುವುದಕ್ಕೆ ಸಾಕ್ಷ್ಯಾಧಾರಗಳು ಬೇಕು. ಹಿಂದೆ, ಜ್ಞಾನವು ಆ ಸತ್ಯಚಿಂತನೆಯಿಂದಾಗಿ ಎಲ್ಲರಲ್ಲೂ ತುಂಬಿರುತ್ತಿದ್ದರೆ, ಯಾರಿಗೂ ತಾವು ಮೇಲಿನ ವರ್ಣ ಅಥವಾ ಮೇಲು ಜಾತಿ ಎಂದು ಹೇಳಲು ಮತ್ತು ಶೋಷಿಸಲು ಅವಕಾಶವೇ ಉಂಟಾಗುತ್ತಿರಲಿಲ್ಲ. ಮಾತ್ರವಲ್ಲ, ಶೋಷಣೆ, ಹಿಂಸೆ, ರಕ್ತಪಾತಗಳು ಖಂಡಿತವಾಗಿಯೂ ಉಂಟಾಗುತ್ತಿರಲಿಲ್ಲ ಎಂದು ಪ್ರತ್ಯೇಕವಾಗಿ ಹೇಳದೆಯೇ ನಮಗೆ ತಿಳಿಯುವುದು.

ಒಟ್ಟಿನಲ್ಲಿ ಹೇಳುವುದಾದರೆ, ನಾನು ಹೇಳುತ್ತಿರುವುದು, ಮೇಲೆ ವಿವರಿಸಿರುವ ರೀತಿಯಲ್ಲಿ, ಜಗತ್ತಿನ ಜನರಿಗೆಲ್ಲ ಒಂದೇ ರೀತಿಯಲ್ಲಿ ಅನ್ವಯವಾಗುವ ಆ ಸತ್ಯಚಿಂತನೆಯನ್ನು ಮಾತ್ರ ಎಂದು ತಿಳಿಯಬೇಕು. ಅಂದರೆ, ಜಗತ್ತಿನ ಸರ್ವರೂ ಸತ್ಯದ ಹಿನ್ನೆಲೆಯಲ್ಲಿ ಚಿಂತಿಸಿ ಸತ್ಯವನ್ನು ಕಂಡುಕೊಳ್ಳಲಿ ಎಂದು ಆಗಿದೆ. ಸತ್ಯವಾಗಿದ್ದರೆ ಅದು ಹಿಂದಿನದಾದರೂ ಅಥವಾ ಇಂದಿನದಾದರೂ ಸತ್ಯವೇ ಆಗುವುದು. ಆದರೆ ಒಂದೇ ಒಂದು ಮತ್ತು ಅತ್ಯಂತ ದೊಡ್ಡ ನಿಬಂಧನೆ ಎಂದರೆ ಸತ್ಯಚಿಂತನೆಗಳು ಎಂದಿಗೂ ಒಬ್ಬೊಬ್ಬರ ದೃಷ್ಟಿಕೋನವಾಗಿರಬಾರದು ಮತ್ತು ಅವುಗಳು ಎಂದಿಗೂ ಮುಕ್ತವಾದ ಆ ಸಾರ್ವತ್ರಿಕ ಸತ್ಯದ ಹಿನ್ನೆಲೆಯಲ್ಲಿ ಮಾತ್ರ ಇರಬೇಕು ಎಂದು ಮಾತ್ರವಾಗಿದೆ.

---

## ಸತ್ಯಚಿಂತನೆಯನ್ನು ನೀವು 'ಕ್ರಿಯಾ ದೇವರು' ಎಂದು ಹೇಳಲು ಕಾರಣವೇನು?

ಉತ್ತರ- ನಾನು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯನ್ನು "ಮೂಲ ದೇವರು" ಎಂದಿರುವೆನು. ಸತ್ಯಚಿಂತನೆಯು ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯ ಕ್ರಿಯಾರೂಪವಾಗಿದೆ. ನಾವು ಈ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂಬ ದೇವರನ್ನೇ ಆಧಾರವಾಗಿಟ್ಟು ಸತ್ಯಚಿಂತನೆ ನಡೆಸುತ್ತೇವೆ. ಆ ಹಿನ್ನೆಲೆಯಲ್ಲಿಯೇ ನಾನು ಸತ್ಯಚಿಂತನೆಯನ್ನು 'ಕ್ರಿಯೆಯಲ್ಲಿರುವ ದೇವರು' ಅಥವಾ "ಕ್ರಿಯಾ ದೇವರು" ಎಂದಿರುವುದು. ಇನ್ನು, ನಾವು ಸಾಹಿತ್ಯದ ಸಹಾಯದಿಂದ ಹೇಳುವುದಾದರೆ ಸತ್ಯ ಚಿಂತನೆಯು ಆ

"ಮೂಲ ದೇವರ" ಪೂಜೆ ಎನ್ನಬಹುದು. ಯಾಕೆಂದರೆ, ಆ ಪವಿತ್ರ ಸತ್ಯಚಿಂತನಾ ವೇಳೆಯಲ್ಲಿ, ದೇವಾಂಶಗಳಾದ, ಆ ಪವಿತ್ರ ಸ್ವಭಾವಗಳು ಮಾನವ ಹೃದಯಗಳಲ್ಲಿ ಸೃಷ್ಟಿಸಲ್ಪಡುವುದು. ಇದು ಇತರ ಯಾಂತ್ರಿಕವಾಗಿ ಮಾಡುವ ಯಾವುದೇ ದೇವರ ಪೂಜೆಯು ಕೊಡುವುದಕ್ಕಿಂತಲೂ, ಸ್ವಭಾವ ಶುದ್ಧಿಯ ಅನುಗ್ರಹವನ್ನು, ಹೆಚ್ಚು ಮತ್ತು ದೇವರಲ್ಲಿ ಬೇಡದೆಯೇ ಕೊಡುವುದು!! ಇನ್ನು, ಈ ಸತ್ಯಚಿಂತನೆಯು ಯಾವುದೇ ಧರ್ಮ, ಪಂಥಗಳಲ್ಲಿ ಹೇಳಲ್ಪಟ್ಟ ಕೆಲವು ನಿಯಮಗಳೋ ಅಥವಾ ಲೆಕ್ಕ ಮಾಡಿ ಹೇಳಿರುವ ಕೆಲವು ಪ್ರತ್ಯೇಕ ಸತ್ಯದ ದೃಷ್ಟಿಕೋನದ ಅಂಶಗಳನ್ನು ಮೆಲುಕು ಹಾಕುವುದಲ್ಲ, ಬದಲು ಈ ಸತ್ಯಚಿಂತನೆಯು ಯಾವ ದೃಷ್ಟಿಕೋನವನ್ನು ಅವಲಂಭಿಸದೆ, ಮತ್ತು ಯಾವ ಪ್ರತ್ಯೇಕ ಧರ್ಮ ಗ್ರಂಥಗಳನ್ನು ಮಾತ್ರ ಆಶ್ರಯಿಸದೆ, ಮಾಡುವ ಆ ಸತ್ಯದ ಹಿನ್ನೆಲೆಯ ಚಿಂತನೆಯಾಗಿದೆ. ಆದಕ್ಕಾಗಿಯೇ, ಈ ಕ್ರಿಯಾ ದೇವರನ್ನು ಎಂದೂ ಒಂದು ಹರಕೆ ಅಥವಾ ಆಚಾರದ ತರ ಮಾಡಬೇಡಿ ಎಂದಿರುವುದು. ಅದೇ ರೀತಿಯಲ್ಲಿ, ಈ ಮೂಲ ದೇವರಿಂದ ಅಥವಾ ಈ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೈತಿಕತೆಗಳಿಂದ ಎಂದಿಗೂ ಜಾತೀ ಶೋಷಣೆ ಮತ್ತು ಧರ್ಮಾಂಧತೆ ಇತ್ಯಾದಿಗಳು ಸೃಷ್ಟಿಯಾಗಲಾರವು ಎಂಬುವುದು ಖಂಡಿತ, ಮತ್ತು ಅವು ಅವುಗಳನ್ನು ಸಹಜವಾಗಿ ಮತ್ತು ಶಾಂತವಾಗಿ ತಡೆಯುವಲ್ಲಿ ಮಾತ್ರ ಸಹಾಯ ಮಾಡುವ ಕಾರಣ, ಸತ್ಯಚಿಂತನೆ ಮಾಡಿಯೂ ಒಬ್ಬಾತನು ಉತ್ತಮನಾಗಿಲ್ಲ ಎಂಬ ಮಾತನ್ನು ಯಾರೂ ಹೇಳುವ ಹಾಗಿಲ್ಲ. ಇನ್ನು, ಉದಾಹರಣೆಯ ಸಹಾಯದಿಂದ ಹೇಳುವುದಾದರೆ, ಚಿನ್ನದ ಗಟ್ಟಿಗಳ ರಾಶಿಯೇ ಜನರ ಮುಂದೆ ಇಟ್ಟು ಎಲ್ಲರೂ ಅದರಿಂದ ಚಿನ್ನವನ್ನು ಮುಕ್ತವಾಗಿ ತೆಗೆದುಕೊಳ್ಳಲು ಹೇಳಿದ ನಂತರ, ಮತ್ತೆ ಯಾರು ಅದರಿಂದ ಎಷ್ಟನ್ನು ತೆಗೆದುಕೊಳ್ಳಲು ಮನಸ್ಸುಮಾಡುತ್ತಾರೆ ಎಂಬುವುದನ್ನು ಮಾತ್ರ ಅದು ಆಶ್ರಯಿಸಿರುವುದು. ಅಂದರೆ, ಎಲ್ಲರಿಗೂ ಮುಕ್ತವಾಗಿರುವ ಆ ಸತ್ಯಚಿಂತನೆ ಎಂಬ ಕ್ರಿಯಾ ದೇವರನ್ನು ನೀವು ಎಷ್ಟು ಸ್ವೀಕರಿಸಲು ತಯಾರಾಗಿದ್ದೀರಿ ಎಂಬುವುದರ ಮೇಲೆ ವ್ಯಕ್ತಿಯ ಗುಣ ಮಟ್ಟವು ಮೇಲೇರುತ್ತಾ ಹೋಗಲು ಸಾಧ್ಯ ಎಂದು ಅರ್ಥ. ಈಗ, ಸತ್ಯಚಿಂತನೆಯಲ್ಲಿ ಭಾಗವಹಿಸಿಯೂ ಸ್ವಭಾವವು ಚೆನ್ನಾಗಿಲ್ಲ ಎಂದು ಹೇಳಿದಾಗ ಅದರ ಅರ್ಥವು ಸತ್ಯಚಿಂತನೆ ಮಾಡಿಯೂ ಸ್ವಭಾವವು ಚೆನ್ನಾಗಿಲ್ಲ ಎಂದು ಅಲ್ಲ, ಬದಲು ಸತ್ಯಚಿಂತನೆ ಎಂಬ ಆ ಕ್ರಿಯಾ ದೇವರಿಂದ ಜನರು ಆ ದೇವತ್ವವನ್ನು ಹೀರಿಕೊಳ್ಳಲು ತಯಾರಾಗಿಲ್ಲ ಎಂದು ಮಾತ್ರ ತಿಳಿಯಬೇಕು.

ಇದರಿಂದ ನಮಗೆ ಒಂದು ವಿಷಯವು ಸ್ಪಷ್ಟವಾಗುವುದು. ಸತ್ಯಚಿಂತನೆ ಮಾಡಿ ಮಹಾತ್ಮರಾದವರು ಎಷ್ಟೋ ಮಂದಿ ಇರುವಾಗ, ಸತ್ಯಚಿಂತನೆ ಮಾಡಿಯೂ ಒಬ್ಬಾತನು ಉತ್ತಮನಾಗಿಲ್ಲ ಎಂದು ಹೇಳುವುದೇ ಒಂದು ದೊಡ್ಡ ತಪ್ಪಾಗುವುದು! ಅದರ ಬದಲು ಆ ವಾಕ್ಯವನ್ನು ಬದಲಿಸಿ "ಸತ್ಯಚಿಂತನೆಯನ್ನು ಆತನು ಸರಿಯಾದ ರೀತಿಯಲ್ಲಿ ಮಾಡಿಲ್ಲ" ಎಂದು ಮಾತ್ರ ಹೇಳಬೇಕು. ಹೀಗೆ ಹೇಳುವುದಕ್ಕೆ ಇನ್ನೊಂದು ಬಲವಾದ ಕಾರಣವೂ ಇದೆ. ಅದು, ಸತ್ಯಚಿಂತನೆ ಮಾಡಿಯೂ ಒಬ್ಬಾತನು ಉತ್ತಮನಾಗಿಲ್ಲ ಎಂದು ಹೇಳುವಾಗ ಅಲ್ಲಿ ಆ ಪ್ರಾಚೀನ ವಾಮಾಚಾರವು ಆ ನಿಮ್ಮ ಮಾತನ್ನು "ಸತ್ಯಚಿಂತನೆ ಮಾಡಿದರೆ ಉತ್ತಮನಾಗುವುದಿಲ್ಲ" ಎಂಬ ಅರ್ಥಕ್ಕೆ ಕೊಂಡುಹೋಗಿ, ಆ ಸಂಕಲ್ಪದ ರಾಶಿಯನ್ನು ತಯಾರು ಮಾಡಿ ಅದನ್ನು ಸ್ವಲ್ಪ ಕಾಲದ ನಂತರದಲ್ಲಿ ನಿಮ್ಮ ಮೇಲೆ ಹಾಕುವುದು. ಆಗ ನೀವು ಸತ್ಯಚಿಂತನೆ ಮಾಡಿ ಸಿಕ್ಕುವ ಫಲವೂ ತನ್ನಿಂದ ತಾನಾಗಿ ಕಡಿಮೆಯಾಗಲು ಆರಂಭವಾಗುವುದು. ಜಾಗ್ರತೆ, ಜಾಗ್ರತೆ, ಆದುದರಿಂದ ಆ ರೀತಿ ಎಂದಿಗೂ ಹೇಳಿ ನಾಶವಾಗಬೇಡಿ. ಯಾಕೆಂದರೆ, ನಿಮ್ಮ ಜೀವನದ ಉಸಿರಾಗಿರುವ ಆ ಶಾಂತಿಯ ಮತ್ತು ಆನಂದದ ಜೀವನವನ್ನೇ ನೀವು ಈ ರೀತಿ ಹೇಳಿ ಕಳಕೊಳ್ಳುವಿರಿ.

ನಿಜವಾಗಿಯೂ ನಮಗೆ ಕೋಪ ಬರುವಾಗ ಮತ್ತು ಅನಿಯಂತ್ರಿತ ಭಾವನೆಗಳಿಗೆ ನಾವು ಬಲಿಯಾಗುವಾಗ. ಅದಕ್ಕೆ ಅಲ್ಲಿ ಇನ್ನೊಬ್ಬರು ಕಾರಣವಾಗಿ ಇರುವುದಾದರೂ, ಅಲ್ಲಿಯೇ ನಾವು ಮಾಡಿರುವ ಸತ್ಯಚಿಂತನೆಯ ತೀವ್ರತೆಯ ಫಲಿತಾಂಶವೂ ಇರುವುದು! ಇದು ಸತ್ಯಚಿಂತನೆ ಮಾಡುವವರಿಗೆ ಶಾಲೆಯಲ್ಲಿ ಮಾಡುವ ಪರೀಕ್ಷೆಯ ತರದಲ್ಲಿ ತಮ್ಮನ್ನು ತಾವು ಅಳೆಯುವ ಪರೀಕ್ಷೆ ಮಾತ್ರವಾಗುವುದು. ಅದರಲ್ಲಿ ಸೋಲುವಾಗ, ನಿಜವಾಗಿಯು ಇತರರು ಅದಕ್ಕೆ ಕಾರಣವಾಗಿದ್ದರೂ ಸೋತದ್ದು ತಾವೇ ಎಂಬುವುದು ಸತ್ಯವಾಗುವುದು. ಅಂದರೆ, ಅಂಥಹ ಸಂದರ್ಭಗಳನ್ನು ನಿಜವಾಗಿಯೂ ನಾವು ನಮ್ಮನ್ನು ಪರೀಕ್ಷೆ ಮಾಡುವುದಕ್ಕಾಗಿ ಉಪಯೋಗಿಸಬಹುದು ಎಂದು ಅರ್ಥ. ಅದರ ನಂತರವೇ ಆ ತೊಂದರೆಗೆ ಕಾರಣವಾದ ವ್ಯಕ್ತಿಯನ್ನು ಸರಿ ಪಡಿಸುವ ಜವಾಬ್ದಾರಿ ನಮಗೆ ಇರುವುದು ಎಂದು ಸತ್ಯಚಿಂತಕರು ತಿಳಿದುಕೊಂಡಿದ್ದರೆ, ಸತ್ಯಚಿಂತನೆಯು ನಮ್ಮನ್ನು ಬೇಗನೆ ಆ ವಿಶಾಲ ಮನಸ್ಕತೆಯ ನಿತ್ಯ ಆನಂದದಿಂದ ಜೀವಿಸುವ ಆ ಮಹಾತ್ಮನ ಹಂತಕ್ಕೆ ಎತ್ತುವುದು ಎಂಬುವುದರಲ್ಲಿ ಯಾವ ಸಂಶಯವೂ ಇಲ್ಲ.

## ಬ್ರಹ್ಮ ಜ್ಞಾನ, ಯೋಗ, ಸೃಷ್ಟಿಕರ್ತ ದೇವರು, ಮತ್ತು ಮಹಾತ್ಮರ ಮಹಾಜೀವನ ಅಥವಾ ಸತ್ಯಜೀವನ ಇವುಗಳ ಸಾಮ್ಯತೆ ಮತ್ತು ಭಿನ್ನತೆಗಳನ್ನು ತಿಳಿಸಬಹುದೇ?

ಉತ್ತರ- ಬ್ರಹ್ಮಜ್ಞಾನವು ಏಕವಾದ ಬ್ರಹ್ಮದ ಬಗ್ಗೆ ತಿಳಿಸುವುದು ಮತ್ತು ಅರಿಯಲು ಹೇಳುವುದು. ಅದು ಆ ಏಕತೆಯನ್ನು ಬ್ರಹ್ಮಾಂಡದ ಆ ಸೂಕ್ಷ್ಮಾತಿ ಸೂಕ್ಷ್ಮ ಮೂಲ ಅಸ್ತಿತ್ವವನ್ನು ಅರಿಯುವ ಹಿನ್ನೆಲೆಯಲ್ಲಿ ಹೇಳುವುದು. ಈ ಏಕತೆಯ ರೀತಿಯನ್ನು 'ಯೋಗ' ಎಂದೂ ಕರೆಯುವರು. ಆದರೆ ಈ ಜೀವನ್ಮುಕ್ತಿ ಕೋಟಿಗೆ ಒಬ್ಬನಿಗೆ ಮಾತ್ರ ಸಾಧ್ಯವೆಂದೂ ಹೇಳುವುದು. ಇನ್ನು ರಾಜಯೋಗವು ಸಮಾಧಿಯನ್ನು ಅರಿತು ತನ್ನ ನಿಜ ಸ್ವರೂಪವನ್ನು ತಿಳಿದು ಮುಕ್ತನಾಗುವಂತೆಯೂ ಹೇಳುವುದು. ಇಲ್ಲಿಯೂ ಆ ಆತ್ಮ ಅನುಭವವು ಸರ್ವರಿಗೂ ಒಂದಾಗಿರುವ ಕಾರಣ ಏಕತೆಯ ಸ್ವರವಿರುವುದು. ಆದರೆ, ಇದನ್ನು ಸಾಧಿಸುವವರೂ ಕೋಟಿಗೆ ಒಬ್ಬರು ಎಂಬ ರೀತಿಯಲ್ಲಿಯೇ ಇದೆ. ಆದರೆ, ಇವೆಲ್ಲಾ ಸಾಮಾನ್ಯ ಜೀವನದಿಂದ ದೂರವಾದ ಆ "ಮಾನವನ ವ್ಯಕ್ತಿತ್ವವು ಇಲ್ಲದ ಕಡೆ"ಯಲ್ಲಿನ ಏಕತೆಯನ್ನು ಹೇಳುವವು. ಇವುಗಳಲ್ಲಿ ಸ್ವಲ್ಪ ಕೆಳಹಂತದಲ್ಲೂ ಆ ತರದ ಏಕತೆಯನ್ನು ಪೂರ್ಣವಾಗಿ ಮರೆತು ಆ ತನ್ನ ಜಾತಿ ಭಾವನೆಯಿಂದ ಬಾಧಿಸಲ್ಪಡುವವರನ್ನು ಹಲವು ಕಡೆ ನಾವು ನೋಡುತ್ತೇವೆ. ಅಂಥವರಲ್ಲಿ ದೊಡ್ಡ ದೊಡ್ಡ ಆಚಾರ್ಯರುಗಳು ಸೇರಿರುವುದನ್ನೂ ಕಾಣುತ್ತೇವೆ! ಇನ್ನು, ಸೃಷ್ಟಿಕರ್ತ ದೇವರಲ್ಲೂ, ಎಲ್ಲಾ ಜೀವ ಜಾಲಗಳ ಸೃಷ್ಟಿಕರ್ತ ಎಂಬ ಸಂಕಲ್ಪದಲ್ಲಿ, ಎಲ್ಲಾ ಮಕ್ಕಳ ತಂದೆ ಎಂಬ ತರದ ಒಂದು ಏಕತೆಯನ್ನೇ ನೋಡುವೆವು!! ಆದರೆ, ಇಲ್ಲಿಯೂ ಆ ಒಬ್ಬ ಸೃಷ್ಟಿಕರ್ತನನ್ನು ಮಾನವರು ಹಲವಾರು ಮಾಡಿ, ಅರ್ಥ ಹೀನವಾದ ರೀತಿಯಲ್ಲಿ ತಮ್ಮ ತಮ್ಮ ಆ ಏಕ ಸೃಷ್ಟಿಕರ್ತನಿಗಾಗಿ ವಾದವನ್ನು ಮತ್ತು ರಕ್ತಪಾತವನ್ನು ಮಾಡುತ್ತಿರುವುದು ಕಾಣಿಸುವುದು!! ಆದರೆ, ಮಹಾತ್ಮರ ಜೀವನ ಅಥವಾ ಸತ್ಯಜೀವನದಲ್ಲಿ ಏಕತೆಯು ಮಾನವನ "ವ್ಯಕ್ತಿತ್ವ ಇರುವಲ್ಲೇ" ಇರುವುದಾಗಿದೆ. ಅಲ್ಲಿ ಯೋಗ ಅಥವಾ ಏಕತೆಯು ಆ ಸಾರ್ವತ್ರಿಕ ಸತ್ಯ, ಸಾರ್ವತ್ರಿಕ ಪ್ರೀತಿ, ಮತ್ತು ಸಾರ್ವತ್ರಿಕ ನೀತಿಯ ರೂಪದಲ್ಲಿ ಕಾಣಿಸುವವು. ಈ ಏಕತೆಯು ಮಹಾತ್ಮರಲ್ಲಿ "ವಿಶಾಲಮನಸ್ಕತೆ" ಯೆಂಬ ಭಾವದಲ್ಲಿ, ವ್ಯಾವಹಾರಿಕ ಜೀವನದ ಚಲಾವಣೆಯ ಶಕ್ತಿಯಾಗಿ ಇರುವುದು. ಇತರ ಎಲ್ಲ ಕಡೆಯ ಏಕತೆಯು ಅಥವಾ ಯೋಗವು ವ್ಯಾವಹಾರಿಕ ಜೀವನದಿಂದ ದೂರವಾಗಿ ಆಧ್ಯಾತ್ಮಿಕ ಎಂದು ಪ್ರತ್ಯೇಕವಾಗಿ ಇರುವಾಗ, ಈ ಮಹಾತ್ಮರ ಜೀವನವು ಸಾಮಾಜಿಕ ಜೀವನದಲ್ಲೇ ಆ ಸಂಕುಚಿತ ಮನೋಭಾವಗಳನ್ನೆಲ್ಲಾ ಕೊಚ್ಚಿ ಎಸೆಯುತ್ತಾ ಹರಿಯುವ ಆ ವಿಶಾಲಮನಸ್ಕತೆಯ ಪ್ರೀತಿಯ ಮಹಾನದಿಯಾಗುವುದು! ಇಲ್ಲಿ, ಇದನ್ನು ಕೋಟಿಗೆ ಒಬ್ಬ ಸಾಧಿಸುವುದಲ್ಲ, ಸತ್ಯಸಂಧತೆ ಮತ್ತು ದೃಢ ತೀರ್ಮಾನವಿದ್ದರೆ ಎಲ್ಲರಿಗೂ ಸಾಧಿಸಿಕೊಳ್ಳಬಹುದು!! ಇಲ್ಲಿ, ಆ ಜಾತೀಯತೆ, ಧರ್ಮಾಂಧತೆ, ಇತ್ಯಾದಿಗಳ ಭ್ರಮೆಯು ಸಾಧನೆಯ ಕೆಳಗಿನ ಹಂತದಲ್ಲೇ ನಾಶವಾಗಿಬಿಡುವ ಕಾರಣ ಆ ಅಜ್ಞಾನವು ಪುನಃ ಕಾಣಿಸಬಹುದೆಂಬ ಭಯವೂ ಇರುವುದಿಲ್ಲ. ಮೊದಲ ರೀತಿಗಳಲ್ಲಿ, ಮರದಡಿಯ ಯೋಗಿಗಳು, ಮಹಾತ್ಮರು ಮಾತ್ರ ಸೃಷ್ಟಿಯಾದರೆ, ಈ ಸತ್ಯಜೀವನದಲ್ಲಿ ಹಳ್ಳಿ, ಪೇಟೆ, ನಗರಗಳಲ್ಲಿ ಮತ್ತು ಎಲ್ಲಾ ವರ್ಗದ ಜನರಲ್ಲೂ ಮಹಾತ್ಮರು ಕೋಟಿಗಟ್ಟಲೆಯಲ್ಲಿ ಸೃಷ್ಟಿಯಾಗುವ ಅವಕಾಶವು ಇರುವುದು! ಬಹಳ ಕಡಿಮೆ ಸಂಖ್ಯೆಯ ಮರದಡಿಯ ಮಹಾತ್ಮರು ಸಮಾಜದಲ್ಲಿ ಉತ್ತಮ ಬದಲಾವಣೆಯನ್ನು ಬಯಸಿದರು ಹಾಗೂ ಶ್ರಮಿಸಿದರಾದರೂ, ಅವೆಲ್ಲ, ಸಾಮಾನ್ಯ ಜನರಿಗೆ

ಭಾಧಕವಲ್ಲ ಎಂಬ ರೀತಿಯಲ್ಲಿ ಜನರು ಅವರ ಉಪದೇಶಗಳಿಗೆ ಒಗೊಡದೆ ತಮ್ಮ ಹಳೇ ಚಾಳಿಯಾದ ಜಾತೀ ಮೇಲು, ಕೀಳು ಭಾವನೆ ಮತ್ತು ಶೋಷಣೆ ಇತ್ಯಾದಿಗಳನ್ನು ಮುಂದುವರಿಸುತ್ತಾ ಬಂದರು. ಆದರೆ ಮನೆ ಮನೆಯಲ್ಲಿ ಮಹಾತ್ಮರುಗಳು ಇರುವಲ್ಲಿ, ಆ ಮಹಾತ್ಮರ ಮನಸ್ಸಿನ ಸತ್ಯದ ದೈವಿಕಶಕ್ತಿಯು ಸಮಾಜವನ್ನು ಸತ್ಯ, ಜ್ಞಾನದ ಬೆಳಕಲ್ಲಿ ಬೆಳಗಿಸಿ, ಅಜ್ಞಾನವನ್ನು ಹೋಗಲಾಡಿಸಿ, ಈ ಜಗತ್ತಿಗೆ ಒಂದು ಸತ್ಯಯುಗವನ್ನೇ ದಯಪಾಲಿಸಲು ಶಕ್ತವಾಗುವುದು ಎಂಬುವುದರಲ್ಲಿ ಸಂಶಯವಿಲ್ಲ! ಇನ್ನೂ ಒಂದು ಪ್ರತ್ಯೇಕತೆ ಎಂದರೆ, ಇತರ ಎಲ್ಲಾ ಸಾಧನೆಗಳು ಪ್ರತ್ಯೇಕ, ನಂಬಿಕೆ, ಅಚಾರಗಳನ್ನು ಹೊತ್ತ ಕಾರಣ ಒಂದು ಪ್ರತ್ಯೇಕ ಧರ್ಮ, ಪಂಥದ ಅವಲಂಬನೆಯ ರೀತಿಯಲ್ಲಿ ಇರುವವು. ಆದರೆ ಈ ಸತ್ಯಚಿಂತನೆಯ ಮಹಾಜೀವನ ಅಥವಾ ಸತ್ಯಜೀವನವು ತಮ್ಮನ್ನು ತಾವು ಪರಿಶುದ್ಧಗೊಳಿಸುವ ಒಂದು ಶುದ್ಧೀಕರಣ ಯಂತ್ರದಂತೆ ಮಾತ್ರ ಕೆಲಸ ಮಾಡುವುದು ಎಂಬುವುದು ವಿಶೇಷತೆಯಾಗಿದೆ. ಆದುದರಿಂದ, ಈ ಸತ್ಯಚಿಂತನಾ ಸಾಧನೆಯು ಜಗತ್ತಿನ ಸರ್ವ ಧರ್ಮ, ಪಂಥಗಳಿಗೂ ಅನ್ವಯವಾಗುವ ರೀತಿಯದ್ದಾಗಿದೆ. ತನ್ನ ದೇವರಿಗೆ ಆ [ಸಂಶಯದ] ನಂಬಿಕೆಯ ಸ್ಥಾನದಿಂದ ಅತ್ಯಂತ ಮೇಲಿನ ಸ್ಥಾನವಾದ ಆ ಸಾರ್ವತ್ರಿಕ ಸತ್ಯದ ಸ್ಥಾನವನ್ನು ಕೊಡುವುದು ಎಂದರೆ ಭಕ್ತನಿಗೆ ಭಕ್ತಿಯ ರೋಮಾಂಚನವಾಗಬಹುದು. ತನ್ನ ದೇವರು ಸಾರ್ವತ್ರಿಕ ಪ್ರೀತಿಯ ಕರುಣಾಮಯನೆಂದು ಹೇಳದಿದ್ದರೆ ಆತನು ನಿಜ ಭಕ್ತನಾಗಲಾರನು.

ಅದೇ ರೀತಿ, ತನ್ನ ದೇವರು ನೈತಿಕತೆ ಇಲ್ಲದವನು ಎಂದು ಹೇಳಲು ಯಾವ ಭಕ್ತನ ಬಾಯಿಯೂ ತೆರೆಯಲಾರದು. ಇನ್ನು, ಯಾವ ಧರ್ಮ, ಪಂಥಗಳಿಗೂ ಈ ಮೂರು ಮುಖ್ಯ ದೈವಿಕ ಸ್ವಭಾವಗಳನ್ನು ಮುಂದಿಟ್ಟು ತಮ್ಮ ದೇವರು ಮತ್ತು ಧರ್ಮಗಳ ಇತರ ಭಾಗಗಳನ್ನು ವಿವರಿಸುವುದೂ ಕಷ್ಟವಾಗಲಾರದು. ಒಟ್ಟಿನಲ್ಲಿ, ಮೊದಲಿನ ಏನನ್ನೂ ಕಳಕೊಳ್ಳದೆ, ಮತ್ತೂ ಪವಿತ್ರರಾದ ಅನುಭವವನ್ನು ಮಾತ್ರ ಧರ್ಮ, ಪಂಥಗಳು ಸತ್ಯಚಿಂತನೆಯಿಂದ ಪಡೆದುಕೊಳ್ಳುವವು. ಈ ರೀತಿಯಲ್ಲಿ, ಆ ಮಹಾತ್ಮರ ಸತ್ಯಜೀವನವು 'ಜನಸಾಮಾನ್ಯರ ದೈನಂದಿನ ವ್ಯಕ್ತಿ ಜೀವನವನ್ನು' ಬೆಳಗಿಸುವುದರೊಂದಿಗೆ ಜಗತ್ತಿಗೆ ಸತ್ಯಯುಗವನ್ನೂ ತರುವುದು! ಇದು 'ಸತ್ಯಜೀವನ'ದ ಪ್ರತ್ಯೇಕತೆ ಅಥವಾ ಭಿನ್ನತೆಯ ಚುಟುಕಾದ ವಿವರಣೆಯಾಗಿದೆ.

---

## ನಂಬಿಕೆ, ಆಚಾರಗಳು ಧರ್ಮದ ಅವಿಭಾಜ್ಯ ಅಂಗ ಎನ್ನುವವರಿಗೆ ನೀವು ಏನು ಹೇಳುವಿರಿ?

ಉತ್ತರ- ನಿಜವಾಗಿಯೂ ಅವು ಧರ್ಮದ ಅವಿಭಾಜ್ಯ ಅಂಗಗಳಲ್ಲ. ಆದರೆ ಜನರು ಅವನ್ನು ಹಾಗೆ ಮಾಡಿದಲ್ಲಿ ನಾವು ಏನು ಮಾಡುವುದು? ಹಾಗೆ ಹೇಳುವ ಸಹೋದರ ಸಹೋದರಿಯರಲ್ಲಿ ಆ ಮಹಾತ್ಮರು ಕಣ್ಣೀರಿಟ್ಟು ಹೇಳಿದ ಮಾತನ್ನು ಮತ್ತು ಅದರ ಅರ್ಥವನ್ನು ವಿವರಿಸುವುದು ಮಾತ್ರ ನನಗೆ ಇಲ್ಲಿ ಮಾಡಲು ಸಾಧ್ಯ. ಸಾವಿರಾರು ವರುಷಗಳು ಸಂದಿವೆಯಾದರೂ, ಇನ್ನು ಎಂದಾದರೂ ಮಾನವನು ಧಾರ್ಮಿಕವಾಗಿ ವಿಕಾಸವಾಗಲು ತೊಡಗುವುದಾದರೆ, ಅವರು ಈ ಧಾರ್ಮಿಕ ಮತ್ತು ಆಧ್ಯಾತ್ಮಿಕ ನಂಬಿಕೆ ಎಂಬ ಕತ್ತಲೆಯಿಂದ ಆ ಮಹಾತ್ಮರು ಹೇಳುವ ಆ "ಸತ್ಯ"ವೆಂಬ ಬೆಳಕಿನ ಕಡೆಗೆ ಬಂದೇ ಆಗಬೇಕು. ಇದು ಸತ್ಯ.

ಮೊದಲು, ಜನರ ಸಂಶಯ ಪರಿಹಾರಕ್ಕಾಗಿ, "ಧರ್ಮ" ಎಂದರೆ ಏನೆಂದು ತಿಳಿಯುವುದಕ್ಕೋಸ್ಕರ, ಆ ದೇವರ ಮಾತುಗಳನ್ನೇ ಮುಂದಿಟ್ಟು ತಿಳಿಯೋಣ. ಧರ್ಮ ಸಂಸ್ಥಾಪನೆ ಮಾಡುವ ವಿಧಾನವನ್ನು ದೇವರು ಹೇಗೆಂದು ಗೀತೆಯಲ್ಲಿ ಬಣ್ಣಿಸಿದ್ದಾನೆ? ಸಜ್ಜನರನ್ನು ರಕ್ಷಿಸುವುದು ಮತ್ತು ಕೆಟ್ಟ ಕರ್ಮಗಳಲ್ಲಿ ನಿರತರಾದ ಆ ಕೆಟ್ಟ ಜನರನ್ನು ಇಲ್ಲದಂತೆ ಮಾಡುವುದೇ 'ಧರ್ಮ' ಸಂಸ್ಥಾಪನೆ ಎಂದು ದೇವರು ಹೇಳಿದ್ದಾನೆ ಎಂದು ಎಲ್ಲರಿಗೂ ತಿಳಿದಿದೆ. ಹೀಗಲ್ಲದೆ, ಹಲವು ರೀತಿಯ ಪೂಜೆಗಳನ್ನೋ, ಅದಕ್ಕೆ ಸಂಬಂಧಿಸಿದ ನಂಬಿಕೆ, ಆಚಾರಗಳನ್ನೋ, "ಧರ್ಮ" ಎಂದು ಹೇಳಿಲ್ಲ!!! ಅವುಗಳೆನ್ನೆಲ್ಲಾ ಒಟ್ಟಾಗಿ ಅಧ್ಯಾತ್ಮವೆಂದು ಪ್ರತ್ಯೇಕವಾಗಿ ಹೇಳುತ್ತಾ, "ಅವರವರು ಪೂಜಿಸುವ ದೇವರ ಲೋಕಕ್ಕೆ ಆಯಾ ದೇವರುಗಳ ಭಕ್ತರು ಹೋಗುವರು" ಎಂಬ ಶುದ್ಧ ಆಯ್ಕೆಯ ರೀತಿಯನ್ನೇ ಆಧ್ಯಾತ್ಮ ಭಾಗಕ್ಕೂ ಕೊಟ್ಟಿರುವುದು ಎಂಬುವುದನ್ನು ದಯವಿಟ್ಟು ಮರೆಯಬಾರದು!! ಹಾಗಿದ್ದರೆ, ಭೂಮಿಯಲ್ಲಿ ಮಾನವರಿಗೆ ಸಂಬಂಧಿಸಿದಂತೆ ಧರ್ಮ ಉದ್ಧಾರವನ್ನು ಹೇಗೆ ಮಾಡಬಹುದು? ಆ ದೇವರ ಮಾತಿನ ಪ್ರಕಾರ ಅದು ಈ ನಂಬಿಕೆ, ಆಚಾರ, ಶುದ್ಧ, ಅಶುದ್ಧ, ಇತ್ಯಾದಿಗಳು ಯಾವುದರಿಂದಲೂ ಅಲ್ಲವೆಂದೂ, "ಉತ್ತಮರನ್ನು ರಕ್ಷಿಸಲು" ಎಂಬ ಮಾತಿನ ಅರ್ಥವನ್ನು ಮಾನವರು ಈ ಭೂಮಿಯಲ್ಲಿ ಪಾಲಿಸುವಾಗ "ನಾವು ಉತ್ತಮರಾಗಬೇಕು" ಎಂಬ ಅರ್ಥ ಮಾತ್ರ ಅದಕ್ಕೆ ಬರುವುದೆಂದೂ ಸ್ಪಷ್ಟವಾಗುವುದು. ಇನ್ನು, "ದುಷ್ಟರನ್ನು ಶಿಕ್ಷಿಸಲು" ಅಂದಾಗ ಅಲ್ಲಿ ಮಾನವರು ಅದನ್ನು ತಮ್ಮ ಮನದ ದುಷ್ಟ ಬುದ್ಧಿಯನ್ನು ನಾಶಮಾಡುವುದೆಂದು ಮಾತ್ರ ಅರ್ಥ ಬರುವುದು. ಇದನ್ನೇ "ಸತ್ಯಚಿಂತನೆಯ ಮೂಲಕ ಮನೋಶುದ್ಧೀಕರಣ" ಎನ್ನುವುದು. ಇಲ್ಲಿ, ಉತ್ತಮರಾಗಲು ನಮಗೆ ಆಚಾರಗಳೋ, ನಂಬಿಕೆಗಳೋ ಸಹಾಯ ಮಾಡಲಾರವು ಖಂಡಿತ. ಆದರೆ, ಅದಕ್ಕೆ ನಮಗೆ ಸಹಕರಿಸುವುದು ಆ ಮನೋಶುದ್ಧಿಯ ಪ್ರಯತ್ನವು ಮಾತ್ರ ಆಗುವುದು. ಆಚಾರ, ನಂಬಿಕೆಗಳ ಗೋಜು ಇಲ್ಲದ ಆ [ಚಿಂತನಾ ಯುಕ್ತ]ಶುದ್ಧಭಕ್ತಿಯು ಕೂಡಾ ಈ ಸ್ವಭಾವವನ್ನು ಶುದ್ಧೀಕರಿಸಲು ಸಮರ್ಥವಾಗಿರುವುದು ಎಂಬುವುದನ್ನು ಮರೆಯಬಾರದು. ಅಂದರೆ, ಅಂಥ ಶುದ್ಧಭಕ್ತಿಯು ಜ್ಞಾನದಿಂದ ಒಡಗೂಡಿಯೇ ಇರುವುದು!! ಆತ್ಮಾವಲೋಕನ ಅಥವಾ ಆಂತರ್ಯದ ಸತ್ಯಚಿಂತನೆ ಮತ್ತು ಬಾಹ್ಯದ ಸತ್ಯಚಿಂತನೆಯು ಒಟ್ಟಿಗೆ ಸೇರಿದಲ್ಲಿ ಸ್ವಭಾವ ಶುದ್ಧೀಕರಣವು ತುಂಬಾ ವೇಗವಾಗಿ ನಡೆಯುವುದು. ತಮ್ಮಲ್ಲಿರುವ ಕೆಟ್ಟ ಸ್ವಭಾವವೆಂಬ ಅಸುರರನ್ನು ನಾಶ ಮಾಡಿ, ದೈವಿಕ ಸ್ವಭಾವವನ್ನು ತನ್ನ ಹೃದಯದಲ್ಲಿ ಎತ್ತರಕ್ಕೆ ಬೆಳೆಸಿ ಆತನು ಆ ಧರ್ಮ ಸ್ಥಾಪನೆಯ ಪುಣ್ಯ ಕರ್ಮವನ್ನು ಮಾಡುವನು. ಹೀಗೆ ಮಾಡುವಾಗ, ಆತನ ಸುತ್ತಮುತ್ತಲೂ ಆ ಶಾಂತಿಯ ತಂಬುರಿಯ ಸುಗಂಧದ ಅಲೆಗಳು ಇತರ ಮಾನವರಲ್ಲೂ ಆ ಸಾತ್ವಿಕ ಹೃದಯ ಭಾವನೆಯನ್ನು ಬಡಿದೆಬ್ಬಿಸಿ ಅವರನ್ನೂ ಧರ್ಮ ಸ್ಥಾಪನೆಯತ್ತ ಹೆಜ್ಜೆ ಇರಿಸುವಂತೆ

ಮಾಡುವುದು! ಈ ರೀತಿಯಲ್ಲಿ,ನಂಬಿಕೆ, ಆಚಾರವಲ್ಲದ ಆ ನಿಜವಾದ ಧರ್ಮವನ್ನು ಬೆಳೆಸಿದಲ್ಲಿ ಮಾನವ ಜೀವನ ಮತ್ತು ಸಮಾಜವು ಆನಂದವನ್ನು ಅನುಭವಿಸುವುದು. ಇಲ್ಲಿ, 'ನಾನು' ಎಂಬುವುದಕ್ಕೆ ಬೇಲಿ ಇರುವುದಿಲ್ಲ, 'ನಾವು' ಎಂಬುವುದಕ್ಕೂ ಬೇಲಿ ಇರುವುದಿಲ್ಲ! ಹಾಗಿರುವಾಗ, ಇಲ್ಲಿ "ನಾವು" ಎಂದು ಯಾರಾದರೂ ಹೇಳುವುದಾದರೆ ಅದು "ವಸುದೈವ ಕುಟುಂಬ" ಎಂಬ ಅರ್ಥವೇ ಎಂದು ಸ್ಪಷ್ಟವಾಗುವುದು! ಈ ರೀತಿಯಲ್ಲೇ ಧರ್ಮವನ್ನು ವಿವರಿಸುತ್ತಾ ಬಂದಿದ್ದರೆ ವಿಶಾಲ ಮನಸ್ಕತೆಯ, ಶಾಂತಿಯ, ಪ್ರೀತಿಯ ಆನಂದದ ಜೀವನವು ಆ ಪ್ರಾಚೀನ ಕಾಲದಿಂದಲೇ ಮಾನವರಿಗೆ ಸಿಗುತ್ತಿತು! ಹೇ ಮಾನವಾ, ನಿನ್ನ ಕೈಯಲ್ಲಿ ಖಡ್ಗವನ್ನಿತ್ತು ರಾಜರುಗಳು ಸಾವಿರಾರು ವರುಷ ಬಳಸಿಕೊಂಡರು, ತಲೆಯಲ್ಲಿ ಮಂಕನ್ನು ತುಂಬಿಸಿ ಬುದ್ಧಿವಂತರು ಬಳಸಿದರು, ಧರ್ಮ ಎಂಬ ಹೆಸರಿನಲ್ಲಿ ಅಧರ್ಮದ ಆ ಧರ್ಮಾಂಧತೆಯ ವಿಷವನ್ನು ಹೃದಯದಲ್ಲಿ ಸೇರಿಸಿ, ದೇವರ ಹೆಸರನ್ನು ಹೇಳುತ್ತಾ ಮುಗ್ಧ ಮಗುವಿನ ಕತ್ತನ್ನು ಸೀಳುವಷ್ಟು ಕ್ರೌರ್ಯವನ್ನು ನಿಲ್ಲಲ್ಲಿ ತುಂಬಿಸಿಬಿಟ್ಟರು ಮತ್ತು ನಿನ್ನನ್ನು ಕ್ರೂರ ಪ್ರಾಣಿಯಂತೆ ಮಾಡಿ ಬಳಸಿಕೊಂಡರು!! ನನ್ನ ಸಹೋದರನೇ, ಇನ್ನೂ ನಿನ್ನಲ್ಲಿ ಕಣ್ಣೀರಿನ ಅಂಶವು ಸ್ವಲ್ಪವಾದರೂ ಬಾಕಿ ಇದ್ದರೆ ಆ ಮಹಾತ್ಮರ ಮಾತುಗಳನ್ನು ಆಲಿಸುವಷ್ಟಾದರೂ ಮನಸ್ಸು ಮಾಡು. ಅದು ನಿನಗೆ ಅವಿತಿರುವ ಆ ಧರ್ಮವನ್ನು ತೋರಿಸುವುದು. ನಂಬಿಕೆ, ಆಚಾರಗಳು ಅವುಗಳ ಪಾಡಿಗೆ ಇದ್ದುಕೊಳ್ಳಲಿ, ಮತ್ತು ಆಚರಿಸುವವರು ಆಚರಿಸಲಿ. ಆದರೆ, ಮಹಾತ್ಮರ ಮಾತುಗಳನ್ನು ಸಂಪೂರ್ಣ ಮರೆತು, ಆಚಾರ,ನಂಬಿಕೆಗಳನ್ನು ಮಾತ್ರ ಮುಂದಿಟ್ಟು "ಧರ್ಮ" ಎಂದು ಒತ್ತಿ ಹೇಳುವ, ಮತ್ತು ಸಾವಿರಾರು ವರುಷಗಳಿಂದ ಮಾಡುತ್ತಾ ಬಂದಿರುವ, ಆ ದೊಡ್ಡ ಅನರ್ಥವನ್ನು ಇನ್ನಾದರೂ ಮಾಡದಿರೋಣ.

---

## ನೀವು, 'ಆಚಾರ ನಂಬಿಕೆಗಳು ನಿಜವಾಗಿಯೂ ಧರ್ಮಗಳಲ್ಲಿ ಅನಿವಾರ್ಯವಲ್ಲ' ಎಂದಿರುವಿರಲ್ಲ ಅದನ್ನು ತರ್ಕದ ಮೂಲಕ ಸ್ಪಷ್ಟಪಡಿಸಬಹುದೇ?

ಉತ್ತರ- ನೀವು "ನಮ್ಮೆಲ್ಲರ ಮನೆ" ಎಂದು ಹೇಳುವಾಗ ಅಲ್ಲಿ ಏನನ್ನು ಉದ್ದೇಶಿಸುತ್ತೀರಿ? ಆ ಪ್ರತಿ ಮನೆಯ ಕೋಣೆಗಳ ಸಂಖ್ಯೆಯಾ, ಅಥವಾ ಅವುಗಳ ವಿಸ್ತೀರ್ಣವಾ, ಅದೇನು ಅಲ್ಲ ಅಲ್ಲವೇ? ನೀವು ಉದ್ದೇಶಿಸಿರುವುದು ಬರೇ ನಾವು ಉಳಕೊಳ್ಳುವ, ಆ ಮಳೆ, ಬಿಸಿಲಿನಿಂದ ನಮ್ಮನ್ನು ರಕ್ಷಿಸುವ, ಸ್ಥಳವನ್ನು ಮಾತ್ರವಾಗಿದೆ ಎಂದು ನಿಮಗೆ ತಿಳಿದಿದೆ. ಅದೇ ರೀತಿ, ಎಲ್ಲಾ ಧರ್ಮಗಳು "ಧರ್ಮ" ಎಂದು ತಮ್ಮನ್ನು ಹೇಳುವಾಗ, ಅವುಗಳು ತಮ್ಮ ಧರ್ಮದ ಶ್ರೇಷ್ಠತೆಯ ಬಗ್ಗೆ ಹೊಗಳುತ್ತಾ, ಇತರ ಧರ್ಮಗಳ ಕೊರತೆಗಳನ್ನು ಹೇಳಬೇಕಾ ಅಥವಾ ಜಗತ್ತಿನ ಮಾನವರ ಉತ್ತಮ, ಆತ್ಮೀಯ, ಹಾಗೂ ಶಾಂತಿಯ ಜೀವನದ ಬಗ್ಗೆ ಮಾತ್ರ ವಿವರಿಸಬೇಕಾ ಎಂಬುವುದನ್ನು ನೀವೇ ಹೇಳಿರಿ.

ಇನ್ನು, ಎಲ್ಲಾ ಧರ್ಮಗಳ ಕೆಲಸವು ಮಾನವನಿಗೆ ದ್ವೇಷ, ಅಸೂಯೆಯು ಇಲ್ಲದಿರುವ ಆ ಉತ್ತಮ ಮತ್ತು ಶಾಂತಿಯ ಜೀವನವನ್ನು ಕೊಡುವುದಾಗಿದೆ. ಅದನ್ನು ಮಾಡದಿದ್ದಲ್ಲಿ ಅವುಗಳು ತುಕ್ಕು ಹಿಡಿದ ವಸ್ತುಗಳ ತರ ಉಪಯೋಗ ಶೂನ್ಯವಾಗುವವು. ಇನ್ನು, ನಂಬಿಕೆ, ಆಚಾರಗಳು, ಬೇರೆ ಬೇರೆ ಧರ್ಮ, ಪಂಥಗಳಿಗೆ ಬೇರೆ ಬೇರೆ ಆಗಿವೆ, ಮಾತ್ರವಲ್ಲ, ಅವುಗಳಲ್ಲಿ ಹಲವು ಪರಸ್ಪರ ವಿರುದ್ಧವೂ ಆಗಿ ಇರುವವು!! ಅಂದರೆ, ಅವುಗಳು ಯಾವುದೇ ಧರ್ಮದ ಆ ಸಾರ್ವತ್ರಿಕ ವಿಚಾರಗಳ ಬಗ್ಗೆ ಹೇಳುವುದಲ್ಲ ಎಂದು ಅದರಿಂದಲೇ ತಿಳಿದುಕೊಳ್ಳಬಹುದು. ಇನ್ನು, ಕಳ್ಳತನ ಮಾಡಬಾರದು ಎಂಬುವುದು ನೈತಿಕತೆಯ ಭಾಗವಾದರೂ ಅವು ಎಲ್ಲಾ ಧರ್ಮಗಳಲ್ಲೂ ಇರುವ ಕಾರಣ ಅದಕ್ಕೆ ಸಾರ್ವತ್ರಿಕತೆ ಇದೆ. ಇದು ನಂಬಿಕೆಯಾಗುವುದಿಲ್ಲ, ಸ್ಪಷ್ಟವಾಗಿ ಹೇಳುವುದಾದರೆ, ಇಂಥಹ ಹಲವು ಸಾರ್ವತ್ರಿಕವಾಗಿ ಇರುವಂಥವುಗಳು ಮಾತ್ರವೇ ಒಂದು ಧರ್ಮದ ಅಸ್ತಿತ್ವ ಅಥವಾ ಸಾರವಾಗಿರುವುದು. ಈ ರೀತಿಯಲ್ಲಿ ಇರುವ ಯಾವ ಧರ್ಮದ ಅಸ್ತಿತ್ವಕ್ಕಾದರೂ ಅದು ಯಾವ ನಂಬಿಕೆ, ಆಚಾರಗಳನ್ನು ಅವಲಂಬಿಸದ ಕಾರಣ, ಯಾವ ಧರ್ಮದಲ್ಲೂ ಈ ನಂಬಿಕೆ, ಆಚಾರಗಳು ಅನಿವಾರ್ಯವಲ್ಲ ಎಂದಿರುವುದು. ಆ ನಂಬಿಕೆ, ಆಚಾರಗಳು ಬರೇ 'ವ್ಯಕ್ತಿಯ ಆಯ್ಕೆ' ರೀತಿಯಲ್ಲಿ ಅವರವರ ಧರ್ಮ, ಪಂಥಗಳಲ್ಲಿ ಅನುಸರಿಸಿಕೊಳ್ಳಬಹುದು ಎಂದೂ ಹೇಳಿರುವುದು.

## ಸ್ವಭಾವದೇವರ ಕುರಿತು ಇನ್ನೂ ಸ್ವಲ್ಪ ವಿವರಣೆಯನ್ನು ಕೊಡಬಹುದೇ?

ಉತ್ತರ- ಎಲ್ಲಾ ಧರ್ಮ, ಪಂಥಗಳು ತರ್ಕ ಎಂಬ ಶಬ್ದವನ್ನು ಉಪಯೋಗಿಸುತ್ತವೆ. ಅವುಗಳು ತಮ್ಮ ಪರ ವಿಚಾರಗಳನ್ನು ತರ್ಕಬದ್ಧವಾಗಿ ವಿವರಿಸಲು ಪ್ರಯತ್ನಿಸುವವು. ಅದರಲ್ಲೂ ನಂಬಿಕೆಗಳನ್ನು ತರ್ಕಕ್ಕೆ ಗುರಿಪಡಿಸುವುದು ನಿಜವಾಗಿಯೂ ಬಹಳ ಅಚ್ಚರಿಯ ವಿಷಯವಾಗಿದೆ, ಯಾಕೆಂದರೆ, ತರ್ಕವಿಲ್ಲದ ಕಾರಣವೇ ಅವುಗಳನ್ನು ನಂಬಿಕೆಗಳು ಎಂದು ಕರೆದಿರುವುದು. ಈ ರೀತಿ, ಹಲವು ಧರ್ಮ, ಪಂಥಗಳು, 'ತಮ್ಮದು ಮಾತ್ರ ಆಗಿರುವ' ಹಲವು ಸತ್ಯಗಳನ್ನು ಈ ಜಗತ್ತಿನ ಸಾರ್ವತ್ರಿಕ ಸತ್ಯಗಳೆಂದು ಸಾಧಿಸುವ ಪ್ರಯತ್ನವನ್ನು ಮಾಡುವವು!

ನ್ಯಾಯಾಧೀಶರುಗಳು ಹಲವು ವ್ಯಕ್ತಿಗಳಾದರೂ ಈ ಜಗತ್ತಲ್ಲಿ ಅವರೆಲ್ಲಾ ಒಂದೇ ಗುಂಪಿಗೆ ಸೇರಿದವರಾಗಿದ್ದಾರೆ. ಯಾಕೆಂದರೆ ಆ ಎಲ್ಲಾ ನ್ಯಾಯಾಧೀಶರ ಕೆಲಸವು ಸತ್ಯ, ನ್ಯಾಯವನ್ನು ಜನರಿಗೆ ಕೊಡುವ ಆ ಒಂದೇ ಕೆಲಸವಾದ ಕಾರಣವಾಗಿದೆ ಎಂದು ನಮಗೆ ತಿಳಿದಿದೆ. ಈಗ, ನ್ಯಾಯಾಧೀಶರು ಎಂದು ಹೇಳುವಾಗಲೇ, ನಮಗೆ ಈ ಜಗತ್ತಿನ ಎಲ್ಲಾ ನ್ಯಾಯಾಧೀಶರ ಅರ್ಥವೂ ಸ್ಪಷ್ಟವಾಗಿ ಒಮ್ಮೆಗೇ ಸಿಗುವುದು. ಇಲ್ಲಿ, ಒಂದೊಂದು ನ್ಯಾಯಾಧೀಶನ, ಪ್ರಾಯ, ಸಂಪತ್ತು, ಶಾರೀರಿಕ ಶಕ್ತಿ, ಇವೆಲ್ಲಾ ಲೆಕ್ಕಕ್ಕೇ ಬರುವುದಿಲ್ಲ! ಇದೇ ರೀತಿಯಲ್ಲಿ, ಈ ಜಗತ್ತಿನಲ್ಲಿ ಹಲವು ಬೇರೆ ಬೇರೆ ದೇವರುಗಳಿದ್ದರೂ, ದೇವರು ಎಂದು ಹೇಳಿದ ತಕ್ಷಣ ನಮಗೆ ಅರ್ಥವಾಗಬೇಕಾದುದು ದೇವರು ಎಂಬ ಆ ಅರ್ಥವನ್ನು ಆಗಿದೆ. ಅಂದರೆ, ದೇವರು ಎಂಬ ಮಾತ್ರಕ್ಕೆ ಆ ಸಂಕಲ್ಪವು ಈ ಜಗತ್ತಿನ ಜನರಿಗೆ ಸತ್ಯ, ನ್ಯಾಯವು ಸಿಗುವಂತೆ ಮಾಡುವ ಶಕ್ತಿಯಾಗಿ ಮನದಲ್ಲಿ ಗೋಚರಿಸಬೇಕು, ಆಗ, ಅದು 'ಸತ್ಯವನ್ನು ಮತ್ತು ನ್ಯಾಯವನ್ನು ಸಿಗದಂತೆ ಮಾಡುವ ಶಕ್ತಿಯು ದೇವರು ಅಲ್ಲ' ಎಂದು ನಮಗೆ ಅರ್ಥೈಸುವುದು. ಈ "ಅರ್ಥ"ವು ಸಾರ್ವತ್ರಿಕವಾದುದು ಎಂಬುವುದನ್ನು ನೆನಪಿಡಬೇಕು. ಈ ಅರ್ಥವೇ ದೇವರ ಅಸ್ತಿತ್ವವಾಗಿದೆ. ಇದು ಆ ಮೂಲ ಧನಾತ್ಮಕ ಸ್ವಭಾವಗಳಾದ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೆಂಬ ಮಹಾ ಸ್ವಭಾವಗಳ ಹಿನ್ನೆಲೆಯಲ್ಲಿ ಇರುವುದು ಮತ್ತು ಇರಲೇಬೇಕಾಗಿದೆ ಎಂದೂ ಸ್ಪಷ್ಟವಾಗುವುದು. ಯಾರಿಗಾದರೂ ಈ ವಿಚಾರವಾಗಿ ಸಂಶಯವಿದ್ದಲ್ಲಿ, ಈ ಮೂಲ ಧನಾತ್ಮಕ ಸ್ವಭಾವಗಳಿಲ್ಲದ ದೇವರು, ತಮ್ಮ ಧರ್ಮದ ಅಥವಾ ತಮ್ಮ ಪಂಥದ ದೇವರು, ಎಂದು ಸಾರಿ ಹೇಳಲಿ ನೋಡೋಣ, ಯಾರಾದರೂ ಅದಕ್ಕೆ ತಯಾರಾಗುವರೇ? ಅದು ಎಂದಿಗೂ ಯಾರಿಗೂ ಸಾಧ್ಯವಿಲ್ಲ!! ಹೀಗಿರುವಾಗ, ಎಲ್ಲರೂ ತಮ್ಮ ದೇವರ ಅರ್ಥಕ್ಕಾಗಿ ಮತ್ತು ಆ ಅರ್ಥದ ಮಹತ್ವವನ್ನು ಎತ್ತಿ ಹಿಡಿಯುವುದಕ್ಕಾಗಿ ಪ್ರಯತ್ನಿಸಬೇಕೇ ಹೊರತು ತಮ್ಮ ತಮ್ಮ ದೇವರ ಹಿನ್ನೆಲೆಯ ಪುರಾಣ ಕಥೆ, ನಂಬಿಕೆ, ಆಚಾರಗಳ ಮಹತ್ವವನ್ನು ಎತ್ತಿ ಹೇಳಿ ತಮ್ಮ ದೇವರ ಮಹತ್ವವನ್ನು ಹೆಚ್ಚಿಸಲು ಸಾಧ್ಯವಿಲ್ಲ ಮತ್ತು ಹಾಗೆ ಪ್ರಯತ್ನಿಸಲೂಬಾರದು. ಯಾಕೆಂದರೆ, ಹಾಗೆ ಮಾಡಿದರೆ, ಅದರಿಂದ ದೇವರ ಮಹಿಮೆಯು ಎತ್ತಿ ಹಿಡಿಯಲ್ಪಡುವ ಬದಲು "ನಮ್ಮ ದೇವರು ಇತರ ದೇವರುಗಳಿಗಿಂತ ಮೇಲು" ಎಂಬ ಆ ಭಯಾನಕ ಧರ್ಮಾಂಧತೆಯ ಸೃಷ್ಟಿಯಾಗುವುದು. ಇದು ಆ "ದೇವರ ಅರ್ಥ" ವನ್ನು ನಾಶ ಮಾಡುವುದು! ಇದುವರೆಗೂ ಈ ಜಗತ್ತಲ್ಲಿ ನಡೆದಿರುವುದು ಈ ದೇವರ ಅರ್ಥ ನಾಶದ ರೀತಿಯಲ್ಲಿ "ದೇವರ ನಾಶ" ಮಾತ್ರವಾಗಿರುವುದು ಎಂದು ತಿಳಿದಾಗ ಭಯವಾಗುವುದು! ಆ ಪ್ರಾಚೀನ ವಾಮಾಚಾರದ ಆ ಭಯಾನಕ ಪ್ರಭಾವವು ಎಂಥ ಬುದ್ಧಿವಂತರನ್ನೂ ಗೊಂದಲದ ಸುಳಿಯೊಳಗೆ ಸಿಕ್ಕಿಸಿ ಬಿಡುವುದು ಎಂಬುವುದಕ್ಕೆ ಇದೇ ಸಾಕ್ಷಿಯಾಗಿದೆ! ಇನ್ನಾದರೂ, ನಿಜವಾದ ಸತ್ಯದ ಹಿನ್ನೆಲೆಯ ಆ ತರ್ಕದಿಂದ [ಸತ್ಯಚಿಂತನೆಯಿಂದ] ಸತ್ಯವನ್ನು ಅರಿಯಲು ಪ್ರಯತ್ನಿಸಿ ಎಲ್ಲರೂ ಜಗತ್ತಿನ ದೇವಸಂಕಲ್ಪವನ್ನು ಆ ಪ್ರಾಚೀನ ವಾಮಾಚಾರದ ನಾಶದ ಕೈಗಳಿಂದ ಬಿಡಿಸಲು ಪ್ರಯತ್ನಿಸುವರು ಎಂದು ಆಶಿಸೋಣ.

## ಮದುವೆ ಮೊದಲ ಮಿಲನದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ- ಯಾರು ಒಬ್ಬ ವ್ಯಕ್ತಿಯ ದಾಂಪತ್ಯ ಜೀವನವು ಕೊನೆಯವರೆಗೂ ಚೆನ್ನಾಗಿರಬೇಕು ಎಂದು ಬಯಸುವರೋ ಅವರು ಮದುವೆ ಮೊದಲು ಮಿಲನವನ್ನು "ಬೇಡ" ಎಂದು ಎಚ್ಚರಿಸುವರು, ಆದರೆ ಮದುವೆಯಾಗಿ ಜಗಳ ಮತ್ತು ವಿವಾಹ ವಿಚ್ಛೇಧನವನ್ನು ಯಾರು ಪ್ರೋತ್ಸಾಹಿಸುವರೋ ಅವರು ಖಂಡಿತವಾಗಿಯೂ ಅದನ್ನು "ತಪ್ಪಿಲ್ಲ" ಅಥವಾ "ಸರಿ" ಎಂದು ಹೇಳುವರು. ಮಹಾತ್ಮರು ಮತ್ತು ಯೋಗಿಗಳು ವಿಶಾಲ ಮನಸ್ಕತೆಯವರಾದ ಕಾರಣ, ಮತ್ತು ದಾಂಪತ್ಯವು ಕೊನೆಯವರೆಗೂ

ಉತ್ತಮವಾಗಿ ಇದ್ದು ಮಾನವರು ನಿತ್ಯವೂ ಅದರ ಆನಂದದ ಸವಿಯಲಿ ಜೀವಿಸಲೆಂದೇ ಮದುವೆ ಮೊದಲು ಮಿಲನ 'ಬೇಡ' ಎಂದು ಹೇಳುವುದು.

ದಾಂಪತ್ಯ ಜೀವನಕ್ಕೆ "ಆತ್ಮೀಯತೆ"ಯೇ ರಾಜಮಾರ್ಗವಾಗಿರುವುದು. ಸಂಪತ್ತು, ಬುದ್ದಿವಂತಿಕೆ, ರೂಪ ಇತ್ಯಾದಿಗಳು ಅದಕ್ಕೆ ಮಾರ್ಗಗಳೇ ಆಗಲಾರವು! ವರದಕ್ಷಿಣೆಯು ಮುಳ್ಳಿನ ದಾರಿಯಾಗುವುದು. ಈಗ, ನಮಗೆ ಆ ಪತಿ-ಪತ್ನಿಯರ ಜೀವನವನ್ನು ಸ್ವರ್ಗದ ಜೀವನದಂತೆ ಮಾಡುವುದು ಯಾವುದು "ಮಾತ್ರ" ಎಂದು ತಿಳಿಯಿತು. ಇನ್ನು, ಇದೇ ಪತಿ-ಪತ್ನಿಯರು, ಮದುವೆಯ ಮೊದಲು, ಹಲವು ಜನರನ್ನು ಎರಡು ಗಂಟೆಗಳ ಕಾಲ ಆ ತಾತ್ಕಾಲಿಕ ಮದುವೆಯಾಗುತ್ತಾ ಮತ್ತು ಬಿಡುತ್ತಾ ಹೋದಲ್ಲಿ, ಕೊನೆಗೆ ಆ ದೊಡ್ಡ ಕರ್ಚಿನ ಆ ದೊಡ್ಡ ಮದುವೆಯಲ್ಲಿ ಸಿಗುವ ಗಂಡ ಕೊನೆಯ ಗಂಡ ಮಾತ್ರ ಆಗುವನು ಅಲ್ಲವೇ? ಅದೇ ರೀತಿ, ಅಲ್ಲಿ ಸಿಗುವ ಹೆಂಡತಿಯು ಕೊನೆಯ ಹೆಂಡತಿ ಮಾತ್ರ ಆಗುದಿಲ್ಲವೇ? ಇನ್ನು, ದಾಂಪತ್ಯ ಜೀವನದ ರಾಜಮಾರ್ಗವಾಗಿರುವ ಆ ಪವಿತ್ರ 'ಆತ್ಮೀಯತೆ'ಯು ಅವರ ಮಧ್ಯೆ ಎಲ್ಲಿಂದ ಬರುವುದು??? ಈ ಆತ್ಮೀಯತೆ ಇಲ್ಲದ ಡೊಂಬರಾಟದ ಬದುಕು ಸಾಯುವ ತನಕದ ಬರೇ ಒಂದು ನೂಕುಗಾಡಿ ಮಾತ್ರ ಆಗುವುದು.

ತಮ್ಮ ದಾಂಪತ್ಯ ಜೀವನವು ಚೆನ್ನಾಗಿರಬೇಕೆಂದು ತೀವ್ರವಾಗಿ ಬಯಸುವ ದಂಪತಿಗಳಿಗೆ, ಪ್ರತ್ಯೇಕ ಸ್ವಭಾವ-ಶುದ್ದಿಯ ಅನುಷ್ಠಾನಗಳಿಂದ, ಉತ್ತಮ ದಾಂಪತ್ಯ ಜೀವನವನ್ನು ತಿರುಗಿ ಪಡೆಯಬಹುದು ಎಂಬುವುದು ಸತ್ಯವಾದರೂ, ಅದಕ್ಕೆ ಎರಡು ಕಡೆಯಿಂದಲೂ ಒಂದೇ ರೀತಿಯಲ್ಲಿ ಆ ತೀವ್ರ ಆಗ್ರಹವು ಹುಟ್ಟಿಬರಬೇಕಾದ ಅನಿವಾರ್ಯತೆ ಇದೆ ಎಂಬುವುದೇ ಅತಿ ಮುಖ್ಯ ಅಂಶವಾಗುವುದು.

## ಅನೈತಿಕವಾಗಿ ನಡೆವವರಿಗೆ ನಿಮ್ಮ ಸಲಹೆ ಏನು?

ಉತ್ತರ- ಯಾರು ಹೇಗಿರಬೇಕೆಂದು ಅವರವರೇ ತೀರ್ಮಾನಿಸಬೇಕು. ಯಾರ ಮೇಲೂ ಯಾವುದೂ ಹೇರುವುದು ಸಾಧ್ಯವಿಲ್ಲ. ಆದರೆ, ಅನೈತಿಕವಾಗಿ ನಡೆಯಲು ಕೊನೆಯ ತೀರ್ಮಾನವನ್ನು ಮಾಡಿದವರಲ್ಲಿ ಒಂದು ಅಪೇಕ್ಷೆ ಮಾತ್ರ ಇದೆ, ಅದು ಏನೆಂದರೆ ನೀವು ದಯವಿಟ್ಟು ಅನೈತಿಕತೆಯನ್ನು ನೈತಿಕತೆಯ ತರ ಬಿಂಬಿಸಬೇಡಿ, ಅದು ಅತ್ಯಂತ ಅನ್ಯಾಯವಾಗಿಬಿಡುವುದು. ಸಮಾಜದಲ್ಲಿ ಮದುವೆಯ ಮೊದಲ ಗಂಡು ಹೆಣ್ಣಿನ ಸಂಬಂಧವನ್ನೂ ಸೇರಿ, ಎಲ್ಲಾ ಅನೈತಿಕತೆಗಳನ್ನು ಆದರ್ಶ ಎಂದು ಮಾತ್ರ ತಿಳಿಯಬೇಡಿ, ಮತ್ತು ಇನ್ನೊಬ್ಬರೂ ಅದನ್ನೇ ಮಾಡುವಂತೆ ಪ್ರೋತ್ಸಾಹಿಸದಿದ್ದರೆ ಸಾಕಾಗುವುದು. ಆದರ್ಶ ಎಂದೂ ಆದರ್ಶವಾಗಿದೆ. ನಿಮ್ಮಿಂದ ಅದನ್ನು ಅನುಸರಿಸಲು ಸಾಧ್ಯವಾಗದಿದ್ದರೂ, ಕೊನೆಯ ಪಕ್ಷ, ಅದನ್ನು ದಯವಿಟ್ಟು ಗೌರವಿಸಿರಿ. ಹಾಗೆ ಮಾಡಿದರೆ, ಮುಂಬರುವ ಸಂತತಿಗಳಾದರೂ ಉತ್ತಮ ಜನರ ಒಂದು ಸತ್ಯಯುಗವನ್ನು ಈ ಜಗತ್ತಿನಲ್ಲಿ ಸೃಷ್ಟಿಸಿ ಈ ಜಗತ್ತನ್ನು ರಕ್ಷಿಸುವವು. ಅನೈತಿಕ ಕಾಮ, ಕ್ರೌರ್ಯಗಳು ಅವರಲ್ಲಿ ಕಡಿಮೆಯಾಗಿ, ಜಗತ್ತಿನ ಕಣ್ಣೀರನ್ನು ಒರೆಸುವ ಒಂದು ಮಹಾ ಮಾನವ ಜನಾಂಗ ಅದು ಆಗುವುದು.

## ಸಾರ್ವತ್ರಿಕ ಪ್ರೀತಿಯನ್ನು ಅನುಷ್ಠಾನ ಮಾಡುವುದು ಹೇಗೆ?

ಉತ್ತರ- ಮೊದಲಿಗೆ ನೀವು ಸತ್ಯಸಂಧರಾಗದಿದ್ದರೆ ಈ ಸಾರ್ವತ್ರಿಕ ಪ್ರೀತಿಯನ್ನು ಅನುಷ್ಠಾನ ಮಾಡಲು ಸಾಧ್ಯವಾಗುವುದಿಲ್ಲ. ಯಾಕೆಂದರೆ, ಆತ್ಮೀಯ ಪ್ರೀತಿ ಹುಟ್ಟಿಕೊಳ್ಳುವುದು ಸ್ವಭಾವದ ಹಿನ್ನೆಲೆಯಲ್ಲಿ ಹೊರತು ಅದಕ್ಕೆ ಬೇರೆ ಮೂಲಗಳಿರುವುದಿಲ್ಲ. ಅಂದರೆ, ಅಪ್ಪಟ ಧರ್ಮದ ರೀತಿಯನ್ನು ಮಾತ್ರ ಇಲ್ಲಿ ಪಾಲಿಸುವ ಕಾರಣ, ಸತ್ಯವು ಎಲ್ಲಿದ್ದರೂ ಅದು ಮಾತ್ರ ಸತ್ಯ, ಅದು ತನ್ನಲ್ಲಾದರೆ ತಾನು ಸತ್ಯ, ಇನ್ನೊಬ್ಬನಲ್ಲಾದರೆ ಆತನದು ಸತ್ಯ ಎಂಬ ರೀತಿಯಾಗಿದೆ. ತಮ್ಮದು ಸತ್ಯ ಎಂದು ಎಲ್ಲರೂ ಅವರವರದನ್ನು ವಾದ ಮಾಡುವ ರೀತಿ ಇಲ್ಲಿಲ್ಲ. ಯಾಕೆಂದರೆ, ಅಲ್ಲಿ ಎಲ್ಲರೂ ಸತ್ಯವನ್ನು ತಮ್ಮ ತಮ್ಮ ಬೇಲಿಯೊಳಕ್ಕೆ ಎಳೆದು ತರಲು ಪ್ರಯತ್ನಿಸುವರು!!! ಸತ್ಯವು ಎಲ್ಲಿದ್ದರೂ "ಅಲ್ಲಿದೆ ಸತ್ಯ" ಎಂದು ಹೇಳುವಷ್ಟು ಸತ್ಯಸಂಧತೆ ಇಲ್ಲ!! ಧರ್ಮ, ಪಂಥಗಳು ಈ ಜಗತ್ತಲ್ಲಿ ಇದುವರೆಗೂ ಮಾಡಿರುವ ವಾದವು, ಈ ರೀತಿಯ ಸತ್ಯಸಂಧತೆಯೇ ಇಲ್ಲದ, ಆ ತನ್ನೆಡೆಗೆ ಸತ್ಯವನ್ನು ಎಳೆಯುವ ರೀತಿಯನ್ನು ಎಂದರೆ ಅಚ್ಚರಿಯಾಗುವುದಿಲ್ಲವೇ? ಆದುದರಿಂದ ಇಲ್ಲಿ ಸಾರ್ವತ್ರಿಕ ಪ್ರೀತಿ ಎಂದರೆ, ಅದು ವಿಭೀಷಣನು

ತನ್ನವರನ್ನು ಮತ್ತು ಎಲ್ಲವನ್ನೂ ಬಿಟ್ಟು ಸತ್ಯ, ನ್ಯಾಯದ ಕಡೆಗೆ ಬಂದ ರೀತಿ ಎಂದು ತಿಳಿಯಬೇಕು. ಒಟ್ಟಿನಲ್ಲಿ, ಸಾರ್ವತ್ರಿಕ ಪ್ರೀತಿ ಎಂದರೆ "ಸತ್ಯಸಂಧವಾದ ಮತ್ತು ವಿಶಾಲ ಮನಸ್ಸನ್ನು ಪಡೆದ ಈ ಜಗತ್ತಿನ ಎಲ್ಲಾ ಉತ್ತಮರ ಮೇಲೂ ಸೃಷ್ಟಿಯಾಗುವ ಆ ಆತ್ಮೀಯತೆಯಾಗಿದೆ". ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸತ್ಯ, ನ್ಯಾಯ ಇತ್ಯಾದಿಗಳನ್ನು ಕಳಕೊಂಡವರು ಮತ್ತು ಅದಕ್ಕೆ ವಿರುದ್ಧವಾಗಿ ವರ್ತಿಸುವವರು, ಎಷ್ಟೇ ಹತ್ತಿರ ಸಂಬಂಧದವರಾದರೂ, ಅವರಲ್ಲಿ ಧ್ವೇಷವನ್ನು ಇಡದೆ, ಅವರಿಂದ ದೂರವಿರುವಂತೆ ಈ ಸಾರ್ವತ್ರಿಕ ಪ್ರೀತಿಯು ಹೇಳುವುದು. ಜನಸಾಮಾನ್ಯರಿಗೆ ಇದೆಲ್ಲಾ ಹಿಡಿಸಲಾರದ ಮಾತುಗಳಾಗಿ ಕೇಳಿಸಬಹುದು. ಆದರೂ ಧರ್ಮ, ದೇವರು ಇತ್ಯಾದಿಗಳ ಮಾತನ್ನು ಯಾರಾದರೂ ಎತ್ತುವುದಾದರೆ, ಅಲ್ಲಿ ಈ ಆದರ್ಶದ ರೀತಿಯಲ್ಲದೆ ಬೇರೆ ರೀತಿಯು ಸಾಧ್ಯವೇ ಇಲ್ಲ.

---

## ಹೆಚ್ಚಿನ ಕಡೆಯೂ ಧರ್ಮಪಂಡಿತರುಗಳು 'ಇತರರಿಗೆ ಮೋಕ್ಷವಿಲ್ಲ' ಅಥವಾ 'ಸ್ವರ್ಗವಿಲ್ಲ' ಎಂದು ಹೇಳುವರಲ್ಲಾ ಅದು ಯಾವ ಮೋಕ್ಷ ಅಥವಾ ಸ್ವರ್ಗ?

ಉತ್ತರ- ನಿಮ್ಮ ಸ್ವಂತದ್ದಾಗಿ ಮನೆ ಇರುವಾಗ, ಅಲ್ಲಿ, "ನನ್ನ ಮನೆಗೆ" ಅಥವಾ "ನಮ್ಮ ಮನೆಗೆ ಬರುವುದು ಬೇಡ" ಎಂದು ಯಾರಾದರೂ ಒಬ್ಬನಲ್ಲಿ ಹೇಳಿದರೆ ಅದು ಅವರ ಸ್ವಂತದ್ದು ಆದುದರಿಂದ ಅಲ್ಲಿ ಹಾಗೆ ಹೇಳುವ ಸ್ವಾತಂತ್ರ್ಯ ಅವರಿಗಿದೆ. ಆದರೆ, ಒಂದು ಊರಿಂದ ಒಂದು ಮನೆಯವರನ್ನು ಹೊರಟು ಹೋಗಬೇಕು ಅಂದರೆ "ಈ ಊರು ಆತನದೇ? ಅಥವಾ ಆ ಗುಂಪು ಜನರದೇ?" ಎಂದು ಹೇಳಿ ಆ ಊರಿನ ಉಳಿದ ಪ್ರಜ್ಞಾವಂತ ಜನರು ತಡೆಯುವ ಪ್ರಯತ್ನವನ್ನು ಮಾಡುವರು ಖಂಡಿತ. ಎಲ್ಲಾದರೂ ಆ ರೀತಿಯು ಸರಿ ಎಂದು ವಾದಿಸಿದರೆ, ಇತರರು ಈ ರೀತಿ ವಾದ ಮಾಡುವವರನ್ನು ಊರಿಂದ ಹೊರಹೋಗಲು ಹೇಳಿದರೆ ಅವರೂ ಹೋಗಲೇಬೇಕಾಗುವುದು ಮತ್ತು ಅದಕ್ಕೆ ಅವರು ಒಪ್ಪುವವರಾಗಿರಬೇಕು ಎಂಬ ಶರ್ತ ಬರುವುದು. ಇದೇ ರೀತಿ, ಎಲ್ಲಾ ಧರ್ಮಗಳಲ್ಲೂ, ಹೆಚ್ಚಿನ ಧರ್ಮಪಂಡಿತರುಗಳು ತಮ್ಮ ಧರ್ಮದಲ್ಲಿ ಮಾತ್ರ ಮೋಕ್ಷ ಅಥವಾ ಸ್ವರ್ಗ, ಮತ್ತು ಇತರ ಧರ್ಮದಲ್ಲಿ ಅದು ಸಾಧ್ಯವಾಗಲಾರದು ಎಂದು ಘಂಟಾಘೋಷವಾಗಿ ಅಲ್ಲಲ್ಲಿ ಸಾರಿ ಹೇಳುವಾಗ, ಮೊಟ್ಟ ಮೊದಲು, ಆ ಧರ್ಮವು ಕೊನೆಯ ಪಕ್ಷ ಅವರ ಸ್ವಂತದ್ದಾದರೆ ಸ್ವಲ್ಪವಾದರೂ ಅರ್ಥವನ್ನು ಕಾಣಬಹುದು. ಅದಲ್ಲವಾದಲ್ಲಿ ಎಲ್ಲರೂ ಅದೇ ರೀತಿ ಹೇಳುವಾಗ ಅಲ್ಲಿ ಯಾವ ಸತ್ಯ, ನ್ಯಾಯಗಳಿಲ್ಲದೆ ಬರೇ ಅಧರ್ಮ ರೀತಿಯಾದ ಆ ಬಲವಂತ ಹೇರುವಿಕೆ ಮಾತ್ರ ಕಾಣಿಸುವುದು. ಜಗತ್ತಲ್ಲಿ ನಮ್ಮ ಸಂಸ್ಥೆಯ ಸಾಬೂನುಗಳಿಗೆ ಮಾತ್ರ ಶುಚಿಗೊಳಿಸುವ ಸಾಮರ್ಥ್ಯವಿರುವುದು, ಇತರ ಸಂಸ್ಥೆಗಳದ್ದಕ್ಕೆ ಅದು ಇಲ್ಲ ಎಂದು ಯಾರಿಗಾದರೂ ಹೇಳಲು ಸಾಧ್ಯವಿದೆಯೇ? ಇನ್ನು ಆ ರೀತಿ ಹೇಳುವಂತೆ ಮೂಲದಲ್ಲಿ ತಿಳಿಸಿರುವುದು ಅವರವರ ದೇವರುಗಳೇ ಎಂದು ಹೇಳುವುದು ಅತ್ಯಂತ ಅಚ್ಚರಿಯ ವಿಷಯವಾಗಿದೆ!!! ಎಲ್ಲರೂ ಹೀಗೆ ಹೇಳುವಾಗ, "ಇವರೆಲ್ಲ ಹೇಳುತ್ತಿರುವುದು ಯಾವ ಸ್ವರ್ಗವನ್ನು?" ಎಂಬ ನಿಮ್ಮ ಪ್ರಶ್ನೆಯು ಸಹಜವಾಗಿಯೂ ಬರುವುದು. ಇಲ್ಲಿ ಎಲ್ಲಾ ಸ್ಪಷ್ಟವಾಗುವುದು, ಎಲ್ಲಾ ದೇವರುಗಳೂ 'ದೇವತಾ ಹಂತ'ದಲ್ಲಿಯೇ ಮೇಲೆ ಇರುವ ಕಾರಣ ಅಲ್ಲಿ ಹಲವು ದೇವರುಗಳು ಮತ್ತು ಸೃಷ್ಟಿಕರ್ತ ದೇವರುಗಳು ಹಾಗೂ ಹಲವು ಸ್ವರ್ಗಗಳು ತಾನಾಗಿ ಸೃಷ್ಟಿಯಾಗಿವೆ ಎಂಬುವುದನ್ನು ಮಾತ್ರ ಇದು ತೋರಿಸುವುದು. ಅಂದರೆ, ನಾನು ಸೂಕ್ಷ್ಮದಲ್ಲಿ ಸ್ಪಷ್ಟವಾಗಿ ಕಂಡ ಆ ಸಾಮಾನ್ಯ ದೇವತೆಗಳು ಮತ್ತು ಸೃಷ್ಟಿಕರ್ತ ದೇವತೆಗಳು ಎಂಬ ಆ ಎರಡು ದೇವತಾ ವರ್ಗವನ್ನೇ ಇದು ಪುಷ್ಟೀಕರಿಸುವುದು ಎಂದು ಹೇಳಬಹುದು.

ಇನ್ನು, ಇದಕ್ಕೆ ಸುಲಭ ಪರಿಹಾರವು "ಅವರವರ ದೇವರ ಸ್ವರ್ಗಕ್ಕೆ ಅವರವರು ಹೋಗಲಿ, ಮತ್ತು ಅವರವರ ಸ್ವರ್ಗಕ್ಕೆ ಹೋಗುವ ಜನರನ್ನು ತಡೆದು ತಮ್ಮ ದೇವತೆಯ ಸ್ವರ್ಗದ ಕಡೆಗೆ ಎಳೆಯಲು ಪ್ರಯತ್ನಿಸುವುದನ್ನು ನಿಲ್ಲಿಸಲಿ" ಎಂಬುವುದು ಮಾತ್ರವಾಗಿದೆ. ಆದರೆ ನಿಜವಾಗಿಯೂ ನಡೆಯುತ್ತಿರುವುದು ಈ ದೇವರು ಮತ್ತು ಸ್ವರ್ಗಭೇದದಿಂದ ಸೃಷ್ಟಿಯಾದ ಧರ್ಮಾಂಧತೆಯ ಧ್ವೇಷದ ಹಿಂಸೆ, ರಕ್ತಪಾತ ಎಂದು ನಮಗೆಲ್ಲ ತಿಳಿದಿದೆ. ಇಷ್ಟು ಮಾತ್ರವಲ್ಲ, ಆ ಸತ್ಯ, ಪ್ರೀತಿಯ ನಿಧಿಗಳಾಗಿ ಜೀವಿಸಿದ ಆ ಮಹಾ ವ್ಯಕ್ತಿಗಳೂ, ಬರೇ ಇನ್ನೊಂದು ಧರ್ಮದಲ್ಲಿ ಇರುವ ಕಾರಣಕ್ಕೆ, ಅವರನ್ನೂ "ನರಕಕ್ಕೆ ಹೋಗುವವರು" ಎಂದು ಹೇಳುವಾಗ ಅದು ನಿಜವಾಗಿಯೂ ಧರ್ಮದ ದುರುಪಯೋಗದ ಪರಮಾವಧಿ ಮಾತ್ರ ಆಗುವುದು. ಇಲ್ಲೆಲ್ಲಾ ಧರ್ಮ, ದೇವರು, ಎಂದರೆ ಏನು ಎಂಬ ಚಿಂತನೆಯೇ ಇಲ್ಲದ್ದು ಸ್ಪಷ್ಟವಾಗಿ ಅರಿವಾಗುವುದು. ಹಾಗೆ ಸತ್ಯದ ಹಿನ್ನೆಲೆಯಲ್ಲಿ ಚಿಂತಿಸಿದ್ದರೆ, ಯಾರಿಗೂ ಈ ರೀತಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಬರೇ ನಂಬಿಕೆಯ ಕಂಠಪಾಠದ ಆವರ್ತನೆಯು ಇಷ್ಟೆಲ್ಲಾ ಭಯಾನಕ

ಗೊಂದಲಗಳನ್ನು ಎಬ್ಬಿಸುತ್ತಿವೆ ಎಂಬುವುದು ಸ್ಪಷ್ಟವಾಗುವುದು. ಆ ಪ್ರಾಚೀನ ವಾಮಾಚಾರದ ಕೈಗೊಂಬೆಗಳು ಈ ಮಾನವರು ಎಂಬುದಕ್ಕೆ ಇನ್ನು ಬೇರೆ ಉದಾಹರಣೆ ಬೇಕೆ?

---

## ಮಹಾತ್ಮರ ದಾರಿಯಲ್ಲಿ ಸಾಧನೆ ಮಾಡುವವರು, ಆ ಮಹಾಜೀವನವನ್ನು ಸುಲಭದಲ್ಲಿ ಪಡೆಯಲು, ತಮ್ಮ ಸಾಧನೆಗಳೊಂದಿಗೆ ಇನ್ನು ಬೇರೆ ಏನು ಮಾಡುವರು?

ಉತ್ತರ- ಮಹಾತ್ಮರ ದಾರಿಯಲ್ಲಿರುವವರು ತಾವು ಸಾಧನೆ ಮಾಡುತ್ತಾ ಇರುವ ಕಾಲದಲ್ಲಿ ತಮ್ಮ ಮನಸ್ಸು ಹೇಳುವ ಎಲ್ಲವನ್ನೂ ಕೇಳುವುದಿಲ್ಲ ಅಥವಾ ಅನುಸರಿಸುವುದಿಲ್ಲ. ಯಾಕೆಂದರೆ ಅದರಲ್ಲಿ ಆ ಪ್ರಾಚೀನ ವಾಮಾಚಾರ ಶಕ್ತಿಗಳು ಸದಾ ತಮ್ಮ ಪ್ರಭಾವವನ್ನು ಬೀರುತ್ತಿರುತ್ತವೆ ಎಂದು ಅವರಿಗೆ ತಿಳಿದಿದೆ. ಆದುದರಿಂದ ಆ ಮನಸ್ಸಿನ ಆ ಸರ್ವನಾಶದ ಸ್ವಾರ್ಥ ಬೋಧನೆಯ ಬದಲು, ಅವರು 'ಮಹಾತ್ಮರ ದಾರಿ'ಯು ಸಾರ್ವತ್ರಿಕ ಸತ್ಯದ ಹಿನ್ನೆಲೆಯಲ್ಲಿ ತರ್ಕ ಬದ್ಧವಾಗಿ ಏನು ಹೇಳುವುದೋ ಅಥವಾ ಬೋಧಿಸುವುದೋ ಅದರಲ್ಲಿ ಮಾತ್ರ ಜೀವಿಸುವರು. ತನ್ನ ಜೀವನವೆಂಬ ಆ ರೈಲು ಗಾಡಿಯು ಚಲಿಸಲಿರುವ ಆ ರೈಲು ಹಳಿಯು ಅವರಿಗೆ ತಮ್ಮ ಸಾಧನಾ ರೀತಿಯಾಗಿ ಮೊದಲೇ ದೊರಕಿದೆ. ಇನ್ನು ಅವರಿಗಿರುವ ಆ ಏಕೈಕ ಸುಲಭದ ಕೆಲಸವು ಆ ದಾರಿಯಲ್ಲಿ ಚಲಿಸುವುದು ಮಾತ್ರವಾಗಿದೆ. ಅಂದರೆ, ಮಹಾತ್ಮರು ಆ ಪರಮ ಸತ್ಯದ ಹಿನ್ನೆಲೆಯಲ್ಲಿ ದೊರಕಿರುವ ಆ ಪರಮ ಪಾವನ ತೀರ್ಮಾನಗಳಲ್ಲಿ ಜೀವಿಸುವವರು ಎಂದು ಅರ್ಥ. ಈ ಪಾವನ ತೀರ್ಮಾನಗಳು, ಅವರಿಗೆ, ಪಾವನ ಜೀವನದೊಂದಿಗೆ ಆ ಸಾರ್ಥಕ ಜೀವನ ಆನಂದವನ್ನೂ ಹಂತ ಹಂತವಾಗಿ ದೊರಕಿಸಿಕೊಡುವುದು!

---

## ಮಾನವನಿಗೆ ಸಾಮಾನ್ಯವಾಗಿ ಹೆಚ್ಚು ಹಿತ ಮತ್ತು ಖುಷಿಯನ್ನು ಯಾವ ಪರಿಸ್ಥಿತಿಯು ಕೊಡುವುದು?

ಉತ್ತರ- ಸಾಮಾನ್ಯನಿಗೆ ತನ್ನ ಮನೆಯ ವಾತಾವರಣದಂತೆ ಭಾಸವಾಗುವುದು ಆತನ ಆಸಕ್ತಿಯ ವಲಯಗಳಲ್ಲಿ ಮಾತ್ರವಾಗಿದೆ. ಇಂದಿನ ಮಾನವನಿಗೆ ತನ್ನ ಆಸಕ್ತಿಯ ಜೀವನವು ಇತರರ ಬಗ್ಗೆ ಕಾಳಜಿ ಇಲ್ಲದಿರುವ, ಆದರೆ ಬರೇ ತನ್ನ ಬಗ್ಗೆ ಮತ್ತು ತನ್ನನ್ನು ಕೇಂದ್ರವಾಗಿಟ್ಟು ಜೀವಿಸುವಲ್ಲಿ ಮಾತ್ರ ಇರುವುದು. ಮಹಾತ್ಮನ ದಾರಿಯನ್ನು ಬಯಸುವವರು ಮೊಟ್ಟ ಮೊದಲಿಗೆ ಈ ಅತ್ಯಂತ ಅಧಪತನದಿಂದ ಪಾರಾಗುವ ರೀತಿಗಳನ್ನು ಅವಲಂಭಿಸುವರು, ಇದು ಯಾಕೆಂದರೆ ತಾನು ಚೆನ್ನಾಗಿ ಜೀವಿಸುವಾಗ ತನ್ನೊಂದಿಗೆ ಇತರರೂ ಚೆನ್ನಾಗಿ ಜೀವಿಸಬೇಕೆಂಬ ಆ ಸ್ಪಷ್ಟ ಬೋಧ ಅವರಿಗಿರುವುದು. ಜನರು ಮಹಾತ್ಮರಾಗಲು ಬಯಸದೆ ಇರುವುದಕ್ಕೆ ಕಾರಣ, ತನ್ನ ಮೇಲಿನ ಆಸಕ್ತಿಯನ್ನು ತಾನು ಕಡಿಮೆ ಮಾಡಬೇಕೆಂಬ ಆ ಒಂದು ಭಯವಾಗಿರುವುದು!! ಸಾಮಾನ್ಯ ಜನರು ತಮ್ಮನ್ನೇ ಕೇಂದ್ರವಾಗಿಟ್ಟು ಜೀವಿಸಿ ಆನಂದಿಸಲು ಪ್ರಯತ್ನಪಡುವರು, ಆದರೆ ಅದರ ಫಲ ಮಾತ್ರ ತಲೆಕೆಡಿಸಿಕೊಂಡೇ ದಿನ ನೂಕುವ ತರ ಇರುವುದು, ಅವರಿಗೆ ಶಾಂತಿ, ನೆಮ್ಮದಿ ಮತ್ತು ತೃಪ್ತಿ ಎಂಬುವುದು ಇರುವುದಿಲ್ಲ. ನಿಜವಾಗಿಯೂ ಈ ಭೂಮಿಯ ಜೀವನವನ್ನು ಬಹಳ ಚೆನ್ನಾಗಿ ಆಸ್ವದಿಸುವವರು [ಮರದಡಿಯ ಮಹಾತ್ಮರಲ್ಲದ] ಮನೆಯಲ್ಲೇ ತಯಾರಾಗಿರುವ ಮಹಾತ್ಮರುಗಳು ಎಂಬ ಪರಮ ಸತ್ಯವನ್ನು ಜನರು ತಿಳಿಯದಾಗಿರುವರು.

---

## ನಾವು ಪಡಕೊಂಡವುಗಳು ನಮಗೆ ಹೆಚ್ಚು ಸಂತೋಷವನ್ನು ಕೊಡಲಾರವೇ?

ಉತ್ತರ- ಇರುವಿಕೆಯು ಅಹಂಕಾರದ ವರ್ಧನೆಗೆ ಕಾರಣವಾಗುವುದು. ಅಹಂಕಾರವು ಯಾವಾಗಲೂ ಆ ಇರುವಿಕೆಗಳಲ್ಲಿ ಲೀನವಾಗಿಯೇ ಇರುವುದು, ಹೊರತು ತನ್ನ ತಲೆಯನ್ನು ಹೊರಗೆ ಹಾಕಿ ಆ ವ್ಯಕ್ತಿಗೆ ತಿಳಿಯುವ ತರದಲ್ಲಿ ಆತನ ಮನಸ್ಸಿನಲ್ಲಿ ಕೂತಿರುವುದಿಲ್ಲ. ಅಂದರೆ, ಅಧಿಕಾರ, ಮೇಲು ಜಾತಿ, ಸಂಪತ್ತು, ಬುದ್ಧಿ, ವಿಧ್ಯೆ, ಸೌಂದರ್ಯ, ಇತ್ಯಾದಿಗಳು ಎಲ್ಲೆಲ್ಲಾ ಇರುವವೋ, ಅಲ್ಲೆಲ್ಲಾ ಈ ಅಹಂಕಾರವೂ

ಅವುಗಳ ಒಳಗಿಂದಲೇ ಸೇರಿ ತನ್ನ ಕೆಲಸವನ್ನು ಸುಪ್ತವಾಗಿಯೇ ನಿರ್ವಹಿಸುವುದು! ಆಗ, ಮೊದಲಿಗೆ ಅವುಗಳು ಕ್ರಿಯೆ ಮತ್ತು ಮಾತುಗಳಲ್ಲಿ ಪ್ರಕಟವಾಗಲು ಆರಂಭಿಸುವವು.

ಇರುವವರಿಗೆ, ಇದರಿಂದ ಪಾರಾಗಲು ಇರುವ ಮಾರ್ಗವು, ತನಗೆ ತಾನೇ ಅರಿವನ್ನು ಉಂಟುಮಾಡಿಕೊಡುವ ಆ ಸತ್ಯಚಿಂತನೆ ಆಗಿದೆ. ಈ ತನಗೆ ತಾನೇ ಮಾಡುವ ಸತ್ಯಚಿಂತನೆಯನ್ನು ಆತ್ಮಪರಿಶೋಧನೆ ಎಂದೂ ಹೇಳುವರು. ಇದನ್ನು ಮಾಡದೆ ಇದ್ದಲ್ಲಿ, ಹಲವು ಕೋಟಿ ವರುಷ ಕಳೆದರೂ ಆತನು ಅಹಂಕಾರದಿಂದ ಪಾರಾಗಲಾರ ಎಂಬುವುದನ್ನು ಮರೆಯಬಾರದು. ಒಟ್ಟಿನಲ್ಲಿ, "ನಾನು" ಮತ್ತು "ನನ್ನದು" ಎಂದು ಹೇಳಿಕೊಳ್ಳುವ ಅಥವಾ ಹೇಳಿಕೊಳ್ಳಲು ಬಯಸುವ ವ್ಯಕ್ತಿಗಳಿಗೆ ಇದರಿಂದ ಎಂದಿಗೂ ಪಾರಾಗಲು ಸಾಧ್ಯವೇ ಇಲ್ಲ. ಅವರು ಇಂದು ತನ್ನಲ್ಲಿರುವುದನ್ನು ತೋರಿಸಿ ಕೊಚ್ಚಿಕೊಳ್ಳುವರು. ಆದರೆ, ನಾಳೆ ಇತರರಿಗೆ ಅದಕ್ಕಿಂತ ಹೆಚ್ಚು ಬರುವಾಗ, ಅದೇ ಕೊಚ್ಚಿಕೊಳ್ಳುವಿಕೆಯ ಸಂತೋಷವು ಭಸ್ಮವಾಗಿ, ದುಃಖದ ಮೊಗದೊಂದಿಗೆ ಕೊರಗಲು ಆರಂಭಿಸುವರು! ಈ ರೀತಿ, ಹಿಗ್ಗುವಿಕೆ ಮತ್ತು ಕುಗ್ಗುವಿಕೆಯೇ ಅವರ ಜೀವನವಾಗುವುದು. ಕೊನೆಯಲ್ಲಿ, ಶರೀರವೇ ಕುಗ್ಗುವ ವೇಳೆಗೆ, ಈ ಜುಗಾರಿ ಜೀವನದ ಆ ಕೊನೆಯ ಲೆಕ್ಕಾಚಾರವನ್ನು ಮಾಡುವಾಗ, ಹಿಗ್ಗುವಿಕೆಗಿಂತ ಕುಗ್ಗುವಿಕೆಯ ರಾಶಿಯೇ ಹೆಚ್ಚಿರುವುದು ಅವರಿಗೆ ಕಾಣಿಸುವುದು! ಎಲ್ಲಾ ಇದ್ದರೂ, ಈ ಅಹಂಕಾರವು ಹೇಗೆ ಮಾನವನ ಜೀವನವನ್ನು ಸರ್ವನಾಶ ಮಾಡಿಬಿಡುವುದು ಎಂಬುವುದನ್ನು ಇಲ್ಲಿ ಕಾಣಬಹುದು! ಆದರೆ, ಮಾಹಾತ್ಮರ ಜೀವನದ ಆ ಸಾಧನೆಗಳನ್ನು ಹೆಚ್ಚು ಹೆಚ್ಚು ಮಾಡುತ್ತಾ ಹೋದಂತೆ, 'ಅಲ್ಪನ ಹಿಗ್ಗುವಿಕೆ' ಮತ್ತು 'ದುಃಖದಿಂದ ಕುಗ್ಗುವಿಕೆ' ಎಂಬ ಈ ಎರಡು ರೀತಿಯ ತೊಂದರೆಗಳೂ ಇಲ್ಲವಾಗಿ, ಅವರು ಜೀವನದ ಹೆಚ್ಚಿನ ಕಾಲವನ್ನು ಧನ್ಯತೆಯ "ಆನಂದ" ದಿಂದ ಮಾತ್ರ ಜೀವಿಸಿ ಸಾರ್ಥಕ ಬದುಕನ್ನು ಪಡೆವರು.

---

## ಧರ್ಮವು ಸರ್ವ ಜನತೆಗೂ ಅಗತ್ಯವೆಂದು ಅತ್ಯಂತ ಸರಳವಾಗಿ ಮತ್ತು ಅದನ್ನು ಚುಟುಕು ವಿವರಣೆಯೊಂದಿಗೆ ವಿವರಿಸಬಹುದೇ?

ಉತ್ತರ- ನಾವು ಒಬ್ಬಾತನಲ್ಲಿ ಕೆಲವು ಪ್ರಶ್ನೆಗಳನ್ನು ಕೇಳೋಣ. ಅವುಗಳಿಗೆ ಆತನು ಉತ್ತರಿಸುವಾಗಲೇ ಸರ್ವರಿಗೂ ಧರ್ಮದ ಅಗತ್ಯವಿದೆಯೇ ಅಥವಾ ಇಲ್ಲವೇ ಎಂದು ಉತ್ತರ ಸಿಗುವುದು! ಮೊದಲ ಪ್ರಶ್ನೆಯಿಂದ ಆರಂಭಿಸೋಣ, "ನಿಮ್ಮ ಮನೆಯನ್ನು ಒಬ್ಬ ಕಳ್ಳನು ಕಳ್ಳತನ ಮಾಡಬೇಕೇ? ನಿಮ್ಮ ಮಕ್ಕಳನ್ನು ಇನ್ನೊಬ್ಬರು ಭಯಾನಕವಾಗಿ ಹೊಡೆದು ಹಾಕುವುದಾದರೆ ಅದು ನಿಮಗೆ ಬೇಕೇ? ನಿಮ್ಮ ಮನೆಯ ಗಂಡು ಮತ್ತು ಹೆಣ್ಣುಮಕ್ಕಳು ದಾರಿ ತಪ್ಪಿ ನಡೆಯಬೇಕೇ?" ಇನ್ನೂ ಹಲವು ಪ್ರಶ್ನೆಗಳಿವೆ. ಈ ಮೇಲಿನ ಆ ಕೆಲವು ಪ್ರಶ್ನೆಗಳಿಗೆ ಆತನ ಉತ್ತರವು "ಬೇಡ" ಎಂದಾದರೆ ಆತನಿಗೆ ಧರ್ಮದ ಅಗತ್ಯವಿದೆ ಎಂದಾಗುವುದು. ಆದರೆ ಆತನ ಉತ್ತರವು "ಬೇಕು" ಎಂದಾದರೆ ಆತನಿಗೆ ಧರ್ಮದ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ನಿಜವಾದ ಧರ್ಮದ ಪಾಲನೆಯ ರೀತಿಯಲ್ಲಿ ಅದು ಮನುಷ್ಯನ ಕಾವಲುಗಾರನಂತೆ ಇರುವುದು. ಆತನನ್ನು ಎಲ್ಲಾ ಅಪಾಯಗಳಿಂದ ಅದು ನಿರಂತರ ರಕ್ಷಿಸುವುದು!!

ಧರ್ಮವು ಸರ್ವ ಮಾನವರಿಗೂ ಅಗತ್ಯವಿದೆ. ಅದಿಲ್ಲವಾದರೆ ಆತನು ಕಾಡು ಜನಾಂಗಕ್ಕಿಂತ ವ್ಯತ್ಯಸ್ತನಾಗುವುದಿಲ್ಲ. ಆದರೆ, ನಾವು ಕಾಣುವ ಆಚಾರ-ಧರ್ಮಗಳು ಆತನನ್ನು ಅಸೂಯೆ, ಹಿಂಸೆ, ಶೋಷಣೆ, ರಕ್ತಪಾತಗಳ ಮೂಲಕ ಆ ಕಾಡು ಜನಾಂಗದವನಿಗಿಂತಲೂ ನಿಕೃಷ್ಟನನ್ನಾಗಿ ಮಾಡುವುದು ಎಂಬುವುದನ್ನು ನಾವು ಪ್ರತ್ಯೇಕವಾಗಿ ತಿಳಿಯಬೇಕಾಗಿದೆ. ನಿಜವಾಗಿಯೂ, 'ತನ್ನೊಂದಿಗೆ ಇತರರೂ ಚೆನ್ನಾಗಿ ಜೀವಿಸಬೇಕು' ಎಂಬ ಭಾವನೆಯನ್ನು ಸೃಷ್ಟಿಸಿ ಬೆಳೆಸುವುದೇ ಯಾವುದೇ ನಿಜವಾದ ಧರ್ಮದ ಪೂರ್ಣ ಸಾರವಾಗಿದೆ. ಮಾನವನಿಗೆ ಇದೊಂದೇ ಸಾಕು ಪೂರ್ಣ ಧರ್ಮವನ್ನು ಪಾಲಿಸಲು. ಉಳಿದ ಎಲ್ಲವೂ ಹಲವು ರೀತಿಯ ಆಧ್ಯಾತ್ಮ ರೀತಿಗಳು ಮಾತ್ರವಾಗಿವೆ! ಮಾತ್ರವಲ್ಲ, ಅವು ಮಾನವನ ಬರೇ ಆಯ್ಕೆ ಆಗುವವು. ಆಯ್ಕೆ ಮಾತ್ರವಾಗಬೇಕಾದ ಆ ಆಧ್ಯಾತ್ಮವನ್ನು ಧರ್ಮದೊಂದಿಗೆ ಸೇರಿಸಿ ಧರ್ಮವನ್ನು ನೋಡುವಾಗ ಮಾತ್ರ ಅಲ್ಲಿ ರಕ್ತಪಾತದವರೆಗಿನ ಸರ್ವ ರೀತಿಯ ಭಯಾನಕ ತೊಂದರೆಗಳೂ ಎದ್ದು ಬರುವುದನ್ನು ನಮಗೆ ಕಾಣಲು ಸಾಧ್ಯವಾಗುವುದು. ಆದರೆ, ಅವನ್ನು ತಮ್ಮೊಳಗೆ ಸೇರಿಸದಿದ್ದಲ್ಲಿ, ಮಾನವರೆಲ್ಲಾ ಒಂದಾಗುವ, ಎಲ್ಲಾ ಧರ್ಮಗಳ, ಆ ಸಾರ್ವತ್ರಿಕ ಧರ್ಮ-ಭಾಗವು ನಮಗೆಲ್ಲರಿಗೂ ಆ ಒಂದೇ ಮನೆಯಾಗಿ ಲಭ್ಯವಾಗುವುದು. ಆಗ, ಅಲ್ಲಿ, ಸರ್ವಮಾನವರಿಗೂ ಆ

ಆನಂದದ ಪ್ರೀತಿಯ ಜೀವನ ದೊರಕುವುದು ಎಂಬುವುದು ಖಂಡಿತವಾಗುವುದು. ಇದನ್ನೇ ಸತ್ಯಯುಗ ಎನ್ನುವುದು.

ಇನ್ನು, 'ನೈತಿಕತೆ ಮಾತ್ರ ಸಾಕು, ಧರ್ಮದ ಅಗತ್ಯವಿಲ್ಲ' ಎನ್ನುವ ನಾಸ್ತಿಕ ಜನರು ಇರುವರು. ಈ ಜನರು ನಿಜವಾಗಿಯೂ ನೈತಿಕತೆಯನ್ನು ಸತ್ಯಸಂಧವಾಗಿ ಒಪ್ಪುವುದಾದರೆ ಅವರು ಧರ್ಮವನ್ನೇ ಎತ್ತಿ ಹಿಡಿದಿರುವರು. ಈ ಸತ್ಯವನ್ನು ಅವರು ಸ್ವತಃ ಮರೆತಿದ್ದಾರೆ!! ಒಟ್ಟಿನಲ್ಲಿ, 'ದೇವರು ಇಲ್ಲವೋ, ಅಥವಾ ಇರುವನೋ' ಎಂಬ ಆ ಹಳೇ ಚರ್ಚೆಗಳು ಅಲ್ಲ ಧರ್ಮವನ್ನು ನಿರ್ಧರಿಸುವುದು. ಯಾಕೆಂದರೆ, ದೇವರಿಲ್ಲದ ಧರ್ಮಗಳೂ ಈ ಜಗತ್ತಲ್ಲಿ ಜೀವಂತವಾಗಿರುವುದು ಅದಕ್ಕೆ ಸಾಕ್ಷ್ಯಗಳಾಗಿ ಇರುವವು. ಅಂದರೆ, 'ಮಾನವೀಯತೆಗೆ ವಿರುದ್ಧವಾಗದ' ಆ ಶುದ್ಧ ನೈತಿಕತೆಯೇ ನಿಜವಾಗಿಯೂ ಧರ್ಮವಾಗಿದೆ ಎಂದು ತಿಳಿಯಬೇಕು! ಉಳಿದ ಎಲ್ಲವೂ ಬರೇ ಮಾನವನ ಆಯ್ಕೆಯ ಆಧ್ಯಾತ್ಮವಾಗುವವು. ಈ ಹಿನ್ನೆಲೆಯಲ್ಲಿ, ಆ ಶುದ್ಧ ನೈತಿಕತೆಯನ್ನು ಹಿಡಿದೆತ್ತುವ ಎಲ್ಲಾ ನಾಸ್ತಿಕರು ಧರ್ಮಿಷ್ಠರೇ ಆಗುವರು ಎಂದು ಸ್ಪಷ್ಟವಾಗುವುದು. ಅದೇ ರೀತಿ, ಆ ಶುದ್ಧ ನೈತಿಕತೆಯನ್ನು ಹಿಡಿದೆತ್ತದ ಆಸ್ತಿಕರು ಹಾಗೂ ನಾಸ್ತಿಕರು ಅಧರ್ಮಿಗಳು ಮಾತ್ರವೇ ಆಗುವರು ಎಂದೂ ಅದರೊಂದಿಗೆ ನಮಗೆ ಅರಿವಾಗುವುದು!!

---

## ಒಂದು ಮಗು ಹುಟ್ಟಿ ಸಾಯುವ ತನಕ ಆತನು ತನ್ನ ಜೀವನದ ಪ್ರತಿ ಕೆಲಸಗಳನ್ನಾಗಿ ಏನು ಮತ್ತು ಹೇಗೆ ಮಾಡಬೇಕು ಎಂದು ಧರ್ಮಗಳು ವಿವರಿಸಿರುವವು. ಆದರೆ, ಅವನ್ನೇ ಅಯಾ ಧರ್ಮಗಳ ಶ್ರೇಷ್ಠತೆಯನ್ನು ವಿವರಿಸಲೂ ಮುಖ್ಯವಾಗಿ ಉಪಯೋಗಿಸುವರು. ಇದು ಸರಿಯೇ, ಮತ್ತು ನೀವು ಹೇಳುತ್ತಿರುವ ಆ ಸಾರಧರ್ಮವೂ ಇಂಥ ನಿಯಮಗಳನ್ನು ಉದ್ದೇಶಿಸಿರುವುದೇ?

ಉತ್ತರ- ಒಂದು ಅಂಶವನ್ನು ನಾವು ಮೊದಲಲ್ಲೇ ಬಹಳ ಗಮನಕೊಟ್ಟು ತಿಳಿಯಲೇಬೇಕು. ಅದು ಏನೆಂದರೆ 'ಇತರರ ಒಳಿತು' ಮತ್ತು ತನ್ನ ಒಳಿತಿನ ಹಿನ್ನೆಲೆಯಲ್ಲಿ ಇರುವ ಆ ಸಮಾನತೆಯ ಅದ್ಭುತ ನಿಯಮಗಳು ಮಾತ್ರ 'ಸಾರಧರ್ಮ' ಆಗಲು ಸಾಧ್ಯ ಎಂದಾಗಿದೆ. ಅಸಮಾನತೆಯು ಇರುವುದಾದರೆ ಅಲ್ಲಿ "ಇತರರ ಒಳಿತು" ಎಂಬ ಮಾತೇ ಅಗತ್ಯವಿರುವುದಿಲ್ಲ, ಯಾಕೆಂದರೆ ಅದು ಅಲ್ಲಿ ಸಾಧ್ಯವಾಗುವುದಿಲ್ಲ! ಇಲ್ಲಿ, "ಇತರರು" ಎಂದರೆ ಇತರ ಮಾನವರು ಎಂದು ಅರ್ಥ. ತನ್ನ ಧರ್ಮ, ಪಂಥದೊಳಗಿನ ಮಾನವರು ಮಾತ್ರ ಎಂದಲ್ಲ!! ಹಾಗೆ ಯಾರಾದರೂ ತನ್ನ ಧರ್ಮ, ಪಂಥದೊಳಗಿನ ಜನರನ್ನು ಮಾತ್ರ ಉದ್ದೇಶಿಸುವುದಾದರೆ ಆತನ ದೇವರು ಸೃಷ್ಟಿಕರ್ತ ದೇವರಾಗಲು ಸಾಧ್ಯವೇ ಆಗುವುದಿಲ್ಲ. ಅದು ಸೃಷ್ಟಿಕರ್ತ ದೇವರನ್ನು ದೇವತೆಯ ಹಂತಕ್ಕೆ ತಗ್ಗಿಸಿದಂತೆ ಆಗುವುದು ಎಂಬುವುದು ಇನ್ನೊಂದು ವಿರೋಧಾಭಾಸವಾಗುವುದು.

ಇನ್ನು, ಮಾನವನು ಹುಟ್ಟಿನಿಂದ ಸಾಯುವ ತನಕ ಏನೇನು ಮಾಡಬೇಕು ಎಂದು ಎಲ್ಲಾ ಧರ್ಮಗಳಲ್ಲೂ ಹೇಳುವ ನಿಯಮಗಳಲ್ಲಿ ಹಲವು ಆಚಾರಗಳು ತುಂಬಿರುವುದರಿಂದ ಅವುಗಳು ಎಲ್ಲವೂ ಒಟ್ಟಾಗಿ "ಸಾರಧರ್ಮ" ಅಲ್ಲ ಎಂಬುವುದನ್ನು ತಿಳಿದುಕೊಳ್ಳಬೇಕು. ಅವನ್ನು ಧರ್ಮದ ಆಧ್ಯಾತ್ಮ ಭಾಗದ ಹಿನ್ನೆಲೆಯಲ್ಲಿ ಪ್ರತ್ಯೇಕಿಸಿ ಅನುಷ್ಠಾನ ಮಾಡುವುದಾದರೆ ಮಾಡಬಹುದು. ಆಚಾರಗಳು ಒಂದು ಧರ್ಮದಲ್ಲಿ ಒಂದು ರೀತಿಯಾಗಿದ್ದರೆ ಇನ್ನೊಂದು ಧರ್ಮದಲ್ಲಿ ಅದರ ವಿರುದ್ಧ ರೀತಿಯಲ್ಲಿ ಇರುವುದು. ಇದನ್ನು ವಿವರಿಸಲು ಹೊರಟರೆ ನಮಗೆ ಹಲವು ಗಂಟೆಗಳು ಬೇಕಾಗುವುದು. ಆದುದರಿಂದ ಅದರ ಬಗ್ಗೆ ನೀವೇ ತಿಳಿದುಕೊಳ್ಳಿರಿ. ಆದರೆ ಒಂದಂತೂ ಸತ್ಯವೆಂದು ಎಲ್ಲರಿಗೂ ತಿಳಿದಿದೆ, ಅದು ಈ ಜಗತ್ತಿನಲ್ಲಿ ಇಷ್ಟೆಲ್ಲಾ ದ್ವೇಷ, ರಕ್ತಪಾತಗಳಿಗೆ ಈ ವಿರುದ್ಧ ಆಚಾರಗಳೇ ಕಾರಣ ಎಂದು ಆಗಿದೆ. ಆದುದರಿಂದ ಯಾವ ಧರ್ಮದ ಆಚಾರ ಸಹಿತ ಇರುವ ಮಾನವ ಜೀವನ ನಿಯಮಗಳನ್ನು ಖಂಡಿತವಾಗಿಯೂ "ಸಾರಧರ್ಮ" ವಾಗಿ ಉದ್ದೇಶಿಸಿಲ್ಲ ಎಂದು ಸ್ಪಷ್ಟವಾಗಿ ತಿಳಿಯಬೇಕು. ಒಟ್ಟಿನಲ್ಲಿ, 'ಇತರರೂ ಚೆನ್ನಾಗಿರಬೇಕು ಮತ್ತು ತಾನೂ ಚೆನ್ನಾಗಿ ಜೀವಿಸಬೇಕು' ಎಂಬ ಆಶಯದ ಮೇಲೆ ನಿಂತಿರುವ ಆ ಸಾರಧರ್ಮವು ನಿಜವಾಗಿಯೂ ಮಾನವರಲ್ಲಿ ಹೇಳುವುದು ಚಿಂತಿಸಲು ಮಾತ್ರವಾಗಿದೆ! ಇದು ಯಾಕೆಂದರೆ, ತನಗೆ ಬರಬಾರದ ತೊಂದರೆಗಳು ಇತರರಿಗೂ ಬರಬಾರದು ಎಂದು ಆತನು ಆಲೋಚಿಸಿ ಜೀವಿಸಬೇಕಾಗಿರುವುದು. ಮಾನವರಿಗೆ ಚಿಂತಿಸುವುದು ಕಷ್ಟ ಎಂದು ವಾದಿಸುವವರು ಇಲ್ಲಿ ಪ್ರತ್ಯೇಕವಾಗಿ ಗಮನಿಸಬೇಕು. ಮಾನವರಿಗೆ ಯಾವೆಲ್ಲಾ ತೊಂದರೆಗಳು ಬರುವುದು ಎಂಬುವುದು ಎಲ್ಲರಿಗೂ ಚಿಂತಿಸದೆಯೇ ತಿಳಿಯುವುದು. ಅವನ್ನೂ ನೆನಪಿಸಲು ಸಾಧ್ಯವಾಗದವರು ಈ ಜಗತ್ತಲ್ಲಿ

ಬುದ್ಧಿ ಮಾಂದ್ಯರಲ್ಲದೆ ಬೇರೆ ಯಾರೂ ಇರಲಾರರು. ಆದುದರಿಂದಲೇ ಸಾರಧರ್ಮ ವನ್ನು ಅರಿಯಲು ಜನರಿಗೆ ಗ್ರಂಥಗಳ ಅಗತ್ಯವಿಲ್ಲ ಎಂದು ಹೇಳುವುದು, 'ಇತರರಿಗೂ ತನ್ನಂತೆ ತೊಂದರೆ ಆಗಬಾರದು' ಎಂಬುವುದನ್ನು ಹೃದಯದಲ್ಲಿ ಬೆಳೆಸಲು ನಮಗೆ ಬೇಕಾಗಿರುವುದು ಬರೇ ಮನೋಶುದ್ಧಿ ಮಾತ್ರವಾಗಿದೆ. ಈ ಮನೋಶುದ್ಧಿಯನ್ನು ಸತ್ಯಚಿಂತನೆಯು ಮಾತ್ರ ನಮಗೆ ದೊರಕಿಸುವುದು ಹೊರತು ಗ್ರಂಥವು ದೊರಕಿಸಲಾರದು! ಸ್ನಾನವನ್ನು ಈ ರೀತಿಯಲ್ಲಿ ಮಾಡು, ಕೈಯನ್ನು ಈ ರೀತಿಯಲ್ಲಿ ತೊಳೆ, ಇತ್ಯಾದಿ ಎಲ್ಲಾ ಧರ್ಮಗಳಲ್ಲೂ ಕಾಣಿಸುವ ಆ ಸಾವಿರಾರು ನಿಬಂಧನೆಗಳು ಮತ್ತು ಅವುಗಳ ಶ್ರೇಷ್ಠತೆಯ ವಿವರಣೆಗಳು ಹೇಗೆ ಧರ್ಮವಾಗುವುದು? ಅವು ಮನೋಶುದ್ಧಿಗೆ ಮತ್ತು 'ತನ್ನೊಂದಿಗೆ ಇತರರೂ ಚೆನ್ನಾಗಿ ಜೀವಿಸಬೇಕು' ಎಂಬ ಆ ಪವಿತ್ರ ಭಾವನೆಯನ್ನು ಹೃದಯದಲ್ಲಿ ಸೃಷ್ಟಿಸಲು ಸಹಾಯಕವಾಗುವುದೇ? ಇಲ್ಲ. ಆದುದರಿಂದಲೇ, ಈ ಆಚಾರಗಳೆಲ್ಲಾ ಧರ್ಮದ ಭಾಗವಾಗುವುದಿಲ್ಲ ಎನ್ನುವುದು. ಈ ಹಿನ್ನೆಲೆಯಲ್ಲಿ, ಧರ್ಮಗಳು ಜೀವನ ಪರ್ಯಂತ ಮಾನವರಿಗೆ ಹೇರುವ ಆ ಅನಗತ್ಯ ನಿಬಂಧನೆಗಳನ್ನು ಆಯಾ ಧರ್ಮದ ಶ್ರೇಷ್ಠತೆಯನ್ನು ವಿವರಿಸಲು ಉಪಯೋಗಿಸುವುದು ಶುದ್ಧ ಮೂರ್ಖತನವಾಗುವುದು ಮಾತ್ರವಲ್ಲ, ಅದು ಅತ್ಯಂತ ಅಪಾಯಕಾರಿ ಎಂದೂ ನಮಗೆ ತಿಳಿಯುವುದು.

---

## ತರ್ಕ, ಸತ್ಯ, ಮತ್ತು ನಂಬಿಕೆ, ಇವುಗಳು ಧರ್ಮ, ಪಂಥಗಳೊಳಗೆ ಹೇಗೆ ಹೊಂದಿಕೊಂಡಿವೆ?

ಉತ್ತರ- ತರ್ಕವು ಒಂದು ಆಯುಧವಾಗಿದೆ. ಅದನ್ನು ಸತ್ಯವನ್ನು ಕಂಡುಹಿಡಿಯಲು ಉಪಯೋಗಿಸಬಹುದು, ಅದೇ ರೀತಿ, ಅನ್ಯಾಯವನ್ನು ನ್ಯಾಯವೆಂದು ತೋರಿಸಿಕೊಡಲೂ ಉಪಯೋಗಿಸಬಹುದು. ನ್ಯಾಯಾಲಯದಲ್ಲಿ ಎರಡು ಕಡೆಯ ವಕೀಲರು ತರ್ಕವನ್ನೇ ಉಪಯೋಗಿಸುವವರಾದರೂ ಸತ್ಯ ಅಥವಾ ನ್ಯಾಯವು ಒಂದು ಕಡೆ ಮಾತ್ರ ಇರುವುದು ಎಂದು ನಮಗೆ ತಿಳಿದಿದೆ. ಇನ್ನು, ನಂಬಿಕೆಯು ಅದು ಈ ತರ್ಕವನ್ನೇ ನಾಶಮಾಡಿಬಿಡುತ್ತದೆ!! ಅಂದರೆ, ಮುಂದೆ ಎಂದಾದರೂ ಆ ಸತ್ಯವು ಹೊರಬರುವ ಸಾಧ್ಯತೆಯನ್ನೇ ಇಲ್ಲವಾಗಿಸುತ್ತದೆ ಎಂದು ಅರ್ಥ!! ಸತ್ಯದಕಡೆಯ ತರ್ಕಕ್ಕೆ ಒಂದು ನ್ಯಾಯಾಲಯದಲ್ಲಿ ಪರಾಜಯವಾದರೆ ಇನ್ನೊಂದು ಮೇಲಿನ ನ್ಯಾಯಾಲಯದಲ್ಲಿ ಜಯಸಿಗುವ ಸಾಧ್ಯತೆ ಇರುವುದು. ಆದರೆ, ಸತ್ಯವನ್ನು ವಕ್ರವಾಗಿ ಚಿತ್ರಿಸಿದ ನಂಬಿಕೆಯ ಸ್ಥಿತಿಯು ನಮಗೆ ಕಲ್ಪಾಂತ್ಯದವರೆಗೂ ಆ ಸತ್ಯವನ್ನು ಹಿಂದಿರುಗಿಸಲಾರದು!

ಧರ್ಮ, ಪಂಥಗಳ ಅಡಿಗಲ್ಲೇ ನಂಬಿಕೆಗಳಾಗುವ ಕಾರಣ ನಮಗೆ ಅಲ್ಲಿ ಸತ್ಯವನ್ನು ಕಂಡುಹಿಡಿಯಲು ಅವಕಾಶವೇ ಇಲ್ಲವಾಗುವುದು. ಅಲ್ಲಿ ಒಬ್ಬೊಬ್ಬರು ಹೇಳಿದ ಬಣ್ಣದ ಸೂರ್ಯರನ್ನು ಒಪ್ಪಬೇಕಾಗುವುದು. ನೀಲಿಸೂರ್ಯ ಎಂದರೆ ಕಲ್ಪಾಂತ್ಯದವರೆಗೂ ಆ ಧರ್ಮ ಪಂಡಿತ ನೀಲಿಸೂರ್ಯ ಎಂದೇ ವಾದ ಮಾಡುವನು. ಇಲ್ಲವಾದರೆ ಆತನ ಧರ್ಮ ಬಿದ್ದುಬಿಡುತ್ತದೆ ಎಂಬ ಭಯ ಆತನಿಗೆ ಇರುವುದು. ಇನ್ನೊಂದು ಧರ್ಮದ ಪಂಡಿತ ಹಳದಿಸೂರ್ಯ ಎಂಬ ವಾದಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಸುವನು. ಅದಲ್ಲವಾದರೆ ಆತನ ಧರ್ಮ ಬಿದ್ದುಬಿಡುವುದೆಂಬ ಭಯ ಆತನಿಗೂ ಇರುತ್ತದೆ. ಅಂದರೆ, ಕಲ್ಪಾಂತ್ಯದವರೆಗೂ ಆ ನಿಜವಾದ [ಸತ್ಯದ]ಸೂರ್ಯನ ಅಡಿಯಲ್ಲಿ ಒಂದಾಗುವ ಆ ಸತ್ಯಯುಗವು ಈ ಧರ್ಮ, ಪಂಥಗಳಿಂದ ಎಂದಿಗೂ ಸಾದ್ಯವಾಗಲಾರದೆಂದು ಅರ್ಥ. ನಂಬಿಕೆಯ ಒಳಗೆ ನಿಂತು ತರ್ಕ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ನಂಬಿಕೆಯೊಳಗಿನ ತರ್ಕವು ಅಸ್ತಿತ್ವವನ್ನೇ ಪಡೆಯುವುದಿಲ್ಲ. ಹೀಗಿದ್ದರೂ, ದರ್ಮ, ಪಂಥಗಳು, ತಾವು ಇತರರಿಗಿಂತ ಶ್ರೇಷ್ಠ ಎಂದು ಅದೇ "ನಂಬಿಕೆಯೊಳಗಿನ ತರ್ಕ" ದಿಂದಲೇ ಸಾವಿರಾರು ವರುಷಗಳಿಂದ ವ್ಯರ್ಥ-ವಾದಗಳನ್ನು ಮಾಡುತ್ತಾ ಬಂದಿರುವವು!! ಧರ್ಮ, ಪಂಥಗಳು ಶಾಂತಿಗಾಗಿ ಇರುವವು ಎಂದು ಹೇಳುವವು. ಆದರೆ, ಶಾಂತಿಗಾಗಿ ಈ ಸರಣಿ ವಾದಗಳ ಅಗತ್ಯವಿದೆಯೇನು? ಅಲ್ಲಿ ಆ ಸಾರ್ವತ್ರಿಕ ಪ್ರೀತಿಯ ಕರುಣಾ ದೃಷ್ಟಿಯಲ್ಲವೇ ಬೇಕಾಗಿರುವುದು? ಆದರೆ, ಅಲ್ಲಿ, ಎಲ್ಲರೂ ತಮ್ಮ ಪಂಥ, ಮನೆತನ, ಜಾತಿಗಳನ್ನು ತಮ್ಮ ತಲೆಯ ಮೇಲಿಟ್ಟು, ಶಾಂತಿಯ ಬದಲು ಅಸ್ಪೃಶ್ಯರನ್ನು ಸೃಷ್ಟಿಸಿ, ಆ 'ಅಸ್ಪೃಶ್ಯತೆ'ಯನ್ನೇ ಸಮಾಜಕ್ಕೆ ಬಳುವಳಿಯಾಗಿ ನೀಡಿರುವರು!!! ಧರ್ಮ ಸಾರುವ ಆ ಮಾನವೀಯತೆಯನ್ನು ಪೂರ್ಣವಾಗಿ ಮರೆತು ದರ್ಪದ ಆಸನಗಳಲ್ಲಿ ಕುಳಿತು ಆ ಮುಗ್ಧ ಮಾನವನನ್ನು ಹಿಂಡಿ ಅಸ್ಥಿಪಂಜರವನ್ನಾಗಿ ಮಾಡಿರುವುದು ಧರ್ಮಗಳಿಂದ ಒಸರಿರುವ ಆ ಶಾಂತಿಯಾಗುವುದೇ? ಇವೆಲ್ಲಾ, ಜಗತ್ತಿನ ಎಲ್ಲಾ ಧರ್ಮ, ಪಂಥಗಳ ಆ "ನಮ್ಮ ಧರ್ಮ ಶಾಂತಿಯ ಧರ್ಮ" ಎಂಬ ವಾದಗಳ ಪೊಳ್ಳುತನವನ್ನು ಮಾತ್ರ ಎತ್ತಿ ಹೇಳುತ್ತವೆಯಷ್ಟೆ. ಇನ್ನು, "ನಾವು ಶ್ರೇಷ್ಠ ಧರ್ಮದವರು" ಎಂಬ ವಾದಗಳ ಕುರಿತು ಮಾತ್ರ ನೋಡೋಣ. ಈ ವಾದಗಳಲ್ಲಿ

ಯಾರೂ ಜಯಿಸದೆ ಆದಾಗ, ಅವು ಅನಂತರದ ಹಂತವಾದ ಮಾತಿನ ಜಗಳಕ್ಕೆ ಹೋಗುವವು, ಮತ್ತು ಆ ಮಾತಿನ ಜಗಳವೂ ಮುಗಿದಾಗ ಅನಂತರದ ಹಂತವಾದ ಆ ಭೀಕರ ರಕ್ತಪಾತದ ಹಂತಕ್ಕೆ ಏರುವವು ಮತ್ತು ಅಲ್ಲಿಗೆ ಎಲ್ಲವೂ ಕೊನೆಗೊಳ್ಳುವುದು!! ನಾವು ಹಿಂದಿನಿಂದಲೇ ಕಾಣುತ್ತಿರುವ ಈ ರೀತಿಗಳಲ್ಲದೆ, ಈ ಧರ್ಮ, ಪಂಥಗಳಿಗೆ ಸಾರ್ವತ್ರಿಕ ಸತ್ಯದ ಧರ್ಮವನ್ನು ಮತ್ತು ಆ ಸಾರ್ವತ್ರಿಕ ಸತ್ಯದ ಹಿನ್ನೆಲೆಯ ದೇವರನ್ನು ಈ ಜಗತ್ತಿಗೆ ತೋರಿಸಿಕೊಟ್ಟು ಇಲ್ಲಿ ಶಾಂತಿಯನ್ನು ಸ್ಥಾಪಿಸಲು[ಇದುವರೆಗೂ ಆಗದಿರಲು] ಎಂದಿಗೂ ಸಾಧ್ಯವಾಗಲಾರದು ಎಂಬುವುದು ಸ್ಪಷ್ಟವಾಗುವುದು.

ಇನ್ನು, ಈ ಜಗತ್ತಿನ ಉಳಿವಿಗೆ ಬೇಕಾಗಿರುವುದು ಇವು ಯಾವುದೂ ಅಲ್ಲ, ಬದಲು ದೇವಾಂಶವೇ ಆದ ಆ "ಸತ್ಯಸಂಧತೆ" ಮಾತ್ರ ಆಗುವುದು. ಈ "ಸತ್ಯಸಂಧತೆಯ ಹಿನ್ನೆಲೆಯ ತರ್ಕ" ವು ಮಾನವನಿಗೆ ಸತ್ಯ, ನಿಜವಾದ ಧರ್ಮ, ಆತ್ಮೀಯ ಪ್ರೀತಿ, ಇವು ಎಲ್ಲವನ್ನೂ ದೊರಕಿಸಿಕೊಡುವುದು! ಆದುದರಿಂದ ಜಗತ್ತು "ನಂಬಿಕೆಯ ಹಿನ್ನೆಲೆಯ ತರ್ಕ" ದಿಂದ "ಸತ್ಯದ ಹಿನ್ನೆಲೆಯ ತರ್ಕ" ಅಥವಾ "ಸತ್ಯಚಿಂತನೆ" ಯ ಕಡೆಗೆ ನಡೆಯಬೇಕಾಗಿದೆ. ಈ ನಡೆಯು, ಇಡೀ ಧರಿತ್ರಿಯನ್ನೇ ಆ ಅದ್ಭುತ ಸತ್ಯಯುಗದ ಆ ಪ್ರೀತಿಯ ಸಾಮ್ರಾಜ್ಯದೊಳಕ್ಕೆ ಕೊಂಡುಹೋಗುವುದು!!

---

## ಎಲ್ಲರೂ ಇನ್ನೂ ಯಾಕೆ ತಮ್ಮ ನಂಬಿಕೆಯ ದೇವರೆಂದೇ ಹೇಳುವರು, ತಮ್ಮ ದೇವರು ಸತ್ಯದ ದೇವರೆಂದರೆ ಸಾಲದೇ?

ಉತ್ತರ- ಚುಟುಕಾಗಿ ಹೇಳುವುದಾದರೆ, ಕೆಟ್ಟ ಸ್ವಭಾವಗಳಲ್ಲಿ ವ್ಯಕ್ತಿ ದೇವರು ಇಲ್ಲ, ಮತ್ತು ತತ್ವ ದೇವರು ಅವನ್ನು ಹುಟ್ಟಿಸುವುದೂ ಇಲ್ಲ. ಅದೇ ರೀತಿ, ಅವಲ್ಲಿ ಧರ್ಮವೂ ಇಲ್ಲ. ಇಲ್ಲಿಗೆ ಎಲ್ಲವೂ ಸ್ಪಷ್ಟವಾಗುವುದು. ಅಂದರೆ, ಈ ಜಗತ್ತಲ್ಲಿ, ಆದಿಯಿಂದಲೇ, ಮಾನವನಿಂದ ಮಾನವನನ್ನು ಬೇರ್ಪಡಿಸುವ ಆ ಹೊಸ ಹೊಸ ಆಚಾರಗಳ ಮತ್ತು ನಂಬಿಕೆಗಳ ಆ ಹೊಸ ಹೊಸ ಕಟ್ಟುಗಳು ಮಾತ್ರ ತಯಾರಾಗುತ್ತಾ ಬಂದಿರುವುದು ಎಂದು ಅರ್ಥ. ಹಳೆಯ ಆಚಾರ, ನಂಬಿಕೆಗಳ ಕಟ್ಟುಗಳನ್ನು ದೂರುತ್ತಾ ಹೊಸ ಅಚಾರ ನಂಬಿಕೆಗಳ ಕಟ್ಟುಗಳು ಬಂದವು ಅಷ್ಟೆ! ಹಳೆಯ ಹಾಗೂ ಹೊಸದಾಗಿ ಬಂದವುಗಳು ಎಲ್ಲವೂ ತಮ್ಮ ಶಕ್ತಿಗನುಸಾರವಾಗಿ, ಈ ಭೂಮಿಯಲ್ಲಿ ಸ್ವಲ್ಪ ಸ್ಥಳವನ್ನು ಆವರಿಸಿ, ಒಂದೊಂದು ಕಡೆಯಲ್ಲಿ ಕೂತಿರುವವು! ಇನ್ನು, ಇವುಗಳ ಪರಿಣಾಮವನ್ನು ನೋಡಿದರೆ, ಅವುಗಳ ಪರಿಣಾಮವಾಗಿ ವರ್ಣ, ಜಾತಿ, ಮೇಲು ಕೀಳು ಭಾವನೆ, ಸ್ವಾರ್ಥ, ದ್ವೇಷ, ಮತ ಭಿನ್ನತೆ, ಧರ್ಮಾಂಧತೆ, ರಕ್ತಪಾತ ಇವುಗಳನ್ನು ಅವು ತಂದು ಕೊಟ್ಟವು!! ಉತ್ತಮ ಜೀವನವನ್ನು ನಡೆಸಬೇಕು ಎಂಬ ಧರ್ಮವನ್ನು ಬೋಧಿಸುವುದಕ್ಕೆ ಈ ರೀತಿಯ ಭಯಾನಕ ದ್ವೇಷ, ಶೋಷಣೆ, ರಕ್ತಪಾತಗಳು ಬೇಕಾಗುವುದೇ? ಸರಿಯಾಗಿ ಆಲೋಚಿಸಿದಾಗ ನಮಗೆ ಈ ಎಲ್ಲಾ ಆಟದ ಹಿಂದೆ ಮಾನವನನ್ನು ಮೋಸಗೊಳಿಸುವ ಒಂದು ಶಕ್ತಿಯ ಕೈವಾಡವನ್ನು ಕೊನೆಯ ಪಕ್ಷ, ಸಂಶಯಿಸಲಾದರೂ ಸಾಧ್ಯವಾಗುವುದು. ಉದಾಹರಣೆಗೆ, ಒಂದು ಗುಹೆಯಲ್ಲಿ ಮಾತ್ರ ಜೀವಿಸುತ್ತಿದ್ದ ಮತ್ತು ಹೊರಗೆ ಬಾರದ ಒಂದು ಮಾನವ ವರ್ಗವಿದೆ ಎಂದು ಕಲ್ಪಿಸಿರಿ. ಅವರು ಸೂರ್ಯನ ಬಗ್ಗೆ ತಮ್ಮ ತಮ್ಮ ರೀತಿಯಲ್ಲಿ ವಾದ ಮಾಡುತ್ತಾ ಜಗಳವಾಡುವುದಾದರೆ, ಅವರು ಹೊರಗೆ ಬಂದು ಸೂರ್ಯನನ್ನು ನೋಡುವಾಗ ಸತ್ಯವು ಅರಿವಾಗುವುದು. ಆಗ, ಅವರೆಲ್ಲ ಆ ಹಿಂದಿನ ವಾದವನ್ನೆಲ್ಲಾ ನಿಲ್ಲಿಸುವರು. ಈಗ, ಈ ಭೂಮಿಯಲ್ಲಿ ಆ ರೀತಿಯಲ್ಲಿ ದೇವರ ವಿಚಾರದಲ್ಲಾಗಲೀ ಅಥವಾ ಸೂಕ್ಷ್ಮದ ಇತರ ಆಧ್ಯಾತ್ಮ ವಿಚಾರದಲ್ಲಾಗಲೀ ಎಲ್ಲರಿಗೂ ಸೇರಿ ಆ ಕೊನೆಯ ಸತ್ಯವು ದೊರಕಿದೆಯೇ? ಇಲ್ಲ, ತಮ್ಮ ತಮ್ಮ ಬೇರೆ ಬೇರೆ ನಂಬಿಕೆಗಳ ರೀತಿಗಳು ಅಲ್ಲದೆ ಎಲ್ಲರಿಗೂ ಸೇರಿ ಸತ್ಯವು ದೊರಕಿಲ್ಲ ಮತ್ತು ಎಂದೂ ದೊರಕುವುದಿಲ್ಲ ಎಂಬುವುದು ಅದರ ಉತ್ತರವಾಗುವುದು. ಹಾಗಿರುವಾಗ, ಈಗ ಮಾಡುತ್ತಿರುವ ಈ ಸಾವಿರಗಟ್ಟಲೆ

ರೀತಿಯ ಆ ಕೋಟಿಗಟ್ಟಲೆ ವಾದಗಳೆಲ್ಲ ಏನೂ ತಿಳಿಯದ ಆ ಗುಹೆಯೊಳಗಿನ ಸ್ಥಿತಿಯ ಮಾನವನ ವಾದಗಳು ಮಾತ್ರವಾಗುವುದಿಲ್ಲವೇ? ದಯವಿಟ್ಟು ಈ ವಿಚಾರವಾಗಿ ಆಲೋಚಿಸಲು ಪ್ರಯತ್ನಿಸಿರಿ.

ಸಾರ್ವತ್ರಿಕವಾಗಿ ನಮಗೆ ಒಂದು ಸತ್ಯವು ದೊರಕದಾಗ ಖಂಡಿತವಾಗಿಯೂ ಅದನ್ನು ಸಾರ್ವತ್ರಿಕತೆಯ ಹಿನ್ನೆಲೆಯಲ್ಲಿ ಕಾಣುವ 'ಪ್ರಯತ್ನ'ವನ್ನಾದರೂ ಮಾಡಬೇಕಿತ್ತು. ಆದರೆ ಅದರ ಬದಲು

ಮಾಡಿರುವುದು ಧ್ವೇಷ, ರಕ್ತಪಾತ!! ವಿಜ್ಞಾನವು ಸತ್ಯವಾಗಿರುವುದು ಅದು ಹಲವು ಪರೀಕ್ಷಣೆಗಳನ್ನು ನಡೆಸಿ ಸಾರ್ವತ್ರಿಕವಾಗಿ ಸತ್ಯವಾಗುವಲ್ಲಿ ಮಾತ್ರವೆಂದು ತಿಳಿಯಬೇಕು.

ದೇವರನ್ನು ಮತ್ತು ಧರ್ಮವನ್ನು ಆ ಸಾರ್ವತ್ರಿಕತೆಯಲ್ಲಿ ನೋಡಿದಲ್ಲಿ ಈ ಜಗತ್ತು ದೇವರನ್ನು ಮತ್ತು ಧರ್ಮವನ್ನು ಸತ್ಯದ ಮೂಲಕ ದರ್ಶಿಸಲು ಶಕ್ತವಾಗುವುದು, ಮತ್ತು ಒಂದು ಆತ್ಮೀಯತೆಯ ಸತ್ಯಯುಗಕ್ಕೆ ಅವಕಾಶವೂ ಉಂಟಾಗುವುದು. ಇಲ್ಲವಾದರೆ, ಆ ಉದಾಹರಣೆ ಕಥೆಯಲ್ಲಿ ಹೇಳಿರುವ ಆ ಗುಹೆಯೊಳಗಿನ ಸಾವಿರಾರು ನಂಬಿಕೆಗಳನ್ನು ಹೊತ್ತ ಮಾನವರ ತರ, ತಮ್ಮ ತಮ್ಮ ದೇವರು ಮತ್ತು ಧರ್ಮದ ಮೇಲಿನ ಭಕ್ತಿಯ ಹೆಸರಿನಲ್ಲಿ ತಮ್ಮೊಳಗೆ ಕಾದಾಡಿ ನಾಶವಾಗುವಂತೆ ಮಾಡುವ ವಂಚನೆಯನ್ನು, ಆ ಪ್ರಾಚೀನ ವಾಮಾಚಾರವು ನಿಲ್ಲಿಸದು.

---

## ನೀವು ಆ ಪ್ರಾಚೀನ ವಾಮಾಚಾರವು ಮಾನವನನ್ನು ಮೊದಲು ಬೇರ್ಪಡಿಸಿ ಅನಂತರ ಕಾಲಾಂತರದಲ್ಲಿ ಅವುಗಳು ತಮ್ಮೊಳಗೆ ಧ್ವೇಷ, ಹಿಂಸೆ, ರಕ್ತಪಾತವನ್ನು ಸೃಷ್ಟಿಸುವಂತೆ ಮಾಡುವವು ಎನ್ನುವಿರಿ. ಮಾತ್ರವಲ್ಲ, ಅದಕ್ಕಾಗಿಯೇ ಹಳೆಯ ಅಥವಾ ಹೊಸತಾದ ಒಂದು ಧರ್ಮ, ಪಂಥ, ಪರಂಪರೆಯ ಹಿನ್ನೆಲೆಯಲ್ಲಿ ನಿಮ್ಮನ್ನು ಯಾವ ಕಾಲಕ್ಕೂ ಚಿತ್ರಿಸಬಾರದು ಎಂದು ಜನರಲ್ಲಿ ಕೇಳಿಕೊಂಡಿರುವಿರಿ. ಈ ನಿಮ್ಮ ಮಾತಿನ ಸತ್ಯತೆಯನ್ನು ನೀವು ಹೇಗೆ ತೋರಿಸಿಕೊಡುವಿರಿ?

ಉತ್ತರ- ಎಲ್ಲಾ ಧರ್ಮಗಳ ಆರಂಭದಲ್ಲಿ ಅದರಲ್ಲಿರುವ ದೇವರು ಮತ್ತು ಆ ಧರ್ಮದ ಸಂಸ್ಥಾಪಕರು ಅವು ಹೋಳುಗಳಾಗಬೇಕು ಎಂದು ಬಯಸಿರಲಾರರು. ಹಾಗೆ ದೇವರು ಬಯಸಿದ್ದಾನೆ ಎಂದರೆ ಆ ದೇವರನ್ನೇ ಸಂಶಯಿಸಬೇಕಾಗುವುದು. ಹೀಗೆ, ದೇವರು ಮತ್ತು ಅ ಸಂಸ್ಥಾಪಕರು ತಮ್ಮ ಧರ್ಮವು ವಿಭಾಗವಾಗಿ ಹೋಗುವುದು ಬಯಸದಿರುವಾಗ, ಎಲ್ಲ ಧರ್ಮಗಳೂ ಎರಡು ದೊಡ್ಡ ಹೋಳುಗಳಾಗಿರುವುದನ್ನು ನಾವು ಸ್ಪಷ್ಟವಾಗಿ ಕಾಣುವೆವು. ಮಾತ್ರವಲ್ಲ, ಅವು ಮತ್ತೂ ಚಿಕ್ಕ ಚಿಕ್ಕ ಹೋಳುಗಳಾಗಿ ಹೋಗಿರುವುದನ್ನೂ ಕಾಣುವೆವು! ಅದರೊಂದಿಗೆ, ಧ್ವೇಷ, ಹಿಂಸೆ, ರಕ್ತಪಾತವನ್ನು ಮಾಡಿರುವುದೂ ನಮಗೆ ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಹೀಗಿರುವಾಗ, ಒಂದರಲ್ಲಿ ಮಾತ್ರವಲ್ಲದ, 'ಜಗತ್ತಿನ ಎಲ್ಲೆಡೆಯೂ ಕಾಣಿಸುವ' ಆ ಮಾನವರನ್ನು ಬೇರ್ಪಡಿಸುವಿಕೆ ಮತ್ತು ಆ ಹಿನ್ನೆಲೆಯ ಹಿಂಸೆಯ ಕಗ್ಗೊಲೆಗಳನ್ನು ಪವಿತ್ರ ದೇವರ ಹೆಸರಲ್ಲಿ ಮತ್ತು ಶಾಂತಿಯ ಧರ್ಮದ ಹೆಸರಲ್ಲಿ ಯಾರು ಮಾಡಿಸಿದರು? ದೇವರಿರುವ ಧರ್ಮಗಳು ಆ ಧರ್ಮವನ್ನು ದೇವರೇ ಕೊಟ್ಟಿರುವುದು ಎಂದು ಹೇಳುವವು. ಇಲ್ಲಿ, ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ವಿಚಾರವೆಂದರೆ, "ಆ ದೇವರುಗಳು ಮತ್ತು ಧರ್ಮ ಸ್ಥಾಪಕರು ಮೇಲಿಂದ ಈ ದುರಂತವನ್ನು ಕಣ್ಣಾರೆ ನೋಡುತ್ತಾ ಇಲ್ಲವೇ? ಯಾಕೆ ಅವರಿಗೆ ಅದನ್ನು ತಡೆಯಲು ಆಗಲಿಲ್ಲ?" ಎಂಬ ಅಂಶವನ್ನು ಆಗಿದೆ. ಎಲ್ಲದಕ್ಕೂ "ದೇವರ ಪರೀಕ್ಷೆ" ಎಂಬ ಸುಲಭ ಉತ್ತರ ಕೊಡುವುದನ್ನು ನಾವು ನೋಡುವೆವು. ಈಗ, ದೇವರು ಪರೀಕ್ಷೆ ಮಾಡುವುದಾದರೆ ಮಾಡಲಿ ತೊಂದರೆ ಇಲ್ಲ, ಆದರೆ ತಾನು ಕೊಟ್ಟ ಆ ಪಠ್ಯ ಪುಸ್ತಕ ಅಥವಾ "ಮೂಲ ರೀತಿ"ಯನ್ನೇ ಮಾನವರು ತಿರುಚಿ ಹಲವು ಪಂಥಗಳನ್ನಾಗಿ ಮಾಡುವಾಗ,

ಯಾಕೆ ಸುಮ್ಮನೆ ಕೂತರು ಎಂಬುವುದು ಇಲ್ಲಿರುವ ಪ್ರಶ್ನೆ! ಇನ್ನು, ಈ ಮಾನವ ರಚಿತ ಪಂಥಗಳು ಎಂಬ ಪುಸ್ತಕದ ಆಧಾರದಲ್ಲಿ ದೇವರು ಪರೀಕ್ಷೆ ನಡೆಸುವುದು ಹೇಗೆ?

---

## ದೇವರಿಗೆ ಬಲಿ ಕೊಡುವ ಉದ್ದೇಶವೇನು?

ಉತ್ತರ- ದೇವರಿಗೆ ಬಲಿ ಕೊಡಲು ಸಾಧ್ಯವಿಲ್ಲ, ಯಾಕೆಂದರೆ ಅದು ವಿರೋಧಾಭಾಸವಾಗುವುದು. ದೇವರು ನಮಗೆ ಶಾಂತಿಯ ಧರ್ಮವನ್ನು ಕೊಡುವಾಗ, ಆತನು ಅದರ ವಿರುದ್ಧ, ಕ್ರೌರ್ಯವನ್ನು ಬೆಳೆಸುವ ಯಾವುದನ್ನೂ ಹೇಳಲಾರ. ಆದುದರಿಂದ, ದೇವತಾ ಸಂಕಲ್ಪಕ್ಕೆ ಬಲಿ ಕೊಡುವುದು ಸಾಧ್ಯವಲ್ಲ. ಅದು ಬರೇ ಸೂಕ್ಷ್ಮದ ಯಾವುದೋ "ಶಕ್ತಿ" ಸಂಕಲ್ಪಗಳಿಗೆ ಮಾತ್ರ ಆಗುವುದು. ದೇವರು ಅಂದರೆ, ಅಲ್ಲಿ ಇರುವುದು ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯಾಗಿದೆ. ಮಾತ್ರವಲ್ಲ, ಯಾರು

ಉತ್ತಮರು ಮತ್ತು ಯಾರು ಕೆಟ್ಟವರು ಎಂಬ ಅರಿವು ಅಥವಾ ವಿವೇಚನೆಯು ಅಲ್ಲಿ ಮುಖ್ಯವಾಗಿರುವುದು. ಆದರೆ, "ರಕ್ತ ಕುಡಿಯುವುದು ಪಿಶಾಚಿ ಎಂದು ಎಲ್ಲ ಧರ್ಮಗಳೂ ಹೇಳುವವು." ಹೀಗಿರುವಾಗ, ದೇವರಿಗೆ ರಕ್ತ ಅಗತ್ಯವಿಲ್ಲ ಎಂದೂ ಸ್ಪಷ್ಟವಾಗುವುದು. ಇನ್ನು, "ಶಕ್ತಿ"ಗಳು ಅವು ಮಾನವನ ಕೆಲವು ಪ್ರತ್ಯೇಕ "ಭಾವ"ವನ್ನು ಮಾತ್ರ ಸಂಗ್ರಹಿಸಿ ಅದರಲ್ಲಿ ಮಾತ್ರ ವ್ಯಕ್ತಿತ್ವವನ್ನು ಉಂಟುಮಾಡಿರುವ ಶಕ್ತಿಗಳಾಗಿವೆ. ಅವುಗಳಿಂದ ವಿವೇಚನೆಯನ್ನು ಯಾರಿಗೂ ಬಯಸಲು ಸಾಧ್ಯವಿಲ್ಲ. ಅದಕ್ಕೆ ಯಾರು ಹೆಚ್ಚು ಉಣಲು, ತಿನಲು ಅಥವಾ ಇತರ ಏನನ್ನಾದರೂ ಪ್ರೀತ್ಯರ್ಥವಾಗಿ ಕೊಟ್ಟರೆ ಅವು ನಿಮ್ಮನ್ನು ಮರೆತು, ಹೆಚ್ಚು ಕೊಟ್ಟವನಿಗೆ ಸಹಾಯ ಮಾಡುವವು. ಆದರೆ ದೇವತಾ ಸಂಕಲ್ಪವು ಭಕ್ತರನ್ನು ಅವರ ಶುದ್ಧ ಭಕ್ತಿಯ ಹಿನ್ನೆಲೆಯಲ್ಲಿ ಮಾತ್ರ ಹರಸುವ ಶಕ್ತಿಯಾಗುವುದು. ಆದರೆ, ದೇವರಿರುವ ಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ಈ ಬಲಿಯನ್ನು ಕೊಡುತ್ತಲೇ ಬಂದಿವೆ!! ನೀವು, "ಬಲಿ"ಗೆ ನಿಮ್ಮದೇ ವ್ಯಾಖ್ಯಾನವನ್ನು ಕೊಡಲು ಪ್ರಯತ್ನಿಸಬಹುದು, ಆದರೆ ಅದು ಶಾಂತಿಯೆಂದು ತಮ್ಮ ಧರ್ಮಗಳನ್ನು ವ್ಯಾಖ್ಯಾನ ಮಾಡಿದಲ್ಲಿ ಅವೆಲ್ಲಾ ನಾಟುವುದಿಲ್ಲ. ಇನ್ನು, ದೇವರಿಗೆ ಬಲಿಕೊಡುವುದು ಎಂಬುವುದನ್ನು ಬೇರೆ ಯಾವುದಾದರೂ ಶಾಂತಿಯ ವಿವರಣೆ ಸರಿ ಹೊಂದಿಸಿ ವಿವರಿಸುವುದಾದರೆ, ಇತರ ಕಡೆಗಳಲ್ಲಿ ಧರ್ಮಗಳು ಶಾಂತವಾಗಿ ಕಾಣಿಸಬೇಕಿತ್ತು, ಆದರೆ, ಈ ಬೇಲಿಯೊಳಗಿನ ಧರ್ಮ, ಪಂಥಗಳು ಭೀಕರ ಶೋಷಣೆ, ಹಿಂಸೆ, ರಕ್ತಪಾತಗಳಿಗೆ ಕಾರಣವಾಗಿವೆ ಹೊರತು ಅವು ಶಾಂತಿಯನ್ನು ಕೊಟ್ಟಿಲ್ಲ!! ದೇವರಿಗೆ ಬಲಿಕೊಡುವುದನ್ನು ಶಾಂತಿಯ ಹಿನ್ನೆಲೆ ಅಥವಾ ತ್ಯಾಗದ ಹಿನ್ನೆಲೆ ಇಟ್ಟು ವಿವರಿಸಿ ಫಲವೇನು?

ಧರ್ಮಗಳು ನಿರಂತರವಾಗಿ ಶಾಂತಿಯನ್ನು ಕೊಡಬೇಕಿದ್ದರೆ, ಮೊದಲು ಎಲ್ಲಾ ಧರ್ಮಗಳು ತಮ್ಮ ಸುತ್ತಲೂ ಹಾಕಿರುವ ಆ "ಬೇಲಿ"ಯನ್ನು ಮಾನಸಿಕವಾಗಿ ಕಿತ್ತೆಸೆಯಬೇಕು. ಆಗ ಮಾತ್ರ ಧರ್ಮದ ಹೆಸರಲ್ಲಿ ಶಾಂತಿಯ ಆರಂಭವಾಗುವುದು. ಒಟ್ಟಿನಲ್ಲಿ, ಆ ಪ್ರಾಚೀನ ವಾಮಾಚಾರವು ಮಾನವರನ್ನು ಹೊಸ ಹೊಸ ಆಚಾರಗಳ ಹಿನ್ನೆಲೆಯಲ್ಲಿ ಮತ್ತು ಅವುಗಳ ಉದಾತ್ತ ವ್ಯಾಖ್ಯಾನದ ಹೆಸರಲ್ಲಿ ಹೇಗೆಲ್ಲಾ ಮೋಸ ಮಾಡುತ್ತಾ ಬಂದಿದೆ ಎಂದು ಈಗ ಮತ್ತೂ ಸ್ಪಷ್ಟವಾಗುವುದು.

ದೇವರನ್ನು ದೇವರಾಗಿ ಮತ್ತು ಧರ್ಮವನ್ನು ಧರ್ಮವಾಗಿ ನೋಡಿದಲ್ಲಿ ಮಾತ್ರ, ದೇವರ ಮತ್ತು ಧರ್ಮದ ಹೆಸರಲ್ಲಿ ನಡೆಯುವ ಧರ್ಮಾಂಧತೆಯ ನರಬಲಿಗಳು ಸಂಪೂರ್ಣವಾಗಿ ನಿಂತುಹೋಗಬಹುದು.

---

## ಅತ್ಯಂತ ಚುಟುಕಾಗಿ ಈ ಜಗತ್ತು ಆ ಕಾಡು ಜನಾಂಗವಾಗಿ ಪರಿವರ್ತಿಸಲ್ಪಡದಂತೆ ಮಾಡಲು ಧರ್ಮ, ಪಂಥಗಳು ಅನಿವಾರ್ಯವಾಗಿ ಮಾಡಬೇಕಾದುದು ಏನು?

ಉತ್ತರ- ಬಹಳ ಚುಟುಕಾಗಿ ಹೇಳುವುದಾದರೆ ಈ ಮಾನವ ಜಗತ್ತು ಜಾಗ್ರತೆವಹಿಸಬೇಕಾಗಿರುವುದು ಎರಡೇ ವಿಷಯಗಳಲ್ಲಿ ಮಾತ್ರವಾಗಿದೆ. ಅವು, ಧರ್ಮ, ಪಂಥಗಳೊಳಗೆ ಯಾವ ಕಾಲಕ್ಕೂ "ಕ್ರೌರ್ಯ"ವು ಹೆಚ್ಚಾಗದಂತೆ ನೋಡಬೇಕು, ಅಂದರೆ ಕಡಿಮೆ ಮಡುತ್ತಾ ಬರಬೇಕು, ಮತ್ತು ಇನ್ನೊಂದು ಅವುಗಳಲ್ಲಿ ಎಂದೂ 'ಅನೈತಿಕ ಕಾಮ' ಹೆಚ್ಚಾಗದಂತೆಯೂ ನೋಡಬೇಕು ಅಷ್ಟೆ. ಇವುಗಳಲ್ಲಿ ಯಾವುದಾದರೂ ಒಂದು ಇದ್ದರೂ ನಾಶವು ಖಚಿತವಾಗಿದೆ. ಯಾಕೆಂದರೆ, ಕ್ರೌರ್ಯವನ್ನು ಅನೈತಿಕ ಕಾಮವಾಗಿ ನಿಮಿಷಾರ್ಧದಲ್ಲಿ ಪರಿವರ್ತಿಸಲು ಹಾಗೂ ಅನೈತಿಕ ಕಾಮವನ್ನು ನಿಮಿಷಾರ್ಧದಲ್ಲಿ ಕ್ರೌರ್ಯವಾಗಿ ಪರಿವರ್ತಿಸಲು ಆ ಪ್ರಾಚೀನ ವಾಮಾಚಾರಕ್ಕೆ ಸಾಧ್ಯವಾಗುವುದು. ಇದು ಸತ್ಯ.

---

## ನಂಬಿಕೆಯು ಸತ್ಯ ಅಥವಾ ಜ್ಞಾನಕ್ಕಿಂತಲೂ ಶ್ರೇಷ್ಠ ಎಂದು ವಾದ ಮಾಡಿದರೆ ಅದಕ್ಕೆ ನೀವು ಏನೆನ್ನುವಿರಿ?

ಉತ್ತರ- ನಂಬಿಕೆಯು ಸತ್ಯ, ಜ್ಞಾನಕ್ಕಿಂತಲೂ ಶ್ರೇಷ್ಠ ಎಂದರೆ, ಆ ರೀತಿ ಹೇಳಲು ಭ್ರಮೆಯಲ್ಲಿ ಮಾತ್ರ ಸಾಧ್ಯ ಎಂದು ಹೇಳುವೆನು. ಯಾಕೆಂದರೆ, ಅಲ್ಲಿ ತರ್ಕವು ಸಂಪೂರ್ಣವಾಗಿ ನಾಶವಾಗಿರುತ್ತದೆ. ಇದಕ್ಕೆ ಒಂದು ಉದಾಹರಣೆ ಕಥೆಯನ್ನು ನೋಡೋಣ. "ಮೂರು ಅಜ್ಜಿಯಂದಿರು, ಆ ಮೂವರಿಗೂ ಸರಿಯಾಗಿ ಪರಿಚಯವಿರುವ ಒಬ್ಬ ವೈದ್ಯರಲ್ಲಿಗೆ, ಆ ಮೂವರಿಗೂ ಸಾಮಾನ್ಯವಾಗಿರುವ "ಕಳ್ಳರ

ಭಯ"ವೆಂಬ ಒಂದೇ ಮಾನಸಿಕ ರೋಗಕ್ಕೆ ಚುಚ್ಚು ಮದ್ದನ್ನು ಪಡೆದು ಹಿಂದಿರುಗುತ್ತಿದ್ದರು. ಆದರೆ ವೈದ್ಯರು ಆ ಎರಡು ಶ್ರೀಮಂತ ಅಜ್ಜಿಯರಿಗಿಂತ ಎರಡು ಪಾಲು ಹೆಚ್ಚು ಹಣವನ್ನು ಅವರಲ್ಲಿ ಒಬ್ಬರಾದ ಅತ್ಯಂತ ಬಡ ಅಜ್ಜಿಯ ಕೈಯಿಂದ ವಸೂಲಿ ಮಾಡಿದುದು ಅವರಿಗೆ ತಿಳಿಯಿತು. ಅದು ಅವರಲ್ಲಿ ಕುತೂಹಲ ಮತ್ತು ಅಚ್ಚರಿಯನ್ನು ಮೂಡಿಸಿತು! ಕೊನೆಗೆ "ವೈಧ್ಯರು ನಿನಗೆ ಏನು ಮಾಡಿದರು?" ಎಂದು ಆ ಬಡ ಅಜ್ಜಿಯಲ್ಲಿ ಕೇಳುವಾಗ ಎಲ್ಲವೂ ಸ್ಪಷ್ಟವಾಯಿತು. ವೈದ್ಯರು ಆ ಬಡ ಅಜ್ಜಿಗೆ ಮಾತ್ರ ಒಂದರ ಬದಲು ಎರಡು ಚುಚ್ಚು ಮದ್ದನ್ನು ಕೊಟ್ಟು, ಮಾತ್ರೆಗಳನ್ನೂ ಆ ಇಬ್ಬರು ಅಜ್ಜಿಯರಿಗಿಂತ ಎರಡು ಪಾಲು ಹೆಚ್ಚು ಕೊಟ್ಟಿದ್ದರಂತೆ! ಅಂದರೆ, ವೈದ್ಯರಿಗೆ ಪರಿಚಯವಿರುವ ಕಾರಣ ಆ ಮೂರು ಅಜ್ಜಿಯಂದಿರ ಸಾಂಪತ್ತಿಕ ಹಿನ್ನೆಲೆ ಚೆನ್ನಾಗಿ ತಿಳಿದಿದೆ. ಆಗ, ಆ ಅತ್ಯಂತ ಬಡತನದ ಅಜ್ಜಿಗೆ ಕಳ್ಳರ ಭಯವಿದೆ ಎಂದರೆ ಆ ಅಜ್ಜಿ ತರ್ಕವನ್ನೆಲ್ಲಾ ಕಳಕೊಂಡು ಬರೇ ಒಂದು ತರದ ಭ್ರಮೆಯಿಂದ ಮಾತ್ರ ಭಯ ಪಡುತ್ತಿರುವುದು ಎಂದು ವೈದ್ಯರಿಗೆ ತಿಳಿಯಿತು. ಈ ಹಿನ್ನೆಲೆಯಲ್ಲಿ ಆ ಅಜ್ಜಿಗೆ ದೊಡ್ಡ ಪ್ರಮಾಣದಲ್ಲಿ ಮದ್ದನ್ನು ಕೊಟ್ಟಿರುವುದು ಎಂದು ಅರ್ಥ. ಇದೇ ರೀತಿ, ನಂಬಿಕೆಯ ಹಿನ್ನೆಲೆಯ ಆ ಮೇಲು ಜಾತಿ ಮತ್ತು ಧರ್ಮ ಶ್ರೇಷ್ಠತೆಗಳು ಸರ್ವ ತರ್ಕವನ್ನೂ ಕಳಕೊಂಡ ಭೀಕರ ಭ್ರಮೆಯಾಗಿದೆ. ಈ ಭ್ರಮೆಯನ್ನು ಇಂಗಿಸುವ ಔಷಧಿಗಳು ಸರಿಯಾಗಿ ಸಮಾಜಕ್ಕೆ ದೊರಕದ ಕಾರಣ, ಅವು ಇಷ್ಟು ಕ್ರೂರವಾಗಿ ಶೋಷಣೆ ಮತ್ತು ಕೊಚ್ಚಿ ಕೊಂದು ಹಾಕುವ ಕೆಲಸವನ್ನು ಮಾಡಿದವು ಎಂಬುವುದನ್ನು ಮರೆಯಬಾರದು.

---

## ನಿಮ್ಮ ಅನುಭವಗಳು ಎಲ್ಲವೂ 'ಭ್ರಮೆ' ಎಂದು ಕಣ್ಣು ಮುಚ್ಚಿ ಯಾರಾದರೂ ಹೇಳುವುದಾದರೆ ಅಂಥವರಿಗೆ ನಿಮ್ಮ ಉತ್ತರ ಏನಿರಬಹುದು?

ಉತ್ತರ- ಹಾಗೆ ಹೇಳುವ ಸಹೋದರ, ಸಹೋದರಿಯರಿಗಾಗಿ ಮಾತ್ರ ನಾನು ಇಲ್ಲಿ ಮಾತಾಡುತ್ತಿರುವುದು ಎಂದು ಮೊದಲಿಗೆ ಎಲ್ಲರೂ ತಿಳಿಯಬೇಕು. ಈ ರೀತಿ ಕಣ್ಣು ಮುಚ್ಚಿ ತಮಗೆ ತಾವೇ ಸಮಾಧಾನವನ್ನು ತರುವ ಅಭಿಪ್ರಾಯಗಳನ್ನು ಹೇಳುವುದು ಇದು ಮೊದಲ ಸಾರಿ ಏನೂ ಅಲ್ಲ. ಇದುವರೆಗಿನ ಎಲ್ಲಾ ಧರ್ಮ, ಪಂಥಗಳು ಇತರ ಧರ್ಮ, ಪಂಥಗಳನ್ನು ಇದೇ ರೀತಿ ಖಂಡಿಸಿ ತಮಗೆ ತಾವೇ ಸಮಾಧಾನ ಪಟ್ಟುಕೊಂಡು ಜೀವಿಸುತ್ತಾ ಬಂದಿವೆ!! ಇನ್ನು ನನ್ನ ವಿಚಾರದ ಬಗ್ಗೆ ಹೇಳಿದರೆ ಅದು ಅದ್ಭುತ ಏನೂ ಆಗುವುದಿಲ್ಲ. ನನ್ನ ಅನುಭವಗಳು "ಸುಳ್ಳು" ಎಂದು ತಾರ್ಕಿಕ ರೀತಿ ಇಲ್ಲದೆ ಬರೇ ವಿರೋಧಿಸುವ ರೀತಿಯಲ್ಲಿ ಹೇಳುವವರಿಗೆ ಮಾತ್ರ ಈ ಕೆಳಗೆ ಕೆಲವು ಅಂಶಗಳನ್ನು ಹೇಳುವೆನು, ಅವನ್ನು ಅವರು ಗಮನಿಸಲಿ.

- ಈ ಭೂಮಿಗೆ ಧರ್ಮಗಳನ್ನು ದೇವರಿಂದ ಅಥವಾ ಇನ್ನಾವ ರೀತಿಯಿಂದಾದರೂ ತಂದು ಕೊಟ್ಟವರು ಮಾನವ ಗುರುಗಳು ತಾನೇ? ಅಂದರೆ, ಅವರವರ ಗುರುಗಳೋ, ಯೋಗಿಗಳೋ, ಪ್ರವಾದಿಗಳೋ ಆಗಿರುವ ಆ ಮಾನವರ ಅನುಭವಗಳು ಮಾತ್ರವೇ [ತಮ್ಮೊಳಗೆ ಪರಸ್ಪರ ವಿರುದ್ಧವಾದರೂ] ಇಂದು ಹಲವು ಧರ್ಮಗಳಾಗಿ ಈ ಜಗತ್ತಲ್ಲಿ ಇರುವುದು ಎಂದು ಅರ್ಥ!!
- ನಾನೂ ಮಾನವ. ಹಾಗಿರುವಾಗ, "ನಮ್ಮ ಮಾನವ ಗುರುಗಳಿಗೆ ಮಾತ್ರವೇ ಸಾಧ್ಯ ಮತ್ತು ನಿಮಗೆ ಸೂಕ್ಷ್ಮ ಲೋಕದ ಅನುಭವವಾಗಲಾರದು" ಎಂದು ನನ್ನಲ್ಲಿ ಯಾರಿಗಾದರೂ ವಾದಿಸಲು ಸಾಧ್ಯವಾಗುವುದೇ? ಇಲ್ಲ, ಹಾಗೆ ಹೇಳಲು ಯಾರಿಗೂ ಸಾಧ್ಯವಾಗುವುದಿಲ್ಲ.
- ನಾನು ಈ ಸೂಕ್ಷ್ಮದ ಶಬ್ದ, ರೂಪಗಳನ್ನು ಮತ್ತು ಅವುಗಳ ಆ ವೈರುಧ್ಯಗಳಿಂದ ಕೂಡಿದ ಮಾತುಗಳನ್ನು ಅಲ್ಲೇ ಸಂಶಯಿಸಿದ ಪರಿಣಾಮವಾಗಿ ಅದರ ಸತ್ಯತೆಯ ಬಗ್ಗೆ ಸೂಕ್ಷ್ಮದಲ್ಲಿ ಬೇಹುಗಾರಿಕೆ ಮಾಡಿದೆನು. ಅದರ ಫಲವಾಗಿ ಮಾತ್ರವೇ ಇದುವರೆಗೂ ಜಗತ್ತಿಗೆ ತಿಳಿಯದಿರುವ ಆ ಪ್ರಾಚೀನ ವಾಮಾಚಾರದ ಬಗ್ಗೆ ನಾನು ಹೇಳುತ್ತಿರುವುದು ಎಂದು ತಿಳಿಯಬೇಕು. ನಾನು ಹೇಳುತ್ತಿರುವ ಮಾತುಗಳ ಹಿನ್ನೆಲೆಯು ಆ "ಬೇಹುಗಾರಿಕೆಯ ಫಲ" ಎಂಬ ಆ ಮುಖ್ಯ ಕಾರಣವನ್ನು ಇನ್ನೊಮ್ಮೆ ಆಲೋಚಿಸಿ ತಿಳಿದುಕೊಳ್ಳುವುದು ಉತ್ತಮ.
- ಸೂಕ್ಷ್ಮದಲ್ಲಿ ಕೇಳಿದ್ದನ್ನು ಅಥವಾ ಕಂಡದ್ದನ್ನು ಅತ್ತ ಇತ್ತ ನೋಡದೆ ನೇರವಾಗಿ ಒಪ್ಪಿಕೊಂಡಿರುವುದರ ಬದಲು ಈ ಧರ್ಮಗಳು, ಈ ಮೊದಲೇ, ಬೇಹುಗಾರಿಕೆಯನ್ನು ಮಾಡಿರುತ್ತಿದ್ದರೆ, ಇಂದಿರುವ ಧರ್ಮಗಳೆಲ್ಲದರ ಸ್ವರೂಪಗಳೂ ಬೇರೆಯೇ ಇರುತ್ತಿದ್ದವು ಮತ್ತು ನನಗೆ ಇಂದು ನಿಮ್ಮ ಮುಂದೆ ಮಾತನಾಡುವ ಅಗತ್ಯವೂ ಬರುತ್ತಿರಲಿಲ್ಲ.

ಅಚ್ಚರಿ ಎಂದರೆ, ಈ ಜಗತ್ತಲ್ಲಿ, ಇದುವರೆಗೂ, ಸರ್ವರಿಗೂ ಒಂದೇ ಆಗಿರುವ ಸೂರ್ಯನಂಥ ಸೃಷ್ಟಿಕರ್ತ ದೇವರನ್ನು ಒಂದೇ ರೀತಿಯಲ್ಲಿ ವಿವರಿಸದೆ ಎಲ್ಲರೂ ಬೇರೆ ಬೇರೆ ರೀತಿಗಳಲ್ಲಿ ವಿವರಿಸಿ ತೋರಿಸಿದ್ದಾರೆ ಎಂಬುವುದಾಗಿದೆ!! ಇದು "ಆ ಒಬ್ಬನೇ ಆಗಿರುವ ಸೃಷ್ಟಿಕರ್ತ ದೇವರು ಇದ್ದಾನೆ" ಎಂಬ ಸತ್ಯವನ್ನು ಸಾಧಿಸಿ ತೋರುವುದಿಲ್ಲ, ಬದಲು ಸರ್ವರೂ ಗೊಂದಲಗಳಲ್ಲಿ ಹುದುಗಿರುವುದನ್ನು ಮಾತ್ರ ತೋರುವುದು. ಹೀಗೆ, ಎಲ್ಲರೂ ಒಂದೇ ರೀತಿಯಲ್ಲಿ ವಿವರಿಸದೆ ಅವರವರಿಗೆ ತೋರಿದ ರೀತಿಯಲ್ಲಿ ಆ ಒಬ್ಬ ಸೃಷ್ಟಿಕರ್ತ ದೇವರು ಮತ್ತು ಆತನ ಮಾತುಗಳನ್ನು ವಿವರಿಸುವ ಕಾರಣ ಮತ್ತು ಇನ್ನೊಂದು ಧರ್ಮದ ಸೃಷ್ಟಿಕರ್ತನನ್ನು ನಿಂದಿಸುವ ಕಾರಣ, ಅಲ್ಲಿ ಭ್ರಮೆಯ ಸ್ವರೂಪವು ಇರುವುದನ್ನು ನ್ಯಾಯವಾಗಿ ಸಂಶಯಿಸಬಹುದಾಗಿದೆ. ನಾನು, ಆ ಒಬ್ಬನೇ ಸೃಷ್ಟಿಕರ್ತನು ಇದ್ದಲ್ಲಿ, ಆತನನ್ನು ಎಲ್ಲರೂ ಒಟ್ಟಾಗಿ ಸೇರಿ ಆನಂದದಿಂದ ಭಜಿಸಬೇಕು ಎಂದು ಮಾತ್ರ ಹೇಳುವೆನು. ಯಾಕೆಂದರೆ ಒಬ್ಬ ಸೃಷ್ಟಿಕರ್ತನಿಗೆ, ಹಲವು ಬೇರೆ ಬೇರೆ ಮತ್ತು ಪರಸ್ಪರ ವಿರುದ್ಧ ರೀತಿಯ ಆಚಾರಗಳಿಂದ ಕೂಡಿರುವ ಆರಾಧನೆಯು ಸಾಧ್ಯವಾಗಲಾರದು, [ಸೃಷ್ಟಿಕರ್ತರು ಇತರ ಧರ್ಮಗಳ ರೀತಿಗಳನ್ನು ನಿಷಿದ್ಧ ಎಂದು ಎಚ್ಚರಿಸಿ, ಅದೇ ರೀತಿ ಜನರು ಇತರ ಧರ್ಮದ ರೀತಿಗಳು ಸ್ವಲ್ಪವೂ ತಮ್ಮ ಧರ್ಮದಲ್ಲಿ ಬಾರದ ಹಾಗೆ ಕಾಯ್ದು ಕೊಂಡಿರುವುದನ್ನು ಇಲ್ಲಿ ನೆನಪಿಸಬೇಕು.]

ಇನ್ನು, ಆ ಒಬ್ಬ ಸೃಷ್ಟಿಕರ್ತನಿಗಾಗಿ ಎಲ್ಲಾ ಧರ್ಮದ ಜನರು ಒಟ್ಟು ಸೇರಿ ಆ "ಸೃಷ್ಟಿಕರ್ತ" ಎಂಬ ಏಕ ದೇವರ ಸಂಕಲ್ಪಕ್ಕೆ ಪ್ರಾರ್ಥನೆಯನ್ನು ಸಲ್ಲಿಸಲು ಸಾಧ್ಯವಾಗಬೇಕಾಗಿದೆ. ಇಷ್ಟಾದರೂ ಧರ್ಮಗಳಿಗೆ ಮಾಡಲು ಸಾಧ್ಯವಾಗಬಹುದೇ? ಸಾಧ್ಯವಾದರೆ ಅಲ್ಲಿ ಭ್ರಮೆಯಿಲ್ಲ ಎನ್ನಬಹುದು, ಎಲ್ಲಾದರೂ ಸಾಧ್ಯವಾಗದೆ ಇದ್ದಲ್ಲಿ [ಇದುವರೆಗೂ, ಅತ್ಯಪರೂಪದ, ಕೆಲವು ಗಂಟೆಗಳ, ಸರ್ವಧರ್ಮ ಸಮ್ಮೇಳನದ ಕೆಲವು ಭಾಷಣಗಳು ಹೊರತಾಗಿ ನಿಜ ಜೀವನದಲ್ಲಿ ಆ ರೀತಿಯ ಬದಲಾವಣೆ ಸಾಧ್ಯವಾಗಿಲ್ಲ ಎಂದು ನಮಗೆ ಗೊತ್ತಿದೆ] ಆ ಪ್ರಾಚೀನ ವಾಮಾಚಾರವು ಮುಂದೆ ಯಾವುದನ್ನೂ ಉಳಿಸುವುದಿಲ್ಲ. ಈ ಜಾತೀಯತೆ ಮತ್ತು ಧರ್ಮಾಂಧತೆ ಎಂದರೆ ಅದರ ಇನ್ನೊಂದು ರೀತಿಯ ಅನುಭವವನ್ನು ನೋಡೋಣ. ಶೂದ್ರನು ಮೇಲು ಜಾತಿಯ ಮನೆಯ ಒಳಗೆ ಬಂದರೆ ಮನೆ ಮಂದಿಗೆ ಹೊಟ್ಟೆ ಉರಿಯುವುದು! ಮನೆಯೊಳಗೆ ನೀರು ಮುಟ್ಟಿದರೆ ಅಂತೂ ಆ ಹೊಟ್ಟೆ ಉರಿಯು ಮತ್ತೂ ಮೂರು ಪಟ್ಟು ಹೆಚ್ಚುವುದು!!! ಈ ಹೊಟ್ಟೆ ಉರಿಯೇ ಜಾತೀಯತೆಯಾಗಿದೆ, ಆ ಭಾವನೆ ಬರಲು ನಿಜವಾಗಿಯೂ ಯಾವ ಆಧಾರವೂ ಇಲ್ಲ ಎಂಬುವುದೇ ಅತ್ಯಂತ ಅಚ್ಚರಿಯ ವಿಷಯವಾಗಿದೆ!!! ಇಂದೂ ಎಲ್ಲಾ ಜಾತಿಯಲ್ಲಿಯೂ ತನ್ನಕ್ಕಿಂತ ಕೆಳ ಜಾತಿಯವರ ಮೇಲೆ ಇದೇ ಈ ಹೊಟ್ಟೆ ಉರಿ ಭಾವನೆ ಇದೆ ಅಂದರೆ ಈ ಕೊಳಚೆ ನೀರನ್ನು ತಮ್ಮಲ್ಲಿ ಇಟ್ಟುಕೊಂಡು ಇಷ್ಟು ಸಹಸ್ರ ವರುಷ ಅದನ್ನು ದೂಡಿಕೊಂಡು ಬರಲು ಈ ಜನ ಸಮೂಹಕ್ಕೆ ನಾಚಿಕೆಯಾಗಲಿಲ್ಲ ಯಾಕೆಂದು ಮಹಾತ್ಮರು ಅಚ್ಚರಿಪಡುವರು!! ಯಾಕೆಂದರೆ, ಇತ್ತ ದೊಡ್ಡ ದೊಡ್ಡ "ವಸುದೈವ ಕುಟುಂಬಕಮ್", "ದೇವರ ಮಕ್ಕಳು", "ಎಲ್ಲರ ಆತ್ಮವೂ ಒಂದೇ", ಎಂದೆಲ್ಲಾ ಬಾಷಣ ಬಿಗಿಯುತ್ತಾ ಈ ರೀತಿ ಮಾಡಿದರಲ್ಲ ಎಂಬುವುದೇ ಅಚ್ಚರಿಗೆ ಇನ್ನೊಂದು ದೊಡ್ಡ ಕಾರಣವಾಗಿದೆ!! ಸತ್ಯಸಂಧತೆ ಇಲ್ಲದಿದ್ದರೆ ಇನ್ನು ಏನು ದೇವರು, ಧರ್ಮ? ಆ ಪ್ರಾಚೀನ ವಾಮಾಚಾರವು ಈ ಜಾತಿಗಳಲ್ಲೇ ಅಷ್ಟು ಹೊಟ್ಟೆಉರಿಯನ್ನು ಇಟ್ಟಿರುವಾಗ, ಇನ್ನು ಜಗತ್ತಿನ ಧರ್ಮಾಂಧತೆಗಳಲ್ಲಿ ಆ ಪ್ರಾಚೀನ ವಾಮಾಚಾರವು ಎಷ್ಟು ಹೊಟ್ಟೆ ಉರಿಯನ್ನು ಹಾಕಿರಲಾರದು? ಈ ಹೊಟ್ಟೆ ಉರಿಯೇ 'ಒಂದೇ ಸೃಷ್ಟಿಕರ್ತ' ಎಂದು ಜಗತ್ತಿನಲ್ಲಿ ಎಲ್ಲರೂ ವಾದ ಮಾಡುತ್ತಿದ್ದರೂ ಜನರು ಎಲ್ಲರೂ ಒಟ್ಟಾಗಿ ಕುಳಿತು ಆತನ ಭಜನೆಯನ್ನು ಅಥವಾ ಪ್ರಾರ್ಥನೆಯನ್ನು ಮಾಡದೆ ದ್ವೇಷ, ಹಿಂಸೆ, ರಕ್ತಪಾತವನ್ನು ಮಾಡಲು ಕಾರಣವಾಗಿರುವುದು ಎಂದು ತಿಳಿಯಬೇಕು. ಅಂದರೆ, ಧರ್ಮಾಂಧತೆಯಲ್ಲಿ, ಈ ಹೊಟ್ಟೆ ಉರಿಯೆಂಬ ವಿಷವನ್ನು, ಆ ಪ್ರಾಚೀನ ವಾಮಾಚಾರವು, ಜಗತ್ತಿನ ಮಾನವರೆಲ್ಲರೂ ಒಂದಾಗಬಾರದು ಎಂದು ಆ ಒಂದಾಗುವಲ್ಲೇ ಇಟ್ಟಿರುವುದು! ಅದಕ್ಕಾಗಿ ಅದು "ತಮ್ಮ ಧರ್ಮವೇ ಜಗತ್ತನ್ನು ಮುಂದೆ ಜಯಿಸಲಿರುವುದು" ಎಂದು ಎಲ್ಲಾ ಧರ್ಮಗಳಲ್ಲೂ ಒಂದು ಭ್ರಮೆಯನ್ನು ಒಳಗಿಂದ ತುಂಬಿಸಿರುವುದು! ಮಾನವರು ಅದಕ್ಕಾಗಿ ಖಡ್ಗ, ಕೋವಿ, ಬಾಂಬುಗಳನ್ನು ಶೇಖರಿಸುತ್ತಾ ಇದ್ದಾರೆ!! ಎಲ್ಲರೂ ಒಂದಾದರೆ, ಮತಾಂತರವು ಸಾಧ್ಯವಾಗದೆ, ಈ ಜಗತ್ತನ್ನು ತಮ್ಮ ಧರ್ಮವು ಜಯಿಸಲು ಸಾಧ್ಯವಾಗಲಾರದು ಎಂಬ ಆ ಪ್ರಾಚೀನ ವಾಮಾಚಾರ ಕೊಟ್ಟಿರುವ ಭ್ರಮೆಯ ಪ್ರಭಾವವು ನಿಜವಾಗಿಯೂ ಬಹಳವಾಗಿ

ಕೆಲಸಮಾಡುತ್ತಿರುವುದನ್ನು ನಮಗೆ ಎಲ್ಲೆಡೆಯೂ ಕಾಣಬಹುದಾಗಿದೆ. ಇನ್ನು, ಆ ಪ್ರಾಚೀನ ವಾಮಾಚಾರದ ಇನ್ನೊಂದು ಉಪಾಯವನ್ನೂ ಇಲ್ಲಿ ನೋಡಬಹುದು. ಅದು ಏನೆಂದರೆ, ಎಲ್ಲಾದರೂ ಒಬ್ಬಾತನಿಗೆ ತನ್ನ ಹೊಟ್ಟೆ ಉರಿ ರೀತಿಯು ಸರಿಯಲ್ಲ ಎಂದು ತಿಳಿದರೂ, ಆ ಹೊಟ್ಟೆ ಉರಿಯನ್ನು ಆತನು ತನ್ನಲ್ಲೇ ಅನುಭವಿಸುವ ಕಾರಣ, ಆತನು ಅದಕ್ಕೆ ತಾನೇ ಹೊಣೆ ಎಂದು ತನ್ನೊಳಗೇ

ತಿಳಿದುಕೊಳ್ಳುವನು, ಮತ್ತು ದುಷ್ಟ ಶಕ್ತಿಗಳ ಪಾತ್ರ ಅದರಲ್ಲಿ ಇಲ್ಲವೆಂದೂ ಆತನಿಗೆ ತೋರುವಂತೆ ಇರುವುದು. ಈ ರೀತಿಯಲ್ಲಿ, ಆ ಪ್ರಾಚೀನ ವಾಮಾಚಾರಕ್ಕೆ ಮಾನವನ ಸ್ವಭಾವದ ಅವನತಿಯಲ್ಲಿ ಇರುವ ಆ ತನ್ನ ನೇರ ಪಾತ್ರವನ್ನು ಬಹಳ ರಹಸ್ಯವಾಗಿಯೇ ಇಂದಿನ ತನಕವೂ ಇರಿಸಿಕೊಳ್ಳಲು ಸಾಧ್ಯವಾಗಿದೆ. ಇದು ಮಾತ್ರವಲ್ಲದೆ, ಮೊದಲಲ್ಲೇ, ಆ ಪ್ರಾಚೀನ ವಾಮಾಚಾರವು ಜಗತ್ತಿನ ಎಲ್ಲಾ ಧರ್ಮಗಳಲ್ಲೂ ಅದಕ್ಕೆ ಬೇಕಾಗುವ ಕೆಲವು ಪ್ರತ್ಯೇಕ ರೀತಿಯ ಮಾತುಗಳನ್ನೂ ಸೇರಿಸಿ ಇಟ್ಟಿರುವುದು. ಅಂದರೆ, ಮಾನವನು, ಕಾಲಹೋದಂತೆ, ಆಯಾ ಧರ್ಮಗಳಲ್ಲಿ ಈ ಪ್ರಾಚೀನ ವಾಮಾಚಾರವು ಪ್ರತ್ಯೇಕವಾಗಿ ಸೇರಿಸಿರುವ ಮಾತುಗಳನ್ನೇ ಧರ್ಮವೆಂದು ವಾದ ಮಾಡುವಂತೆ ಅದು ಹೆಚ್ಚು ಹೆಚ್ಚು ಪ್ರೇರೇಪಿಸುತ್ತಾ ಹೋಗುವುದು. ಅಂದರೆ, ಧರ್ಮದಲ್ಲಿರುವ ಆ ನಿಜವಾದ ವಿಶಾಲ ಮನಸ್ಕತೆಯಿಂದ ಕೂಡಿದ ಧರ್ಮದ ಸಾರದ ಭಾಗವನ್ನು ಪೂರ್ಣವಾಗಿ ಕಡೆಗಣಿಸುವಂತೆಯೂ ಅದು ಪ್ರೇರೇಪಿಸುವುದು ಎಂದು ಅರ್ಥ!! ನಾವು ಇದನ್ನು ಎಲ್ಲಾ ಧರ್ಮ, ಪಂಥಗಳಲ್ಲೂ ಕಾಣುವೆವು. ಇಂದು ಜನರಿಗೆ ಧರ್ಮದಲ್ಲಿನ ಹಲವು ನಂಬಿಕೆ, ಆಚಾರಗಳು ಮಾತ್ರ ಧರ್ಮವಾಗಿ ಕಾಣಿಸುವುದು, ಆದರೆ ನೈತಿಕತೆ ಮತ್ತು ಸ್ವಭಾವ ಶುದ್ದಿಯೆಂಬ ಆ ನಿಜವಾದ ಧರ್ಮದ ಭಾಗವು ಯಾರಿಗೂ ಬೇಕಾಗಿಲ್ಲ!! ಇಲ್ಲೆಲ್ಲಾ, ಧರ್ಮಗಳೊಳಗೆ, ಆ ಪ್ರಾಚೀನ ವಾಮಾಚಾರದ ಮೋಸವನ್ನು ನಮಗೆ ಸ್ಪಷ್ಟವಾಗಿ ಕಾಣಬಹುದಾಗಿದೆ.

ಜಗತ್ತಿಗೆ 'ಒಬ್ಬನೇ ಸೃಷ್ಟಿಕರ್ತ' ಎಂದು ಹೇಳುವ ಜಗತ್ತಿನ ಸರ್ವರೂ, ಆ ಒಂದೇ ದೇವರನ್ನು, ಒಟ್ಟಾಗಿ ಕುಳಿತು, ಪೂಜಿಸಿ, ಪ್ರಾರ್ಥಿಸಿ, ಜಗತ್ತಿನ ಮುಂದೆ ಅದನ್ನು ತೋರಿಸಿಕೊಡುವ ಜವಾಬ್ದಾರಿಯನ್ನು ಹೊಂದಿರುವರು. ಮಾತ್ರವಲ್ಲ, ಆ ಸಂದೇಶವನ್ನು ಜಗತ್ತಿನ ಸರ್ವ ಜನರಿಗೂ ತಲುಪಿಸುವ ಆ ಮತ್ತೂ ದೊಡ್ಡದಾದ ಜವಾಬ್ದಾರಿಯೂ ಅದರೊಂದಿಗೆ ಅವರಿಗೆ ಇರುವುದು. ಅದು ಸಾಧ್ಯವಲ್ಲ ಎಂದು ಹೇಳುವುದಾದರೆ, ಎಲ್ಲರೂ ತಮ್ಮ ತಮ್ಮ ದೇವರುಗಳು ತಮಗೆ ಮಾತ್ರವೇ ಸೀಮಿತಗೊಂಡಿರುವ ಆ "ದೇವತೆ"ಗಳು ಮಾತ್ರ ಎಂದು ಸತ್ಯಸಂಧವಾಗಿ ಒಪ್ಪಿಕೊಳ್ಳಬೇಕಾಗುವುದು. ತಾಯಿಯು ಅವಳ ಮಕ್ಕಳಿಗೆ ಎಲ್ಲರಿಗೂ ಒಬ್ಬಳೇ ಆಗಿರುವಾಗ, ಅದೇ ತಾಯಿಯನ್ನು ಅವಳ ಒಬ್ಬ ಮಗನು "ನನ್ನ ಸ್ವಂತ ಸಹೋದರರ ತಾಯಿ ಕೆಟ್ಟವಳು, ಆದರೆ ನನ್ನ ತಾಯಿ ಅತ್ಯಂತ ಒಳ್ಳೆಯವಳು, ಬೇಕಿದ್ದರೆ ಅದನ್ನು ವಾದ ಮಾಡಿ ತೋರಿಸಿ ಕೊಡುತ್ತೇನೆ" ಎಂದು ಹೇಳಲು ಸಾಧ್ಯವಾಗುವುದೇ? ದಯವಿಟ್ಟು ಉತ್ತರವನ್ನು ಹೇಳಿ. ಈ ಧರ್ಮ ಪಂಡಿತರುಗಳ, ಹಲವು ಸಹಸ್ರ ವರುಷಗಳ, ತಮ್ಮ ಧರ್ಮದ ಶ್ರೇಷ್ಠತೆಯ ಭಾಷಣಗಳು ಈ ರೀತಿಯಲ್ಲಿ ಪೂರ್ಣವಾಗಿಯೂ ಅರ್ಥಹೀನವಾಗಿ ಹೋಗುತ್ತವೆ ಎಂದು ಅರಿತುಕೊಳ್ಳಬಹುದು.ಅಷ್ಟು ಮಾತ್ರವಾದರೂ ಸಹಿಸಬಹುದಾಗಿತ್ತು, ಆದರೆ ಅವು ಸಮಾಜದಲ್ಲಿ ಮಾನವರನ್ನು ವಿಭಜಿಸಿ, ಶೋಷಣೆ, ದ್ವೇಷ, ರಕ್ತಪಾತಗಳನ್ನು ಸೃಷ್ಟಿಸಿ ಶಾಂತವಾಗಿದ್ದ ಸಮಾಜವನ್ನು ಸರ್ವನಾಶ ಮಾಡಿದವು, ಮತ್ತು ಮಾನವರಲ್ಲಿ, ಮಕ್ಕಳಲ್ಲೂ ಸೇರಿ, ಸರ್ವರಲ್ಲೂ ಕ್ರೌರ್ಯವನ್ನು ಹೆಚ್ಚಿಸುತ್ತಾ ಬಂದವು!! ಅತ್ತ ನೋಡಿ, ಇನ್ನು, ಇತ್ತ ನೋಡಿ, ಎಲ್ಲೂ ತಮ್ಮ ತಮ್ಮ ಧರ್ಮಗಳ ಶ್ರೇಷ್ಠತೆಯ ಅದೇ ಭಯಾನಕ ಭಾಷಣಗಳು! ತಮ್ಮ ಹಿಂದಿರುವ ಆ ಕರಾಳ ಹಸ್ತಗಳ ಪರಿವೇ ಇಲ್ಲದೆ ಮೊದಲಿಗಿಂತಲೂ ಹೆಚ್ಚು ಶಕ್ತಿಯನ್ನು ಪಡೆದು ಈ ಬೊಂಬೆಯಾಟಗಳು ಮುಂದುವರಿಯುತ್ತಾ ಹೋಗುತ್ತಿವೆ!!!

## ಆ ಪ್ರಾಚೀನ ವಾಮಾಚಾರವು ಯಾಕೆ ಸಮಾಜದಲ್ಲಿ ಕೆಟ್ಟ ಸ್ವಭಾವವನ್ನು ಸೃಷ್ಟಿಸಲು ಪ್ರಯತ್ನಿಸುತ್ತದೆ?

ಉತ್ತರ- ಇದರ ಉತ್ತರವನ್ನು ಹಲವು ರೀತಿಯಲ್ಲಿ ಈ ಮೊದಲೇ ತಿಳಿಸಿದ್ದೇನೆ. ಇನ್ನೂ ಸಂಶಯವಿದ್ದವರು ಈಗ ಅದನ್ನು ಪರಿಹರಿಸಿಕೊಳ್ಳಬಹುದು. ಆ ಪ್ರಾಚೀನ ವಾಮಾಚಾರಕ್ಕೆ ಬೇಕಾಗಿರುವ ಆ ಎರಡು ಮುಖ್ಯ ಮನೋ ಶಕ್ತಿಯ ಭಾವಗಳು ಎಂದರೆ ಕ್ರೌರ್ಯ, ಮತ್ತು ಅನೈತಿಕ ವಿಕೃತ ಕಾಮವಾಗಿದೆ. ಈ ಎರಡನ್ನು ಉತ್ತಮ ಮತ್ತು ಶಾಂತ ಸಮಾಜದಲ್ಲಿ ಪಡೆಯಲು ಎಂದಿಗೂ ಸಾಧ್ಯವಿಲ್ಲ ಅದಕ್ಕೆ ಅದು ಕಾಲಾ ಕಾಲಕ್ಕೆ ಸಮಾಜವನ್ನು ಕೆಟ್ಟದನ್ನಾಗಿ ಮಾಡಿ ತಮಗೆ ಬೇಕಾದುದನ್ನು ಪಡೆದು ಕೊಳ್ಳುತ್ತವೆ. ಈ ಎರಡು ಭಾವವನ್ನು ಸೃಷ್ಟಿಸಲು ಒಮ್ಮೆಗೇ ಸಾಧ್ಯವಾಗುವುದಿಲ್ಲ, ಅಲ್ಲಿ ಅವು ಹಲವು ಹಂತಗಳನ್ನು ಅನುಸರಿಸುವವು. ಮೊದಲು ದ್ವೇಷ, ಅಹಂಕಾರ ಅಸೂಯೆ ಇತ್ಯಾದಿಗಳಿಂದ "ವಿಭಜನೆ" ಮಾಡುವುದು, ಅನಂತರ ನಿರಂತರ ದ್ವೇಷ, ಅಸೂಯೆ, ಅಹಂಕಾರ, ಸ್ವಾರ್ಥ, ಇತ್ಯಾದಿ ಗಳನ್ನು ಶಾಶ್ವತವಾಗಿ ಮತ್ತು ಬೇಗನೆ ಬೆಳೆಸಿಕೊಳ್ಳುವವು. ಆ ಮೇಲೆ ಅಗತ್ಯವಿದ್ದಲ್ಲಿ ದೊಡ್ಡ ಜಗಳ, ರಕ್ತಪಾತವನ್ನು ಅವು ಮಾಡಿಸುವವು! ಇದು ಮನೆ ಜಗಳದಿಂದ ಹಿಡಿದು, ನೆರೆ ಮನೆ, ಸಂಬಂಧಿಕರು,

ಜಾತಿ, ಹತ್ತಿರದ ಸಮಾಜ, ಧರ್ಮ, ಪಂಥ, ಇತ್ಯಾದಿಗಳೆಲ್ಲದರಲ್ಲೂ ಸೇರಿ ಕೊನೆಗೆ ಅಂತಾರಾಷ್ಟ್ರೀಯ ದ್ವೇಷ, ಹಾಗೂ ಯುದ್ಧಗಳ ವರೆಗೂ ವ್ಯಾಪಿಸಿದೆ!! ಇದು ಮನುಷ್ಯ ಮತ್ತು ಆತನ ಸಮಾಜದಲ್ಲಿ ಕಾಣಿಸುವ ಬದಲಾವಣೆ ಬಗ್ಗೆ ಮಾತ್ರ ಇರುವ ವಿವರಣೆಯಾಗಿದೆ. ಈ ಪ್ರಾಚೀನ ವಾಮಾಚಾರವು, ಈ ಜಗತ್ತು ಧರ್ಮ, ಸತ್ಯ, ದೇವರು, ಇತ್ಯಾದಿಗಳನ್ನು ತೊದಲು ನುಡಿವ ಮೊದಲೇ ಸೃಷ್ಟಿಯಾಗಿದ್ದ ವ್ಯತ್ಯಸ್ಥ ಮತ್ತು ತನ್ನನೇ ತಾನೇ ಬೆಳೆಸಿಕೊಳ್ಳಲು ಸಮರ್ಥವಾದ ಒಂದು ವಾಮಾಚಾರ ವ್ಯವಸ್ಥೆ ಎಂಬುವುದನ್ನು ಮರೆಯಬಾರದು. [ಇದು ಇಷ್ಟಕ್ಕೆ ಮುಗಿದಿಲ್ಲ ಮಾನವನ ಆಂತರ್ಯದಲ್ಲಿ ಈ ಪ್ರಾಚೀನ ವಾಮಾಚಾರವು ಹಲವು ರೀತಿಯಲ್ಲಿ ತನಗೆ ಬೇಕಾದಂತೆ ಶಕ್ತಿಯನ್ನು ತಯಾರು ಮಾಡುವುದು ಎಂದು ಹೇಳಿದ್ದೇನಲ್ಲ, ಆದರೆ ಅವು ಮತ್ತು ಇನ್ನು ಹಲವು ಬಾಹ್ಯದ ಘಟನೆಗಳೂ ಅವು ಸಂಬಂಧಿಸಿವೆ ಎಂಬ ಸತ್ಯವು ರಹಸ್ಯವಾಗಿಯೇ ಉಳಿಯಲಿ. ಯಾಕೆಂದರೆ, ಅವನ್ನೆಲ್ಲಾ ಹೇಳುವುದರಲ್ಲಿ ಖಂಡಿತಾ ಮಾನವರಿಗೆ ಲಾಭವಿಲ್ಲ.]

ಇನ್ನು, ಜಗತ್ತು ನಿಜವಾಗಿಯೂ ಹಿಂಸೆಯ ನೋವಿನಿಂದ ಮತ್ತು ಮದುವೆ ಇಲ್ಲದೆ ಮುಕ್ತ ಕಾಮದ ಭೂತಗಳ ಕೈಗಳಿಂದ ಹೊರಬಂದು ಉತ್ತಮರಾಗಬೇಕು ಎಂದು ಆಸೆ ಇದ್ದಲ್ಲಿ, ಅದಕ್ಕೆ ಜಾಗತಿಕವಾಗಿ ಮಾನವರು ಧರ್ಮ, ಪಂಥಗಳ ಹೆಸರಲ್ಲಿ ಒಂದಾಗುವುದು ಒಂದೇ ದಾರಿ ಹೊರತು, ಅದನ್ನು ಯಾವ ಧರ್ಮದ, ಯಾವ ಆಚಾರದಿಂದ ನೀಗಿಸಲು ಸಾಧ್ಯವಿಲ್ಲ!!

---

## ಯಾವುದು ಧರ್ಮ ಮತ್ತು ಯಾವುದು ಧರ್ಮವಲ್ಲ ಎಂಬುವುದನ್ನು ಒಂದು ಉದಾಹರಣೆಯ ಸಹಾಯದಿಂದ ಸ್ಪಷ್ಟಪಡಿಸಬಹುದೇ?

ಉತ್ತರ- ಇಲ್ಲಿ ಒಂದು ಚಿಕ್ಕ ಕಥೆಯಿದೆ. ಪ್ರಾಚೀನ ಕಾಲದಲ್ಲಿ, ಪಿಶಾಚಿಗಳ ರಾಜನು ಜನರನ್ನು ಕೆಟ್ಟ ದಾರಿಗೆ ಎಳೆದು ತರಲು ಬಹಳ ಪ್ರಯತ್ನಿಸಿದರೂ, ಅಂದು ಅವರಿಗೆ ಒಳ್ಳೆಯತನದ ಅರ್ಥದ ಸ್ಪಷ್ಟತೆ ಇದ್ದುದರಿಂದ ಆತನಿಗೆ ಏನೂ ಮಾಡಲು ಸಾಧ್ಯವಾಗಿಲ್ಲ. ಆಗ, ಆತನು ತನ್ನ ಬುದ್ಧಿವಂತ ಪಿಶಾಚಿಗಳನ್ನೆಲ್ಲಾ ಕರೆದು ಪರಿಹಾರ ಕಾಣದೆ ಇರುವ ತನ್ನ ದುಃಖವನ್ನು ಹೇಳಿಕೊಂಡನು. ಮಾತ್ರವಲ್ಲ, ದೇವರು, ಕೆಲವು ದಿನಗಳಲ್ಲೇ ಒಂದು ದೊಡ್ಡ ಸಂಖ್ಯೆಯ ಜಪ ಸಾಧನೆಯನ್ನು ಮಾಡಿಸುವನು ಮತ್ತು ಅದನ್ನು ಪೂರ್ಣಗೊಳಿಸುವ ಭಕ್ತರಿಗೆಲ್ಲಾ ಅವರವರ ಆಸೆಗನುಸಾರವಾಗಿ ಒಂದೊಂದು ವರಗಳನ್ನು ಕೊಡುವನು ಎಂದೂ, ತನಗೆ ತಿಳಿದ ಆ ಸುದ್ದಿಯನ್ನೂ ಎಲ್ಲರಿಗೂ ತಿಳಿಸಿದನು. ಆಗ, ಒಬ್ಬ ಬುದ್ಧಿವಂತ ಪಿಶಾಚಿ ಎದ್ದು, ತಾನು ಅದಕ್ಕೆ ಪರಿಹಾರ ಕಾಣುವುದಾಗಿ ಹೇಳಿ ತನ್ನ ರಾಜನನ್ನು ಸಮಾಧಾನ ಪಡಿಸಿದನು. ರಾಜ ಪಿಶಾಚಿಗೆ ಅಚ್ಚರಿಯಾದರೂ, ಏನೂ ಹೇಳದೆ ಆತನಿಗೆ ಒಪ್ಪಿಗೆಯನ್ನು ಕೊಟ್ಟನು. ಈ ಬುದ್ಧಿವಂತ ಪಿಶಾಚಿಯು ಎಲ್ಲಾ ಭಕ್ತರೊಂದಿಗೆ ತಾನೂ ಜಪ ಸಾಧನೆಗೆ ಕೂರುವುದಾಗಿ ಹೇಳಿ ಹೋಗಿ ಕೂತನು. ಕೊನೆಯಲ್ಲಿ, ಆ ಜಪವೆಲ್ಲ ಮುಗಿದು ದೇವರು ಒಬ್ಬೊಬ್ಬರಿಗೆ ಒಂದೊಂದು ವರವನ್ನು ಕೊಡುತ್ತಾ ಬರುವಾಗ, ಎಲ್ಲಾ ಭಕ್ತರು ತಮಗೆ ದೊಡ್ಡ ದೊಡ್ಡ ವರವನ್ನು ಕೇಳಿಕೊಂಡರು. ಅದೆಲ್ಲ ಆಗಿ ಕೊನೆಗೆ ಈ ಪಿಶಾಚಿಯ ಬಳಿ ದೇವರು ಬಂದು ಆತನಿಗೆ ಬೇಕಾಗಿರುವ ವರವನ್ನು ವಿಚಾರಿಸಿದಾಗ, ಪಿಶಾಚಿಯು, "ಓ ದೇವರೇ, ನನಗೆ ದೊಡ್ಡ ದೊಡ್ಡ ವರವೆಲ್ಲಾ ಬೇಡ, ಒಂದು ಚಿಕ್ಕ ವರ ಮಾತ್ರ ಸಾಕು ಅದೇನೆಂದರೆ, "ನೀವು ಆ ಸ್ವರ್ಗದ ಮತ್ತು ನರಕದ ಮುಂದೆ ತೂಗಿ ಹಾಕಿರುವ ಆ ಸ್ವರ್ಗ ಮತ್ತು ನರಕ ಎಂದು ಬರೆದಿರುವ ಫಲಕಗಳನ್ನು ಅದಲುಬದಲು ಮಾಡಿ ಹಾಕಿಬಿಡಿ, ಅಷ್ಟೇ ಸಾಕು ನನಗೆ" ಎಂದಿತು. ದೇವರು ಅದಕ್ಕೆ "ಒಹ್, ಬಹಳ ಚಿಕ್ಕ ವರ" ಎಂದು ಅದನ್ನು ಮಾಡಿದನಂತೆ. ಅಂದಿನಿಂದ ಮಾನವರು ಸ್ವರ್ಗಕ್ಕೆ ಹೋಗಲು, ನರಕದ ಭ ಯಾನಕ ಕರ್ಮಗಳನ್ನು ಅನುಸರಿಸಲು ಆರಂಭಿಸಿದರು

ಎಂದು ಕಥೆ ಹೇಳುವುದು. ಅಂದರೆ, ಹಿಂದೆ ಸ್ವರ್ಗಕ್ಕೆ ಹೋಗಲು ಎಲ್ಲಾ ತರದ ಪವಿತ್ರ ಹೃದಯದ ಉತ್ತಮ ಕರ್ಮಗಳನ್ನು ಮಾತ್ರ ಮಾನವರು ಅನುಸರಿಸಿದ್ದರು, ಆದರೆ, ಇದರ ನಂತರ, ಬರೀ ನಂಬಿಕೆಗಳ ಯಾಂತ್ರಿಕ ಆಚಾರ, ಮಧ್ಯವರ್ತಿ ಪುರೋಹಿತರು, ಇತ್ಯಾದಿಗಳನ್ನು ಅವಲಂಭಿಸುವುದರ ಜೊತೆಗೆ, ದೇವರು ಮತ್ತು ಧರ್ಮವನ್ನೇ ತಮ್ಮ ಭುಜಬಲದಿಂದ ರಕ್ಷಿಸಿ ತಮಗೆ ಸ್ವರ್ಗಕ್ಕೆ ಹೋಗಲು ದ್ವೇಷ, ಹಿಂಸೆ, ರಕ್ತಪಾತದ ದಾರಿಯನ್ನು ತಾವೇ ಕಂಡುಕೊಂಡರು ಎಂದು ಕಥೆ ಹೇಳುವುದು.

ಸಹೋದರಾ, ಇನ್ನು ನಿಮಗೆ ಯಾವುದು ಧರ್ಮ ಮತ್ತು ಯಾವುದು ಧರ್ಮವಲ್ಲ ಎಂಬುವುದು ಒಂದೆರಡು ಮಾತುಗಳಲ್ಲೇ ಅರ್ಥವಾಗಬಹುದು.

ಮಾನವರ ಒಳಿತಿನ ಬಗ್ಗೆ ಮಾತಾಡುವಾಗ, ಮತ್ತು ಅದಕ್ಕಾಗಿ ಕರ್ಮವನ್ನು ಮಾಡುವಾಗ ಅದು ಧರ್ಮ ಆಗುವುದು, ಆದರೆ, ಧಾರ್ಮಿಕ ನಿಯಮಗಳ ಹಿನ್ನೆಲೆಯಲ್ಲಿ ಮಾನವರನ್ನು ವರ್ಣ, ಜಾತಿ, ಮತ್ತು ಸ್ವಾರ್ಥಪರ ನೈತಿಕತೆಗಳಿಗೆ ಬಲಿಯಾಗಿಸುವಾಗ ಅದು 'ಧರ್ಮವಲ್ಲ'ವಾಗುವುದು ಅಥವಾ ಅಧರ್ಮವಾಗುವುದು.[ಇದು ಆಗಾಗ್ಗ ಹೇಳುವ ಬಾಯಿಪಾಠದ ಮಾತೇನೂ ಅಲ್ಲ, ಒಮ್ಮೆ ಹಿಂದೆ ನೋಡಿ, ಮಾನವರು ಇವುಗಳ ಹಿನ್ನೆಲೆಯಲ್ಲಿ ಶೋಷಿಸಲ್ಪಟ್ಟದ್ದನ್ನು ನೋಡಿದಾಗ, ಅದು ಕಣ್ಣೀರಿನ ಕೋಡಿಯನ್ನು ಇಂದಿನ ಮಾನವರಲ್ಲೂ ಹರಿಸಲು ಸಮರ್ಥವಾಗುವ ಹಲವು ಕೋಟಿ ದುರಂತ ಚಲನಚಿತ್ರಗಳಿಗೆ ಸತ್ಯಕಥೆಯಾಗಬಹುದು.] ಇನ್ನು, ಮಾನವರ ಒಳಿತಿನ ಬಗ್ಗೆ ಮಾತಾಡುವಾಗ ಮತ್ತು ಅದಕ್ಕಾಗಿ ಕರ್ಮವನ್ನು ಮಾಡುವಾಗ ಅದು ಧರ್ಮವಾಗುವುದು, ಆದರೆ, ಇತರರ ಮೇಲೆ ತಮ್ಮ ಆಚಾರ, ನಂಬಿಕೆ ಮತ್ತು ದೇವರುಗಳನ್ನು ಯಾವುದಾದರೂ ರೀತಿಯಲ್ಲಿ ಹೇರಲು ತೊಡಗುವಾಗ ಅದು ಧರ್ಮವಲ್ಲ ಅಥವಾ ಅಧರ್ಮವಾಗುವುದು. ದೌರ್ಭಾಗ್ಯವಶಾತ್, ಇದನ್ನು ಹೆಚ್ಚು ಕಡಿಮೆ ಜಗತ್ತಿನಲ್ಲಿ ಎಲ್ಲಾ ಧರ್ಮ, ಪಂಥಗಳು ಒಂದಲ್ಲ ಒಂದು ರೀತಿಯಲ್ಲಿ ಮಾಡುತ್ತಾ ಬಂದಿವೆ! ಅವುಗಳಲ್ಲಿ ಹಿಂಸಾ ಮಾರ್ಗವು ಅತ್ಯಂತ ಭಯಾನಕವಾಗಿರುವುದು. ಅವೆಲ್ಲಾ ಹೆಚ್ಚು ಹೆಚ್ಚು ಆಗುತ್ತಾ ಹೋಗುವವು,["ನಮ್ಮ ಧರ್ಮ ಶಾಂತಿಯ ಧರ್ಮ" ಎಂದು ಎಲ್ಲವೂ ಹೇಳಿಕೊಳ್ಳುವುದಾದರೂ,]ಮುಂದೆ ಇವುಗಳು ಶಾಂತಿಯ ಲೋಕವನ್ನು ಮಾನವರಿಗೆ ತಂದುಕೊಡುವ ಭರವಸೆಯನ್ನು ಅವುಗಳೇ, ಈ ರೀತಿಯಲ್ಲಿ, ಬಹಳ ಹಿಂದೆಯೇ ಸರ್ವನಾಶ ಮಾಡಿಕೊಂಡಿವೆ!

ಈ ದೊಡ್ಡ ಸಮಸ್ಯೆಯನ್ನು ಪರಿಹರಿಸಲು ಇನ್ನಿರುವ ಆ ಒಂದೇ ಒಂದು ದಾರಿಯು, ಆ ಅದಲು ಬದಲಾಗಿರುವ ಫಲಕಗಳನ್ನು ಅವುಗಳ ಹಿಂದಿನ ಸ್ಥಾನದಲ್ಲಿ ಒಂದು 'ಸಾರ್ವತ್ರಿಕ ರೀತಿಯ'[ಸಾರಧರ್ಮದ]ಹಿನ್ನೆಲೆಯಿಂದ ಪುನಃ ಇರಿಸುವುದು ಮಾತ್ರವಾಗಿದೆ! ಹಾಗೆ ಮಾಡಿದರೆ, ಎಲ್ಲವೂ ನಿಧಾನವಾಗಿ ಬದಲಾಗಲು ಆರಂಭವಾಗಿ, ಮುಂದೆ, ಒಂದು ಅದ್ಭುತ ಸತ್ಯಯುಗದ ಸುಂದರ, ಶಾಂತಿಯ ಉದ್ಯಾನವಾಗಿ ಈ ಜಗತ್ತು ಕಂಗೊಳಿಸಬಹುದು.

---

## ಜಗತ್ತಿನಲ್ಲಿ ಎಲ್ಲವೂ ವಿಜ್ಞಾನ ಎಂದು ನೀವು ಹೇಳುವಿರಲ್ಲಾ, ಅದನ್ನು ಹೇಗೆ ವಿವರಿಸುವಿರಿ?

ಉತ್ತರ- ವಿಜ್ಞಾನ ಎಂದರೆ ಅಲ್ಲಿ ವ್ಯವಸ್ಥೆ ಇರಬೇಕು, ಅಂದರೆ ಮಿತಿ ಅಥವಾ ಪರಿಧಿ ಇರಬೇಕು. ಒಂದು ವ್ಯವಸ್ಥೆಯೊಳಗೆ ಮಾತ್ರ ವಿಜ್ಞಾನ ಇರಲು ಸಾಧ್ಯ. ಈ ಪ್ರಪಂಚವನ್ನೆಲ್ಲಾ ಹರಡಿಕೊಂಡಿರುವ ಆ ಅನಂತ ಆಕಾಶವನ್ನು ತೋರಿಸಿ ಆ ಅನಂತತೆಯಲ್ಲಿ ನಮಗೆ ವಿಜ್ಞಾನವನ್ನು ಕಾಣಲು ಸಾಧ್ಯವಿಲ್ಲ! ಯಾಕೆಂದರೆ ಅಲ್ಲಿ ಅದು ಮಿತಿ, ಎಲ್ಲೆ, ಅಥವಾ ಪರಿಧಿ ಒಳಗೆ ಇಲ್ಲ. ನಾವು ಅನುಭವಿಸುವ ಸೂರ್ಯನು ನಮ್ಮ ಸೌರವ್ಯೂಹದ ಪರಿಧಿಯೊಳಗಿದ್ದವನು. ನಾವು ಅನುಭವಿಸುವ ವಾತಾವರಣದ ಒತ್ತಡ ಅದು ಭೂಮಿಯ ಗುರುತ್ವಾಕರ್ಷಣೆಯ ಪರಿಧಿಯೊಳಗಿನದು. ಗುಂಡಿ ಒತ್ತಿದರೆ ಬಲ್ಬು ಉರಿಯಬೇಕಾದರೂ ಅಲ್ಲಿ ಅದಕ್ಕೆ ಜೋಡಿಸಿರುವ ತಂತಿಗಳು ಕಡಿದಿರಬಾರದು. ಅದೇ ರೀತಿ ಎಲ್ಲವೂ ಅದು ವ್ಯವಸ್ಥೆ ಅಥವಾ ಪರಿಧಿಯೊಳಗೆ ಮಾತ್ರವಾಗಿರುವುದು! ಇನ್ನು, ನಮ್ಮ ಹಿತ್ತಲಿನ ವಿಚಾರ ಹೇಳುವುದಾದರೂ ಅಲ್ಲಿಯೂ ಗುರುತು ಅಥವಾ ಬೇಲಿ ಇರುವುದು. ಆ ಗುರುತು ಅಥವಾ ಬೇಲಿ ಇಲ್ಲವಾದರೆ ಹಿತ್ತಲ ಕಲ್ಪನೆಯೇ ಇಲ್ಲವಾಗುವುದು. ದೇಶಗಳ ಗಡಿ ಇತ್ಯಾದಿಗಳು ನಮ್ಮ ವ್ಯವಹಾರಿಕ ವಿಜ್ಞಾನಕ್ಕೆ ಉದಾಹರಣೆಗಳಾಗುವವು. ನಾವು ನಿತ್ಯವೂ ಉಪಯೋಗಿಸುವ ನೋಟುಗಳನ್ನು ಎಲ್ಲರೂ ಅವರವರೇ ತಯಾರಿಸಿಕೊಳ್ಳುವ ರೀತಿಯಾದರೆ, ಆಗ ಅಲ್ಲಿ ಪರಿಧಿ ಇಲ್ಲವಾಗಿ, ಆರ್ಥಿಕ ವ್ಯವಸ್ಥೆ ನಾಶವಾಗುವುದು. ಅಂದರೆ ಆರ್ಥಿಕ ವಿಜ್ಞಾನ ಅಥವಾ ಅರ್ಥಶಾಸ್ತ್ರ, ಇಲ್ಲವಾಗುವುದು! ಹೀಗೆ, ಎಲ್ಲೆಡೆಯೂ ವ್ಯವಸ್ಥೆ ಅಥವಾ ಪರಿಧಿ ಇರುವಲ್ಲಿಯೇ ವಿಜ್ಞಾನ ಇರುವುದನ್ನೂ ನಾವು ಕಾಣುವೆವು, ಮತ್ತು ಈ ಪರಿಧಿ-ವಿಜ್ಞಾನವೇ ಎಲ್ಲವೂ ಆಗಿರುವುದು ಎಂದೂ ತಿಳಿಯುವುದು. ಇನ್ನು, ಒಂದು ಶರೀರ-ಪರಿಧಿಯು 'ನಾನು' ವನ್ನು[ವ್ಯಕ್ತಿಯನ್ನು] ಉಂಟು ಮಾಡುವುದು. ಒಂದು ಸ್ವಲ್ಪ ಜನರ ಕೂಟವೆಂಬ ಪರಿಧಿಯೊಳಗೆ ಕುಟುಂಬ ಇರುವುದು, ಆದರೆ ಊರಿನವರೆಲ್ಲಾ ಕುಟುಂಬದಲ್ಲಿರಲಾರರು. ಇನ್ನು, ಪರಿಧಿ ದೊಡ್ಡದಾಗುವಾಗ ಊರು, ದೇಶ ಇತ್ಯಾದಿಗಳಾಗುವವು. ಇವೆಲ್ಲಾ ಪರಿಧಿಗಳಾಗಿವೆ, ಮತ್ತು ಈ ಪರಿಧಿಗಳೇ

ಅವುಗಳ ಇರುವಿಕೆಯ ಅಥವಾ ಅಸ್ತಿತ್ವಗಳ ವಿಜ್ಞಾನವಾಗುವವು. ಇನ್ನು, ಮನುಷ್ಯನ ಸ್ವಭಾವವನ್ನು ನೋಡೋಣ. ಅಲ್ಲಿ ಈ ಸ್ವಭಾವದ ವಿಜ್ಞಾನವು ಸಾಹಚರ್ಯ-ಪರಿಧಿಯಲ್ಲಿರುವವು. ನಾವು ಉತ್ತಮ ಕರ್ಮಗಳ ಸಾಹಚರ್ಯವನ್ನು ಸೃಷ್ಟಿಸುತ್ತಾ ಹೋದಾಗ ನಾವು ಉತ್ತಮ ಜನರೆಂದು ಕರೆಯಲ್ಪಡುವೆವು. ಇನ್ನೊಬ್ಬನನ್ನು ಬಯ್ಯುವಾಗ, ಅದನ್ನು ಕೇಳುವಾತನಲ್ಲಿ ಕೋಪಕ್ಕೆ ಕಾರಣವಾಗುವ ಆ ವಿಚಾರ-ಭಾವನೆಗಳ ಸಾಹಚರ್ಯ ಪರಿಧಿಯು ಸೃಷ್ಟಿಸಿಲ್ಪಡುವ ಕಾರಣ, ಕೇಳಿದಾತನು ಕೋಪಗೊಳ್ಳುವನು. ಸಹಾಯ ಮಾಡುವಾಗ ಅದನ್ನು ಪಡೆಯುವಾತ ಕೊಟ್ಟವನನ್ನು ಹೊಗಳುವುದೂ ಆಲ್ಲಿ ಆತನ ವಿಚಾರ-ಭಾವನೆಗಳಿಂದ ಸೃಷ್ಟಿಸಲ್ಪಡುವ ಆ ಒಂದು ಸಾಹಚರ್ಯ ಪರಿಧಿಯೊಳಗಿಂದ. ಈ ರೀತಿ, ಅಲ್ಲಲ್ಲಿ ಸಾಹಚರ್ಯ-ಪರಿಧಿಗಳ ಸೃಷ್ಟಿ ಮಾಡುವಿಕೆಯೇ ಸಮಾಜದ ಅಥವಾ ಸಮಾಜಶಾಸ್ತ್ರದ ವಿಜ್ಞಾನವಾಗುವುದು. ಆದರೆ, ಇಲ್ಲಿ ಒಂದಂಶವು ವ್ಯತ್ಯಸ್ತವಾಗುವುದು. ಅದೇನೆಂದರೆ ಇತರ ಕಡೆಗಳಲ್ಲಿ ಪರಿಧಿಗಳು ಸ್ಥೂಲವಾದುದರಿಂದ ಅದನ್ನು ಯಾರಿಗೂ ತಪ್ಪಿಸಲು ಸಾಧ್ಯವಾಗುವುದಿಲ್ಲ. ಹಿತ್ತಲಿಗೆ ಬೇಲಿಹಾಕಿದ್ದಲ್ಲಿ ಅದನ್ನು ಇನ್ನೊಬ್ಬರು ತಪ್ಪಿಸುವ ಹಾಗಿಲ್ಲ, ಆದರೆ ಸ್ವಭಾವದ ವಿಜ್ಞಾನದಲ್ಲಿ ಒಂದು ದೊಡ್ಡ ತೊಂದರೆಯೇ "ಆರೋಪ" ಆಗಿದೆ. ಈ ಆರೋಪವು ಬೇಕೆಂದೇ ಒಬ್ಬನು ಮಾಡಿಟ್ಟ ಉತ್ತಮ ಮತ್ತು ನಿಜವಾದ ಸಾಹಚರ್ಯ- ಪರಿಧಿಯ ಮೇಲೆ ಇನ್ನೊಬ್ಬನು ತಯಾರು ಮಾಡಿದ ಸುಳ್ಳು ಸಾಹಚರ್ಯ-ಪರಿಧಿಯ ಹೇರುವಿಕೆಯಾಗಿದೆ! ಆಗ, ದೂರದ ಒಬ್ಬನು ಈ ಹೇರಲ್ಪಟ್ಟ ಸುಳ್ಳು ಪರಿಧಿಯನ್ನು ನೋಡಿ, ಅದನ್ನೇ ಆ ಉತ್ತಮನ ವ್ಯಕ್ತಿತ್ವ ಎಂದು ತಪ್ಪು ತಿಳಿವನು. ಇದು ಈ ಸಮಾಜಶಾಸ್ತ್ರಕ್ಕಿರುವ ಒಂದು ದೊಡ್ಡ ತೊಂದರೆ ಆಗುವುದು. ಇನ್ನಿರುವುದು ಆಧ್ಯಾತ್ಮವಾಗಿದೆ. ಇಲ್ಲಿಯೂ, ಉತ್ತಮರು ಸ್ವರ್ಗಕ್ಕೆ ಮತ್ತು ದುಷ್ಟರು ನರಕಕ್ಕೆ ಎಂಬ ಪರಿಧಿ ಅಥವಾ ವ್ಯವಸ್ಥೆಯ ವಿಜ್ಞಾನವಿದೆ. ಇನ್ನು ನಿರ್ಗುಣ ತತ್ವ ಮತ್ತು ಶೂನ್ಯ'ವಾದ' ರೀತಿಯ ಮೋಕ್ಷಗಳಲ್ಲಿ, ಕೊನೆಯಲ್ಲಿ ಪರಿಧಿ ರಹಿತನಾಗುವ ರೀತಿಯಾದರೂ, ತತ್ವದೊಂದಿಗೆ ಲೀನವಾಗುವಿಕೆ ಅಥವಾ ಶೂನ್ಯವಾಗುವಿಕೆ ಎಂಬ ಒಂದು ಸಾಧನಾ ಪರಿಧಿಯೇ ಅಲ್ಲಿಯೂ ಇರುವುದು.

ಇನ್ನು, ಕೊನೆಯದಾಗಿ 'ದೇವರು' ಎಂಬ ಸಂಕಲ್ಪವಾಗಿದೆ. ಆತ ನೀಚ ಸ್ವಭಾವದವನಾದರೆ ನಾವು ಅತನನ್ನು ದೇವರಲ್ಲ, ಸೈತಾನ ಎನ್ನುವೆವು. ದೇವರೆಂದ ಕೂಡಲೇ ಉತ್ತಮ ಸ್ವಭಾವದವನೆಂದು ಸಂಶಯ ಇಲ್ಲದೆ ತಿಳಿದಿರುವೆವು. ಅಂದರೆ, ದೇವರಿಗೆ ಪರಿಧಿಯು ಆ ಉತ್ತಮ ಸ್ವಭಾವವಾಗಿದೆ. ಆ ಉತ್ತಮ ಸ್ವಭಾವವು ಎಲ್ಲಿಂದ ಬರುವುದು ಎಂಬುವುದಕ್ಕೆ ಉತ್ತರವು, ಅದು ಆ ಸಾರ್ವತ್ರಿಕ ಸತ್ಯ, ಪ್ರೀತಿ ಮತ್ತು ನೀತಿಗಳಿಂದ ಮಾತ್ರ ಸಾಧ್ಯ ಎಂದಾಗಿದೆ. ಅಂದರೆ, ಅವುಗಳಿಲ್ಲದಿದ್ದರೆ ದೇವರು ದೇವರೇ ಆಗುವುದಿಲ್ಲ! ಈ ಕಾರಣದಿಂದಾಗಿಯೇ 'ದೇವರ ಅಸ್ತಿತ್ವ'ದ ವಿಜ್ಞಾನವು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಪರಿಧಿ ಆಗುವುದೆಂದು ಹೇಳುವುದು.

ಈ ರೀತಿಯಲ್ಲಿ, ಪರಿಧಿ ಇಲ್ಲದೆ ಏನೂ ಇಲ್ಲ, ಆದುದರಿಂದ ಈ ಜಗತ್ತಿನಲ್ಲಿ ವಿಜ್ಞಾನವಲ್ಲದೆ ಬೇರೆ ಏನೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಈ ಕಾರಣದಿಂದಲೇ, ಜಗತ್ತಲ್ಲಿ ನಾವು ಏನೇ ಮಾಡುವುದಾದರೂ ಅದನ್ನು ವೈಜ್ಞಾನಿಕವಾಗಿ ಅಥವಾ ತರ್ಕಬದ್ಧವಾಗಿ ವಿವರಿಸಿ ಕೊಡಲೇಬೇಕಾಗುವುದು. ಸಾವಿರಾರು ಪುರಾಣ ಕಥೆಗಳನ್ನು ಹೇಳುತ್ತಾ, ತಮ್ಮೊಳಗೆ ವಿಮರ್ಶಿಸುತ್ತಾ, ತಮ್ಮ ಧರ್ಮ, ಪಂಥಗಳ ಶ್ರೇಷ್ಠತೆಯನ್ನು ಮೆರೆಯುವುದು, ಅದು ವೈಜ್ಞಾನಿಕ ಮತ್ತು ತರ್ಕಬದ್ಧವಾದ ರೀತಿಯ ಹಿನ್ನೆಲೆಯ ಧರ್ಮವೇ ಆಗುವುದಿಲ್ಲ, ಬದಲು ಅದು ಬರೇ ಅವರವರಿಗೆ ಬಿಟ್ಟ ನಂಬಿಕೆಯ ಧರ್ಮ ಮಾತ್ರವಾಗುವುದು!

# ನೇರ ಪ್ರಶ್ನೆಗಳು

---

## ನಿಮ್ಮ ಭಕ್ತರಲ್ಲಿ ಮಾತ್ರ ನಿಮಗೆ ಹೇಳಬೇಕಾದ ವಿಷಯ ಇದ್ದಲ್ಲಿ ಅದನ್ನು ಹೇಳಬಹುದೇ?

ಉತ್ತರ- ನನ್ನ ಭಕ್ತರಲ್ಲಿ ಮಾತ್ರ ಏನು ಹೇಳಬೇಕೋ ಅದನ್ನು ಈ ಹಿಂದೆಯೇ ಹೇಳಿದ್ದೇನೆ, ಆದರೆ ಅದು ಭಕ್ತರೆಲ್ಲರಿಗೂ ತಲುಪಿರಲಾರದು, ಅದಕ್ಕೆ ಲಿಖಿತವಾಗಿಯೇ ತಿಳಿಸುತ್ತಿದ್ದೇನೆ. ಮೊಟ್ಟಮೊದಲು ನನ್ನ ಭಕ್ತರು ನನ್ನ ದೇವಸಂಕಲ್ಪದ ಕುರಿತು ತಿಳಿದಿರಬೇಕು. ನಾನು ಮೊದಲೇ ತಿಳಿಸಿರುವಂತೆ, ನನ್ನ ದೇವಸಂಕಲ್ಪವು ಆ ಪ್ರಾಚೀನ ವಾಮಾಚಾರದ ವಿರುದ್ಧಶಕ್ತಿಯಾಗಿ ಅವುಗಳ ವಿರುದ್ಧ ಹೋರಾಡಲು ಅಥವಾ ಅವುಗಳ ಪ್ರಭಾವಗಳಿಂದ ಬೇರ್ಪಟ್ಟು ನಿಲ್ಲಲು ನಾನೇ ನನ್ನ ಪವಿತ್ರಗೊಳಿಸಲ್ಪಟ್ಟ ಧ್ಯಾನದ ಮನೋಶಕ್ತಿಯಿಂದ ತಯಾರಿಸಲ್ಪಟ್ಟ ದೇವಸಂಕಲ್ಪವಾಗಿದೆ. ಈ ಉದ್ದೇಶವಲ್ಲದೆ ಬೇರೆ ನನಗೆ ಉದ್ದೇಶವಿರಲಿಲ್ಲ. ಆದರೆ ಆ ಶಕ್ತಿಯ ಕುರಿತು ತಿಳಿದ ನನ್ನ ಭಕ್ತರು ತಮಗೂ ಆ ಶಕ್ತಿಯ ಮೂಲಕ ಅನುಗ್ರಹಿಸಬೇಕೆಂದು ಕೇಳಿದಾಗ ನಾನು ಪರೀಕ್ಷಣಾರ್ಥವಾಗಿ ಅನುಗ್ರಹಿಸಿದೆನು. ಅದು ಅವರಲ್ಲಿ ಫಲಿಸುವಾಗ, ಅದನ್ನು ನೋಡಿ, ಹೆಚ್ಚಿನ ಭಕ್ತರೂ ಅನುಗ್ರಹ ಪಡೆದು ಕೊಂಡರು. ಆಗ, ಈ ಅನುಗ್ರಹ ಉದ್ದೇಶಕ್ಕಾಗಿ ಒಂದು ಭಾಗ ನನ್ನ ಆ ಶಕ್ತಿಯನ್ನು ಪ್ರತ್ಯೇಕವಾಗಿ ತೆಗೆದಿರಿಸಿದೆನು. ಇದುವೇ, ನನ್ನ ದೇವಸಂಕಲ್ಪವು ಸ್ವಲ್ಪ ಜನ ಭಕ್ತರ ದೇವರಾಗಲೂ ಕಾರಣವಾಗಿರುವುದು ಎಂದು ತಿಳಿಯಬೇಕು. ಆದರೆ, ನನ್ನ ದೇವಸಂಕಲ್ಪವು ನನ್ನ ಭಕ್ತರಿಗೆ ಮಾತ್ರ ಅನ್ವಯವಾಗುವುದು, ಯಾಕೆಂದರೆ ನಾನು ಸೃಷ್ಟಿಕರ್ತ ದೇವರ ಅವತಾರ ಅಥವಾ ಅಂಶವಲ್ಲ. ಹಿಂದಿನ ದೇವರ ಅವತಾರ ಅಥವಾ ಅಂಶ ಇತ್ಯಾದಿ ಎಂದು ಜನರನ್ನು ನಂಬಿಸಿ, ಆ ಹಿಂದಿನ ದೇವರ ಮೇಲೆ ಇಟ್ಟಿರುವ ಜನರ ನಂಬಿಕೆಯ ಲಾಭವನ್ನು ಪಡೆಯುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಆದುದರಿಂದ, ನನ್ನ ಭಕ್ತರಲ್ಲದವರಿಗೆ ನಾನು ಒಬ್ಬ ಮನುಷ್ಯ ಮಾತ್ರ ಎಂದು ಹಲವು ಸಲ ಹೇಳಿದ್ದೇನೆ. ನನ್ನ ದೇವಸಂಕಲ್ಪವು ನಾನು ಮೊದಲೇ ತಿಳಿಸಿರುವಂತೆ ಅದು ಆ ಪ್ರಾಚೀನ ವಾಮಾಚಾರದ ವಿರುದ್ಧ ಹೋರಾಡಲೆಂದು ನನ್ನ ಮನೋಶಕ್ತಿಯಿಂದಲೇ ಸೃಷ್ಟಿಸಲ್ಪಟ್ಟ ಒಂದು ದೇವ ಸಂಕಲ್ಪವಾಗಿರುವುದು, ಅಂದರೆ, ಮಾನವನಿಗೆ ಅನುಗ್ರಹ ಕೊಡುವಲ್ಲಿನ ದೇವಸಂಕಲ್ಪದ ಸೃಷ್ಟಿಯ ಉದ್ದೇಶವಿರಲಿಲ್ಲ ಎಂಬುವುದನ್ನು ಇನ್ನೊಮ್ಮೆ ಆವರ್ತಿಸುತ್ತೇನೆ. ಅಂದರೆ, ಅದು ಸಾಹಚರ್ಯದ ಸೃಷ್ಟಿ ಮಾತ್ರವಾಗಿತ್ತು ಎಂದು ಅರ್ಥ. ಮಾತ್ರವಲ್ಲ, ನನ್ನ ಅನುಗ್ರಹದ ಮಿತಿಯನ್ನೂ ಎಲ್ಲಾ ಭಕ್ತರಿಗೂ ಮೊದಲೇ ತಿಳಿಸಿರುವೆನು. ಇದರ ಅರ್ಥ, "ನನ್ನ ಅನುಗ್ರಹವು ಎಲ್ಲರಲ್ಲೂ, ಎಲ್ಲಾ ಸಮಯದಲ್ಲೂ, ಖಂಡಿತ ಫಲಿಸಬಹುದು ಅಥವಾ ಬೇಗನೆ ಫಲಿಸಬಹುದು ಎಂದೆಲ್ಲಾ ಭರವಸೆಯನ್ನು ನಾನು ಕೊಡಲಾರೆ" ಎಂದು ಎಲ್ಲಾ ಭಕ್ತರಲ್ಲೂ ಮೊದಲೇ ತಿಳಿಸಿದ್ದೇನೆ ಎಂದಾಗಿದೆ.

ಇನ್ನು ನನ್ನ ಭಕ್ತರಲ್ಲಿ ಮುಖ್ಯವಾಗಿ ಏನನ್ನು ಹೇಳಬೇಕೋ ಅದನ್ನು ಹೇಳುವೆನು ಯಾಕೆಂದರೆ ಉಳಿದ ವಿಚಾರಗಳನ್ನು ಇತರ ಪ್ರಶ್ನೋತ್ತರಗಳಿಂದ ತಿಳಿದುಕೊಳ್ಳಬಹುದಾಗಿದೆ. ಎರಡು ಮುಖ್ಯ ವಿಚಾರವನ್ನು ನನ್ನ ಭಕ್ತರು ತಿಳಿದಿರಬೇಕು. ಅವುಗಳಲ್ಲಿ ಒಂದು, ನನ್ನ ಭಕ್ತರು ನನ್ನನ್ನು ಯಾವುದಾದರೂ ಧರ್ಮ,

ಪಂಥ, ಜಾತಿಯ ಹಿನ್ನೆಲೆಯಲ್ಲಿ ಕಾಣಬಾರದು ಮತ್ತು ಮುಂದೆ ಒಂದು ಪಂಥ, ಪರಂಪರೆಯಂತೆ ಅದನ್ನು ವಿವರಿಸಬಾರದು ಹಾಗೂ ಬೆಳೆಸಬಾರದು. ಅಂದರೆ, ನಮ್ಮ ದೇವರು, ನಮ್ಮ ಪಂಥ, ನಮ್ಮ ಪರಂಪರೆ ಇತ್ಯಾದಿ 'ನಮ್ಮ' ಎಂಬ ಶಬ್ದವೇ ಬರಬಾರದು. ಹಾಗೆ ಬಂದಲ್ಲಿ ಆತ "ಧರ್ಮ" ದ ನಿಜ ಸಾರವನ್ನೇ ಧ್ವಂಸ ಮಾಡುವನು. ಆಗ "ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯೇ ದೇವರು" ಎಂಬ ಆ ನಿಜ ಸಾರ ಧ್ವಂಸವಾಗುವುದು. ನಾನು ನನ್ನ ಭಕ್ತರಿಗೆ ಮಾತ್ರ, ಅವರಿಗೆ ಅನುಗ್ರಹ ಬೇಕಾದಲ್ಲಿ, ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಶಕ್ತಿಯನ್ನು ಹೊತ್ತ ಒಂದು ದೇವಸಂಕಲ್ಪ, ಅಷ್ಟೆ. ನಾನು ಸಾರ್ವತ್ರಿಕ ಸತ್ಯವನ್ನು ಹೊಸದಾಗಿ ಕಂಡು ಹುಡುಕಿದ್ದಲ್ಲ, ಪ್ರೀತಿಯನ್ನು ಹಾಗೂ ನೀತಿಯನ್ನು ಹೊಸದಾಗಿ ಕಂಡು ಹುಡುಕಿಲ್ಲ, ಅವುಗಳು ಅನಾದಿಯಾಗಿವೆ. ಅವುಗಳನ್ನು ಯಾವ ಧರ್ಮ, ಪಂಥ, ದೇವರುಗಳೂ ಹೊಸತಾಗಿ ಕಂಡು ಹುಡುಕಿಲ್ಲ. ನಿಜವಾಗಿಯೂ, ಎಲ್ಲಾ ಧರ್ಮ, ಪಂಥ, ದೇವರುಗಳು ಅವುಗಳನ್ನು ಮತ್ತೂ ಹೆಚ್ಚು ಬೆಳಗುವಲ್ಲಿ ಮಾತ್ರ ಪ್ರಯತ್ನಿಸಬೇಕಾಗುವುದು ಎಂಬುವುದು ದೇವಸಂಕಲ್ಪಗಳ ಅನಿವಾರ್ಯ ಕರ್ತವ್ಯವಾಗಿರುವುದು.

ದುರಾದೃಷ್ಟವಶಾತ್, ಎಲ್ಲ ಕಡೆಯೂ ಸುಲಭದ ಹರಕೆ, ಆಚಾರಗಳು ಮಾತ್ರ ವಿಜೃಂಭಿಸುವವು!! ಸೂರ್ಯನನ್ನು'ನಮ್ಮೂರ ಸೂರ್ಯ' ಎಂದು ನಮಗೆ ಮಾತ್ರ ಮಾಡಿಕೊಳ್ಳಲು ಸಾಧ್ಯವೇ? ದೇವರು ಆ ಏಕ ಸೃಷ್ಟಿಕರ್ತನೆಂದು ಹೇಳುತ್ತಾ ಇತ್ತ 'ನಮ್ಮ ದೇವರು' ಎಂದು ಜನರನ್ನು ತಮ್ಮೊಳಗೆ ಪ್ರತ್ಯೇಕಿಸುವುದು, ಮಾತ್ರವಲ್ಲ, ಅದರೊಂದಿಗೆ ಆ ದೇವರ ಹೆಸರಿನ ಪ್ರತ್ಯೇಕತೆಯನ್ನೂ ಪುಟಗಟ್ಟಲೆ ವಿವರಿಸುವುದು ಒಂದು ಕಡೆಯಾದರೆ ಇನ್ನು 'ನಮ್ಮ ಧರ್ಮ', 'ನಮ್ಮ ಪಂಥ', 'ನಮ್ಮ ಗುರು', 'ನಮ್ಮ ಪರಂಪರೆ', ಎಂದು 'ನಮ್ಮ' ಎಂಬುವುದನ್ನು ಅವುಗಳು ಸೃಷ್ಟಿಯಾದ ಕಾಲದಿಂದಲೇ ತಯಾರಿಸಿ ಬೆಳೆಸಿ ತಂದಿರುವವು. ಇದು ತಾಯಿ, ಮಗುವಿಗೆ ರಾತ್ರಿಹೊತ್ತು ಚಂದ್ರ, ನಕ್ಷತ್ರಗಳನ್ನು ತೋರಿಸುತ್ತಾ, ನಮ್ಮ ಚಂದ್ರ, ನಮ್ಮ ನಕ್ಷತ್ರ ಎಂದು ಸಂತೋಷಪಡಿಸಿದಂತೆ ಇರುವುದು! ಈ ಮೂರ್ಖತನಕ್ಕೆ ಮಾತ್ರವಾಗಿ ಜಗತ್ತಿನ ಎಲ್ಲೆಡೆಯೂ ಸುರಿಸಿದ ಅಷ್ಟು ಹಣದಲ್ಲಿ ಆ ಮೇಲಿನ ಸ್ವರ್ಗವನ್ನೇ ಈ ಭೂಮಿಯಲ್ಲಿ ನಿರ್ಮಿಸಿ ಆಗುತ್ತಿತ್ತು! ಆದುದರಿಂದ, ಯಾವ ಕಾಲಕ್ಕೂ, ನನ್ನ ಭಕ್ತರು, 'ನಮ್ಮ' ಎಂಬ ಪ್ರತ್ಯೇಕ ಗುಂಪುಗಾರಿಕೆ ಇಲ್ಲದೆ, ನನ್ನನ್ನು ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಒಂದು ದೇವಸಂಕಲ್ಪವಾಗಿ ಮಾತ್ರ ತಿಳಿದುಕೊಳ್ಳುವುದಾದರೆ ನನ್ನ ದೇವಸಂಕಲ್ಪದ ಅನುಗ್ರಹಕ್ಕೆ ಅವರು ಅರ್ಹರು ಎಂದು ಹೇಳುವೆನು. ಈ ರೀತಿಯಲ್ಲಿ, ಮೂರ್ಖತನ ಮತ್ತು ಅದರ ವಿಕೃತ ಸೃಷ್ಟಿಯಾದ ಭಯಾನಕ ಶೋಷಣೆ, ದ್ವೇಷ, ರಕ್ತಪಾತಗಳು ನನ್ನ ಈ ದೇವಸಂಕಲ್ಪದ ಕಾರಣದಿಂದ ಎಂದೆಂದಿಗೂ ಸೃಷ್ಟಿಯಾಗದಂತೆ ತಡೆಹಿಡಿಯುವೆನು.

ಇನ್ನೊಂದು ಮುಖ್ಯ ವಿಚಾರವೆಂದರೆ ಅದು ನೈತಿಕತೆಯ ವಿಚಾರವಾಗಿದೆ. ನಾನು ಮೊದಲೇ ಹೇಳಿದಂತೆ ನನ್ನಲ್ಲಿ ಧರ್ಮ, ಪಂಥವಿಲ್ಲ ಮತ್ತು ನನಗೆ ದೇವರಾಗುವ ಅಗತ್ಯವೂ ಇಲ್ಲ. ಆದರೆ ಯಾರಿಗಾದರೂ ಹಾಗೆ ನನ್ನ ಅನುಗ್ರಹ ಬೇಕಿದ್ದಲ್ಲಿ ಅವರು ಈ ಹಿನ್ನೆಲೆಯ ಒಂದು ವಿಚಾರಗಳನ್ನು ನೆನಪಿಡಲೇ ಬೇಕು. ಅನುಗ್ರಹ ಬೇಕಿದ್ದವರು, "ನಾನು ನಿಧಾನವಾಗಿಯಾದರೂ ಮುಂದೆ ಕೆಟ್ಟತನವನ್ನು ಕಳಕೊಂಡು ಉತ್ತಮ ವ್ಯಕ್ತಿಯಾಗಲು ಪ್ರಯತ್ನ ಪಡುವೆನು" ಎಂಬ ಸಂಕಲ್ಪವನ್ನು ತೆಗೆಯಲು

ತಯಾರಾಗಿರುವವರು ಆಗಿರಬೇಕು. ಅಂಥವರು ಮಾತ್ರ ನನ್ನ ಅನುಗ್ರಹವನ್ನು ಪಡೆಯಲು ಅತ್ಯಂತ ಕಡಿಮೆ ಅರ್ಹತೆಯನ್ನು ಪಡೆದವರು ಮತ್ತು ಅದಕ್ಕಿಂತ ಕೆಳಗೆ ಇರುವವರು ನನ್ನ ಭಕ್ತರಾಗಲು ಬರಬಾರದು. ಇದು ಯಾಕೆಂದರೆ, ದೇವರ ಕೆಲಸವು ಅಸತ್ಯದಿಂದ ಸತ್ಯದ ಕಡೆಗೆ ಮತ್ತು ಕತ್ತಲೆಯೆಂಬ ಅಜ್ಞಾನದಿಂದ ಜ್ಞಾನವೆಂಬ ಬೆಳಕಿನ ಕಡೆಗೆ ಮಾನವನನ್ನು ನಡೆಸುವುದು ಆಗಿದೆ. ಈ ಕೆಲಸವನ್ನು ನಿರ್ವಹಿಸುವಲ್ಲಿ ಆ ಮೇಲಿನ ನಿಬಂಧನೆ ಅನಿವಾರ್ಯವಾಗಿ ಬೇಕಾಗುವುದು. ಅಂದರೆ, ನನ್ನಲ್ಲಿ ಅನುಗ್ರಹವನ್ನು ಆಚಾರ, ಹರಕೆಗಳ ಹಿನ್ನೆಲೆಯಲ್ಲಿ ಕೊಡುವ ರೀತಿ ಇಲ್ಲ. ದೇವರಿಗೆ ಪ್ರೀತ್ಯರ್ಥವಾಗಿ ಏನಾದರೂ ಕೊಟ್ಟು ತಾನು ದೇವರಿಂದ ಅನುಗ್ರಹವನ್ನು ಬೇಡುವಾಗ, ಮಾನವನ ಸ್ವಭಾವ ಶುದ್ಧಿಗೆ ಯಾವ ಲಾಭವೂ ಆಗುವುದಿಲ್ಲ ಎಂಬ ಕಾರಣಕ್ಕಾಗಿ, ಆಚಾರಭಕ್ತಿ ಹೊರತಾದ, ಆ ಮೇಲಿನ ಭಕ್ತಿಯೋಗಿಗಳ ರೀತಿಯ ಶುದ್ಧಭಕ್ತಿಯ ರೀತಿಯನ್ನು ಮಾತ್ರ ನನ್ನ ದೇವಸಂಕಲ್ಪಕ್ಕೆ ಇರಿಸಿಕೊಂಡಿದ್ದೇನೆ.

ಸತ್ಯಜೀವನವನ್ನು ನಡೆಸಲು ಮತ್ತು ಸತ್ಯಚಿಂತನೆಯನ್ನು ನಡೆಸಲು ನನ್ನಲ್ಲಿಗೇ ಬರಬೇಕೆಂದು ನಾನು ಹೇಳಿಯೇ ಇಲ್ಲ ಎಂಬುವುದನ್ನು ಬಹಳ ಸ್ಪಷ್ಟವಾಗಿ ನೆನಪಿಡಬೇಕಾಗಿದೆ. ಅದು ಎಲ್ಲಾ ಧರ್ಮ, ಪಂಥವನ್ನು ಶುದ್ಧೀಕರಿಸಿ ಆ ಪ್ರಾಚೀನ ವಾಮಾಚಾರದ ಭಯಾನಕ ಪ್ರಭಾವದಿಂದ ಈ ಜಗತ್ತು ರಕ್ಷಣೆಯನ್ನು ಪಡೆಯಲಿರುವ ಒಂದು ಸಾರ್ವತ್ರಿಕ ಮಾರ್ಗ ಮಾತ್ರವಾಗಿದೆ. ಅದನ್ನು ಎಲ್ಲಾ ಧರ್ಮ, ಪಂಥದವರೂ ಅವರವರ ರೀತಿಯಲ್ಲಿ ತಮ್ಮ ಮನೆ, ಅಥವಾ ಇತರ ಧಾರ್ಮಿಕ ಸ್ಥಳಗಳಲ್ಲಿ ಮಾಡಿಕೊಳ್ಳಬಹುದು.

ಒಟ್ಟಿನಲ್ಲಿ, ನನ್ನನ್ನು ಯಾರೂ ದೇವರೆಂದು ಕರೆಯಬೇಕೆಂದಿಲ್ಲ, ಅದೇ ರೀತಿ, ಯಾರೂ ಅನುಗ್ರಹವನ್ನು ಪಡೆಯಲು ಬರಬೇಕೆಂದೂ ಇಲ್ಲ. ಆದರೆ, ನನ್ನಲ್ಲಿಗೆ ಬರಲೇಬೇಕು ಎಂದು ಆಶಿಸುವವರು ಮೇಲಿನ ನಿಬಂಧನೆಯ ಹಿನ್ನಲೆಯಲ್ಲಿ ಮಾತ್ರ ಬರಬೇಕಾಗುವುದು ಅಷ್ಟೆ.

---

## ಸನ್ಯಾಸಿಗಳಿಗೆ ಬ್ರಹ್ಮಚರ್ಯ ಇರುವಾಗ ದೇವತೆಗಳಿಗೆ ಯಾಕಿಲ್ಲ, ಮತ್ತು ನಿಮ್ಮ ದೇವಸಂಕಲ್ಪವು ಯಾವ ತರದ್ದಾಗಿರುವುದು?

ಉತ್ತರ- ಪುರಾಣದ ಹಿನ್ನೆಲೆಯಲ್ಲಿ ಹೇಳುವುದಾದರೆ ಹಲವು ಕಥೆಗಳಿರಬಹುದು. ಅದು ಹೊರತಾಗಿ ದೇವಸಂಕಲ್ಪದ ರೀತಿಯಲ್ಲಿ ಮಾತ್ರ ತಿಳಿಯಲು ಪ್ರಯತ್ನಿಸೋಣ. ಬ್ರಹ್ಮಚರ್ಯ ಎಂದರೆ, ಹಿಂದಿನ ಶಾಸ್ತ್ರಗಳ ಪ್ರಕಾರ, ಅದು ಮೋಕ್ಷಾರ್ಥಿಗಳ ಚರ್ಯೆ ಆಗಿದೆ. ಯಾಕೆಂದರೆ ಮೋಕ್ಷ ಎಂದರೆ ಅದು ತನ್ನ ಅಸ್ತಿತ್ವವನ್ನು ಸತ್ತ ನಂತರದಲ್ಲಿ ಸೂಕ್ಷ್ಮ ಸ್ಥರದಲ್ಲಿ ಇಲ್ಲದಂತೆ ಮಾಡುವುದು ಅಥವಾ ತನ್ನ ಅಸ್ತಿತ್ವವನ್ನು ತನ್ನ ದೇವರಲ್ಲಿ ಅಥವಾ ತತ್ವದಲ್ಲಿ ಲೀನವಾಗಿಸುವುದು ಎಂದು ತಿಳಿಯಲಾಗಿದೆ. ಈ ಶೂನ್ಯ ಆಗುವಿಕೆ ಅಥವಾ ಲೀನ ಆಗುವಿಕೆಯು, ಒಬ್ಬಾತನಿಗೆ, ಆಸೆಗಳು ಮನಸ್ಸಿನಲ್ಲಿ ಸ್ವಲ್ಪವೂ ಇಲ್ಲದಾಗ ಮಾತ್ರ ಸಾಧ್ಯ ಎಂದು ಅದು ಹೇಳುವುದು. ಆಸೆ ಇರುವಾತನು ಎಷ್ಟೇ ಧ್ಯಾನ ಮಾಡಿದರೂ ಆತನು ಶೂನ್ಯ ಅಥವಾ ಲೀನವಾಗುವ ಮೋಕ್ಷವನ್ನು ಸಾಧಿಸಲಾರ ಎಂದೂ. ಹೀಗಿರುವಾಗ,

ಕಾಮಾಸಕ್ತಿ ಒಂದು ಆಸೆಯಾದುದರಿಂದ ಆ ಆಸೆಯನ್ನು ಇಟ್ಟುಕೊಂಡು ಸನ್ಯಾಸಿಯು ನಿರ್ವಾಣ ಮೋಕ್ಷವನ್ನು ಅಥವಾ ಲೀನ ಮೋಕ್ಷವನ್ನು ಪಡೆಯಲಾರ ಎಂಬುವುದು ಖಂಡಿತವಾದ ತರ್ಕವಾದ ಎಂದು ಹೇಳುವುದು. ಈ ತರ್ಕದ ಹಿನ್ನೆಲೆಯಲ್ಲೇ ಸನ್ಯಾಸಿಗೆ ಬ್ರಹ್ಮಚರ್ಯ ವಿಧಿಸಿರುವುದು. ಸನ್ಯಾಸಿ ಎಂದರೆ ಮೋಕ್ಷಾರ್ಥಿ, ಹೀಗಿರುವಾಗ, ಆತನ ಸನ್ಯಾಸಕ್ಕೆ ಏಕಾಂತವಾಸವು ಅತ್ಯಗತ್ಯವಾಗುವುದು. ಮಾತ್ರವಲ್ಲ, ಆತನಿಗೆ ಆಶೀರ್ವಚನ ಕೆಲಸ ಬಿಟ್ಟು ಬೇರೆ ಯಾವ ಲೌಕಿಕ ಕರ್ಮವೂ ವಿರುದ್ಧವಾಗುವುವು ಎಂದೂ ಶಾಸ್ತ್ರಗಳು ಹೇಳುವವು.

ದೇವ, ದೇವತಾ ಸಂಕಲ್ಪಗಳು ಸೂಕ್ಷ್ಮ ಸ್ಥರದಲ್ಲಿದ್ದು, ಭಕ್ತರನ್ನು ಸದಾ ಕಾಲವೂ ಅನುಗ್ರಹಿಸಲಿರುವ ಶಕ್ತಿಗಳಾಗಿವೆ. ಆದುದರಿಂದ ದೇವತೆಗಳು ಸೂಕ್ಷ್ಮ ಸ್ಥರದಲ್ಲಿ, ಶೂನ್ಯವಾಗದೆ ಅಥವಾ ಲೀನವಾಗದೆ, ತಮ್ಮ ಅಸ್ತಿತ್ವವನ್ನು ಇಟ್ಟು ಕೊಳ್ಳುವ ಅವಶ್ಯಕತೆ ಇರುವುದು. ಆದುದರಿಂದ ಆ ದೇವ, ದೇವತಾ ಶಕ್ತಿಗಳು ಸನ್ಯಾಸಿಗಳಂತೆ ಅಸ್ತಿತ್ವವನ್ನು ಕಳಕೊಳ್ಳುವ ರೀತಿಯದ್ದಲ್ಲವೆಂದೂ ಮಾತ್ರವಲ್ಲ, ಭಕ್ತರಿಗಾಗಿ ಕಳಕೊಳ್ಳಬಾರದು ಎಂದೂ ತಿಳಿಯಬೇಕು. ಹೀಗಿರುವಾಗ ಒಂದು ದೇವ ಅಥವಾ ದೇವತಾ ಸಂಕಲ್ಪವು "ಸನ್ಯಾಸಿ" ಆಗಲು ಸಾಧ್ಯವೇ ಇಲ್ಲ, ಅಥವಾ ಒಬ್ಬ ಸನ್ಯಾಸಿಗೆ ದೇವ ಸಂಕಲ್ಪದೊಂದಿಗೆ ಇರಲು ಸಾಧ್ಯವೇ ಇಲ್ಲ ಎಂದು ಸ್ಪಷ್ಟವಾಯಿತು. ಈ ರೀತಿಯಲ್ಲಿ, ದೇವತೆಗಳಿಗೆ, ತನ್ನ ಅಸ್ತಿತ್ವವನ್ನು ಸೂಕ್ಷ್ಮ ಸ್ಥರದಲ್ಲಿ ಕಳಕೊಳ್ಳಲು ಅಗತ್ಯವಾದ, ಆ ಬ್ರಹ್ಮಚರ್ಯದ ಅಗತ್ಯವೂ ಇರುವುದಿಲ್ಲ.

ದೇವ, ದೇವತೆಗಳಿಂದ ಭಕ್ತರು ಪಡೆಯುವ ಅನುಗ್ರಹದ ವಿಚಾರವಾಗಿ ನೋಡುವಾಗ, ಅಲ್ಲಿ, ತಮ್ಮ ಗೃಹಸ್ಥಾಶ್ರಮದ ತೊಂದರೆಗಳನ್ನು ನಿವಾರಿಸಲು ಕೂಡಾ ಭಕ್ತರು ತನ್ನ ದೇವರಲ್ಲಿ ಬೇಡಿಕೊಳ್ಳುವರು. ಆಗ, ಆ ದೇವತೆಯು ಬ್ರಹ್ಮಾಚಾರಿಯಾಗಿದ್ದರೆ, ಆ ತೊಂದರೆ ನಿವಾರಣೆಯು ಆ ದೇವತೆಯಿಂದ ಸಾಧ್ಯವಾಗಲಾರದು. ಉದಾಹರಣೆಗೆ, ಹಿಂದಿನ ದೇವ, ದೇವತಾ ಸಂಕಲ್ಪಗಳ ವಿಜ್ಞಾನದಲ್ಲಿ "ಅಗ್ನಿ" ದೇವಶಕ್ತಿಯು ನೀರನ್ನು ಸೃಷ್ಟಿ ಮಾಡಲಾರದು, ಅದೇ ರೀತಿ, "ವರುಣ" ದೇವಶಕ್ತಿಯು ಅಗ್ನಿಯನ್ನು ಸೃಷ್ಟಿ ಮಾಡಲಾರದು.

ಇನ್ನು, ಧರ್ಮದ ಮೂಲವು ಇರುವುದು ವೈವಾಹಿಕ ಜೀವನದಲ್ಲಿ ಎಂದು ತಿಳಿದಿದೆ. ಅದು ನಾಶವಾದರೆ ಧರ್ಮವೂ ನಾಶವಾದಂತೆ. ಆ ಪ್ರಾಚೀನ ವಾಮಾಚಾರವು, ಎಲ್ಲಾ ಧರ್ಮಗಳಲ್ಲೂ, ಈ ವೈವಾಹಿಕ ಜೀವನವನ್ನೇ ಅತ್ಯಂತ ಬೇಗನೆ ನಾಶಮಾಡಿಸಿ ತಮ್ಮ ಗುರಿಯನ್ನು ಬಹಳ ಬೇಗನೆ ಸೇರುವ ತವಕದಲ್ಲಿ ನಿರಂತರ ಕೆಲಸದಲ್ಲಿ ತೊಡಗಿಸಿಕೊಂಡಿದೆ! ಹೀಗಿರುವಾಗ, ಈ ವೈವಾಹಿಕ ಜೀವನವನ್ನು ರಕ್ಷಿಸಲು ಪ್ರಯತ್ನವನ್ನು ಮಾಡದಿದ್ದರೆ, ಬೇರೆ ಯಾವ ಕೆಲಸಕ್ಕೆ ಇನ್ನು ಕೋಟಿ ದೇವ, ದೇವತೆಗಳಿದ್ದೂ ಪ್ರಯೋಜನವಾಗುವುದಿಲ್ಲ ಎಂಬುವುದು ಪರಮ ಸತ್ಯವಾಗುವುದು. ಈ ನಿಟ್ಟಿನಲ್ಲೇ ನಾನು ನನ್ನ ದೇವಸಂಕಲ್ಪದಲ್ಲಿ ಬದಲಾವಣೆಯನ್ನು ತರಲು ತೀರ್ಮಾನಿಸಿದ್ದು ಎಂದು ತಿಳಿಯಬೇಕು [ಇಲ್ಲವಾದರೆ ನನ್ನ ದೇವ ಸಂಕಲ್ಪವಿದ್ದೂ ಪ್ರಯೋಜನವಿಲ್ಲವಾಗಿ, ಮೊದಲಿನ ಸ್ಥಿತಿಯಲ್ಲಿ ಏನೂ ಬದಲಾವಣೆ ಸಾಧ್ಯವಾಗದೆ ಮುಂದುವರಿಯುವುದು.] ಇನ್ನು, ವೈವಾಹಿಕ ಜೀವನದ ತೊಂದರೆಗಳಾದ, ಅನೈತಿಕ ಕಾಮಾಸಕ್ತಿ, ದಾಂಪತ್ಯ ಜಗಳ, ವಿವಾಹ ವಿಚ್ಛೇದನ, ಇತ್ಯಾದಿ ಗಂಭೀರ ತೊಂದರೆಗಳನ್ನು

ನೋಡುವುದಾದರೆ, ಇದಕ್ಕೆ ಆ ಏಕ ಸಂಕಲ್ಪ-ವಿಜ್ಞಾನದ ಪರಿಹಾರವೆಂದರೆ, ಅದು "ಪತಿವ್ರತಾ ಸಂಕಲ್ಪ" ಮತ್ತು "ಏಕಪತ್ನೀ ವ್ರತಸ್ಥ ಸಂಕಲ್ಪ" ದ ಅತಿ ದೊಡ್ಡ ಪ್ರಮಾಣದ ತಯಾರಿಯಾಗಿದೆ. ಇದನ್ನು ತಯಾರಿಸಬೇಕಾದರೆ, ನಾನು ಸ್ವತ: ಏಕಪತ್ನೀ ವ್ರತಸ್ಥನಾಗಬೇಕು ಮತ್ತು ಒಬ್ಬಳು ಪತಿವ್ರತೆಯೂ ಅದಕ್ಕೆ ತಯಾರಾಗಬೇಕಾಗುವುದು. ಈ ರೀತಿಯಲ್ಲಿ, ಆ ಪವಿತ್ರ ಸಂಕಲ್ಪಗಳನ್ನು ಬೆಳೆಸಿ ಅದನ್ನು ಒಂದು ದೊಡ್ಡ ಪ್ರೇರಣೆಯ ರೀತಿಯಲ್ಲಿ ಪ್ರಯೋಗಿಸುವುದಾದರೆ, ದೊಡ್ಡ ಅಯಸ್ಕಾಂತವು ಚಿಕ್ಕ ಕಬ್ಬಿಣವನ್ನು ತನ್ನ ಪ್ರೇರಣೆಯ ಮೂಲಕ ತನ್ನದೇ ಅಯಸ್ಕಾಂತದ ಸ್ವಭಾವಕ್ಕೆ ತಿರುಗಿಸುವಂತೆ, ಆ ಪವಿತ್ರಗೊಳಿಸಲ್ಪಟ್ಟ ಪತಿವ್ರತಾ ಮತ್ತು ಏಕಪತ್ನೀ ವ್ರತದ ಆ ದೊಡ್ಡ ಪ್ರೇರಕ ಸಂಕಲ್ಪಶಕ್ತಿಯು, ಸಾಮಾನ್ಯ ಮಾನವರ ದಾಂಪತ್ಯ ವಿರಸ, ವಿವಾಹ ವಿಚ್ಛೇದನ, ಇತ್ಯಾದಿಗಳಿಂದ ಆವರನ್ನು ಪಾರುಗೊಳಿಸಲು ಶಕ್ತವಾಗಬಹುದು. ಈ ಉದ್ದೇಶಕ್ಕೆ, ನನಗೆ ನನ್ನ ಭಕ್ತಳು ಹಾಗೂ ನನ್ನ ಪತ್ನಿಯಾಗಿದ್ದು ಪತಿವ್ರತಾ ಜೀವನ ನಡೆಸಲು ಸಾಧ್ಯಾವಾಗುವ ಒಬ್ಬಳು ಆಧ್ಯಾತ್ಮಿಕ ವ್ಯಕ್ತಿಯ ಅನಿವಾರ್ಯತೆ ಉಂಟಾಯಿತು. ಹಾಗೆ ಯಾರಾದರೂ ಸತ್ಯಸಂಧಳಾದ ಒಬ್ಬಳು ಮುಂದಾದರೆ ನನಗೆ ಪತಿವ್ರತೆ ಮತ್ತು ಏಕಪತ್ನಿ ವ್ರತಸ್ಥ ಎಂಬ ಏರಡೂ ಅಗತ್ಯದ ಸಂಕಲ್ಪವನ್ನು ಪಡೆದು ಅವುಗಳಿಗೆ ಶಕ್ತಿ ಪೇರಿಸಿ ಅದನ್ನು ದೊಡ್ಡ ಪ್ರೇರಕ ಶಕ್ತಿಯಾಗಿಸಿ ನನ್ನ ಭಕ್ತರ ದಾಂಪತ್ಯದ ಮೇಲೆ ಬೀರುವ ಆ ಪ್ರಾಚೀನ ವಾಮಾಚಾರದ ಆ ಪ್ರಭಾವವನ್ನು ತಡೆಗಟ್ಟಲು ಸಾಧ್ಯವಾಗುವುದು ಎಂದು ತೀರ್ಮಾನಿಸಿದ್ದೆ. ಹೀಗಿರುವಾಗ, ಈ ಅನಿವಾರ್ಯತೆಯನ್ನು ಅರಿತು ತನ್ನ ಜೀವನವನ್ನು ಆ ಸೇವೆಗಾಗಿ ಮುಡಿಪಾಗಿಸಲು ಒಬ್ಬಳು ನನ್ನ ಭಕ್ತೆ ತಯಾರಾದಳು. ತನ್ನ ತಂದೆ, ತಾಯಿಯರ ಅನುಮತಿಯೊಂದಿಗೆ, ಪೆರ್ಮುದೆ ಎಂಬ ಸ್ಥಳದಿಂದ ಬಂದ ಕವಿತ ಎಂಬ ಹೆಸರಿನ ಆ ನನ್ನ ಭಕ್ತೆಯು, ಆ ರೀತಿಯ ಜೀವನದ ಅರ್ಹತೆಗಾಗಿ, ನನ್ನನ್ನು ಮೂರು ವರುಷ ಪತಿದೇವರು ಎಂದು ಧ್ಯಾನಿಸುತ್ತಾ ಮತ್ತು ಇತರ ನಿಯಮಗಳನ್ನು ಅದರೊಂದಿಗೆ ನಿಷ್ಠೆಯಿಂದ ಪಾಲಿಸುತ್ತಾ ಆ ಸಾಧನೆಯಲ್ಲಿ ತೊಡಗಿಸಿಕೊಂಡಳು. ಈಗ ವ್ರತವು ಪೂರ್ಣವಾಗಿದ್ದು, ಅವಳು ನನ್ನ ಪತಿವ್ರತಾ ಪತ್ನಿಯಾಗಿ ಮತ್ತು ಭಕ್ತೆಯಾಗಿ ಆಧ್ಯಾತ್ಮ ಸಾಧನೆಯನ್ನು ಮುಂದುವರಿಸುತ್ತಿರುವಳು. ನನ್ನ ದೇವಸಂಕಲ್ಪದಲ್ಲಿ, ಈ ರೀತಿಯಲ್ಲಿ, ಭಕ್ತರ ದಾಂಪತ್ಯ ತೊಂದರೆಗಳಿಗೆ ಒಂದು ಪರಿಹಾರ ಸಾಧ್ಯತೆಯು ಉಂಟಾಗಿರುವುದು ಭಕ್ತರಿಗೆ ತುಂಬಾ ಲಾಭದಾಯಕವಾಗಿ ಪರಿಣಮಿಸಬಹುದು ಎಂದು ನನ್ನ ಅನಿಸಿಕೆ.

---

## ಸ್ವಧರ್ಮ ಅಥವಾ ವ್ಯಕ್ತಿಧರ್ಮ ಮತ್ತು ಸಾಮಾಜಿಕ ಧರ್ಮ ಎಂದು ಬೇರೆ ಬೇರೆ ಇವೆಯೇ?

ಉತ್ತರ- ಧರ್ಮ ಎಂಬ ಶಬ್ದವು ನಿಸ್ವಾರ್ಥತೆ ಭಾವನೆಯನ್ನು ಪ್ರಕಟಗೊಳಿಸುವುದು. 'ಸ್ವ' ಧರ್ಮ ಅಥವಾ ವ್ಯಕ್ತಿ ಧರ್ಮ ಎಂದು ಹೇಳುವಾಗ ಅಲ್ಲಿ 'ಸ್ವ' ಎಂಬುವುದು, ಸ್ವಾರ್ಥ ಅಥವಾ ಒಬ್ಬ ವ್ಯಕ್ತಿಯು ತನ್ನ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಆಲೋಚನೆ ಮಾಡುವ ಅಷ್ಟಕ್ಕೆ ಧರ್ಮವನ್ನು ಹಗುರಮಾಡಿದಂತೆ ಆಗುವುದು. ಈ ಹಿನ್ನೆಲೆಯಲ್ಲಿ, ವ್ಯಕ್ತಿ ಧರ್ಮಕ್ಕಿಂತ ಸಾಮಾಜಿಕ ಧರ್ಮವೇ ನಾವು ಮೊದಲು ಪರಿಗಣಿಸಬೇಕಾದ ಧರ್ಮವಾಗುವುದು. ಮಾತ್ರವಲ್ಲ, ಈ ರೀತಿ, ವ್ಯಕ್ತಿ ಧರ್ಮವು ಸಾಮಾಜಿಕ

ಧರ್ಮವನ್ನು ಮೀರಿದಲ್ಲಿ ಧರ್ಮವು ನಾಶವಾಗುವ ಸಂಭವವಿದೆ. ಇನ್ನು, ಸಾಮಾಜಿಕ ಧರ್ಮ ಎಂದರೇನು ಎಂದು ತಿಳಿಯೋಣ. ಇದು ಸಮಾಜದಲ್ಲಿ ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿ, ಬೆಳೆಯಲು ಸಾಧ್ಯವಾಗುವ ರೀತಿಯ ಧರ್ಮವಾಗುವುದು. ಅಂದರೆ, ಕಳ್ಳರು, ಅಥವಾ ಕೆಟ್ಟ ಸ್ವಭಾವದವರು ಯಾರೇ ಆದರೂ, ಅವರಿಂದ ದೂರ ನಿಲ್ಲುವ ಅಥವಾ ಸಾಧ್ಯವಿದ್ದರೆ ಆ ಅನ್ಯಾಯದ ಎದುರು ಶಬ್ದ ಎತ್ತುವ ರೀತಿಯಾಗುವುದು. ಈ ಸಾಲಿನಲ್ಲಿ ನಮ್ಮ ಮನೆಯವರು ಇದ್ದರೂ ಅಲ್ಲಿಯೂ ಎದುರಿಸುವ ಅಥವಾ ದೂರವಿರುವ ಧೈರ್ಯಬೇಕಾಗುವುದು. ಆದರೆ ಇದನ್ನು ಹೆಚ್ಚಾಗಿ ಯಾರೂ ಮಾಡುವುದಿಲ್ಲ. ಮನೆ ಮಂದಿ ಏನು ತಪ್ಪು ಮಾಡಿದರೂ ಅದನ್ನು ಸರಿಯೆಂದು ಹೇಳುವವರೇ ಹೆಚ್ಚಿನ ಜನರು. ಈ ವಿಚಾರವು ಬೇಗನೆ ಅರ್ಥವಾಗಬೇಕಿದ್ದರೆ, ರಾಮಾಯಣ ಮತ್ತು ಮಹಾಭಾರತಗಳ ಒಂದೊಂದು ಉದಾಹರಣೆಯನ್ನು ತೆಗೆಯೋಣ. ರಾಮಾಯಣದಲ್ಲಿ, ವಿಭೀಷಣನು ತನ್ನ ಅಣ್ಣಂದಿರನ್ನು ಹಾಗೂ ದೇಶವನ್ನೇ ತೊರೆದು ರಾಮನಲ್ಲಿಗೆ ಬಂದನು. ಇದು, ತನ್ನ ಅಣ್ಣ ಪರಸ್ತ್ರೀಯನ್ನು ಬಚ್ಚಿಟ್ಟ ಆ ದೊಡ್ಡ ಅಧರ್ಮದ ವಿರುದ್ಧವಾಗಿತ್ತು. ಇಲ್ಲಿ, ವಿಭೀಷಣನು ಇಡೀ ಜಗತ್ತಿಗೆ ಒಬ್ಬ ಉತ್ತಮ ಆದರ್ಶನಾದನು. ಆದರೆ, ಮಹಾಭಾರತದಲ್ಲಿ ಭೀಷ್ಮ, ದ್ರೋಣರು, ಧರ್ಮವು ಪಾಂಡವರ ಕಡೆ ಇದ್ದರೂ, ಅವರ ಕಡೆಗೆ ಬರಲಿಲ್ಲ. ಅಲ್ಲಿ ಅವರು ಕೊಟ್ಟ ಉತ್ತರವು ಈ ಸ್ವಧರ್ಮವಾಗಿದೆ. ಅಂದರೆ, ಅವರಿಗೆ ರಾಜ ಊಟ ಕೊಟ್ಟಿದ್ದಾನೆ ಎಂಬ ಕಾರಣಕ್ಕೆ ಆ ಸಾಮಾಜಿಕ ಆದರ್ಶದ ಧರ್ಮಕ್ಕೆ ವಿರುದ್ಧವಾಗಿ ನಡೆದರು. ಅಂದರೆ, ಊಟಕೊಟ್ಟಿದ್ದಾನೆ ಎಂದು ಅಧರ್ಮವನ್ನು ಒಪ್ಪಲು ಸಾಧ್ಯವಾಗುವುದೇ? ಆದುದರಿಂದ ನಮಗೆ ಎಲ್ಲವನ್ನೂ ಚುಟುಕಾಗಿ ಹೇಳಬೇಕಾದರೆ ನಮಗೆ ಈ ರೀತಿಯಲ್ಲಿ ಹೇಳಬಹುದು, 'ಸ್ವಧರ್ಮದ ಬೋಧವಿರಬೇಕು, ಆದರೆ, ಅದು ಸಾಮಾಜಿಕ ಧರ್ಮಕ್ಕೆ ವಿರೋಧವಾಗುವಲ್ಲಿ ಸಾಮಾಜಿಕ ಧರ್ಮವನ್ನೇ ಅವಲಂಭಿಸಬೇಕಾಗುವುದು" ಎಂದು ಆಗಿದೆ. ಆದುದರಿಂದ ಎಂದಿಗೂ ಈ ವಿಭೀಷಣ-ಧರ್ಮದ ರೀತಿಯೇ ನಿಜವಾಗಿಯೂ ಅನುಸರಿಸಬೇಕಾದ ಧರ್ಮದ ರೀತಿ ಎಂದು ತಿಳಿಯುವುದು. ಅಂದರೆ, ಸತ್ಯ ಮತ್ತು ನ್ಯಾಯ ಎಲ್ಲಿದ್ದರೂ ಅದು ಮಾತ್ರವೇ ಸರಿ ಎಂಬ ಸಾರ್ವತ್ರಿಕ ಸತ್ಯದ ರೀತಿಯು ಇದಾಗಿದೆ. ಸಮಾಜದಲ್ಲಿ ಇದು ನಾಶವಾಗಿರುವ ಕಾರಣದಿಂದಾಗಿ ಅಸ್ಪೃಶ್ಯತೆ, ಅನೈತಿಕತೆ, ಜಾತೀಯತೆ, ಧರ್ಮಾಂಧತೆ, ಸ್ವಾರ್ಥ ರಾಜಕೀಯ, ಇತ್ಯಾದಿಗಳು ಬೆಳೆದು ಪರ್ವತವಾಗಿರುವುದು.

---

## ಸಮಾಜದಲ್ಲಿ, ಅಪವಾದಗಳಿಂದ ದೂರವಾಗಲು ಪ್ರಯತ್ನಿಸಬೇಕೆ?

ಉತ್ತರ- ನೋಡಿ, ಸಂನ್ಯಾಸಿಗಳು ಹಾಗೆ ಪ್ರಯತ್ನಿಸದಿದ್ದಲ್ಲಿ ಅದು ಅವರ ಇಷ್ಟ ಎನ್ನಬಹುದು, ಆದರೆ ಜಗತ್ತಿಗೆ ಆದರ್ಶರಾಗಿ ಬೆಳಗಬೇಕಾದ ಮಹಾತ್ಮರು ಹಾಗೆ ಹೇಳಿದ್ದಲ್ಲಿ ಅದನ್ನು ಒಪ್ಪುವುದು ಕಷ್ಟ. ಯಾಕೆಂದರೆ, ಯಾರದರೂ ನೈತಿಕತೆ, ಅಥವಾ ಸತ್ಯ, ಪ್ರೀತಿ, ನೀತಿಯೆಂಬ ಆ ಪವಿತ್ರ ಜೀವನದ ಬಗ್ಗೆ ಉಪದೇಶಿಸುವಾಗ, ಕಿಡಿಗೇಡಿ ಜನರು, ಅಂಥವರಿಗೆ ಹೇಗಾದರೂ ಮಾಡಿ ಅಪವಾದವನ್ನು ಹೊರಿಸುವ ಪ್ರಯತ್ನವನ್ನು ಮಾಡುತ್ತಿರುತ್ತಾರೆ. ಇದು ಮಹಾತ್ಮರಿಗೆ ಅಪವಾದ ಬರುವಂತೆ ಮಾಡಿ, ಸಮಾಜದಲ್ಲಿ ನೈತಿಕತೆಯ ಬಗ್ಗೆ ಮಾತೆತ್ತಲು ಯಾರೂ ಇಲ್ಲವಾಗುವಂತೆ ಮಾಡುವುದು! ಇದರಿಂದಾಗಿ ಅನೈತಿಕತೆಯ ಪಾಪಿಗಳಿಗೆ ಲಾಭವಾಗಿ, ಸ್ವಚ್ಛಂದ ಜೀವನವನ್ನು ನಡೆಸಲು ಸಾಧ್ಯವಾಗುವುದು, ಮತ್ತು ತಾವು ಅನೈತಿಕ

ಮಾರ್ಗದಲ್ಲಿದ್ದರೂ ಅದಕ್ಕೆ ಅದನ್ನು ಅವರವರ ಖಾಸಗೀ ಜೀವನವೆಂದು ಬಣ್ಣಿಸುತ್ತಾ ಸಮಾಜದಲ್ಲಿ ಮಹಾತ್ಮರಷ್ಟು ಗೌರವವನ್ನು ಜನರಿಂದ ಗಳಿಸುವಲ್ಲಿ ಜಯಗಳಿಸುವರು!! ಅವರು ಹಾಸಿದ ಆ ಪಾಪದ ದಾರಿಯನ್ನು ಸರ್ವರೂ ಅನುಸರಿಸುವಲ್ಲಿ, ಜಗತ್ತಿನಲ್ಲಿ ಅಧರ್ಮದ ಸಂಸ್ಥಾಪನೆಯೂ ಆಗುವುದು!! ಅಂದರೆ, ಆಧ್ಯಾತ್ಮ ದಾರಿಯಲ್ಲಿರುವವರು ಬರಬಹುದಾದ ಅಪವಾದವನ್ನು ಗಮನಿಸದಿದ್ದಲ್ಲಿ, ಅದು ಜಗತ್ತಿನಲ್ಲಿ ಸಾವಿರಾರು ಪಾಪಿಗಳಿಗೆ ಅಧರ್ಮದ ಸಂಸ್ಥಾಪನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಂತೆ ಆಗುವುದು!! ಮಾತ್ರವಲ್ಲ, ತಮ್ಮ ಜೀವನವಿಡೀ ಜನರಿಗೆ ನೈತಿಕತೆಯ ಕುರಿತು ಬೋಧಿಸಲು ಪ್ರಯತ್ನಿಸಿದ ಆ ಮಹಾತ್ಮರ ಪ್ರಯತ್ನವು, ಆ ಮಹಾತ್ಮರುಗಳೇ ತಪ್ಪಿತಸ್ಥರು ಎಂಬ ಅಪವಾದದ ಹಿನ್ನೆಲೆಯಲ್ಲಿ, ನಿಮಿಷಾರ್ಧದಲ್ಲಿ ಧ್ವಂಸವಾಗಿಬಿಡುವುದು! ಆದುದರಿಂದ ಎಲ್ಲಾ ಆಧ್ಯಾತ್ಮಿಕ ವ್ಯಕ್ತಿಗಳೂ ತಮಗೆ ಅಪವಾದ ಬಾರದಂತೆ ಕೆಲವು ಮುಂಜಾಗ್ರತೆಯನ್ನು ವಹಿಸಬೇಕಾಗಿದೆ.

ಇದಕ್ಕಾಗಿಯೇ ನನ್ನಲ್ಲಿ ಕೆಲವು ನಿಯಮಗಳಿರುವುದು. ಅದರ ಉದ್ದೇಶವು ಇದೇ ಅಪವಾದಗಳಿಗೆ ಅವಕಾಶವನ್ನೇ ಇಲ್ಲದಂತೆ ಮಾಡುವುದಾಗಿದೆ. ಮನೆಯಲ್ಲಿ ಕುಳಿತು ಆರಾಮವಾಗಿ ಒಂದು ಅಪವಾದವನ್ನು ಸೃಷ್ಟಿಸಬೇಕಾದರೂ ಅದಕ್ಕೆ ಸಂಧರ್ಭವನ್ನು ಮೊದಲು ಸೃಷ್ಟಿಸಬೇಕಾಗುವುದು. ಸಂದರ್ಭಯಾವುದೆಂಬುವುದು ಎಲ್ಲರೂ ಕೇಳುವ ಮೊದಲ ಪ್ರಶ್ನೆಯಾದುದರಿಂದ ಅವರು ಆ ಸಂದರ್ಭವನ್ನು ಹೇಳಲೇ ಬೇಕಾಗುವುದು. ಆದರೆ ಆ ಸಂದರ್ಭವೇ ಇಲ್ಲವಾದರೆ, ಅವರಿಗೆ ಬಾಯಿ ತೆರೆಯಲು ಸಾಧ್ಯವಾಗುವುದಿಲ್ಲ. ಅಂದರೆ, ಅವರಿಗೆ, ಹುಟ್ಟದ ರಾಜನ ಕಥೆಯನ್ನು ವಿವರಿಸಲು ಸಾಧ್ಯವಾಗುವುದಿಲ್ಲವೆಂದು ಅರ್ಥ. ನನ್ನ ನಿಯಮಗಳು ಎಲ್ಲವೂ ಈ ಅಪವಾದಗಳನ್ನು ಹುಟ್ಟದಂತೆ ಮಾಡುವಲ್ಲಿ ತಯಾರು ಮಾಡಲಾಗಿದೆ.

---

## ದೆವ್ವಗಳನ್ನು ನೀವು ಈ ೨೧ ನೇ ಶತಮಾನದ ಅತ್ಯಾಧುನಿಕ ಯುಗದಲ್ಲೂ ನಂಬುವಿರೇ?

ಉತ್ತರ- ದೆವ್ವಗಳು ಹಿಂದೆ ಇದ್ದಲ್ಲಿ, ಇಂದೂ ಇರುವುದು. ಆಧುನಿಕ ಯುಗ ಬಂತೆಂದು ಅವುಗಳು ತಮ್ಮನ್ನು ತಾವು ನಾಶ ಮಾಡಿಕೊಳ್ಳಲಾರವು. ಆದರೆ ಪ್ರಶ್ನೆ ಇರುವುದು ಅವುಗಳು ಇವೆಯೇ ಅಥವಾ ಇಲ್ಲವೇ ಎಂದು. ಮಾನವನಿಗೆ ಮನಸ್ಸು ಇದೆ. ಇದು ಸೂಕ್ಷ್ಮ ಸ್ಥರದಲ್ಲಿರುವುದು. ಆತನ ಶರೀರ ಸ್ಥೂಲ ಸ್ಥರದಲ್ಲಿರುವುದು. ಈ ನಿಟ್ಟಿನಲ್ಲಿ ಜೀವಂತವಾಗಿರುವಾಗಲೂ ಮಾನವನು ಸೂಕ್ಷ್ಮ ಜೀವಿಯಾಗಿಯೇ ಜೀವಿಸುವನು. ಯಾಕೆಂದರೆ ಆತನು ತನ್ನ ಮನಸ್ಸಿನ ವ್ಯಕ್ತಿತ್ವದಿಂದ ಮಾತ್ರ ವ್ಯವಹರಿಸುತ್ತಾನೆ ಅಥವಾ ಜೀವಿಸುತ್ತಾನೆ. ಆತನ ಸ್ಥೂಲ ದೇಹ ಆತನ ಸೂಕ್ಷ್ಮ ಮನಸ್ಸಿನ ವ್ಯಕ್ತಿತ್ವ ಹೇಳಿದಂತೆ ಮಾಡುತ್ತಿರುವುದು ಅಷ್ಟೆ. ಈ ರೀತಿಯಲ್ಲಿ ಮಾನವನನ್ನು ಶರೀರವಿರುವ ಸೂಕ್ಷ್ಮಜೀವಿ ಎನ್ನಬಹುದು. ಅದೇ ರೀತಿ ದೆವ್ವಗಳನ್ನು ಶರೀರ ಕಳಕೊಂಡ ಅಥವಾ ಶರೀರವಿಲ್ಲದ ಸೂಕ್ಷ್ಮ ಜೀವಿಗಳೆನ್ನಬಹುದು. ಒಟ್ಟಿನಲ್ಲಿ ಎಲ್ಲವೂ ಮನಸ್ಸಿಗೆ ಸಂಬಂಧಿಸಿದ, ಕಣ್ಣಿಗೆ ಕಾಣಿಸದ, ಸೂಕ್ಷ್ಮ ಅಸ್ತಿತ್ವಗಳು ಅಷ್ಟೆ. ದೆವ್ವಗಳೇ ಇಲ್ಲವೆಂದು ವಾದಿಸುವವರು ಇದನ್ನು ತಿಳಿಯಬೇಕು.

ವ್ಯಕ್ತಿತ್ವದಿಂದೊಡಗೂಡಿದ ಮನಸ್ಸಿಗೆ, ದೇಹವಿಯೋಗದ ನಂತರವೂ ಅಸ್ತಿತ್ವವಿರುವುದು. ಇದನ್ನೇ ಸತ್ತ ಆತ್ಮ ಅಥವಾ ಕೆಲವೊಮ್ಮೆ ಅವುಗಳಲ್ಲಿ ಕೆಲವೊಂದನ್ನು ಜನರು ದೆವ್ವವೆನ್ನುವುದು. ಇದು ಅವೈಜ್ಞಾನಿಕವಲ್ಲ. ಆದರೆ ಇವುಗಳು ಯಾವಾಗಲೂ ಮಾನವನಿಗೆ ತೊಂದರೆ ಕೊಡುವಂತಿರುವುದು. ಮಾನವನ ಭೂಮಿಯ ರೀತಿಯ ಆ ವ್ಯಕ್ತಿತ್ವಗಳನ್ನು ಕ್ರೌರ್ಯದ ದೆವ್ವದ ರೀತಿಯಾಗಿ, ಆ ಪ್ರಾಚೀನ ವಾಮಾಚಾರ ಪರಿವರ್ತಿಸಿರುವುದೇ ಇದಕ್ಕೆ ಕಾರಣವಾಗಿದೆ. ಆ ಪ್ರಾಚೀನ ವಾಮಾಚಾರವು ಅವುಗಳನ್ನು ದೆವ್ವವಾಗಿಸದಿರುತ್ತಿದ್ದರೆ, ಮಾನವನಿಗೆ ಅವುಗಳು ಉಪಕಾರಿಗಳಾಗುತ್ತಿದ್ದವು!

---

## ನೀವು ಮೊದಲು ಇದ್ದ ಆಶ್ರಮದಲ್ಲಿ ನೀವೇ ಅರಾಧಿಸುತ್ತಿದ್ದ ಗುರು, ದೇವತೆಗಳ ಸಂಕಲ್ಪವನ್ನು ತೆಗೆದಿರುವುದು ಯಾತಕ್ಕಾಗಿ ಎಂದು ಕೇಳಬಹುದಲ್ಲಾ?

ಉತ್ತರ- ಖಂಡಿತವಾಗಿಯೂ ಕೇಳಬಹುದು. ಇದನ್ನೆಲ್ಲಾ ಎಲ್ಲರೂ ಮೊದಲೇ ಕೇಳಿದ್ದರೆ ಚೆನ್ನಾಗಿರುತ್ತಿತ್ತು. ನಾನು ಅಂದು ಅದ್ವೈತ ಸಾಧಕನಾಗಿದ್ದೆನು. ನನ್ನ ಗುರಿಯು ಮೋಕ್ಷಮಾತ್ರವಾಗಿತ್ತು. ಆ ಆಶ್ರಮದಲ್ಲಿ ನನ್ನೊಂದಿಗೆ ಇನ್ನೊಬ್ಬರು ಸ್ವಾಮೀಜಿಗಳೂ ಇದ್ದರು. ನಾನು ಸಾಧನಾ ಹಂತದಲ್ಲಿ ಮುಂದುವರಿಯುತ್ತಿದ್ದಂತೆ, ನನ್ನ ಧ್ಯಾನಕ್ಕೆ ತಡೆಯನ್ನು ಉಂಟುಮಾಡುತ್ತಾ ಕೆಲವು ಸೂಕ್ಷ್ಮ ಶಕ್ತಿಗಳು ತೊಂದರೆ ಕೊಡಲು ಆರಂಭಿಸಿದವು. ಇದು ನನ್ನ ಸೂಕ್ಷ್ಮ ಅನುಭವಗಳ ಆರಂಭ ಮಾತ್ರವಾಗಿತ್ತು. ಎಲ್ಲಾ ದೇವರುಗಳು ಮತ್ತು ಗುರುಗಳನ್ನು ಹಲವು ಬಾರಿ ಪ್ರಾರ್ಥಿಸಿ ಕರೆದರೂ ಫಲಕಾರಿಯಾಗಿಲ್ಲ. ಇದನ್ನು ಪರಿಹರಿಸದಿದ್ದಲ್ಲಿ ನನ್ನ ಧ್ಯಾನಕ್ಕೆ ತೊಂದರೆ ಆಗುವುದೆಂದು, ಮಂತ್ರ ತಂತ್ರಗಳಿಂದ ನಿವಾರಿಸುವ ಸಾತ್ವಿಕ ಜನರನ್ನು ಕರೆಸಿದೆ. ಆದರೆ ಯಾರಿಗೂ ಅದನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ!! ಇನ್ನು, ಇದರ ನಂತರದ ಅನುಭವಗಳನ್ನು ನೇರವಾಗಿ ಹೇಳಬಯಸುವುದಿಲ್ಲ, ಕಾರಣ, ಯಾರಿಗೂ ನಂಬಲು ಸಾಧ್ಯವಾಗದ ಸೂಕ್ಷ್ಮ ರಹಸ್ಯ ಸತ್ಯಗಳು, ನನ್ನದೇ ಧನಾತ್ಮಕ ಶಕ್ತಿಯ ಹೋರಾಟದ ಮೂಲಕ, ನಿಧಾನವಾಗಿ ಹೊರಬಂದ ಕಾಲವಾಗಿತ್ತದು. ಹಲವು ಭಯಾನಕ ಸೂಕ್ಷ್ಮ ಸತ್ಯಗಳ ಇರುವಿಕೆಯ ಕುರಿತು ತಿಳಿದುಕೊಳ್ಳಲು ನನ್ನ ಸೂಕ್ಷ್ಮದ ಬೇಹುಗಾರಿಕಾ ದಳಗಳಿಗೆ ಕೆಲವು ವರುಷಗಳೇ ಬೇಕಾದವು!!

ನಾನು, ಈ ಭಯಾನಕ ಹೋರಾಟದಲ್ಲಿರುವಾಗ, ನನ್ನ ಶಕ್ತಿಯಲ್ಲಿನ ಏಕಾಗ್ರತೆಯನ್ನು ಬಿಟ್ಟು, ಇನ್ನಾವ ಶಕ್ತಿಯ ಆರಾಧನೆಗಳಿಗೆ ಗಮನ ಕೊಟ್ಟರೂ ಆಗ ಅವುಗಳ ಹೋರಾಟವು ನನಗೆ ತಡೆಯಲು ಸಾಧ್ಯವಾಗದಷ್ಟು ಕಠಿಣವಾಗುತ್ತಿತ್ತು. ಅದಕ್ಕೆ ಪರಿಹಾರವೆಂದು ನಾನು ಆ ಆಶ್ರಮವನ್ನು ಇನ್ನೊಬ್ಬರು ಸ್ವಾಮೀಜಿಗೆ ಬಿಟ್ಟುಕೊಟ್ಟು ಒಬ್ಬನೇ ಎಲ್ಲಾದರೂ ಇದ್ದು ಅವುಗಳೊಂದಿಗೆ ಹೋರಾಡೋಣವೆಂದು ತೀರ್ಮಾನಿಸಿದ್ದೆ. ಮತ್ತು ಜೀವಂತವಾಗಿ ಬದುಕಿ ಉಳಿದಲ್ಲಿ, ಆ ಹೋರಾಟವೆಲ್ಲಾ ಮುಗಿದ ನಂತರ ತಿರುಗಿ ಬರೋಣವೆಂದೂ ತೀರ್ಮಾನಿಸಿ ಅಲ್ಲಿಂದ ಹೊರಡಲು ಕೊನೆಯ ತೀರ್ಮಾನವನ್ನು ಮಾಡಿದೆನು. ಆದರೆ ನನ್ನ ಭಕ್ತರು, ನಾನು ಏನು ಹೇಳಿದರೂ ನನ್ನನ್ನು ಅಲ್ಲಿಂದ ಹೊರಡಲು ಬಿಡಲಿಲ್ಲ. ಮಾತ್ರವಲ್ಲ, ಆ ಸಂಸ್ಥೆಯನ್ನು ಅಲ್ಲಿಗೇ ಕೊನೆಗೊಳಿಸುವುದಾಗಿಯೂ ಅವರು ಹೇಳಿದರು. ಆದರೆ ಆ ರೀತಿ ಮಾಡಿದಲ್ಲಿ ಜನರು ತಪ್ಪು ತಿಳಿಯಬಹುದೆಂದೂ, ನಾನು ಅವರನ್ನು ಎಚ್ಚರಿಸಿದೆನು, ಆದರೂ ಅವರು ಅದಕ್ಕೆ ಒಪ್ಪಲಿಲ್ಲ. ಆಗ ಬೇರೆ ದಾರಿಕಾಣದೆ ನನ್ನ ಆ ಪರಿಸ್ಥಿತಿಯನ್ನು ಅವರಲ್ಲಿ ಹೇಳಿದೆನು. ಆದರೆ

ಇದಕ್ಕಿಂತ ಮೊದಲೇ ನನ್ನಲ್ಲಿ ಆ ಒಂದು ಪ್ರತ್ಯೇಕ ಶಕ್ತಿ ಇರುವುದು ಮತ್ತು, ನಾನು ಸೂಕ್ಷ್ಮದಲ್ಲಿ ವಾಮಾಚಾರ ಶಕ್ತಿಗಳೊಂದಿಗೆ ಹೋರಾಡುತ್ತಿರುವುದು, ನಾನು ಮೊದಲೇ ಸೂಚಿಸಿರುವುದುದರಿಂದ, ಅವರಿಗೆ ಅದು ಗೊತ್ತಿತ್ತು. ಮಾತ್ರವಲ್ಲ, ಭಕ್ತರು ನನ್ನಲ್ಲಿ ಕೇಳಿ ಆ ಶಕ್ತಿಯಿಂದ ಅನುಗ್ರಹವನ್ನೂ ಪಡೆದಿದ್ದರು. ಈ ರೀತಿಯಲ್ಲಿ ನನ್ನಿಂದ ಅವರಿಗೆ ಅನುಗ್ರಹವು ಲಭಿಸಲು ಆರಂಭವಾಗಿತ್ತು. ಈ ಲಾಭವನ್ನು ಕಳಕೊಳ್ಳಲು ತಯಾರಿಲ್ಲದ ಭಕ್ತರು, ನನ್ನ ಮನ ಒಲಿಸಲು ನನಗೆ ಒಂದು ವಿಚಾರವನ್ನು ಹೇಳಿದರು. ಅವರು ಹೇಳಿರುವುದು ಹೀಗೆ, "ಈ ಆಶ್ರಮದಲ್ಲಿರುವ ಗುರು ಹಾಗೂ ದೇವರುಗಳ ಸಂಕಲ್ಪಕ್ಕೆ ಜಗತ್ತಿನಲ್ಲಿ ಸಾವಿರಗಟ್ಟಲೆ ಇತರ ಆಶ್ರಮ, ಆಲಯಗಳಿವೆ, ಮತ್ತು ಈ ಒಂದು ಆಶ್ರಮದ ಅಭಾವವು ಆ ಗುರುಗಳ ಆಶ್ರಮಗಳಿಗೆ ಮತ್ತು ದೇವರುಗಳ ಆಲಯಗಳಿಗೆ ಒಂದು ನಷ್ಟವೇ ಆಗಲಾರದು, ಆದರೆ ನಿಮ್ಮಿಂದ ನಮಗೆ ಅನುಗ್ರಹ ದೊರಕುವ ಆ ಶಕ್ತಿಗೆ ಜಗತ್ತಿನಲ್ಲಿ ಎಲ್ಲೂ ಒಂದು ಆಲಯವಿಲ್ಲದುದರಿಂದ ಇಲ್ಲೇ ಆ ಶಕ್ತಿಯ ನೆಲೆಯಾಗಲಿ ಮತ್ತು ಅದನ್ನು ನಾವು ಆರಾಧಿಸುತ್ತಾ ಇಲ್ಲಿಗೆ ಬರುವ ಭಕ್ತರೂ ಅನುಗ್ರಹವನ್ನು ಪಡೆಯುವಂತಾಗಲಿ" ಎಂದರು, ಆಶ್ಚರ್ಯವೆಂದರೆ ಆ ಹಿರಿಯ ಸ್ವಾಮೀಜಿಗಳೂ ಅದನ್ನೇ ಹೇಳಿದರು, ಯಾಕೆಂದರೆ ಅವರಿಗೂ ಹಲವು ಬಾರಿ ನನ್ನ ಅನುಗ್ರಹದ ನೇರ ಅನುಭವವಾಗಿತ್ತು. ಭಕ್ತರ ಆ ಮಾತುಗಳನ್ನು ನಾನು ಆಲೋಚಿಸಿದಾಗ ಮತ್ತು ಆ ಮಾತುಗಳಲ್ಲಿ ನ್ಯಾಯವಿದೆ ಎಂದು ತೋರಿದುದರಿಂದ ಮತ್ತು ಭಕ್ತರನ್ನು ಬೇಸರಪಡಿಸುವುದೂ ಅದರಿಂದಾಗಿ ನಿಲ್ಲುವುದೆಂಬ ಕಾರಣಕ್ಕೆ, ನಾನು ಅದಕ್ಕೆ ವಿರೋಧವನ್ನು ಹೇಳಿಲ್ಲ ಅಷ್ಟೆ. ಅನಂತರ ಆ ಸ್ವಾಮೀಜಿಗಳೇ ಇತರ ಎಲ್ಲಾ ಸಂಕಲ್ಪವನ್ನೂ ದೂರವಿರಿಸಿ, ನನ್ನಲ್ಲಿ ಕೇಳಿ, ಆ ನನ್ನಲ್ಲಿನ ಶಕ್ತಿಯ ಒಂದು ಸಂಕೇತವನ್ನು ಅಲ್ಲಿ ಪ್ರತಿಷ್ಠಾಪಿಸಿದ್ದು. ಅನಂತರ ಅವರೇ ನನ್ನ ಭಾವ ಚಿತ್ರವನ್ನು ತರಲು ಹೇಳಿ, ಆ ಚಿಹ್ನೆಯ ಬದಲು ಅಲ್ಲಿ ಆರಾಧನೆಗಾಗಿ ನನ್ನ ಭಾವಚಿತ್ರವನ್ನು ಇಟ್ಟು ಆರಾಧನೆಯನ್ನು ಆರಂಭಿಸಿರುವುದು.

ಇದುವೇ, ಅಲ್ಲಿ ಮೊದಲಿದ್ದ ಇತರ ದೇವರುಗಳ ಮತ್ತು ಗುರು ಸಂಕಲ್ಪವನ್ನು ಭಕ್ತರು ತೆಗೆಯಲು ಹಾಗೂ ನನ್ನ ಭಾವ ಚಿತ್ರವನ್ನು ಅಲ್ಲಿ ಇರಿಸಲು ಕಾರಣವಾಗಿರುವುದು.

---

## ಬ್ರೈನ್ ವಾಶ್ ಮಾಡುವುದು ಎಂದರೇನು? ಹೆಚ್ಚಿನ ಧಾರ್ಮಿಕ ಮತಾಂತರವೂ ಇದೇ ರೀತಿಯಲ್ಲಿ ನಡೆಯುತ್ತವೆ ಎನ್ನುವರಲ್ಲಾ?

ಉತ್ತರ- ಮೊದಲಿಗೆ 'ಬ್ರೈನ್ ವಾಶ್' ಎಂದರೆ ಅದರ ಅರ್ಥ ಏನೆಂದು ತಿಳಿದುಕೊಳ್ಳಬೇಕು. ಒಬ್ಬ ವ್ಯಕ್ತಿಯ 'ಬ್ರೈನ್ ವಾಶ್' ಹೇಗೆ ನಡೆಯುವುದು ಎಂಬುವುದನ್ನು ಚುಟುಕಾಗಿ ನೋಡೋಣ.

ಬ್ರೈನ್ ವಾಶ್ ಗೆ ಅಗತ್ಯವಾದ ವಸ್ತು ನಂಬಿಕೆಯಾಗಿದೆ. ಅಂದರೆ ನಂಬಿಕೆಯೆಂಬ ಆಯುಧದಿಂದ ಮಾತ್ರ 'ಬ್ರೈನ್ ವಾಶ್' ಮಾಡಲು ಸಾಧ್ಯ. ನಂಬಿಕೆ ಇರುವ ಎಲ್ಲಾ ಕಡೆಯೂ 'ಬ್ರೈನ್ ವಾಶ್' ಕೆಲಸ ಸಾಧ್ಯವಿದೆ. ನಂಬಿಕೆಯ ಧರ್ಮ, ಪಂಥಗಳಾಗಲೀ ಅಥವಾ ಇನ್ನಾವ ಸಂಘಟನೆಗಳಾಗಲೀ ಅಲ್ಲೆಲ್ಲಾ, ಒಂದು ನಂಬಿಕೆಯನ್ನು ಇನ್ನೊಂದು ನಂಬಿಕೆಯು ಯಾವುದಾದರೂ ರೀತಿಯಿಂದ ಸೋಲಿಸಲು

ಪ್ರಯತ್ನಿಸುವುದು ಅಷ್ಟೆ. ಒಂದು ನಂಬಿಕೆಯನ್ನು ಇನ್ನೊಂದು ನಂಬಿಕೆ ಸೋಲಿಸುವಾಗ ಅಲ್ಲಿ 'ಬ್ರೈನ್ ವಾಶ್' ನಡೆಯುವುದು. ಆದರೆ ಸತ್ಯದಲ್ಲಿ ಬ್ರೈನ್ ವಾಶ್ ನಡೆಯುವುದಿಲ್ಲ. ವಿಜ್ಞಾನವು ಸತ್ಯವಾಗುವುದು. ವಿಜ್ಞಾನವನ್ನು ಒಂದು 'ಬ್ರೈನ್ ವಾಶ್' ಎಂದು ಹೇಳಿ ಯಾರೂ, ಇದುವರೆಗೂ, ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸಿ ತಂದಿಲ್ಲ. ಇನ್ನು, ನನ್ನ ವಿಚಾರವಾಗಿ ಹೇಳುವುದಾದರೆ, ನನ್ನಲ್ಲಿ ನಂಬಿಕೆಯ ರೀತಿ ಇಲ್ಲ, ಸತ್ಯದ ರೀತಿ ಮಾತ್ರ ಇರುವುದು. ಅಂದರೆ, ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯು ನಂಬಿಕೆಯಲ್ಲ, ಬದಲು ವಿಜ್ಞಾನದಂತೆ ಸತ್ಯಮಾತ್ರವಾಗುವುದು. ಆದುದರಿಂದ, ನನ್ನಲ್ಲಿ ಬ್ರೈನ್ ವಾಶ್ ಗೆ ಅವಕಾಶವೇ ಇಲ್ಲವಾಗುವುದು ಎಂದು ತಿಳಿಯಬೇಕು. ವಿಜ್ಞಾನವು, ಮಾನವನ ಹಿಂದಿನ ಹಲವು ಅಧಾರ ರಹಿತ ನಂಬಿಕೆಗಳ ಬ್ರೈನ್ ವಾಶ್ ನ್ನು ತೆಗೆದು ಅಲ್ಲಿ ವೈಜ್ಞಾನಿಕ ಸತ್ಯಗಳನ್ನು ತುಂಬಿಸುವ ಆ ಮಹಾ ಕೆಲಸವನ್ನು ಮಾತ್ರ ಮಾಡುತ್ತಿದೆ.

ಎಲ್ಲಾ ಧರ್ಮ, ಪಂಥಗಳಲ್ಲೂ ನಂಬಿಕೆಯೇ ಸರ್ವಸ್ವವಾದುದರಿಂದ, ಹಿಂದೆ ಇದ್ದ ನಂಬಿಕೆಗಳನ್ನು ತಪ್ಪು ಎಂದು ನಂಬಿಸುವ ಮತ್ತು ತಮ್ಮ ನಂಬಿಕೆಗಳನ್ನು ಹೇರುವ ಆ 'ಬ್ರೈನ್ ವಾಶ್'ನ ರೀತಿಯನ್ನೇ ಮುಂದುವರಿಸುತ್ತಾ ಹೋಗುತ್ತಿವೆ! ಮತಾಂತರಗಳೆಲ್ಲ ಒಂದು ರೀತಿಯ ಬ್ರೈನ್ ವಾಶ್ ಗಳೇ ಆಗಿವೆ. ಬ್ರೈನ್ ವಾಶ್ ಎಂಬುವುದು ಸತ್ಯಸಂಧ ಚಿಂತನೆಯ ಶತ್ರು ಆಗಿದೆ. ಇದರ ಪರಿಣಾಮವೇ ಭೀಕರ ಧರ್ಮಾಂಧತೆ ಮತ್ತು ಅವುಗಳ ರಕ್ತಪಾತದ ಪಾಪಕರ್ಮಗಳಾಗಿರುವುದು. ಈ 'ಬ್ರೈನ್ ವಾಶ್' ಗಳು ಬೆಳೆದು ಹೆಮ್ಮರವಾದ ಹಿನ್ನೆಲೆಯಲ್ಲಿ, ಇನ್ನು ನಮಗೆ ಯಾವ ಕಾಲಕ್ಕೂ ಇದರಿಂದ ಪಾರಾಗುವ ಸಾಧ್ಯತೆಯು ಇಲ್ಲವಾಗಿಹೋಗಿದೆ. ಆ ರಕ್ತಪಾತವು, ಇಂದು ಕೆಲವು ದೇಶಗಳ ಜನರಿಂದ ದೂರವಿರಬಹುದು, ಆದರೆ ಮುಂದೆ ಅದೇ ರಕ್ತಪಾತವು ಎಲ್ಲರ ಮನೆಯ ಮುಂದೆ ಬಂದು ನಿಲ್ಲಬಹುದು! ಆದರೆ ನಾವೆಲ್ಲರೂ ನಮ್ಮ ನಮ್ಮ ಧರ್ಮದ ವೈಜ್ಞಾನಿಕ ಮತ್ತು ಸಾರ್ವತ್ರಿಕವಾದ ಆ ಸತ್ಯ, ಪ್ರೀತಿ, ನೀತಿ ಎಂಬಲ್ಲಿ ಗಟ್ಟಿಯಾಗಿ ನಿಂತು, ನಂಬಿಕೆಯ ಬ್ರೈನ್ ವಾಶ್ ನ ಸಂತತಿಗಳಾದ ನಂಬಿಕೆ, ಆಚಾರಗಳಿಗೆ ಹೆಚ್ಚು ಒತ್ತು ಕೊಡದೆ ಆಚರಿಸುವುದಾದರೆ, ಮುಂದೆ ಬರಲಿರುವ ಭೀಕರ ಅಪಾಯದಿಂದ ಪಾರಾಗಬಹುದು ಮಾತ್ರವಲ್ಲ, ನರಕವಾಗಿರುವ ಈ ಭೂಮಿಯನ್ನೇ ಸ್ವರ್ಗವಾಗಿಸಬಹುದು!! ಅದಕ್ಕಾಗಿ ನಾವೆಲ್ಲರೂ ಪ್ರಯತ್ನಿಸೋಣ, ಆ ಆನಂದದ ಮತ್ತು ಸತ್ಯದ ಕೆತ್ತನೆಯ ಭೂಸ್ವರ್ಗದ ನಿರ್ಮಾಣಕಾರ್ಯದಲ್ಲಿ ಪ್ರತಿ ವ್ಯಕ್ತಿಯೂ ಭಾಗಿಯಾಗಿ ತನ್ನ ಜೀವನವನ್ನು ಧನ್ಯವಾಗಿಸಲಿ. ಈ ಮಹತ್ ಕಾರ್ಯವನ್ನು ಯಾವ ದೇವರೂ ವಿರೋಧಿಸಲಾರನು ಯಾಕೆಂದರೆ, ಅದು, ಆ ದೇವರಲ್ಲಿ ಸಾವಿರ ಪಾಲು ಹೆಚ್ಚು ದೇವತ್ವವನ್ನು [ಯಾಂತ್ರಿಕ ಆಚಾರ-ಭಕ್ತಿ ರೀತಿ ಅಲ್ಲದಿರುವ ಕಾರಣ] ಕಾಣುವ ಮಾನವನ ಆ ಅದ್ಭುತ ಶುದ್ಧ-ಭಕ್ತಿಯ ರೀತಿಯಾಗುವುದು.

---

## ಬ್ರಹ್ಮಚರ್ಯದ ಅನಿವಾರ್ಯತೆ ಎಲ್ಲಿರುವುದು ಮತ್ತು ಕಾಮವು ಆಧ್ಯಾತ್ಮಕ್ಕೆ ಹೇಗೆ ಮಾರಕವಾಗುವುದು?

ಮರಣಾನಂತರ ಒಬ್ಬಾತನಿಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬಾರದೆಂಬ ರೀತಿಯ ಮೋಕ್ಷ ಸಾಧನೆಯಾದರೆ ಅಲ್ಲಿ ಮಾತ್ರ ಈ ಬ್ರಹ್ಮಚರ್ಯದ ಅನಿವಾರ್ಯತೆ ಇರುವುದು ಎಂದು ಹಿಂದಿನ

ಶಾಸ್ತ್ರಗಳ ಹಿನ್ನೆಲೆಯಲ್ಲೇ ಹೇಳಬಹುದು. ಅದೇ ರೀತಿ, ಬ್ರಹ್ಮಚಾರಿ ದೇವರ ಸ್ವರ್ಗವನ್ನು ಸೇರಲು ಬ್ರಹ್ಮಚರ್ಯವೇ ಬೇಕೆಂದು ನಿಬಂಧನೆ ಇದ್ದಲ್ಲಿ, ಆ ಸ್ವರ್ಗಕ್ಕೆ ಹೋಗಲು ಕೂಡಾ ಈ ರೀತಿಯ ಬ್ರಹ್ಮಚರ್ಯದ ಅಗತ್ಯವಿದೆ. ಇನ್ನಿತರ ರೀತಿಯ ಮೋಕ್ಷ, ಸ್ವರ್ಗಗಳಿಗೆ ಅದರ ಅಗತ್ಯ ಇರುವುದಿಲ್ಲ. ಯಾಕೆಂದರೆ ಮೋಕ್ಷದಲ್ಲಿ ತನ್ನ ಅಸ್ತಿತ್ವವನ್ನು ಪರದಲ್ಲಿ ಪೂರ್ತಿ ಇಲ್ಲದಂತೆ ಮಾಡಬೇಕಾದಲ್ಲಿ ಆತನಿಗೆ ಸ್ವಲ್ಪವಾದರೂ ಆಸೆಯು ಇರಬಾರದು. ಆಸೆ ಇದ್ದಲ್ಲಿ ಆತನ ವ್ಯಕ್ತಿತ್ವವು ಲೀನ ಅಥವಾ ಇಲ್ಲವಾಗಲಾರದು ಎಂಬುವುದು ಇಲ್ಲಿಯ ತರ್ಕ. ಕಾಮವು, ಒಂದು ರೀತಿಯ ಆಸೆಯಾದುದರಿಂದ ಅದು ಆತನಿಗೆ ಆ ಆಸೆಯಿಲ್ಲದ ಸ್ಥಿತಿಯನ್ನು ತರಲಾರದು.

ಶಕ್ತಿ ಸಂಚಯಕ್ಕಾಗಿ ಬ್ರಹ್ಮಚರ್ಯ, ಎಂಬುವುದು ಅರ್ಥ ಹೀನವಾಗುವುದು. ಯಾಕೆಂದರೆ ಶಕ್ತಿಯು ಯಾವ ಇತರ ವಿಧಗಳಲ್ಲೂ ನಮಗೆ ನಷ್ಟವಾಗಬಹುದು. ಇನ್ನು ಬುದ್ಧಿಯ ನಷ್ಟ ಸಂಭವಿಸುವುದು ಎಂದು ಹೇಳುವುದಾದರೆ, ಅದು ಹಾಗಲ್ಲವೆಂದು ಹಲವು ಹಲವು ವಿಜ್ಞಾನಿಗಳೇ ಸಾಕ್ಷಿಯಾಗಿರುವರು. ಅವರೆಲ್ಲರೂ ಮದುವೆ ಆದವರು ಎಂದು ನಮಗೆ ತಿಳಿದಿದೆ. ಇನ್ನು ಋಷಿಗಳಲ್ಲಿ ಹಿಂದೆ ಒಂದಕ್ಕಿಂತ ಹೆಚ್ಚು ಮದುವೆಯಾದವರೂ ಇದ್ದರು, ಆದರೆ ಅವರು ಮಹಾ ಆಧ್ಯಾತ್ಮಿಕ ವ್ಯಕ್ತಿಗಳಾಗಿದ್ದರು. ಆದುದರಿಂದ ಆಧ್ಯಾತ್ಮಿಕ ವ್ಯಕ್ತಿತ್ವವು ಅದು ಆ ವ್ಯಕ್ತಿಯ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಅದ್ಭುತ ಅನುಷ್ಠಾನದಲ್ಲಿರುವುದು, ಅದಲ್ಲದೆ, ಬ್ರಹ್ಮಚರ್ಯದಲ್ಲಿ ಅದನ್ನು ಪಡೆಯಲು ಸಾಧ್ಯವಿಲ್ಲ. ಯಾಕೆಂದರೆ ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿ ಇಲ್ಲದ ಬರೇ ಬ್ರಹ್ಮಚಾರಿಯು ಯಾವ ಕಾಲಕ್ಕೂ ಆಧ್ಯಾತ್ಮಿಕತೆಯನ್ನು ಮತ್ತು ಪವಿತ್ರತೆಯನ್ನು ಪಡೆಯಲಾರ.

ಕಾಮದಲ್ಲಿ ಎರಡು ವಿಧಗಳಿವೆ. ಅವುಗಳಲ್ಲಿ ಒಂದು 'ನೈತಿಕ ಕಾಮ' ಇನ್ನೊಂದು 'ಅನೈತಿಕ ಕಾಮ'ವಾಗಿದೆ. ಇವಲ್ಲಿ ಅನೈತಿಕ ಕಾಮವು ಆಧ್ಯಾತ್ಮಕ್ಕೆ ವಿರೋಧವಾಗುವುದು. ಅಂದರೆ ನೈತಿಕ ಪ್ರೇಮದೊಂದಿಗೆ ಕಾಮ ಇದ್ದಲ್ಲಿ ಮಾತ್ರ ಅದು ಆಧ್ಯಾತ್ಮಕ್ಕೆ ವಿರೋಧಿಯಲ್ಲ ಎಂದಾಗುವುದು, ಅದು ಪತಿ, ಪತ್ನಿಯಲ್ಲಿ ಮಾತ್ರ ಇರಲು ಸಾಧ್ಯ. ಆದರೆ ಇದನ್ನು ತಪ್ಪಿಸುವ ಎಲ್ಲಾ ಮೋಸವನ್ನು ಆ ಪ್ರಾಚೀನ ವಾಮಾಚಾರವು ನಿರಂತರ ಮಾಡುತ್ತಿರುವುದು! ಮದುವೆ ಮೊದಲ ಮಿಲನ, ಪರಸ್ತ್ರೀ ಮತ್ತು ಪರಪುರುಷ ಆಸೆಗಳನ್ನು ಹುಟ್ಟಿಸುವಲ್ಲಿ ಇವು ನಿರಂತರ ಕೆಲಸ ಮಾಡುತ್ತಿರುತ್ತವೆ. ಆದುದರಿಂದ ಒಬ್ಬ ವ್ಯಕ್ತಿಯು ಆಧ್ಯಾತ್ಮದಲ್ಲಿ ಮುಂದುವರಿಯಬೇಕಿದ್ದಲ್ಲಿ ಇದರಿಂದ ಮೇಲೆ ಬರಲೇ ಬೇಕಾಗುವುದು. ಇಲ್ಲವಾದರೆ ಆತನು ಯಾವ ಕಾಲಕ್ಕೂ ಆಧ್ಯಾತ್ಮದಲ್ಲಿ ಮುಂದಕ್ಕೆ ಹೋಗಲಾರ.

---

## ಸ್ವಯಂ ಘೋಷಿತ ದೇವ ಮಾನವ ಎಂಬುವುದರ ಅರ್ಥವೇನು?

ಉತ್ತರ- ಮನ ಬಂದಂತೆ ಈ ಶಬ್ದವನ್ನು ಉಪಯೋಗಿಸುವುದು ಈಗೀಗ ಒಂದು ಚಾಳಿಯಾಗಿಹೋಗಿದೆ. ಈ ಶಬ್ದವನ್ನು ಎರಡು ದೃಷ್ಟಿಕೋನಗಳಲ್ಲಿ ನೋಡಬಹುದು. ಮೊದಲನೆಯದು, ಈ ಹಿಂದೆ ಇರುವ ದೇವ, ದೇವತೆಗಳ, ಅವತಾರ ಅಥವಾ ಅಂಶ ಎಂದು ಯಾರಾದರೂ ಘೋಷಿಸಿದಲ್ಲಿ ಅವರನ್ನು ಸ್ವಯಂ ಘೋಷಿತ ದೇವ ಮಾನವ ಎನ್ನಬಹುದು. ಹಿಂದಿನ ಆ ದೇವ ಅಥವಾ ದೇವತೆ ಮೇಲಿನ ಜನರ

ಭಕ್ತಿಯನ್ನು, ಈ ರೀತಿ ಹೇಳಿಕೊಂಡಲ್ಲಿ, ಆ ದೇವ ಮಾನವನು ಶೋಷಣೆ ಮಾಡಿದಂತೆ ಆಗುವುದು ಎಂಬುವುದು ಒಂದು ಸತ್ಯವೂ ಆಗುವುದು. ಈ ರೀತಿಯ ದೇವಮಾನವರು ಆದಿ ಕಾಲದಿಂದಲೂ ಇರುವರು. ಅವರಲ್ಲಿ ಕೆಲವರು ತಮ್ಮನ್ನು ಅವತಾರ ಎಂದರು, ಇನ್ನು ಹಲವರು ಅಂಶ ಎಂದರು.

ಇನ್ನೊಂದು ರೀತಿಯ ದೇವಮಾನವರು ಇರುವರು. ಅವರು ಯಾವ ಹಿಂದಿನ ದೇವ, ದೇವತೆಗಳ ಅವತಾರ ಅಥವಾ ಅಂಶ ಎಂದು ಹೇಳಿಕೊಳ್ಳುವುದಿಲ್ಲ, ಬದಲು ಅವರು ಹೇಳುವುದು ಎಲ್ಲರೂ ದೇವ ಮಾನವರಾಗಬೇಕೆಂದಾಗಿದೆ! ಇವರ ಪ್ರಕಾರ, ದೇವತ್ವವೇ ದೇವರಾಗಿದೆ. ಅಂದರೆ, ದೇವತ್ವವು, ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯ ಹಿನ್ನೆಯಲ್ಲಿ ತನ್ನ ಮನಸ್ಸನ್ನು ಪವಿತ್ರಗೊಳಿಸುವಲ್ಲಿ ಸೃಷ್ಟಿಯಾಗುವುದು ಎಂದು ಅರ್ಥ. ಪ್ರಾಣಿಗಳಿಗೂ ತನ್ನ ಮರಿಗಳಲ್ಲಿ ಪ್ರೀತಿ ಇದೆ, ಆದರೆ ಅದು ಅಷ್ಟಕ್ಕೆ ಮುಗಿದು ಹೋಗುವುದು. ಅನಂತರ ಅದು ಆಲೋಚನೆ ಮಾಡದ ಕಾರಣ, ಉಳಿದ ಕಡೆ ಅವು ಸ್ವಾರ್ಥವನ್ನು ತೋರಿಸುವವು. ಇನ್ನು, ಮಾನವನು, ತನಗೆ ಆಲೋಚಿಸುವ ಬುದ್ದಿ ಇರುವ ಕಾರಣ, ಇನ್ನೂ ಸ್ವಲ್ಪ ಹೆಚ್ಚು ಮುಂದುವರಿದು ಕುಟುಂಬ, ಬಂಧುಗಳು, ಊರು, ದೇಶ ಎಂಬೆಲ್ಲಾ ರೀತಿಯಲ್ಲಿ "ನಾನು" ಭಾವಕ್ಕಿಂತ ಸ್ವಲ್ಪ ಮೇಲೇರಿ "ನಾವು" ಭಾವಕ್ಕೆ ತಲುಪಿದ್ದಾನೆ. ಸಾಮಾನ್ಯ ಮಾನವನಾದ ಅವನ ರೀತಿಯೂ ಅಲ್ಲಿಗೆ ಮುಗಿಯುವುದು. ಅಂದರೆ, ಆತನು ಉಳಿದೆಲ್ಲಾ ಕಡೆಯೂ ತನ್ನ ಸ್ವಾರ್ಥವನ್ನು ಮೆರೆಸುವನು. ಇನ್ನು, ಇರುವ ಒಂದು ಮುಖ್ಯ ಅಂಶವನ್ನು ಪ್ರತ್ಯೇಕ ಗಮನಿಸಬೇಕಾಗಿದೆ. ನಮಗೆ ತಿಳಿದಿರುವಂತೆ, ಮಾನವನಿಗೆ ಮಾತ್ರವಾಗಿ ದೊರಕಿದ ಒಂದು ನಿಧಿಯು ಆ ವಿವೇಚನಾ ಸಾಮರ್ಥ್ಯವಿರುವ ಬುದ್ದಿಯಾಗಿದೆ. ಇಲ್ಲಿಯೇ ಮಾನವನಿಗೆ ಸಂಬಂಧಿಸಿದಂತೆ ಒಂದು ದೊಡ್ಡ ಕವಲು ಒಡೆಯುವಿಕೆಯ ಸಾಧ್ಯತೆ ಇರುವುದು. ಅಂದರೆ, ಯಾರಿಗೆ ಬೇಕಾದರೂ ತನ್ನ ಬುದ್ದಿಯ ವಿವೇಚನಾ ಸಾಮರ್ಥ್ಯವನ್ನು ಉಪಯೋಗಿಸಿ ತನ್ನ ಮನಸ್ಸನ್ನು ಸಾಧನೆಯ ಮೂಲಕ ಪವಿತ್ರ ಮಾಡುವ ಮುಕ್ತ ಅವಕಾಶ ಇದೆ! ಅದೇ ರೀತಿ, ತನ್ನ ವಿವೇಚನಾ ಸಾಮರ್ಥ್ಯದ ಬುದ್ದಿ ಉಪಯೋಗಿಸಿ ತನ್ನ ಸ್ವಾರ್ಥ ಸ್ವಭಾವವನ್ನು ಹೆಚ್ಚಿಸುವ ಮುಕ್ತ ಅವಕಾಶವೂ ಇರುವುದು! ಹೀಗಿರಲು ಯಾರು ತನ್ನ ಮನಸ್ಸನ್ನು, ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಹಿನ್ನೆಲೆಯಲ್ಲಿ, ಸಾಧನೆಯ ಮೂಲಕ, ಪವಿತ್ರರಾಗಿಸುವರೋ ಅವರು ಸಾಮಾನ್ಯ ಮಾನವರಿಗಿಂತ ಖಂಡಿತವಾಗಿಯೂ ಹೆಚ್ಚು ಪರಿಶುದ್ದರು ಎಂಬುವುದು ಸ್ಪಷ್ಟವಾಗುವುದು. ಈ ಹಂತವನ್ನು ಮಹಾತ್ಮರ ಪ್ರಥಮ ಹಂತ ಎನ್ನುವರು. ಇನ್ನೂ ಆ ಮನಸ್ಸಿನ ಪರಿಶುದ್ದತೆಯನ್ನು[ವಿಶಾಲ ಮನಸ್ಕತೆ] ಯನ್ನು ಹೆಚ್ಚಿಸುವಲ್ಲಿ ನಮಗೆ ಆ ಸಾರ್ವತ್ರಿಕ ಸತ್ಯ, ಪ್ರೀತಿ, ಮತ್ತು ನೀತಿಯ ಆ ಮೇಲಿನ ಹಂತಗಳು ದೊರಕುವವು. ಮೊದಲೇ ತಿಳಿದಿರುವಂತೆ, ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೇ ದೇವ ಸಂಕಲ್ಪವಾದ ಕಾರಣ, ಆ ಮಹಾತ್ಮರ "ಮೇಲಿನ ಹಂತದ" ಮಾನವನನ್ನು ದೇವಮಾನವ ಎಂದು ಮಹಾತ್ಮರುಗಳು ಕರೆಯುವರು. ಇದು ಸ್ವಭಾವದ ಪವಿತ್ರತೆಯ ಆ ಮೇಲಿನ ಹಂತವಾಗಿದೆ. ಇಲ್ಲಿ, ಅಲೌಕಿಕ ಶಕ್ತಿಯ ಯಾವ ಹಿನ್ನಲೆಯೂ ಇಲ್ಲವೆಂದು ಪ್ರತ್ಯೇಕ ನೆನಪಿಡಬೇಕಾಗಿದೆ. ಇಂಥ ದೇವಮಾನವರು ಈ ಜಗತ್ತಲ್ಲಿ ಕೋಟಿ ಗಟ್ಟಲೆ ಸೃಷ್ಟಿಯಾಗಿ ಈ ಭೂಮಿಯನ್ನು ದೇವ ಲೋಕ [ಪವಿತ್ರ, ಪಾವನ ಲೋಕ]ವನ್ನಾಗಿ ಪರಿವರ್ತಿಸಲಿ ಎಂಬುವುದೇ ಎಲ್ಲಾ ಮಹಾತ್ಮರುಗಳೂ ಆಶಿಸುವುದು.

ಮಾನವರ ಇನ್ನೊಂದು ಮುಕ್ತ ಅವಕಾಶ ಎಂದರೆ, ತನ್ನ ಬುದ್ದಿಯ ಮೂಲಕ ಸ್ವಾರ್ಥವನ್ನು ಹೆಚ್ಚಿಸುವ ಅವಕಾಶವಾಗಿದೆ. ಹೀಗೆ ಹೆಚ್ಚಿಸುತ್ತಾ ಹೋಗುವವರು ಕೊನೆಯಲ್ಲಿ ಅದರ ಮೇಲಿನ ಹಂತವಾದ ಅಸುರ ಹಂತವನ್ನು ಅಥವಾ ಸಮಾಜ-ಕಿಡಿಗೇಡಿ ಹಂತವನ್ನು ತಲುಪುವರು. ಆದರೆ ಅಲ್ಲಿಂದ ಅವರು ತನ್ನ ಭಯಾನಕ ಕೆಲಸಗಳಿಂದ ಸಮಾಜದ ಇತರರ ಮನದಲ್ಲೂ ಈ ಅಸುರ ಬೀಜವನ್ನು ತುಂಬುವರು.

ಆದುದರಿಂದ ಮನುಷ್ಯರು ಸ್ವಾರ್ಥದ ಹಿನ್ನೆಲೆಯಲ್ಲಿ ಮುಂದುವರಿದು, ಆ ಕಿಡಿಗೇಡಿಗಳು ಅಥವಾ ಕಾಡು ಮಾನವರಾಗುವುದಕ್ಕಿಂತ, ಆ ಪವಿತ್ರತೆಯ ಹಿನ್ನೆಲೆಯಲ್ಲಿ ಬೆಳೆದು ದೇವಮಾನವರಾಗುವುದು ಈ ಭೂಮಿಯ ಸರ್ವರಿಗೂ ಆ ಮನಶ್ಯಾಂತಿ, ಮನೆ ಶಾಂತಿ, ಮತ್ತು ಲೋಕ ಶಾಂತಿಯನ್ನೀಯುವ ವರದಾನವಾಗುವುದು. ಆದುದರಿಂದ ಎಲ್ಲರೂ ಆ ರೀತಿಯ ದೇವಮಾನವರಾಗಿರಿ, ಮತ್ತು ಈ ಜಗತ್ತನ್ನು ಆ ಪ್ರಾಚೀನ ವಾಮಾಚಾರದ ಸರ್ವನಾಶದ ಯೋಜನೆಯಿಂದ ಎಂದೆಂದಿಗಾಗಿ ರಕ್ಷಿಸಿರಿ.

---

## ಜಗತ್ತಿನಲ್ಲಿ ಎಲ್ಲವೂ ವಿಜ್ಞಾನ ಎಂದು ನೀವು ಹೇಳುವಿರಲ್ಲಾ, ಅದನ್ನು ಹೇಗೆ ವಿವರಿಸುವಿರಿ?

ಉತ್ತರ- ವಿಜ್ಞಾನ ಎಂದರೆ ಅಲ್ಲಿ ವ್ಯವಸ್ಥೆ ಇರಬೇಕು, ಅಂದರೆ ಮಿತಿ ಅಥವಾ ಪರಿಧಿ ಇರಬೇಕು. ಒಂದು ವ್ಯವಸ್ಥೆಯೊಳಗೆ ಮಾತ್ರ ವಿಜ್ಞಾನ ಇರಲು ಸಾಧ್ಯ. ಈ ಪ್ರಪಂಚವನ್ನೆಲ್ಲಾ ಹರಡಿಕೊಂಡಿರುವ ಆ ಅನಂತ ಆಕಾಶವನ್ನು ತೋರಿಸಿ ಆ ಅನಂತತೆಯಲ್ಲಿ ನಮಗೆ ವಿಜ್ಞಾನವನ್ನು ಕಾಣಲು ಸಾಧ್ಯವಿಲ್ಲ! ಯಾಕೆಂದರೆ ಅಲ್ಲಿ ಅದು ಮಿತಿ, ಎಲ್ಲೆ, ಅಥವಾ ಪರಿಧಿ ಒಳಗೆ ಇಲ್ಲ. ನಾವು ಅನುಭವಿಸುವ ಸೂರ್ಯನು ನಮ್ಮ ಸೌರವ್ಯೂಹದ ಪರಿಧಿಯೊಳಗಿದ್ದವನು. ನಾವು ಅನುಭವಿಸುವ ವಾತಾವರಣದ ಒತ್ತಡ ಅದು ಭೂಮಿಯ ಗುರುತ್ವಾಕರ್ಷಣೆಯ ಪರಿಧಿಯೊಳಗಿನದು. ಗುಂಡಿ ಒತ್ತಿದರೆ ಬಲ್ಬು ಉರಿಯಬೇಕಾದರೂ ಅಲ್ಲಿ ಅದಕ್ಕೆ ಜೋಡಿಸಿರುವ ತಂತಿಗಳು ಕಡಿದಿರಬಾರದು. ಅದೇ ರೀತಿ ಎಲ್ಲವೂ ಅದು ವ್ಯವಸ್ಥೆ ಅಥವಾ ಪರಿಧಿಯೊಳಗೆ ಮಾತ್ರವಾಗಿರುವುದು! ಇನ್ನು, ನಮ್ಮ ಹಿತ್ತಲಿನ ವಿಚಾರ ಹೇಳುವುದಾದರೂ ಅಲ್ಲಿಯೂ ಗುರುತು ಅಥವಾ ಬೇಲಿ ಇರುವುದು. ಆ ಗುರುತು ಅಥವಾ ಬೇಲಿ ಇಲ್ಲವಾದರೆ ಹಿತ್ತಲ ಕಲ್ಪನೆಯೇ ಇಲ್ಲವಾಗುವುದು. ದೇಶಗಳ ಗಡಿ ಇತ್ಯಾದಿಗಳು ನಮ್ಮ ವ್ಯವಹಾರಿಕ ವಿಜ್ಞಾನಕ್ಕೆ ಉದಾಹರಣೆಗಳಾಗುವವು. ನಾವು ನಿತ್ಯವೂ ಉಪಯೋಗಿಸುವ ನೋಟುಗಳನ್ನು ಎಲ್ಲರೂ ಅವರವರೇ ತಯಾರಿಸಿಕೊಳ್ಳುವ ರೀತಿಯಾದರೆ, ಆಗ ಅಲ್ಲಿ ಪರಿಧಿ ಇಲ್ಲವಾಗಿ, ಆರ್ಥಿಕ ವ್ಯವಸ್ಥೆ ನಾಶವಾಗುವುದು. ಅಂದರೆ ಆರ್ಥಿಕ ವಿಜ್ಞಾನ ಅಥವಾ ಅರ್ಥಶಾಸ್ತ್ರ ಇಲ್ಲವಾಗುವುದು! ಹೀಗೆ, ಎಲ್ಲೆಡೆಯೂ ವ್ಯವಸ್ಥೆ ಅಥವಾ ಪರಿಧಿ ಇರುವಲ್ಲಿಯೇ ವಿಜ್ಞಾನ ಇರುವುದನ್ನೂ ನಾವು ಕಾಣುವೆವು, ಮತ್ತು ಈ ಪರಿಧಿ-ವಿಜ್ಞಾನವೇ ಎಲ್ಲವೂ ಆಗಿರುವುದು ಎಂದೂ ತಿಳಿಯುವುದು. ಇನ್ನು, ಒಂದು ಶರೀರ-ಪರಿಧಿಯು 'ನಾನು' ವನ್ನು[ವ್ಯಕ್ತಿಯನ್ನು] ಉಂಟು ಮಾಡುವುದು. ಒಂದು ಸ್ವಲ್ಪ ಜನರ ಕೂಟವೆಂಬ ಪರಿಧಿಯೊಳಗೆ ಕುಟುಂಬ ಇರುವುದು, ಆದರೆ ಊರಿನವರೆಲ್ಲಾ ಕುಟುಂಬದಲ್ಲಿರಲಾರರು. ಇನ್ನು, ಪರಿಧಿ ದೊಡ್ಡದಾಗುವಾಗ ಊರು, ದೇಶ ಇತ್ಯಾದಿಗಳಾಗುವವು. ಇವೆಲ್ಲಾ ಪರಿಧಿಗಳಾಗಿವೆ, ಮತ್ತು ಈ ಪರಿಧಿಗಳೇ

ಅವುಗಳ ಇರುವಿಕೆಯ ಅಥವಾ ಅಸ್ತಿತ್ವಗಳ ವಿಜ್ಞಾನವಾಗುವವು. ಇನ್ನು, ಮನುಷ್ಯನ ಸ್ವಭಾವವನ್ನು ನೋಡೋಣ. ಅಲ್ಲಿ ಈ ಸ್ವಭಾವದ ವಿಜ್ಞಾನವು ಸಾಹಚರ್ಯ-ಪರಿಧಿಯಲ್ಲಿರುವವು. ನಾವು ಉತ್ತಮ ಕರ್ಮಗಳ ಸಾಹಚರ್ಯವನ್ನು ಸೃಷ್ಟಿಸುತ್ತಾ ಹೋದಾಗ ನಾವು ಉತ್ತಮ ಜನರೆಂದು ಕರೆಯಲ್ಪಡುವೆವು. ಇನ್ನೊಬ್ಬನನ್ನು ಬಯ್ಯುವಾಗ, ಅದನ್ನು ಕೇಳುವಾತನಲ್ಲಿ ಕೋಪಕ್ಕೆ ಕಾರಣವಾಗುವ ಆ ವಿಚಾರ-ಭಾವನೆಗಳ ಸಾಹಚರ್ಯ ಪರಿಧಿಯು ಸೃಷ್ಟಿಸಿಲ್ಪಡುವ ಕಾರಣ, ಕೇಳಿದಾತನು ಕೋಪಗೊಳ್ಳುವನು. ಸಹಾಯ ಮಾಡುವಾಗ ಅದನ್ನು ಪಡೆಯುವಾತ ಕೊಟ್ಟವನನ್ನು ಹೊಗಳುವುದೂ ಆಲ್ಲಿ ಆತನ ವಿಚಾರ-ಭಾವನೆಗಳಿಂದ ಸೃಷ್ಟಿಸಲ್ಪಡುವ ಆ ಒಂದು ಸಾಹಚರ್ಯ ಪರಿಧಿಯೊಳಗಿಂದ. ಈ ರೀತಿ, ಅಲ್ಲಲ್ಲಿ ಸಾಹಚರ್ಯ-ಪರಿಧಿಗಳ ಸೃಷ್ಟಿ ಮಾಡುವಿಕೆಯೇ ಸಮಾಜದ ಅಥವಾ ಸಮಾಜಶಾಸ್ತ್ರದ ವಿಜ್ಞಾನವಾಗುವುದು. ಆದರೆ, ಇಲ್ಲಿ ಒಂದಂಶವು ವ್ಯತ್ಯಸ್ಥವಾಗುವುದು. ಅದೇನೆಂದರೆ ಇತರ ಕಡೆಗಳಲ್ಲಿ ಪರಿಧಿಗಳು ಸ್ಥೂಲವಾದುದರಿಂದ ಅದನ್ನು ಯಾರಿಗೂ ತಪ್ಪಿಸಲು ಸಾಧ್ಯವಾಗುವುದಿಲ್ಲ. ಹಿತ್ತಲಿಗೆ ಬೇಲಿಹಾಕಿದ್ದಲ್ಲಿ ಅದನ್ನು ಇನ್ನೊಬ್ಬರು ತಪ್ಪಿಸುವ ಹಾಗಿಲ್ಲ, ಆದರೆ ಸ್ವಭಾವದ ವಿಜ್ಞಾನದಲ್ಲಿ ಒಂದು ದೊಡ್ಡ ತೊಂದರೆಯೇ "ಆರೋಪ" ಆಗಿದೆ. ಈ ಆರೋಪವು ಬೇಕೆಂದೇ ಒಬ್ಬನು ಮಾಡಿಟ್ಟ ಉತ್ತಮ ಮತ್ತು ನಿಜವಾದ ಸಾಹಚರ್ಯ- ಪರಿಧಿಯ ಮೇಲೆ ಇನ್ನೊಬ್ಬನು ತಯಾರು ಮಾಡಿದ ಸುಳ್ಳು ಸಾಹಚರ್ಯ-ಪರಿಧಿಯ ಹೇರುವಿಕೆಯಾಗಿದೆ! ಆಗ, ದೂರದ ಒಬ್ಬನು ಈ ಹೇರಲ್ಪಟ್ಟ ಸುಳ್ಳು ಪರಿಧಿಯನ್ನು ನೋಡಿ, ಅದನ್ನೇ ಆ ಉತ್ತಮನ ವ್ಯಕ್ತಿತ್ವ ಎಂದು ತಪ್ಪು ತಿಳಿವನು. ಇದು ಈ ಸಮಾಜಶಾಸ್ತ್ರಕ್ಕಿರುವ ಒಂದು ದೊಡ್ಡ ತೊಂದರೆ ಆಗುವುದು. ಇನ್ನಿರುವುದು ಆಧ್ಯಾತ್ಮವಾಗಿದೆ. ಇಲ್ಲಿಯೂ, ಉತ್ತಮರು ಸ್ವರ್ಗಕ್ಕೆ ಮತ್ತು ದುಷ್ಟರು ನರಕಕ್ಕೆ ಎಂಬ ಪರಿಧಿ ಅಥವಾ ವ್ಯವಸ್ಥೆಯ ವಿಜ್ಞಾನವಿದೆ. ಇನ್ನು ನಿರ್ಗುಣ ತತ್ವ ಮತ್ತು ಶೂನ್ಯ'ವಾದ' ರೀತಿಯ ಮೋಕ್ಷಗಳಲ್ಲಿ, ಕೊನೆಯಲ್ಲಿ ಪರಿಧಿ ರಹಿತನಾಗುವ ರೀತಿಯಾದರೂ, ತತ್ವದೊಂದಿಗೆ ಲೀನವಾಗುವಿಕೆ ಅಥವಾ ಶೂನ್ಯವಾಗುವಿಕೆ ಎಂಬ ಒಂದು ಸಾಧನಾ ಪರಿಧಿಯೇ ಅಲ್ಲಿಯೂ ಇರುವುದು.

ಇನ್ನು, ಕೊನೆಯದಾಗಿ 'ದೇವರು' ಎಂಬ ಸಂಕಲ್ಪವಾಗಿದೆ. ಆತ ನೀಚ ಸ್ವಭಾವದವನಾದರೆ ನಾವು ಅತನನ್ನು ದೇವರಲ್ಲ, ಸೈತಾನ ಎನ್ನುವೆವು. ದೇವರೆಂದ ಕೂಡಲೇ ಉತ್ತಮ ಸ್ವಭಾವದವನೆಂದು ಸಂಶಯ ಇಲ್ಲದೆ ತಿಳಿದಿರುವೆವು. ಅಂದರೆ, ದೇವರಿಗೆ ಪರಿಧಿಯು ಆ ಉತ್ತಮ ಸ್ವಭಾವವಾಗಿದೆ. ಆ ಉತ್ತಮ ಸ್ವಭಾವವು ಎಲ್ಲಿಂದ ಬರುವುದು ಎಂಬುವುದಕ್ಕೆ ಉತ್ತರವು, ಅದು ಆ ಸಾರ್ವತ್ರಿಕ ಸತ್ಯ, ಪ್ರೀತಿ ಮತ್ತು ನೀತಿಗಳಿಂದ ಮಾತ್ರ ಸಾಧ್ಯ ಎಂದಾಗಿದೆ. ಅಂದರೆ, ಅವುಗಳಿಲ್ಲದಿದ್ದರೆ ದೇವರು ದೇವರೇ ಆಗುವುದಿಲ್ಲ! ಈ ಕಾರಣದಿಂದಾಗಿಯೇ 'ದೇವರ ಅಸ್ತಿತ್ವ'ದ ವಿಜ್ಞಾನವು ಆ ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯ ಪರಿಧಿ ಆಗುವುದೆಂದು ಹೇಳುವುದು.

ಈ ರೀತಿಯಲ್ಲಿ, ಪರಿಧಿ ಇಲ್ಲದೆ ಏನೂ ಇಲ್ಲ, ಆದುದರಿಂದ ಈ ಜಗತ್ತಿನಲ್ಲಿ ವಿಜ್ಞಾನವಲ್ಲದೆ ಬೇರೆ ಏನೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಈ ಕಾರಣದಿಂದಲೇ, ಜಗತ್ತಲ್ಲಿ ನಾವು ಏನೇ ಮಾಡುವುದಾದರೂ ಅದನ್ನು ವೈಜ್ಞಾನಿಕವಾಗಿ ಅಥವಾ ತರ್ಕಬದ್ಧವಾಗಿ ವಿವರಿಸಿ ಕೊಡಲೇಬೇಕಾಗುವುದು. ಸಾವಿರಾರು ಪುರಾಣ ಕಥೆಗಳನ್ನು ಹೇಳುತ್ತಾ, ತಮ್ಮೊಳಗೆ ವಿಮರ್ಶಿಸುತ್ತಾ,

ತಮ್ಮ ಧರ್ಮ, ಪಂಥಗಳ ಶ್ರೇಷ್ಠತೆಯನ್ನು ಮೆರೆಯುವುದು, ಅದು ವೈಜ್ಞಾನಿಕ ಮತ್ತು ತರ್ಕಬದ್ಧವಾದ ರೀತಿಯ ಹಿನ್ನೆಲೆಯ ಧರ್ಮವೇ ಆಗುವುದಿಲ್ಲ, ಬದಲು ಅದು ಬರೇ ಅವರವರಿಗೆ ಬಿಟ್ಟ ನಂಬಿಕೆಯ ಧರ್ಮ ಮಾತ್ರವಾಗುವುದು!

---

## ಸತ್ಯವನ್ನೇ ನುಡಿಯಬೇಕು ಎನ್ನುವರು, ಆದರೆ, ಮೋಸ ಮಾಡುವ ಉದ್ದೇಶ ಇಲ್ಲದಿದ್ದರೂ, ಒಮ್ಮೆ ಮಾತು ತಪ್ಪಿ ಹೋದರೆ ಎಲ್ಲವೂ ಅಸತ್ಯವಾಗುವುದೇ?

ಮಾನವನಿಗೆ ಎಲ್ಲವೂ ನಂಬಿಕೆಯೇ ಆಗಿ ಹೋಗಿದೆ, ಆ ನಂಬಿಕೆಯೇ ಆಗಲಾರದ "ಸತ್ಯ" ವನ್ನು ಕೂಡಾ ನಂಬಿಕೆಯ ರೀತಿಯಲ್ಲೇ ಕಾಣುವರು ಎಂಬುವುದು ಅತ್ಯಂತ ದುರದೃಷ್ಟಕರವಾಗಿದೆ! ಒಂದು ಚಿಕ್ಕ ಉದಾಹರಣೆಯನ್ನು ತೆಗೆಯೋಣ. ಇಬ್ಬರು ಸತ್ಯನಿಷ್ಟರು ತಮ್ಮ ಕಷ್ಟದಲ್ಲಿರುವ ಗೆಳೆಯನಿಗೆ ಸಾಲ ಕೊಡಲು ತಮ್ಮಲ್ಲಿ ಹಣ ಸದ್ಯಕ್ಕೆ ಇಲ್ಲ ಎಂಬ ಮಾತು ಹೇಳಿ ಮನೆ ಬಂದರು. ಆದರೆ, ಮರು ದಿನ ಆ ಇಬ್ಬರು ಸತ್ಯನಿಷ್ಠರಿಗೂ ಸರಕಾರದಿಂದ ಸಿಗಬೇಕಾದ ಹಣವು ಅನಿರೀಕ್ಷಿತವಾಗಿ ಬಂದವು. ಆಗ ಒಬ್ಬ ಸತ್ಯನಿಷ್ಠನು ಕೂಡಲೆ ಆತನ ಗೆಳೆಯನಲ್ಲಿಗೆ ಹೋಗಿ, ಆತನಿಗೆ ಬೇಕಾದಷ್ಟು ಹಣವನ್ನು ಕೊಟ್ಟು ಬಂದನು, ಆದರೆ ಇದನ್ನು ತಿಳಿದ ಇನ್ನೊಬ್ಬ ಸತ್ಯನಿಷ್ಠನು "ಕೊಟ್ಟ ಮಾತನ್ನು ತಪ್ಪಿದವ" ಎಂದು ಆ ಹಣವನ್ನು ಕೊಟ್ಟ ಸತ್ಯ ನಿಷ್ಠನನ್ನು ನಿಂದಿಸಿದನು. ಆತನ ಪ್ರಕಾರ ಅವರು ಇಬ್ಬರೂ ಹಿಂದಿನ ದಿನ "ಹಣ ಕೊಡಲು ಸಾಧ್ಯವಾಗುವುದಿಲ್ಲ" ಎಂದು ಹೇಳಿರುವ ಆ ಮಾತನ್ನು ಪಾಲಿಸುವುದೇ ಪರಮ ಸತ್ಯನಿಷ್ಠೆ ಎಂದಾಗಿದೆ!!! ಅಯ್ಯೋ, ಮಾನವರು ಸತ್ಯವನ್ನೂ ಈ ರೀತಿ ನಂಬಿಕೆಯನ್ನಾಗಿ ಪರಿವರ್ತಿಸುವರಲ್ಲಾ!! ಧರ್ಮವನ್ನು ಮತ್ತು ದೇವರನ್ನು ಆ ಅರಿವಿನ ಸಹಾಯವಿಲ್ಲದೆ ಬರೇ ನಂಬಿದುದರ ಪರಿಣಾಮವಾಗಿ ಈ ಜಗತ್ತಿನಲ್ಲಿ ಇಷ್ಟೆಲ್ಲಾ ಅನಾಚಾರ, ಕೌರ್ಯ, ಇತ್ಯಾದಿಗಳು ಉಂಟಾಗಿರುವುದು ಎಂದು ಈಗ ಮತ್ತೂ ಸ್ಪಷ್ಟವಾಗುವುದು.

ಸತ್ಯವು "ಮಾತು" ಅಲ್ಲ ಎಂಬುವುದನ್ನು ಮೊದಲು ನೆನಪಿಡಬೇಕು. ಸತ್ಯವು ಅನುಭವವಾಗುವುದು. ಇನ್ನು, ಒಬ್ಬಾತನು ಆಡಿದ ಮಾತಿನ ರೀತಿಯಲ್ಲೇ ಹೇಳುವುದಾದರೆ, ಅದು ಆತನ ಮಾತಿನ ಫಲವಾಗಿರುವುದು. ಉದಾ- ಒಬ್ಬನು ಇನ್ನೊಬ್ಬನಿಗೆ "ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಸಹಾಯ ಮಾಡುವೆನು" ಎಂದು ಮಾತು ಕೊಟ್ಟು ಕೊನೆಗೆ ಅವನಿಗೆ ಹತ್ತು ಸಾವಿರದ ಬದಲು ಒಂದು ಲಕ್ಷ ರೂಪಾಯಿಯನ್ನು ದಾನ ಮಾಡುವುದಾದರೆ, ಅತನು ಸತ್ಯವನ್ನು ನಾಶಮಾಡಿದನೇ? ಅದು ಧರ್ಮವೇ ಅಥವಾ ಅಧರ್ಮವೇ? ಇದರ ಉತ್ತರವನ್ನು ಸರಿಯಾಗಿ ಅರಿತು ಕೊಂಡಲ್ಲಿ ಜಗತ್ತೇ ಸರಿಯಾಗಿಬಿಡುವುದು. ಆದುದರಿಂದ ನಾವು ಒಬ್ಬರಿಗೆ ಅಥವಾ ಸಮಾಜಕ್ಕೆ ಮೊದಲಿಗಿಂತ ಹೆಚ್ಚು ಒಳಿತನ್ನು ಉಂಟುಮಾಡುವುದಾದರೆ, ಅಲ್ಲಿ ನಾವು ಮೊದಲಿನ ಸತ್ಯಕ್ಕಿಂತಲೂ ದೊಡ್ಡ ಸತ್ಯವನ್ನು ಸ್ಥಾಪಿಸಿದಂತೆ ಆಗುವುದು. ಒಬ್ಬಾತನಿಗೆ ಸಹಾಯವನ್ನು ಮಾಡಬಾರದು ಎಂಬುವುದು ಮೊದಲ ಆ ಸತ್ಯನಿಷ್ಠನ ಉದಾಹರಣೆಯಲ್ಲಿ ನಮಗೆ ಸತ್ಯನಿಷ್ಠೆಯ ಫಲವಾಗಿ ಕಾಣಿಸುವುದು!! ಆಗ, ಆ ಸತ್ಯ

ನಿಷ್ಠೆಯೇ ಮಾನವೀಯತೆ ಶತ್ರುವಾಗುವುದು. ಮಾತ್ರವಲ್ಲ, ಯಾವ ದೇವರೂ ಅದನ್ನು ಸಹಿಸಲಾರನು! ಹೀಗಿರುವಾಗ, ಇನ್ನು, ಈ[ನಂಬಿಕೆಯ] ರೀತಿಯಲ್ಲಿ ಏನು ನಿಷ್ಠೆ, ಏನು ಧರ್ಮ? ಮಾನವನಿಗೆ ಮತ್ತೂ ಹೆಚ್ಚು ಒಳಿತು ಉಂಟಾಗುವ ರೀತಿಯಲ್ಲಿ ಧರ್ಮವನ್ನು ತಿದ್ದುಪಡಿ ಮಾಡುವಲ್ಲಿ, ಎಲ್ಲಾ ಧರ್ಮಗಳಲ್ಲೂ, ಜನರು ಅದಕ್ಕೆ ಒಪ್ಪದೆ, ಬಿಗಿಹಿಡಿದು ಕೂತಿರುವುದು ಇದೇ ಮೂರ್ಖತನದ "ಧರ್ಮನಿಷ್ಠೆ" ಎಂಬ ನಂಬಿಕೆಯ ಅನುಷ್ಠಾನ ರೀತಿಯ ಕಾರಣದಿಂದಾಗಿ ಎಂದು ತಿಳಿಯಬಹುದು. ಇದೇ ಧರ್ಮನಿಷ್ಠೆಯು ಮಹಾತ್ಮರ ಅನುಷ್ಠಾನದ ತರವಾಗಿರುತ್ತಿದ್ದರೆ ಇಂದು ಈ ಜಗತ್ತು ಸ್ವರ್ಗವೇ ಆಗಿರುತ್ತಿತ್ತು!

ಜನರು ಈ ಪ್ರಾಚೀನ ವಾಮಾಚಾರದ ಬಲೆಗೆ ಯಾವೆಲ್ಲಾ ರೀತಿಯಲ್ಲಿ ಸೇರಿಹೋಗಿದ್ದಾರೆ ಎಂದು ಇವು ಸ್ಪಷ್ಟಪಡಿಸುವುವು. ಎಲ್ಲಾ ಧರ್ಮಗಳ ಧರ್ಮಾಂಧ ಜನರು, ತಮ್ಮ ತಮ್ಮ ಧರ್ಮ, ದೇವರುಗಳು ಸರಿ ಎಂದೂ, ಮತ್ತು ಇತರ ಧರ್ಮ, ದೇವರುಗಳು ತಪ್ಪು ಎಂದೂ, ಹಿಂಸೆ, ಮತಾಂತರ, ಇತ್ಯಾದಿಗಳನ್ನು ಮಾಡುವುದು ಈ ರೀತಿಯ "ಧರ್ಮನಿಷ್ಠೆ" ಯ ಪರಿಣಾಮವಾಗಿರುವುದು ಎಂಬುವುದನ್ನೂ ಮರೆಯಬಾರದು. ಈ ಕಾರಣದಿಂದಾಗಿ ಮಾತ್ರ, ಎಲ್ಲಾ ಧರ್ಮಗಳಲ್ಲೂ ಆಚಾರಗಳನ್ನು ನಿತ್ಯವೂ ತಪ್ಪದೆ ಮಾಡುವ ಅತ್ಯಂತ ಧರ್ಮನಿಷ್ಠರುಗಳು ಲಕ್ಷಗಟ್ಟಲೆ ಇದ್ದರೂ, ನಿಜವಾದ ಶಾಂತಿಯು ಈ ಜಗತ್ತಿಗೆ ಸಿಗದೆ ಹೋಗಿರುವುದು!

# ಒಂದೇವ ಕಿರುನುಡಿಗಳು

- ಸಾರ್ವತ್ರಿಕ ಸತ್ಯ, ಪ್ರೀತಿ, ನೀತಿಯೇ ದೇವರು. ಇದಕ್ಕಿಂತ ಮೇಲೆ ದೇವ ಸ್ವಭಾವವಿಲ್ಲ, ಮತ್ತು ಇದಕ್ಕಿಂತ ಕಡಿಮೆ ದೇವ ಸ್ವಭಾವ ಆಗುವುದಿಲ್ಲ.
- ಹಲವು ಸಲ ಚಿಂತಿಸಿದಲ್ಲಿ ನಿಮಗೆ ಸತ್ಯವು ದೊರಕಲೂಬಹುದು, ಆದರೆ ಜೀವನ ಪೂರ್ತಿ ಯಾವುದನ್ನಾದರೂ ನಂಬಿದಲ್ಲಿ ಆ ನಂಬಿಕೆ ಮಾತ್ರ ಉಳಿಯುವುದು ಹೊರತು ಅದು ಸತ್ಯವನ್ನು ತರಲಾರದು.
- ನಿಜವಾಗಿಯೂ ದೇವರ ಅನುಗ್ರಹವೆಂದರೆ ಉತ್ತಮ ಗುಣವಾಗಿದೆ. ಯಾಕೆಂದರೆ ಅದಿಲ್ಲದವನು ತನ್ನ ಜೀವನ ಪೂರ್ತಿ ಸಾವಿರಾರು ರೀತಿಗಳಲ್ಲಿ ಕೊರಗುತ್ತಾ ನರಕದಲ್ಲಿ ಬಾಳುವನು!!
- ಧರ್ಮ ಎಂದರೆ ಅದು ಶಾಂತಿಯ ಪರ್ವತವಾಗುವುದು. ಯುದ್ಧ ಎಂದರೆ ಅದು ಹಿಂಸೆಯ ಪರ್ವತವಾಗಿದೆ, ಆದರೆ ಧರ್ಮಯುದ್ಧ ಎಂದರೆ ಅದು ಮೂರ್ಖತನದ ಪರ್ವತವಾಗುವುದು.
- ಅಶೋಕ ಚಕ್ರವರ್ತಿಯ ಆ ಯುದ್ಧ-ಕ್ರೌರ್ಯವು ಕೂಡಾ ಒಂದು ದಿನ, ಆತನಿಗೆ ಮಾನವನ ನೋವಿನ ಆ ಸತ್ಯಬೋಧವಾದ ಹಿನ್ನೆಲೆಯಲ್ಲಿ, ಸಂಪೂರ್ಣವಾಗಿ ಇಲ್ಲವಾಯಿತು! ಆದರೆ, ದೇವರಿಗಾಗಿ ಅಥವಾ ಧರ್ಮಕ್ಕಾಗಿ ಮಾಡುವ ಯುದ್ಧ-ಕ್ರೌರ್ಯವು ಆ ಸತ್ಯಬೋಧವನ್ನು ಎಂದೂ ಸೃಷ್ಟಿಸಲಾರದು. ಅಂದರೆ, ಆ ಕ್ರೌರ್ಯವನ್ನು ಇಲ್ಲಿ ದೇವರಿಗೂ ನಿಲ್ಲಿಸಲು ಸಾಧ್ಯವಿಲ್ಲ ಎಂದು ಅರ್ಥ!! ಯಾಕೆಂದರೆ, ಸಾಮಾನ್ಯ ಯುದ್ಧದಲ್ಲಿ ರಾಜನಿಗೆ ಅದು ತನ್ನ ಸ್ವಾರ್ಥಕ್ಕೆ ಎಂದು ತಿಳಿದಿರುತ್ತದೆ, ಆದರೆ ಧರ್ಮದ ಹೆಸರಲ್ಲಿ ಕ್ರೌರ್ಯವನ್ನು ಮಾಡುವಾಗ ಅಲ್ಲಿ, ಅದನ್ನು 'ದೇವರಿಗಾಗಿ' ಅಥವಾ 'ಸ್ವರ್ಗಕ್ಕಾಗಿ' ಎಂದು ಅತ್ಯಂತ ಒಳಿತಿನ ಹಿನ್ನೆಲೆಯಲ್ಲಿ ಚಿತ್ರಿಸಿಬಿಟ್ಟಿರುವರು!!! ನಮಗೆ ಎಲ್ಲರಿಗೂ ತಿಳಿದಿರುವಂತೆ, 'ಪ್ರೀತಿಯೇ ದೇವರು' ಮತ್ತು 'ಕ್ರೌರ್ಯವೇ ಸೈತಾನ' ಎಂದಿರುವಾಗ, "ದೇವರಿಗಾಗಿ ಯುದ್ಧ ಅಥವಾ ಕ್ರೌರ್ಯ" ಎಂಬುವುದು, ಅತ್ಯಂತ ದೊಡ್ಡ ದೈವ ನಿಂದನೆ ಮತ್ತು ದೇವರಿಗೆ ಮಾಡುವ ಅತ್ಯಂತ ಭಯಾನಕ ಅಪಚಾರವಾಗುವುದು ಎಂಬುವುದರಲ್ಲಿ ಸಂಶಯವಿಲ್ಲ.
- ನಂಬಿಕೆಯು ಭಕ್ತಿಯನ್ನು ಯಾಂತ್ರಿಕ ಆಚಾರದೊಂದಿಗೆ ಜೋಡಿಸುವ ಅತ್ಯಂತ ಜಾಣತನದ ಒಂದು ಕೊಂಡಿಯಾಗಿದೆ. ಆಚಾರವೇ ಆಧಿಪತ್ಯವನ್ನು ಸ್ಥಾಪಿಸಿರುವಲ್ಲಿ, ಇನ್ನು, ಶುದ್ಧ-ಭಕ್ತಿಗೆ ಸ್ಥಾನವಿರುವುದಿಲ್ಲ. ಅದೇ ರೀತಿ, ಶುದ್ಧ-ಭಕ್ತಿ ಇರುವಲ್ಲಿ ಆಚಾರಗಳನ್ನು ಯಾರೂ ಗಣನೆಗೆ ತೆಗೆಯುವುದೇ ಇಲ್ಲ. ಮಹಾತ್ಮರು ಹಾಗೂ ಭಕ್ತಿ ಯೋಗಿಗಳು ತಮ್ಮ ಶುದ್ಧ-ಭಕ್ತಿಯಿಂದ ಮಾತ್ರ ದೇವರನ್ನು ಭಜಿಸಿದವರಾಗಿರುವರು.
- ದೇವರಿಗೆ ಮತ್ತು ಧರ್ಮಕ್ಕೆ ಆಧಾರವಾಗಿರುವುದು ಸತ್ಯಸಂಧತೆ ಮತ್ತು ಅದರ ಮರಿಯಾದ ಆತ್ಮೀಯ ಪ್ರೀತಿ ಮಾತ್ರ ಎಂದು ತಿಳಿಯಬೇಕು. ಅಂದರೆ, ಇವೇ ಧರ್ಮ ಮತ್ತು ದೇವಸ್ವಭಾವ ಆಗಿದೆ ಎಂದು ಅರ್ಥ. ಇನ್ನು, ಮಹಾತ್ಮರಿಗೆ ನೈತಿಕತೆಯು ಅವುಗಳಿಂದ ಹೊರಟು ಬರುವ ಆ ಸಹಜ ಕ್ರಿಯೆಗಳು ಮಾತ್ರವಾಗುವವು.
- ಮಹಾತ್ಮರು ಎಂದರೆ ಮಹಾ ಹೃದಯವಂತರು ಎಂದು ಅರ್ಥ. ಅವರು ಯೋಗಿಯಾಗಿರಬಹುದು, ಸನ್ಯಾಸಿಯಾಗಿರಬಹುದು, ಗೃಹಸ್ಥರಾದ ಋಷಿಯಾಗಿರಬಹುದು ಅಥವಾ ಗೃಹಸ್ಥರಾದ ಸಾಮಾನ್ಯ ಮಾನವರು ಆಗಿರಬಹುದು. ಅಂದರೆ, ಹೃದಯವಂತಿಕೆಯನ್ನು ಗಮನಿಸದೆ, ಬರೇ "ತನಗೆ" ಯೋಗ ಸಿದ್ಧಿ, ಸ್ವರ್ಗ, ಮೋಕ್ಷ ಇತ್ಯಾದಿಗಳಲ್ಲಿ ಯಾವುದಾದರೂ ಒಂದನ್ನು ಉದ್ದೇಶಿಸುವ ಯಾರೂ ಕೂಡಾ ಮಹಾತ್ಮರಾಗುವುದಿಲ್ಲ ಎಂದು ಅರ್ಥ. ಸಾಮಾನ್ಯ ಮಾನವರಿಗೂ ಮಹಾತ್ಮರಾಗಿ ಜೀವಿಸಿ ಅದರ ಲಾಭವನ್ನು ಪಡೆಯುವ ವಿಚಾರವನ್ನು ಮಾತ್ರ ಎಲ್ಲಾ ಕಡೆಯೂ ಚರ್ಚಿಸಿರುವುದು ಎಂಬುವುದನ್ನು ಮರೆಯದೆ ತಿಳಿಯಬೇಕು. ಮರದಡಿಯ ಮಹಾತ್ಮರ ವಿಚಾರವಲ್ಲ ಹೇಳುತ್ತಿರುವುದೆಂದು ಪ್ರತ್ಯೇಕವಾಗಿ ನೆನಪಿಡಬೇಕು. ಮಹಾತ್ಮರ ಸಾಧನೆ ಎಂದಾಗ, ಸಾಮಾನ್ಯ ಮಾನವರು ಮನೆ ಮನೆಯ ಮಹಾತ್ಮರಾಗಿ ಬದಲಾಗಲು ಸಾಧ್ಯವಾಗುವ ಆ ಮಹಾಜೀವನ ರೀತಿಯ ಸುಲಭ ಅನುಷ್ಠಾನಗಳ ಬಗ್ಗೆ ಮಾತ್ರ ಉದ್ದೇಶಿಸುವುದು ಎಂದು ತಿಳಿದಿರಬೇಕು. ಮಹಾತ್ಮರ ರೀತಿಯ ಜೀವನದಲ್ಲಿ ಒಬ್ಬಾತನು ತನ್ನ ತಲೆಯೊಳಗೆ ಹರಡಿರುವ ತರಗೆಲೆಗಳನ್ನು ಗುಡಿಸಿ ಹೊರಹಾಕುವನು, ಆಗ ಅಲ್ಲೇ ಅತನಿಗೆ ಆ ತನ್ನ ಬಂಗಾರದ ಜೀವನವು ಕಾಣಿಸುವುದು!

- ನಂಬಿಕೆಯವರಿಗೆ ಮತ್ತು ಮಹಾತ್ಮರಿಗೆ ಇರುವ ವ್ಯತ್ಯಾಸ ಏನೆಂದರೆ, ನಂಬಿಕೆಯವರು ಎಲ್ಲಾ ಧರ್ಮಗಳಲ್ಲೂ "ಸತ್ಯವು ನಮ್ಮ ಅಂಗಳದಲ್ಲಿ ಮಾತ್ರವೇ ಇರುವುದು" ಎಂದು ಸಾಧಿಸುವುದಕ್ಕೋಸ್ಕರ ಖಂಡನೆ ಮತ್ತು ಮಂಡನೆಗಳ ಮೂಲಕ ಆ "ಏಕ ಸತ್ಯ" ವನ್ನು ತಮ್ಮ ತಮ್ಮ ಅಂಗಳಕ್ಕೆ ಎಳೆಯುತ್ತಿರುತ್ತಾರೆ!! ಹೀಗೆ ಎಳೆದಾಗ ಆ "ಏಕ ಸತ್ಯವು" ಎಲ್ಲಿಗೂ ಹೋಗಲಾರದೆ ಮತ್ತು ನೋವು ತಾಳಲಾರದೆ ಒದ್ದಾಡುವುದು. ಆದರೆ ಇದರ ಫಲವಾಗಿ ಇಂದೂ ಆ "ಏಕ ಸತ್ಯವು" ಎಲ್ಲರ ಅಂಗಳದಿಂದಲೂ ಹೊರಗಡೆಯೇ ಉಳಿದುಕೊಂಡಿದೆ!! ಅಂದರೆ, ಆ ಖಂಡನೆ, ಮಂಡನೆಯ ರೀತಿಯಲ್ಲಿ ಆ ಏಕಸತ್ಯವನ್ನು ಪಡೆಯಲು ಸಾಧ್ಯವಿಲ್ಲ ಎಂದು ಅರ್ಥ. ಇನ್ನು, ಮಹಾತ್ಮರ ರೀತಿಯು, ಸತ್ಯ ಎಲ್ಲಿದ್ದರೂ ಅದನ್ನು ಮಾತ್ರ ಸತ್ಯ ಎಂದು ಒಪ್ಪುವ ರೀತಿಯಾಗಿದೆ. ಅಂದರೆ, ಸತ್ಯವನ್ನು ತಮ್ಮ ಅಂಗಳಕ್ಕೆ ಎಳೆಯುವ ಪ್ರಯತ್ನವನ್ನು ಅವರು ಎಂದೂ ಮಾಡುವುದಿಲ್ಲ, ಅದರ ಬದಲು ಅವರು ಸತ್ಯ ಎಲ್ಲಿದ್ದರೂ ಆ ಸತ್ಯದ ಸ್ಥಳದಲ್ಲೇ ಜೀವಿಸುವರು!! ಒಟ್ಟಿನಲ್ಲಿ, ಸತ್ಯ ಇರುವಲ್ಲಿ ಮಾತ್ರ ಜೀವಿಸುವವರು ಮಹಾತ್ಮರು, ಮತ್ತು ಇಲ್ಲಿಯ ತನಕ ಸತ್ಯವನ್ನು ಎಳೆದು ತನ್ನ ಅಂಗಳಕ್ಕೆ ತರಲಾಗದಿದ್ದರೂ, ಇನ್ನೂ ತನ್ನ ಅಂಗಳದಲ್ಲೇ ನಿಂತು, ಪ್ರತಿ ದಿನವೂ ಸತ್ಯಕ್ಕೆ ಗಾಳಹಾಕುವವರು ಈ ನಂಬಿಕೆಯವರು ಎಂದು ಹೇಳಬಹುದು!!
- ಭಕ್ತಿಯು ಒಂದು ಭಾವವಾಗಿದೆ ಎಂಬುವುದು ಸರಿ. ಆದರೆ ಅದು ಒಬ್ಬ ಕಳ್ಳನ ಮೇಲೆ ಹುಟ್ಟಿಕೊಳ್ಳುವುದಿಲ್ಲ ಬದಲು ಒಬ್ಬ ಪವಿತ್ರ ಮಹಾತ್ಮನ ಮೇಲೆ ಹುಟ್ಟಿಕೊಳ್ಳುವುದು. ಇದರ ಅರ್ಥ, ಭಕ್ತಿಯಲ್ಲಿಯೂ ಚಿಂತನೆ ಇದೆ ಎಂದಾಗಿದೆ ಮತ್ತು ಅದು ಅಸತ್ಯವನ್ನು ಎಂದೂ ಒಪ್ಪುವುದಿಲ್ಲ ಎಂದೂ ಆಗಿದೆ. ನೀವು "ಅಮವಾಸ್ಯೆಯ ಚಂದ್ರನಂತೆ ದೊಡ್ಡದಾದ" ಎಂದು ದೇವರನ್ನು ಹೊಗಳುವ ಹಲವು ಗೀತೆಗಳನ್ನು ಎಷ್ಟೇ ಭಕ್ತಿ ಭಾವದಲ್ಲಿ ಹಾಡಿದರೂ, ಎಲ್ಲರು ನಿಮ್ಮನ್ನು ಒಮ್ಮೆ ನೋಡಿ ಮುಗುಳು ನಕ್ಕು ಮುಂದೆ ನಡೆವರು ಅಷ್ಟೆ. ಅಂದರೆ, ಭಕ್ತಿ ಭಾವವು ಸುಳ್ಳಿನಿಂದ ಹುಟ್ಟಿಕೊಳ್ಳುವುದಿಲ್ಲ ಎಂದು ಅರ್ಥ. ಅದು ಹುಟ್ಟಿಕೊಳ್ಳಬೇಕಿದ್ದರೆ, ನಮ್ಮ ಮನಸ್ಸಿಗೆ ನಾವು ತಕ್ಕ ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾಗುವುದು! ಇದಾವುದೂ ಇಲ್ಲದೆ ಇರುವುದೇ ಆಚಾರ-ಭಕ್ತಿ ಆಗುವುದು. ಅದು ಹೇಗೆ ಭಕ್ತಿಯ ಹಿನ್ನೆಲೆಯಲ್ಲಿ ಹೇಳಲ್ಪಡುವುದು ಎಂಬುವುದೇ ಅಚ್ಚರಿಯ ವಿಷಯವಾಗಿದೆ!!
- ಮಾನವನು ಪ್ರಾಣಿಗಳಿಗಿಂತ ಹೆಚ್ಚು ಕಷ್ಟಪಡುವನು, ಯಾಕೆಂದರೆ ಆತನೊಳಗೆ ಒಂದು ದೊಡ್ಡ ಹೊಟ್ಟೆ ಇರುವ 'ಅಹಂಕಾರವು' ಯಾವಾಗಲೂ ಹಸಿವಿನಿಂದ ಕಾಯುತ್ತಿರುವುದು! ಮಾನವನಿಗೆ ಅಹಂಕಾರವು ಇಲ್ಲವಾದಲ್ಲಿ ಕಷ್ಟಕ್ಕೆ ಗುರಿಯಾಗುವ ಸಾಧ್ಯತೆಯು ಪ್ರಾಣಿಗಳಿಗಿಂತಲೂ ಅತ್ಯಂತ ಕಡಿಮೆ ಮಾತ್ರ ಇರುವುದು.
- ಕ್ಷಮೆಯು ವ್ಯಯಕ್ತಿಕವಾಗಿದೆ, ಅದು ಧರ್ಮಕ್ಕೆ ಸಂಬಂಧಿಸಿಲ್ಲ. ಆದರೆ, ಧರ್ಮವು ವ್ಯಯಕ್ತಿಕ ಹಾಗೂ ಸಾಮಾಜಿಕವಾಗಿದೆ, ಮತ್ತು ಅದು ಸಮಾಜದಲ್ಲಿ ದುಷ್ಟರು ಹೆಚ್ಚಾಗದಂತೆ ಶಿಕ್ಷಿಸುವ ಕೆಲಸವನ್ನೂ ಮಾಡುತ್ತಿರುವುದು. ಕ್ಷಮೆಯ ಒಂದು ದೊಡ್ಡ ಕೊರತೆಯು, ಒಬ್ಬಾತನು ಕ್ಷಮಿಸಲ್ಪಟ್ಟರೂ ಆತನಿಗೆ ಜ್ಞಾನೋದಯವಾಗಬೇಕೆಂದಿಲ್ಲ ಎಂಬುವುದಾಗಿದೆ. ಅಂದರೆ, ಒಬ್ಬಾತನ ಕ್ಷಮೆಯಿಂದ ತಪ್ಪು ಮಾಡಿದವನಿಗೆ ಜ್ಞಾನೋದಯವಾಗುವುದಾದರೆ ಆ ಕ್ಷಮೆಯು ಮಾತ್ರ ಧರ್ಮವಾಗುವುದು, ಮತ್ತು ಹಾಗೆ ಆಗುವುದಿಲ್ಲವಾದರೆ ಅದು ಆ ದುಷ್ಟರ ಹೆಚ್ಚಳಕ್ಕೆ ಕಾರಣವಾಗುವ ಅಧರ್ಮವಾಗುವುದು!!
- ತಾಳ್ಮೆಯು ಮಹಾತ್ಮರಿಗೆ ಸಹಜವಾಗಿರುವುದು. ಆದರೆ, ಜನ ಸಾಮಾನ್ಯರಿಗೆ ಅದೊಂದು ಕಷ್ಟಾನುಭವವಾಗುವುದು. ತಾಳ್ಮೆಯು, ಜನರನ್ನು, ತಮ್ಮ ಸೋಲಿಗೆ ಕಾರಣವಾಗುವ ಆ ತಪ್ಪು ನಿರ್ಣಯವನ್ನು ಕೊಡುವ, ದುಡುಕು-ಸ್ವಭಾವದಿಂದ ರಕ್ಷಿಸುವುದು.
- ಕೋಟಿ ನಕ್ಷತ್ರಗಳ ಮಧ್ಯೆ ನಮ್ಮ ಭೂಮಿಯು ಏನೂ ಅಲ್ಲ; ಏನೂ ಅಲ್ಲದ ಈ ಭೂಮಿಯಲ್ಲಿ ನಮ್ಮ ಶರೀರವು ಏನೇನೂ ಅಲ್ಲ; ಈ ಏನೇನೂ ಅಲ್ಲದ ಶರೀರದಲ್ಲಿ ತುಂಬಿದೆ ನೋವು, ರೋಗ, ಕಷ್ಟಗಳೆಲ್ಲ; ಆದರೂ ಹೇಳುವುದು ಮನವು "ನಾನೇ ಎಲ್ಲ" !
- ಈ ಮಾನವ ಕುಲವನ್ನು ಇನ್ನಾವ ಸಂಬಂಧವೂ ಸೃಷ್ಟಿಸಿಲ್ಲ, ಅದನ್ನು ಸೃಷ್ಟಿಸಿರುವುದು ಪತಿ-ಪತ್ನಿ ಸಂಬಂಧ ಮಾತ್ರವಾಗಿದೆ. ಮಾತ್ರವಲ್ಲ, ಒಂದು ಕುಟುಂಬದಲ್ಲಿ ಮಕ್ಕಳನ್ನು ಬೆಳೆಸುವವರೂ ಇವರೇ ಆಗಿರುವರು, ಆದರೆ ತಂದೆ, ತಾಯಿ ಎಂಬ ಇನ್ನೊಂದು ಹೆಸರಲ್ಲಿ ಮಾತ್ರವೆಂಬುವುದು ವ್ಯತ್ಯಾಸ. ಅಂದರೆ, ಈ ತಂದೆ, ತಾಯಂದಿರು ಉತ್ತಮರಾಗಿದ್ದರೆ, ಹೆಚ್ಚಿನ ಮಕ್ಕಳು ಅವರನ್ನೇ ಅನುಸರಿಸುವ ಸಾಧ್ಯತೆಯು ಹೆಚ್ಚುವುದು, ಮತ್ತು ಹಾಗಾದರೆ, ಅದರೊಂದಿಗೆ ಮಾನವ ಕುಲವೇ ಉತ್ತಮವಾಗುವ ಸಾಧ್ಯತೆಯೂ ಇರುವುದು. ಇಷ್ಟೆಲ್ಲ

ವಿಶೇಷತೆಗಳನ್ನು ಈ ಪತಿ-ಪತ್ನಿ ಸಂಬಂಧವು ಹೊಂದಿರುವುದರಿಂದಲೇ ಈ ಸಂಬಂಧವನ್ನು ಎಲ್ಲಾ ಇತರ ಸಂಬಂಧಗಳಿಗಿಂತಲೂ ಮುಖ್ಯವಾದುದು ಎನ್ನುವುದು.

- ಎಲ್ಲಾ ಧರ್ಮ, ಪಂಥಗಳು ಈ ಜಗತ್ತಿನ ಜನತೆಗಾಗಿ ಅನವರತ ಶ್ರಮವಹಿಸುತ್ತಾ ಬಂದಿವೆ ಎಂದು ತಾವೇ ಹೇಳಿಕೊಳ್ಳುತ್ತಿವೆ, ಆದರೆ ಜಗತ್ತು ಮತ್ತೂ ಕೆಟ್ಟದಾಯಿತು! ಅವು ಮತ್ತೂ ಶ್ರಮವಹಿಸಿದವು, ಆಗ ಮತ್ತೂ ಕೆಟ್ಟದಾಯಿತು! ಮತ್ತೂ ಶ್ರಮ ವಹಿಸಿದವು, ಆಗಲೂ ಜಗತ್ತು ಮತ್ತೂ ಕೆಟ್ಟದಾಯಿತು! ಇನ್ನು ಮುಂದೆಯೂ ಶ್ರಮವಹಿಸುವವು, ಆಗ ಒಮ್ಮೆಗೆ ಈ ಜಗತ್ತು ಒಳ್ಳೆಯದಾಗಬಹುದೇ? ಈ ರೀತಿ ಕೆಟ್ಟದಾಗಲು ಕಾರಣವನ್ನು ನಾಸ್ತಿಕರಲ್ಲಿ ಕೇಳಿದರೆ, ಅವರು ಆಸ್ತಿಕರನ್ನು ಬೊಟ್ಟು ಮಾಡಿ ತೋರಿಸುವರು! ಆದರೆ ಆಸ್ತಿಕರಲ್ಲಿ ಇದೇ ಪ್ರಶ್ನೆಯನ್ನು ಕೇಳಿದರೆ, "ಅದು, ಕೊನೆಗೆ ಎಲ್ಲರೂ ಕೆಟ್ಟವರಾಗುವರು ಎಂದು ಮೊದಲೇ ನಮ್ಮ ದೇವರು ನಮ್ಮ ಧರ್ಮದಲ್ಲಿ ಹೇಳಿರುವರು" ಎನ್ನುವರು!! ಹಾಗಿದ್ದರೆ, ಇಷ್ಟು ಕಾಲ ಉಸಿರುಗಟ್ಟಿ ಶ್ರಮವಹಿಸಿದ್ದು ಯಾಕೆ ಎಂಬ ಪ್ರಶ್ನೆಯು ಇಂದೂ ಯಕ್ಷಪ್ರಶ್ನೆಯಾಗಿಯೇ ಉಳಿಯುವುದು!!!
- ನಂಬಿಕೆಯು ಅರಿವಿಗಿಂತ ಶ್ರೇಷ್ಠ ಎಂದು ವಾದಿಸಲು ಎಂದಿಗೂ ಸಾಧ್ಯವಿಲ್ಲ. ಯಾಕೆಂದರೆ, ಸರಿಯಾದ ಕಾರಣವಿದ್ದಲ್ಲಿ ಸತ್ಯವು ಸಾಬೀತು ಆಗಲ್ಪಡುವುದು, ಆದರೆ ನಂಬಿಕೆಗೆ ಇದು ಸಾಧ್ಯವಿಲ್ಲ. ಜಗತ್ತು ಸರಿಯಾದ ಕಾರಣಕ್ಕೆ ಅಥವಾ ತರ್ಕಕ್ಕೆ ತಲೆ ಬಾಗಲೇಬೇಕು. ಎರಡು ಕೂಡಿಸು ಎರಡು ನಾಲ್ಕು ಅಲ್ಲ ಎಂದು ದೇವರಿಂದಲೂ ವಾದಿಸಿ ಜಯಿಸಲು ಸಾಧ್ಯವಿಲ್ಲ. ಈ ಕಾರಣಗಳಿಗೆ ತಲೆ ಬಾಗಿರುವ ಸ್ಪಷ್ಟ ಉದಾಹರಣೆಯೇ ನಮ್ಮ ಮುಂದಿರುವ ಮತ್ತು ನಾವು ಅನುಭವಿಸುತ್ತಿರುವ ಈ ಎಲ್ಲಾ ತರದ ವೈಜ್ಞಾನಿಕ ಸೌಕರ್ಯಗಳಾಗಿವೆ. ಅಂದರೆ, ವೈಜ್ಞಾನಿಕವಾದುವೆಲ್ಲಾ "ಕಾರಣ ಸಹಿತ ವಿವರಣೆಯ" ಮೂರ್ತ ರೂಪಾಂತರಗಳಾಗಿವೆ ಎಂದು ಅರ್ಥ. ಇತ್ತ, 'ನಂಬಿಕೆ'ಯು ಕಾರಣ ಕೊಡದಿರುವಿಕೆಯ ಮೂರ್ತ ರೂಪಾಂತರವಾಗುವವು! ಇನ್ನೂ, ನಂಬಿಕೆಯು ಅರಿವಿಗಿಂತಲೂ ಶ್ರೇಷ್ಟ ಎಂದರೆ, ಅದು ಮಾನಸಿಕ ಭ್ರಮೆಯಲ್ಲಿ ಮಾತ್ರ ಆ ರೀತಿ ಹೇಳಲು ಸಾಧ್ಯ, ಯಾಕೆಂದರೆ ಅಲ್ಲಿ ತರ್ಕವು ಸಂಪೂರ್ಣವಾಗಿ ನಾಶವಾಗಿರುತ್ತದೆ. ಇದಕ್ಕೆ ಒಂದು ಉದಾಹರಣೆ ಕಥೆಯನ್ನು ನೋಡೋಣ. "ಮೂರು ಅಜ್ಜಿಯಂದಿರು, ಆ ಮೂವರಿಗೂ ಸರಿಯಾಗಿ ಪರಿಚಯವಿರುವ ಒಬ್ಬ ವೈದ್ಯರಲ್ಲಿಗೆ, ಆ ಮೂವರಿಗೂ ಸಾಮಾನ್ಯವಾಗಿರುವ "ಕಳ್ಳರ ಭಯ"ವೆಂಬ ಒಂದೇ ಮಾನಸಿಕ ರೋಗಕ್ಕೆ ಚುಚ್ಚು ಮದ್ದನ್ನು ಪಡೆದು ಹಿಂದಿರುಗುತ್ತಿದ್ದರು. ಆದರೆ ವೈದ್ಯರು ಆ ಎರಡು ಶ್ರೀಮಂತ ಅಜ್ಜಿಯರಿಗಿಂತ ಎರಡು ಪಾಲು ಹೆಚ್ಚು ಹಣವನ್ನು ಅವರಲ್ಲಿ ಒಬ್ಬರಾದ ಅತ್ಯಂತ ಬಡ ಅಜ್ಜಿಯ ಕೈಯಿಂದ ವಸೂಲಿ ಮಾಡಿದುದು ಅವರಿಗೆ ತಿಳಿಯಿತು. ಅದು ಅವರಲ್ಲಿ ಕುತೂಹಲ ಮತ್ತು ಅಚ್ಚರಿಯನ್ನು ಮೂಡಿಸಿತು! ಕೊನೆಗೆ "ವೈಧ್ಯರು ನಿನಗೆ ಏನು ಮಾಡಿದರು?" ಎಂದು ಆ ಅಜ್ಜಿಯಲ್ಲಿ ಕೇಳುವಾಗ ಎಲ್ಲವೂ ಸ್ಪಷ್ಟವಾಯಿತು." ವೈದ್ಯರು ಆ ಅಜ್ಜಿಗೆ ಮಾತ್ರ ಒಂದರ ಬದಲು ಎರಡು ಚುಚ್ಚು ಮದ್ದನ್ನು ಕೊಟ್ಟು, ಮಾತ್ರೆಗಳನ್ನೂ ಆ ಇಬ್ಬರು ಅಜ್ಜಿಯರಿಗಿಂತ ಎರಡು ಪಾಲು ಹೆಚ್ಚು ಕೊಟ್ಟಿದ್ದರಂತೆ! ಅಂದರೆ, ವೈದ್ಯರಿಗೆ ಪರಿಚಯವಿರುವ ಕಾರಣ ಆ ಮೂರು ಅಜ್ಜಿಯಂದಿರ ಸಾಂಪತ್ತಿಕ ಹಿನ್ನೆಲೆ ಚೆನ್ನಾಗಿ ತಿಳಿದಿದೆ. ಆಗ, ಆ ಅತ್ಯಂತ ಬಡತನದ ಅಜ್ಜಿಗೆ ಕಳ್ಳರ ಭಯವಿದೆ ಎಂದರೆ ಆ ಅಜ್ಜಿ ತರ್ಕವನ್ನೆಲ್ಲಾ ಕಳಕೊಂಡು ಬರೇ ಒಂದು ತರದ ಭ್ರಮೆಯಿಂದ ಮಾತ್ರ ಭಯ ಪಡುತ್ತಿರುವುದು ಎಂದು ವೈದ್ಯರಿಗೆ ತಿಳಿಯಿತು. ಈ ಹಿನ್ನೆಲೆಯಲ್ಲಿ ಆ ಅಜ್ಜಿಗೆ ದೊಡ್ಡ ಪ್ರಮಾಣದಲ್ಲಿ ಮದ್ದನ್ನು ಕೊಟ್ಟಿರುವುದು ಎಂದು ಅರ್ಥ. ಇದೇ ರೀತಿ, ತರ್ಕವನ್ನು ಕಳಕೊಂಡ ನಂಬಿಕೆಯೂ ಭ್ರಮೆಯ ತರದಲ್ಲಿ ಜಗತ್ತಿನಲ್ಲಿ ಶೋಷಣೆ, ಧ್ವೇಷ, ಹಿಂಸೆ, ರಕ್ತಪಾತವನ್ನು ಮಾಡುತ್ತಿದೆ. ಯಾವಾಗ ಅರಿವು ಈ ನಂಬಿಕೆಯ ಬದಲು ಬರುವುದೋ, ಆಗ, ಕೊನೆಯ ಪಕ್ಷ ಇಂದಿನ ಅಪರಾಧಗಳ ಸಂಖ್ಯೆಯು ಅದರ ಅರ್ಧದಷ್ಟಾದರೂ ಇಳಿಯುವುದರಲ್ಲಿ ಸಂಶಯವಿಲ್ಲ. ಇನ್ನು, ಮಹಾತ್ಮರ ಸಂಖ್ಯೆ ಹೆಚ್ಚಾದರೆ, ಅಲ್ಲಿ ಆ ಸಮಾಜವು ಶಾಂತಿಯ ಸ್ವರ್ಗವಾಗಿ ಪರಿವರ್ತಿಸಲ್ಪಡುವುದು ಎಂಬುವುದರಲ್ಲೂ ಸಂಶಯವಿಲ್ಲ!!
- ನಮಗೆ ಸಾವಿರ 'ಬೇಕು'ಗಳಿದ್ದರೆ ಒಂದರಲ್ಲೂ ತೃಪ್ತಿ ಇರಲಾರದು. ನಮಗೆ ಸಾವಿರ ಗುರಿಗಳಿದ್ದರೆ ಒಂದನ್ನೂ ಸಾಧಿಸಲು ಸಾಧ್ಯವಾಗದು. ಬೇಕುಗಳು, ಗುರಿಗಳು, ಇತ್ಯಾದಿಗಳು ಜೀವನವಲ್ಲ, ಯಾಕೆಂದರೆ ಇವೆಲ್ಲ ಮಾನವನನ್ನು ಸರ್ವವನ್ನೂ ಮರೆವಂತೆ ಮಾಡುವುದು ಮತ್ತು, ಚಿಕ್ಕ ಮಕ್ಕಳು ಬೀದಿಗೆ ಬಂದ ಆನೆಯ ಹಿಂದೆ ಎಲ್ಲವನ್ನು ಮರೆತು ನಡಕೊಂಡು ಹೋಗುವಂತೆ, ಬೇಕು, ಗುರಿಗಳ ಹಿಂದೆ ಓಡುತ್ತಾ ಜೀವನವನ್ನು ಮುಗಿಸುವಂತೆ ಮಾಡುವುದು! ಆದಕ್ಕೆಂದೇ ಮಹಾತ್ಮರು "ಮೊದಲು ಜೀವನವನ್ನು ರೂಪಿಸಬೇಕು" ಎನ್ನುವುದು, ಮತ್ತು ಗುರಿ

ಅಥವಾ ಬೇಕುಗಳನ್ನು ಆ ರೂಪಿಸಿರುವ ಜೀವನವನ್ನು ಮತ್ತೂ ಅಂದವಾಗಿಸುವಲ್ಲಿ ಅದರ ಅಲಂಕಾರದ ರೀತಿಯಲ್ಲಿ ಮಾತ್ರ ಬಳಸಬೇಕು ಎನ್ನುವುದು. ಹಾಗೆ ಮಾಡುವಾಗ ಆನಂದದ ಜೀವನದೊಂದಿಗೆ ಅವರವರ ಅರ್ಹತೆಗನುಸಾರವಾಗಿರುವ ಬೇಕು, ಗುರಿಗಳ ಲಾಭವೂ ಆಗುವುದು!!

- ಕಾಡಿನ ಆ ಕೋಟಿಗಟ್ಟಲೆ ಮರ ಗಿಡಗಳಿಗೆ ತಮ್ಮೊಳಗೆ ಸಂಬಂಧವಿಲ್ಲ, ಆದರೆ ಅವು ಚೆನ್ನಾಗಿ ಒಟ್ಟಿಗೆ ಬದುಕುವವು, ಆದರೆ ಮಾನವನಿಗೆ ಸಾವಿರಾರು ಹೆಸರಿನ ಸಂಬಂಧಗಳಿವೆಯಾದರೂ ಆತನು ನಿತ್ಯವೂ ಹೊಡೆದಾಡಿಕೊಳ್ಳುತ್ತಾನೆ! ಸಂಬಂಧದಿಂದಾಗಿ ಮಾನವನು ಮಹಾತ್ಮನಾಗುವನು ಮತ್ತು ಸಂಬಂಧದಿಂದಾಗಿಯೇ ಮಾನವನು ಅಸುರನೂ ಆಗುವನು ಎಂಬುವುದನ್ನು ಅರಿಯಬೇಕು. ಸ್ವಲ್ಪ ವಿವರಿಸುವುದಾದರೆ, ಮಹಾತ್ಮರ ದಾರಿಯಲ್ಲಿ ಮುಂದುವರಿಯುವವರು "ಈ ಭೂಮಿಯೇ ಒಂದು ಕುಟುಂಬ" ಎಂಬ ವಿಶಾಲ ಮನಸ್ಕತೆಯ ಸಂಬಂಧವನ್ನು ಹೊಂದಿರುವರು, ಆದರೆ, ಜನಸಾಮಾನ್ಯರು "ನಾನು ಮತ್ತು ನನ್ನ ಹೆಂಡತಿ ಮಕ್ಕಳೇ ಕುಟುಂಬ" ಎಂದೇ ತಿಳಿವರು ಮತ್ತು ಇನ್ನೂ ಕೆಳಗೆ ಹೋಗಿ, ಅತಿಯಾದ ವ್ಯಕ್ತಿ ಸ್ವಾರ್ಥದ ಆ "ನಾನೇ ಕುಟುಂಬ" ಎಂಬಲ್ಲಿಯವರೆಗೂ ಹೋಗುವರು! ಇದು ದ್ವೇಷ, ಹಿಂಸೆಗೆ ಕಾರಣವಾಗಿ ಅಸುರ ಸ್ವಭಾವವನ್ನು ಮಾನವನಲ್ಲಿ ಹೆಚ್ಚಿಸುವುದು.
- ದನವು ಹುಲಿಯೂ ಅಲ್ಲ, ಹುಲಿಯು ದನವೂ ಅಲ್ಲ, ಆದರೆ ಒಂದು ಕಡೆ ಮಾತ್ರ ಇವುಗಳನ್ನು ಆ ರೀತಿಯಲ್ಲಿ ಕಾಣಬಹುದು. ಅದು ಮಾನವನ ಹೃದಯದಲ್ಲಿ! ಅಲ್ಲಿ, ತಮಗೆ ಅನುಕೂಲವಾದಲ್ಲಿ ಕ್ರೂರಿಗಳಾದ ಕೆಟ್ಟವರೂ ಉತ್ತಮರಾಗುವರು, ಮತ್ತು ತಮಗೆ ಅನುಕೂಲವಾಗದಲ್ಲಿ ಉತ್ತಮರಾದ ಸಜ್ಜನರೂ ಕೆಟ್ಟವರಾಗುವರು!! ಅಂದರೆ, ಜನಸಾಮಾನ್ಯರ ಈ 'ತಮ್ಮ ಅನುಕೂಲ' ಎಂಬ ಸ್ವಾರ್ಥ ಭಾವನೆಯೇ ಸಮಾಜದಲ್ಲಿ ಉತ್ತಮ ಮತ್ತು ಕೆಟ್ಟವರನ್ನು ನಿರ್ಣಯಿಸುವುದು ಹೊರತು ಉತ್ತಮರ ಆ ಉತ್ತಮ ಸ್ವಭಾವ ಮತ್ತು ಅಥವಾ ಕೆಟ್ಟವರ ಆ ಕೆಟ್ಟ ಸ್ವಭಾವಗಳು ಅಲ್ಲ ಎಂದು ಅರ್ಥ!! ಇದು ಇನ್ನೂ ಒಂದು ಸತ್ಯವನ್ನು ಹೇಳುವುದು, ಅದೇನೆಂದರೆ, ಸಮಾಜವನ್ನು ಕೆಟ್ಟವರು ಒಂದು ಪಾಲು ನಾಶಮಾಡಿದರೆ, ತಮಗೆ ಅನುಕೂಲವನ್ನು ಮಾಡಿಕೊಳ್ಳುವುದನ್ನೇ ಮುಂದಿಟ್ಟು ಜೀವಿಸುವ ಈ ಸ್ವಾರ್ಥಿ ಜನರು, ಹಲವು ಪಾಲು ನಾಶಮಾಡುವರು ಎಂದಾಗಿದೆ!!
- ಕಳ್ಳನ ಜಗತ್ತು ಮತ್ತು ಉತ್ತಮನ ಜಗತ್ತು ಒಂದೇ ಅಲ್ಲ, ಪತಿವ್ರತೆಯ ಜಗತ್ತು ಮತ್ತು ವೇಶ್ಯೆಯ ಜಗತ್ತು ಕೂಡಾ ಒಂದೇ ಅಲ್ಲ. ಅಂದರೆ, ಈ ಒಂದು ಸ್ಥೂಲ ಜಗತ್ತಿನ ಮಾನವರಲ್ಲಿ ಹಲವು ಸಾವಿರ ಮಾನವ ದೃಷ್ಟಿಕೋನಗಳ ಜಗತ್ತುಗಳಿವೆ ಎಂದು ಅರ್ಥ!! ಎಲ್ಲಾ ಧರ್ಮ, ಪಂಥಗಳು ತಮ್ಮ ತಮ್ಮ ದೃಷ್ಟಿಕೋನಗಳ ಜಗತ್ತನ್ನು ಬಲವಂತವಾಗಿ ಜಗತ್ತಿನ ಸರ್ವರಿಗೂ ಅನ್ವಯ ಮಾಡುವುದರಲ್ಲಿ ತಲ್ಲೀನವಾಗಿವೆ! ಅದಕ್ಕಾಗಿ ಆಮಿಷ, ದ್ವೇಷ, ಹಿಂಸೆ, ರಕ್ತಪಾತಗಳು ಎಂಬ ಯಾವ ಮಾರ್ಗವನ್ನು ಅನುಸರಿಸಲೂ ಅವು ತಯಾರಾಗುವವು! ಆದರೆ ಮಹಾತ್ಮರ ರೀತಿಯಲ್ಲಿ ತಮ್ಮ ಕಡೆಗೆ ತಿರುಗಿಸುವ ಯಾವ ಪ್ರಯತ್ನವೂ ಇಲ್ಲ. ಅಲ್ಲಿ, ಕೆಟ್ಟವರೂ ಸೇರಿ, ಎಲ್ಲ ಮಾನವರ ಮನಃಸಾಕ್ಷಿಯಲ್ಲಿ ಅಡಗಿರುವ ಉತ್ತಮ ವ್ಯಕ್ತಿಯನ್ನು ಬಡಿದೆಬ್ಬಿಸಿ, ಆ ವ್ಯಕ್ತಿಯ ಜೀವನವು ಆನಂದ ಬರಿತವಾಗುವಂತೆ ಮಾಡುವ ಒಂದು ಮಾನವ ಸೇವೆ ಮಾತ್ರ ಇರುವುದು!
- ನಾವು ಹಲವು ಸಲ ಸತ್ಯಚಿಂತನೆ ಮಾಡುವುದರ ಅಗತ್ಯವಿದೆಯೇ ಮತ್ತು ಒಮ್ಮೆ ಎಲ್ಲವನ್ನೂ ತಿಳಿದುಕೊಂಡರೆ ಸಾಕಾಗಲಾರದೇ ಎಂಬ ಸಂಶಯ ಕೆಲವರಿಗೆ ಇರಬಹುದು, ಆದರೆ ಇದಕ್ಕೆ ಉತ್ತರವು, ನಾವು ಪರೀಕ್ಷೆಗೆ ಒಮ್ಮೆ ಮಾತ್ರ ಓದಿಕೊಂಡರೆ ಸಾಕಾಗದೇ, ಹಲವು ಸಲ ಓದುವ ಅಗತ್ಯವಿದೆಯೇ ಎಂಬ ಪ್ರಶ್ನೆ ರೂಪದಲ್ಲೇ ಇರುವುದು. ನಿತ್ಯವೂ ತನಗೆ ತಾನೇ, ಕಂಠಪಾಠದ ರೀತಿಯಲ್ಲದ, ಮತ್ತು ಆ ಸತ್ಯಸಂಧವಾದ ರೀತಿಯಲ್ಲಿ ನೆನಪಿಸಿದಲ್ಲಿ ಮಾತ್ರ ಆ ಸತ್ಯಸಂಧವಾದ ಚಿಂತನೆಯು ಕಾಲಾನಂತರದಲ್ಲಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವವಾಗಿ ಮಾರ್ಪಡುವುದು. ಇಲ್ಲಿ ಸತ್ಯಸಂಧತೆಗೆ ತುಂಬಾ ಪಾತ್ರವಿದೆ. ಅದಿಲ್ಲವಾದರೆ, ದಾರವಾಹಿಯಲ್ಲಿನ ಪಾತ್ರಕ್ಕಾಗಿ ದಿನನಿತ್ಯ ಕಣ್ಣೀರು ಹಾಕಿಯೂ, ತಮ್ಮ ನಿಜಜೀವನದಲ್ಲಿ ಸ್ವಲ್ಪವೂ ಕರುಣೆ ಇಲ್ಲದ ಜನರಂತೆ ಆಗಿಬಿಡುವರು!
- ಹಗಲು ಇದ್ದಲ್ಲಿ ರಾತ್ರಿಯೂ ಇರುವುದು, ಅಥವಾ ಸಿಹಿ ಇದ್ದಲ್ಲಿ ಕಹಿ ಇರಬೇಕು, ಆದುದರಿಂದ ಜಗತ್ತಲ್ಲಿ ಒಳ್ಳೆಯದು ಇದ್ದಲ್ಲಿ ಕೆಟ್ಟದು ಇರಲೇಬೇಕು ಎಂದು ಜನರು ಹೇಳಿಕೊಳ್ಳುವ ಮಾತು ತಪ್ಪಾಗುವುದು. ಯಾಕೆಂದರೆ, ಈ ಇರುವವುಗಳನ್ನು ದ್ವಂದಗಳಂತೆ ಜೋಡಿಸಿ ಜನರೇ ಹೇಳಿರುವುದು ಅಷ್ಟೆ. ಅದಲ್ಲದೆ, ಬೇರೆ ಆ ಮಾತಿಗೆ ಯಾವ ಆಧಾರವೂ ಇಲ್ಲ. ಈ ಜಗತ್ತಿನಲ್ಲಿ

ಮೊದಲು ಕೆಟ್ಟವರ ಶೇಖಡ ಸಂಖ್ಯೆ ಬಹಳ ಕಡಿಮೆ ಇದ್ದು, ಕಾಲ ಹೋದಂತೆ ಕೆಟ್ಟವರ ಶೇಖಡ ಸಂಖ್ಯೆಯು ಬಹಳ ಹೆಚ್ಚಾಗಿರುವುದನ್ನು ಅದು ವಿವರಿಸುವುದಿಲ್ಲ. ಇಲ್ಲಿ ನಾವು ಪ್ರತ್ಯೇಕವಾಗಿ ಗಮನಿಸಬೇಕಾಗಿರುವುದು, ಉತ್ತಮರಿಗೆ ಈ ರೀತಿ ಹೇಳುವ ಅಗತ್ಯ ಬರುವುದಿಲ್ಲ ಎಂಬುವುದನ್ನಾಗಿದೆ. ಆದುದರಿಂದ ಈ ಮಾತಿನ ಸೃಷ್ಟಿಕರ್ತರು ಕೆಟ್ಟವರೆಂದು ಸ್ಪಷ್ಟ.

- ಭೂಮಿಯಲ್ಲಿ ಎರಡು ರೀತಿಯ ನಾಸ್ತಿಕರು ಇರುವರು. ಅವುಗಳಲ್ಲಿ ಒಂದು ಎಲ್ಲಾ ದೇವರುಗಳ ಅಸ್ತಿತ್ವವನ್ನು ಅಲ್ಲಗಳೆಯುವವರಾದರೆ, ಇನ್ನೊಂದು ನಾಸ್ತಿಕ ವರ್ಗವು ಕೂಡಾ ಎಲ್ಲಾ ದೇವರುಗಳನ್ನು ಅಲ್ಲಗಳೆಯುವರೇ ಆಗಿರುವರು, ಆದರೆ ವ್ಯತ್ಯಾಸವಿರುವುದು ಈ ನಾಸ್ತಿಕ ವರ್ಗವು "ತಮ್ಮ ದೇವರನ್ನು ಬಿಟ್ಟು" ಎಂಬ ಪದ ಪುಂಜವನ್ನು ಅದರೊಂದಿಗೆ ಸೇರಿಸುವಲ್ಲಿ ಮಾತ್ರವಾಗಿರುವುದು! ಒಟ್ಟಿನಲ್ಲಿ, ಈ ಭೂಮಿಯಲ್ಲಿ ನಾಸ್ತಿಕರೇ ತುಂಬಿರುವರು!! ಮಹಾತ್ಮರು, ಆ ಪರಮ ಪಾವನ ಸ್ವಭಾವ-ದೇವರನ್ನು ಮಾತ್ರ ದೇವರೆಂದು ಆರಾಧಿಸುವವರು ಆದ ಕಾರಣ, ಅವರು ಆ ದೇವಸ್ವಭಾವ ಇರುವ ಜಗತ್ತಿನ ಎಲ್ಲಾ ದೇವರುಗಳನ್ನು ಆ ಪಾವನ ಸ್ವಭಾವದಲ್ಲಿ ದೇವರೆಂದು ಕಾಣುವರು. ಈ ಕಾರಣದಿಂದಾಗಿ, ಮಹಾತ್ಮರು ಮಾತ್ರ ಆ ನಿಜವಾದ ಆಸ್ತಿಕರಾಗುವರು ಎಂಬುವುದನ್ನು ಗಮನಿಸಬೇಕಾಗಿದೆ.
- ಅಶಾಂತಿಯನ್ನು ಸತ್ಯಚಿಂತನೆಯಿಂದ ಮಾತ್ರ ಶಾಶ್ವತವಾಗಿ ಇಲ್ಲವಾಗಿಸಲು ಸಾಧ್ಯ. ಯಾಕೆಂದರೆ ಮನಸ್ಸಿಗೆ ಕಾರಣವನ್ನು ತರ್ಕಬದ್ಧವಾಗಿ ಕೊಟ್ಟಾಗ ಮಾತ್ರ ಅದು ಶಾಂತವಾದ ಆ ಸ್ಥಿತಿಯನ್ನು ಪಡೆಯುವುದು. ಇದನ್ನು ಸತ್ಯಚಿಂತನೆಗೆ ಮಾತ್ರ ಮಾಡಲು ಸಾಧ್ಯ, ಇಲ್ಲವಾದರೆ ಶಾಶ್ವತ ಶಾಂತಿಯು ದೊರಕಲಾರದು. ಅಂದರೆ, ನಿಮಗೆ ಮನಸ್ಸಿದ್ದರೆ ಅದಕ್ಕೆ ಮಾರ್ಗವೂ ಇದೆ ಎಂದು ಅರ್ಥ. ಆದುದರಿಂದ ಶಾಂತಿಬೇಕಿದ್ದಲ್ಲಿ, ಅದಕ್ಕಾಗಿ ಒಬ್ಬ ವ್ಯಕ್ತಿಯಲ್ಲಿ ಮೊದಲು ಬಹಳವಾಗಿ ಸೃಷ್ಟಿಯಾಗಬೇಕಾಗಿರುವುದು "ಶಾಂತಿ ಬೇಕು" ಎಂಬ ಆ ಸತ್ಯಸಂಧವಾದ ಮನಸ್ಸು ಆಗಿದೆ.
- ಶಾಂತಿಯು ಮನಸ್ಸಿನ ಒಂದು ಸ್ಥಿತಿಯಾಗಿದೆ. ಆ ಸ್ಥಿತಿಯು ಮನಸ್ಸಿನ ಹಿಂದಿನ, ಮುಂದಿನ ಮತ್ತು ಇಂದಿನ ಯಾವ ಕಲ್ಪನಾ ಲೋಕಗಳೂ ಇರುವುದಿಲ್ಲ. ಸಂತೋಷವು ಒಬ್ಬ ವ್ಯಕ್ತಿಯ "ಬೇಕು" ಎಂಬ ಭಾಗಕ್ಕೆ ಆಹಾರವನ್ನು ಒದಸುವಲ್ಲಿ ಉಂಟಾಗುವ ಆ ಭಾವದ ಅಭಿವ್ಯಕ್ತಿಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, 'ಬೇಕು' ಎಂಬುವುದನ್ನು ಗಳಿಸಿದಾಗ ಅಥವಾ ಅನುಭವಿಸಿದಾಗ ಉಂಟಾಗುವ ಭಾವದ ಅಭಿವ್ಯಕ್ತಿಯಾಗುವುದು. ಶಾಂತಿಯು ಒಂದು ಸ್ಥಿತಿಯಾದುದರಿಂದ ಅದು ಸರ್ವರಿಗೂ ಒಂದೇ ತರ ಆಗಿರುವುದು ಮತ್ತು ಅದಕ್ಕೆ ಕಾರಣವಿಲ್ಲ. ಅವನ್ನು ಮಾನವನೇ ಕಳಕೊಳ್ಳಬೇಕು ಹೊರತು ಅದಕ್ಕೆ ಆಗಾಗ್ಗ ಬದಲಾಗುವ ರೀತಿಯಿಲ್ಲ. ಆದರೆ, ಸಂತೋಷವು ಶಾಂತಿಯನ್ನು ಕದಡಿದ ಆ ಸುಖದ ಸ್ಥಿತಿ ಆಗಿರುವುದು, ಅಂದರೆ, ಸಂತೋಷವು ಕದಡಿದ ಮನಸ್ಸಿನಲ್ಲೇ ಸೃಷ್ಟಿಯಾಗುವುದು ಆದರೆ ಅದು ಸುಖದ ಅನುಭವವನ್ನು ಕೊಡುವುದು ಎಂದು ಅರ್ಥ. ಶಾರೀರಿಕ ಮತ್ತು ಮಾನಸಿಕ ನೋವನ್ನು ಕೊಟ್ಟಲ್ಲಿ ಮನಸ್ಸಿನ ಆ ಕದಡುವಿಕೆಯನ್ನು ದುಃಖ ಎನ್ನುವರು. ಇನ್ನು, ಸಂತೋಷವು ಎಲ್ಲರಿಗೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಮಾತ್ರವಲ್ಲ, ಅವುಗಳಿಗೆ ಕಾರಣಗಳು ಬೇರೆ ಬೇರೆ ಇರುತ್ತವೆ, ಮತ್ತು ಒಮ್ಮೆ ಸಂತೋಷ ಎಂದೆನಿಸಿದುದೇ ಇನ್ನೊಮ್ಮೆ ಅಥವಾ ಇನ್ನೊಂದು ಕಾಲದಲ್ಲಿ ದುಃಖವಾಗಿ ತೋರುವ ಸಾಧ್ಯತೆಯನ್ನು ಅವು [ಸಂತೋಷವು] ಒಳಗೊಂಡಿರುವುದು. ಜನಸಾಮಾನ್ಯರು ಸಂತೋಷದ ಹಿಂದೆ ಓಡುವರು ಮತ್ತು ತಮ್ಮ ಶಾಂತಿಯನ್ನು ಕಳಕೊಳ್ಳುವರು. ಆದರೆ, ಎಲ್ಲರಂತೆ ಸಮಾಜದಲ್ಲಿ ಗೃಹಸ್ಥರಾಗಿಯೇ ಜೀವಿಸುವ ಆ ಮಹಾತ್ಮರುಗಳು ಶಾಂತಿಯಿಂದ ಮಾತ್ರ ಜೀವಿಸುವರು, ಮತ್ತು ಸಂತೋಷವನ್ನು ತಮ್ಮ ಶಾಂತಿಗೆ ಬಾಧಿಸದ ರೀತಿಯಲ್ಲಿ, ಅವುಗಳಲ್ಲಿ ಸರಿಹೊಂದುವವುಗಳನ್ನು, ಆರಿಸಿ ಅನುಭವಿಸುವರು.
- ಒಬ್ಬ ವ್ಯಕ್ತಿಯ 'ನಾನು' ಎಂಬ ಭಾವವು ತನಗೆ ತಾನೇ ಆದ್ಯತೆಯನ್ನು ಇಟ್ಟುಕೊಳ್ಳುವುದು, ಮತ್ತು ತನ್ನಲ್ಲಿನ ಕೊರತೆಯನ್ನು ತನಗೇ ಕಾಣಿಸದಂತೆ ಮಾಡುವುದು! ಆದುದರಿಂದಲೇ, ಒಬ್ಬಾತನಿಗೆ ತಾನು ಮಾಡುತ್ತಿರುವ ಅದೇ ತಪ್ಪು ಇನ್ನೊಬ್ಬನಲ್ಲಿ ಬಹಳ ಕೆಟ್ಟದಾಗಿ ಕಾಣಿಸುವುದು.
- ನಿಜವಾಗಿಯೂ, ಒಬ್ಬನ ತಪ್ಪನ್ನು ಎತ್ತಿ ಹೇಳಬೇಕಿದ್ದರೆ ಆ ಹೇಳುವಾತನು ಅದನ್ನು ಮಾಡದವನಾಗಿರಬೇಕು.ಈ ನಿಟ್ಟಿನಲ್ಲಿ, ಜಗತ್ತಿನಲ್ಲಿ ಎಲ್ಲೆಡೆಯೂ ಮಾಡುವ 'ಆರೋಪಗಳು' ಎಷ್ಟು ಸತ್ಯಸಂಧವಾಗಿರಬಹುದು ಎಂದು ನಮಗೆ ಊಹಿಸಬಹುದಾಗಿದೆ. ಇನ್ನೊಬ್ಬ ಕುಡುಕನನ್ನು, 'ಕುಡುಕ' ಎಂದು ಹೀಯಾಳಿಸಿ ನಿಂದಿಸುವ ಒಬ್ಬ ಕುಡುಕನಂತೆ, ಈ ಜಗತ್ತಿನಲ್ಲಿ

ಎಲ್ಲೆಲ್ಲೂ ಈ ಮೋಸದ ಡೊಂಬರಾಟ ಮಾತ್ರ ಸತ್ಯಸಂಧತೆಯ ಮುಖವಾಡದಲ್ಲಿ ನಡೆಯುತ್ತಿರುವುದು! ಸತ್ಯಸಂಧತೆಯ ಆ ಆಳದ ಮಹತ್ವವನ್ನು ಇಲ್ಲಿ ನಮಗೆ ಅರ್ಥೈಸಿಕೊಳ್ಳಬಹುದಾಗಿದೆ.

- ಇಂದು ಮಾನವರಿಗೆ ಬೇಕಾಗಿರುವುದು ವ್ಯಕ್ತಿ ಸ್ವಾತಂತ್ರ್ಯಮಾತ್ರವಾಗಿದೆ. ಆದರೆ ಪಯಣದಲ್ಲಿರುವ ಮಾನವನ ಆನಂದ ಜೀವನ ದೋಣಿಯ ಹಾಯಿಗೆ ಬೇಕಾಗಿರುವುದು ಆ ಆತ್ಮೀಯ ಪ್ರೀತಿಯ ನೂಕುಗಾಳಿಯಾಗಿದೆ. ಇದನ್ನು ಪಡೆಯುವಲ್ಲಿ ವ್ಯಕ್ತಿ ಸ್ವಾತಂತ್ರ್ಯವು ಎಂದಿಗೂ ಕೆಲಸ ಮಾಡಲಾರದು, ಅಲ್ಲಿ ಬೇಕಾಗಿರುವುದು ತ್ಯಾಗಕ್ಕಾಗಿರುವ ಸ್ವಾತಂತ್ರ್ಯವಾಗಿದೆ. ಮಾನವನಿಗೆ ವ್ಯಕ್ತಿ ಸ್ವಾತಂತ್ರ್ಯವು ಇರಲಿ, ಆದರೆ ಸಾರ್ಥಕ ಜೀವನ ಬೇಕಾದಲ್ಲಿ, ತ್ಯಾಗದ ಸ್ವಾತಂತ್ರ್ಯವನ್ನೂ ಬಿಡದಿರಲಿ ಎಂದು ಆಶಿಸೋಣ.
- ಅಡುಗೆ ಮಾಡುವುದು ಹೆಚ್ಚು ಕಡಿಮೆಯಾದಲ್ಲಿ ಊಟವು ಒಂದು ಕಹಿ ಅನುಭವವಾಗುವುದು. ಅದೇ ರೀತಿ ಮಾನವನು ತನ್ನ ಇಂದಿನ ಕರ್ಮವನ್ನು ಸರಿಪಡಿಸದಿದ್ದಲ್ಲಿ ಮುಂದೆ ಅದು ಒಂದು ಕಹಿ ಅನುಭವವಾಗಿ ತಿರುಗಿಬರುವುದು. ಸತ್ಯಚಿಂತನೆಯು ಇಂದಿನ ಕರ್ಮವನ್ನು ಸರಿಪಡಿಸಿ ಮುಂದಿನ ಜೀವನವನ್ನು ಸಿಹಿಮಾಡುವ ಔಷಧಿಯಾಗಿದೆ.
- ಮಹಾತ್ಮರಾಗುವ ಸಾಧನೆಯು ಮುಂದುವರಿಯುತ್ತಾ ಇರುವಾಗ, ಒಮ್ಮೊಮ್ಮೆ, ಸತ್ಯಗಳು ಬಹಳ ಆಳದ ಅರ್ಥವನ್ನು ಹೊತ್ತು ಬಹಳ ದೊಡ್ಡದಾಗಿ ಪರ್ವತದಂತೆ ಕಾಣಿಸುವವು. ಅವನ್ನೇ ಬೋಧ ಎನ್ನುವುದು. ಅದು, ಆಳದ ಅರಿವು ಬಾಹ್ಯದ ಮನಸ್ಸಿನ ಎತ್ತರಕ್ಕೆ ಏರಿ ಕಾಣಿಸಲ್ಪಡುವ ಸಮಯವಾಗಿರುವುದು. ಈ ಬೋಧವೇ ಮಹಾತ್ಮನ ಸಾರವಾಗಿದೆ. ಚಿಕ್ಕ ಚಿಕ್ಕ ಬೋಧಗಳು ಸಾಮಾನ್ಯವಾಗಿ ಆಗುತ್ತಾ ಇರುವುದು. ಆದರೆ, ಈ ದೊಡ್ಡ ರೀತಿಯ ಬೋಧವು ಆತನ ಸತ್ಯಸಂಧತೆಯ ಆಳವನ್ನು ನೇರವಾಗಿ ಹೊಂದಿಕೊಂಡಿದೆ ಎನ್ನುವುದು ಒಂದು ಮುಖ್ಯ ಅಂಶವಾಗಿದೆ. ಸತ್ಯಸಂಧತೆಯು ಹೆಚ್ಚಾಗುವುದೇ ಮಹಾತ್ಮರ ಹಂತವು ಹೆಚ್ಚಾಗುವುದಕ್ಕೆ ಕಾರಣ ಎಂದು ಇದರಿಂದ ಸ್ಪಷ್ಟವಾಗುವುದು.
- ಎಲ್ಲರೊಂದಿಗೆ ಬೆರೆತು ಜೀವಿಸುವುದು ತಪ್ಪು ಎಂದು ಯಾರೂ ಹೇಳುವುದಿಲ್ಲ. ಆದರೆ, ಅಲ್ಲಿ ಒಬ್ಬಾತನು ತನ್ನನ್ನೇ ಮರೆತು ಬೆರೆಯುವುದಾದರೆ, ಆ ಎಲ್ಲರ ಒಟ್ಟು ಸ್ವಭಾವವೇ ಅತನದ್ದಾಗುವುದು ಖಂಡಿತ. ಅಂದರೆ, ಯಾವ ರೀತಿಯ ಜನರೊಂದಿಗೆ ಆತನು ಹಿತವೆಂದು ತಿಳಿದು ಬೆರೆಯುತ್ತಾ ಇರುವನೋ, ಅದೇ ಜನರ ಸ್ವಭಾವವು ಆತನಲ್ಲಿ ಸೃಷ್ಟಿಯಾಗುವುದು. ಇದೇ ನಿಯಮವು ಉತ್ತಮರ ಅಥವಾ ಮಹಾತ್ಮರ ಸಹವಾಸಕ್ಕೂ ಅನ್ವಯವಾಗುವುದು. ಅದನ್ನು "ಸತ್ಸಂಗ" ಎಂದು ಆಧ್ಯಾತ್ಮವು ಕರೆಯುವುದು. ಅಲ್ಲಿ ಆ ಸಾಮಿಪ್ಯದಿಂದ, ಆ ವ್ಯಕ್ತಿಯಲ್ಲಿ, ಉತ್ತಮ ಸ್ವಭಾವವು ಆತನಿಗೇ ಅರಿವಿಲ್ಲದೆ ಅಂಟಿಕೊಳ್ಳುತ್ತವೆ. ಸಮಾಜದಲ್ಲಿ ಜನರೊಂದಿಗೆ ಬೆರೆವಾಗ "ಜಾಗ್ರತೆ" ಇಲ್ಲದೆ ಹೋದರೆ, ಮಹಾತ್ಮರ ದಾರಿಯಲ್ಲಿ ಮೇಲೇರಬೇಕಾದ ವ್ಯಕ್ತಿ ಕೆಳಗಿಳಿಯುವ ಸಾಧ್ಯತೆ ಇರುವುದು.
- ಎಚ್ಚರದಿಂದಿರುವುದು ಕಾರ್ಯಗಳ ಜಯಕ್ಕೆ ಅತಿ ಮುಖ್ಯವಾಗಿದೆ. ಮಹಾತ್ಮರು ಅವರ ಜೀವನವನ್ನು ರೂಪಿಸುವಲ್ಲಿ ನಿರಂತರ ಎಚ್ಚರವಹಿಸಿ ಜೀವನವನ್ನು ಗೆಲ್ಲುವರು. ಇತರರು ಅವನ್ನು "ನಾನು" ಎಂಬುವುದರ ಜುಗಾರಿಗಾಗಿ ಪೂರ್ತಿ ವ್ಯಯ ಮಾಡಿ ತಲೆ ಕೆಡಿಸಿಕೊಳ್ಳುವರು.
- ಸಂತೋಷದಲ್ಲಿ ಇರಬೇಕೆಂದು ಇದ್ದಲ್ಲಿ ಅದಕ್ಕೆ ತೊಂದರೆಯಾಗುವುದು ಶಾರೀರಿಕ ತೊಂದರೆಯು ಮಾತ್ರವಾಗಿದೆ. ಉಳಿದ ಹೆಚ್ಚಿನ ಮನಸ್ಸಿನ ತೊಂದರೆಗಳನ್ನು ಪ್ರಯತ್ನದ ಮೂಲಕ ನಮಗೆ ನಾವೇ ಹೇಳಿ ಸರಿಪಡಿಸಿಕೊಳ್ಳಬಹುದು. ಎಲ್ಲಾ ಮಹಾತ್ಮರೂ ಮಕ್ಕಳಾಗಿ ಬೆಳೆದು ಬಂದವರು. ಅವರು ಮತ್ತು ಇತರರಿಗೆ ಇರುವ ಒಂದು ಮುಖ್ಯ ವ್ಯತ್ಯಾಸವೆಂದರೆ ಅದು ಅವರು ಆತ್ಮಾವಲೋಕನಕ್ಕೆ ಪಟ್ಟಿರುವ ಪ್ರಯತ್ನದಲ್ಲಿ ಮಾತ್ರವಾಗಿದೆ. ನಾವು ನಾವೇ ಪ್ರಯತ್ನ ಮಾಡದಿದ್ದಲ್ಲಿ ನಮಗಾಗಿ ಇನ್ನೊಬ್ಬರು ಆತ್ಮಾವಲೋಕನ ಮಾಡಲು ಸಾಧ್ಯವಾದೀತೇ?
- ವೇಗವು ಒಂದು ಶಾಪವಲ್ಲ, ಆದರೆ ಒಬ್ಬಾತನು ಅಪಘಾತಕ್ಕೆ ಒಳಗಾಗುವಾಗ ಅದು ಶಾಪವಾಗುವುದು. ಮಂದಗತಿಯು ಒಂದು ಶಾಪವಲ್ಲ, ಆದರೆ ಒಬ್ಬಾತನು ತನ್ನ ಗುರಿಯನ್ನು ಸಾಧಿಸಲಾರದಾಗ ಅದು ಶಾಪವಾಗುವುದು. ಹೆಚ್ಚು ಕಡಿಮೆ ಜಗತ್ತಿನ ಎಲ್ಲವುಗಳಲ್ಲೂ ಈ ರೀತಿಯ ಎರಡು ಭಾಗಗಳು ಇರುವವು. ಅವುಗಳಲ್ಲಿ ಶಾಪವಲ್ಲದ ಆ ಅನುಗ್ರಹ ಭಾಗವನ್ನು ಎಂದೆಂದಿಗೂ ಪಡೆಯಬೇಕು, ಮತ್ತು ಈ ಅನುಗ್ರಹವು, ಜೀವನದ ಎಲ್ಲಾ ಕಡೆಯೂ,

ದೊರಕುವಂತೆ ಮಾಡುವುದಕ್ಕೆ ಸತ್ಯಚಿಂತನೆಗೆ ಮಾತ್ರ ಸಾಧ್ಯವಾಗುವುದು ಎಂಬುವುದನ್ನು ಮರೆಯಬಾರದು.

- ಸಾರ್ವತ್ರಿಕ ಪ್ರೀತಿಯು ದೇವರ ಪ್ರೀತಿಯ ರೀತಿ ಎಂದು ಹೇಳಬಹುದು. ದೇವರ ಹೃದಯವು ಜಗತ್ತಿನ ಎಲ್ಲಾ ಜನರನ್ನು ಒಳಗೊಂಡಿರುವುದು, ಆದರೆ ಉತ್ತಮರನ್ನು ಮಾತ್ರ ಪ್ರೀತಿಸುವುದು. ಯಾರಾದರೂ ಈ ಮಾತಿಗೆ ವಿರೋಧ ಹೇಳುವುದಾದರೆ, ಅವರು ಸೈತಾನನನ್ನು ದೇವರು ಪ್ರೀತಿಸುವನೇ ಎಂಬ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗುವುದು.
- ಒಂದು ಸೊನ್ನೆಗೆ ಮತ್ತು ಇನ್ನೊಂದು ಸೊನ್ನೆಗೆ ಮೌಲ್ಯದ ಅಂತರವಿಲ್ಲ. ಆದರೆ, ಸೊನ್ನೆಯಿಂದ ಆರಂಭವಾಗಿ ಸೊನ್ನೆಯಲ್ಲಿ ಮುಗಿವ ಈ ಜೀವನದ ಮಧ್ಯೆ ಒಂದು ದೊಡ್ಡ "ಜೀವನ" ಎಂಬ ಅಂತರವಿದೆ! ಜ್ಞಾನಿಗಳಿಗೆ ಈ ಮಧ್ಯದ ಅಂತರವು ಬರೇ ಮತ್ತೊಂದು ಸೊನ್ನೆ ಮಾತ್ರವಾಗಿ ಕಾಣಿಸುವ ಕಾರಣ ಅವರು ಅದನ್ನು ಸಮ ದೃಷ್ಟಿಯಿಂದ ನೋಡಿ ಶಾಂತಿಯಿಂದ ಜೀವನವನ್ನು ಆನಂದಿಸುವರು. ಆದರೆ, ಜನಸಾಮಾನ್ಯರು ಈ ಅಂತರಕ್ಕೆ ಹಲವು ಕೋಟಿ ರುಪಾಯಿಗಳ ಬೆಲೆಕೊಟ್ಟು, ಒಂದು ರುಪಾಯಿಯ ಶಾಂತಿ, ನೆಮ್ಮದಿಯ ಜೀವನವನ್ನೂ ಪಡೆಯದೆ ಸಾಯುವರು!! ಈ ಭೂಮಿಯ ಜೀವನ ವ್ಯಾಪಾರದಲ್ಲಿ ಲಾಭಗಳಿಸಲು ಹಣ, ಶ್ರೀಮಂತಿಕೆಗಳಿಗೆ ಸಾಧ್ಯವಿಲ್ಲ ಆದರೆ ಅದು ಮಹಾತ್ಮರ ಸತ್ಯಚಿಂತನೆಗೆ ಮಾತ್ರ ಸಾಧ್ಯ ಎಂಬ ಸತ್ಯವು ಇಲ್ಲಿ ಸ್ಪಷ್ಟವಾಗುವುದು.
- ಯಾರನ್ನೂ ತಿದ್ದಲು ಹೋಗಬೇಡಿ. ಅದಕ್ಕಿಂತ ಅವರಿಗೆ ಸರ್ವ ವಿಚಾರಗಳನ್ನು ಒದಗಿಸಿಬಿಡುವುದೇ ಒಳಿತು. ಸಾಧ್ಯವಾದಲ್ಲಿ, ಮನೆ ಮನೆಯ ಮಹಾತ್ಮರ ಜೀವನದ ನಿಜವಾದ ಮಹತ್ವವನ್ನು ಹೇಳಿ ಅವರಿಗೆ ಅದರ ಲಾಭವನ್ನು ತಿಳಿಯುವಂತೆ ಮಾಡಬಹುದು. ತಿದ್ದುವ ಕ್ರಿಯೆಯು, ಕೊರತೆಯನ್ನು ನೀಗುವ ನಿಟ್ಟಿನಲ್ಲಿ, ಅವರಲ್ಲಿ ಇರುವ ಕೊರತೆಗಳನ್ನು ಕಾಣುವ ಉದ್ದೇಶವನ್ನು ಹೊಂದಿರುವುದು. ಯಾಕೆಂದರೆ ಕೊರತೆಯೇ ಇಲ್ಲವಾಗುವಾಗ ಆತನು ಆ ಮೇಲಿನ ಮಹಾತ್ಮನ ಹಂತಕ್ಕೆ ತಲುಪಿರುವನು. ಅದಕ್ಕೆ, ಬೇಗ ಬೇಗನೆ ಕೊರತೆಯನ್ನು ಹೇಳುತ್ತಾ ಮತ್ತು ಅವುಗಳನ್ನು ಆತನ ವ್ಯಕ್ತಿತ್ವದಿಂದ ದೂರ ಮಾಡುತ್ತಾ, ಈ ರೀತಿಯಲ್ಲಿ ತಿದ್ದುತ್ತಾ ಹೋಗುವುದು ವೇಗದ ಬೆಳವಣಿಗೆಗೆ ಕಾರಣವಾಗುವುದು. ಆದರೆ, ಅದಕ್ಕೆ ಅತ್ಯಂತ ಸಮರ್ಪಣೆ ಭಾವವು ತಿದ್ದಲ್ಪಡುವವನ ಕಡೆಯಿಂದ ಇರಲೇಬೇಕಾಗುವುದು. ಇದು ಇಂದಿನ ಕಾಲದಲ್ಲಿ ಕಾಣಿಸುವುದು ಅತ್ಯಂತ ವಿರಳ. ಆದುದರಿಂದ ಎಂದಿಗೂ ತಿದ್ದುವುದು ಬೇಡ, ಎಲ್ಲರೂ ತಮ್ಮಿಂದಾಗುವ ಆ ತಿಳಿಸಿಕೊಡುವ ಸೇವೆಯನ್ನು ಮಾತ್ರ ಮಾಡಿದರೆ ಸಾಕಾಗುವುದು. ಒಟ್ಟಿನಲ್ಲಿ, ತಿದ್ದುವ ಕೆಲಸವು ಒಬ್ಬಾತನು ಸ್ವತಃ ಆತನಿಗೇ ಮಾಡಬೇಕಾದ ಕೆಲಸವಾಗಿದೆ. ಅದಕ್ಕೆಂದೇ ಮಹಾತ್ಮರ ಸಾಧನೆಯಲ್ಲಿ ತನ್ನನ್ನು ತಾನೇ ತಿದ್ದುವ ಆ ಆತ್ಮವಲೋಕನಕ್ಕೆ ಅಷ್ಟಕ್ಕೂ ಪ್ರಾಮುಖ್ಯತೆಯನ್ನು ನೀಡಿರುವುದು.
- ಮಾನವನು ಸುಖವನ್ನು ಬೇಕು ಎನ್ನುವನು, ಆದರೆ ಅದನ್ನು ಪಡೆಯುವ ವಿಧಾನವನ್ನೇ ನಿರಾಕರಿಸುವನು!! ಮಾನವನು ದುಃಖವನ್ನು ಬೇಡ ಎನ್ನುವನು, ಆದರೆ ಅದನ್ನು ಪಡೆಯುವ ರೀತಿಯನ್ನೇ ಅನುಸರಿಸುವನು!! ಇನ್ನು, ಈ ಜನರ ಗೋಳಿಗೆ ಏನಿದೆ ಅರ್ಥ?
- ಆತ್ಮೀಯತೆ ಎಂಬುವುದು ತ್ಯಾಗಭಾವದಿಂದ ಮಾತ್ರ ಬರುವುದು. ಈ ಆತ್ಮೀಯತೆಯು ಅಹಂಕಾರಿಗಳಲ್ಲಿ ಇರುವುದಿಲ್ಲ. ಕಾರಣ, ತ್ಯಾಗಭಾವವನ್ನು ಅದು ತಡೆಯುಯುವುದು. ತ್ಯಾಗಭಾವವೆಂದ ಕೂಡಲೇ ಹಣವನ್ನು ದಾನ ಮಾಡುವ ದೃಶ್ಯವನ್ನು ನೆನೆಯುವುದು ಬೇಡ, ಯಾಕೆಂದರೆ, ಅದನ್ನು ಒಬ್ಬ ಕಿಡಿಗೇಡಿಗೂ ಮಾಡಲು ಸಾಧ್ಯವಿದೆ. ನಿಜವಾದ ತ್ಯಾಗಭಾವವೆಂದರೆ ತನ್ನನ್ನು ಮೊದಲು ಎಂದು ತಾನೇ ಪರಿಗಣಿಸದಿರುವುದಾಗಿದೆ! ಹಾಗಿದ್ದಲ್ಲಿ ಮಾತ್ರ, ಇತರರೂ ತನ್ನೊಂದಿಗೆ ತನ್ನ ಹಾಗೆ ಮನುಷ್ಯರಾಗಿ ಜೀವಿಸುತ್ತಿರುವರು ಎಂಬ ಸತ್ಯವನ್ನು ಹೃದಯವು ಆತನಿಗೆ ತಿಳಿಸುತ್ತಾ ಇರುವುದು!! ಈ "ನಾನು ಮೊದಲು" ಎಂಬುವುದನ್ನು ತ್ಯಾಗಮಾಡುವುದರಿಂದ ಹುಟ್ಟಿ ಬರುವ ಆತ್ಮೀಯತೆಯು ಮನೆ, ಸಮಾಜ, ಮತ್ತು ಲೋಕ ಶಾಂತಿಗೆ ಕಾರಣವಾಗುವುದು.
- ಬೊಜ್ಜು ಕರಗಿಸಲು ಸಾಯಂಕಾಲ ನಡೆಯುವ ವ್ಯಕ್ತಿಯಲ್ಲಿ "ಕಾರಲ್ಲಿ ಹೋಗೋಣ ಬನ್ನಿ" ಎಂದು ಯಾರು ಕರೆದರೂ ಹೋಗಲಾರ. ಯಾಕೆಂದರೆ ಆತನ ಆಗಿನ ಉದ್ದೇಶವು ಕಾರಿನಿಂದಾಗುವ ಲಾಭವನ್ನು ತಳ್ಳಿಹಾಕಿದೆ!! ಅಂದರೆ, ಮೂಲದಲ್ಲಿ ಬೇಕುಗಳು ಉದ್ದೇಶಗಳನ್ನು ಸೃಷ್ಟಿಸುವವು, ಆದರೆ ಅನಂತರ ಆ ಉದ್ದೇಶಗಳೇ ಆತನನ್ನು ಎಳಕೊಂಡು ಹೋಗುವವು! ಆತನ ಉದ್ದೇಶಗಳೇ ಅನಂತರದ ಹಲವು ಬೇಕುಗಳನ್ನೂ ಸೃಷ್ಟಿಸಿಕೊಂಡು

ಆತನನ್ನು ಅದಕ್ಕೆ ಬೇಕಾಗಿ ಕೆಲಸಗಳನ್ನು ಮಾಡುವಂತೆ ಒತ್ತಾಯಿಸುವುದು. ಇಲ್ಲಿ ನಾವು ತಿಳಿಯಬೇಕಾದ ಅಂಶವೆಂದರೆ, ಜೀವನದಲ್ಲಿ ಯಾವುದನ್ನು ನಮ್ಮ ಮೂಲ ಉದ್ದೇವಾಗಿಸಬೇಕು ಎಂಬ ತೀರ್ಮಾನವು ಬಹಳ ಮುಖ್ಯವಾಗಿದೆ ಎಂಬುವುದನ್ನಾಗಿದೆ. ಶಾಂತಿ, ನೆಮ್ಮದಿ, ಆನಂದ ಎಂಬವುಗಳನ್ನು ಮೂಲ ಉದ್ದೇಶವಾಗಿಟ್ಟು, ಅನಂತರ ತಮ್ಮ ತಮ್ಮ ಇತರ ಉದ್ದೇಶಗಳನ್ನು ತಮ್ಮ ಶಕ್ತಿಗೆ ಅನುಸರಿಸಿ ಮಾತ್ರ ಇಟ್ಟುಕೊಳ್ಳುವವರು ಮಹಾತ್ಮರಾಗಿರುವರು. ಆದರೆ ಜನಸಾಮಾನ್ಯರು ಶಾಂತಿ, ನೆಮ್ಮದಿಯನ್ನು ಪರಿಗಣಿಸದೆ, ತಮ್ಮ ಉದ್ದೇಶವನ್ನು ಹಣ, ಸಂಪತ್ತು, ಸ್ಥಾನ ಮಾನ, ಮತ್ತು ಖುಷಿಪಡುವಿಕೆಯಲ್ಲಿ ಇಡುವರು!! ಅಂದರೆ, ಈ ಎರಡು ರೀತಿಗಳಲ್ಲಿಯೂ ಕೆಲಸಗಳು ಇವೆ, ಮತ್ತು ಅವುಗಳ ಫಲಗಳೂ ಲಭಿಸುವವು. ಆದರೆ, ಮೊದಲನೆಯದರಲ್ಲಿ ಜೀವನ ಎಂಬ ದೋಣಿ, ತನ್ನನ್ನು ತಾನೇ ನಿಯಂತ್ರಿಸುವ 'ಹುಟ್ಟು' ಸಹಿತ ಸಮುದ್ರಲ್ಲಿ ಚಲಿಸುವ ರೀತಿಯಲ್ಲಿ ಇರುವುದು, ಆದರೆ ಎರಡನೆಯದರಲ್ಲಿ, 'ಹುಟ್ಟು' ಇಲ್ಲದ ಹಾಯಿ ದೋಣಿಯನ್ನು ಸಮುದ್ರದ ಗಾಳಿಯು, ಬೆಕ್ಕು ಇಲಿಯೊಂದಿಗೆ ನೋವು ಉಣಿಸುವ ಆಟ ಆಡಿದಂತೆ, ತನ್ನಿಷ್ಟದಂತೆ ಎಳಕೊಂಡುಹೋಗಿ ಆಡುವ ತರ ಇರುವುದು!!

- ಹಾಸಿಗೆ ಹಿಡಿದವನಿಗೆ ಹಾಸಿಗೆಯಿಂದ ಏಳುವುದೇ ಸರ್ವಸ್ವವಾಗುವುದು. ಹಾಸಿಗೆಯಿಂದ ಎದ್ದವನಿಗೆ ಮೂರು ಹೊತ್ತು ಊಟವೇ ಸರ್ವಸ್ವವಾಗುವುದು. ಮೂರು ಹೊತ್ತು ಊಟ ಇದ್ದವನಿಗೆ ಒಂದು ಚಿಕ್ಕ ಮನೆಯೇ ಸರ್ವಸ್ವವಾಗುವುದು. ಒಂದು ಚಿಕ್ಕ ಮನೆ ಇದ್ದವನಿಗೆ ದೊಡ್ಡ ಮನೆ, ಕಾರುಗಳೇ ಸರ್ವಸ್ವವಾಗುವುದು. ದೊಡ್ಡ ಮನೆ, ಕಾರು ಇದ್ದವನಿಗೆ ಅಧಿಕಾರ, ಸ್ಥಾನ ಮಾನವೇ ಸರ್ವಸ್ವವಾಗುವುದು. ಅಧಿಕಾರ, ಸ್ಥಾನ ಮಾನ ಇದ್ದವನಿಗೆ ಅದಕ್ಕಿಂತಲೂ ಮೇಲೇರುವುದೇ ಸರ್ವಸ್ವವಾಗುವುದು. ಹೀಗೆ ಮತ್ತೂ ಮೇಲೇರಿದವನಿಗೆ ಇತರರು ಆ ಹಂತಕ್ಕೆ ಏರಬಾರದು ಎಂಬುವುದೇ ಸರ್ವಸ್ವವಾಗುವುದು!!
- ಸಮಾಜದಲ್ಲಿ ಹೆಚ್ಚಿನವರೂ ಮೇಲು ಮೇಲಿನ ತನ್ನ ಪ್ರತಿ ಹಂತದಲ್ಲೂ, ತನ್ನ ಕೆಳಗಿನ ಹಂತದವರನ್ನು ಬಡವ ಎಂದು ತಿಳಿದೇ ಆತನೊಂದಿಗೆ ವ್ಯವಹರಿಸುವರು. ಈ ರೀತಿಯ ಜನರಿಂದ ಪ್ರೀತಿಯನ್ನು ಎಂದೂ ನಿರೀಕ್ಷಿಸಲು ಸಾಧ್ಯವಾಗದು ಎಂಬುವುದು ಒಂದು ದೊಡ್ಡ ಸತ್ಯವಾಗಿದೆ. ಯಾಕೆಂದರೆ, ನಾಳೆ ನೀವು ಎಲ್ಲಾದರೂ ಸೋತು ಅವರಿಗಿಂತ ಕೆಳಗಿನ ಹಂತಕ್ಕೆ ಹೋಗಿಬಿಟ್ಟರೆ, ಮೊದಲಿದ್ದ ನಿಮ್ಮ ಮೇಲಿನ ಅವರ ಪ್ರೀತಿಯು, ಬಡವನ ಮೇಲಿನ ಅಪಹಾಸ್ಯವಾಗಿ ನಿಮ್ಮನ್ನು ಮೆತ್ತಗೆ ತಲುಪುವುದು ನಿಮಗೆ ಸ್ಪಷ್ಟ ಅನುಭವವಾಗಬಹುದು. ಇಲ್ಲಿ, ಹಣವೇ ಪ್ರೀತಿಯನ್ನು ಸೃಷ್ಟಿಸುವ ಯಂತ್ರವಾಗಿ ಕೆಲಸ ಮಾಡುವುದು ಮತ್ತು ಹಣ ಇಲ್ಲದ ಸ್ಥಳಗಳಲ್ಲಿ ಆ ಯಂತ್ರವು ಕೆಲಸಮಾಡಲಾರದು!
- ವಿಜ್ಞಾನದ ಎಲ್ಲಾ ಸೌಕರ್ಯಗಳನ್ನು ನಾವು ಉಣ್ಣುವುದು, ವಿಜ್ಞಾನವು, ಬದಲಾಗಲು ಒಪ್ಪಿಕೊಂಡ ಕಾರಣಕ್ಕೆ ಮಾತ್ರವಾಗಿದೆ. ಅದಲ್ಲವಾಗುತ್ತಿದ್ದರೆ, ಹೆಚ್ಚೆಂದರೆ ಎಲ್ಲರ ಮನೆಯ ಮುಂದೆ ಬೆಲೆ ಬಾಳುವ ಎತ್ತಿನ ಗಾಡಿಗಳು ಮಾತ್ರ ಇಂದು ಇರುತ್ತಿದ್ದವು. ಇದೇ ರೀತಿ, ಧರ್ಮಗಳು ಕೂಡಾ ಬದಲಾವಣೆಗೆ ಒಪ್ಪಿರುತ್ತಿದ್ದರೆ, ಇಂದು ಅದು ಬೆಳೆದು ಈ ಭೂಮಿಯನ್ನೇ ಶಾಂತಿ, ನೆಮ್ಮದಿ, ಆತ್ಮೀಯ ಪ್ರೀತಿಗಳ ಸ್ವರ್ಗವನ್ನಾಗಿ ಮಾಡಿಬಿಡುತ್ತಿದ್ದವು! ಆದರೆ, ಧರ್ಮಗಳು ಮಾತ್ರ ಬದಲಾಗಲು ಒಪ್ಪದೆ, ತನ್ನ ಆ ಹಿಂದಿನದ್ದು ಮಾತ್ರ ಸರಿ ಎಂದು, ಎತ್ತಿನಗಾಡಿ ಮಾತ್ರ ಸರಿ ಎಂಬ ತರ, ಇಂದೂ ವಾದಿಸುವವು!
- ಸಕ್ಕರೆ ಕಾಯಿಲೆ ಇರುವವನಿಗೆ, ಸಕ್ಕರೆಯನ್ನು ಹಲವು ಚೀಲಗಳಷ್ಟು ಉಚಿತವಾಗಿ ಕೊಟ್ಟರೂ ಅದರಲ್ಲಿ ಆತನಿಗೆ ಪ್ರಯೋಜನ ಉಂಟಾಗುವುದಿಲ್ಲ. ಅದೇ ರೀತಿ, ಮಾನವರು ಎಷ್ಟೇ ಗಳಿಸಿದರೂ ಮನಸ್ಸು ಕೊರಗುತ್ತಿದ್ದರೆ ಆ ವ್ಯಕ್ತಿಯ ಜೀವನವು ಸಂತಸವನ್ನು ಅನುಭವಿಸುವ ಬದಲು ನರಕ ಯಾತನೆಯನ್ನು ಮಾತ್ರ ಅನುಭವಿಸುತ್ತಿರುವುದು.
- ಜಗತ್ತಲ್ಲಿ ಎಲ್ಲರಿಗೂ ಸೇರಿ ಇರುವ ಆ ಸಾರ್ವತ್ರಿಕ ನೈತಿಕತೆ ಇರುವುದಿಲ್ಲ ಎಂದು ಕೆಲವರು ಹೇಳುವರು, ಆದರೆ ಅದು ಸರಿಯಲ್ಲ. ಕೆಲವು ನೈತಿಕ ನಿಯಮಗಳು ಬೇರೆ ಬೇರೆಯಾಗಿವೆ ಎಂಬುವುದು ಸರಿ. ಅದೇ ರೀತಿ, ಕೆಲವು ನೈತಿಕವೆಂದು ಕರೆಯಲ್ಪಡುವ ಆದರೆ ಆದರ್ಶ ಹೀನ ಅನೈತಿಕ ನಿಯಮಗಳೂ ಈ ಜಗತ್ತಿನ ಧರ್ಮ, ಪಂಥಗಳಲ್ಲಿ ನೈತಿಕತೆಯ ರೂಪದಲ್ಲಿ ಸೇರಿಕೊಂಡಿವೆ ಎಂಬುವುದೂ ಸರಿ. ಆದರೆ, ನಾವು ಈ ಎರಡನ್ನೂ ಹೊರತುಪಡಿಸಿ, ಆ ನಿಜವಾದ ಆದರ್ಶಕ್ಕೆ ಸರಿಯಾಗುವ ನೈತಿಕ ನಿಯಮಗಳನ್ನು ಮಾತ್ರ ಸಾರ್ವತ್ರಿಕ ನೈತಿಕತೆ ಎಂದಿರುವುದು. ಉದಾಹರಣೆಗೆ, ಕಳ್ಳತನ ಮಾಡಬಾರದು, ಇತರರನ್ನು ತನ್ನಂತೆ ಕಾಣಬೇಕು, ವಂಚಿಸಬಾರದು, ಮದುವೆಯ ಮಹತ್ವ, ಪರ ಸ್ತ್ರೀ, ಪರ ಪುರುಷ ಸಂಬಂಧ ಇರಬಾರದು,

ಇತ್ಯಾದಿ ಹಲವು ಸಾಮಾನ್ಯ ನೈತಿಕ ನಿಯಮಗಳನ್ನು ಸಾರ್ವತ್ರಿಕ ನೈತಿಕತೆಯಲ್ಲಿ ಸೇರಿಸಬಹುದು. ಹೀಗಾಗಿ ಸಾರ್ವತ್ರಿಕ ನೈತಿಕತೆಯು ಇದೆ ಎಂದು ಸ್ಪಷ್ಟವಾಯಿತು.

- ನ್ಯಾಯವು ಹೆಚ್ಚಿನ ಸಮಯದಲ್ಲೂ ಸತ್ಯವೇ ಆಗಿರುವುದು. ಆದರೆ ನ್ಯಾಯವು ಕೆಲವೊಂದು ಸಮಯದಲ್ಲಿ ಹೃದಯದ ಸತ್ಯಸಂಧತೆಯನ್ನು ಮೀರಿ ನಡೆಯುವುದು! ಉದಾಹರಣೆಗೆ, ಒಬ್ಬನು ತನ್ನ ಮನೆಯನ್ನು ಮಾರಿ ಆಯಿತು, ಆದರೆ, ಪಡಕೊಂಡವನ ಒಪ್ಪಿಗೆಯೊಂದಿಗೆ, ಒಂದು ವಾರ ಮತ್ತೂ ಅಲ್ಲಿರುವನು, ಆಗಲೂ ಅದನ್ನು 'ನಮ್ಮ ಮನೆ' ಎಂದೇ ಆತ ಮತ್ತು ಆತನ ಮನೆಯವರು ಹೇಳುವರು. ಇಲ್ಲಿ, ಮನಸ್ಸಿನ ನ್ಯಾಯವು "ಹಾಗೆ ಹೇಳುವುದು ಸರಿಯಲ್ಲ" ಎಂದು ಹೇಳುವುದು. ಆದರೆ ಹೃದಯದ ನ್ಯಾಯವು, "ಮನೆಯಲ್ಲಿ ಇರುವ ತನಕ ಅದನ್ನು 'ನಮ್ಮ ಮನೆ' ಯೆಂದು ಹೇಳಬಹುದು" ಎನ್ನುವುದು. ಮನೆಯ ಒಡೆತನವನ್ನು ಪ್ರತ್ಯೇಕವಾಗಿ ನೋಡಬೇಕು ಎಂದೂ ಅದು ವಿಭಜಿಸಿ ಹೇಳುವುದು. ತನ್ನ ಗುರುಗಳು, ಬರೇ ಒಂದು ದಿನ ತಡವಾಗಿ ಬಂದದ್ದನ್ನು, ನಿತ್ಯ ತಡವಾಗಿ ಬಂದದ್ದಕ್ಕೆ ತರಗತಿಯಲ್ಲಿ ಆ ಗುರು ಆತನನ್ನು ಶಿಕ್ಷಿಸುವಾಗ, "ನೀವೇ ತಡವಾಗಿ ಒಂದು ದಿನ ಬಂದಿದ್ದೀರಲ್ಲಾ" ಎಂದು ಆ ವಿದ್ಯಾರ್ಥಿಯು ಎತ್ತಿ ಹೇಳಿದನಂತೆ! ಇಲ್ಲಿ ಒಂದು ರೀತಿಯ ನ್ಯಾಯ ಅಥವಾ ತರ್ಕ ಇದೆ, ಆದರೆ ಆ ನ್ಯಾಯದಲ್ಲಿ ಬಹಳ ಕೊರತೆಗಳಿರುವವು. ಬರೇ 'ಮನಸ್ಸು ಮೂಲವಾಗಿರುವ' ನ್ಯಾಯವನ್ನು ಮಾತ್ರ ನೋಡಿದಾಗ, ಈ ರೀತಿಯ ಕಠೋರ ನ್ಯಾಯದ "ವಾದ" ಮಾತ್ರ ಸಿಗುವವು! ನ್ಯಾಯಾಲಯಗಳಲ್ಲಿ ಇದರ ಬಳಕೆಯು, ಅನ್ಯಾಯವನ್ನು ನ್ಯಾಯ ಮಾಡುವ ವಕೀಲರ ಕಡೆಯಿಂದ, ಬಹಳವಾಗಿ ಆಗುವುದು. ಅಂತೂ, ಮಹಾತ್ಮರ ರೀತಿಯು, "ಹೃದಯದ ನ್ಯಾಯ"ವನ್ನು ಮಾತ್ರ ಉದ್ದೇಶಿಸುವುದು ಎಂದು ತಿಳಿಯಬೇಕು. ಹಾಗಿದ್ದರೆ ಮಾತ್ರವೇ ಉದ್ದೇಶ ಶುದ್ಧಿ ಇರಲು ಸಾಧ್ಯ, ಮತ್ತು ಜಗತ್ತಿಗೆ ಪರಿಹಾರವನ್ನು ಮತ್ತು ಶಾಂತಿಯನ್ನು ತರಬಲ್ಲ ಮಾನವ ಅಥವಾ ಮಹಾತ್ಮನಾಗಲು ಸಾಧ್ಯ. ಹೃದಯದ ನ್ಯಾಯ ಮತ್ತು ಹೃದಯದ ಪ್ರೀತಿ, ಇವುಗಳು ಮಾನವರನ್ನು ದೇವಸ್ವಭಾವವನ್ನು ಹೊತ್ತ ಮಹಾತ್ಮರುಗಳನ್ನಾಗಿ ಮಾಡುವವು!

ವಿ.ಸೂ- ನಾವು ಒಂದೇವ ಅವರ ಹಲವು ಸಾರ್ವತ್ರಿಕ ಸಂದೇಶಗಳನ್ನು ಹಾಗೂ ಕೆಲವು ಪ್ರಶ್ನೋತ್ತರಗಳನ್ನು ನಿಮ್ಮ ಮುಂದಿಟ್ಟಿದ್ದೇವೆ, ಮತ್ತು ಇನ್ನು ಉಳಿದಿರುವ ಸಂದೇಶಗಳನ್ನು ಸ್ವಲ್ಪ ಸಮಯದ ನಂತರ ಇದೇ ಜಾಲತಾಣದ ಪ್ರಶ್ನೋತ್ತರ ವಿಭಾಗದಲ್ಲಿ ಪ್ರಕಟಿಸುವೆವು. ಇನ್ನು, ಜನರಿಗೆ ಸತ್ಯಸಂಧವಾದ ಪ್ರಶ್ನೆಗಳಿದ್ದಲ್ಲಿ ಅವನ್ನು ನಮಗೆ ಬರೆದು ಕಳುಹಿಸಬಹುದಾಗಿದೆ. ಆದರೆ, ಹಲವು ಪ್ರಶ್ನೆಗಳ ಉತ್ತರಗಳನ್ನು ಇದೇ ಪುಸ್ತಕದಲ್ಲಿ ಈ ಮೊದಲೇ ತಿಳಿಸಿ ಆಗಿರುವ ಕಾರಣ, ಪ್ರಶ್ನೆಗಳನ್ನು ಕಳುಹಿಸುವವರು ಅವೆಲ್ಲವನ್ನೂ ಓದಿದ ನಂತರವೇ ಕಳುಹಿಸಬೇಕಾಗಿದೆ ಎಂದು ಕೇಳಿಕೊಳ್ಳುವೆವು. ಅವುಗಳಿಗೆ ಉತ್ತರಗಳನ್ನು, ಒಂದೇವರವರು ತಮ್ಮ ಸಮಯ, ಸೌಕರ್ಯಕ್ಕನುಸರಿಸಿ, ಕೆಲವು ದಿವಸಗಳ ನಂತರ ತಿಳಿಸುವರು ಮತ್ತು ಅವನ್ನು ನಾವು ಇದೇ ಜಾಲತಾಣದ ಪ್ರಶ್ನೋತ್ತರ ವಿಭಾಗದಲ್ಲಿ ಪ್ರಕಟಿಸುವೆವು. ಒಂದು ಮುಖ್ಯ ವಿಷಯವೆಂದರೆ, ಒಂದೇವ ಅವರು ಯಾರಿಗೂ ಅವರ ಸಂದರ್ಶನವನ್ನು ಮಾಡಲು ಖಂಡಿತವಾಗಿಯೂ ಒಪ್ಪಿಗೆ ನೀಡುವುದಿಲ್ಲ. ಅವರು ಹೇಳುವಂತೆ, ಸಂದರ್ಶನದ ಉದ್ದೇಶವು ಪ್ರಶ್ನೆ ಮತ್ತು ಅದರ ಉತ್ತರವಾದುದರಿಂದ ಸಂದರ್ಶನ ಮಾಡುವ ಉದ್ದೇಶವಿರುವವರು ಅವರ ಎಲ್ಲಾ ಪ್ರಶ್ನೆಗಳನ್ನು ಲಿಖಿತವಾಗಿ ಬರೆದು ಕೊಟ್ಟಲ್ಲಿ ಅವುಗಳಿಗೆಲ್ಲ ಉತ್ತರಗಳನ್ನು ಲಿಖಿತವಾಗಿಯೇ ಅವರು ಕೊಡುವರು ಎಂದಾಗಿದೆ. ಆದುದರಿಂದ ಒಂದೇವರವರ ಸಂದರ್ಶನದ ಉದ್ದೇಶವಿಟ್ಟು ಯಾರೂ ಅವರನ್ನು ಸಮೀಪಿಸುವುದು ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ತಿಳಿಸುವೆವು.

---

ಜಾಗೃತರಾಗಿರಿ ಮತ್ತು ಜಾಗೃತರಾಗಿಸಿರಿ